ಶ್ರೀ ಭಾಗವತಾರ್ಥ

ಸುವರ್ಣ ಕರ್ನಾಟಕ
ಯೋಜನೆಯ ಪ್ರಕಟನೆ

ತುಳು ಮೂಲ : ವಿಷ್ಣುತುಂಗ ಕವಿ
ಕನ್ನಡಕ್ಕೆ : ಡಾ. ಮಾಧವ ಪೆರಾಜೆ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಲಾಲ್‌ಬಾಗ್, ಮಂಗಳೂರು. ದ. ಕ.

ಶ್ರೀ ಭಾಗವತಾರ್ಥೆ

ತುಳು ಮೂಲ : **ವಿಷ್ಣುತುಂಗ ಕವಿ**
ಕನ್ನಡಕ್ಕೆ : **ಡಾ. ಮಾಧವ ಪೆರಾಜೆ**

ಸುವರ್ಣ ಕರ್ನಾಟಕ ಯೋಜನೆಯ ಪ್ರಕಟಣೆ:
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ,
ಲಾಲ್‌ಬಾಗ್, ಮಂಗಳೂರು. ದ.ಕ.

Shri Bhagavatharta a Kannada version of Tulu epic
Shri Bhagavatho by
Dr. Madhava Peraje.
Reader
Dept. of Studies in Dravidian Culture
Kannada University, Hampi.

Published by
Karnataka Tulu Sahitya Academy
Lalbagh, Mangalore - 575 003

Pages: **336**

All rights Reserved

Karnataka Tulu Sahitya Academy

First impression: **2008**

Price : **Rs. 100/-**

Printed at:
Manorama Printers
Bejai, Mangalore
Ph: 2222683

ಅರ್ಪಣೆ

ಶ್ರೀಮತಿ ಪುಟ್ಟಮ್ಮ ಳಿಗೆ
ಮದುವೆಯಾಗಿ 14 ವರ್ಷವಾಗುತ್ತಿರುವ ನೆನಪಿಗೆ,
ಪ್ರೀತಿಯಿಂದ

ಅಧ್ಯಕ್ಷರ ಮಾತು

ವಿಷ್ಣುತುಂಗ ಮಹಾಕವಿಯ ತುಳುವಿನ ಮಹಾಕಾವ್ಯ "ಶ್ರೀ ಭಾಗವತೋ"ವನ್ನು ಸಾಹಿತ್ಯಪ್ರೇಮಿಗಳಿಗೆ ಹಾಗೂ ಧರ್ಮಾಭಿಮಾನಿಗಳಿಗೆ ತಲುಪಿಸುವುದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಉದ್ದೇಶವಾಗಿತ್ತು. ತುಳುವಿನ ಈ ಕಾವ್ಯ ಸಾಹಿತ್ಯವನ್ನು ಅಂತೆಯೇ ಜನರಿಗೆ ತಲುಪಿಸುವುದು ನಿಜವಾಗಿಯೂ ಕಷ್ಟವಾಗಿದೆ. ಏಕೆಂದರೆ ಇದನ್ನು ಅರ್ಥೈಸಿಕೊಳ್ಳುವ ಜನರು ಕಡಿಮೆಯಾಗಿದ್ದಾರೆ.

"ಶ್ರೀ ಭಾಗವತೋ" ಈ ತುಳು ಮಹಾಕಾವ್ಯವನ್ನು ಸಂಗ್ರಹಿಸಿದವರು ಶ್ರೀ ವೆಂಕಟರಾಜ ಪುಣಿಂಚತ್ತಾಯರು. ನಮಗೆ ಬಂದ ತಿಳುವಳಿಕೆ ಮೇರೆಗೆ ಬಹಳ ಜನ ಈ ಕಾವ್ಯವನ್ನು ಜನಸಾಮಾನ್ಯರಿಗೆ ತಲುಪಿಸಿ ಸ್ಪಂದಿಸುವಲ್ಲಿ ಪ್ರಯತ್ನಿಸಿ, ಯಶಸ್ವಿಯಾಗಿಲ್ಲ. ಈ ಸಂದರ್ಭದಲ್ಲಿ ತುಳು ಸಾಹಿತ್ಯ ಅಕಾಡೆಮಿಯು ಅನುವಾದಕ್ಕೆ ಪ್ರಾಶಸ್ತ್ಯ ನೀಡುವ ಉದ್ದೇಶದಿಂದ ಇದನ್ನು ಕನ್ನಡದಲ್ಲಿ ಗದ್ಯರೂಪದಲ್ಲಿ ಅನುವಾದಿಸಲು ಮುಂದಾದಾಗ, ನಮ್ಮ ಸದಸ್ಯರಾದ ಡಾ. ಗಣನಾಥ ಎಕ್ಕಾರಣರವರ ಸೂಚನೆಯಂತೆ ಈ ಕೆಲಸವನ್ನು ಶ್ರೀ ಮಾಧವ ಪೆರಾಜೆಗೆ ಒಪ್ಪಿಸಿಕೊಡುವರೆ ನಿಶ್ಚಯಿಸಲಾಯಿತು. ಶ್ರೀ ಪೆರಾಜೆಯವರು ಈ ಕೆಲಸವನ್ನು ತನ್ನ ಸ್ವಂತ ಇಚ್ಛೆಯಿಂದ ಆರಂಭಿಸಿರುವೆ. ಈಗ ತನಗೆ 'ರೋಗಿ ಬಯಸಿದ್ದು ಹಾಲು - ವೈದ್ಯ ನೀಡಿದ್ದು ಹಾಲು' ಎಂಬಂತಾಗಿದೆ ಎಂದು ಸಂತೋಷದಿಂದ ಒಪ್ಪಿಕೊಂಡರು. ಅಂತೆಯೇ ತನ್ನ ಅನುವಾದ ಕೃತಿಯನ್ನು ತುಳು ಅಕಾಡೆಮಿ ಇಚ್ಛಿಸಿದ ರೀತಿಯಲ್ಲಿ ಒಪ್ಪಿಸಿರುವರು.

ಅವರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಹೃತ್ಪೂರ್ವಕ ಕೃತಜ್ಞತೆಗಳು ಮಾತ್ರವಲ್ಲ ಇದನ್ನು ಅಂದವಾಗಿ ಮುದ್ರಿಸಿದ "ಮನೋರಮ ಆಫ್‌ಸೆಟ್ಸ್"ನವರಿಗೂ ಕೃತಜ್ಞತೆಗಳು.

(ಯಮ್.ಕೆ. ಸೀತಾರಾಮ್ ಕುಲಾಲ್)

ಅಧ್ಯಕ್ಷರು

ಅನುವಾದಕನ ಅರಿಕೆ

ತುಳುವಿನ ಭಾಗವತ ಕಾವ್ಯದೊಂದಿಗೆ ಕಳೆದ ಹದಿನೇಳು ವರ್ಷಗಳಿಂದ ತೊಡಗಿಸಿಕೊಂಡ ಸಂಬಂಧದ ಫಲವಾಗಿ ಇದೀಗ ಈ ಪುಸ್ತಕ ಪ್ರಕಟವಾಗುತ್ತಿದೆ. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ೧೯೯೧-೯೨ರ ಸಾಲಿನಲ್ಲಿ ನಾನು ಎರಡನೇ ವರ್ಷದ ಕನ್ನಡ ಎಂ.ಎ ವಿದ್ಯಾರ್ಥಿಯಾಗಿದ್ದೆ. ಆಗಷ್ಟೇ ನಾನು ಎರಡನೇ ವರ್ಷದ ಕನ್ನಡ ಎಂ.ಎ. ವಿದ್ಯಾರ್ಥಿಯಾಗಿದ್ದೆ. ಆಗಷ್ಟೇ ಮಂಗಳೂರು ವಿಶ್ವವಿದ್ಯಾಲಯದಿಂದ 'ಶ್ರೀ ಭಾಗವತೋ' ಪ್ರಕಟವಾಗಿತ್ತು. ಎಂ.ಎ. ವಿದ್ಯಾರ್ಥಿಗಳು ಸೆಮಿನಾರ್‌ನಲ್ಲಿ ಪ್ರಬಂಧ ಮಂಡಿಸುವುದು ಆಗ ಅತ್ಯಂತ ಉತ್ಸಾಹದ ಸಂಗತಿಯಾಗಿತ್ತು. ವಿದ್ಯಾರ್ಥಿಗಳು ಹೊಸ ಹೊಸ ವಿಷಯಗಳ ಆಯ್ಕೆಯಲ್ಲಿಯೇ ಸಂಭ್ರಮ ಪಡುತ್ತಿದ್ದರು. ಆಗ ನಾನು ಶ್ರೀ ಭಾಗವತದ ಕುರಿತು ಪ್ರಬಂಧ ಮಂಡಿಸುವುದಾಗಿ ತೀರ್ಮಾನಿಸಿದೆ. ಕನ್ನಡ ವಿಭಾಗದಲ್ಲಿ ಆಗ ರೀಡರ್ ಆಗಿದ್ದ ಡಾ.ಕೆ. ಚಿನ್ನಪ್ಪ ಗೌಡರು ನನ್ನ ಪ್ರಬಂಧದ ಮಾರ್ಗದರ್ಶಕರಾದರು.

ಮುಂದೆ 'ಶ್ರೀ ಭಾಗವತೊ' ಕಾವ್ಯದ ಸಂಪಾದಕರಾದ ಡಾ. ವೆಂಕಟರಾಜ ಪುಣಿಂಚಿತ್ತಾಯರಲ್ಲಿ, ಚರ್ಚಿಸಿ ಕನ್ನಡ - ತುಳು ಭಾಗವತಗಳ ತೌಲನಿಕ ಅಧ್ಯಯನ ಎಂಬ ಪ್ರಬಂಧ ಸಿದ್ಧಪಡಿಸಿದೆ. ಅದು ಹೆಚ್ಚು ಕಡಿಮೆ ಒಂದು ವರ್ಷದ ಅಧ್ಯಯನದ ಫಲವಾಗಿ ಮಂಡಿಸಿದ ಪ್ರಬಂಧವಾಗಿತ್ತು. ಕನ್ನಡ - ತುಳು ಭಾಗವತಗಳು ಎಂಬ ಶೀರ್ಷಿಕೆಯಡಿಯಲ್ಲಿ ಮುಂದೆ ಪ್ರಕಟವಾಗಿರುವ ಬರಹವು ಆ ಪ್ರಬಂಧದ ಯಥಾರೂಪವಾಗಿದೆ. ವಿಚಾರ ಸಂಕಿರಣ ಮುಗಿಸಿದ ಮೇಲೆ, ಗುರುಗಳಾದ ಡಾ. ಪುರುಷೋತ್ತಮ ಬಿಳಿಮನೆಯವರು "ಈ ಪುಸ್ತಕವನ್ನು ಸಂಪೂರ್ಣವಾಗಿ ಓದಿದವರು ಈಗ ಇಬ್ಬರೇ. ಮೊದಲನೆಯವರು ಇದರ ಸಂಪಾದಕರಾದ ವೆಂಕಟರಾಜ ಪುಣಿಂಚಿತ್ತಾಯರು, ಎರಡನೆಯವನು ನೀನೇ" ಎಂದರು.

ಇದಾದ ಮೇಲೆ ಎಂ.ಎ. ಮುಗಿಸಿ (೧೯೯೨)ಆರು ತಿಂಗಳವರೆಗೆ ಮನೆಯಲ್ಲಿರಬೇಕಾಯಿತು. ಆಗ ಸಮಯ ಕಳೆಯುವುದಕ್ಕೆ ಬೇರೆ ದಾರಿಯಿಲ್ಲದೇ ಮತ್ತೆ 'ಶ್ರೀ ಭಾಗವತೊ' ಕಾವ್ಯವನ್ನೂ ಅನುವಾದ ಮಾಡತೊಡಗಿದೆ. ಹೀಗೆ ಇದರ ಅನುವಾದ ಕಾರ್ಯವು ಈಗ ೧೩ ವರ್ಷಗಳ ಹಿಂದೆಯೇ ನಡೆಯಿತು. ಆಗ ೯ ಬಳಿಕ ಅದೇ ವರ್ಷ ನಾನು ಮಂಗಳೂರು ವಿಶ್ವವಿದ್ಯಾಲಯದಲ್ಲಿ ನೌಕರನಾಗಿ ಸೇರಿದೆ. ಹಾಗಾದಾಗ ಅನುವಾದ ಕಾರ್ಯ ಅಲ್ಲಿಗೇ ನಿಂತು ಹೋಯಿತು. ಆಮೇಲೆ ೨೦೦೪-೨೦೦೧ರ ಶೈಕ್ಷಣಿಕ ಅವಧಿಯಲ್ಲಿ ಡಾ. ಎಂ.ಎಂ. ಕಲಬುರ್ಗಿಯವರು ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಬಂದರು. ಅವರಲ್ಲಿ 'ಶ್ರೀ ಭಾಗವತೊ' ಕಾವ್ಯದ ಅನುವಾದವನ್ನು ಮುಂದುವರಿಸುವುದಾಗಿ ಹೇಳಿದಾಗ ಸಂತೋಷದಿಂದ

ಒಪ್ಪಿಗೆ ಸೂಚಿಸಿದರು. ಹೀಗೆ, ಒಪ್ಪಿಗೆ ನೀಡಿದ ಒಂದು ವರ್ಷದಲ್ಲಿಯೇ ಸಂಪೂರ್ಣವಾಗಿ ಅನುವಾದ ಮುಗಿದು ಹೋಯಿತು. ಆದರೆ ಏಕೋ ಕುಲಪತಿಗಳು ಪ್ರಕಟಿಸುವ ಮನಸ್ಸು ಮಾಡಲಿಲ್ಲ. ಓಲೈಸುವ ಜಾಯಮಾನವೇ ನನ್ನದಲ್ಲವಾದುದರಿಂದ ಅದು ಅಲ್ಲಿಗೇ ನಿಂತಿತು.

ಆಮೇಲೆ ೨೦೦೭ರಲ್ಲಿ ದ್ರಾವಿಡ ವಿಶ್ವವಿದ್ಯಾನಿಲಯದಲ್ಲಿ (ಕುಪ್ಪಂ) ವಿಚಾರ ಸಂಕಿರಣಕ್ಕೆ ನಾನು ಹೋದಾಗ ಅಲ್ಲಿಗೆ ಮಿತ್ರರಾದ ಗಣನಾಥ ಎಕ್ಕಾರ್ ಅವರು ಬಂದಿದ್ದರು. ತುಳು ಅಕಾಡೆಮಿಯ ಸದಸ್ಯರಾದ ಅವರಲ್ಲಿ ಈಗೇನು ಅಕಾಡೆಮಿಯ ಕೆಲಸಗಳು ಎಂದು ಸಲಿಗೆಯಿಂದ ಕೇಳಿದೆ. ಆಗ ಅವರು ಶ್ರೀ ಭಾಗವತರ ಅನುವಾದ ಮಾಡಿಸುತ್ತಿದ್ದೇನೆ. ಈಗಾಗಲೇ ಅದನ್ನು ಒಬ್ಬರಿಗೆ ವಹಿಸಿದ್ದೇವೆ ಎಂದರು (ಅವರೂ ನನ್ನ ಸ್ನೇಹಿತರೇ) ಆಗ ನಾನು ಈಗಾಗಲೇ ನಾನು ಆ ಕೆಲಸವನ್ನು ಮುಗಿಸಿರುವುದಾಗಿ ಹೇಳಿದ್ದೆ. ಅವರಿಗೆ ಆಶ್ಚರ್ಯವಾಗಿತ್ತು. ಈಗಾಗಲೇ ಬೇರೆಯವರಿಗೆ ಒಪ್ಪಿಸಿ ಆಗಿದೆಯಲ್ಲ ಎಂದು ಅವರು ಪೇಚಾಡಿದರು. ಆಗ ಹೆಚ್ಚೇನು ನಾನು ಹೇಳಲಿಲ್ಲ.

ಅದರ ಮುಂದಿನ ಹಂತವನ್ನು ಇನ್ನು ನಾನು ಹೇಳಬೇಕಾಗಿಲ್ಲ. ಒಂದು ದಿನ ತುಳು ಅಕಾಡೆಮಿ ಅಧಿಕೃತವಾಗಿ ನನಗೆ ಪತ್ರ ಬರೆದು ಹಸ್ತಪ್ರತಿಯನ್ನು ಕಳುಹಿಸಿಕೊಡಲು ಸೂಚಿಸಿತು. ನಾನು ಒಪ್ಪಿದೆ; ಈಗ ಪುಸ್ತಕ ನಿಮ್ಮ ಕೈಯಲ್ಲಿದೆ.

ಯೋಗಾಯೋಗ ಎನ್ನುವುದನ್ನು ನಾನು ಕೇಳಿದ್ದೆ. ಆದರೆ ಅದು ನಿಜವಾಗಿಯೂ ಇರುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ೧೭ ವರ್ಷದ ಪ್ರಯತ್ನ ಫಲ, ನಾನು ಸುಮ್ಮನಿದ್ದಾಗಲೂ ಪಾಸಾಗಿ ಕೈಗೂಡುತ್ತಾರೆ ಎಂದು ನಂಬಿರಲಿಲ್ಲ. ಅಲ್ಲಿಗೆ, ಶ್ರೀಕೃಷ್ಣನಿಗೆ ತನ್ನ ಮಹಿಮೆಯನ್ನು ತನಗೆ ಸೂಕ್ತವೆನಿಸಿದ ಸಮಯದಲ್ಲಿ, ಸೂಕ್ತವೆನಿಸಿದವರಿಂದಲೇ ಮಾಡಿಸುವ ಸಂಕಲ್ಪವಿದೆ ಎಂದಾಯಿತು! ಇಲ್ಲದಿದ್ದರೆ, ಏನೂ ಸಂಬಂಧವಿಲ್ಲದ ನನ್ನಿಂದ ಈ ಕಾರ್ಯ ನಡೆದುದಾದರೂ ಹೇಗೆ? ಎಲ್ಲ ಭಗವಂತನಿಚ್ಛೆ!

ಇನ್ನು ಹೆಚ್ಚಿಗೆ ಇದನ್ನು ಬೆಳೆಸಬೇಕಾಗಿಲ್ಲ. ಇದನ್ನು ಆಗ ಮಾಡಿದವರನ್ನು ನೆನೆಸುವುದಷ್ಟೇ ಇದೀಗ ಕರ್ತವ್ಯ.

ಮೊದಲನೆಯದಾಗಿ ಮೂಲೆಯಲ್ಲಿದ್ದ ಈ ಕಾವ್ಯವನ್ನು ಹುಡುಕಿ, ಅಪೂರ್ವ ವಿದ್ವತ್ತಿನಿಂದ ಬೆಳಕಿಗೆ ತಂದವರು ಡಾ. ವೆಂಕಟರಾಜ ಪುಣಿಂಚತ್ತಾಯರು. ಅವರ ಈ ದೊಡ್ಡ ಕೆಲಸದಿಂದಾಗಿ ತುಳುಭಾಷೆಗೆ, ತುಳು ನಾಡಿಗೆ, ಜನಕ್ಕೆ ಮನ್ನಣೆ ಬಂದಿದೆ. ತುಳುನಾಡಿಗೆ ತುಳುವಿಗೆ ಏನೂ ಕೆಲಸ ಮಾಡದೆ, ಪುಕಸಟ್ಟೆ ಪ್ರಚಾರ ಪಡೆಯುವ, ಲಾಭಪಡೆದುಕೊಳ್ಳುತ್ತಿರುವವರನ್ನು ಕಂಡಾಗಲೆಲ್ಲ ನನಗೆ ವೆಂಕಟರಾಜ ಪುಣಿಂಚತ್ತಾಯರು ಮತ್ತೆ ಮತ್ತೆ ನೆನಪಾಗುತ್ತಾರೆ. ಅವರು ನಾನು ವಿದ್ಯಾರ್ಥಿಯಾಗಿದ್ದಲ್ಲಿಂದ ನನಗೆ ನೆರವಾದವರು. ಅವರಿಗೆ ತುಂಬ ಕೃತಜ್ಞತೆಗಳು.

ಅರ್ಧಕ್ಕೆ ನಿಲ್ಲಿಸಿದ ಅನುವಾದವನ್ನು ಪೂರ್ಣಗೊಳಿಸುವುದಕ್ಕೆ ಒಪ್ಪಿಗೆ ನೀಡಿ ಪ್ರೋತ್ಸಾಹಿಸಿದವರು ಕನ್ನಡ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾದ ಡಾ. ಎಂ.ಎಂ. ಕಲಬುರ್ಗಿಯವರು. ಆಶ್ಚರ್ಯವೆಂದರೆ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ತುಳುವಿಗೆ ಸಂಬಂಧಿಸಿದ ಎರಡು ಮಹತ್ತರದ ಯೋಜನೆಗಳನ್ನು ಆಗ ಮಾಡಿದವರು ಕನ್ನಡಿಗರಾದ ಕುಲಪತಿಗಳೇ, ಈಗ ನಾವು ಪೂರೈಸಿರುವ 'ತುಳು ಸಾಹಿತ್ಯ ಚರಿತ್ರೆ' ಯೋಜನೆಯನ್ನೂ ಆಗ ಮಾಡಿದವರು ಕನ್ನಡಿಗರಾದ ಅಂದಿನ ಕುಲಪತಿಗಳೂ ಆದ ಡಾ. ಎಚ್.ಜೆ. ಲಕ್ಕಪ್ಪ ಗೌಡರು. ಈ ಮಹತ್ತ್ವದ ಯೋಜನೆಯನ್ನು ಆಗುಮಾಡಿದವರು ಇನ್ನೊಬ್ಬ ಕನ್ನಡಿಗರಾದ ಡಾ. ಎಂ.ಎಂ. ಕಲಬುರ್ಗಿಯವರು ಮಾನ್ಯರಾದ ಡಾ.ಎಂ.ಎಂ. ಕಲಬುರ್ಗಿಯವರಿಗೆ ತಲೆಬಾಗಿ ವಂದಿಸುವೆ.

ಮಿತ್ರರಾದ ಗಣನಾಥ ಎಕ್ಕಾರ್ ಅವರು ವೈಯಕ್ತಿಕ ಕಾಳಜಿ ತೆಗೆದುಕೊಳ್ಳದಿದ್ದರೆ ಈ ಪುಸ್ತಕ ಪ್ರಕಟವಾಗುತ್ತಿರಲಿಲ್ಲ ಎಂಬ ಒಂದೇ ಮಾತಿನಲ್ಲಿ ಅವರ ಉಪಕಾರ ಸ್ಮರಣೆ ಮಾಡುತ್ತೇನೆ. ಅವರಿಗೆ ಸೊಲ್ಮೆಲು.

ನಾನು ಏನೂ ಬರೆದಾಗಲೂ ತಪ್ಪದೇ ಓದುವ ಇನ್ನೂ ಬರೆಯಿರೆಂದು ಪ್ರೋತ್ಸಾಹಿಸುವ ವಿದ್ಯಾರ್ಥಿನಿ ಪಾರ್ವತಿಯವರು (ಈಗ ಅಧ್ಯಾಪಕರು) ಈ ಪುಸ್ತಕವನ್ನೂ ಓದಿದ್ದು ಮಾತ್ರವಲ್ಲದೆ ತಮಗೆ ಸಾಧ್ಯವಾದಷ್ಟು ಪ್ರೂಫ್ ನೋಡಿಯೂ ಇದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು.

ನನ್ನ ಮಡದಿಯಾದ ಶ್ರೀಮತಿ ಪುಟ್ಟಮ್ಮ ಬಿಡುವಿಲ್ಲದ ಕೆಲಸದ ನಡುವೆ ಇದರ ಪ್ರೂಫ್ ನೋಡಿಕೊಟ್ಟಿದ್ದಾಳೆ. ಸಂಸಾರದ ಎಲ್ಲಾ ಭಾರಗಳ ನಡುವೆ, ನನ್ನ ಎಲ್ಲ ತರ್ಲೆಗಳನ್ನು ಸಹಿಸುವ (ಕ್ಷಮಯಾಧರಿತ್ರೀ!) ಅವಳನ್ನು ಇಲ್ಲಿ ಪ್ರೀತಿಯಿಂದ ನೆನೆಸುತ್ತೇನೆ.

ನನಗೆ ಬುದ್ಧಿಬಂದಲ್ಲಿಂದ ಓದು - ಬರಹ ಬಿಟ್ಟು ಇನ್ನೇನನ್ನೂ ಮಾಡಿಲ್ಲ. ಕೆಲಸಕ್ಕೆ ಸೇರುವ ಮೊದಲೇ ಇಂತಹ ಬರವಣಿಗೆಯನ್ನು ನಾನು ಮಾಡಿದ್ದೆ ಎಂಬುದನ್ನು ಈಗಾಗಲೇ ಹೇಳಿದ್ದೇನೆ. ಓದು - ಬರಹ ಬಿಟ್ಟರೆ ಬೇರೇನೂ ನನಗೆ ಬರುವುದಿಲ್ಲ. ಈಗ ಇಂತಹ ಕೆಲಸವನ್ನು ನಾನು ಇಮ್ಮಡಿ ವೇಗದಿಂದ ಕೈಗೊಳ್ಳುವುದೇ ನಮ್ಮ ವಿದ್ಯಾರ್ಥಿಗಳು ಅಧ್ಯಾಪಕರು ಸೋಮಾರಿಗಳೆಂದು ಅನ್ಯಥಾ ಭಾವಿಸಬಾರದೆಂದು. ನಮ್ಮ ವಿದ್ಯಾರ್ಥಿಗಳು ಇದರಿಂದ ಪ್ರೇರಣೆ ಪಡೆದರೆ ನನಗೆ ಸಂತೋಷ.

ಸಾವು ಮನೆಬಾಗಿಲಲ್ಲೇ ಹೊಂಚು ಹಾಕಿರುವುದನ್ನು ಚೆನ್ನಾಗಿ ತಿಳಿದ ವ್ಯಕ್ತಿಯ ಮಾನಸಿಕ ತೊಳಲಾಟದಿಂದ ಆರಂಭವಾಗುವ ಕಥೆಯಿದು. ಭಾಗವತ ಹೇಳುವ ಸತ್ಯ, ನಿಗಿನಿಗಿ ಕೆಂಡದಂತಿರುವ ಸತ್ಯ - ಸಾವಿನ ಕುರಿತಾದುದು. ಎಲ್ಲಿಯವರೆಗೆ ಸಾವು ಎನ್ನುವ ಪರಮ ಸತ್ಯವಿರುತ್ತದೋ, ಅಲ್ಲಿಯವರೆಗೆ ಭಾಗವತವೂ ಇರುತ್ತದೆ. ಇಂತಹ ಸಾರ್ವಕಾಲಿಕ ಮೌಲ್ಯವನ್ನುಳ್ಳ ಕಾವ್ಯವನ್ನು ಓದುವ ಎಲ್ಲರಿಗೆ, ನನ್ನ ನಮನಗಳು.

ತುಳು ಅಕಾಡೆಮಿಯವರು ಸುವರ್ಣ ಕರ್ನಾಟಕ ಯೋಜನೆಯಡಿಯಲ್ಲಿ ಈ ಕೃತಿಯನ್ನು ಪ್ರಕಟಿಸುತ್ತಿದ್ದಾರೆ. ಇದಕ್ಕೆ ಕಾರಣರಾದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಸೀತಾರಾಮ ಕುಲಾಲ್ ಮತ್ತು ರಿಜಿಸ್ಟ್ರಾರ್ ಆದ ಎಚ್.ಎಸ್. ಶಿವರುದ್ರಪ್ಪನವರಿಗೆ ನಾನು ಆಭಾರಿಯಾಗಿದ್ದಾನೆ.

ಕೊನೆಯದಾಗಿ, ಆದರೆ ನಿಜವಾಗಿಯೂ ಮೊದಲಾಗಿ, ಶ್ರೀಕೃಷ್ಣನಿದ್ದಾನೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ತಲೆಕೆಡಿಸಿಕೊಂಡೂ ಇಲ್ಲ. ಆದರೆ ಈ ಕಾವ್ಯ ಆತನ ವಿನಾ ಆರಂಭವಾಗುವುದೂ ಇಲ್ಲ, ಕೊನೆಯಾಗುವುದೂ ಇಲ್ಲ. ಈ ಕಾವ್ಯ ಈ ಹಂತಕ್ಕೆ ತಲುಪಲು ಆಗಲೇ ಹೇಳಿದಂತೆ ಶ್ರೀಕೃಷ್ಣನಲ್ಲದಿದ್ದರೆ ಸಾಧ್ಯವೇ ಇರುತ್ತಿರಲಿಲ್ಲ. ನಾನು ಗುಡಿಗೆ ಹೋಗಿಯೋ ಬೆಳಗೆದ್ದೋ ದೇವರನ್ನು ನೆನೆಸುವುದಿಲ್ಲ. ಬರವಣಿಗೆಯೇ ಪೂಜೆ, ಪುರಸ್ಕಾರ, ದೇವರು ಇದ್ದರೆ ಅದಕ್ಕೇ ಒಲಿಯಬೇಕೆಂದುಕೊಂಡವ, ಅದು ಪೂರೈಸಿಯೂ ಇದೆ. ಎಂಬಲ್ಲಿಗೆ,

ಎಲ್ಲವೂ ಶ್ರೀಕೃಷ್ಣನಿಗೇ ಅರ್ಪಿತವಾಗಲಿ!

ಮಾರ್ಚ್ 30

ಡಾ. ಮಾಧವ ಪೆರಾಜೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಕ್ಷರ ಮಾತು

ಅನುವಾದಕನ ಅರಿಕೆ

1. ತುಳು ಭಾಷೆಯ ಕಾವ್ಯ ಪರಂಪರೆಗೆ ಹೀಗೆ ಬನ್ನಿ - 1 - 48
2. ಪ್ರಥಮ ಸ್ಕಂಧ - 49 - 162
3. ದ್ವಿತೀಯ ಸ್ಕಂಧ - 163 - 196
4. ತೃತೀಯ ಸ್ಕಂಧ - 197 - 326

ತುಳು ಭಾಷೆಯ ಕಾವ್ಯ ಪರಂಪರೆಗೆ ಹೀಗೆ ಬನ್ನಿ

ತುಳುನಾಡು - ನಾಡವರು:

ತುಳುನಾಡಿನ ಬಗೆಗೆ ತುಂಬ ಹಳೆಯ ಬರವಣಿಗೆಯ ಆಧಾರಗಳೆಂದರೆ ತಮಿಳಿನಲ್ಲಿರುವುದೇ ಆಗಿದೆ. ಈಗ ನಮಗೆ ತಿಳಿದಿರುವಂತೆ ತಮಿಳಿನ ಸಂಗಮ್ ಸಾಹಿತ್ಯದಲ್ಲಿ (ಕ್ರಿ.ಪೂ. ಸು. 3ನೇ ಶ.ಮಾ) ತುಳುನಾಡಿನ ಬಗೆಗೆ, ನಾಡವರ ಬಗೆಗೆ ವಿವರಗಳು ಇವೆ. ತಮಿಳಿನ ಹಳೆಯ ಪುಸ್ತಕ ಅಗನಾನೂರಿನಲ್ಲಿ ಹಾಗೂ ಸಂಗಮ್ ಸಾಹಿತ್ಯದಲ್ಲಿ 'ಕೋಶರ್ ಜನಗಳಿಗೆ ಸೇರಿದ ತುಳುನಾಡು' ಎಂದು ಈ ನಾಡನ್ನು ಮತ್ತು ನಾಡವರನ್ನು ಗುರುತಿಸಲಾಗಿದೆ. ಈ ಕೋಶರ್ ಎನ್ನುವ ಸಮುದಾಯವು ಈಗ ತುಳುನಾಡಿನಲ್ಲಿರುವ ಕೊರಗರಾಗಿರಬಹುದೆಂಬ ವಾದವೂ ಇದೆ. ಇದು ನಿಜವಾದುದಾದರೆ ತುಳುನಾಡಿನ ಮೊದಲ ನಾಡವರು ದಲಿತರಾಗುತ್ತಾರೆ. ಕನ್ನಡ ಭಾಷೆಯಲ್ಲಿ ಬರೆದ ಪುಸ್ತಕಗಳಲ್ಲಿ ಮೊದಲಿಗೆ ತುಳುನಾಡಿನ ಬಗೆಗೆ ಹೇಳುವ ಪುಸ್ತಕವೆಂದರೆ ನಯಸೇನನ 'ಧರ್ಮಾಮೃತವೇ'. ಅದರ ಕಾಲ ಕ್ರಿ.ಶ. 1115. ರಾಜರು ಬರೆಸಿದ ಶಾಸನಗಳಲ್ಲಿ ಕ್ರಿ.ಶ. 1020 ಬಲ್ಮರಿ ಶಾಸನದಲ್ಲಿಯೇ ತುಳುನಾಡಿನ ಕುರಿತು ಹೇಳಿರುವುದು. ಆದರೆ ಶಿಲಾಯುಗದ ಕಾಲದಿಂದಲೂ ಇಲ್ಲಿ ಮನುಷ್ಯರು ವಾಸವಾಗಿದ್ದರೆಂಬುದಕ್ಕೆ ನಮಗೀಗ ಆಧಾರಗಳು ಸಿಕ್ಕಿವೆ.

ಪ್ರಾಚೀನ ತುಳುನಾಡು: ಈಗಾಗಲೇ ಬಲ್ಮರಿ ಶಾಸನದ ಕುರಿತು ಹೇಳಲಾಯಿತು. ಇದರಲ್ಲೆಲ್ಲ ಮೊದಲ ಬಾರಿಗೆ 'ತುಳುವ' ಎನ್ನುವ ಪದವೂ ಬಂದಿರುವುದು. ಕ್ರಿ.ಶ. 15ನೆಯ ಶತಮಾನದ ಅನಂತಪುರದ ಶಾಸನವೇ ತುಳು ಲಿಪಿಯಲ್ಲಿರುವ ಮೊದಲ ಶಾಸನವಾಗಿದೆ. ಭಾರತ ದೇಶವೆಲ್ಲಾವೂ ಮೌರ್ಯ ರಾಜನಾದ ಅಶೋಕನ (ಕ್ರಿ.ಪೂ. 274-235) ಅಳ್ವಿಕೆಯಲ್ಲಿತ್ತು ಎಂಬ ಕಾರಣಕ್ಕೆ ಅಶೋಕನು ತುಳುನಾಡನ್ನು ಆಳುತ್ತಿದ್ದನೆಂದು ಹೇಳಬಹುದಷ್ಟೇ. ಅದರ ಹೊರತು ಅಶೋಕನು ತುಳುನಾಡನ್ನು ಆಳುತ್ತಿದ್ದನೆಂಬುದಕ್ಕೆ ಈಗ ನಮಗೆ ತಿಳಿದಿರುವಂತೆ ಯಾವ ಆಧಾರಗಳೂ ಇಲ್ಲ. ಅನಂತರದ ಶಾತವಾಹನ (ಕ್ರಿ.ಶ. 2ನೇ ಶ.ಮಾ.) ಅರಸನು ಈ ನಾಡನ್ನೂ ಆಳಿದ್ದರೆಂಬುದಕ್ಕೆ ಆಧಾರಗಳಿಲ್ಲ. ಚುಟುಗಳು, ಕದಂಬರು (ಕ್ರಿ.ಪೂ. 200- ಕ್ರಿ.ಶ. 600), ವಿಜಯನಗರ ಅರಸರು (ಕ್ರಿ.ಶ. 1336-1614) ಹೀಗೆ ಯಾರೆಲ್ಲ ಕನ್ನಡ ನಾಡನ್ನು ಆಳಿದ್ದರೋ-ಅವರೆಲ್ಲ ತುಳುನಾಡನ್ನೂ ಆಳಿದ್ದರು. ಆದರೆ ತುಳುನಾಡನ್ನು ಬಹಳ ಕಾಲ ಆಳಿದ್ದ ಅರಸು ಮನೆತನದವೆಂದರೆ ಆಲೂಪರದು (ಸು.ಕ್ರಿ.ಶ. ಆರಂಭದಿಂದ, ಕ್ರಿ.ಶ್ರ.ಸು. 15ನೇ ಶತಮಾನದವರೆಗೆ) ಇಂದಿನ ತುಳುನಾಡಿನ ಅನೇಕ ಆಚಾರ-ವಿಚಾರಗಳು ಆಲೂಪರ ಕೊಡುಗೆಯಾಗಿರಬಹುದು. ಬೌದ್ಧ, ಜೈನ, ಶೈವ, ವೈದಿಕ, ಇಸ್ಲಾಂ ಹಾಗೂ ಕ್ರೈಸ್ತ ಧರ್ಮಗಳು ಆರಂಭದಿಂದಲೂ ತುಳುನಾಡಿನಲ್ಲಿ ಪ್ರಚಾರದಲ್ಲಿದುದಾಗಿ ತಿಳಿಯುತ್ತದೆ. ಆದರೆ ತುಳುನಾಡಿನದೇ

ಆದ ಆರಾಧನಾ ಪದ್ಧತಿ, ಭೂತರಾಧನೆಯೊಂದೇ ಆಗಿರಬೇಕು. ಕನ್ನಡನಾಡಿನಲ್ಲಿ ಎಲ್ಲೂ ಕಾಣಸಿಗದ, ಆದರೆ ಕೇರಳದಲ್ಲಿರುವ - ತಮಿಳಿನ ಹಳೆಯ ಪುಸ್ತಕದಲ್ಲಿ- ಭೂತಾರಾಧನೆಯ ಕುರಿತು ಹೇಳಲಾಗಿದೆ. (ಉದಾ: ಶಿಲಪ್ಪದಿಕಾರಂ). ಆದರೆ ಶಾಸನಗಳಲ್ಲಿ ಭೂತಾರಾಧನೆಯ ಬಗೆಗೆ ನಮಗೆ ವಿವರಗಳು ಸಿಗುವುದು 14ನೆಯ ಶತಮಾನದ ಕೊನೆಯ ಹಂತದಲ್ಲಿ ಮಾತ್ರ. ಇವೆಲ್ಲವು ತುಳುನಾಡು-ನಾಡವರು, ಆಚಾರ ವಿಚಾರಗಳ ಕುರಿತು ತಿಳಿದಿರುವುದಕ್ಕಿಂತ ತಿಳಿಯದಿರುವುದೇ ಸಾಕಷ್ಟು ಎನ್ನುವುದನ್ನೂ ತಿಳಿಯಪಡಿಸುವ ವಿವರಗಳಾಗಬಲ್ಲವು.

ಇದರಿಂದ ಇನ್ನೊಂದು ಮುಖ್ಯವಾದ ಸಂಗತಿಯೂ ತಿಳಿದು ಬರುತ್ತದೆ. ತುಳುನಾಡೆಂಬ ಈ ನಾಡಿಗೆ ಇಷ್ಟೆಲ್ಲ ತನ್ನದೇ ಆದ ಗುಣಲಕ್ಷಣಗಳಿರುವಾಗಲೂ ಇಲ್ಲಿಯದೇ ಆದ ಯಾವ ಮಹಾರಾಜರೂ ಬಾಳಿ ಬದುಕಿ, ಆಡಳಿತ ನಡೆಸಿದಂತೆ ಕಂಡುಬರುವುದಿಲ್ಲ. ಮೊದಲಿಗೆ ತಮಿಳರು, ಆಮೇಲೆ ಕೇರಳಿಯರು ಮತ್ತೆ ಕನ್ನಡದ ಮಹಾರಾಜರುಗಳು ಅಳಿದುದರಿಂದ ಕೊನೆಯದಾಗಿ ಕರಾವಳಿ ಕರ್ನಾಟಕವಾಗಿ ಅಂದಿನ ಹಳೆಯ ತುಳುನಾಡು ಕನ್ನಡ ನಾಡಿಗೆ ಸೇರಿ ಹೋಯಿತು. ಆದುದರಿಂದ ಹಳೆಯ ತುಳುನಾಡು ಇಂದು ಕೇವಲ ಇತಿಹಾಸ ಅಷ್ಟೇ ಆಗಿ ಉಳಿದಿದೆ. ಇದರಿಂದ ರಾಜ್ಯ, ಭಾಷೆ, ಆಚಾರ-ವಿಚಾರಗಳು ಬಾಳಿ ಬದುಕಿ ಬರಬೇಕಾದರೆ ಮಹಾರಾಜರ ಪಾತ್ರಗಳು ಎಷ್ಟರಮಟ್ಟಿಗೆ ಅಗತ್ಯವಾಗಿರುತ್ತದೆ; ಭಾರತದ ಯಾವುದೇ ನಾಡು-ನುಡಿಯ ತಾಳಿಕೆ ಬಾಳಿಕೆಯಲ್ಲಿ ಮಹಾರಾಜರ ಆಳ್ವಿಕೆ ಎಷ್ಟು ಅಗತ್ಯವಾಗಿತ್ತು ಎಂಬ ಸಂಗತಿಯೂ ನಮಗೆ ಮನದಟ್ಟಾಗಬಲ್ಲುದು, ಇರಲಿ.

ಹಾಗೆಂದು ತುಳುನಾಡು ಎನ್ನುವ ಭೂಪ್ರದೇಶವು ಎಲ್ಲ ಕಾಲಕ್ಕೂ ಒಂದೇ ರೀತಿಯ ಎಲ್ಲೆಯನ್ನು ಪಡೆದಿತ್ತು ಎಂದು ಯಾರೂ ತಿಳಿಯಬಾರದು. ಅಶೋಕನ ಕಾಲದಲ್ಲಿ ಹೆಸರಿಸಿರುವ ಸತಿಯ ಪುತ್ರ ಎಂಬುದು ತುಳುನಾಡಿಗೆ ಸಂಬಂಧಿಸಿರುವುದು ಎಂದು ತಿಳಿಯಲಾಗಿದೆ. ಅದು ಸಹ್ಯಾದ್ರಿ ಪರ್ವತ ಸಾಲು ಮತ್ತು ಪಡುವಣ ಕರಾವಳಿ ಪ್ರದೇಶದ ನಡುವಣ ಭಾಗ ಎಂದು ತಿಳಿಯಲಾಗಿದೆ. ಈ ಕುರಿತು ಒಮ್ಮತವಂತೂ ಇಲ್ಲ. ಕದಂಬರ ಹಾಗೂ ಶಾತವಾಹನರ ಸಾಮಂತರಾದ ಚುಟುಗಳು ಕಾಸರಗೋಡು, ಬಾರ್ಕೂರು, ಮಂಗಳೂರು ಮತ್ತು ಕಡಬ ಪ್ರದೇಶಗಳನ್ನು ಆಳುತ್ತಿದ್ದರು. ಅದು ಅಂದಿನ ತುಳುನಾಡು. ಕದಂಬರ ಇನ್ನೊಂದು ಪಂಗಡಕ್ಕೆ ಸೇರಿದ ನಾಲ್ಕನೆಯ ಮಯೂರವರ್ಮನು ಈಗಿನ ಕೇರಳದ ಕಾಸರಗೋಡಿನ ಕುಂಬಳೆ ಭಾಗದಲ್ಲಿ 'ಕುಂಬಳೆ ರಾಜ್ಯ' ಎನ್ನುವ ತುಳುನಾಡನ್ನು ಕಟ್ಟಿದನು. ಅದು ಉತ್ತರದಲ್ಲಿ ನೇತ್ರಾವತಿ, ದಕ್ಷಿಣದಲ್ಲಿ ಚಂದ್ರಗಿರಿ, ಮೂಡಣದಲ್ಲಿ ಪಶ್ಚಿಮ ಘಟ್ಟ, ಪಡುವಣದಲ್ಲಿ ಅರಬೀ ಸಮುದ್ರದ ನಡುವಣ ಭಾಗವಾಗಿತ್ತು. ಮುಂದೆ ಆಲೂಪರ ಕಾಲದಲ್ಲಿ ಒಂದೊಮ್ಮೆ ಮಂಗಳಾಪುರ (ಮಂಗಳೂರು), ಪೊಂಬುಚ್ಚಪುರ (ಹುಂಚ) ಮತ್ತು ಬನವಾಸಿ ಇವುಗಳನ್ನೊಳಗೊಂಡ ತುಳುನಾಡು ರೂಪುಗೊಂಡಿತು. ಅವರು ಗೇರುಸೊಪ್ಪೆ, ನಗಿರೆ, ಹಾಡುವಳ್ಳಿ, ಹೊನ್ನಾವರ, ಭಟ್ಕಳ, ಬಾರ್ಕೂರುವರೆಗೆ ರಾಜ್ಯ

ವಿಸ್ತಾರ ಮಾಡಿದ್ದರು. ಮುಂದೆ ಸಾಳುವ ಅರಸರ ಕಾಲದಲ್ಲಿ ಗೇರುಸೊಪ್ಪೆಯು ತುಳುದೇಶದ ರಾಜಧಾನಿಯಾಯಿತು. ಹೊನ್ನೆಯ ಕಂಬಳಿ ಅರಸರು ಹೊಸಂಗಡಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತುಳುನಾಡನ್ನು ಆಳಿದರು. ಇವರು ಕೊಲ್ಲೂರು, ಹೊಸಂಗಡಿ, ಬಗ್ಗವಾಡಿ, ಮುನಿವಾಡು, ಆರುನಾಡು, ಕದರಿ, ಕಬ್ಬುನಾಡು ಪ್ರದೇಶಗಳನ್ನು ಆಳುತ್ತಿದ್ದರು.

ಪುತ್ತಿಗೆಯ ಚೌಟರು (ಕ್ರಿ.ಶ. 1390-1465) ತುಳುನಾಡನ್ನು ಆಳಿದ ಪ್ರಮುಖ ಅರಸು ಮನೆತನವಾಗಿ ಮುಂದೆ ಆಳಿರುವುದು ಕಂಡುಬರುತ್ತದೆ. ಇವರು ಪುತ್ತಿಗೆ ಮೂಡಬಿದಿರೆ, ಉಳ್ಳಾಲ-ಸೋಮೇಶ್ವರಗಳಿಗೆ ಆಳ್ವಿಕೆ ನಡೆಸುತ್ತಿದ್ದರು. ಇವರ ಕಾಲದಲ್ಲಿ ಉಳ್ಳಾಲ, ತಲಪಾಡಿ, ಅಮ್ಮೆಂಬಳ, ಮಿಜಾರು, ಮಳಲಿ, ಕಡಂದಲೆ, ಪೇಜಾವರ, ಪುತ್ತಿಗೆ, ಹೆಜಮಾಡಿ, ಮುಂಡ್ಕೂರು ಮಾಗಣೆಗಳು, ಬಾಳೆಪುಣಿ, ಕೈರಂಗಳ, ಬೋಳೂರು, ಬಾಳ, ಕಳವಾರು, ಸಾಣೂರು ಮತ್ತು ಪಟ್ಟೆಗ್ರಾಮಗಳು ಈ ಅರಸುಮನೆತನಕ್ಕೆ ಸೇರಿದ್ದವು. ಹಾಗೆಯೇ ವಿಟ್ಲದ ಡೊಂಬ ಹೆಗ್ಗಡೆಯ ಅರಸುಮನೆತನವು ವಿಟ್ಲ, ಕಸಬಾ, ಪಡ್ನೂರು, ಮೂಡೂರು, ಬಾಯಾರು, ಚಿಪ್ಪಾರು, ಎರುಂಬು, ಅಳಿಕೆ, ಪೆರುವಾಯಿ, ಮಾಣಿಲ, ಪುಣಚಾ, ಕೇಪು, ಕನ್ಯಾನ, ಕರೋಪಾಡಿ, ಕುಡಾಲ, ಮರ್ಕಳ, ಸಾಲೆತೂರು, ಕುಳ, ವಕ್ಕೆತ್ತೂರು, ಪೈವಳಿಕೆ, ಕೊಲನಾಡು ಇವುಗಳನ್ನೊಳಗೊಂಡ ವಿಟ್ಲಸೀಮೆ ಇವರ ಆಳ್ವಿಕೆಯಲ್ಲಿತ್ತು. ಇದಾದನಂತರ ಮೂಲ್ಕಿ ಸೀಮೆಯ ಅರಸರು (ಕ್ರಿ.ಶ. 14ರಿಂದ 18ನೇ ಶ.ಮಾ.ದವರೆಗೆ) ತುಳುನಾಡನ್ನು ಆಳಿದರು. ಅಯಿಕಳ, ಅತ್ತೂರು, ಕುಬೆವೂರು, ಪಂಜ, ಒಳಲಂಬೆ, ಕಾರ್ನಾಡು, ಬಪ್ಪನಾಡು, ಕುಡೆತ್ತೂರು ಮತ್ತು ತಾಳಿಪಾಡಿಗಳನ್ನೊಳಗೊಂಡ ಸೀಮೆಯ ಅರಸರಿವರು. ಹಾಗೆಯೇ ವಿಜಯನಗರದ ಅರಸರ ಕಾಲದಲ್ಲಿ ಮಂಗಳೂರು ರಾಜ್ಯ ಮತ್ತು ಬಾರಕೂರು ರಾಜ್ಯ ಎಂಬುದಾಗಿ ಎರಡು ರೀತಿಯಲ್ಲಿ ವಿಂಗಡಿಸಿದ್ದರು. ಮಂಗಳೂರು ರಾಜ್ಯವು ಮಂಗಳೂರು, ಕಾರ್ಕಳ, ಪುತ್ತೂರು ಮತ್ತು ಕಾಸರಗೋಡು ಪ್ರದೇಶಗಳನ್ನೊಳಗೊಂಡಿತ್ತು. ಬಾರಕೂರು ರಾಜ್ಯವು ಈಗಿನ ಉಡುಪಿ ಮತ್ತು ಕುಂದಾಪುರ ತಾಲೂಕುಗಳಿಗೆ ಸೀಮಿತವಾದ ನಾಡಾಗಿತ್ತು.

ವಿಜಯ ನಗರ ಸಾಮ್ರಾಜ್ಯ ಮುರಿದು ಹೋದ ನಂತರ ಇಕ್ಕೇರಿ ನಾಯಕರು ಸ್ವತಂತ್ರರಾದರು. (ಕ್ರಿ.ಶ. 1497-1763). ಅನಂತರ ಬ್ರಿಟಿಷರು ಮತ್ತು ಮೈಸೂರು ಅರಸರ ಆಳ್ವಿಕೆಯ ಕಾಲದಲ್ಲಿ ಮತ್ತೆ ತುಳುನಾಡು ಅವರ ವಶವಾಯಿತು. ಆಗಲೂ ತುಳುನಾಡು ತನ್ನ ಮೇರೆಯನ್ನು ಬದಲಾಯಿಸಿಕೊಂಡಿತು. ಮುಂದೆ ಹೈದರಾಲಿ, ಟಿಪ್ಪು ಅವರ ಕಾಲದಲ್ಲಿ ತುಳುನಾಡು ಅವರ ವಶವಾಯಿತು. ಟಿಪ್ಪುವಿನ ಮರಣಾನಂತರ (1779) ಬ್ರಿಟಿಷರು ತುಳುನಾಡನ್ನು ಕೆನರಾ ಜಿಲ್ಲೆ ಎಂದು ಕರೆದರು. ಕೆನರಾ ಜಿಲ್ಲೆಯಲ್ಲಿ ಕಾಸರಗೋಡು, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳು ಸೇರಿಕೊಂಡವು. ಇದು ಮದರಾಸ್ ಪ್ರೆಸಿಡೆನ್ಸಿನ ಆಡಳಿತಕ್ಕೆ ಒಳಗಾಯಿತು. ನವೆಂಬರ್ 1800ರಲ್ಲಿ ಈ ಜಿಲ್ಲೆಯನ್ನು ಎರಡು ವಿಭಾಗಗಳಾಗಿ (ಉತ್ತರ ಮತ್ತು ದಕ್ಷಿಣ ಕನ್ನಡ) ಮಾಡಲಾಯಿತು. ಮುಂದೆ ನವೆಂಬರ್ 1, 1956ರಲ್ಲಿ ಭಾಷಾವಾರು ಪ್ರಾಂತ್ಯಗಳು ರೂಪುಗೊಂಡಾಗ ತುಳುನಾಡಿನ ಭಾಗವೇ ಆಗಿದ್ದ ಕಾಸರಗೋಡು ಕೇರಳದ ಪಾಲಾಯಿತು.

ತುಳುನಾಡು ಕರ್ನಾಟಕದ ಭಾಗವಾಯಿತು. ಮತ್ತೆ 1997ರಲ್ಲಿ ಈ ಭಾಗ ಅಧಿಕೃತವಾಗಿ ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಎಂದು ವಿಭಜನೆಯಾಯಿತು.

ಇವರಿಂದ ರಾಜಕೀಯ ಬಲವಿಲ್ಲದಾಗಲೂ ಕೇವಲ ಭಾಷೆಯ ಬಲದಿಂದಲೇ ಒಂದು ನಾಡು ತನ್ನ ಇರುವಿಕೆಯನ್ನು ಉಳಿಸುತ್ತ ಬಂದ ದೊಡ್ಡ ಕಥೆಯೊಂದನ್ನು ನಾವು ತಿಳಿಯಬಹುದು. ತುಳುನಾಡನ್ನು ಹೊರತು ಪಡಿಸಿ ಭಾರತದ ಯಾವ ಭೂಭಾಗವೂ ಬಹುಶಃ ಇಂತಹ ಅಸ್ತಿತ್ವವನ್ನು ಈಗ ಪಡೆದುಕೊಂಡಿರಲಿಕ್ಕಿಲ್ಲ ಎಂದೆನಿಸುತ್ತದೆ.

ತುಳು ಎಂಬ ಪದದ ಕುರಿತು: ಈ ಬಗೆಗೆ ತುಂಬ ಚರ್ಚೆಗಳಾಗಿವೆ. ಕೆಲವರು 'ತುಳು' ಎಂಬ ಶಬ್ದವು ಸಂಸ್ಕೃತದಿಂದ ಬಂದಿರುವುದೆಂದು ಹೇಳುತ್ತಾರೆ. ಇದಕ್ಕೆ ಅವರು ನೀಡುವ ಆಧಾರ 'ತೌಳವ' ಮೊದಲಾದ ಸಂಸ್ಕೃತ ಪದಗಳಾಗಿವೆ. ಹಾಗೆಯೇ ಕನ್ನಡ ಮೂಲದಿಂದಲೂ ತುಳು ಪದದ ಹುಟ್ಟಿನ ಕುರಿತು ಚರ್ಚೆ ಮಾಡಿದವರಿದ್ದಾರೆ. ಕನ್ನಡದಲ್ಲಿಯೂ ಅದು ಪ್ರದೇಶಕ್ಕೆ ಸಂಬಂಧಿಸಿ ಇಲ್ಲವೇ ಭಾಷೆಗೆ ಸಂಬಂಧಿಸಿ ಹೇಳಿರುವುದಾಗಿದೆ. ಇಂತಹ ಬರವಣಿಗೆಯಲ್ಲಿ ಪದದ ಹುಟ್ಟಿನ ಕುರಿತು ವಿವವರವಾಗಿ ಹೇಳುವ ಅಗತ್ಯವಿಲ್ಲವೆನಿಸುತ್ತದೆ. ಅದರ ಬದಲಾಗಿ ತುಳು ಪದಕ್ಕೆ ಸಂಬಂಧಿಸಿದಂತೆ ಸೇಡಿಯಾಪು ಕೃಷ್ಣಭಟ್ಟರ ಅಭಿಪ್ರಾಯವನ್ನಷ್ಟೇ ಕಿರಿದಾಗಿ ಇಲ್ಲಿ ಮಂಡಿಸಬಹುದಾಗಿದೆ.

'ತುಳು' ಪದದಲ್ಲಿರುವ 'ಳ'ಕಾರವು ದ್ರಾವಿಡ ಭಾಷೆಗಳೆಲ್ಲೆಲ್ಲ ಕಂಡುಬರುವ ಕುಳವೇ ಆಗಿದೆ. ಈ ಸಮಸ್ಯೆ ಏಕೆ ಬರುತ್ತದೆ ಎಂದರೆ ತುಳುನಾಡಿನಲ್ಲಿಯೇ ಕೆಲವು ಕಡೆ ಇದನ್ನು 'ತುಲು' ಎಂದು ಹೇಳುವುದೂ ಕೇಳಿಬರುತ್ತದೆ. ಇದು ಒಳನಾಡಿನಲ್ಲಿ ಬಳಕೆಯಾಗಿರದೆ ಕರಾವಳಿಯ ಜನರ ಬಳಕೆಯಷ್ಟೇ. ಆದರೆ ತುಳು ನಾಡಿನ ಬಹುತೇಕ ಕಡೆ ಅದು 'ಳ'ವಾಗಿಯೇ ಕೇಳಿ ಬರುತ್ತದೆ. ಹಾಗಿರುವಾಗ 'ತುಳು' ಪದವು 'ತುೞು' ಪದದಿಂದ ಹುಟ್ಟಿರುವುದು ಎನ್ನುವ ಅಭಿಪ್ರಾಯಕ್ಕೂ ಮನ್ನಣೆ ನೀಡಬೇಕಾಗಿಲ್ಲ. ಏಕೆಂದರೆ ಕನ್ನಡವಲ್ಲಿ 'ೞ' ಕಾರ ಬಳಕೆಯಾದಾಗ ತುಳುವಿನಲ್ಲಿ ಅದು 'ಜ' ಅಥವ 'ದ' ವರ್ಣಗಳಾಗುತ್ತವೆ. (ಉದಾ: ಬೞಿ-ಬಜಿ; ಮೂೞು-ಮೂಜಿ; ಮೞೆ-ಮದೆ) ಆ ಪ್ರಕಾರ 'ತುೞು' 'ತುಜು' ಅಗಬೇಕಿತ್ತು.

'ತುಳು' ಪದಕ್ಕೆ ಸರಿಯಾದ ಅರ್ಥವನ್ನು ಹೇಳುವುದಕ್ಕೆ ನಮಗೆ ಸಹಾಯಕವಾಗುವ ಪದವೆಂದರೆ ಹಲಸಿನ ಹಣ್ಣಿನ ಒಂದು ಜಾತಿಗೆ ಸಂಬಂಧಿಸಿ ಹೆಸರಿಸುವ 'ತುಳುವ ಪೆಲಕ್ಕಾಯಿ' (ತುಳುವ ಹಲಸು) ಎನ್ನುವ ಪದ. ಇದನ್ನು ಮಾವಿನ ಕಾಯಿಗೂ ಬಳಸುವ ಪರಿಪಾಠ ಕೆಲವು ಕಡೆಯಿದೆ. ತುಳುವ ಪೆಲಕ್ಕಾಯಿ ಎಂಬುದು ಮೆದುವಾದ, ನೀರು ನೀರಾಗಿರುವ ಹಲಸಿನ ಹಣ್ಣಿಗೆ ಸಂಬಂಧಿಸಿರುವುದು. ಈ ಅರ್ಥದಲ್ಲಿ 'ತುಳು' ಎಂಬುದು 'ನೀರಿನ ಹೆಚ್ಚಳ' ಇರುವ ನಾಡು ಎನ್ನುವ ಅರ್ಥದಲ್ಲಿ ಬಳಕೆಯಾಗಿರುವ ಪದವಾಗಿದೆ. ಇದಕ್ಕೆ ಪೂರಕವಾಗಿ ತಮಿಳಿನಲ್ಲಿ 'ತುಳಿ'

ಎಂದರೆ 'ನೀರಿನ ಹನಿ' ಎಂದೂ ಮಲಯಾಳದಲ್ಲಿ ಅದು 'ತುಳ್ಳಿ' ಎಂದಾಗಿರುವುದೂ ಕಂಡು ಬರುತ್ತದೆ. ದಕ್ಷಿಣ ಭಾರತದಲ್ಲಿಯೇ ಹೆಚ್ಚು ಮಳೆ ಬರುವ ಪ್ರದೇಶವಾಗಿ ನೀರು ತುಂಬಿ ತುಳುಕು ನಾಡು ಎನ್ನುವ ಅರ್ಥದಲ್ಲಿ 'ತುಳು' ಪದ ಬಳಕೆಯಾಗಿದೆ ಎಂದು ಇದರಿಂದ ತಿಳಿಯುತ್ತದೆ.

ಇದು ಸೇಡಿಯಪು ಕೃಷ್ಣಭಟ್ಟರು ತುಳು ಪದಕ್ಕೆ ಸಂಬಂಧಿಸಿದಂತೆ ನೀಡಿರುವ ತುಂಬ ಸರಿಯಾದ ವಿವರಣೆ ಎಂದು ನನ್ನಗನಿಸಿದುದರಿಂದ ಇಲ್ಲಿ ಅದನ್ನು ಸಾರರೂಪದಲ್ಲಿ ಮಂಡಿಸಬೇಕಾಯಿತು.

ತುಳುಭಾಷೆ: ದ್ರಾವಿಡ ಭಾಷಾಪರಿವಾರವೆಂಬುದು ಜಗತ್ತಿನ ಭಾಷಾ ಪರಿವಾಗಳಲ್ಲೇ ಬಹುದೊಡ್ಡದು. ಇದರಲ್ಲಿ ಇಪ್ಪತ್ತೊಂದಕ್ಕೂ ಮಿಕ್ಕು ಭಾಷೆಗಳಿವೆ. ಅವುಗಳಲ್ಲಿ ಪಂಚದ್ರಾವಿಡ ಭಾಷೆಗಳದು ಇನ್ನೊಂದು ವರ್ಗ. ತಮಿಳು, ಕನ್ನಡ, ಮಲಯಾಳ, ತೆಲುಗು ಮತ್ತು ತುಳು ಆ ಪಂಚದ್ರಾವಿಡ ಭಾಷೆಗಳೆಂದು ಪರಿಗಣಿತವಾಗಿವೆ. ಇವು ಮೂಲದ್ರಾವಿಡಕ್ಕೆ ಸಮೀಪವಾದವುಗಳೆಂದೂ ಅವುಗಳ ನಡುವೆ ಬಹಳಷ್ಟು ಹೋಲಿಕೆಗಳಿವೆಯೆಂದೂ ಅದಕ್ಕೆ ಅರ್ಥ. ತುಳು ಭಾಷೆಯೊಂದನ್ನು ಹೊರತು ಪಡಿಸಿದರೆ ಉಳಿದ ಭಾಷೆಗಳು ಸಾಹಿತ್ಯ ಹಿನ್ನಲೆಯನ್ನು ಹೊಂದಿರುವ ಲಿಪಿಯಿರುವ ಭಾಷೆಗಳಾಗಿವೆ. ತುಳುಭಾಷೆಗೆ ಅಂತಹ ಯಾವ ಹಿನ್ನಲೆಯಿರದಾಗಲೂ ಲಿಪಿಯೊಂದನ್ನು ಹೊರತುಪಡಿಸಿ ಆ ಸಾಲಿಗೆ ಈ ಭಾಷೆಯನ್ನು ಸೇರಿಸಿರುವುದು ಅದರ ಸಹಜ ಸಿರಿಸಂಪತ್ತಿನಿಂದಲೇ. ತುಳು ದಕ್ಷಿಣ ದ್ರಾವಿಡ ಭಾಷೆಗಳ ಪರಿವಾರಕ್ಕೆ ಸೇರಿದ ಭಾಷೆ ಎನ್ನುವಾಗ ಈ ಕೆಳಗಿನ ಲಕ್ಷಣಗಳು ಮುಖ್ಯವಾಗಿರುತ್ತವೆ:

೧. ಪದಾದಿಯ 'ಚ' ಕಾರದ ಲೋಪ.
೨. ಮೂಲ ದ್ರಾವಿಡ 'ಉ' ಕಾರವು ಉ ಮತ್ತು 'ಉ್' ಕಾರಗಳಾಗಿ ಒಡೆದಿರುವುದು.
೩. ಇ/ಎ ಮತ್ತು ಉ/ಒ ಸ್ವರಗಳ ಬದಲಾವಣೆ
೪. ಸ್ತ್ರೀಲಿಂಗದ ಸೃಷ್ಟಿ ಮತ್ತು ಬಳಕೆ
೫. ಮೂಲ ದ್ರಾವಿಡದ 'ಯ' ಕಾರ 'ವ' ಕಾರವಾಗುವುದು.
೬. ನಿಷೇಧ ಕೃದ್ವಾಚಕಗಳಿಗೆ ದಂತ್ಯ ವ್ಯಂಜನಗಳ ಸೇರ್ಪಡೆ
೭. ನಪುಂಸಕಲಿಂಗ ಬಹುವಚನದ ಐಚ್ಛಿಕ ಬಳಕೆ
೮. ಮೂಲ ದ್ರಾವಿಡದ ನಾಲ್ಕೂ ಭೂತಕಾಲ ಕ್ರಿಯಾ ಪ್ರಾತಿಪದಿಕದ ಬಳಕೆ
೯. ಅಭೂತಕಾಲದ ರೂಪದಲ್ಲಿ ಪ್ಪ ಪ್ರತ್ಯಯದ ಬಳಕೆ.
೧೦. ಇಚ್ಛಾರ್ಥಕ ಪ್ರತ್ಯಯದ ಬಳಕೆ
೧೧. ವೇಂಡ್ (ಬೇಕು/ಬೇಡ) ರೂಪಗಳ ಜತೆ ವಾಕ್ಯ ರಚನೆ
೧೨. 'ಣ' ಮತ್ತು 'ಳ' ಕಾರಗಳಿರುವುದು

ಆದರೆ ಈ ಲಕ್ಷಣಗಳ ಸಹಿತವಾಗಿ ಕೆಲವೊಮ್ಮೆ ತುಳುವಿನಲ್ಲಿ ಮಧ್ಯದ್ರಾವಿಡ ಭಾಷೆಯ ಗುಣಲಕ್ಷಣಗಳೂ ಕಂಡುಬರುವುದುಂಟು. ಉದಾಹರಣೆಗೆ 'ಇಲ್ಲ್' (ಮನೆ) ಇದಕ್ಕೆ ಸಂವಾದಿಯಾಗಿ ದಕ್ಷಿಣ ದ್ರಾವಿಡ ಭಾಷೆಗಳಲೆಲ್ಲ ಮನೈ, ವೀಡು ಎಂಬ ಪದಗಳಿವೆ. ತುಳುವಿನಲ್ಲಿರುವ 'ಇಲ್ಲ್' ಎನ್ನುವುದು ಮಧ್ಯದ್ರಾವಿಡ ಭಾಷೆಗಳ ಗುಣ. ಉದಾ: ಇಲ್ಲು, ಇಂಟಿ (ತೆಲುಗು) ಇತ್ಯಾದಿ. ಹಾಗೆಯೇ ತುಳುಭಾಷೆಯಲ್ಲಿ ಬಹುವಚನ ಪ್ರತ್ಯಯಗಳು (ಮಾನವ, ಮಾನವೇತರ ಎಂಬುದಾಗಿ) ಎರಡಿವೆ. ಲು ಮತ್ತು ಕುಲು (ಉದಾ: ಬೋರಿಲು, ಕೈಕುಲು ಇತ್ಯಾದಿ) ದಕ್ಷಿಣ ದ್ರಾವಿಡ ಭಾಷೆಗಳಲೆಲ್ಲ 'ಕಳ್' ಎಂಬುದೊಂದೇ ಪ್ರತ್ಯಯವಿದೆ. ಹೀಗೆ ಎರಡು ಪ್ರತ್ಯಯಗಳಿರುವುದು ಮಧ್ಯದ್ರಾವಿಡ ಭಾಷೆಯ ಲಕ್ಷಣಗಳಾಗಿವೆ. ಹೀಗೆ ಇನ್ನೂ ಕೆಲವು ಲಕ್ಷಣಗಳು ತುಳುಭಾಷೆಯು ಮಧ್ಯ ದ್ರಾವಿಡದ ಲಕ್ಷಣವನ್ನು ಮೈಗೂಡಿಸಿಕೊಂಡಿರುವ ಭಾಷೆ ಎಂಬುದನ್ನು ಸೂಚಿಸುತ್ತವೆ. ಅದೇನೇ ಇರಲಿ, ಇವೆಲ್ಲವನ್ನು ತುಳು ಭಾಷೆಯ ವಿಶಿಷ್ಟತೆಗಳೆಂದೇ ಗುರುತಿಸಲಾಗಿದೆ.

ತುಳುಲಿಪಿ: ಕೆಲವು ಸಲ ಜನಗಳ ವರ್ತನೆಗೆ ಏನು ಹೇಳಬೇಕೆಂದೇ ತಿಳಿಯುವುದಿಲ್ಲ. ಇಂಗ್ಲೀಷ್‌ಗೆ ಲಿಪಿಯಿಲ್ಲ. ಅದು ಕನ್ನಡ ಮೊದಲಾದ ಭಾಷೆಗಳಿಗೆ ಹೋಲಿಸಿದರೆ ತೀರ ಎಳಸು ಇತ್ಯಾದಿಗಳು ಬಹಳ ಜನಕ್ಕೆ ತಿಳಿದೇ ಇಲ್ಲ; ಹೋಗಲಿ, ಅದನ್ನು ಹೇಳಿದರೆ ಕೇಳುವ ಸ್ಥಿತಿಯಲ್ಲಿಯೂ ಇರುವುದಿಲ್ಲ. ಆದರೆ ದೇಶ ಭಾಷೆಗಳ ಬಗೆಗೆ ಅಂತಹ ಒಂದು ಸಣ್ಣ ವಿಷಯವೇ ದೊಡ್ಡ ಸಂಗತಿಯಾಗುತ್ತದೆ. ತುಳುವಿನ ವಿಷಯದಲ್ಲಿಯೂ ಇದೇ ಹಳೆಯ ರಾಗವನ್ನೇ ಜನ ಇಂದಿಗೂ ಹಾಡುತ್ತಾರೆ - ತುಳುವಿಗೆ ಲಿಪಿಯಿಲ್ಲ!

ಇಂತಹ ಮನಸ್ಥಿತಿಯು ಇತ್ತೀಚೆಗೆ ಸಂಪೂರ್ಣವಾಗಿ ಬದಲಾಗಿದೆ. 'ವಿಸ್ಮೃತಿ' (ಮಹಾಮರೆವು) ಎಂದು ನಿಜವಾಗಿಯೂ ನಾವು ಯಾವುದನ್ನಾದರೂ ಕರೆಯುವುದಾದರೆ ಇದನ್ನೇ. ಆದರೆ ಆ ವಿಸ್ಮೃತಿಯನ್ನು ಸಂಪೂರ್ಣವಾಗಿ ಹೋಗಲಾಡಿಸಿ ಮತ್ತೆ ತುಳುವರಿಗೆ, ಕನ್ನಡಿಗರಿಗೆ ಎಚ್ಚರಿಕೆಯನ್ನುಂಟು ಮಾಡಿದವರು ಮಹಾ ಸಂಶೋಧಕರಾದ ಡಾ. ವೆಂಕಟರಾಜ ತುಣಿಂಚತ್ತಾಯರು. ಅವರ ಸಂಶೋಧನೆಯಿಂದಾಗಿ ನಿಜವಾಗಿಯೂ ಲಿಪಿಯಿಲ್ಲದ ಭಾಷೆ ಮಲಯಾಳ, ತುಳುವಲ್ಲ ಎಂಬುದು ಸಾಬೀತಾಗಿದೆ. ಅದೊಂದು ದೊಡ್ಡ ಕಥೆ. ಸಣ್ಣದಾಗಿ ಅದನ್ನು ಹೀಗೆ ಹೇಳಬಹುದು:

ಕ್ರಿ.ಶ. ಸುಮಾರು 5ನೇ ಶತಮಾನದ ವೇಳೆಗೆ ಕೇರಳದ ತುಂಬ ಅನೇಕ ದೇವಾಲಯಗಳು ಕಟ್ಟಲ್ಪಟ್ಟವು. ಇವುಗಳಿಗೆ ಪೂಜೆಗಾಗಿ ತುಳುನಾಡಿನಿಂದ ಅನೇಕ ಬ್ರಾಹ್ಮಣ ಕುಟುಂಬಗಳು ಆಗ ವಲಸೆ ಹೋದವು. (ಇದಕ್ಕೆ ಪಾಡ್ದನದಂತಹ ಜಾನಪದ ಆಕರಗಳಿಂದಲೂ ಆಧಾರ ಸಿಗುತ್ತದೆ) ಅವರು ಆರಂಭದಲ್ಲಿ ವೈದಿಕ ಸಂಸ್ಕೃತ ಮತ್ತು ಲೌಕಿಕ ಸಂಸ್ಕೃತಗಳನ್ನು ಬರೆಯುವುದಕ್ಕೆ

ಲಿಪಿಯೊಂದನ್ನು ಕಂಡುಕೊಂಡರು. ಈಗ ಮಲಯಾಳಿ ಲಿಪಿಯನ್ನು ಹೋಲುವ ಆ ಲಿಪಿಯನ್ನು ಬರವಣಿಗೆಯಲ್ಲಿ ಬಳಸುವಾಗ ತಪ್ಪದೇ ಅವರು ಸಂಖ್ಯೆಗಳಿಗೆ ಬಂದಾಗ ಕನ್ನಡ ಸಂಖ್ಯೆಯನ್ನೇ ಬಳಸುತ್ತಿದ್ದರು. ಇದು ದಕ್ಷಿಣ ಕನ್ನಡದ ತುಳುವರೇ ಈ ಲಿಪಿಯನ್ನು ಹುಟ್ಟುಹಾಕಿದವರು ಎಂಬುದಕ್ಕೆ ಇರುವ ಬಲವಾದ ಪುರಾವೆಯಾಗಿದೆ. ಗ್ರಂಥಗಳನ್ನು ಬರೆಯಲು ಹಿಂದೆ ಈ ಲಿಪಿಯನ್ನು ಬಳಸುತ್ತಿದ್ದರಿಂದ ಅದಕ್ಕೆ ಗ್ರಂಥಲಿಪಿಯೆಂಬ ಹೆಸರೂ ಇದೆ. ಕೇರಳದಲ್ಲಿ ಆರ್ಯ ಭಾಷೆಯಾದ ಸಂಸ್ಕೃತವನ್ನು ಬಳಸಲು ಆರಂಭಿಸಿದಲ್ಲಿಂದ ಅಲ್ಲಿ ಅದು 'ಆರ್ಯ ಎಮಿತ್ತು' ಉಂಟಾಯಿತು. ಈ ಆರ್ಯ ಎಟುತ್ತಿನ ಮುಂದಣ ರೂಪಾಂತರವೇ ಈಗಿನ ಮಲಯಾಳ ಲಿಪಿ. (ಅದಕ್ಕಿಂತ ಹಿಂದೆ ಮಲಯಾಳಕ್ಕೆ ಲಿಪಿಯಿರಲಿಲ್ಲ. ತಮಿಳು ಲಿಪಿಯೇ ಮಲಯಾಳ ಲಿಪಿಯೂ ಆಗಿತ್ತು) ತುಳು ಲಿಪಿಗೂ ಈ ಆರ್ಯ ಎಟುತ್ತೇ ಮೂಲವಾಗಿದೆ. ಕೇರಳದಲ್ಲಿ ಇಂದಿಗೂ ತುಳುಲಿಪಿಯನ್ನು 'ತುಳು ಮಲಯಾಳ ಲಿಪಿ' ಎಂದೇ ಹೇಳುತ್ತಾರೆ.

ಕ್ರಿ.ಶ. 9ನೆಯ ಶತಮಾನದಲ್ಲಿ 'ಆರ್ಯಎಟುತ್ತು' ಲಿಪಿಯು ಪ್ರಚಾರಕ್ಕೆ ಬಂತು ಎನ್ನಲಾಗುತ್ತಿದೆ. ಕ್ರಿ.ಶ. 12ನೇ ಶತಮಾನದಲ್ಲಿ ಮಲಯಾಳ ಕಾವ್ಯದ ಮೇಲೆ ಸಂಸ್ಕೃತ ಭಾಷೆಯ ವಿಪರೀತ ಪರಿಣಾಮ ಉಂಟಾದುದರ ಕಾರಣವಾಗಿ 'ಮಣಿಪ್ರವಾಳ ಶೈಲಿ' ಎಂಬ ಹೊಸತೊಂದು ಶೈಲಿ ಆರಂಭವಾಯಿತು. ಆಗ ಸಂಸ್ಕೃತಮಯವಾದ ಮಲಯಾಳವನ್ನು ಬರೆಯುವುದಕ್ಕೆ 'ವಟ್ಟೆಳುತ್ತು' ಮೊದಲಾದ ಲಿಪಿಗಳು (ಅಕ್ಷರಗಳ ಸಂಖ್ಯೆ ಕಡಿಮೆ ಇದ್ದುದರಿಂದ) ಉಪಯೋಗಕ್ಕೆ ಬರಲಿಲ್ಲ. ಇದರಿಂದ ಆರ್ಯಎಟುತ್ತು ಲಿಪಿಗೆ ಅವಕಾಶವಾಯಿತು. ಕ್ರಿ.ಶ. 832ರ ವಾಳಪಳ್ಳಿ ಶಾಸನದಲ್ಲಿ ಆರ್ಯಎಟುತ್ತಿನ ಮೂಲರೂಪವೂ, ಕ್ರಿ.ಶ. 1236ರ ಮಣಲಿಕ್ಕರ ಶಾಸನದಲ್ಲಿ ಅದರ ಬೆಳವಣಿಗೆಯ ಹಂತವೂ ಕಂಡು ಬರುತ್ತದೆ. ತುಳು ಭಾಷೆಗೆ ಸಂಬಂಧಿಸಿದಂತೆ ಕ್ರಿ.ಶ. ಸು. 15ನೇ ಶತಮಾನಕ್ಕೆ ಸೇರಿದ ಅನಂತರಪುರದ ಶಾಸನವೇ ಮೊದಲ ತುಳುಲಿಪಿಯಲ್ಲಿರುವ ಶಾಸನವಾಗಿದೆ. ಇದೊಂದು ದಾನಶಾಸನವಾಗಿದ್ದು, ನಿರೂಪವು ತುಳುಭಾಷೆಯಲ್ಲಿ ಮತ್ತು ತುಳುಲಿಪಿಯಲ್ಲಿರುವುದೊಂದು ವಿಶೇಷವಾಗಿದೆ. ನಮಗೀಗ ತಿಳಿದಿರುವಂತೆ ಇದು ಮೊತ್ತಮೊದಲ ಬಾರಿಗೆ ಬಾಯಿಮಾತಿನ ಭಾಷೆಯೊಂದಕ್ಕೆ ತುಳುವಿಗೆ ಬರಹದ ರೂಪದೊರೆತಿರುವ ಮೊದಲ ದಾಖಲೆಯಾಗಿದೆ. ಹಾಗೆಯೇ ಈಗ ತಿಳಿದಿರುವಂತೆ ಮೊತ್ತಮೊದಲ ಬಾರಿಗೆ ಕ್ರಿ.ಶ. 1389 ಆರ್ಯ ಎಟುತ್ತಿನ ಲಿಪಿಯಲ್ಲಿ ಮುದ್ರಣಗೊಂಡ ಪುಸ್ತಕವೆಂದರೆ 'ದೂತವಾಕ್ಯ'ವೆಂಬುದಾಗಿದೆ. ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದಲ್ಲಿ ಇದೀಗ ಸುಮಾರು ೨೦೦೦ಕ್ಕೂ ಮಿಕ್ಕು ತುಳುಲಿಪಿಯಲ್ಲಿರುವ ತಾಡವಾಲೆಗಳಿವೆ. ಇವೆಲ್ಲವು ತುಳುಲಿಪಿಯು ತುಳುನಾಡಿನಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಲಿಪಿಯೆಂಬುದಕ್ಕೆ ಬಲವಾದ ಆಧಾರಗಳಾಗುತ್ತವೆ. ಈ ತುಳು ಮಲಯಾಳ ಲಿಪಿಯನ್ನೇ ಹೋಲುವ ಇನ್ನೊಂದು ಲಿಪಿಯು ತುಳುನಾಡಿನಿಂದಾಚೆಗೆ, ಶಿವಮೊಗ್ಗ - ಸಾಗರದ ಭಾಗದಲ್ಲಿ ಹಿಂದೆ ಪ್ರಚಾರದಲ್ಲಿತ್ತು. ಇದನ್ನು ತಿಗಳಾರ ಲಿಪಿಯೆಂದೂ

ಕರೆಯುತ್ತಾರೆ. ಮಲಯಾಳ ಭಾಷೆಯಲ್ಲಿ ಮೊತ್ತಮೊದಲ ಬಾರಿಗೆ ಆರ್ಯ ಎಟುತ್ತನ ಲಿಪಿಯ ಬಳಕೆಯಾಗುವುದು ತುಂಜತ್ ರಾಮಾನುಜನ್ ಎಳುತ್ತುಚನ್‌ನ ರಾಮಾಯಣ ಕಾವ್ಯದಲ್ಲಿಯೇ (ಕ್ರಿ.ಶ. 16ನೇ ಶ.ಮಾ.) ಈಗಾಗಲೇ ಹೇಳಿರುವಂತೆ ಕ್ರಿ.ಶ. 15ನೇ ಶತಮಾನದಲ್ಲಿಯೇ ತುಳುಭಾಷೆಯಲ್ಲಿ ತುಳುಲಿಪಿಯ ಶಾಸವಿದೆ.

19ನೇ ಶತಮಾನದಿಂದ ಮುಂದಕ್ಕೆ ಕೇರಳದಲ್ಲಿ ಪ್ರಚಾರದಲ್ಲಿದ್ದ ಎಲ್ಲ ಲಿಪಿಗಳೂ (ವಟ್ಟೆಮಿತ್ತು, ಕೋಲೆಟುತ್ತು, ಮಲಯಾಣ್ಮ) ಲಿಪಿಗಳೆಲ್ಲ ಉಪಯೋಗಕ್ಕೆ ಬಾರದೆ ಬರವಣಿಗೆ ಮತ್ತು ಮುದ್ರಣಗಳಲ್ಲಿ ಆರ್ಯಎಟುತ್ತೇ ಉಳಿದುಬಿಡುತ್ತದೆ. ಹೀಗೆ ತುಳುವರು ಬಳಸುತ್ತಿದ್ದ ತುಳುಲಿಪಿ, ಗ್ರಂಥಲಿಪಿಯಾಗಿ, ಆರ್ಯಭಾಷೆಯನ್ನು ಬರೆಯುತ್ತಿದ್ದ ಕಾರಣಕ್ಕೆ ಆರ್ಯ ಲಿಪಿಯಾಗಿ, ಸ್ವಲ್ಪ ಬದಲಾವಣೆಯೊಂದಿಗೆ ಮಲಯಾಳ ಲಿಪಿಯಾಗಿ, ತುಳು ಮಲಯಾಳ ಲಿಪಿಯಾಗಿ, ತಿಗಳಾರ ಲಿಪಿಯಾಯಿತು. ಆದರೆ ತುಳುಲಿಪಿಯಾಗಿ ಉಳಿಯಲೇ ಇಲ್ಲ! ತುಳು ಲಿಪಿಯೆಂಬುದೇ ಮಹಾಮರೆವಿಗೆ ಸಂದಿತು. ತುಳುಲಿಪಿಯ ಸಾಮಾನ್ಯ ರೂಪ ಹೀಗಿದೆ:



ಇಂತಹ ಸಂಗತಿಗಳನ್ನು ಮರಳಿ ನೆನಪಿಸಿಕೊಳ್ಳುವುದು ಅನೇಕ ದೃಷ್ಟಿಯಿಂದ ಮುಖ್ಯವಾಗುತ್ತದೆ. ವೆಂಕಟರಾಜ ಪುಣಿಂಚತ್ತಾಯರು ಈ ಮಹಾಮರೆವಿನಿಂದ ತುಳುವನ್ನು, ಒಂದು ಸಂಸ್ಕೃತಿಯ ಜನರನ್ನು ಮತ್ತೆ ಎಚ್ಚರಿಸಿದರು. ತುಳುವಿನಲ್ಲಿ ಇಂದಿಗೂ ಹಿಂದಿನಿಂದಲೂ

ಸಂಶೋಧಕರೆನಿಸಿಕೊಂಡವರು ಹೀಗೆ ಸಂಸ್ಕೃತಿಯೊಂದರ ಕಣ್ಣು ತೆರೆಸುವ ಕೆಲಸವನ್ನು ಮಾಡಿದ್ದರೆ ತುಳುನಾಡಿಗೆ ಎಂದೋ ಘನತೆ ಗೌರವಗಳು ಪ್ರಾಪ್ತಿಯಾಗುತ್ತಿದ್ದವು. ಆದರೆ ತಮ್ಮ ಬೇಳೆಯನ್ನು ಎಷ್ಟು ಚೆನ್ನಾಗಿ ಬೇಯಿಸಬಹುದು (ಬೇರೆಯವರ ಬೇಳೆಗಳೇ ಇಲ್ಲದಿದ್ದಾಗ!) ಎಂದು ಲೆಕ್ಕಾಚಾರದಲ್ಲಿ ತುಳುವಿನಲ್ಲಿ ಕೆಲಸ ಮಾಡಿದವರೇ ಹೆಚ್ಚು. ಈಗಲೂ ಇಂತಹವರ ಉಪಟಳವೇ ಅಲ್ಲಿ ಹೆಚ್ಚು, ಇರಲಿ. ಕನ್ನಡದಲ್ಲಿಯೂ ಡಿ.ಆರ್. ನಾಗರಾಜ್ 'ವಿಸ್ಮೃತಿ' ಎಂದು ಹೇಳಿಕೊಂಡು ಓಡಾಡುತ್ತಿದ್ದುದೇ ಹೆಚ್ಚು. ಅವರು ವಿಸ್ಮೃತಿಯ ಹೆಸರಿನಲ್ಲಿ ಹೇಳುತ್ತಿದ್ದ ವಿವರಗಳಿಗೂ, ಕನ್ನಡ ಸಂಸ್ಕೃತಿಗೂ ಎಂದೂ ಸಂಬಂಧ ಉಂಟಾಗುತ್ತಿರಲಿಲ್ಲ. ಕನ್ನಡದ ಜನ ಆದು 'ವಿಸ್ಮೃತಿ' ಎಂದು ಭಾವಿಸುತ್ತಿರಲಿಲ್ಲ. ಅದರಿಂದ ಎಚ್ಚರವೂ ಆಗಲಿಲ್ಲ. ಈ ಮಾತನ್ನು ಇಲ್ಲಿ ವಿಷಯಾಂತರವೆಂದೆನಿಸಿದಾಗಲೂ ಹೇಳಬೇಕಾದ ಅಗತ್ಯವಿದೆ ಏಕೆಂದರೆ 'ವಿಸ್ಮೃತಿ' ಎಂದರೆ ಯಾವುದು? ಯಾರೋ ಒಬ್ಬರು ಹೇಳುವುದೇ ಅಥವಾ ನಿಜವಾಗಲೂ ಇರುವ ವಿಸ್ಮೃತಿಯೇ. ವಿಸ್ಮೃತಿಗೆ (ಮಹಾಮರೆವು) ಸಂಬಂಧಿಸಿದಂತೆ ತುಳುವಿನ ಕಥೆಯೇ ಬೇರೆ. ವಿಸ್ಮೃತಿ ಇದೆ ಎಂದು ಯಾರಿಗೂ ಗೊತ್ತಿಲ್ಲ. ಯಾರು ಅದನ್ನು ಟಂಕಿಸಿ ಲಾಭ ಪಡೆಯಲಿಲ್ಲ. ಸಹಜವಾಗಿಯೇ ಒಂದು ದಿನ ಜನ ಆ ಮರೆವಿನಿಂದ ಹೊರಬಂದರು. ಪುಣಿಂಚತ್ತಾಯರ ಸಾಧನೆ ಎಷ್ಟು ದೊಡ್ಡದೆಂದರೆ, ಸ್ವತಃ ಮಲಯಾಳಿ ಸಾಹಿತ್ಯಕ್ಕೆ ಅಕಾಡೆಮಿಯನ್ನು ಮಾಡಿರದ ಕೇರಳಿಗರೂ, ಈ ಎಲ್ಲಾ ಸತ್ಯ ಹೊರಬೀಳುತ್ತಿದ್ದಂತೆ ತುಳುವಿಗೆಂದು ಅಕಾಡೆಮಿಯನ್ನೇ ಸ್ಥಾಪಿಸಿದರು! ಅದರಲ್ಲಿ ರಾಜಕೀಯ ಲೆಕ್ಕಾಚಾರ ಇತ್ಯಾದಿಗಳೇನೇ ಇರಲಿ, ಮಹಾಮರೆವು ಮತ್ತು ಆನಂತರದ ಎಚ್ಚರಕ್ಕೆ ಇದೊಂದು ಅತ್ಯುತ್ತಮ ನಿದರ್ಶನ. ಆದರೆ ಡಿ.ಆರ್. ನಾಗರಾಜ್ ಅವರ ಹಾಗೆ ಪುಣಿಂಚತ್ತಾಯರನ್ನು ಯಾರೂ ಗುರುತಿಸಲಿಲ್ಲ. ಏಕೆಂದರೆ ಅವರು ಬೆಂಗಳೂರಿನಲ್ಲಿ ಇರಲಿಲ್ಲ, ಅವರಿಗೆ ಲಂಕೇಶ್ ಅವರದಾಗಲೀ, ಲಂಕೇಶ್ ಪತ್ರಿಕೆಯ ಪುಗಸಟ್ಟೆ ಪ್ರಚಾರವಾಗಲೀ ಗೊತ್ತಿರಲಿಲ್ಲ!

ಆದರೆ ಮುಖ್ಯವಾದ ಪ್ರಶ್ನೆ - ತುಳುಲಿಪಿ ಅಷ್ಟೆಲ್ಲ ಸಂಖ್ಯೆಯಲ್ಲಿ ಬಳಕೆಯಲ್ಲಿದ್ದರೂ ಉಳಿಯಲಿಲ್ಲ, ಬೆಳೆಯಲಿಲ್ಲ ಏಕೆ? ಹಾಗೆಯೇ ಇಂದು ಅದು ಪ್ರಚಾರದಲ್ಲಿ ಇಲ್ಲ, ಇರುವ ಅಗತ್ಯವೂ ಕಂಡು ಬರುವುದಿಲ್ಲ, ಏಕೆ? ಇದಕ್ಕೆ ಕಾರಣ ತುಳುಲಿಪಿಯ ಮೂಲ ಮತ್ತು ವಿಕಾಸವನ್ನು ಗಮನಿಸಿದರೆ, ಕೆಲವೊಂದು ಸಾಂಸ್ಕೃತಿಕ ವಿವರಗಳೂ ದೊರೆಯುತ್ತವೆ. ತುಳುನಾಡಿನಿಂದ ಕೇರಳದ ಕಡೆಗೆ ವಲಸೆ ಹೋದ ಕೆಲಮಂದಿ ಈ ಲಿಪಿಯನ್ನು ಬಳಸುತ್ತಿದ್ದರು. ಅವರು ದೇವಾಲಯಗಳಲ್ಲಿ ಪೂಜೆಗೆ ಹೋದವರಾಗಿದ್ದರು. ಸಹಜವಾಗಿಯೇ ಅವರು ಬ್ರಾಹ್ಮಣರಾಗಿದ್ದರು. ಹಾಗೆಯೇ ಮೊದಲು ಸಂಸ್ಕೃತವನ್ನು ಬರೆಯುವುದಕ್ಕೆ ಈ ಲಿಪಿಯನ್ನು ಬಳಸುತ್ತಿದ್ದರು. ಅನಂತರ ಎಲ್ಲ ಬರವಣಿಗೆಗೂ ಅವರೇ ಇದನ್ನು ಬಳಕೆ ಮಾಡತೊಡಗಿದರು. ಕೊನೆಕೊನೆಗೆ ಕಡತ ಇತ್ಯಾದಿಗಳನ್ನೂ ಇದೇ ಲಿಪಿಯಲ್ಲಿ ಬರೆಯತೊಡಗಿದರು. (ಕೊಚ್ಚಿ ಮಹಾರಾಜರಲ್ಲಿ ಉಡುಪಿ ಮಠದಿಂದ ಬರೆದು ಕಳುಹಿಸಿದ ದಾಖಲೆ ಪತ್ರಗಳು ತುಳುಲಿಪಿಯಲ್ಲಿದ್ದವು. ಶ್ರೀ ಭಾಗವತೋ, ಪು. 14 ಅಡಿಟಿಪ್ಪಣಿ) ಸಂಸ್ಕೃತ, ಗ್ರಂಥ, ವೈದಿಕ, ದಾಖಲೆ ಇಲ್ಲೆಲ್ಲ ತುಳುಲಿಪಿಯನ್ನು ಬಳಸುತ್ತಿದ್ದ ಸಂಗತಿಗಳನ್ನು ಗಮನಿಸಿದರೆ ಒಂದು ವಿಷಯ ಸ್ಪಷ್ಟವಾಗುತ್ತಿದೆ. ಎಲ್ಲವನ್ನೂ ಗುಟ್ಟಾಗಿ ಬಚ್ಚಿಟ್ಟುಕೊಳ್ಳುವುದೇ

ಇದರ ಮೂಲ ಉದ್ದೇಶ. ಜ್ಞಾನದ ವಿಷಯದಲ್ಲಿ ಕೆಲವರು ನಮ್ಮಲ್ಲಿ ಮಾಡಿದ ಅನ್ಯಾಯಕ್ಕೆ 'ದೇಶದ್ರೋಹ' ಎನ್ನುವ ಪದವಾಗಲೀ, ಅದಕ್ಕೆ ಕೊಡಬಹುದಾದ ಶಿಕ್ಷೆಯಾಗಲೀ ಎಂದಿಗೂ ಸಾಲದು. ಅದು ಇತರರಿಗೆ ಮಾತ್ರವಲ್ಲ, ಅವರಿವರಿಗೇ ಮುಳುವಾಗಿದೆ. ಆದರೂ ಇಂದಿಗೂ ಇವರ ಸಂತತಿಯವರಿಗೆ ಬುದ್ಧಿ ಬಂದ ಹಾಗಿಲ್ಲ. ತುಳುಲಿಪಿಯ ಸುತ್ತ ಇರುವ ಸಾಂಸ್ಕೃತಿಕ ರಾಜಕಾರಣವೂ ಇದೆ. ಬೇರೆಯವರಿಗೆ ಸಿಗಲಾರದೆಂದು ಅಡಗಿಸಿಟ್ಟುಕೊಂಡ ಇದರ ಪರಿಣಾಮ ಇಂದು ಸ್ಪಷ್ಟವೇ ಇದೆ. ಬ್ರಾಹ್ಮಣರಲ್ಲಿಯೇ ಕೆಲವೇ ಕೆಲವು ಮಂದಿಗೆ ಅದನ್ನು ಓದಲು ಬರುತ್ತಿದೆ. ಉಳಿದವರು ಯಾರೂ ಕೂಡ ಸಾರ್ವಜನಿಕವಾಗಿ ಕಲಿಸುತ್ತೇವೆ ಎಂದರೂ ಆ ಕಡೆ ಸುಳಿಯುತ್ತಿಲ್ಲ! ಒಂದು ವೇಳೆ ಕಲಿತರೂ ಅದರಲ್ಲಿ ಬರೆದಿರುವುದು ಒಂದು ನಿರ್ದಿಷ್ಟ ಸಮುದಾಯದ ಆಚಾರ ವಿಚಾರಗಳಷ್ಟೇ ಇರುತ್ತವೆ. ವಿಶಾಲವಾದ ತುಳು ನಾಡಿಗೂ, ಸಂಸ್ಕೃತಿಗೂ ಅದರಿಂದ ಏನು ತಾನೇ ಪ್ರಯೋಜನ?

ತುಳು ಗ್ರಂಥ ಸಂಪಾದನೆ

ಲಿಖಿತ ಪರಂಪರೆಯಿಂದೊಡಗೂಡಿರುವ ಪಂಚ ದ್ರಾವಿಡ ಭಾಷೆಗಳ ನಡುವೆ ಯಾವಾಗಲೂ ಮುಜುಗರಪಡಬೇಕಾಗಿದ್ದ ಪರಿಸ್ಥಿತಿ ತುಳುಭಾಷೆಗಿತ್ತು. ಜನಾಂಗಗಳ ನಡುವೆ ವಿವಿಧ ಕಾರಣಗಳಿಗೆ ಅಸಮಾನತೆ ಕಂಡು ಬರುವ ಹಾಗೆ, ಭಾಷೆಗಳ ನಡುವೆಯೂ ಬೇರೆ ಬೇರೆ ಕಾರಣಗಳಿಗಾಗಿ ಅಸಮಾನತೆಗಳು ತಲೆದೋರುತ್ತವೆ. ಮುಖ್ಯವಾಗಿ ಲಿಪಿ, ಸಾಹಿತ್ಯ, ಸಂವಿಧಾನಿಕ ಮನ್ನಣೆ, ರಾಜ್ಯ ಮನ್ನಣೆ, ರಾಷ್ಟ್ರಮನ್ನಣೆ, ಅಂತಾರಾಷ್ಟ್ರೀಯ ಮನ್ನಣೆ ಇವುಗಳ ನೆಲೆಯಲ್ಲಿ ಭಾಷೆಗಳಿಗೆ ತಕ್ಕ ಮನ್ನಣೆ ನೀಡುವ ಪಾಠವಿದೆ. ಇವುಗಳಲ್ಲಿ ಲಿಪಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ನಡೆಯುವ ತರತಮ ಭಾವವು ಭಾಷೆಗಳನ್ನು ಬಾಲಗ್ರಹದಂತೆ ಕಾಡುವ ಪಿಡುಗುಗಳಾದರೆ, ಉಳಿದ ಭಾಷೆಗಳಿಗೆ ತಾರುಣ್ಯದಲ್ಲಿ ಕಾಡುವ ಸಮಸ್ಯೆಗಳಾಗಿವೆ. ಯಾವುದೇ ಭಾಷೆಗೆ ಪ್ರಾಥಮಿಕ ಮನ್ನಣೆ ಸಿಗಬೇಕಾದರೆ ಲಿಪಿ ಮತ್ತು ಸಾಹಿತ್ಯ ಲಕ್ಷಣಗಳು ಆ ಭಾಷೆಯಲ್ಲಿರಬೇಕಾಗುತ್ತವೆ. ಇಲ್ಲದಿದ್ದರೆ ಆ ಭಾಷೆಯನ್ನು ಅಂತಹ ಗುಣಗಳಿರುವ ಭಾಷೆಯ ಉಪಭಾಷೆಯೆಂದೇ ಪರಿಗಣಿಸಲಾಗುತ್ತದೆ. ಭಾಷಾ ಶಾಸ್ತ್ರದ ದೃಷ್ಟಿಯಿಂದ ಇದು ಹುರುಳಿಲ್ಲದ ವಾದವಾದರೂ ಭಾಷೆಯೊಂದಕ್ಕೆ ಅಂತಹ ಸ್ಥಿತಿ ಬರುವುದು ಸಾಮಾಜಿಕ ವಾಸ್ತವವೇ ಆಗಿದೆ.

ಈ ಪೀಠಿಕೆಯು ತುಳುಭಾಷೆಯ ಮುಜುಗರಗಳನ್ನು ಸಾಕಷ್ಟು ಸ್ಪಷ್ಟಪಡಿಸಲಬಲ್ಲುದೆನಿಸುತ್ತದೆ. ಮಿಕ್ಕೆಲ್ಲ ಗುಣಗಳಿದ್ದೂ, ಸಮೃದ್ಧಿಯಾದ ಮೌಖಿಕ ಪರಂಪರೆಯಿದ್ದೂ ತುಳುವಿಗೆ ಲಿಪಿ ಮತ್ತು ಸಾಹಿತ್ಯದ ದೃಷ್ಟಿಯಿಂದ ಎದ್ದು ಕಾಣುವ ಕೊರತೆಗಳಿವೆ ಎಂದು ವಿಶೇಷವಾಗಿ ಅದರ ಭಾಷಿಕರಿಗೆ ಅನಿಸುತ್ತಿತ್ತು. ಪಂಡಿತ ವೆಂಕಟರಾಜ ಪುಣಿಂಚತ್ತಾಯರಂತಹವರಿಗೆ ಅದು ಸಂಶೋಧಿಸಲೇಬೇಕೆಂಬಷ್ಟು ಅನುಮಾನಾಸ್ಪದ ವಿಷಯವಾಗಿಯೂ ಕಾಡಿತು. ಅದರ ಫಲವೆಂಬಂತೆ ಇದೀಗ ತುಳು ಭಾಷೆಯ ಲಿಪಿ ಮತ್ತು ಸಾಹಿತ್ಯ ಪರಂಪರೆಯ ಸ್ಪಷ್ಟ ಕುರುಹುಗಳು ಕಾಣತೊಡಗಿವೆ. ವೆಂಕಟರಾಜ ಪುಣಿಂಚತ್ತಾಯರು

ನಡೆದಾಡುವುದನ್ನು ನೋಡಿದಾಗ ತುಳು ಭಾಷೆಯೇ ನಡೆದುಬರುವಂತೆ ಕಾಣುವುದು ಈಗ ಅತಿಶಯೋಕ್ತಿಯ ಮಾತಲ್ಲ. ಏಕೆಂದರೆ ಲಿಪಿ ಮತ್ತು ಸಾಹಿತ್ಯ ಗುಣಗಳು ಭಾಷೆಗೆ ಚಾಕ್ಷುಷರೂಪವನ್ನು ನೀಡುವುದು ಸಹಜ ತಾನೆ? ಅಂಬರೀಷೋಪಾಖ್ಯಾನ, ಇವುಗಳಿಂದ ತುಳುವಿನ ಕಾವ್ಯ ಪರಂಪರೆ ಪ್ರಾಚೀನವಾದುದೆಂದು ತಿಳಿಯಲು ಈಗ ಯಾವ ಅನುಮಾನವೂ ಇಲ್ಲ.

ಗ್ರಂಥ ಸಂಪಾದನೆ ಎಂದರೆ ಮೂಲ ಗ್ರಂಥದ (ಕವಿಯೇ ಬರೆದಿರಬಹುದಾದ ಮೂಲಗ್ರಂಥ) ನಿಜರೂಪ ದರ್ಶನವೆಂಬುದು ಆ ಬಗೆಗಿನ ಅಧ್ಯಯನ ಕ್ರಮದ ಒಂದು ಸಾಧಾರಣ ನಿರೂಪವಾಗಿದೆ. ಇದರಲ್ಲಿ ಹಸ್ತಪ್ರತಿಶೋಧನೆ, ಪಾಠನಿರ್ಣಯ, ಅಕ್ಷರ ಸ್ಖಾಲಿತ್ಯ, ಶುದ್ಧ ಪ್ರತಿ ತಯಾರಿ ಇತ್ಯಾದಿ ವಿಷಯಗಳು ಒಳಗೊಳ್ಳುತ್ತವೆ. ಹಾಗೆ ನೋಡಿದರೆ, ಒಂದಕ್ಕಿಂತ ಹೆಚ್ಚು ಹಸ್ತಪ್ರತಿಗಳಿಗೆ ಸಂಬಂಧಿಸಿದ ಶಾಸ್ತ್ರವಿದು. ಆದರೆ ಒಂದೇ ಹಸ್ತಪ್ರತಿ ದೊರೆತಾಗಲೂ, ಅದರ ಪೂರ್ವಸೂರಿಗಳ ಮತ. ಅಂತೆಯೇ ಪುಣಿಂಚತ್ತಾಯರು ಈವರೆಗೆ ಶೋಧಿಸಿದ ಗ್ರಂಥಗಳೆಲ್ಲ ಏಕಹಸ್ತಪ್ರತಿಯಿಂದ ಸಂಪಾದಿಸಿದುವುಗಳೇ ಆಗಿವೆ. ಗ್ರಂಥ ಸಂಪಾದನೆಯ ಅಧ್ಯಯನದ ದೃಷ್ಟಿಯಿಂದ ಅದು ಅವರ ಸಾಧನೆಯೂ ಆಗಬಲ್ಲುದು. ಏಕೆಂದರೆ, ದೊರೆತ ಹಸ್ತಪ್ರತಿಗಳೇ ಅಪೂರ್ಣವಾಗಿರುವಾಗ ಇತರ ಹಸ್ತಪ್ರತಿಗಳು ದೊರೆಯುತ್ತವೆ ಎಂಬ ಆಶಾವಾದಕ್ಕೂ ಎಡೆಯಿಲ್ಲದಂತಾಗಿದೆ.

ಕನ್ನಡ ಸಾರಸ್ವತ ಲೋಕಕ್ಕೆ ವೆಂಕಟರಾಜ ಪುಣಿಂಚತ್ತಾಯರ ಪರಿಚಯ ಸ್ವಲ್ಪ ಅಪರೂಪವೆಂದೇ ಹೇಳಬೇಕು. ದಕ್ಷಿಣ ಕನ್ನಡದ ಕನ್ನಡಿಗರಿಗೆ ಪುಣಿಂಚತ್ತಾಯರ ಬಗೆಗೆ ಹೇಳಬೇಕಾದ ಅಗತ್ಯ ಅಲ್ಪವೇ. ಇಲ್ಲವಾದರೂ ಬಹುಸಂಖ್ಯಾತ ಕನ್ನಡಿಗರಿಗೆ ಅವರ ಬಗೆಗೆ ತಿಳಿದಿರುವುದು ಅಲ್ಪವೇ. ಹಾಗಾದುದರಿಂದ ವೆಂಕಟರಾಜ ಪುಣಿಂಚತ್ತಾಯರ ಕಿರು ಪರಿಚಯ ಇಲ್ಲಿ ಉಪಯುಕ್ತವಾಗಬಹುದೆನಿಸುತ್ತದೆ.

ಪುಂಡೂರು ವೆಂಕಟರಾಜ ಪುಣಿಂಚತ್ತಾಯರೆಂದು ಪೂರ್ಣ ನಾಮಧೇಯರಾಗಿರುವ ಇವರು ೧೦-೧೦-೧೯೩೬ರಲ್ಲಿ ಕಾಸರಗೋಡಿನ ಪುಂಡೂರು ಮನೆತನದಲ್ಲಿ ಜನಿಸಿದರು. ಕಾಸರಗೋಡಿನ ಎಡನೀರು ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ವೃತ್ತಿ ನಿರ್ವಹಿಸಿದ ಇವರಿಗೆ ಆ ವೃತ್ತಿಗಾಗಿಯೇ ಮೀಸಲಾಗಿರಿಸದ ರಾಷ್ಟ್ರಪ್ರಶಸ್ತಿ ಗೌರವವೂ ಲಭಿಸಿದೆ. ಸಂಸ್ಕೃತ, ಕನ್ನಡ, ತುಳು, ಮಲೆಯಾಳಂ, ಇಂಗ್ಲೀಷ್, ತಮಿಳು, ಹಿಂದಿ, ಕೊಡವ ಭಾಷೆಗಳಲ್ಲಿ ಇವರು ಪಂಡಿತರಾದವರು. 'ಶೈಲೂಷಿ', 'ಜೋಕಾಲಿ', 'ಆಲಡೆ', 'ಅಕ್ಷಕ ಯಾತ್ರೆ' ಮತ್ತು 'ಸುಭಾಷಿತ ಲಹರಿ' ಇವು ಇವರ ಕಾವ್ಯ ಸಂಕಲನಗಳು. 'ಮೊಗೇರ ಸಂಸ್ಕೃತಿ', 'ಕೇರಳದ ವರ್ಣಚಿತ್ರಲೋಕ', 'ತುಳು ನಡೆ -ನುಡಿ' ಇವು ಅವರ ಅಧ್ಯಯನ ಗ್ರಂಥಗಳು. 'ನಚಿಕೇತ', 'ಬೇಡನ ಮಗಳು' ಮೊದಲಾದ ನಾಟಕ ಕೃತಿಗಳಲ್ಲದೆ, ಮಲೆಯಾಳಂ ಭಾಷೆಯ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಯಕ್ಷಗಾನ, ಮಕ್ಕಳ ಸಾಹಿತ್ಯ ಇವು ಪುಣಿಂಚತ್ತಾಯರ ಆಸಕ್ತಿಯ ಕ್ಷೇತ್ರಗಳು.

ವಿಶೇಷವಾಗಿ ಈಗ ಸಂಶೋಧನೆ - ಅದರಲ್ಲಿಯೂ ಹಸ್ತಪ್ರತಿಯ ಶೋಧ - ಸಂಪಾದನೆ, ಅವರ ಪರಿಣಿತ ಕ್ಷೇತ್ರವಾಗಿದೆ. ಅವರ ಇತರ ಆಸಕ್ತಿಗಳೆಲ್ಲವೂ ಇದೀಗ ಈ ಕ್ಷೇತ್ರದಲ್ಲಿ ಅವರಿಗೆ ಬೇಕಾಗಿದ್ದ ಅಗತ್ಯ ಪರಿಶ್ರಮಗಳೆಂಬಂತೆ ಪೂರಕವಾಗಿರುತ್ತ, ಪುಣಿಂಚತ್ತಾಯರನ್ನು ಪಂಡಿತರನ್ನಾಗಿ ರೂಪಿಸಿವೆ.

ಇದು ಪುಣಿಂಚತ್ತಾಯರ ವ್ಯಕ್ತಿ ಪರಿಚಯ. ಆದರೆ ಅವರ ವಿದ್ವತ್ತಿನ ಪರಿಚಯ ಅದರಿಂದೇನೂ ಮಾಡಿದಂತಾಗಲಿಲ್ಲ. ಅದಕ್ಕಾಗಿ ಪುಣಿಂಚತ್ತಾಯರು ಬೆಳಕಿಗೆ ತಂದ ಗ್ರಂಥಗಳನ್ನು ಪರಿಚಯಿಸಬೇಕಾಗುತ್ತದೆ. ಇನ್ನು ಮುಂದಿನ ವಿವರಗಳು ಗ್ರಂಥ ಸಂಪಾದನೆಯ ಬಗೆಗೆ ಹೆಚ್ಚಿನ ಬೆಳಕು ಚೆಲ್ಲಬಲ್ಲುವು.

೧. ವಿಷ್ಣು ತುಂಗವಿರಚಿತ ಶ್ರೀ ಭಾಗವತೊ

ಪುಣಿಂಚತ್ತಾಯರು ಶೋಧಿಸಿ ಸಂಪಾದಿಸಿದ ಈ ಕಾವ್ಯವನ್ನು ೧೯೮೪ರಲ್ಲಿ ಮಂಗಳೂರು ವಿಶ್ವವಿದ್ಯಾಲಯವು ಪ್ರಕಟಿಸಿದೆ. ಆಗ ಮೊತ್ತ ಮೊದಲ ಬಾರಿಗೆ, ತುಳುವಿನಲ್ಲಿ ಲಿಖಿತ ಪರಂಪರೆ ಇದ್ದ ಬಗೆಗೆ ಅಧಿಕೃತ ದಾಖಲೆ ದೊರಕಿದಂತಾಯಿತು. ನಿತ್ಯಾತ್ಮ ಶುಕಯೋಗಿಯ 'ಕನ್ನಡ ಭಾಗವತದ' ಪ್ರೇರಣೆಯಿಂದ ಬರೆದ ಈ ಕಾವ್ಯವು ಅಪೂರ್ಣವಾದುದು. ಈಗಿರುವಂತೆ ಪ್ರಥಮ, ದ್ವಿತೀಯ ಮತ್ತು ತೃತೀಯ ಸಂಧಿಗಳಷ್ಟೇ ನಮಗೆ ದೊರೆತಿರುವುದು. ಈತನ ಕಾಲವು ಕ್ರಿ.ಶ. ೧೬೩೬ ಎಂಬ ಸಾಮಾನ್ಯ ನಿರ್ಣಯಕ್ಕೆ ಪುಣಿಂಚತ್ತಾಯರು ಬಂದಿದ್ದಾರೆ. ಈತನು ಕಾಸರಗೋಡು ಪ್ರದೇಶಕ್ಕೆ ಸೇರಿದವನು ಎಂಬ ಅಭಿಪ್ರಾಯವಿರುವುದಾದರೂ ಮುಂದೆ ಪುಣಿಂಚತ್ತಾಯರು ಅದನ್ನು ಪರಿಷ್ಕರಿಸುತ್ತ, ಆತನ ಹುಟ್ಟೂರಿನ ಬಗೆಗೆ ನಿರ್ದಿಷ್ಟ ಪುರಾವೆಗಳಿಲ್ಲವೆಂದೇ ಹೇಳುತ್ತಾರೆ.

೨. ಕಾವೇರಿ

ಇದು ಕೂಡ ಅಪೂರ್ಣವಾಗಿರುವ ಪ್ರಾಚೀನ ತುಳುಕಾವ್ಯ, ಕಾವ್ಯದ ಪ್ರಥಮ ಭಾಗವೇ ಅನುಪಲಬ್ಧವಾದುದರಿಂದ ಕವಿ, ಕಾಲ, ಸ್ಥಳದ ಬಗೆಗೆ ಯಾವ ಮಾಹಿತಿಯೂ ದೊರೆಯುವುದಿಲ್ಲ. ಅಧ್ಯಾಯ ೬ರಿಂದ ಅಧ್ಯಾಯ ೧೧ರವರೆಗಷ್ಟೇ ಲಭ್ಯವಾಗಿರುವುದು. ಈ ಪುಟ್ಟ ಕಾವ್ಯದಲ್ಲಿ ಕೊನೆಗೆ 'ಬ್ರಾಹ್ಮಣ ಕವಿಯೊಬ್ಬನು ಪ್ರಜೋತ್ಪತ್ತಿ ಸಂವತ್ಸರದಲ್ಲಿ ಬರೆದ ಕಾವ್ಯವಿದು' ಎಂದು ಹೇಳಲಾಗಿದೆ. ಪುಣಿಂಚತ್ತಾಯರು ಈತನನ್ನು ವಿಷ್ಣು ತುಂಗನ ಸಮಕಾಲೀನನೆಂದು ಸಾಧಾರ ಪರಿಗಣಿಸಿದ್ದಾರೆ. ಸ್ಕಾಂದಪುರಾಣಾಂತರ್ಗತವಾದ ಕಾವೇರಿ ಮಹಾತ್ಮೆಯೂ ಸಂಸ್ಕೃತದಲ್ಲಿ ೧೫ ಅಧ್ಯಾಯಗಳಷ್ಟು ವಿಸ್ತಾರವಾದುದು. ತುಳು ಕವಿಯು ಇದನ್ನು ತನಗೆ ಬೇಕಾದಂತೆ ಸಂಕ್ಷೇಪ ವಿಸ್ತಾರಗಳೊಂದಿಗೆ ವರ್ಣಿಸಿದ್ದಾನೆ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರವು ೧೯೮೭ರಲ್ಲಿ ಇದನ್ನು ಪ್ರಕಟಿಸಿದೆ.

೩. ತುಳು ದೇವೀ ಮಹಾತ್ಮೆ

ಇಲ್ಲಿಯವರೆಗೆ ತುಳುವಿನಲ್ಲಿ ದೊರೆತ ಪ್ರಥಮ ಗದ್ಯ ಕೃತಿಯಿದು. ಸಂಸ್ಕೃತದಲ್ಲಿರುವ ಮಾರ್ಕಂಡೇಯ ಪುರಾಣಾಂತರ್ಗತವಾದ ದೇವೀ ಮಹಾತ್ಮೆಯನ್ನು ಈ ಕಾವ್ಯದಲ್ಲಿ ತುಳುವಿನಲ್ಲಿ ನಿರೂಪಿಸಲಾಗಿದೆ. ಈ ಕಾವ್ಯದ ೯ನೇ ಅಧ್ಯಾಯವು ಪೂರ್ಣವಾಗಿಯೂ, ೧೦ನೇ ಅಧ್ಯಾಯದ ಆರಂಭದ ಭಾಗವು ನಷ್ಟವಾಗಿರುವುದನ್ನೂ ಬಿಟ್ಟರೆ, ಬಹುಮಟ್ಟಿಗೆ ಕಾವ್ಯವು ಪೂರ್ಣವಾಗಿಯೇ ಇದೆ. ಒಟ್ಟು ೧೩ ಅಧ್ಯಾಯಗಳಲ್ಲಿರುವ ಈ ಕಾವ್ಯವು ಮೂಲ ದೇವೀ ಮಹಾತ್ಮೆಯಷ್ಟು ದೀರ್ಘವಲ್ಲದ ಪುಟ್ಟ ಕಾವ್ಯವಾಗಿದೆ. ತೆಂಕಿಲ್ಲಾಯ ಕುಲದ ಬ್ರಾಹ್ಮಣ ಕವಿಯಿವನೆಂದು ತಿಳಿದು ಬರುತ್ತದೆ. ಕವಿಯ ಕಾಲದ ಬಗೆಗೆ ಖಚಿತವಾಗಿ ತಿಳಿದು ಬರುವುದಿಲ್ಲ. ವಿಷ್ಣು ತುಂಗ ಕವಿಯ ಸಮಕಾಲೀನನಾಗಿರಬಹುದೆಂದು ಸದ್ಯಕ್ಕೆ ನಿರೂಪಿಸಬಹುದು.

೪. ಅರುಣಾಬ್ಜ ಕವಿಯ ಮಹಾಭಾರತೊ

ಹೆಸರೇ ಸೂಚಿಸುವಂತೆ ಇದು ತುಳುವಿನಲ್ಲಿ ರಚನೆಯಾದ ಪ್ರಾಚೀನ ಮಹಾಕಾವ್ಯ. ಈ ಕಾವ್ಯದ ಪ್ರಕಟಣೆಯೊಂದಿಗೆ ಮೊದಲು ದೊರಕಿದ 'ಶ್ರೀ ಭಾಗವತೊ' ತುಳುವಿನ ಆದಿಕಾವ್ಯವೆಂಬ ನಿಲುವು ಬದಲಾಯಿತು. ಹಾಗೆಯೇ ವಿಷ್ಣು ತುಂಗನು ಕಾಸರಗೋಡು ಪ್ರಾಂತದವನು ಎಂಬ ಅಭಿಪ್ರಾಯ ಸಹ ಬದಲಾಯಿತು. (ನೋಡಿ: ಅರುಣಾಬ್ಜನಿಗೆ ಮಹಾಭಾರತ, ಪ್ರಸ್ತಾವ ಪು. ೨೦) ಈ ಕಾವ್ಯದ ಕಾಲವು ಅದಕ್ಕಿಂತ ಪ್ರಾಚೀನವಾದುದಾಗಿದ್ದು ಈಗೀಗ ಆತನ ಕಾಲವನ್ನು ಕ್ರಿ.ಶ. ೧೩೮೫ ಅಥವಾ ಕ್ರಿ.ಶ. ಹದಿನಾಲ್ಕನೆಯ ಶತಮಾನದ ಕೊನೆ, ಇಲ್ಲವೇ ಹದಿನೈದನೆಯ ಶತಮಾನದ ಆರಂಭವೆಂದು ತಿಳಿಯಲಾಗಿದೆ. ಹಾಗಾದಾಗ 'ಮಹಾಭಾರತೊ' ಕಾವ್ಯವೂ 'ಶ್ರೀ ಭಾಗವತೊ' ಕಾವ್ಯಕ್ಕಿಂತ ಪ್ರಾಚೀನವಾದುದಷ್ಟೇ ಅಲ್ಲದೆ, ಆ ಕಾವ್ಯದಲ್ಲಿಯೆ ಅದಕ್ಕಿಂತ ಪ್ರಾಚೀನವಾದ ನಾಲ್ಕು ಕಾವ್ಯಗಳ ಉಲ್ಲೇಖವೂ ಸಿಗುತ್ತದೆ. ಅವುಗಳೆಂದರೆ ೧. ರಾಮಾಯಣ, ೨. ರುಕ್ಮಿಣಿ ಸ್ವಯಂವರ ೩. ಬಾಣಾಸುರವಧೆ ೪. ಕೀಚಕವಧೆ.

ಅರುಣಾಬ್ಜ ಕವಿಯ ಈ ಮಹಾಭಾರತದಲ್ಲಿ ಮಹಾಭಾರತದ ಆರಂಭದ ಪರ್ವಗಳ ಕಥೆಯಿದೆ. ೧. ಸಂಭವ ಪರ್ವ ೨. ಗೃಹ ಪರ್ವ ೩. ವೈವಾಹಿಕ ಪರ್ವ ೪. ಹಿಡಿಂಬವಧೆ ಪರ್ವ ೫. ಬಕವಧೆ ಪರ್ವ. ೬. ಚೈತ್ರರಥಪರ್ವ, ೭. ಸ್ವಯಂವರ ಪರ್ವ, ೮. ವಿದುರಾಗಮನ ಪರ್ವ, ೯. ಅರ್ಜುನವನವಾಸ ಪರ್ವ, ೧೦. ಸುಭದ್ರಾಪಹರಣ ಪರ್ವ, ೧೧. ಹರಿಣಾಹರಣ ಪರ್ವ, ೧೨. ಖಾಂಡವದಹನ ಪರ್ವ - ಹೀಗೆ ಕಾವ್ಯದ ಕುರುಹುಗಳು ಇವೆ. ತುಳುಭಾಷೆಯಲ್ಲಿ ರಚಿತವಾಗಿರುವ ನಾಲ್ಕು ಅಪೂರ್ವ ಕಾವ್ಯಗಳನ್ನು ಪುಣಿಂಚತ್ತಾಯರು ಈವರೆಗೆ ಸಾರಸ್ವತಲೋಕದ ಮುಂದಿರಿಸಿದ್ದಾರೆ. ಈ ಎಲ್ಲ ಗ್ರಂಥಗಳೂ ತುಳುಲಿಪಿಯಲ್ಲೇ ಇವೆಯಾದರೂ ಸಂಪಾದನೆಯಾದಾಗ ಕನ್ನಡ ಲಿಪಿಯಲ್ಲೇ ಲಿಪೀಕರಣಗೊಂಡು ಪ್ರಕಟವಾಗಿರುವುದು ವಿಶೇಷವಾಗಿದೆ. ಇದಕ್ಕೆ ಕಾರಣ ಪ್ರಾಚೀನ ತುಳು ಲಿಪಿಯು ಈಗ ಬಳಕೆ ತಪ್ಪಿರುವುದೇ ಆಗಿದೆ. ಕಾವ್ಯಗಳ ಆರಂಭದಲ್ಲಿ ಪುಣಿಂಚತ್ತಾಯರು ಕನ್ನಡದಲ್ಲಿ ಬರೆದ, ಅಭ್ಯಾಸಪೂರ್ಣವಾದ ಸುದೀರ್ಘ ಪ್ರಸ್ತಾವನೆಗಳು ಆ

ಕಾವ್ಯಗಳಷ್ಟೇ ಮುಖ್ಯವಾಗಿವೆ. ಅಲ್ಲದೆ ಗ್ರಂಥದ ಪ್ರತಿ ಪುಟದಲ್ಲಿಯೂ ಇರುವ ಕನ್ನಡದಲ್ಲಿ ಬರೆದಿರುವ ಟಿಪ್ಪಣಿಗಳಿಂದ ಕನ್ನಡಿಗರಿಗೂ ಇದರ ಓದು ಕ್ಲಿಷ್ಟವೆನಿಸಲಾರದು.

ತುಳುವಿನಲ್ಲಿ ಈಗ ಬೆಳಕಿಗೆ ಬಂದ ಎರಡು ಕಾವ್ಯಗಳಿಗೆ ನೇರವಾಗಿ ಕನ್ನಡ ಕವಿಗಳ ದಟ್ಟ ಪ್ರಭಾವವಿದೆ. ಕಾವ್ಯವನ್ನು ಹೇಳುವ ಶೈಲಿಗೆ ಸಂಬಂಧಿಸಿದಂತೆ 'ಶ್ರೀ ಭಾಗವತೊ' ಕಾವ್ಯದ ಕರ್ತೃವಿಗೆ ನಿತ್ಯಾತ್ಮಶುಕಯೋಗಿ ಮಾದರಿಯಾಗಿದ್ದಾನೆ. ಅಂತೆಯೇ 'ಮಹಾಭಾರತೊ' ಕಾವ್ಯದ ಕರ್ತೃವಾದ ಅರುಣಾಬ್ಜನಿಗೆ ಕುಮಾರವ್ಯಾಸ ಮಾದರಿಯಾಗಿದ್ದಾನೆ. ಛಂದಸ್ಸಿಗೆ ಸಂಬಂಧಿಸಿದಂತೆ, ಇವರಿಗೆ ಸಂಸ್ಕೃತದ ವೃತ್ತಗಳೇ ಮಾದರಿಯಾಗಿವೆ. ಅಂತೆಯೇ ಈ ಮಹಾಕಾವ್ಯಗಳಲ್ಲಿ ವಿವಿಧ ಜಾತಿಯ ವೃತ್ತಗಳು ಬಳಕೆಯಾಗಿವೆ. ಈ ಮಾದರಿಯನ್ನು ತುಳುಕವಿಗಳು ಸಂಸ್ಕೃತದಿಂದಲೇ ತೆಗೆದುಕೊಂಡಿರಬಹುದು. ಕನ್ನಡ ಮತ್ತು ಸಂಸ್ಕೃತ ಮಾದರಿಗಳನ್ನು ತಮ್ಮದಾಗಿರಿಸಿಕೊಂಡಿದ್ದ ತುಳು ಕವಿಗಳು ವಿಪುಲವಾಗಿ ಅಂಶ ಷಟ್ಪದಿಗಳನ್ನು ತಮ್ಮ ಕಾವ್ಯಗಳಲ್ಲಿ ಪ್ರಯೋಗಿಸುತ್ತಾರೆ. ಹಾಗಾದರೆ ಅಂಶ ಷಟ್ಪದಿಗಳಿಗೆ ಅವರಿಗೆ ಪ್ರೇರಣೆ ಎಲ್ಲಿಂದ ಬಂತು ಎಂಬ ಪ್ರಶ್ನೆಗಳಿಗೆ ಸಹಜವಾಗಿಯೇ ಕನ್ನಡವೆಂದೇ ಅನುಮಾನಿಸಬೇಕಾಗುತ್ತದೆ. ಹೀಗಿರುತ್ತ ಹದಿನಾಲ್ಕು - ಹದಿನೈದನೆಯ ಶತಮಾನದಲ್ಲಿ ಅಥವಾ ಅದಕ್ಕಿಂತ ಪೂರ್ವದಲ್ಲಿ ಕನ್ನಡದಲ್ಲಿ ಅಂಶ ಷಟ್ಪದಿ ಕಾವ್ಯಗಳಿದ್ದುವೇ ಎಂಬುದೇ ಈಗ ಅನುಮಾನ. ಪುಣಿಂಚತ್ತಾಯರ ಸಂಶೋಧನೆಯಿಂದ ಇದ್ದುವೆಂಬುದಾಗಿ ಪ್ರಬಲವಾದ ಊಹೆ ಮಾಡಲು ಸಾಧ್ಯವಿದೆ. ಈ ಬಗೆಗೆ ಹೆಚ್ಚಿನ ಶೋಧನೆಗೆ ಎಂದೂ ಅವಕಾಶವಿದೆ.

ಲಿಪಿ ಶೋಧ

ತುಳು ಭಾಷೆಗೆ ಲಿಪಿಯಿಲ್ಲವೆಂಬ ಕೊರತೆ ತುಂಬ ಹಿಂದಿನಿಂದಲೇ ಇತ್ತು. ನಾಡಿಗೆ ಬಂದ ಮಿಶನರಿಗಳ ಕನ್ನಡದ ಲಿಪಿಯನ್ನೇ ಹೆಚ್ಚಾಗಿ ಬಳಕೆಗೆ ತಂದುದರಿಂದ ವ್ಯಾವಹಾರಿಕವಾಗಿ ಲಿಪಿಯ ಸಮಸ್ಯೆ ಪರಿಹಾರವಾಗಿತ್ತು. ಆದರೆ ಸಂಶೋಧನೆಯ ದೃಷ್ಟಿಯಿಂದ ಸಮಸ್ಯೆ ಇತ್ಯರ್ಥವಾಗದೇ ಹಾಗೆಯೇ ಉಳಿದಿತ್ತು. ಅದು ಪರಿಹಾರ ಕಂಡುಕೊಂಡಿದ್ದು ಮೊದಲು ಹೇಳಿದ 'ಶ್ರೀ ಭಾಗವತೊ' ಕಾವ್ಯದ ಸಂಪಾದನೆಯಿಂದಲೇ. ಮಲೆಯಾಳಂ ಭಾಷೆಗೆ ಲಿಪಿ ಇರಲಿಲ್ಲವೆಂಬುದು ಮಾತ್ರವಷ್ಟೇ ಅಲ್ಲದೆ, ಸಾಹಿತ್ಯ ಪರಂಪರೆಯಿಂದಲೂ ಮಲೆಯಾಳಂ ಭಾಷೆಯ ಇತಿಹಾಸ ಈಚಿನದು ಎಂಬುದು ಈಗ ಹೊರಬಿದ್ದ ಸತ್ಯವಾಗಿದೆ. ಪುಣಿಂಚತ್ತಾಯರು ಈಗ ಅದನ್ನು 'ತುಳುಲಿಪಿ' ಎಂದೇ ಪ್ರಸಿದ್ಧಿಗೊಳಿಸಿದ್ದಾರೆ. ಅದರ ಕಥೆ ಹೀಗೆ:

ಬಹುಹಿಂದಿನಿಂದಲೂ ಕೇರಳಕ್ಕೆ ದಕ್ಷಿಣ ಕನ್ನಡದ ತುಳು ಬ್ರಾಹ್ಮಣರು ಪೂಜೆ ನಿಮಿತ್ತ ಹೋಗುತ್ತಿದ್ದ ಪರಿಪಾಠವಿತ್ತು. ಈ ಬ್ರಾಹ್ಮಣರು ಸಂಸ್ಕೃತ ಬರವಣಿಗೆಗಾಗಿ 'ಗ್ರಂಥಲಿಪಿ' ಎಂಬ ಲಿಪಿಯನ್ನು ಬಳಕೆಗೆ ತಂದರು. ಅನಂತರ ಅದಕ್ಕೆ ಆರ್ಯಎಟುತ್ತು ಎಂಬ ಹೆಸರಾಯಿತು. ಮಂತ್ರ ಸಂಖ್ಯೆ, ಪುಟಸಂಖ್ಯೆ ಇತ್ಯಾದಿಗಳನ್ನು ಬರೆಯಲು ಕನ್ನಡ ಸಂಖ್ಯೆಯನ್ನೇ ಬಳಸುತ್ತಿದ್ದರು. ಅದೂ ಕಾರಣವಾಗಿ ಈ ಲಿಪಿಯೂ ದಕ್ಷಿಣಕನ್ನಡದ ತುಳು ಬ್ರಾಹ್ಮಣರ ಕೊಡುಗೆ ಎನ್ನುವುದಕ್ಕೆ

ಆಧಾರವಾಯಿತು. ಕೇರಳದಲ್ಲಿ ಮಂತ್ರಗಳನ್ನು ಬರೆಯಲು ಈ ಲಿಪಿಯನ್ನು ಬಳಸಿದಾಗಲೇ ಅದಕ್ಕೆ ಆರ್ಯಎಜುತ್ತು (ಆರ್ಯರ ಬರೆಹ) ಎಂಬ ಹೆಸರು ಪ್ರಾಪ್ತವಾದುದು. ಹಿಂದೆ ತುಳುನಾಡಲ್ಲಿ ವ್ಯಾವಹಾರಿಕವೇ ಮೊದಲಾಗಿ ತುಳು ಬರವಣಿಗೆಯಲ್ಲಿ ಉಪಯೋಗಿಸುತ್ತಿದ್ದ ಈ ಲಿಪಿಯನ್ನು ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ 'ಮಲಯಾಳಂ ಲಿಪಿ'ಯಾಗಿ ಪರಿಗಣಿಸಲಾಗಿತ್ತು. (ಇದು ಕ್ರಿ.ಶ. ೯ನೆಯ ಶತಮಾನದ ಕಥೆ) ತುಳುಭಾಷೆಗೆ ರಾಜ್ಯ ಮತ್ತು ರಾಷ್ಟ್ರ ಭಾಷೆಯ ಮನ್ನಣೆಯಿಲ್ಲದಾಗ, ಮಲೆಯಾಳಂ ಭಾಷೆಯಲ್ಲಿ ತುಳುಲಿಪಿ ಅಧಿಕೃತವಾಗುತ್ತ, ತುಳುಭಾಷೆಯಲ್ಲಿ ಆ ಲಿಪಿಯೇ ಕೈ ತಪ್ಪಿ ಹೋಯಿತು. ಹೀಗೆ ಕೈ ತಪ್ಪಿ ಹೋದ ಲಿಪಿ ಪುಣಿಂಚತ್ತಾಯರು ಅರಸಿಕೊಂಡು ಹೋದಾಗಲೇ ಕಣ್ಣಿಗೆ ಬಿದ್ದದ್ದು.

ಅಂಶಗಣ ಷಟ್ಪದಿ

ಮೊತ್ತ ಮೊದಲಾಗಿ ನಾಗವರ್ಮನಿಂದ ಪ್ರಸ್ತಾಪಿಸಲ್ಪಟ್ಟ ಅಂಶಗಣ ಷಟ್ಪದಿಯು ಕನ್ನಡದಲ್ಲಿ ಬಳಕೆಯಾಗಿರುವುದು ವಿರಳವೇ ಆಗಿದೆ. ಕನ್ನಡದ ಹೆಚ್ಚಿನ ಕವಿಗಳೆಲ್ಲ ಷಟ್ಪದಿಗೆ ಮಾತ್ರ ಮಾರುಹೋದವರು. ಕನ್ನಡದಲ್ಲಿ ಸು. ೧೧೪೦-೫೦ ರಿಂದೀಚೆಗೆ ಅಂಶಗಣ ಘಟಿತ ಷಟ್ಪದಿಯು ಮಾತ್ರ ಗಣಘಟಿತ ಷಟ್ಪದಿಯಾಗತೊಡಗಿರುವುದಕ್ಕೆ ಆಧಾರಗಳಿವೆ (ನೋಡಿ: ಚಿದಾನಂದ ಮೂರ್ತಿ, 'ಇನ್ನೊಂದು ಷಟ್ಪದ ಸಂಶೋಧನ ತರಂಗ', ಪುಟ ೧೩೫-೧೩೬). ಇದು ಸಹಿತವಾಗಿಯೇ ಎಂಬಂತೆ ಕನ್ನಡ ಕವಿಗಳು ಅಂಶಗಣ ಷಟ್ಪದಿಯತ್ತ ಒಲವು ತೋರಿರುವಂತೆ ಕಂಡುಬರುವುದಿಲ್ಲ. ಆದರೆ ಪುಣಿಂಚತ್ತಾಯರ ಈ ಶೋಧನೆಯಿಂದ ಆ ಬಗೆಗೆ ಕೆಲವು ಸಂದೇಹಗಳು ನನಗಂತೂ ಮೂಡತೊಡಗಿವೆ.

ಕವಿಕಾಲ ನಿರ್ಣಯ

ಗ್ರಂಥ ಸಂಪಾದನೆಯಲ್ಲಿ ಕವಿಯ ಕಾಲದ ಬಗೆಗಿನ ಚರ್ಚೆ ಬರಲೇ ಬೇಕು. ಗ್ರಂಥ ಸಂಪಾದನೆಯ ಶಿಸ್ತಿಗೆ ಸಂಬಂಧಿಸಿದ ವಿಷಯ ಇದು ಎಂಬುದಕ್ಕಿಂತಲೂ ಇತಿಹಾಸದ ಬಗೆಗೆ ನಮಗಿರುವ ಕುತೂಹಲವು ಸಹಜವಾಗಿಯೇ ಆ ಪ್ರಶ್ನೆಯನ್ನು ಕೇಳದಿರುವುದಿಲ್ಲ. ಸಂಪಾದಿತವಾಗಿರುವ ಗ್ರಂಥಗಳ ಕಾಲದ ಬಗೆಗಿರುವ ಗೊಂದಲಗಳನ್ನು ಅಲ್ಲಲ್ಲಿಯೇ ಈಗಾಗಲೇ ಹೇಳಲಾಗಿದೆ. ಅರುಣಾಬ್ಜಕವಿಯ ಕಾಲ ಮತ್ತು ಕುಮಾರವ್ಯಾಸನ ಕಾಲದ ಕುರಿತು ಇಲ್ಲಿ ವಿಶೇಷವಾಗಿ ಉಲ್ಲೇಖಿಸಲಾಬೇಕಾಗಿದೆ. ಅರುಣಾಬ್ಜ ಕವಿಯ 'ಮಹಾಭಾರತೊ' ಕಾವ್ಯದಲ್ಲಿ ಆತನ ಕಾಲಕ್ಕೆ ಸಂಬಂಧಿಸಿದಂತೆ 'ಶಿವಾ ನಿಡೂಂಬೂರ'ನೆಂಬ ಅರಸನ ಬಗೆಗಿನ ಉಲ್ಲೇಖವು ಗಮನಾರ್ಹವಾದುದು. ಉಲ್ಲೇಖಿತ ಶಿವನಿಡೂಂಬೂರನು ಕ್ರಿ.ಶ. ೧೩೮೩ರ ಕಾಲದವನೆಂಬುದಾಗಿ ಶಾಸನಾಧಾರದಿಂದ ತಿಳಿದುಬರುತ್ತದೆ. ಇದರ ಪ್ರಕಾರವಾಗಿ ಕವಿಯು ಸುಮಾರು ೧೪ನೇ ಶತಮಾನದ ಆದಿಯಲ್ಲಿ ಅಥವಾ ೧೫ನೇ ಶತಮಾನದ ಅಂತ್ಯದಲ್ಲಿ ಜೀವಿಸಿರಬೇಕೆಂದು ಪುಣಿಂಚತ್ತಾಯರು ತರ್ಕಿಸುತ್ತಾರೆ. ಅರುಣಾಬ್ಜನು ಕುಮಾರವ್ಯಾಸ ಕಾವ್ಯವನ್ನು 'ಕಾವ್ಯಕೆ ಗುರು'ವೆಂದೇ ಪರಿಗಣಿಸಿ ಅನುಸರಿಸಿದ್ದಾನೆ. ಹೀಗಿರುವಾಗ ಕುಮಾರವ್ಯಾಸನು ಅರುಣಾಬ್ಜನಿಗಿಂತ ಹಿಂದಿನವನು

ಎಂಬುದರಲ್ಲಿ ಅನುಮಾನವೇ ಇಲ್ಲ. ಇದರಿಂದ ಗೋವಿಂದ ಪೈಯವರು ಹೇಳಿರುವ ಕ್ರಿ.ಶ. ೧೨೩೦-೩೫ರ ಕುಮಾರವ್ಯಾಸನ ಕಾಲನಿರ್ಣಯವೇ ಅಧಿಕೃತವೆಂದಾಯಿತು. ಇದು ಕಾರಣವಾಗಿ ಪುಣಿಂಚತ್ತಾಯರ ಹೊಸ ಕೃತಿಗಳ ಶೋಧನೆ ಕನ್ನಡ ಕಾವ್ಯಗಳ ಚರ್ಚೆಯ ದೃಷ್ಟಿಯಿಂದ ಮುಖ್ಯವಾಗುತ್ತದೆ.

ಇಲ್ಲಿ ಕನ್ನಡ ಕಾವ್ಯಗಳ ಚರ್ಚೆಯಲ್ಲಿ ತುಳು ಗ್ರಂಥ ಸಂಪಾದನೆಯ ಮಹತ್ತ್ವವನ್ನು ವಿವರಿಸುವ ಉದ್ದೇಶವಿರಿಸಿಕೊಳ್ಳಲಾಗಿತ್ತು. ಮುಖ್ಯವಾಗಿ ತುಳು ಕಾವ್ಯಗಳಿಗೆ ಸಂಬಂಧಿಸಿದ ಅಂಶಗಳನ್ನು ವಿಶೇಷವಾಗಿ ಇಲ್ಲಿ ಪ್ರಸ್ತಾಪಿಸಲಾಗಿದೆ. ಆ ಕಾರಣವಾಗಿ ಈಗ ಈ ಲೇಖನವು 'ತುಳು ಗ್ರಂಥ ಸಂಪಾದನೆ' ಎಂಬ ಹೊಸ ವಿಷಯವೊಂದಕ್ಕೆ ಮೊದಲಾಗಿ ಪೀಠಿಕೆಯೂ ಆಯಿತು. ಏಕೆಂದರೆ ಇಷ್ಟು ಮಹತ್ತಾದ ಗ್ರಂಥ ಸಂಪಾದನೆಯಾದಾಗಲೂ ತುಳುನಾಡಿನಲ್ಲಿಯೇ ಆ ಕುರಿತು ವಿಶೇಷ ಚರ್ಚೆಯೇನೂ ನಡೆಯುತ್ತಿಲ್ಲ. ಅದರಲ್ಲಿಯೂ ಗ್ರಂಥ ಸಂಪಾದನೆಯ ದೃಷ್ಟಿಯಿಂದ ಈವರೆಗೆ ಯಾರೂ ಈ ಕಾವ್ಯಗಳನ್ನು ಚರ್ಚಿಸಿಲ್ಲ. ದೊರಕಿದ ನಾಲ್ಕು ಗ್ರಂಥಗಳೂ ಏಕಹಸ್ತ ಪ್ರತಿಯಿಂದಲೇ ಸಂಪಾದಿತವಾದವು. ಈಗ ಈ ಕಾವ್ಯಗಳ ಹಿನ್ನೆಲೆಯಲ್ಲಿಯೇ ಪಾಠ ಪರಿಷ್ಕಾರದ ಸಾಧ್ಯತೆಯಿದೆ. ಕನ್ನಡದಲ್ಲಾದರೋ ಗ್ರಂಥ ಸಂಪಾದನೆಯೆಂಬುದು ಹೊಸ ಗ್ರಂಥಗಳ ಶೋಧನೆ ಎಂಬರ್ಥಕ್ಕಿಂತಲೂ (ಒಂದಕ್ಕಿಂತ ಹೆಚ್ಚು ಹಸ್ತಪ್ರತಿಗಳಿಂದ) ಶುದ್ಧ ಪಾಠನಿರ್ಣಯವೆಂಬಷ್ಟಕ್ಕೇ ಸೀಮಿತವಾಗಿದೆ. ಇದಕ್ಕೆ ಹಸ್ತಪ್ರತಿಗಳ ಬಹುಳತೆ ಮತ್ತು ಸುದೀರ್ಘವಾದ ಕಾವ್ಯ ಪರಂಪರೆಯೇ ಮುಖ್ಯ ಕಾರಣವೆನಿಸುತ್ತದೆ. ತುಳುವಿನ ಮಟ್ಟಿಗೆ ಗ್ರಂಥ ಸಂಪಾದನೆ ಎಂದರೆ ಹೊಸ ಗ್ರಂಥಗಳ ಶೋಧನೆಯೇ ಆಗಿ, ತುಳುವರಿಗೆ ಕುತೂಹಲಕರವಾದ ಸಂಗತಿಯಾಗಿದೆ. ಪುಣಿಂಚತ್ತಾಯರಿಗೆ ಹೊಸ ಕಾವ್ಯ ಸಿಕ್ಕಿದೆ ಎಂಬುದು ಅಲ್ಲಿ ಮನೆಮಾತಾಗುತ್ತದೆ. ಇದೀಗ ಪುಣಿಂಚತ್ತಾಯರು ಆ ಶಾಸ್ತ್ರಕ್ಕೆ ಲವಲವಿಕೆಯೊಂದಿಗೆ ಹೊಸ ಕೊಡುಗೆಯನ್ನು ನೀಡಿದಂತಾಗಿದೆ. ಹಾಗೆ ನೋಡಿದರೆ 'ಗ್ರಂಥ ಸಂಪಾದನೆ' ಎಂಬುದು ಅಧ್ಯಯನಕ್ಕಿಂತಲೂ ಹೆಚ್ಚಾಗಿ ಶೋಧನೆಗೆ ಸಂಬಂಧಿಸಿರುವುದೇ ಆಗಿದೆ. ಪರಂಪರೆಯ ಬಗೆಗಿನ ನಮ್ಮ ಕುತೂಹಲಗಳನ್ನು ತಣಿಸಲು ಆಗಲೇ ಅದು ಸಮರ್ಥವಾಗುವುದು. ಪುಣಿಂಚತ್ತಾಯರು ಹೊಸ ಶೋಧನೆಗಳ ಮೂಲಕ ಅಂತಹ ಅಧ್ಯಯನಗಳಿಗೆ ಕನ್ನಡ ಮತ್ತು ತುಳು ಭಾಷಿಕರಿಗೆ ವಿಪುಲವಾದ ಸಾಮಗ್ರಿಗಳನ್ನು ಒದಗಿಸಿದ್ದಾರೆ. ಅವರ ಶೋಧನೆಯಿಂದ ತುಳುಭಾಷೆ ಮತ್ತು ಸಾಹಿತ್ಯಕ್ಕೆ ಒಟ್ಟಾಗಿಯೇ ಅಭಿಜಾತಗುಣ ಲಭ್ಯವಾಗಿದೆ. ಹೀಗೆ ಅವರ ಸಾಧನೆ ವರ್ತಮಾನದಲ್ಲಿಯೇ ಐತಿಹಾಸಿಕವಾಯಿತು.

ತುಳುವಿನಲ್ಲಿ ಮಾರ್ಗ ಸಾಹಿತ್ಯ: ಮಾರ್ಗ ಎಂಬುದನ್ನು ಕನ್ನಡ ಸಾಹಿತ್ಯ ಚರಿತ್ರೆಯ ಹಿನ್ನಲೆಯಲ್ಲಿಯೇ ಬಳಸುತ್ತಿದ್ದೇನೆ. ಸಂಸ್ಕೃತ ಭಾಷೆಯ ಬೆರಕೆಯಲ್ಲಿನ ಹೆಚ್ಚಳ, ಸಂಸ್ಕೃತ ಕಾವ್ಯ ಪದ್ಧತಿ, ಸಂಸ್ಕೃತ ಕಾವ್ಯಗಳಲ್ಲಿ ಬಳಕೆಯಾಗಿರುವ ಛಂದಸ್ಸು, ಪ್ರಾಚೀನತೆ, ಸಂಸ್ಕೃತ ಭಾಷೆಯಲ್ಲಿರುವ ಕಥೆಗಳು ಎಂಬುದಾಗಿ ಕನ್ನಡ ಸಾಹಿತ್ಯದಲ್ಲಿ 'ಮಾರ್ಗ' ಎಂಬ ಪರಿಕಲ್ಪನೆ ಬಹುಮಟ್ಟಿನ ಅರ್ಥ. ಹಾಗೆ ನೋಡಿದರೆ ಪ್ರಾಚೀನತೆ ಅಥವಾ ಪರಂಪರೆ ಎಂಬುದೇ ಕನ್ನಡದಲ್ಲಿ ಮಾರ್ಗ ಸಾಹಿತ್ಯಕ್ಕಿರುವ ಅರ್ಥ ಎಂದು ಅದಕ್ಕೆ ಸಂಬಂಧಿಸಿರುವ ಚರ್ಚೆಗಳನ್ನು ಯಾವ ಕಡೆಯಿಂದ

ನೋಡಿದರೂ ಗಮನಕ್ಕೆ ಬರುತ್ತದೆ. 'ಪೂರ್ವ ಕವಿಗಳ್ಗೆಗೆ ನಮಿಸಿ ನಾಂ ಕೃತಿವೇಳ್ವೆನೂ' ಎಂದು ಲಕ್ಷ್ಮೀಶ ಒಂದೇ ಮಾತಿನಲ್ಲಿ ಹೇಳಿರುವುದು ಈ ಪ್ರಾಚೀನತೆಯನ್ನೇ ಅಥವಾ ಮಾರ್ಗವನ್ನೇ. ಕನ್ನಡದಲ್ಲಿ ಮಾರ್ಗ ಎಂಬುದಾಗಿ ಹೇಳುವಾಗಲೆಲ್ಲ ತನ್ನ ಕಾಲದಿಂದ ಆಚೆಗಿರುವುದು ಎಂದರ್ಥವಾಗುತ್ತದೆ.

ತುಳುವಿನಲ್ಲಿ ಮಾರ್ಗ ಸಾಹಿತ್ಯವೆಂದರೆ ತುಳುಲಿಪಿಯಲ್ಲಿರುವ ಕಾವ್ಯಗಳು ಎನ್ನುವ ಅರ್ಥದಲ್ಲಿ ಈಗ ಚರ್ಚೆಯಾಗುತ್ತಿದೆ. ಈ ದೃಷ್ಟಿಯಿಂದಲೂ ಮಾರ್ಗ ಎಂದರೆ ಪ್ರಾಚೀನ ಅಥವ ಪರಂಪರೆ ಎನ್ನುವ ಅರ್ಥ ಸರಿಹೊಂದುತ್ತದೆ.

ಹಳೆಯ ತುಳುಭಾಷೆ ಅಥವ ಪರತುಳು: ತುಳು ಮಾರ್ಗಕಾವ್ಯಗಳು ಮುದ್ರಣಾಗೊಳ್ಳುತ್ತಿದ್ದಂತೆ ಕನ್ನಡದಲ್ಲಿ ಹಳೆಗನ್ನಡ ಇರುವಂತೆ ಹಳೆಯ ತುಳುಭಾಷೆಯೊಂದಿರುವುದು ಗಮನಕ್ಕೆ ಬರುತ್ತದೆ. ಇದನ್ನು ಇತ್ತೀಚೆಗೆ ಕೆಲವರು 'ಪಳಂತುಳು' ಎಂದು ಕರೆಯುವ ಪ್ರಯತ್ನ ಮಾಡಿದ್ದಾರೆ. ಹಳೆಗನ್ನಡ, ಹಳಗನ್ನಡ ಎಂದು ಕರೆಯುವುದಕ್ಕೆ ಕನ್ನಡ ಸಾಹಿತ್ಯದಲ್ಲಿಯೇ ಆಧಾರಗಳಿವೆ. 'ಪೞಗನ್ನಡ' ಎಂದ ಪದಪ್ರಯೋಗಗಳು ಕವಿರಾಜ ಮಾರ್ಗದಲ್ಲಿಯೇ ದೊರೆಯುತ್ತವೆ. ಆದರೆ ತುಳು ಮಾರ್ಗಕಾವ್ಯಗಳಲ್ಲಿ 'ಪಳಂತುಳು' ಎನ್ನುವ ಪದ ಎಲ್ಲಿಯೂ ಬಳಕೆಯಾಗಿಲ್ಲ. ಮಾತ್ರವಲ್ಲ 'ಪಳಂತುಳು' ಎನ್ನುವ ಪದವೇ ಒಂದು ಅಪಶಬ್ಧ ಮಾತ್ರವಲ್ಲ ಶ್ರುತಿ ದೋಷವುಳ್ಳದ್ದು ಕೂಡ. ತುಳುವಿನಲ್ಲಿ ಹಳೆಯದು ಎಂಬುದಕ್ಕೆ ಸಾಧಾರಣವಾಗಿ 'ಪರತ್ತ್' ಎಂದೇ ಹೇಳುವುದು. ಆ ಅರ್ಥದಲ್ಲಿ ಅದು 'ಪರತುಳು' ಎಂದಾಗಬೇಕು. ಅದು ಬಿಟ್ಟು ಕೆಲವರಿಗೆ ಮಾತ್ರ ಅರ್ಥವಾಗುವ 'ಪಳತ್ತ್' ಎನ್ನುವ ಪದವನ್ನು ಮುಂದಿಟ್ಟು 'ಪಳಂತುಳು' ಎಂದು ಹೊಸ ಪದವೊಂದನ್ನು ರಚಿಸುವ ಉದ್ದೇಶವಾದರೂ ಏನೆಂದು ಗೊತ್ತಾಗುವುದಿಲ್ಲ. ಏನೇ ಇರಲಿ, ಇಲ್ಲಿ 'ಪರತುಳು' ಎಂಬ ಪದವನ್ನು ಪ್ರಾಚೀನ ತುಳು ಭಾಷೆ ಎನ್ನುವವ ಅರ್ಥದಲ್ಲಿಯೇ ಬಳಸಲಾಗಿದೆ. ಹಾಗೆ ನೋಡಿದರೆ ತುಳುವಿನ ಮಾರ್ಗ ಕಾವ್ಯಗಳನ್ನು ಬೆಳಕಿಗೆ ತಂದ ಪುಣಿಂಚತ್ತಾಯರೇ ಅದರ ಗುಣಗಳನ್ನು ಹೇಳಿದ್ದಾರೆ. ಚಿಕ್ಕದಾಗಿ ಆ ಚರ್ಚೆಯನ್ನು ನಾವೀಗ ಹೀಗೆ ಕಲೆ ಹಾಕಬಹುದು.

ಪರತುಳು-ಕೆಲವು ಗುಣಗಳು:

1. ಏಕವಚನ ಪ್ರತ್ಯಯಗಳು: ಎ (ಮುನಿಂದ್ರೆ) ಎನ (ಅದ್ವಯೆನ) ಒ (ಪದೊ)ವ(ಜಾನುವ)ಮ(ಜಗೊಮ) ಇವುಗಳಲ್ಲಿ ಎ, ಎನ, ಮತ್ತು ಒ ಪ್ರತ್ಯಯಗಳನ್ನು ಬಿಟ್ಟರೆ ಉಳಿದು ಪ್ರತ್ಯಯಗಳು ಈಗಿನ ತುಳುಭಾಷೆಯಲಿಲ್ಲ.

2. ಬಹುವಚನ ಪ್ರತ್ಯಯಗಳು: ಎರ್ (ನೃಪೆರ್) ಎರ್‌ನ (ಕಲಜ್ಞೆರ್‌ನ) ಎರ (ಪ್ರಜೇಶ್ವರ) ಎಕ್ಕುಳು, ಏರ್ಕುಳು (ಆಶ್ರಿತೆಕ್ಕುಳು, ಅಲ್ಪಾಯುಷೇರ್ಕುಳು, ಕುಳು, ಒಂಕಳು, ಮಾರ್ಕುಳು, (ಸೂರಿಕುಳು) ಅಧ್ಯಾಯೊಂಕುಳು, ನಾರಿಮಾರ್ಕುಳು, ಕುಳ ಏರ್ಕುಳ ವಿದ್ವಾನ್ಕುಳ, (ಧನ್ಯೇರ್ಕುಳು) ಇವುಗಳಲ್ಲಿ ಎರ್, ಎರ, ಮತ್ತು ಕುಳ ಪ್ರತ್ಯಯಗಳು ಮಾತ್ರ ಈಗಿನ ಭಾಷೆಯಲ್ಲಿವೆ.

3. ದ್ವಿತೀಯಾ ವಿಭಕ್ತಿ: ನ್ (ಚಂದ್ರನ್) ನಿನ್ (ಧಾತಿನಿನ್) ನಿ (ಹರಿಸ್ತುತಿನಿ) ವಿ, ವೀ, ವಿನೀ (ತನುವಿ, ವಸ್ತುವೀ, ಗುರುವಿನೀ; ವೀನ್ (ಪಾಂಸುವೀನ್); ಒಮಿ, ಒಮಿನೀ ಒಮಿನ್ (ಸಾರೋಮಿ, ಪಾದೊಮಿ, ತ್ರಿಸರ್ಗೊಮಿನೀ ಚೋದ್ಯೋಮಿನ್) ಎನ್, ಏನ್ (ಶೌನಕೆರೆನ್, ಕಂಟಕೆರೇನ್); ಎ (ಶಿಶುಮಾರ್ಕುಳೆ); ಇನಿ (ದೂರ್ವಾಸಾವಿನಿ)

ಇವುಗಳಲ್ಲಿ ನ್, ಎನ್, ಏನ್‌ಗಳಷ್ಟೇ ಈಗ ತುಳು ಭಾಷೆಯಲ್ಲಿವೆ. ಅವುಗಳಿಂದಲೇ ದ್ವಿತೀಯಾ ವಿಭಕ್ತಿಗೆ ಸಂಬಂಧಿಸಿದ ಅರ್ಥವನ್ನು ಪಡೆಬಹುದಾಗಿದೆ.

4. ತೃತೀಯಾ ವಿಭಕ್ತಿ: ತ್ (ತೇರ್‌ತ್ತ್) ಒಂತ್ (ದೂರೊಂತ್) ಟ್‌ತ್, ಟ್‌ತ್ತ್ (ನಾಭಿಟ್‌ತ್, ಇಳೆಟ್‌ತ್ತ್); ಒಂಟ್‌ತ್ತ್ (ರಥೋಂಟ್‌ತ್ತ್) ತವಾ (ವ್ಯಥೇತವಾ) ಕೊಂಡ್ (ಖುರೇಕೊಂಡ್) ಇವುಗಳಲ್ಲಿ ತ್ತ್, ಟ್‌ತ್ ಇವುಗಳಷ್ಟೇ ಇಂದಿನ ತುಳುಭಾಷೆಯಲ್ಲಿವೆ.

5. ಚತುರ್ಥೀ ವಿಭಕ್ತಿ: ಕ್, ಅಂಕ್ (ಮಹೇಶ್ವರಕ್, ಜನಂಕ್) ಅಂಕ (ಪರಿತಾಲನಂಕ) ಒಂಕ್ (ಓಲಕೊಂಕ್) ಎಕ (ಏರೆಕ) ಕ (ತಂತ್ರಿಕ) ಕಾವ (ನಾರದಕಾವ) ಎಕ್, ಏಕ್ (ವ್ಯಾಸೆರೆಕ್) ಇವುಗಳಲ್ಲಿ ಕ್, ಎಕ್, ಪ್ರತ್ಯಯಗಳಷ್ಟೇ ಇಂದಿನ ತುಳುವಿನಲ್ಲಿ ಕಂಡುಬರುತ್ತವೆ.

6. ಷಷ್ಠೀ ವಿಭಕ್ತಿ: ತ, ಅಂಕತ (ರೋಭೆತ, ವೇದಂತ) ವಿ, ವೀ, (ಪಶುವಿ, ಗುರುವೀ) ಒಂತ (ಉನ್ನತೊಂತ) ನ (ಲೋಕನಾಥನ) ಯ (ವಿರಕ್ತಿಯ) ನ್ (ತರುನ್ತ್ತದಿ) ಅನುಸ್ವಾರ (ಗುರುಂಸುತೇ) ಎ, ಎನ (ಶತಂಕುಳೆ, ನೃಪೇರ್ಕುಳೆನ) ಈಗ ತ, ನ ಮತ್ತು ಎನ ಪ್ರತ್ಯಯಗಳು ತುಳು ಭಾಷೆಗೆ ಸಾಕಾಗುತ್ತದೆ.

7. ಸಪ್ತಮೀ ವಿಭಕ್ತಿ: ಟ, (ತಂದೆಟ) ಟ್ (ತುದಿಟ್) ತೆಟ್ (ಜನ್ಮತೆಟ್) ಟ್‌ಪ (ಧಾರಣೇಟ್‌ಪ) ಟ್‌ಪ್ಪ (ಕಥೆಟ್‌ಪ್ಪ) ಒಟ್, ಒಂಟ್ (ತನಾತ್ಮೊಟ್, ಕರುಣೊಂಟ್) ಒಂಟ್‌ಪ, ಅಂಟ್‌ಪ (ಮಸ್ತಕೊಂಟ್‌ಪ, ನಡುವಂಟ್‌ಪ) ಒಂಟ (ಚರತೊಂಟ) ಪ್ಪ (ಉಜಿತೆಪ್ಪ) ಒಪ್ಪ (ಪೀಠತಲೊಪ್ಪ ತ್ಯಸಾ (ಗರಿಕೆ ಸ್ತ್ವಪಾ)

ಇದಲ್ಲದೆ ಕೆಲವು ವಿಶೇಷ ಪದಪ್ರಯೋಗಗಳೂ ಅಲ್ಲಿ ಕಂಡು ಬರುತ್ತದೆ. ಈ ಕುರಿತು ತುಳು ಭಾಗವತಕ್ಕೆ ಸಂಬಂಧಿಸಿದ ನೇರ ಚರ್ಚೆಯಲ್ಲಿ ಇನ್ನಷ್ಟು ವಿವರಗಳನ್ನು ನೀಡಲಾಗುವುದರಿಂದ ಇಲ್ಲಿ ಕೆಲವು ಮುಖ್ಯ ಸಂಗತಿಗಳನ್ನಷ್ಟೇ ಪರಿಗಣಿಸಲಾಗುವುದು.

೧. ಪರತುಳು ಎಂದು ಈಗ ಹೇಳುತ್ತಿರುವ ತುಳು ಭಾಷೆಯು ಕ್ರಿ.ಶ. ಸು. ೧೨೦೦ ಹಿಂದೆ ಇದ್ದ ತುಳುಭಾಷೆಯ ರೂಪವಾಗಿದೆ.

೨. ಪರತುಳುವಿಗೆ ಸಂಬಂಧಿಸಿದಂತೆ ಈಗಾಗಲೇ ಹೇಳಿರುವ ಅನಂತಪುರ ಶಾಸನ ಮತ್ತು ಈಗ ದೊರಕಿರುವ ಪ್ರಾಚೀನ ತುಳು ಮಾರ್ಗ ಕಾವ್ಯಗಳು ಆಧಾರಗಳಾಗಿವೆ.

೩. ಈಗ ನಾವು ಪರತುಳು (ಹಳೆಯ ತುಳು) ಎಂದು ಗುರುತಿಸಬಹುದಾದ ಭಾಷೆಯು ಕಾಸರಗೋಡು ಪ್ರದೇಶ ಅದರಲ್ಲೂ ಅಲ್ಲಿಯ ಬ್ರಾಹ್ಮಣ ಸಮುದಾಯದಲ್ಲಿ ಪ್ರಚಲಿತವಾದ ತುಳುವಾಗಿರಬೇಕು. ಏಕೆಂದರೆ ಈ ಕಾವ್ಯಗಳ ಹೆಚ್ಚಿನ ಹಸ್ತಪ್ರತಿಗಳು ಸಿಕ್ಕಿರುವುದು ಕಾಸರಗೋಡು ಪರಿಸರದಲ್ಲಿಯೇ. ಹಾಗೆಯೇ ಕವಿಗಳೆಲ್ಲರೂ ಬ್ರಾಹ್ಮಣರೇ ಆಗಿದ್ದಾರೆ.

೪. ಇದು ಬರವಣಿಗೆಯ ತುಳು ಎಂಬುದನ್ನು ಗಮನಿಸಬಹುದು. ಆಡುಮಾತಿನ ರೂಪವೂ ಹೀಗಿತ್ತೇ ಎಂದು ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ಆದರೆ ಕನ್ನಡದಲ್ಲಿರುವಂತೆ ಇಂದು ತುಳುವಿನಲ್ಲಿ ಆಡು ಮಾತು ಮತ್ತು ಬರವಣಿಗೆಯ ರೂಪದ ನಡುವೆ ಅಂತಹ ವ್ಯತ್ಯಾಸಗಳಿರುವುದಿಲ್ಲವಾದುದರಿಂದ ಬೇರೆ ರೀತಿಯ ಚರ್ಚೆಗಳಿಗೂ ಅವಕಾಶವಿದೆ.

೫. ಕನ್ನಡದಲ್ಲಿಯೂ ಪ್ರಾಚೀನ ಕಾವ್ಯಗಳಲ್ಲಿ ಬಳಕೆಯಾಗಿರುವ ಹಳೆಗನ್ನಡವು ಆಡುಮಾತಿಗೆ ಹತ್ತಿರವಿದ್ದ ಭಾಷೆಯೆಂದೇ ಹೇಳಬಹುದಾಗಿದೆ. ಏಕೆಂದರೆ ಬರವಣಿಗೆಯ ಆರಂಭದಲ್ಲಿ ಆಡುಮಾತನ್ನೇ ಅವಲಂಬಿಸಿರಬೇಕಾಗುತ್ತದೆ. ಕವಿಗಳ ವೈಯಕ್ತಿಕ ಸಾಮರ್ಥ್ಯದಿಂದ ಅನ್ಯಭಾಷೆಗಳ (ಉದಾ: ಸಂಸ್ಕೃತ) ಪದಗಳು ಸೇರಿಕೊಂಡಿರಬಹುದಾದರೂ ಅವು ಭಾಷೆಯ ಒಳ ರಚನೆಯನ್ನು ನಿಯಂತ್ರಿಸುವಷ್ಟು ಪ್ರಭಾವ ಬೀರಲಾರವು. ಈಗಲೂ ಕರ್ನಾಟಕದ ತಿರುಳು ಭಾಗದಲ್ಲಿ ಬಳಕೆಯಲ್ಲಿರುವ ಕನ್ನಡಕ್ಕೂ ಪಂಪ ರನ್ನರ ಕನ್ನಡಕ್ಕೂ ಬಹಳಷ್ಟು ಸಂಬಂಧವಿದೆ. ಅದರಲ್ಲಿಯೂ ಶಕಟರೇಫದ (ಱ) ಬಳಕೆ. ಪ್ರಾಚೀನ ಕಾವ್ಯಗಳಲ್ಲಿ ಅಚ್ಚಗನ್ನಡ ಪ್ರದೇಶಗಳೆಂದು ಗುರುತಿಸಿರುವ ಸ್ಥಳಗಳಲೆಲ್ಲ ಇಂದೂ 'ರ', 'ಱ'ಗಳ ಸ್ಪಷ್ಟ ಉಚ್ಚಾರವಿದೆ. ಉದಾ: ಬಱವೊಲ್ಲ, ಅದಱಾ? ಱವಷ್ಟು, ಅದರ (ಇದ್ದರಾ? ರವಷ್ಟು ಎಂದು ಹೇಳುವಂತಿಲ್ಲ) ಎಂದು ಉಚ್ಚರಿಸುವಲ್ಲಿ ಬೇರೆಯವರು 'ರ' ಎಂತಲೂ, ಅಚ್ಚಗನ್ನಡಿಗರು 'ಱ'ಕಾರವಾಗಿಯೂ ಉಚ್ಚರಿಸುವುದು ಕಂಡು ಬರುತ್ತದೆ. ಆದುದರಿಂದ ಶಕಟರೇಫ(ಱ) ಇಂದು ಬರವಣಿಗೆಯಲಿಲ್ಲ. ಆದರೆ ಕನ್ನಡದ ಉಚ್ಚಾರಣೆಯಲ್ಲಿದೆ. ಬಳ್ಳಾರಿ ಕನ್ನಡದಲ್ಲಂತೂ ಇಂದಿಗೂ 'ಱ'ಕಾರ ಬಳಕೆಯಲ್ಲಿದೆ ಮತ್ತು ಉಚ್ಚಾರಣೆಯಲ್ಲಿಯೂ 'ಱ' ಮತ್ತು 'ರ'ಕಾರದ ನಡುವೆ ಸ್ಪಷ್ಟ ವ್ಯತ್ಯಾಸವಿದೆ.

೬. ಈ ದೃಷ್ಟಿಯಿಂದ ತುಳು ಮಾರ್ಗ ಕಾವ್ಯದಲ್ಲಿ ಬಳಕೆಯಾಗಿರುವ ಭಾಷೆಯು ಕ್ರಿ.ಶ. ೧೨೦೦ರ ಕಾಲಕ್ಕೆ ರೂಢಿಯಲ್ಲಿದ್ದ ತುಳು ಭಾಷೆಗೆ ಬಹುಮಟ್ಟಿಗೆ ಸಮೀಪವಾಗಿತ್ತು ಎನ್ನುವುದರಲ್ಲಿ ಅನುಮಾನ ಪಡಲೇಬೇಕಾಗಿಲ್ಲ. ಹೆಚ್ಚೆಂದರೆ ಅದು 'ಬ್ರಾಹ್ಮಣರ ತುಳು' ಭಾಷೆಯಷ್ಟೇ ಹೊರತು, ಎಲ್ಲ ತುಳುವರು ಆಡುತ್ತಿದ್ದ ತುಳುವಿನ ಸಾಮಾನ್ಯ ಭಾಷೆ ಎಂದು ಹೇಳಲಾಗದು, ಎನ್ನುವವರೆಗೆ ಮುಂದುವರಿಯಬಹುದಷ್ಟೇ.

೭. ಇದರಿಂದ ಈಗ ಬ್ರಾಹ್ಮಣರ ತುಳು ಭಾಷೆಯ ಲಿಖಿತ ರೂಪವೊಂದರ ಪ್ರಾಚೀನ ರೂಪವೊಂದಕ್ಕೆ ಆಧಾರಗಳು ನಮಗೆ ಸಿಕ್ಕಿದಂತಾಗುತ್ತದೆ. ಹಳೆಯ ತುಳುವಿನಲ್ಲಿ 'ಸ್ಟ್' ಕಾರವೆಂಬ ಹೊಸತೊಂದು ವರ್ಣವು (ಈಗ ಬಳಕೆಯಲ್ಲಿರದ) ಕಂಡುಬರುತ್ತದೆ. ಇದರ ಬಗೆಗೆ ತುಂಬ ಚರ್ಚೆಗಳಾಗಿವೆ.

ಆದರೆ ಅದು ಬ್ರಾಹ್ಮಣ ತುಳುವಿನ ಒಂದು ವಿಶಿಷ್ಟ ಧ್ವನಿಮಾ ಎಂದು ಗುರುತಿಸಬಹುದಾಗಿದೆ. ಬ್ರಾಹ್ಮಣರು ಇಂದೂ 'ತ್' ಮತ್ತು 'ಸ್' ನಡುವಿನ ಉಚ್ಚಾರವೊಂದನ್ನು ಬಳಸುತ್ತಿರುವುದು ಕಂಡುಬರುತ್ತದೆ. ಆದರೆ ಅವರಿಗಿನ್ನೂ ಅದರಲ್ಲಿ ನಿಖರತೆಯನ್ನು ತರುವುದಕ್ಕೆ ಸಾಧ್ಯವಾದಂತಿಲ್ಲ. (ಈ ಚರ್ಚೆಯನ್ನು ತುಳು ಭಾಗವತ ಕಾವ್ಯಕ್ಕೆ ಸಂಬಂಧಿಸಿದ ನೇರ ಚರ್ಚೆಯಲ್ಲಿ ಮುಂದೆ ಪ್ರಸ್ತಾಪಿಸಲಾಗುವುದು.)

೮. ಇದು ತುಳುನಾಡಿಗೆ ಬ್ರಾಹ್ಮಣರು ಸಂಪರ್ಕಕ್ಕೆ ಬಂದ ಕಾಲಕ್ಕೆ ಸಂಬಂಧಿಸಿದ ಚರ್ಚೆಯೂ ಆಗಬಹುದು. ಬ್ರಾಹ್ಮಣರು ತುಳುನಾಡಿಗೆ ಬಂದು, ಇಲ್ಲಿಯ ಭಾಷೆಯನ್ನು ಕಲಿತು ಇಲ್ಲಿನವರೇ ಆದ ಆನಂತರದ ತುಳುವಿನಲ್ಲಿ ಹಿಡಿತವನ್ನು ಸಾಧಿಸುವ ಕಾಲಕ್ಕೆ ಸಂಬಂಧಿಸಿರುವುದಾಗಿದೆ. 'ಸ್ಟ್'ಕಾರದ ಬಳಕೆಯಲ್ಲಿರುವ ಗೊಂದಲವು ಇನ್ನೂ ಕೂಡ ಒಂದು ವರ್ಣವನ್ನು ಅವರು ಉಚ್ಚಾರಣೆಯಲ್ಲಿ ರೂಢಿ ಮಾಡಲು ಎಡವುತ್ತಿದ್ದ ಸಂಗತಿಯನ್ನು ತೋರಿಸುದಿಲ್ಲವೇ? (ಉದಾ: ಕನ್ನಡದಲ್ಲಿ ರಳ, ಕುಳ, ಕ್ಷಳದ ಉಚ್ಚಾರಣೆಯ ಸಮಸ್ಯೆ)

೯. 'ಸ್ಟ್' ಕಾರದ ಈ ಸಮಸ್ಯೆಯು ಉಚ್ಚಾರಣೆಯಲ್ಲಿ ಅವರಿಗಿದ್ದ ಗೊಂದಲವನ್ನು ಮಾತ್ರವಲ್ಲದೇ ಅದನ್ನೂ ಬರವಣಿಗೆಯಲ್ಲಿ ಒಳಪಡಿಸುವ ಗೊಂದಲಗಳೆರಡನ್ನೂ ಏಕಕಾಲದಲ್ಲಿ ಸ್ಪಷ್ಟಪಡಿಸುತ್ತದೆ.

೧೦. ಈ ಚರ್ಚೆಯನ್ನು ಮುಂದುವರಿಸಿದಂತೆಲ್ಲ 'ಬ್ರಾಹ್ಮಣ ತುಳು' ಎಂಬುದು ಬರವಣಿಗೆಯ ತುಳುವೇ ಹೊರತು, ಆಡು ಮಾತಿನ ತುಳುವಲ್ಲ ಎಂಬುದರತ್ತವೂ ನಮ್ಮನ್ನು ಕರೆದೊಯ್ಯಬಲ್ಲುದು. ಶ್ರೀ ಭಾಗವತದ (ತುಳುಭಾಗವತ) ರಚನೆಗಳು ಬ್ರಾಹ್ಮಣ ತುಳುವಿಗೆ ತೀರ ಸಮೀಪವಾಗಿವೆ.

ಉದಾ: ಲೆಕ್ಕೊಮಾಂಪೊಳಿನಂ ಬರಂಟ್ಸ ಚೋಜಕೀನುಡುಸಂಕುಲ ಲೊಕ್ಕೆಮಾಂಪೂಳಿ ಭೂಮಿಟ್ ನಿದೆಸ್ಟ್ತ್ತಿ ಧೂಳ್ತ್‌ರಾಶಿನೀ... ಇಲ್ಲಿಯ 'ಮಾಂಪೊಳಿ' ಎನ್ನುವ ರೂಪ ಇಂದು ಬಳಕೆಯಲ್ಲಿರುವ ಬ್ರಾಹ್ಮಣ ತುಳುವಿನ ರೂಪವೇ ಆಗಿದೆ.

೧೧. ಇಂದಿಗೂ ದಕ್ಷಿಣ ಕನ್ನಡದಲ್ಲಿ ಬಳಕೆಯಲ್ಲಿರುವ ಕನ್ನಡದ ಉದಾಹರಣೆಯಿಂದ ಮೇಲೆ (ಅಂದರೆ ೧೦, ರಲ್ಲಿ ಉಲ್ಲೇಖಿಸಿದ ಸಂಗತಿ) ಹೇಳಿದ ವಿವರವನ್ನು ಸ್ಪಷ್ಟಪಡಿಸಬಹುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಉಡುಪಿ ಜಿಲ್ಲೆಯೂ ಸೇರಿ) ರೂಢಿಯಲ್ಲಿರುವ ಕನ್ನಡವು ಶಾಲೆಯಿಂದ, ಬರವಣಿಗೆಯ ಮೂಲಕ, ಕನ್ನಡ ಮನೆಮಾತಾಗಿ ಇರದವರು ಆಡುವ ಒಂದು ಭಾಷೆಯಾಗಿದೆ. ಅದು ಬರವಣಿಗೆಯ ಕನ್ನಡದ ಹೆಚ್ಚು ಕಡಿಮೆ ಪರಿವರ್ತಿತ ರೂಪ. (ಅದಕ್ಕೆ ತುಳುಭಾಷೆಯ ಮತ್ತು ಇತರ ಭಾಷೆಗಳ ಪದ ಸಂಪತ್ತು ಮತ್ತು ಉಚ್ಚಾರಣೆಯ ಪ್ರಭಾವ ಇರುತ್ತದೆ)

೧೨. ಇದರಿಂದ ಸ್ಪಷ್ಟವಾಗುವುದೇನೆಂದರೆ ಮನೆ ಮಾತು ಬೇರೆಯಾಗಿರುವ ಸಮುದಾಯವೊಂದು ಕಾರಣಾಂತರದಿಂದ ಸಂಪರ್ಕ ಭಾಷೆಯೊಂದನ್ನು ಕಲಿತು ಮುಂದೊಂದು ಕಾಲಕ್ಕೆ ಅದನ್ನೇ ತನ್ನ ಮನೆಭಾಷೆ (ಅಥವ ಮಾತೃಭಾಷೆ)ಯಾಗಿ ಮಾಡಿಕೊಳ್ಳುತ್ತದೆ. (ದಕ್ಷಿಣ ಕನ್ನಡದಲ್ಲಿ

ರೂಢಿಯಲ್ಲಿರುವ ಕನ್ನಡ ಇಂದು ಅನೇಕ ಸಮುದಾಯಗಳ, ಅದರಲ್ಲಿಯೂ ದಲಿತರ ಮನೆಮಾತಾಗುತ್ತಿದೆ) ಆದರೆ ಅದು ಒಂದು ಕೃತಕತೆಯನ್ನು ತನ್ನಲ್ಲಿ ಹಾಗೆ ಉಳಿಸಿಕೊಂಡಿರುತ್ತದೆ. (ಉದಾ: ದಕ್ಷಿಣ ಕನ್ನಡದ ಕನ್ನಡದವರು ಹೇಳುವ 'ಮಂಡೆಬಿಸಿ', ಊಟ ಆಯಿತಾ? ದೊಡ್ಡವಳಾಗಿದ್ದಾಳೆ ಇತ್ಯಾದಿ.) ಇವೆಲ್ಲ ಕನ್ನಡದ ಸಹಜ ರೂಪಗಳಲ್ಲ. ಕ್ರಮವಾಗಿ ತಲೆಕೆಟ್ಟು ಹೋಯ್ತು, ಊಟ ಮಾಡಿದ್ರಾ (ಉಂಡಿರಾ ಅಥವಾ ಉಂಡ್ರಾ, ಎತ್ತರಾಗ್ಯಾಳ ಎಂದಾಗಬೇಕು) ಈ ಸೂಕ್ಷ್ಮತೆ ಈ ಭಾಷೆಯಲ್ಲಿ ಏಕೆ ಕಾಣಿಸುವುದಿಲ್ಲ! ಏಕೆಂದರೆ ದಕ್ಷಿಣ ಕನ್ನಡದವರಲ್ಲಿ ಹೆಚ್ಚಿನವರಿಗೆ ಕನ್ನಡ ಮನೆಮಾತಲ್ಲ.

೧೩. ಬ್ರಾಹ್ಮಣ ತುಳುವಿನಲ್ಲಿ ತಮಂತ್ರೆ, ಅಶನ, ಪುರುಷೆ, ರಾಮಣಿ ಮೊದಲಾದ ಅನೇಕ ಸಂಸ್ಕೃತ ಪದಗಳಿವೆ. ಇವುಗಳಿಗೆ ತುಳುವಿನ ಅದರದೇ ಆದ ಪದಗಳಿವೆ. ಕ್ರಮವಾಗಿ ಬಚ್ಚಿರೆ, ಒಣಸ್, ಕಂಡನಿ, ಬುಡೆದಿ ಇವೆಲ್ಲ ತುಳುವಿನದ್ದೇ ಆದ ಪದಗಳು. ಆದರೆ ಬ್ರಾಹ್ಮಣ ತುಳುವಿನಲ್ಲಿ ಅದು ಏಕೆ ಇಲ್ಲ? ಇದಕ್ಕೆ ಎರಡೇ ಕಾರಣಗಳು ಸಾಧ್ಯ, ಮೊದಲನೆಯದಾಗಿ ಬ್ರಾಹ್ಮಣರಿಗೆ ಆ ಪದಗಳನ್ನು ಬೇರೆಯವರಿಂದ ತಿಳಿಯಬೇಕಾಗಿತ್ತು. ಎರಡನೆಯದು ಅವರಿಗೆ ಸಂಸ್ಕೃತ ಭಾಷೆ ಪರಿಚಿತವಾಗಿತ್ತು.

೧೪. ಹೀಗಿದ್ದರೂ ಬ್ರಾಹ್ಮಣರು ಬೇರೆ ಬೇರೆ ಕಾರಣಕ್ಕಾಗಿ ತುಳುವನ್ನು ಕಲಿಯಲೇ ಬೇಕಾಯಿತು. (ದಕ್ಷಿಣ ಕನ್ನಡದ ತುಳು ಮಾತೃಭಾಷಿಗರು ಕನ್ನಡ ಕಲಿತ ಹಾಗೆ) ಇದಕ್ಕೆ ಬಹಳ ಕಾಲದಿಂದ ತುಳುನಾಡಲ್ಲಿ ಅವರು ವಾಸಿಸಬೇಕಾದ ಸಂದರ್ಭವೂ ಕಾರಣವಾಯಿತು. ಮುಂದಿನ ತಲೆಮಾರಿಗೆ ಅದು ಮಾತೃಭಾಷೆಯೂ ಆಯಿತು. ಸಂಸ್ಕೃತ ಭಾಷೆಯ ಪರಿಚಯವಿದ್ದುದರಿಂದ ಭಾಷೆಗೆ ಲಿಪಿಯೊಂದರಿಂದ, ಬರವಣಿಗೆಯಿಂದ ಎಂತಹ ಸ್ಥಾನಮಾನ ಸಿಗುತ್ತದೆ ಎಂಬ ಸರಿಯಾದ ಜ್ಞಾನವಿತ್ತು. ಆ ಕಾರಣಕ್ಕಾಗಿಯೇ ಇವರು ತುಳು ಲಿಪಿಯನ್ನು ಬಳಕೆ ತರಬೇಕಾದ ಅಗತ್ಯವಿತ್ತು. ಆದರೆ ಈ ಕಲಿತ ಭಾಷೆ ನಿಜವಾಗಿಯೂ ಅವರ ಮಾತೃಭಾಷೆಯಲ್ಲದಿದ್ದುದರಿಂದ ಅನೇಕ ಅಸಹಜ ರೂಪಗಳು ಹಾಗೆಯೇ ಉಳಿದುಕೊಂಡವು. (ಇಂಡಿಯನ್ ಇಂಗ್ಲೀಷ್, ದಕ್ಷಿಣ ಕನ್ನಡದ ಕನ್ನಡ ಇತ್ಯಾದಿಗಳು ಇದಕ್ಕೆ ಸರಿಯಾದ ಉದಾಹರಣೆಗಳು)

೧೫. ಇದರಿಂದ ಸ್ಪಷ್ಟವಾಗುವುದೆಂದರೆ ಬ್ರಾಹ್ಮಣರ ತುಳು ಎನ್ನುವುದು ಒಂದು ಕೃತಕ ಭಾಷೆ ಅಂದರೆ ತುಳು ಮಾತೃಭಾಷಿಗರಲ್ಲದವರು, ಪ್ರಯತ್ನ ಪೂರ್ವಕವಾಗಿ ಕಲಿತು ತಮ್ಮದಾಗಿಸಿಕೊಂಡ ಒಂದು ಭಾಷೆಯಾಗಿದೆ. ಈ ಕಾರಣದಿಂದಲೇ ಅದರಲ್ಲಿ ಸಂಸ್ಕೃತದ ಪದಗಳ ಹೆಚ್ಚಳ, ವರ್ಣಗಳ ಉಚ್ಚಾರಣೆಯಲ್ಲಿ ಗೊಂದಲ, ವಾಕ್ಯ ರಚನೆಯಲ್ಲಿ ಅಸಹಜತೆ ಕಂಡು ಬರುವುದು.

೧೬. ನಾವೀಗ ಹಳೆಯ ತುಳು (ಪರತುಳು) ಎಂದು ಕರೆಯಬಹುದಾದ ಮಾರ್ಗ ಕಾವ್ಯದ ಭಾಷೆಯಲ್ಲಿ ಈ ಬ್ರಾಹ್ಮಣರ ತುಳುವಿನ ಪ್ರಾಚೀನ ರೂಪವಾಗಿರುವುದರಿಂದಲೇ ತುಳುವಿಗೆ ಅಸಹಜವಾದ ಪದಗಳು, ವಾಕ್ಯ ರಚನೆಗಳು ಕಂಡುಬರುವುದು.

೧೭. ಆದುದರಿಂದ ಬ್ರಾಹ್ಮಣರು ಬಹುತೇಕವಾಗಿ ಪ್ರಾಚೀನ ಕಾಲದಲ್ಲಿ ಈಗ ಮಾರ್ಗ ಕಾವ್ಯದಲ್ಲಿರುವ ಹಳೆಯ ತುಳು ಭಾಷೆಯನ್ನೇ ಮಾತಾಡುತ್ತಿದ್ದರು ಎಂದರೆ ತಪ್ಪಾಗಲಾರದು. ಅವರಿಗೆ ಅದು ಆಡು ಭಾಷೆಯೂ, ಬರವಣಿಯ ಭಾಷೆಯೂ ಆಗಿತ್ತು. (ಈಗ ಪಳಂತುಳು ಎನ್ನುವ ಹಾಗೆ!)

೧೮. ಇದರಿಂದ ಆ ಕಾಲದಲ್ಲಿ ಬೇರೆಯವರು ಮಾತಾಡುತ್ತಿದ್ದ, ಅಥವಾ ಆಗ ಪ್ರಚಾರದಲ್ಲಿದ್ದ ತುಳು ಭಾಷೆಯ ಬಗೆಗೆ ಹೆಚ್ಚಿಗೇನೂ ಹೇಳುವಂತಿಲ್ಲ.

೧೯. ಅಂತಿಮವಾಗಿ ಪರತುಳುವಿನ ಅಧ್ಯಯನವು ಬ್ರಾಹ್ಮಣ ತುಳು ಮತ್ತು ತುಳುನಾಡಿಗೆ ಅವರ ಆಗಮನದ ಕುರಿತ ಕಾಲವನ್ನು ಖಚಿತ ತಿಳಿಸಬಲ್ಲುದಾಗಿದೆ. ತುಳುವಿನ ಮೊದಲ ಮಾರ್ಗ ಕಾವ್ಯ ಎಂದಾದರೂ ದೊರೆತರೆ ಆಗ ಖಚಿತವಾಗಿ ಬ್ರಾಹ್ಮಣರು ತುಳುನಾಡಿಗೆ ಎಂದು ಬಂದರು, ತುಳು ಲಿಪಿಯ ಬಳಕೆ ಎಂದಾಯಿತು ಎಂಬುದನ್ನು ತಿಳಿಯಿತು. ಸದ್ಯಕ್ಕೆ ಮಾರ್ಗ ಕಾವ್ಯದಲ್ಲಿ ಬಳಕೆಯಾಗಿರುವ ಪಳತುಳು ಮತ್ತು ಬ್ರಾಹ್ಮಣರ ತುಳು ಒಂದೇ ಆಗಿರುವುದರಿಂದ ಬ್ರಾಹ್ಮಣರು ತುಳು ಮಾತೃಭಾಷಿಗರಲ್ಲವೆಂಬುದಕ್ಕೆ ಇನ್ನಷ್ಟು ಆಧಾರಗಳು ದೊರಕಿದಂತಾಗುತ್ತದೆ.

ತುಳುವಿನ ಮಹಾಕಾವ್ಯ-ಶ್ರೀ ಭಾಗವತೋ: ಇಷ್ಟು ವಿವರಗಳ ಮೇಲೆ ಇದೀಗ ನೇರವಾಗಿ ತುಳುವಿನ ಮಹಾಕಾವ್ಯ "ಶ್ರೀ ಭಾಗವತೋ" ಕಾವ್ಯದ ಕುರಿತು ಚರ್ಚಿಸಬಹುದು. ಈ ಕಾವ್ಯವನ್ನು ಡಾ. ವೆಂಕಟರಾಜ ಪುಣಿಂಚತ್ತಾಯರಿಗೆ ಕಾಸರಗೋಡಿನ ಮಧೂರು ಶಿವನಾರಾಯಣ ಸರಳಾಯರ ಮನೆಯಲ್ಲಿ ದೊರೆಯಿತು. ಇದನ್ನು 1984ರಲ್ಲಿ ಮಂಗಳೂರು ವಿಶ್ವವಿದ್ಯಾನಿಯವು ಪ್ರಕಟಿಸಿತು. ಈ ಅನುವಾದಕ್ಕೆ ಆ ಪುಸ್ತಕವನ್ನು ಬಳಸಿದ್ದೇನೆ. ಇದು ಪ್ರಕಟವಾದ ಕಾಲದಲ್ಲಿ ಇದುವೇ ತುಳುವಿನ ಮಹಾಕಾವ್ಯ ಎಂಬ ಅಭಿಪ್ರಾಯವಿತ್ತು. ಆದರೆ ಆ ಮೇಲೆ ಪುಣಿಂಚತ್ತಾಯರು ಇನ್ನೂ ಕೆಲವು ಕಾವ್ಯಗಳನ್ನು ಪ್ರಕಟಿಸಿದರು. ಆದ್ದರಿಂದ ಈಗ ಶ್ರೀ ಭಾಗವತೋ ಕಾವ್ಯಕ್ಕೆ ತುಳುವಿನ ಆದಿಕಾವ್ಯ ಎನ್ನುವ ಪಟ್ಟವಿಲ್ಲ. ಆದರೆ ಮೊದಲು ಸಿಕ್ಕಿದ, ಪ್ರಕಟವಾದ ತುಳುವಿನ ಮಹಾಕಾವ್ಯ ಎನ್ನುವ ಮನ್ನಣೆಯಂತೂ ಇದ್ದೇ ಇದೆ.

ಕವಿ-ಕಾವ್ಯ-ಕಾಲ ಮೊದಲಾಗಿ: ತುಂಗಕುಲೊಂತಾ ಧರಣೀಸುದೆ ವಿಷ್ಣು ರಚೀತಿ ಕಥೆ ಶ್ರೀಭಾಗವತಾರ್ಥೊ (ಪ್ರಥಮಸ್ಕಂದ, ೧೭) ಎಂದು ಕವಿ ತನ್ನ ಬಗೆಗೆ ಹೇಳಿಕೊಂಡಿದ್ದಾನೆ. 'ತುಂಗಕುಲದ ಬ್ರಾಹ್ಮಣನಾದ ವಿಷ್ಣು ರಚಿಸಿದ ಶ್ರೀ ಭಾಗವತಾರ್ಥೊ' ಎಂದು ಇದರ ಅರ್ಥವಾಗಿದೆ. ಆತ ತನ್ನ ಕಾಲವನ್ನು ಸಹ ವಿವರವಾಗಿ ನೀಡಿದ್ದಾನೆ.

"ಗುರು ಕನ್ಯೆಟ್ ತಾಲಿಟ್ ಚಂದ್ರಮೆಯಾ ಬುಧೆ ಧಾರಣೀ ಪುತ್ರೆ ವರ ಭಾಸ್ಕರೆ ಚೇಳ್‌ಟ್, ಸೂರ್ಯೆಜೆಲಾ ಚಾಪುಂಟಟೆಸ್ಸ್ಪ್ಪಾಉರಗೇ ಮಕರೊಂಟ್‌ಪ ಕರ್ಕಟ್‌ಪಾ ಶಿಖಿ" (ಪ್ರಥಮಸ್ಕಂಧ ೧೭) ಗುರುವು ಕನ್ಯಾರಾಶಿಯಲ್ಲಿಯೂ ಕುಂಭರಾಶಿಯಲ್ಲಿಯೂ, ಶನಿಯು ಧನುರಾಶಿಯಲ್ಲಿಯೂ, ರಾಹು ಮಕರರಾಶಿಯಲ್ಲಿಯೂ ಕರ್ಣಾಟಕದಲ್ಲಿ ಶಿಖಿ ಇರುತ್ತಿರಲು ವಿಷ್ಣುವು ಕಥೆ ಬರೆದನು

ಎಂದಾಗುತ್ತದೆ. ಇದನ್ನು ವಿವೇಚಿಸಿದ ಪುಣಿಂಚತ್ತಾಯರು ಕವಿಯ ಕಾಲವನ್ನು ಕ್ರಿ.ಶ. ೧೬೩೬ ಎಂದು ನಿರ್ಧರಿಸಿದ್ದಾರೆ.

ಈ ಕವಿಯ ಹುಟ್ಟೂರಿನ ಬಗೆಗೂ ಸರಿಯಾದ ವಿವರಗಳು ಕಾವ್ಯದಲ್ಲಿ ದೊರೆಯುವುದಿಲ್ಲ. ಹಾಲಿಗೆ ಸಂವಾದಿಯಾದ ಪದಗಳಿರುವ ಊರೊಂದನ್ನು ಆತ ಮತ್ತೆ ಮತ್ತೆ ತನ್ನ ಕಾವ್ಯ ದಲ್ಲಿ ಹೇಳುತ್ತಾನೆ. ಉದಾ: ಕ್ಷೀರಾಬ್ಧಿಪುರ, ದುಗ್ಧಾಬ್ಧನಿವಾಸ, ಅಬ್ಧಿಪುರ ಇತ್ಯಾದಿ) ಕಾಸರಗೋಡಿನಲ್ಲಿ ಪೇರೂರು (ಹೇರೂರು) ಎಂಬುದೊಂದಿದೆಯಾದುದರಿಂದ ಈತ ಕಾಸರಗೋಡಿನವನಾಗಿರಬಹುದೇ ಎಂಬುದು ಪುಣಿಂಚತ್ತಾಯರ ಅನುಮಾನ.

ಈಗ ಸಿಕ್ಕಿರುವ ಶ್ರೀ ಭಾಗವತವು ಅರ್ಧಕ್ಕೇ ನಿಂತ ಕಾವ್ಯವಾಗಿದೆ. ಕೃಷ್ಣನ ಕಥೆಯನ್ನು ಪೂರ್ಣವಾಗಿ ಹೇಳುವುದು ಇಲ್ಲಿಯ ಉದ್ದೇಶವೆಂದು ಮೇಲ್ನೋಟಕ್ಕೆ ತೋರುತ್ತದೆ. ಭಾಗವತವೆಂದ ಮೇಲೆ ಅದರಲ್ಲಿ ಮೂರನೆಯ ಸ್ಕಂಧವೇ ಮುಖ್ಯವಾದುದು. ಆದರೆ ತುಳು ಭಾಗವತವು ಮೂರನೆಯ ಸ್ಕಂಧಕ್ಕೇ ನಿಂತು ಹೋಗಿದೆ. ಈ ನಿಟ್ಟಿನಲ್ಲಿ ಯೋಚಿಸಿದಾಗಲೂ ಇದು ಅಪೂರ್ಣವಾದ ಕಾವ್ಯವೆಂದೇ ಹೇಳಬಹುದು.

ಛಂದಸ್ಸು ಮತ್ತು ಕಾವ್ಯಭಾಷೆ: ವಿಷ್ಣುತುಂಗನು ಕನ್ನಡ ಕಾವ್ಯ ಮಾದರಿಯನ್ನು ಇಟ್ಟುಕೊಂಡಿರುವಾಗಲೂ ಛಂದಸ್ಸಿನ ನೆಲೆಯಿಂದ ಅವನಿಗೆ ಕನ್ನಡದ ಛಂದಸ್ಸು ಮಾದರಿಯಾಗಿಲ್ಲ. ಮಲ್ಲಿಕಾಮಾಲೆ, ತರಳ, ತೋಟಕ, ವನಮಯೂರ ಮತ್ತು ಚಿತ್ರಪದ ಈ ವೃತ್ತಗಳನ್ನು ವಿಷ್ಣುತುಂಗನು ಬಳಸಿದ್ದಾನೆ. ಅದಲ್ಲದೆ ತರಳ ವೃತ್ತ ಮತ್ತು ತೋಟಕಜನ್ಯ ವತ್ತಗಳೆಂದು ಹೇಳಬಹುದಾದ ಇನ್ನೆರಡು ವೃತ್ತಗಳನ್ನೂ ಆತ ಬಳಸಿದ್ದಾನೆ. (ಇದು ಪುಣಿಂಚತ್ತಾಯರದೇ ವಿವರಣೆ) ಇದಲ್ಲದೆ ಅಂಶಷಟ್ಪದಿಯನ್ನೂ ಆತ ಕೆಲವು ಕಡೆ ಪ್ರಯೋಗಿಸಿದ್ದಾನೆ.

ಇನ್ನು ವಿಷ್ಣುತುಂಗನ ಕಾವ್ಯದಲ್ಲಿ ಪ್ರಯೋಗವಾಗಿರುವ ಕಾವ್ಯ ಭಾಷೆಯು 'ಮಣಿಪ್ರವಾಳ ಶೈಲಿ'ಗೆ ಸಂಬಂಧಿಸಿರುವುದು ಎಂದು ಪುಣಿಂಚತ್ತಾಯರು ಹೇಳಿದ್ದಾರೆ. ಮಣಿಪ್ರವಾಳದ ವ್ಯಾಖ್ಯಾನ ಏನೇ ಇರಲಿ ಅದು ಸಂಸ್ಕೃತ ಭಾಷೆಯನ್ನು ದೇಶಿ ಭಾಷೆಯನ್ನು ಸಂಸ್ಕೃತ ಭಾಷೆಯೊಂದಿಗೆ ಪೋಣಿಸುವ ಪ್ರಯತ್ನ ಎಂದು ಭಾವಿಸಲಾಗುತ್ತದೆ. ಆದರೆ 'ಮಣಿಪ್ರವಾಳ ಶೈಲಿ' ಎಂದು ಹೇಳುವಲೆಲ್ಲ ದೇಶಿ ಭಾಷೆಗಿಂತಲೂ ಲಾಭ ಪಡೆದಿರವುದು ಸಂಸ್ಕೃತ ಭಾಷೆಯೇ. ಉದಾಹರಣೆಗೆ 'ಮಣಿಪ್ರವಾಳ'ವನ್ನು ಒಂದು ಮಂತ್ರವಾಗಿ ಪ್ರಯೋಗಿಸಿದ ಮಲಯಾಳದಲ್ಲೇ ಅದರಿಂದ ಮಲಯಾಳಕ್ಕಿಂತಲೂ ಹೆಚ್ಚಿಗೆ ಪ್ರಯೋಜನವಾಗಿರುವುದು ಆ ಸಂಸ್ಕೃತ ಭಾಷೆಗೆ. ಏಕೆಂದರೆ ಆ ಮೂಲಕ ನಾಮಾವಶೇಷವಾಗಿದ್ದ ಸಂಸ್ಕೃತ ಭಾಷೆ ಕೇರಳದಲ್ಲಿ ಮಲಯಾಳದ ಮೂಲಕ ಉಸಿರು ಹಿಡಿದುಕೊಳ್ಳುವಂತಾಯಿತು. ತುಳುವಿನ ಸಂದರ್ಭದಲ್ಲಿ, ಕನ್ನಡದ ಸಂದರ್ಭದಲ್ಲಿಯೂ ಹಾಗೆಯೇ. ಹಾಗಾದುದರಿಂದ ಮಣಿಪ್ರವಾಳವೆಂದರೆ ಅಳಿವಿನಂಚಿನಲ್ಲಿರುವ ಭಾಷೆಯೊಂದು ಬಳಕೆಯಲ್ಲಿರುವ

ಭಾಷೆಯ ಮೂಲಕ ಮತ್ತೆ ಜೀವಂತಿಕೆಗೆ ಬರುವ ಕ್ರಿಯೆಯೇ ಆಗಿದೆ. ಹಾಗೆಯೇ ಮಣಿಪ್ರವಾಳ ಶೈಲಿಯಿಂದ ಜೀವಂತಿಕೆಯಲ್ಲಿರುವ ಭಾಷೆಗಳು ತಮ್ಮತನವನ್ನು ಕಳಕೊಂಡು ಅಸಹಜವಾಗುತ್ತ, ಕೊನೆಗೆ ಸಂಸ್ಕೃತದ ಹಾಗೆಯೇ ಅಳಿವಿನಂಚಿಗೆ ಸಾಗುತ್ತವೆ. ಬಹಳ ಸೂಕ್ಷ್ಮವಾದ ಈ ಸಂಬಂಧದ ಬಗೆಗೆ ಕವಿಗಳು ತುಂಬ ಎಚ್ಚರಿಕೆಯಿಂದಿರಬೇಕಾಗಿತ್ತು. ಆದರೆ ಇದರ ಕುರಿತು ಎಲ್ಲಾ ಕಡೆಗೂ ಕವಿಗಳು ಉದಾರವಾಗಿ ಗೌರವಯುತವಾಗಿ ನಡಕೊಂಡ ಹಾಗೆ ಕಾಣುತ್ತದೆ. ಇದಕ್ಕೆ ಸಂಸ್ಕೃತ ಭಾಷೆಯ ಒಣಜಂಭ ಮತ್ತು ದೇಶೀ ಭಾಷೆಗಳ ಮುಗ್ಧತೆಯೇ ಕಾರಣ. ವಿಷ್ಣುತುಂಗನೂ ಈ ಪ್ರಕ್ರಿಯೆಯನ್ನು ಒಪ್ಪಿಕೊಂಡವನೇ. ಆದುದರಿಂದಲೇ ನೂರಕ್ಕೆ ಎಂಬತ್ತಕ್ಕಿಂತಲೂ ಹೆಚ್ಚು ಪದಗಳು ಸಂಸ್ಕೃತ ಭಾಷೆಯವು. ಉಳಿದ ಇಪ್ಪತ್ತು, ಹದಿನೈದರಷ್ಟು ಪದಗಳು ತುಳುವಿನವು.

ಮಣಿಪ್ರವಾಳಕ್ಕೂ ಮಾರ್ಗ ಕಾವ್ಯಕ್ಕೂ ನೇರ ಸಂಬಂಧವಿದೆ. ಹಾಗಾದುದರಿಂದ ಮಾರ್ಗ ಕಾವ್ಯದ ಕುರಿತು ಇಲ್ಲಿಯೇ ಒಂದು ಮುಖ್ಯವಾದ ಸಂಗತಿಯನ್ನು ಪ್ರಸ್ತಾಪಿಸಬೇಕು. ಮಾರ್ಗ ಕಾವ್ಯದ ಬಗೆಗೆ ಇಂದು ಏನೆಲ್ಲ ಚರ್ಚೆಗಳು ನಡೆದಿರಲಿ, ಸಾಂಸ್ಕೃತಿಕವಾಗಿ ಯೋಚಿಸುವುದಾದರೆ ಅದು ಜಾತಿ ಮತ್ತು ಧರ್ಮಕ್ಕೆ ಗಂಟು ಬಿದ್ದ ಸಮಾಜದಲ್ಲಿ ಮೇಲ್ಜಾತಿಯವರು, ಮುಖ್ಯ ಧರ್ಮಗುರು ಸಾಹಿತ್ಯವನ್ನು ಪ್ರವೇಶಿಸಿವ ಮತ್ತು ಹಿಡಿತ ಸಾಧಿಸುವ ಹಂತವಾಗಿರುತ್ತದೆ ಎಂಬುದು ಯಾವ ಸಾಹಿತ್ಯ ಚರಿತ್ರೆಯನ್ನು ನೋಡುವಾಗಲೂ ಸ್ಪಷ್ಟವಾಗುತ್ತದೆ. ಏಕೆಂದರೆ ಚರಿತ್ರೆ, ಆರ್ಥಿಕತೆ ಹಾಗೂ ಸಾಹಿತ್ಯ ಇವು ಮೂರು ಅಧಿಕಾರ ಮತ್ತು ಚಹರೆಯನ್ನು ಸ್ಥಾಪಿಸಲು ಯಾವುದೇ ಸಮಾಜಕ್ಕೆ ಆಹ್ವಾನವನ್ನು ನೀಡುವ ಕ್ಷೇತ್ರಗಳು. ಇಲ್ಲಿ ಬಲವಿದ್ದವರಿಗಷ್ಟೇ ಉಳಿಯಲು ಸಾಧ್ಯ. ಹಾಗೆಯೇ ಸಾಹಿತ್ಯದಲ್ಲಿಯೂ ಕೂಡ. ಮೇಲ್ಜಾತಿಯರು ತಮ್ಮ ಇರವನ್ನು ಕೂಗಿ ಕೂಗಿ ಹೇಳುವ ಜಾಗ ಅದು. ಮಾರ್ಗಕಾವ್ಯ ಎಂದರೆ ಹೀಗೆ ಮೇಲ್ಜಾತಿಯ, ರಾಜಧರ್ಮದ ಸಮುದಾಯವೊಂದು ಸಾಹಿತ್ಯದ ಮೇಲೆ ಹಿಡಿತವನ್ನು ಸಾಧಿಸುವ ಪ್ರಕ್ರಿಯೆಯೇ ಆಗಿದೆ. ಅದನ್ನು ಹೊರತು ಪಡಿಸಿ ಕೇವಲ ಭಾಷಿಕವಾಗಿ ಕಾವ್ಯಮೀಮಾಂಸೆಯ ದೃಷ್ಟಿಯಿಂದ ಮಾರ್ಗಕಾವ್ಯದ ಚರ್ಚೆ ಏನೂ ಉಪಯೋಗವಿಲ್ಲ. ತುಳುವಿನ ಮಾರ್ಗಕಾವ್ಯವೂ ಇದಕ್ಕೆ ಹೊರತಾದುದಲ್ಲ.

ಕಾವ್ಯದ ವಿಶೇಷತೆಗಳು: ಈಗಾಗಲೇ ಹೇಳಿರುವಂತೆ ಈ ಕಾವ್ಯದ ಮೂಲಕ ಹಳೆಯ ತುಳುವೊಂದರ ಇರುವಿಕೆಯು ಗೊತ್ತಾಗುತ್ತದೆ. ಆದರೆ ಅದು ಬ್ರಾಹ್ಮಣ ತುಳುವಿನ ಪ್ರಾಚೀನ ರೂಪವೆಂದೂ ಹೇಳಬಹುದಾಗಿದೆ. ಇದರ ಕುರಿತು ಈಗಾಗಲೇ ದೀರ್ಘವಾಗಿ ನಾನು ಚರ್ಚಿಸಿದ್ದೇನೆ. ಅದರ ಜತೆಗೆ ಇನ್ನೊಂದು ಮಾಹಿತಿಯನ್ನು ಈಗ ಸೇರಿಸಬಹುದು. ಅದುವೇ 'ಸ್ಟ್'ಕಾರಕ್ಕೆ ಸಂಬಂಧಿಸಿದ ಸಂಗತಿ.

'ಸ್ಟ್'ಕಾರದ ಕುರಿತು: 'ಶ್ರೀ ಭಾಗವತೋ' ಕಾವ್ಯವೂ ಸೇರಿದಂತೆ ಹಳೆಯ ತುಳು ಮಾಹಾಕಾವ್ಯಗಳೆಲ್ಲ 'ಸ್ಟ್'ಕಾರವೆಂಬ ವಿಶೇಷವಾದ ವರ್ಣ ಕಂಡು ಬರುತ್ತದೆ. ಸಾಮಾನ್ಯವಾಗಿ ತುಳು ಬಹಳಷ್ಟು

ಮೃದು ಅಕ್ಷರಗಳಿರುವ ಭಾಷೆಯಾಗಿದೆ. ತಮಿಳಿನಂತೆ ಇದರಲ್ಲಿ ಮಹಾಪ್ರಾಣವಾಗಲೀ, ಊಷ್ಮ ವರ್ಣವಾಗಲೀ, ಒತ್ತಕ್ಷರಗಳಾಗಲೀ ಬಳಕೆಯಾಗುವುದೇ ಅಪರೂಪ. ಆದರೆ ಉಚ್ಛಾರಣೆಗೆ ನಿಲುಕದ, (ಅದರ ಉಚ್ಛಾರಣೆ ಹೇಗಿತ್ತೆಂದೂ ತಿಳಿದಿಲ್ಲ) ಈ ವಿಚಿತ್ರವಾದ ವರ್ಣವು ಕಾವ್ಯದ ತುಂಬ ಕಂಡುಬರುತ್ತದೆ. (ಉದಾ: ಬ್ರಾಹ್ಮಣರು ಪ್ರಜ್ಞಾಪೂರ್ವಕವಾಗಿ ಬಳಸುತ್ತಿದ್ದುದರಿಂದ ಅದರ ಬಳಕೆಯಾಗಿರಬಹುದಷ್ಟೇ)

ಈ ದೃಷ್ಟಿಯಿಂದ ನೋಡಿದಾಗ 'ಸ್ಟ್'ಕಾರವು ಹಳೆಯ ತಳುವಿನಲ್ಲಿ ಸಾಮಾನ್ಯವಾಗಿ ಬಳಕೆಯಾಗುತ್ತಿದ್ದ ಸಾಧ್ಯತೆಯೇ ಇಲ್ಲ. ಬ್ರಾಹ್ಮಣರು, ವಿದ್ಯಾವಂತ ತುಳುವರು (ಅಂದರೆ ಅವರೇ!) ಮಾತ್ರ ತುಳುವಿನ ಜಾಯಮಾನಕ್ಕೆ ಒಗ್ಗದ ಈ ವರ್ಣವೊಂದನ್ನು ಪ್ರಯಾಸ ಪೂರ್ವಕವಾಗಿ ಬಳಸುತ್ತಿದ್ದರು. (ಅಶನ, ತಮಂತ್ರೆ, ಕಸ್ತಲೆ ಎಂದು ಅಸಹಜವಾಗಿ ಬಳಸುವ ಹಾಗೆ) ಇದಕ್ಕೆ ಆಧಾರಗಳೇನು ಎಂದು ಯಾರಿಗಾದರೂ ಅನಿಸಬಹುದು. ಆಧಾರಗಳೂ ಸಿಗುತ್ತವೆ.

ಇಂದಿಗೂ ಬ್ರಾಹ್ಮಣ ತುಳುವಿನಲ್ಲಿ ತುಳುವಿನ ಜಾಯಮಾನಕ್ಕೆ ಒಗ್ಗದ ಉಚ್ಛಾರಣೆಗಳು ಕಂಡು ಬರುತ್ತವೆ. ಉದಾ: ಕಸ್ತಲೆ (ಕತ್ತಲೆ), ಇಸ್ಸೆ (ಇತ್ತೆ) ಅದರಲ್ಲಿಯೂ 'ಇಸೆ' ಎಂಬಲ್ಲಿ 'ಸ'ಕಾರದ ಉಚ್ಚಾರವೇ ವಿಶಿಷ್ಟವಾಗಿರುತ್ತದೆ. (ಬಹುಶಃ 'ಸ್ಟ್')ಕಾರವು ಈಗಿನ 'ಇಸೆ' ಎಂಬಲ್ಲಿಯ 'ಸ'ಕಾರದ ಉಚ್ಚಾರವೇ ಆಗಿರಬೇಕು.) ಹಾಗೆಯೇ ಕಸ್ತ್‌ಲೆ ಎಂಬಲ್ಲಿಯ 'ಸ್ತ್'ಕಾರದ ವರ್ಣವೂ ಮೇಲಿನ 'ಸ್'ಕಾರದ ಉಚ್ಛಾರಣೆಯ ಹಾಗೆಯೇ ಇದೆ. ತುಳು ನಾಡಿನಾದ್ಯಂತ ಕತ್ತಲೆ (ಕಸ್ತಲೆ), ಇತ್ತೆ (ಇಸ್ಸೆ) ಎಂದು ಬೇರೆಯವರು ಉಚ್ಚರಿಸಿದರೆ ಬ್ರಾಹ್ಮಣ ತುಳುವಿನಲ್ಲಿ ಅದು ಬದಲಾವಣೆ ಏಕೆ? ಇದಕ್ಕೆ ಕೇವಲ ಎರಡು ಕಾರಣಗಳಷ್ಟೇ-

೧. ಬ್ರಾಹ್ಮಣರಿಗೆ ತಮ್ಮದು ಬೇರೆ ತುಳು ಎಂದು ತೋರಿಸುವ ಮನಸ್ಸು.

೨. ನಿಜವಾಗಿಯೂ ಅದು ಅವರ ಮಾತೃಭಾಷೆಯಲ್ಲದಿರುವುದರಿಂದ, ಅದರ ಜಾಯಮಾನ ಸರಿಯಾಗಿ ತಿಳಿಯದೆ ಉಚ್ಛಾರಣೆಗಳಲ್ಲಿ ಎಡವುದು. ಈ ಎರಡು ಕಾರಣಗಳನ್ನು ಬಿಟ್ಟರೆ ಬೇರೆ ಯಾವ ಕಾರಣಗಳೂ ಇಲ್ಲ. ಬ್ರಾಹ್ಮಣ ತುಳುವಿನ ಸಂದರ್ಭದಲ್ಲಿ ಇವೆರಡೂ ಹೌದು.

ಇದು ಬ್ರಾಹ್ಮಣರು ತುಳುವಿನಲ್ಲಿ ಉದ್ದೇಶ ಪೂರ್ವಕವಾಗಿ ಮಾಡುತ್ತಿರುವುದೆಂದೇನೂ ನಾನು ಹೇಳುತ್ತಿಲ್ಲ. ಬದಲಾಗಿ ಯಾವುದೋ ವರ್ಣವನ್ನು ಸರಿಯಾಗಿ ಉಚ್ಚರಿಸುವುದಕ್ಕೆ ಆಗದಿರುವುದೇ ಅದಕ್ಕೆ ಕಾರಣವಾಗಿರಬಹುದು. ಮೇಲಿನ ಹೇಳಿದ 'ಸ್ಟ್'ಕಾರದ ಹಿನ್ನಲೆಯಲ್ಲಿ ಹೇಳುವುದಾದರೂ ಬಹುತೇಕವಾಗಿ ಅದು ತುಳುವಿನದೇ ಆದ 'ವ್'ಕಾರಳ ಹಿಂದೆ ಮುಂದೆ ಪ್ರಯೋಗವಾಗುತ್ತದೆ. ಹಾಗೆಯೇ 'ಉ್'ಕಾರದ ಹಿಂದೆ ಮುಂದೆಯೂ ಅದು ಬಳಕೆಯಾಗುವುದೇ

ಹೆಚ್ಚು. ಉದಾ: ಅಸ್ಟೆನ್, ಸ್ಟ್ಯಾಂದ್ ಇತ್ಯಾದಿ. ಇದಕ್ಕೆ ಇನ್ನು ಕೆಲವು ಉದಾಹರಣೆಗಳು :

ಬೂಟುಸ್ಟ್ - ಬಿದ್ದು (ಬೂರ್ತ್)

ಕೆರ್ಸ್ಟ್ - ಕೊಂದು (ಕೆರ್ತ್)

ನಿಂಚಿಸ್ಟ್ - ತುಂಬಿ (ದಿಂಜಿದ್)

ಕಟ್ಸ್ಸ್ಟ್ - (ಕಟ್ಟಿ) ಕಟ್ಯದ್

ಹೀಗೆ ಪದಾಂತ್ಯರದಲ್ಲಿಯೂ

ಸ್ಟ್ಬೆರ್ - ಇವರು (ಇಂಬೆರ್)

ಸ್ಟೀಕುಳು - ನೀವು (ನಿಕುಲು)

ಸ್ಟ್ತೊವ್ಪಡು - ಇರಬೇಕು (ಇಪ್ಪೊಡು/ಉಪ್ಪೊಡು)

ಹೀಗೆ ಪದಾರುಂಭದಲ್ಲಿಯೂ ಪ್ರಯೋಗವಾಗುತ್ತದೆ ಬೇರೆ ಕಾವ್ಯಗಳಲ್ಲಿಯೂ ಇದು ವ್ಯಾಪಕವಾಗಿ ಬಳಕೆಯಾಗುತ್ತಿದೆ. ಇದರ ಪ್ರಯೋಗಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ನಿಯಮವನ್ನೇ ಹೇಳಲಾಗುವುದಿಲ್ಲ. ಹೇಳಬಹುದಾದ ಒಂದೇ ಒಂದು ನಿಯಮವೆಂದರೆ ಈಗ ತುಳುಭಾಷೆಯಲ್ಲಿ ಅದರ ಉಚ್ಚಾರಣೆ ಮರೆಯಾಗಿದೆ ಎಂಬುದಷ್ಟೇ. ಇನ್ನೊಂದು ಕಾವ್ಯದಲ್ಲಿ (ದೇವಿ ಮಹಾತ್ಮೆ) 'ಸ್ಟ್'ಕಾರದ ಬದಲಿಗೆ 'ಸ್ಡ್' ಕಾರವೂ ಕಾಣಿಸಿಕೊಳ್ಳುತ್ತದೆ.

ಆದರೆ ಪಂಚ ದ್ರಾವಿಡ ಭಾಷೆಗಳಲ್ಲಿ ಮೂಲ ದ್ರಾವಿಡದ ಲಕ್ಷಣವನ್ನು (ತಮಿಳನ್ನು ಹೊರತು ಪಡಿಸಿ) ತುಂಬ ಚೆನ್ನಾಗಿ ಉಳಿಸಿಕೊಂಡಿರುವ ಭಾಷೆ 'ತುಳು' ಎಂಬುದೇ ಅದರ ಹೆಗ್ಗಳಿಕೆಯಾಗಿದೆ. ತುಳುವಿಗೆ ಇತರ ಭಾಷೆಗಳ ಕಡಿಮೆ ಸಂಪರ್ಕ ಹಾಗೂ ಬಳಕೆಯ ಸೀಮಿತತೆ ಇವೆಲ್ಲವೂ ಸೇರಿ ಆ ಭಾಷೆಯನ್ನು ಬಹುಮಟ್ಟಿಗೆ ಅದರ ಮೂಲ ರೂಪದಲ್ಲಿಯೇ ಉಳಿಸಿವೆ. ಹೀಗಿರುವಾಗ ಈ ಒಂದೇ ಒಂದು ವರ್ಣ ಲೋಪಗೊಳ್ಳುವ ಸಾಧ್ಯತೆಯಾದರೂ ಹೇಗೆ? ಈಗಾಗಲೇ ಹೇಳಿದಂತೆ ಕನ್ನಡದಲ್ಲಿ ಈಗ 'ಱ'ಕಾರ ಇಲ್ಲವೆಂದೇ ಸಾಮಾನ್ಯವಾಗಿ ನಂಬಲಾಗಿದೆ. ಆದರೆ ಅಚ್ಚಗನ್ನಡ ಪ್ರದೇಶಗಳಲ್ಲಿ (ಸಾಮಾನ್ಯವಾಗಿ ಉತ್ತರ ಕರ್ನಾಟಕದಲ್ಲಿ) ಈಗಲೂ 'ಱ'ಕಾರದ ಬಳಕೆ ಆಡುಮಾತಿನಲ್ಲಿ ಸ್ಪಷ್ಟವಾಗಿದೆ. ಹೀಗಿರುವಾಗ ತುಂಬ ಪ್ರತ್ಯೇಕವಾಗಿರುವ, ವ್ಯಾಪಕವಾಗಿ ತೆರೆದುಕೊಳ್ಳದಿರುವ ತುಳುವಿನ ಬರವಣಿಗೆಯಲ್ಲಿ ಪ್ರಾಚೀನ ವರ್ಣಗಳು ಲೋಪಗೊಳ್ಳುವುದಾದರೂ ಹೇಗೆ? (ಕೆಲವರು ಹಳೆಯ ತುಳುವಿನಲ್ಲಿ 'ಱ'ಕಾರದ ಬಳಕೆಯಿತ್ತು ಎಂದು ಹೇಳುವುದನ್ನು ಈ ಕಾರಣಕ್ಕಾಗಿಯೇ ಒಪ್ಪಲಾಗುತ್ತಿಲ್ಲ, ಬಹುಶಃ ಬರವಣಿಯ ತುಳುವಿನಲ್ಲಿ ಅದನ್ನು ಉದ್ದೇಶಪೂರ್ವಕವಾಗಿ ಬಳಸಿರಬೇಕು.

ಬೇರೆ ಸಂದರ್ಭದಲ್ಲಿ (ಬೇರೆ ಸ್ವರಗಳ ಸಮೀಪ) ಕೆಲವೊಮ್ಮೆ ಅದು ಪ್ರಯೋಗವಾಗುವುದಾದರೂ ವಿರಳವೆಂದೇ ಹೇಳಬೇಕು. ಅದು ಹೆಚ್ಚು ಬಳಕೆಯಾಗುತ್ತಿರುವ ರೀತಿಯನ್ನು ಗಮನಿಸಿದರೆ ತುಳುವಿನದ್ದೇ ಆದ ಸ್ವರಗಳ ಉ್ ಮತ್ತು ವ್ ಮುಂದೆ ಸರಿಯಾಗಿ ಉಚ್ಚಾರಣೆಗೆ ಒಳಗಾಗದಾಗಲೇ ಅದರ ಪ್ರಯೋಜನವಾಗುತ್ತಿದೆ ಎಂಬುದು ಗಮನಕ್ಕೆ ಬಾರದಿರದು. ಈಗಾಗಲೇ ಹೇಳಿದ 'ಉ್', 'ವ್'ಕಾರಗಳ ಉಚ್ಚಾರಣೆ ಅಷ್ಟು ಸುಲಭವಲ್ಲ. ಬೇರೆ ಮಾತೃ ಭಾಷೆಯನ್ನು ಆಡುತ್ತಿದ್ದ ಬ್ರಾಹ್ಮಣರು ಈ ಸ್ವರಗಳ ಉಚ್ಚಾರಣೆಯಲ್ಲಿ ಬಹಳಷ್ಟು ತಿಣುಕಾಡುತ್ತಿದ್ದಿರಬೇಕು. ಈಗಲೂ ದಕ್ಷಿಣ ಕನ್ನಡದಲ್ಲಿ ಕನ್ನಡ ಮಾತಾಡುವವರು (ಉದಾ: ಅರೆಭಾಷೆಯನ್ನಡುವ ಗೌಡರಿಗೆ) ಇದರ ಉಚ್ಚಾರಣೆ ಬರದೆ ನಗೆಗೀಡಾಗುತ್ತಾರೆ.

ಇದು ಸ್ವರಗಳ ಮಾತಾಯಿತು. ತುಳುವಿನಲ್ಲಿ ಇನ್ನೊಂದು ವಿಶಿಷ್ಟ ವರ್ಣವೂ ಪ್ರಯೋಗವಾಗುವುದಿದೆ. ಅದು ಚಕಾರ ಮತ್ತು ಸಕಾರಗಳ ನಡುವಿನ ಅಥವಾ ಮಿಶ್ರಿತ ರೂಪ. ತೆಲುಗಿನಲ್ಲಿ ಈ 'ವರ್ಣ' ಪ್ರಯೋಗದಲ್ಲಿದೆ. ಉದಾ: ಚೂಡು (ನೋಡು) ಮೇಲ್ನೋಟಕ್ಕೆ ಇದು 'Chuudu' ಎಂದು ಕಾಣುವುದಾದರೂ 'ಚ'ಕಾರವನ್ನು ಪೂರ್ಣವಾಗಿ ಉಚ್ಚರಿಸದೆಯೇ 'ಸ'ಕಾರವನ್ನು ಉಚ್ಚರಿಸುವ ಕ್ರಮಕ್ಕೆ ಸಂಬಂಧಿಸಿರುವುದು. ಆಗ ಅದರ ಉಚ್ಚಾರಣೆ ಬಹುಮಟ್ಟಿಗೆ 'tsuudu'ಎಂದಾಗುತ್ತದೆ. ತುಳುವಿನಲ್ಲಿಯೂ ಅದರ ಬಳಕೆ ಹಳ್ಳಿಗಳಲ್ಲಿ ಅದರಲ್ಲಿಯೂ ದಲಿತರಲ್ಲಿ ಇದೆ. ಇವರೆಲ್ಲ ಅಚ್ಚ ತುಳುವರಾದುದರಿಂದಲೇ ಈಗಲೂ ಅದನ್ನು ಉಳಿಸಿಕೊಂಡಿದ್ದಾರೆ. ಉದಾ: ಚೀಲೋ (ಇದರ ಉಚ್ಚಾರಣೆ (tseelo) ಚೀಯ (ಇದರ ಉಚ್ಚಾರಣೆ tseeya) ಚೋಮ (tsooma). ಹಳ್ಳಿ ಕಡೆ ಈಗಲೂ ದಲಿತರ ಮಾತುಗಳಲ್ಲಿ ಈ ವರ್ಣವನ್ನು ಕೇಳಬಹುದು. ಆದರೆ ತುಳು ನಿಘಂಟಿನಲ್ಲಿ ತುಳುವಿನ ಈ ಮುಖ್ಯವಾದ ವರ್ಣದ ಕುರಿತು ಉಲ್ಲೇಖವಿಲ್ಲದಿರುವುದು ಆಶ್ಚರ್ಯವಾಗಿದೆ.

ನನಗನಿಸುವಂತೆ ಇಂತಹ ವರ್ಣವೊಂದನ್ನು ಉಚ್ಚರಿಸುವ ಮತ್ತು ಬರೆಯುವುದು ತಿಣುಕಾಡಿದುದರ ಫಲವೇ 'ಸ್ತ' ಕಾರದ ಹುಟ್ಟಾಗಿರಬೇಕು. ಬ್ರಾಹ್ಮಣ ತುಳುವಿನಲ್ಲಿರುವ 'ಕಸ್ತಲೆ', 'ಇಸ್ಸೆ' ಎಂಬುದು ಈಗಾಗಲೇ ಹೇಳಿರುವ 'ಚ' ಮತ್ತು 'ಸ' ಕಾರದ ನಡುವಿನ ವರ್ಣವೊಂದರ ಉಚ್ಚಾರಣೆಯ ವಿಫಲ ಪ್ರಯತ್ನವಲ್ಲದೇ ಬೇರೇನೂ ಅಲ್ಲ. ಅಥವ ಅದು ಅದಕ್ಕೆ ಸಮೀಪವಾದ ಉಚ್ಚಾರಣೆ ಎಂದು ಆ ಎರಡೂ ಉಚ್ಚಾರಗಳನ್ನು ಕೇಳಿಸಿಕೊಂಡವರಿಗಷ್ಟೇ ತಿಳಿಯಬಲ್ಲುದಾಗಿದೆ. ಇವೆರಡೂ ವರ್ಣಗಳನ್ನು ನಾನು ಕೇಳಿಸಿಕೊಂಡಿರುವುದರಿಂದ ನನಗಂತೂ ಅದರ ಬಗೆಗೆ ಅನುಮಾನವಿಲ್ಲ. ಈಗಿನ ಬ್ರಾಹ್ಮಣ ತುಳುವಿನಲ್ಲಿ 'ಚ' ಕಾರ ಮತ್ತು 'ಸ' ಕಾರದ ನಡುವಿನ ವರ್ಣಕ್ಕೆ ಸಮೀಪದ ವರ್ಣಕ್ಕೆ ಉದಾಹರಣೆಗಳು (ಕಸ್ತಲೆ, ಇಸ್ಸೆ) ಸಿಗುವುದರಿಂದ 'ಸ್ತ' ಕಾರದ ಉಚ್ಚಾರಣೆ ಬಹುಮಟ್ಟಿಗೆ ಅದನ್ನು ಹೋಲುವಂತೆ (ಪದ ಪ್ರಯೋಗದ ಆಧಾರದಿಂದ) ಕಾಣುವುದರಿಂದ ಹಿಂದಿನ ಕಾಲದ ಬ್ರಾಹ್ಮಣರು ತುಳುವಿನ ವಿಶೇಷವಾದ ಆ ವರ್ಣವನ್ನು ಕಲಿಯುವ, ತಮ್ಮದಾಗಿಸಿಕೊಳ್ಳುವ ಒಂದು ಪ್ರಯತ್ನದ ಫಲವಾಗಿ ಈ 'ಸ್ತ' ಕಾರವನ್ನು ಹೊಸದಾಗಿ ಹುಟ್ಟು ಹಾಕಿದರು ಎಂದೆನಿಸುತ್ತದೆ. ಅಂದರೆ 'ಸ್ತ' ಕಾರವು ಹಳೆಯ ತುಳುವಿಗೆ ಸಹಜವಾದುದಲ್ಲ ಎಂದು ಇದರಿಂದ ಹೇಳಿದಂತೆಯೂ ಆಯಿತು.

ಕನ್ನಡ ತುಲು ಭಾಗವತಗಳು : ತೌಲನಿಕ ಅಧ್ಯಯನ

'ತುಂಗಕುಲೊಂತಾ ಧರಣೀಸುರೆ ವಿಷ್ಣು ರೆಚೀತಿ' ತುಳು ಭಾಗವತ ಸದ್ಯಕ್ಕೆ ತುಳುವರ ಮಹಾಕಾವ್ಯವೆಂದೇ ಮೊದಲ ಬಾರಿಗೆ ಸಿಕ್ಕಿದ ಕಾರಣಕ್ಕೆ ಪರಿಗಣಿತವಾಗಿತ್ತು. ಪ್ರೌಢವಾದ ಕಾವ್ಯ ರಚನೆಗೆ ಈ ಭಾಷೆ ಒಗ್ಗಲಾರದು. ಅದರಲ್ಲೂ ಆ ರೀತಿಯ ಕಾವ್ಯಗಳು ರಚನೆಯಾಗಿಲ್ಲ ಎನ್ನುವ ಆಪಾದನೆ ವಿಷ್ಣುತುಂಗನ ಮೂಲಕ ತಿರಸ್ಕೃತವಾಗಿದೆ. ಸಂಸ್ಕೃತ ಮತ್ತು ಕನ್ನಡ ಪದಗಳೊಂದಿಗೆ ತುಳುವನ್ನು ಬೆರೆಸುವುದರ ಮೂಲಕ ಅದನ್ನು ಜನಸಾಮಾನ್ಯರಿಗೇಕೆ? ಪಂಡಿತರಿಗೇ ಕಬ್ಬಿಣದ ಕಡಲೆಕಾಯಿಯನ್ನಾಗಿಸಬಹುದೆಂಬುದನ್ನು ಕವಿ ತೋರಿಸಿಕೊಡುತ್ತಾನೆ.

ತುಳು ಭಾಗವತದ ಸಂಪಾದಕರಾದ ವಿದ್ವಾನ್ ಪುಣಿಂಚತ್ತಾಯರು ಕಾವ್ಯಕ್ಕೆ 'ಶ್ರೀ ಭಾಗವತೊ' ಎನ್ನುವ ಹೆಸರನ್ನಿತ್ತಿದ್ದಾರೆ. ಕಾವ್ಯವನ್ನು ಆದ್ಯಂತ್ಯವಾಗಿ ಓದಿದ ಬಳಿಕ ನನಗೆ ಈ ಹೆಸರಿನ ಬಗ್ಗೆ ಅಭಿಪ್ರಾಯ ಭೇದವಿದೆ. ಅದಕ್ಕಿಂತ ಮುಂದೆ ಕಾವ್ಯದ ಹೆಸರಿನ ಕುರಿತಾಗಿಯೇ ಒಂದೆರಡು ಮಾತುಗಳನ್ನು ಬರೆಯಬೇಕು.

ಕೃತಿಗೆ ಕವಿಯೋರ್ವ ಹೆಸರನ್ನಿಡುವಾಗ ಅದರ ಕುರಿತು ನೇರವಾಗಿ ಹೇಳುವ ಕ್ರಮವಿದೆ. ಮಾದರಿಗಾಗಿ ಕೃತಿಗೆ 'ನಾಮಂ ಹರಿಶ್ಚಂದ್ರ ಚಾರಿತ್ರ್ಯ' ಎಂದು ರಾಘವಾಂಕ 'ಭರತೇಶ ವೈಭವ'ವೆಂಬ ಕೃತಿಯನಿದನೊರೆದೆನು' ಎಂದು ರತ್ನಾಕರವರ್ಣಿ ಹೇಳಿರುವುದನ್ನು ನೆನಪಿಸಬಹುದು. ಆಶ್ವಾಸದ ಕೊನೆಯ ಗದ್ಯದಲ್ಲಿ ಕೃತಿಯ ನಾಮದ ಕುರಿತು ಹೇಳುವುದು ಇನ್ನೊಂದು ಕ್ರಮ. ಪಂಪ, ರನ್ನ ಮೊದಲಾದ ಚಂಪೂ ಕವಿಗಳ ಅಭ್ಯಾಸ ಈ ತೆರನದ್ದು. ಈ ಎರಡೂ ಕ್ರಮಗಳಿಗೆ ಹೊರತಾಗಿ ಕೆಲವು ಕಾವ್ಯಗಳು ನೇರವಾಗಿ ಹೆಸರನ್ನು ಸೂಚಿಸದೆ ಅದನ್ನು ಹ್ರಸ್ವಗೊಳಿಸಿಯೋ ಇಲ್ಲವೇ ಅದಕ್ಕೆ ಸಂವಾದಿಯಾಗಿ ಇತರ ಪದಗಳನ್ನು ಬಳಸುವುದೋ ಅಥವಾ ಹೆಸರಿನ ಕಡೆಗೆ ಒಂದು ದಿವ್ಯ ನಿರ್ಲಕ್ಷ್ಯವನ್ನು ತೋರುವುದರ ಮೂಲಕವೋ - ಮೇಲಿನ ಎರಡೂ ಕ್ರಮಗಳಿಂದ ಭಿನ್ನವಾಗುತ್ತವೆ. ನಿತ್ಯಾತ್ಮ ಶುಕಯೋಗಿ ವಿರಚಿತ 'ಭಾಗವತ' ವಿಷ್ಣು ತುಂಗನ 'ತುಳು ಭಾಗವತ' ಈ ಮಾದರಿಗಳು.

ಸಂಪಾದಕರು (ಆಗಲೇ ಹೇಳಿರುವಂತೆ) 'ಶ್ರೀ ಭಾಗವತೊ' ಎಂಬುದಾಗಿ ವಿಷ್ಣು ತುಂಗನ ಕೃತಿಯನ್ನು ಕರೆದಿದ್ದಾರೆ. ಆದರೆ ಕಾವ್ಯದಲ್ಲಿ, ಅದರ ಅಧ್ಯಾಯದ ಮುಕ್ತಾಯದಲ್ಲಿ ಬೇರೆ ಬೇರೆ ಹೆಸರುಗಳನ್ನು ಬಳಸಲಾಗಿದೆ. ಅದರಲ್ಲಿ ಮುಖ್ಯವಾದವುಗಳು 'ಶ್ರೀ ಭಾಗವತಾರ್ಥ', 'ಶ್ರೀ ಭಗವತ್ಕಥೇ', 'ಶ್ರೀ ಭಾಗವತೊ'- ಈ ನಾಮಗಳು. ಇನ್ನೂ ಕೆಲವು ಹೆಸರುಗಳು ಉಲ್ಲೇಖಿತವಾಗಿವೆಯಾದರೂ ಅವುಗಳು ಈ ಮೂರು ಮುಖ್ಯ ಹೆಸರುಗಳಿಗೆ ಸಂವಾದಿಯಾಗಿಯೇ ಬಳಕೆಯಾಗುತ್ತವೆ. (ಉದಾ: ಶ್ರೀ ಭಾಗವತಾರ್ಥೊ - ವರ ಭಾಗವತಾರ್ಥೋ) ಇದರಲ್ಲಿ 'ಶ್ರೀ

ಭಾಗವತಾರ್ಥೋ' ಎನ್ನುವ ಹೆಸರು ಏನಿಲ್ಲವೆಂದರೂ ೨೦ ಬಾರಿ ಉಲ್ಲೇಖಿತವಾಗಿದೆ. 'ಶ್ರೀ ಭಗವತ್ಕಥೆ' ೮ ಸಲವೂ 'ಶ್ರೀ ಭಾಗವತೋ'ವು ಕೇವಲ ಒಂದೇ ಕಡೆಯಲ್ಲಿಯೂ ಬಳಕೆಯಾಗಿವೆ.

ಮೂರು ಮುಖ್ಯ ಹೆಸರುಗಳಿಗೆ ಸಂವಾದಿಯಾಗಿ ಇತರ ಪದಗಳು ಬಳಕೆಯಾಗಿವೆ ಎಂದೆ. ಇಲ್ಲಿ ಒಂದು ಪ್ರಶ್ನೆ - ಯಾವುದಕ್ಕೆ ಯಾವುದು ಸಂವಾದಿ? 'ಶ್ರೀ ಭಾಗವತೊ' ಎನ್ನುವುದಕ್ಕೆ 'ಶ್ರೀ ಭಾಗವತಾರ್ಥೋ'ಸಂವಾದಿಯೇ ಅಥವಾ 'ಶ್ರೀ ಭಾಗವತಾರ್ಥೋ' ಎನ್ನುವುದಕ್ಕೆ 'ಶ್ರೀ ಭಾಗವತೊ' ಸಂವಾದಿಯೇ? ಈ ಪ್ರಶ್ನೆಗೆ ಕಾವ್ಯದ ಆಧಾರದಿಂದಲೇ ಉತ್ತರಿಸುವುದಾದರೆ 'ಶ್ರೀ ಭಾಗವತಾರ್ಥೋ' ಎನ್ನುವುದಕ್ಕೆ 'ಶ್ರೀ ಭಾಗವತೊ' ಎನ್ನುವುದು ಸಂವಾದಿಯಾದ ಪದ. ಎಂದರೆ 'ಶ್ರೀ ಭಾಗವತೊ' ಎನ್ನುವುದು ಸಂಸ್ಕೃತದ 'ಶ್ರೀ ಮದ್ಭಾಗವತಂ'. ಆದರೆ 'ಶ್ರೀ ಭಾಗವತಾರ್ಥೊ' ಎಂದಾಗ ಅದು ಶ್ರೀ ಮದ್ಭಾಗವತದ ಅರ್ಥವನ್ನು ಇನ್ನೊಬ್ಬ ಕಂಡುಕೊಂಡ ರೀತಿ ಎಂದರ್ಥವಾಗುತ್ತದೆ. ವಿಷ್ಣುತುಂಗನ ಉದ್ದೇಶವೇ ಅದಾದುದರಿಂದ ಕಾವ್ಯನಾಮವೂ, ಅನ್ವರ್ಥಕವಾಗಲೇಬೇಕು. ಆ ದೃಷ್ಟಿಯಿಂದ ಕಾವ್ಯಕ್ಕೆ ಒಪ್ಪುವ, ಕವಿ ಮತ್ತೆ ಮತ್ತೆ ಪುನರಾವರ್ತಿಸುವ ಹೆಸರು 'ಶ್ರೀ ಭಾಗವಾತರ್ಥೊ'. ಅದೇನಿದ್ದರೂ ಕೊನೆ ಪಕ್ಷ 'ಶ್ರೀ ಭಾಗವತಾರ್ಥೊ' ಅಥವಾ 'ಶ್ರೀ ಭಾಗವತೊ' ಎನ್ನುವ ಹೆಸರುಗಳಿಂದಾದರೂ ಕಾವ್ಯವನ್ನು ಕರೆಯಬಹುದು. 'ಕರ್ಣಾಟ ಭಾರತ ಕಥಾ ಮಂಜರಿ' ಅಥವಾ 'ಗದುಗಿನ ಭಾರತ' ಎಂದ ಹಾಗೆ.

ಸಂಸ್ಕೃತ ಪುರಾಣವನ್ನು ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿದ ಕವಿಯ ನಾಮದ ಕುರಿತು ಸ್ಪಷ್ಟತೆ ಇಲ್ಲದಿರುವುದಾದರೂ ನಿತ್ಯಾತ್ಮ ಶುಕಯೋಗಿ ವಿರಚಿತ 'ಕನ್ನಡ ಭಾಗವತ'ವೆಂದು ಆ ಕಾವ್ಯವನ್ನು ಕರೆಯಲಾಗುತ್ತದೆ. ಆ ಕಾವ್ಯವನ್ನು ಮುಂದಿಟ್ಟುಕೊಂಡು, ಜತೆಯಲ್ಲಿ ಸಂಸ್ಕೃತ ಭಾಗವತದತ್ತಲೂ ಕಣ್ಣಾಡಿಸಿಕೊಂಡು, ತುಳುವಿನಲ್ಲಿ ಬರೆಯಲಿಕ್ಕೆ ಹೊರಟ 'ವಿಷ್ಣುತುಂಗನ' ಬಗ್ಗೆ ಈ ಗೊಂದಲವಿಲ್ಲ. ವಿಷ್ಣು ತುಂಗನ ಕಾವ್ಯಕ್ಕೆ ಆಕರ ಸಂಸ್ಕೃತದಲ್ಲಿದೆಯಾದರೂ ಆದರ್ಶ ಕನ್ನಡದ್ದೇ. ಅದರೊಂದಿಗೆ ತುಳು ಭಾಗವತವನ್ನು ಹೋಲಿಸಿ ನೋಡುವುದೇ ಈಗಿನ ಉದ್ದೇಶ. ಕನ್ನಡ - ತುಳು ಭಾಗವತಗಳ ತೌಲನಿಕ ಅಧ್ಯಯನವೆಂದಾಗ ಮುಖ್ಯ ಗಮನವಿರುವುದು ತುಳು ಭಾಗವತದತ್ತಲೇ. ಅದು ಕನ್ನಡ ಭಾಗವತವನ್ನು ಅನುಸರಿಸಿದ, ಹಾಗೆ ಅನುಸರಿಸುವಾಗಲೂ ಅದರ ವೈಶಿಷ್ಟ್ಯವೇನು ಎನ್ನುವುದರ ಕುರಿತಾಗಿಯೇ.)

ಈ ಎರಡು ಕಾವ್ಯಗಳು ತುಂಬ ವಿಸ್ತಾರವಾದವುಗಳು. ಪೂರ್ಣ ಪ್ರಮಾಣದಲ್ಲಿ ಅವುಗಳ ತುಲನಾತ್ಮಕ ಅಧ್ಯಯನವೆಂದರೆ ದೊಡ್ಡ ಗ್ರಂಥವೊಂದನ್ನು ಬರೆದಂತೆಯೇ. ಆ ಸಾಹಸಕ್ಕೆ ಇಲ್ಲಿ ಕೈ ಇಕ್ಕದೆ 'ಅನ್ನದ ಗುಣ ಅಗುಳಿನಲ್ಲಿ' ಎಂಬ ಹಾಗೆ ಸಂಕ್ಷಿಪ್ತವಾದ ವಿವರಣೆಯಾದರೂ ಸಮಗ್ರ ಕಾವ್ಯಕ್ಕೆ ಅನ್ವಯವಾಗುವ ರೀತಿಯನ್ನು ಅನುಸರಿಸಲಾಗಿದೆ. ಆ ದೃಷ್ಟಿಯಿಂದ ತೌಲನಿಕವಾಗಿ ಕಾವ್ಯಗಳನ್ನು ನೋಡುವಾಗ ಅನುವಾದಿತ ಪದ್ಯಗಳು, ಪ್ರೇರಿತ ಪದ್ಯಗಳು, ಸ್ವರಚನೆಗಳು, ಮೂಲಕ್ಕಿಂತ ಸೊಗಸಾದ ರಚನೆಗಳು ಎನ್ನುವ ನಾಲ್ಕು ಶಿರೋನಾಮೆಯಡಿಯಲ್ಲಿ ಬರವಣಿಗೆಯನ್ನು ಬೆಳೆಸಲಾಗಿದೆ.

ಅನುವಾದಿತ ಪದ್ಯಗಳು: ಕನ್ನಡ ಕವಿಗಳು ಸಂಸ್ಕೃತ ಕಾವ್ಯಗಳನ್ನು ಅನುಸರಿಸುವಾಗ ಮಾಡುವ 'ನೊಣಂಪ್ರತಿಯ' ಮಾದರಿಗಳಿವು. ಕನ್ನಡ ಭಾಗವತವನ್ನು ಆದರ್ಶವಾಗಿರಿಸಿಕೊಳ್ಳುವ ಕವಿ ಇಲ್ಲಿ ಯಥಾಪ್ರಕಾರವಾಗಿ ಕಣ್ಣು ಮುಚ್ಚಿಕೊಂಡು ತುಳುವಿಗೆ ಅನುವಾದಿಸುತ್ತಾನೆ. ಒಂದರ್ಥದಲ್ಲಿ ಆಗ ಆತ ಬರಿಯ 'ಲಿಪಿಕಾರ'- 'ನಿತ್ಯಾತ್ಮ ಶುಕಯೋಗಿಯೇ' ಕವಿ! ಮಾದರಿಗಾಗಿ ಕೆಳಗಿನ ಪದ್ಯಗಳನ್ನೇ ನೋಡಬಹುದು.

ನೈಮಿಷಾರಣ್ಯದಲ್ಲಿ ಶೌನಕಾದಿಗಳ ಒಡ್ಡೋಲಗಕ್ಕೆ ಸೂತ ಮುನಿ ಬಂದಾಗ ಅವರು ಇತಿಹಾಸ ಪುರಾಣ ಕಥೆಯನ್ನು ಮನುಷ್ಯರ ಉದ್ಧಾರಕ್ಕಾಗಿ ಹೇಳು ಎಂದು ಮುನಿಗಳು ಕೇಳಿದರು. ಏಕೆಂದರೆ -

ಮಂದಭಾಗ್ಯೆರತೀ ಮನುಷ್ಯೆರ್ ಮಂದಬುದ್ಧೆರತೇನ್ಯಲಾ |
ಮಂದಕರ್ಮ ಫಲಾಶ್ರಿತೆಕ್ಕುಳು ಮಂದಚೇತನಭಾವೆರ್
ಕುಂದ್‌ಸ್ಪೀನಲ್ಪಾಯುಷೇರ್ಕುಳು ಶೌಚಸತ್ಯವಿಹೀನೆರ್
ಇಂದಿನೀ ಕಲಿಕಾಲ ಜಂತುಕ್ ಮುಕ್ತಿಯೆಂಚನು ಕೂಲಿಪೂ ||೨೬||

(ಶ್ರೀ ಭಾಗವತೊ - ಪುಟ ೮)

ಇದನ್ನೇ ಕನ್ನಡ ಭಾಗವತದಲ್ಲಿ ಹೀಗೆ ಹೇಳಲಾಗಿದೆ.

ಮಂದ ಭಾಗ್ಯರಲಾ ಮನುಷ್ಯರು
ಮಂದ ಮತಿಗಳಲಾ ವೃಥಾಶ್ರಮ
ದಿಂದ ಮಂದೋದ್ಯೋಗಗಿಳು ಪುರುಷಾರ್ಥ ವಿಷಯದಲಿ
ಇಂದಿನೀ ಯುಗದೊಳಗೆ ಕಾಲನ
ಬಂಧಿಯನು ಕಳಚುವಡುಪಾಯುವ
ನೊಂದನೇ ನಿಶ್ಚಯಿಸಿ ಕರುಣಿಸಬೇಹುದೆಮಗೆಂದ ||೧೨||

(ಕನ್ನಡ ಭಾಗವತ , ಪ್ರ. ಸ್ಕಂಧ)

ಇಲ್ಲಿಯ 'ಮಂದಭಾಗ್ಯೆರ್' ಮನುಷ್ಯೆರ್ ಮಂದಬುದ್ಧೆರ್ ಇತ್ಯಾದಿ ಪದಗಳೆಲ್ಲ ಕನ್ನಡ ಭಾಗವತದ್ದೇ. ಮಾತ್ರವಲ್ಲ ಧಾಟಿಯಲ್ಲೂ ವ್ಯತ್ಯಾಸವಿಲ್ಲ. 'ಅಲಾ' ಎನ್ನುವುದಕ್ಕೆ 'ಅತಾ' ಎನ್ನುವ ಸಂಭೋದನಾ ವಾಚಕಪದವನ್ನು ಗಮನಿಸಬೇಕು.

ನಿತ್ಯಾತ್ಮ ಶುಕಯೋಗಿಯಷ್ಟೇ ನಮ್ಮ ಕವಿಯು ಶ್ರೀಕೃಷ್ಣನ ಭಕ್ತ. ಪ್ರಥಮ ಸ್ಕಂಧದಲ್ಲಿ ಪಾಂಡವರ ಬಾಯಿಯಿಂದ ಕೃಷ್ಣನನ್ನು ಹೊಗಳುವ ರೀತಿ ಹೀಗೆ :-

ನಸುಹಾಸವಿಲಾಸೊಮು ಕೆಂಪುದೃಶಂ ರದನೊಂಕುಳ ಪಂಥೀ
ವಿಸಜೋದರ ಗಂಡೊಮು ಮಂಡಿಕೆಯಾ ವರಕುಂಡಲ ಹಾರಂ
ಪೊಸತಾಯಿ ಸುಕೌಸ್ತುಭ ಕಂಧರೊಮಾ ವಕ್ಷಸ್ಥಲೊ ಪೀತಾ
ವಸನೋ ಚುಳಿನಾಭಿಯು ಶ್ರೀ ಚರಣಂಟ್‌ತೆ ಚೋಜೊಡು ಸ್ವಾಮಿ ||೨೭||

(ಶ್ರೀ ಭಾಗವತೊ ಪ್ರ. ಸ್ಕಂಧ ಪು. ೭೭)

ಈ ಭಾವ ಕನ್ನಡ ಭಾಗವತದಲ್ಲಿ ಹೀಗಿದೆ :-

ಸಿರಿಮೊಗದ ನಸುನಗೆಯ ಕೆಂಪೆಸ
ವರಳುಗಂಗಳ ದಂತಪಂಕ್ತಿಯ
ಕೊರಳ ಕೌಸ್ತುಭಹಾರ ಮಣಿಗಳ ಮಕರ ಕುಂಡಲದ
ಉರದ ಸರಿವತ್ಸದ ಸುನಾಭಿಯ
ಮೆರೆವ ಕಾಂಚೀಗಣದ ಪೀತಾಂ
ಬರದ ಮಂಗಳ ಮೂರ್ತಿಯಲಿ ಗೋಚರಿಸಬೇಕೆಂದ ||೪೪||

(ಕನ್ನಡ ಭಾಗವತ, ಪ್ರ. ಸ್ಕಂಧ ಪು:೨೦)

ಇಲ್ಲಿಯ ನಸುಹಾಸೊ > ನಸುನಗೆ, ಕೆಂಪುದೃಶಂ > ಕೆಂಪೆಸೆ, ದಂತ ಪಂಕ್ತಿ > ದಂತ ಪಂಥಿ, ಪೀತಾವಸನೊ > ಪೀತಾಂಬರ, ಸುನಾಭಿ > ಚುಳಿನಾಭಿ - ಈ ಪ್ರಯೋಗಗಳು ಗಮನೀಯ. ಶುಕಯೋಗಿ 'ನಗೆ' ಎನ್ನುವ ಒಂದಾದರೂ ಅರ್ಥಪೂರ್ಣ ಪದವನ್ನು ಪ್ರಯೋಗಿಸಿರುವನಾದರೂ ವಿಷ್ಣು ತುಂಗ ತುಳುವಿನ ಜಾಯಮಾನಕ್ಕೆ ಒಗ್ಗುವ ಒಂದು ಪದವನ್ನೂ ಬಳಸದೆ ಸಂಸ್ಕೃತ ಭೂಯಿಷ್ಠವಾಗಿಯೇ ವರ್ಣನೆಗಳನ್ನು ಮಾಡಿ ಬಿಡುತ್ತಾನೆ. ಇನ್ನೊಂದು ಮುಖ್ಯ ವಿಷಯವೆಂದರೆ ಕನ್ನಡದಲ್ಲೇನೂ ಸಂಸ್ಕೃತ ಪದಗಳ ಬೆರಕೆ ನಾದಮಾಧುರ್ಯವನ್ನು ಕೊಡುತ್ತದೆಯಾದರೂ ವಿಷ್ಣುತುಂಗನ ಪದ್ಯದಲ್ಲಿ ಆ ರೀತಿಯ ಗೇಯತೆಯೂ ಇಲ್ಲದೆ ನೀರಸವೆನಿಸುತ್ತದೆ.

ಇದೇ ರೀತಿಯ ಇನ್ನೊಂದು ವರ್ಣನೆ, ಅದು ಶ್ರೀಕೃಷ್ಣ ಪಾಂಡವರನ್ನು ಸಂತಯಿಸಿ ದ್ವಾರಕೆಗೆ ಮರಳುವ ಸಂದರ್ಭ. ಆಗ ದ್ವಾರಕೆಯ ವರ್ಣನೆ

ಪುರಲಕ್ಷ್ಮಿ ತಟಾಕರವಿಂದ ಗುಣಾ ಕಳಹಂಸೆರೆ ಗೀತಂ
ಮರಿತುಂಬಿತ ಗಾನೊಮು ಕೋಗಿಲೆರೇಕಳರಾವ ವಿನೋದಂ
ಮರುಟಳ್ಳ ಫಲೊಂಕುಳೆ ಪುಷ್ಪರಸಂತಾ ಮಾರುತಗಂಧಂ
ತರಸೀಕ್ಷಿತ್ ಮೆಲ್ಲನೆ ಯಾತ್ರಿತೆರ್ ದ್ವಾರಾಲಯಂಕಾವ ||೨೭||

(ಶ್ರೀ ಭಾಗವತೊ ಪ್ರ. ಸ್ಕಂಧ ಪು. ೬೭)

ಇದಕ್ಕೆ ಆಧಾರ ಕನ್ನಡ ಭಾಗವತದ ಈ ಪದ್ಯ

ಪುರದ ವರಲಕ್ಷ್ಮಿಯನು ಕಮಲಾ
ಕರದ ಕಳಹಂಸಿಗಳ ಗತಿಯನು
ಮೊರವೆ ತುಂಬಿಯ ಗೀತವನು ಕೋಗಿಲೆಯ ಸುಸ್ವರದ
ಭರಿತ ಫಲಭಾರದಲಿ ಕುಸುಮೋ
ತ್ಕರದಲೆರಗಿದ ಕಲ್ಪತರುಗಳ
ತರತರದ ತಲೆವಾಗುಗಳನೀಕ್ಷಿಸುತ ನಡೆತಂದ ||೨೧||

(ಕನ್ನಡ ಭಾಗವತ ಪ್ರ.ಸ್ಕಂಧ)

ಇಲ್ಲಿಯೂ ಮತ್ತದೇ ಸಮಸ್ಯೆ. ಸಂಸ್ಕೃತ ಪದಗಳ ಮಣಭಾರವನ್ನು ತುಳುಭಾಷೆಯ ಮೃದುಲ ಪ್ರತ್ಯಯಗಳು ತಾಳದೇ ಕುಸಿಯುವಂತಿವೆ.

ಅಂತಹದೇ ಇನ್ನೊಂದು ಪದ್ಯ. ಸೂತನು ಶೌನಕಾದಿಗಳಿಗೆ ವಿಷ್ಣುವಿನ ವಿಶ್ವರೂಪದ ವರ್ಣನೆ ಮಾಡುವ ಸಂದರ್ಭ-

ಪಾತಳೊ ಪದಂ ಪ್ರಪದಂಟ್ ರಸಾತಳೊ, ಜಂಘೆಟ್ ಸ್ವಾಮಿ
ಏತೊಂಡ್ ತಳಾತಳೊ, ಜಾನುಟ್‌ಪಾ ಸುತಳಂ ತುಡೆಟ್‌ಪ್ಪ-
ಪಾತೊಂಡ್ ಮಹಾತಳೊಮೊಕ್ಕಟ್‌ಪಾ ವಿತಳಂ ಅಳತಂಕುಳೆ
ಧಾತಾರಿ ಧರೀತ್ತೆರ್ ಸ್ತಂಭಸಮಂ ಚಿತ್ತೇಳ್ ಜಗತ್ತೀ ||೨೭||

(ಶ್ರೀ ಭಾಗವತೊ ದ್ವಿ. ಸ್ಕಂಧ ಪು. ೨೧೦)

ಇದಕ್ಕೆ ಸಂವಾದಿಯಾಗಿ ಕನ್ನಡ ಭಾಗವತದ ವರ್ಣನೆ ಹೀಗಿದೆ -

ಚರಣದಲಿ ಪಾತಾಳವಿರೆ ಮೇ
ಲಿರೆ ರಸಾತಳ ಗುಲ್ಫದಲಿ ಮೆರೆ
ದಿರೆ ಮಹಾತಳವಿರೆ ತಳಾತಳವಮಳ ಜಂಘೆಯಲಿ
ಇರೆ ಸುತಳ ಜಾನುಗಳಲೆಸೆದೊ
ಪ್ಪಿರೆ ವಿತಳ ತೊಡೆಗಳಲಿ ಕಟಿಗಳ
ಲಿರತಳವಿಂತೇಳು ಲೋಕ ವಿಕಲ್ಪವಾಯ್ತೆಂದ ||೩೦||

(ಕನ್ನಡ ಭಾಗವತ ದ್ವಿ. ಸ್ಕಂಧ ಪು. ೬೭)

ಕನ್ನಡಿಗ ಕಣ್ಮುಚ್ಚಿ ಸಂಸ್ಕೃತದ ಶೈಲಿಯನ್ನು ಅನುಸರಿಸಿದ ರೀತಿಯಲ್ಲಿಯೇ ವಿಷ್ಣುತುಂಗನೂ ಸಾಗುತ್ತಾನೆ. ಶರೀರದ ಅಂಗಾಂಗಗಳಿಗೆ ತುಳುವಿನ ಪದಗಳಿದ್ದರೂ (ಅವುಗಳನ್ನು ಇತರ ಸಂದರ್ಭಗಳಲ್ಲಿ ಬಳಸಿದ್ದರೂ) ಅದನ್ನು ಕೈಬಿಟ್ಟು ಪದಂ, ಪ್ರಪದಂ, ಜಂಘೆ, ಜಾನು ಇತ್ಯಾದಿ ಪದಗಳನ್ನು ವಿಷ್ಣುತುಂಗ ಪ್ರಯೋಗಿಸುತ್ತಾನೆ.

ಕೊನೆಯದಾಗಿ ಒಂದು ಪದ್ಯವನ್ನು ನೋಡುವ. ದ್ವಿತೀಯ ಸ್ಕಂಧದಲ್ಲಿ ನಾರದನಿಗೆ ಬ್ರಹ್ಮನು ವಿಷ್ಣುವಿನ ಮಹಿಮೆಯನ್ನು ವಿವರಿಸುತ್ತಾ ಹೀಗೆನ್ನುತ್ತಾನೆ.

ಫಲೋಜಾಸ್ಟ್ ಜನೀತ್ ಮನುಷ್ಯತೆಟ್ ವೇದಾದಿ ಪುರಾಣೊ,
ನಿಲೆಯಾಕೊಸ್ಟ್, ಜಾಸ್ಪಯೆಟ್‌ತ್ತ್ ಗೆತೀ ಧರ್ಮೊಂಕುಳೆ ಸಾರೊ
ಫಲೊ ಜಾಸ್ಟ್‌ಡೆಪಿಂದ್ ಸುಸಾಂಖ್ಯಮತಾನುಷ್ಠಾನ ವಿರಕ್ತೀ
ಫಲವೊಂಜೆ ನಿರೀಕ್ಷಿಪುಟೀ ಪ್ರಜೆಕ್ ಹರಿಭಕ್ತಿತ ಸಾರೊ ||೪೭||

(ಶ್ರೀ ಭಾಗವತೊ ದ್ವಿ. ಸ್ಕಂಧ ಪು. ೨೨೧)

ವಿಷ್ಣು ತುಂಗನಿಗೆ ಈ ಪದ್ಯ ಬರೆಯುವುದಕ್ಕೆ ಆಧಾರವಾದ ಕನ್ನಡ ಭಾಗವತದ ಪದ್ಯ ಇದು -

ಏನು ಫಲ ಮಾನುಷ್ಯದಲಿ ಫಲ
ವೇನು ವೇದ ಪುರಾಣ ಶಾಸ್ತ್ರದ
ಲೇನು ತದ್ವಿಹಿತಾಖಿಳಾನುಷ್ಠಾನ ಕರ್ಮದಲಿ ||
ಏನು ಫಲ ಸಾಂಖ್ಯದಲಿ ಯೋಗದ
ಲೇನು ಫಲ ಹರಿಪದ ಕಮಲ ಭಕ್ತಿವಿ
ಹೀನವಾದರೆ ಬಳಿಕ ತಪದಲಿ ಸಿದ್ಧಿಯೇನೆಂದ ||೪೪||

(ಕನ್ನಡ ಭಾಗವತ ದ್ವಿ. ಸ್ಕಂಧ)

ಇಲ್ಲಿ ಪದಗಳನ್ನು ಹಿಂಬಾಲಿಸಿಕೊಂಡು ಹೋಗುವ ಕ್ರಿಯೆಯು, 'ಮಾನುಷ್ಯ' ಎಂಬ ಪದವನ್ನು ತುಳುವಿಗೆ 'ಮನುಷ್ಯತೆ' ಎಂದು, ಅಕ್ಷರ ಅಕ್ಷರವೂ ಹೊಂದಿಕೆಯಾಗಬೇಕೆನ್ನುವ ಚಪಲವೆನಿಸುತ್ತದೆ.

ಈವರೆಗೆ ಅನುವಾದಿತ ಪದ್ಯಗಳೆಂಬ ಶೀರ್ಷಿಕೆಯಡಿಯಲ್ಲಿ ನೋಡಿದ ಪದ್ಯಗಳಿಂದ 'ಕನ್ನಡ ಭಾಗವತ'ಕ್ಕೆ 'ತುಳು ಭಾಗವತ' ಎಷ್ಟರಮಟ್ಟಿಗೆ ಋಣಿಯಾಗಿರಬೇಕೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆದರೆ ಇದು ವಿಷ್ಣುತುಂಗನೊಬ್ಬನ ಕೊರತೆಯೇನಲ್ಲ. ಶುಕಯೋಗಿಯೂ ಮೂಲಸಂಸ್ಕೃತದ ಶ್ಲೋಕಗಳನ್ನು ಇದ್ದಕ್ಕಿದ್ದಂತೆ ಅನುವಾದಿಸಿಕೊಂಡವನೇ - ಅವನೇಕೆ ಪಂಪನಂತಹ ಮಹಾಕವಿಗಳೇ ತಮ್ಮ ಕಾವ್ಯಗಳಲ್ಲಿ ಇದ್ದ ಹಾಗೆಯೇ ಮೂಲದ ಶ್ಲೋಕಗಳನ್ನು ಅನುವಾದಿಸುತ್ತಾರೆ. ಒಂದು ಕಾವ್ಯಕ್ಕೆ ಪ್ರೇರಣೆಯಾಗಿ ಇನ್ನೊಂದು ಕಾವ್ಯವನ್ನು ತೆಗೆದುಕೊಂಡಾಗ ಅಲ್ಲಿಯೂ ಕಂಡುಬರುವ ಗುಣ ಇದು. ಆ ದೃಷ್ಟಿಯಿಂದ ವಿಷ್ಣುತುಂಗನ ಕಾವ್ಯದ ಮೇಲೆ ಗೂಬೆ ಕೂರಿಸು ಪ್ರಯತ್ನ ಮಾಡಬೇಕಾಗಿಲ್ಲ. ಆದರೆ ಹೇಳಬೇಕಾದ ಮಾತುಗಳೆಂದರೆ ತುಳು ಭಾಗವತದಲ್ಲಿರುವ ಅನುವಾದಿತ ಪದ್ಯಗಳು ಅಪಾರ ಸಂಖ್ಯೆಯವು. ಅವುಗಳ ಮೂಲಕ ವಿಷ್ಣು ತುಂಗನ ಭಾಷಾ ಪ್ರಭುತ್ವವನ್ನಂತೂ ಅಲ್ಲಗಳೆಯುವಂತಿಲ್ಲ. ಆತ ಓರ್ವ ಪ್ರಕಾಂಡ ಪಂಡಿತನೇ ಸರಿ. ಅಕ್ಷರಶಃ ಅನುವಾದ ಮಾಡಿದಾಗ ಈ ಹಿಂದೆಯೇ ಗುರುತಿಸಿದಂತೆ, ಕನ್ನಡ ಪದಗಳು ಸಂಸ್ಕೃತದೊಂದಿಗೆ ಹೊಂದಿಕೊಳ್ಳುವಂತೆ ತುಳು ಪದಗಳು ಅಷ್ಟು ಸುಲಭವಾಗಿ ಹೊಂದಿಕೊಳ್ಳುವುದಿಲ್ಲವೆಂದೆನಿಸುತ್ತದೆ. ಬಹುಶಃ ಇದು ವಿಷ್ಣು ತುಂಗನಿಗೆ ಸಂಸ್ಕೃತದ ಮೇಲಿರುವ ವ್ಯಾಮೋಹವನ್ನು, ಸಂಸ್ಕೃತ ಪದಗಳ ಜತೆಯಲ್ಲಿ ತುಳು ಪದಗಳು ಸೇರಿದಾಗ ಅವುಗಳಿಗೆ ಘನತೆ ಬರಬಹುದೆಂಬ ಮನೋಭಾವವನ್ನೂ ತೋರಿಸುತ್ತವೆಯೋ ಏನೋ.

ಪ್ರೇರಿತ ಪದ್ಯಗಳು: ಈ ಮಾದರಿಯ ಪದ್ಯಗಳು ಅನುವಾದಿತ ಪದ್ಯಗಳಿಗಿಂತ ಭಿನ್ನವಾದವು. ಇವುಗಳ ರಚನೆಯ ಹಿಂದೆ ಸ್ವಲ್ಪ ಮಟ್ಟಿಗೆ ಕನ್ನಡ ಭಾಗವತದ ಪ್ರೇರಣೆ ಇದೆಯಾದರೂ ವಿಷ್ಣುತುಂಗನದೇ ಆದ ಸ್ವಂತಿಕೆಯೂ ಇದೆ. ಪ್ರಮಾಣದ ದೃಷ್ಟಿಯಿಂದ

ಹೇಳುವುದಾದರೆ ಎರಡನೆಯ ಸ್ಥಾನ ಇದಕ್ಕಿದೆ. ಕವಿಯ ಪ್ರೇರಿತ ಪದ್ಯಗಳ ಮಾದರಿಯನ್ನು ಇದೀಗ ನೋಡಬಹುದು.

ಭಾಗವತ ಮಹಿಮೆಯನ್ನು ವಿವರಿಸುವ ಸಂದರ್ಭದಲ್ಲಿ ಕನ್ನಡ ಭಾಗವತದಲ್ಲಿರುವ ಪದ್ಯ ಈ ರೀತಿ ಇದೆ:

ವಿಷಮ ವೇದ ಮಹಾಸುರಧ್ರುಮ
ದೆಸೆವ ಭಾಗವತಾಖ್ಯ ಫಲವಿದು
ವಸುಮತಿಗೆ ಶುಕಮುಖ ಸರೋರುಹಗಳಿತವಾಯ್ತಿದೆಲಾ
ರಸಿಕರಿರ ಭಾವುಕರಿರಾ ಸೇ
ವಿಸುವುದೊಡಲುಳ್ಳನ್ನಕ್ಕ ಕಡು
ಹಸಿತವರಿಗೆ ನಿಧಾನ ಬರೆ ತಿದುಣ್ಣಲೇಕೆಂದ ||೧೦||

(ಕನ್ನಡ ಭಾಗವತ ಪ್ರ. ಸ್ಕಂಧ ಪು. ೧೩)

ಇಲ್ಲಿ ವಿಷ್ಣುತುಂಗ ಅತ್ಯಂತ ಸ್ವಾತಂತ್ರ್ಯ ವಹಿಸಿಕೊಳ್ಳುತ್ತಾನೆ. ಈ ಭಾಮಿನೀ ಷಟ್ಪದಿಯ ಮೊದಲರ್ಧವನ್ನು ಆತ ಒಡೆದು ಪ್ರತ್ಯೇಕವಾದ ಒಂದು ವೃತ್ತರಚನೆ ಮಾಡುತ್ತಾನೆ -

ವಿಷಮವೇದ ಮಹಾಸುರದ್ರುಮೊಮಾಸ್ಟಿ ಶ್ರೀ ಭಗವತ್ಫಲೋ
ಋಷಿಶುಕೇಂದ್ರ ಮುಖಾಂಬುಜಂತೊಳ್ಸ್ಟಲ್ಪಿ ದಿವ್ಯ ಸುಧಾರಸೋ
ರಸಿಕೆರಾಸ್ಟಿ ಗುಣಜ್ಞೆರಾ ಪರಮಾರ್ಥೆರಾ (ತತ್ವಜ್ಞೆರಾ)
ವಿಷಮಬುದ್ಧಿಟ್ ಸೂಕ್ಷಿತೋರ್ಪಿಲೆ ಸಾಧು ಸಂಗತಿಟಾವನೆ ||೧೨||

(ಶ್ರೀ ಭಾಗವತೊ ಪ್ರ. ಸ್ಕಂಧ ಪು. ೪೪)

ಇಲ್ಲೇನು ವಿಶೇಷತೆಯಿಲ್ಲ. ಹೆಚ್ಚಿನ ವೇಳೆ ಇಡೀ ಭಾಮಿನಿಯನ್ನೇ ಒಂದು ವೃತ್ತಕ್ಕೆ ಸಂಕ್ಷೇಪಿಸುವ ಕವಿ, ಅರ್ಧವನ್ನು ಒಂದು ವೃತ್ತದಷ್ಟು ವ್ಯಾಪಿಸಿದಷ್ಟೇ ಅವನ ಸ್ವಂತಿಕೆ. ಆದರೆ ಷಟ್ಪದಿಯ ಮುಂದಿನ ಅರ್ಧವನ್ನಾಧರಿಸಿ ಒಂದು ರಚನೆಯನ್ನು ಆತ ಮಾಡುವುದು ಹೀಗೆ:

ತಡಿಯ ತಂತಿ ನಿಧಾನೊ ಚೂವನೆ ಲೋಕೆರೇರತಿದೆಂಡಿತ್
ಹಡಪೊ ಪತ್ತ್‌ಸ್ಟ್ ಭೈಕ್ಷೊನಾಟ್ಟ್‌ಕ್ಣಂದೊಮೀ ಮನುಜೇರ್ಕುಳು
ಉಡಲ್ಟ್ತ್ತಿ ಪರಾತ್ಮ ಸೂಕ್ಷಿಪನೆತ್ತ್ ಕರ್ಮಶತಂಕುಳೇ
ಕಡಲ್ಟಂಳ್ಗೆರೀ ವ್ರತಾದಿ ಪ್ರತಿಜ್ಞೆ ಸಾಧಿತ್ ಮೂಢೆರ್ ||೧೩||

(ಶ್ರೀ ಭಾಗವತೊ ಪ್ರ. ಸ್ಕಂಧ ಪು. ೪೪)

ಇಲ್ಲಿಯ ತಡಿಯ ತಂತಿ ನಿಧಾನೊ ಎನ್ನುವುದು ನಿಧಾನ ಬರೆ ಎನ್ನುವ ಕನ್ನಡ ಭಾಗವತದ್ದೇ. ಕನ್ನಡ ಭಾಗವತದಲ್ಲಿ ತಿರಿದುಣ್ಣು ಎಂದಷ್ಟೇ ಇದ್ದರೆ ಇಲ್ಲಿ ಅತಿದೆಂಡಿತ್

ಹಡಪೊ ಪತ್ತ್ಸ್ಪ್ 'ಭೈಕ್ಷೊ ನಟ್ಸ್ಕಣ' ಎಂದು ಇನ್ನಷ್ಟು ತೀವ್ರತೆಯಿಂದು ವಿವರಿಸಲಾಗಿದೆ. ಆದರೆ ಮುಂದಿನ 'ಉಡಲ್‌ಟತ್ತಿನ ಪರಾತ್ಮ ಸೂಕ್ಷಿಪನೆತ್ತ್ ಕರ್ಮ ಶತಂಕುಳೇ ಕಡಲ್‌ಟಂಳ್ಗ್‌ಕೆರ್....' ಎನ್ನುವುದು ವಿಷ್ಣುತುಂಗನ ಸೇರ್ಪಡೆ.

ಇದೇ ಮಾದರಿಯ ಇನ್ನೊಂದು ಪದ್ಯ

ವೆಂದ್ ಜಾಫಲೊ ಶಾಸ್ತ್ರ ಕರ್ಮೊಮಿ ವಿಷ್ಣು ಭಕ್ತಿದನೆಪ್ಪುಟಾ
ಮಂದಭಾಗ್ಯೆರ್ ಪುಟ್ಟು ಜಾಫಲೊ ವಿಪ್ರರಾವುಟ ಜಾಫಲೊ
ಕೆಂದೆ ಪೆತ್ತನಿ ರಕ್ಷಿತ್ ಫಲೊ ಜಾಸ್ಟ್ ಪೇರ್‌ದನೆಪ್ಪುಟಾ
ನಿಂದ್‌ಸ್ಪೇನ್ಯ ಭವಾಬ್ದಿಟ್ ಕರೆಯಂತ್ಯ ಚೂವನತೇಪ್ಪರ್ ||೯||

(ಶ್ರೀ ಭಾಗವತೊ ಪ್ರ. ಸ್ಕಂಧೊ ಪು. ೧೨)

ಸೂತ ಪುರಾಣಿಕನಲ್ಲಿ ಶೌನಕಾದಿಗಳು ಭಾಗವತದ ಬಗ್ಗೆ ಹೇಳಬೇಕೆಂದು ಕೇಳುತ್ತಾರೆ. ಆಗ ಆತ ಪೀಠಿಕೆಯಾಗಿ ವಿಷ್ಣುಭಕ್ತಿಯ ಬಗ್ಗೆ ಈ ಮಾತನ್ನು ಹೇಳುತ್ತಾನೆ. ಕನ್ನಡ ಭಾಗವತದಲ್ಲಿ ಇದೇ ಸಂದರ್ಭದ ಪದ್ಯ ಹೀಗಿದೆ.

ಏನು ಫಲ ಧರ್ಮದಲಿ ವಿಷ್ವ
ಕ್ಸೇನ ಗುಣಲೀಲಾ ಕಥಾಮೃತ
ಪಾನರಸದಲಿ ಸೊಗಸನುತ್ಪಾದಿಸಲು ನೆರೆಯದೆಡೆ
ಧೇನುಗಡ ದುಗ್ಧವನು ಸಲಹಿದ
ಮಾನವರಿಗಣು ಮಾತ್ರವೀಯದ
ಡೇನು ಫಲವದರಲಿ ಪರಿಶ್ರಮ ಮಾತ್ರವಹುದೆಂದ ||೨೭||

(ಕನ್ನಡ ಭಾಗವತ ಪ್ರ. ಸ್ಕಂಧ ಪು. ೩)

ಇಲ್ಲಿ ವಿಷ್ಣುತುಂಗ ಕನ್ನಡ ಭಾಗವತವನ್ನು ನೋಡಿಯೂ ನೋಡದವರಂತೆ ಕಾಣುತ್ತಾನೆ. ಏಕೆಂದರೆ ವಿಷ್ಣುತುಂಗ ಕೇಳುವ 'ವೆಂದ್ ಜಾಫಲೊ ಶಾಸ್ತ್ರಕರ್ಮೊಮಿ ವಿಷ್ಣುಭಕ್ತಿದನೆಪ್ಪುಟಾ ಎಂಬುದಕ್ಕೂ ವಿಷ್ವಕ್ಸೇನ ಗುಣಲೀಲಾ ಕಥಾಮೃತ ಪಾನರಸದಲಿ ಸೊಗಸನುತ್ಪಾದಿಸಲು ನೆರೆಯದೆಡೆ -ಏನು ಫಲ ಎನ್ನುವುದಕ್ಕೂ ಸ್ವಲ್ಪ ವ್ಯತ್ಯಾಸವಿದೆ. ಮುಂದೆ ತುಳುವ ಕೇಳುವ ಮಂದಭಾಗ್ಯೆರ್ ಮತ್ತು ವಿಪ್ರೆರಾವುಟ ಜಾಫಲೋ ಎನ್ನುವ ಮಾತುಗಳು ಕನ್ನಡದಲ್ಲಿಲ್ಲ. ಪದ್ಯದ ಕೊನೆಯ ಭಾಗ ಸೊಗಸಾಗಿದೆ. ಶುಕಯೋಗಿಯು ಸಾಕಿದ ಮಾನವರಿಗೆ ಅಣು ಮಾತ್ರವೂ ಹಾಲನ್ನು ಹಸು ಕೊಡದಿದ್ದರೆ ಸಾಕಿದ್ದಕ್ಕೆ ಫಲವೇನು ಎಂದು ಕೇಳುತ್ತಾನೆ. ಆದರೆ ತುಳುಭಾಗವತದಲ್ಲಿ 'ಕಪಿಲೆ ದನವನ್ನು ಸಾಕಿ ಜಾಸ್ತಿ ಹಾಲು ಸಿಗದಿದ್ದರೆ ಏನು ಫಲ? ಎನ್ನುವ ಪ್ರಶ್ನೆಯಿದೆ. ಕನ್ನಡದಲ್ಲಿರುವ 'ಧೇನು' ಎನ್ನುವಲ್ಲಿ ಅರ್ಥ ಸ್ಪಷ್ಟತೆಗೆ ಅನುಕೂಲ ಕಡಿಮೆ. ಏಕೆಂದರೆ ಅದು 'ಗೊಡ್ಡುಧೇನು'ವೂ ಆಗಬಹುದಾದ ಸಾಧ್ಯತೆಗಳಿವೆ. ಆದರೆ 'ಕೆಂದಪೆತ್ತ' ಎಂದರೆ ಆಗ ನಮ್ಮ ಕಲ್ಪನೆಯೇ ಬೇರೆ.

'ಕಪಿಲೆ', 'ಕಬಿಲ್ತಿಪೆತ್ತ' ಎನ್ನುವುದು ತುಳುನಾಡಿನ ಜಾನಪದ ಕತೆಯಲ್ಲಿಯೂ ಹೆಸರು ಪಡೆದುದು. 'ಕಪಿಲೆ ದನ' ಅಂತಹ 'ಕೆಂದಪೆತ್ತ'ವೇ ಜಾಸ್ತಿ ಹಾಲು ಕೊಡದಿದ್ದರೆ ಏನು ಫಲ? ಎನ್ನುವಲ್ಲಿ ವಿಡಂಬನೆ ಹರಿತವಾಗುತ್ತದೆ. ಮುಂದಿನ ಸಾಲು 'ಭವಾಬ್ಧೀಟ್ ಕರೆಯಂತ್ಯ ಚೂವನತೇಪ್ಪೆರ್' ಎನ್ನುವುದೂ ವಿಷ್ಣುತುಂಗನದೇ.

ವಿಷ್ಣುತುಂಗನ ಪ್ರೇರಿತ ಪದ್ಯಕ್ಕೆ ಇನ್ನೊಂದು ಉದಾಹರಣೆ -

ಚಂದ್ರಕ್ ಕಲೆಯಾವಾಪಾ ಕಲೆ ಪ್ರಜ್ವಲೀಪುಕ್ಣಂದೊಮೆ
ಕೊಂದಳೀಪ್ಪುಣ ತೀರೆ ಬುದ್ಧಿತ ಕಲ್ಮಷೊಂಕುಳೆ ವಾಸನೆ
ಕುಂದ್ ಜಾಸ್ಟಿಮುಕೀ ಚರಾಚರಸಾಕ್ಷಿಯಾತೊ ಮುನೀಶ್ವರಾ
ವೆಂದೆರೀರತಿ ಲೋಕಪಾವನಂಕಾಕಿ ಪುಣ್ಯ ಪ್ರಸಂಗೊಮಿ ||೩೧||

(ತುಳು ಭಾಗವತ ಪ್ರ. ಸ್ಕಂಧ ಪು. ೨೯)

ಕನ್ನಡ ಭಾಗವತದ ಪದ್ಯ ಇದಕ್ಕೆ ಹೋಲಿಕೆಯಾಗಿ ಹೀಗಿದೆ:

ಜಗದ ಕಂಗಳ ಕತ್ತಲೆಯ ಮು
ತ್ತಿಗೆಯ ತೆಗೆಸುವ ತ್ರೀವ್ರತೇಜದ
ಗಗನ ಮಣಿ ಮಂಡಲವ ನಂಡಲೆಯುತ್ತಲಾ ತಿಮಿರ
ಬಗೆಯಲೇಂ ಮುಸುಕವುದೇ ತಿಳುಹುವ
ಬಗೆಯ ಬಲ್ಲ ಮಹಾತ್ಮರಾರೈ ತಂದೆ ಹೇಳಂದ ||೧೬||

(ಕನ್ನಡ ಭಾಗವತ ಪ್ರ. ಸ್ಕಂಧ)

ಈ ಪದ್ಯಗಳ ಸಂದರ್ಭವನ್ನು ಗ್ರಹಿಸಿದರೆ ಇಬ್ಬರ ಮನೋದೃಷ್ಟಿಗಳು ಸ್ಪಷ್ಟವಾಗುತ್ತವೆ. ವೇದಾದಿಪುರಾಣಗಳನ್ನು ರಚಿಸಿದ ವ್ಯಾಸಮುನಿಯು ಮನುಷ್ಯರು ಇನ್ನೂ ಭವಾಬ್ಧಿಯಲ್ಲಿ ಪರಿತಪಿಸುವುದರಿಂದ ದುಃಖವಾಗಿ ತಲೆ ಮೇಲೆ ಕೈ ಹೊತ್ತು ಕುಳಿತಿರುತ್ತಾನೆ. ಅಲ್ಲಿಗೆ ನಾರದನು ಬರುತ್ತಾನೆ. ಆಗ ಶುಕಯೋಗಿ ಹೇಳುವಂತೆ 'ಸೂರ್ಯನಿಗೆ ಕತ್ತಲೆ ಮುತ್ತಿಗೆ ಹಾಕಿದರೆ ಕತ್ತಲೆ ಗೆಲ್ಲಬಹುದೋ' - 'ಸೂರ್ಯನನ್ನೇ ಕತ್ತಲೆ ಮುಸುಕಬಹುದೇ - ಎಂದು ನಾರದನ ಪ್ರಶ್ನೆ. ಇಲ್ಲಿ ವ್ಯಾಸನು ಸೂರ್ಯನಾದರೆ ಅವನು ದುಗುಡ ಕತ್ತಲೆ. ವಿಷ್ಣುತುಂಗ ಅದನ್ನೇ ಹೇಳುವುದು - ಚಂದ್ರಕ್ ಕಲೆಯಾವಪಾ ಕಲೆ ಪ್ರಜ್ವಲೀಪುಕ್ಣಂದೊಮೆ' ಇಲ್ಲಿ ಚಂದ್ರನಿಗೇ ಕಲೆಯಾದರೆ ಆ ಕಲೆ ಪ್ರಜ್ವಲಿಸುವ ಹಾಗೆ ಎಂದಾಗಿ ವ್ಯಾಸ ಚಂದ್ರನಾದ, ಅವನ ದುಃಖ ಆ ಚಂದ್ರಮಂಡಲದಲ್ಲಿರುವ ಕಲೆಯಾಯಿತು. ಕನ್ನಡಿಗ ಮತ್ತು ತುಳುವರೀರ್ವರು ಎರಡು ಭಿನ್ನವಾದ ಹೋಲಿಕೆಯನ್ನು ಕೊಡುತ್ತಾರೆ. ಮೊದಲಿನ ಹೋಲಿಕೆಯಲ್ಲಿ ನೀನು ಅಸಾಮಾನ್ಯ ಎನ್ನುವ ಧ್ವನಿಯಿದ್ದರೆ (ಎಂದರೆ ಕನ್ನಡ ಭಾಗವತದಲ್ಲಿ) ಎರಡನೇ ಹೋಲಿಕೆಯಲ್ಲಿ ನೀನು ಅಸಾಮಾನ್ಯ

ಹೌದು. ಆದರೆ ನಿನಗೆ ಕಳಂಕವಾದರೆ ಅದು ಪ್ರಜ್ವಲಿಸುತ್ತಲೇ ಇರುತ್ತದೆ ಎನ್ನುವ ಧ್ವನಿಯಿದೆ. ನೀನು ಅಸಾಮಾನ್ಯ, ಹಾಗಾದುದರಿಂದಲೇ ನಿನ್ನ ಕಳಂಕವೂ ಅಸಾಮಾನ್ಯ ಎಂದು ಹೊಗಳಿಕೆಯೂ ಅಲ್ಲ. ತೆಗಳಿಕೆಯೂ ಅಲ್ಲದ ಮಾತದು. ಚಂದ್ರ ಪ್ರಜ್ವಲಿಸುತ್ತಾ ಹೋದಂತೆ ಚಂದ್ರಮಂಡಲದಲ್ಲಿರುವ ಕಲೆ ಕೂಡಾ ಪ್ರಜ್ವಲಿಸುವ ಹಾಗೆ ನಿನ್ನ ದುಃಖದಿಂದಾಗಿ ಚರಾಚರಗಳಿಗೆಲ್ಲ ದುಃಖವಾಗಿದೆ. ಅವುಗಳ ದುಃಖಕ್ಕೇ ನೀನೇ ಕಾರಣ ಎಂದು ವ್ಯಾಸನನ್ನು ನಾರದ ನೇರವಾಗಿ ವಿಮರ್ಶೆ ಮಾಡುತ್ತಾನೆ. ವೇದಾದಿ ಪುರಾಣಗಳು ಮತ್ತು ಭಾಗವತ ಸಂಹಿತೆಗಳೊಳಗಿನ ಚರ್ಚೆ - ಇದರ ಮೂಲಕ ಪ್ರಕಟಗೊಳ್ಳುವ ರೀತಿ ಅದ್ಭುತವಾಗಿದೆ.

ಈ ಮಾದರಿಯ ಪದ್ಯಕ್ಕೆ ಇನ್ನೊಂದೇ ಉದಾಹರಣೆ ಕೊಟ್ಟು ಈ ವಿವರಗಳನ್ನು ನಿಲ್ಲಿಸಬಹುದೆನಿಸುತ್ತದೆ. ಶ್ರೀಕೃಷ್ಣ ದ್ವಾರಾವತಿಗೆ ಆಗಮಿಸುವ ವೇಳೆಗೆ, ಹಸ್ತಿನಾವತಿಯಿಂದ ಮರಳುವ ಹೊತ್ತು - ಆತನ ನಿರೀಕ್ಷಣೆಗೆ ಜನರಲ್ಲಿ ಎಷ್ಟರಮಟ್ಟಿನ ಕಾತರವಿತ್ತು ಎಂಬುದಕ್ಕೆ ಒಂದು ವರ್ಣನೆ. ಮೊದಲಿಗೆ ಕನ್ನಡ ಭಾಗವತದಲ್ಲಿಯ ವಿವರಗಳನ್ನು ನೋಡಬಹುದು.

ದೇವ ದೇವನನೀಕ್ಷಿಸಲು ಯದು
ದೇವಿಯರು ಹರಿದೇರಿದರು ಹ
ರ್ಮ್ಯಾವಳಿಯವುಣಕುಳಿತವರು ಗಂಗಳವ ಬಿಸಾಡಿ
ಆವ ಕೆಲಸದಲಿದ್ದರವನದನಾ
ನಾವಿಧದಲೆ ಬಿಸುಟು ಹರಿವದ
ನಾವಲೋಕನ ಪರಮ ಸುಖ ಪರವಶೆಯರೆಂದೆನಿಸಿ ||೨೬||

(ಕನ್ನಡ ಭಾಗವತ ಪ್ರ. ಸ್ಕಂಧ ಪು. ೨೮)

ಇದನ್ನು ವಿಷ್ಣುತುಂಗ ವಿವರಿಸುವ ರೀತಿ ಹೀಗೆ -

ಇರೆತುಂಪಿನಿ ಚೆಚ್ಚಿಸ್ಟ್ ಬಾಲೆಕುಳೇ ತಿಗೆತೊ ಕರಬೀತ್
ವರಕುಂಜಿಕುಳಿಲ್ಲ್ಟ್ ಪಾಕೊಸ್ಟ್ಟತ್ ಪತಿಮಾರ್ಕುಳೆ ಭಗ್ಗ್
ವರಮಾಡಮದಲ್ಕುಳು ಗೋಪುರೊಮಾ ತಿಣೆನೆಡ್ಡಗವಾಕ್ಷಂ
ತರುಟಾಸ್ಟ್ ನಿ[ರೀ]ಕ್ಷಿತ್‌ಣಾಶ್ಚರಿಯೋ ವಿರಹೊಂಟ್ ಮುಕುಂದ ||೩೩||

(ಶ್ರೀ ಭಾಗವತೊ ಪ್ರ. ಸ್ಕಂಧ ಪು. ೯೯)

ವಿಷ್ಣುತುಂಗನ ವಿವರಣೆಯ ಸಾಚಾತನವನ್ನು ನೋಡಲು ಆತ 'ಇರೆ ತುಂಪಿನಿ' ಎಂಬ ಪದವನ್ನು ಬಳಸಿದುದರ ಹಿನ್ನೆಲೆಯಲ್ಲಿ ಮುಂದುವರಿಯಬೇಕು. 'ಎಲೆಯ ಅನ್ನವನ್ನು ಬಿಸಾಡಿ - ಅದೂ - ಬಾಲಕರು ನೆಗೆದರಂತೆ, ಕೈ ತಪ್ಪಿಸಿ. ಬಾಳೆಲೆಯಲ್ಲಿ ಉಣ್ಣುವುದು ತುಳುವರ

ಸಂಸ್ಕೃತಿಯಲ್ಲವೇ? ಉಣ್ಣುವ ಎಲೆಯನ್ನು ಬಿಸಾಕಿ ಬಾಲಕರೇ ನೆಗೆದರೆಂದು ಮೇಲೆ ಕುತೂಹಲ ಎಷ್ಟಿರಬೇಡ! ಅದಲ್ಲದೆ ಸ್ತ್ರೀಯರು ಕರುಗಳನ್ನು ಅವುಗಳ ಆಶ್ರಯದಲ್ಲಿಯೇ ಕಟ್ಟಿ (ಕರು ಬಿಡುತ್ತಿದ್ದವರು) ತಮ್ಮ ಪತಿಯರನ್ನು ಬಳಲಿಸಿಯೂ ಉಪ್ಪರಿಗೆ, ದರೆಗಳಲ್ಲಿ ಹಾಗೂ ಜಗಲಿಯ ಮೇಲೆ ನಿಂತು ಹಾರೈಸಿದರಂತೆ. ಇಲ್ಲಿ ಬಾಲಕರು ಮತ್ತು ಸ್ತ್ರೀಯರು ಕುತೂಹಲಗಳನ್ನಷ್ಟೇ ಕವಿ ಹೇಳಿದರೂ ಸಹ ಔಚಿತ್ಯಪೂರ್ಣವಾದುದೇ. ಇದು ವಿಷ್ಣುತುಂಗನ ಸೂಕ್ಷ್ಮಗುಣಗ್ರಾಹಿ ಗುಣಕ್ಕೆ ಸಾಕ್ಷಿಯಾದುದು.

ಇಷ್ಟರವರೆಗೆ ಪ್ರೇರಿತ ಪದ್ಯಗಳು ಎನ್ನುವ ಹೆಸರಿನಲ್ಲಿ ವಿಶ್ಲೇಷಿಸಿದ ವಿಶ್ಲೇಷಣೆ 'ಕಾವ್ಯ ಮೀಮಾಂಸೆ'ಯ ಸ್ವೀಕರಣದ ಪರಿಭಾಷೆಗೆ ಸಂಬಂಧಿಸಿದುದು. ಇದು ವಿಷ್ಣು ತುಂಗ ಕನ್ನಡ ಭಾಗವತವನ್ನು ಅನುಸರಿಸಿದಾಗಲೂ ತೋರಿಸಿದ ಎಚ್ಚರಿಕೆಯನ್ನು ತಿಳಿಸುವಂತದ್ದಾಗಿದೆ. ಸ್ವಲ್ಪ ಸರಳವಾಗಿ ಹೇಳುವುದಿದ್ದರೆ, ಮೊದಲ ವಿಭಾಗದ ಪದ್ಯಗಳು (ಅನುವಾದಿತ) ವಿಷ್ಣು ತುಂಗನ ಕಾವ್ಯದ ರಸಗಟ್ಟಿಯನ್ನು ಪಡೆಯುವಲ್ಲಿ ನಮಗೆ ಎದುರಾಗುವ ಶುಷ್ಕ ಪದವಾದರೆ ನಂತರದ ಪದ್ಯಗಳು ಒಳ ಪ್ರವೇಶಿದರೆ ಪ್ರಯೋಜನವಾದೀತು ಎಂದು ಆಶಾವಾದವನ್ನು ಉಂಟು ಮಾಡುವ ಕುರುಹುಗಳು. ಈ ಮಾದರಿಯ ಪದ್ಯಗಳು ಕಾವ್ಯದಲ್ಲಿ ತುಂಬ ಇವೆ. ಇವು ಕೇವಲ ಮಾದರಿಗಳಷ್ಟೇ.

ಸ್ವರಚನೆಗಳು: ವಿಷ್ಣುತುಂಗ ಪ್ರೇರಿತ ಪದ್ಯಗಳನ್ನು ಬರೆದನೆಂದ ಮೇಲೆ ಅವನದೇ ಆದ ಸ್ವಂತಿಕೆ ಏನಾದರೂ ಇದೆಯೇ ಎಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ. ಅದಕ್ಕೆ ಉತ್ತರ ಈ ರೀತಿಯ ಪದ್ಯಗಳ ವಿಶ್ಲೇಷಣೆ ಮಾಡುವುದರ ಮೂಲಕ ಕೊಡಬಹುದು.

ವಿಷ್ಣುತುಂಗ ಕಾವ್ಯದ ಪ್ರಾರಂಭದಲ್ಲಿ ತುಂಬ ಆಕರ್ಷಕ ರೀತಿಯಲ್ಲಿಯೇ ತೊಡಗುತ್ತಾನೆ. ನಮ್ಮ ಕನ್ನಡ ಕವಿಗಳಲ್ಲಿ ಬಹುಮಂದಿ 'ವೀರ ನಾರಾಯಣನೆ' ಕವಿ, ಲಿಪಿಕಾರ ಕುಮಾರವ್ಯಾಸನೆಂಬ ವಿನಯವನ್ನು ತೋರಿಸಿದವರೇ. 'ಎಂಟೆರ್ದೆಯೇ' ಎಂದು ಎದೆ ತೋರಿಸಿದವರು ಬಹಳ ಕಡಿಮೆ. ವಿಷ್ಣು ತುಂಗ ಈ ಲಿಪಿಕಾರರ ಸಾಲಿಗೆ ಸೇರಿದವನು ನಾನು ಭಾಗವತವನ್ನು ಹೇಳುವ ರೀತಿ ಹೇಗೆ ಎಂಬುದನ್ನು ಅವನ ಬಾಯಿಂದಲೇ ಕೇಳುವ -

ಕಂಕಣೇ ಕ್ಡತ್ತಿ ಬಾಲೆರ್ ಚಂದ್ರನಿಚ್ಛಿಪಿ ನಂದೊಮೆ
ಮಂಕಣೇ ತೆರಿಯಂತಿ ಮೂಢೆ ಸಮುದ್ರೊ ನೀಂದ್ಕ್ಣಂದೊಮೆ
ಕಂಕುಳೇನ್ನಲ್ ದಂತಿನಂದಕೆ ವಿಂಧ್ಯೋಪ್ರಾಪಿಪಿನಂದೊಮೆ
ಶಂಕಿಪುಪ್ಪೆನತೀ ಕಥೆ ತೆರಿತೊಂಪೆ ವರ್ಣೆ ಪೆರಾಂದ್ತ್ ||೧೨||

(ಶ್ರೀ ಭಾಗವತೊ ಪ್ರ. ಸ್ಕಂದೋ. ಪು. ೫)

ಕವುಚಿ ಬಿದ್ದಿರುವ ಮಗುವು ಚಂದ್ರನನ್ನು ಬಯಸುವ ಹಾಗೆ, ಮೇಲ್ಮುಖವಾಗಿಸುವುದಕ್ಕೆ ತಿಳಿಯದ ಮೂಢ ಸಮುದ್ರವನ್ನು ಈಜುವುದಕ್ಕೆ ಬಯಸುವ ಹಾಗೆ, ಕಂಕುಳಗಳಿಲ್ಲದಿರುವ

ಕುರುಡನು ವಿಂಧ್ಯವನ್ನು ಸೇರುವ ಹಾಗೆ ನಾನು ಈ ಮಹಾಕತೆಯನ್ನು ತಿಳಿಯ ಹೇಳುವೆ ಎನ್ನುತ್ತಾನೆ ಕವಿ. ವಿಶಾಲವಾದ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯ ವಾಹಿನಿಗೆ ಚಾರಿತ್ರಿಕ ಕಾರಣಗಳಿವೆ. ಇಷ್ಟೊಂದು ದೈನ್ಯದಿಂದ ಹೇಳಬೇಕೋ ಎಂದು ಆಕ್ಷೇಪಿಸಬಹುದಾದರೂ ಆ ಭಾವನೆಯನ್ನು ಹೇಳುವಲ್ಲಿ ಆತ ಬಳಸಿಕೊಂಡ ಉಪಮೆಗಳಂತೂ ಪರಿಣಾಮಕಾರಿಯಾಗಿವೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

ವಿಷ್ಣು ತುಂಗ ಬ್ರಹ್ಮನನ್ನು ವರ್ಣಿಸುವ ಇನ್ನೊಂದು ಪರಿಣಾಮಕಾರಿಯಾದ ರಚನೆ-

ನಳಿನಾಸನೆರೆನ್ನಿ ಮಹಾಕುಳತಾ ನಡುವಂಟ್ಪ ನಾಲ್
ನಳಿನಾಯತ ವಕ್ತ್ರಸುಕರ್ಣಿಕೆಟ್ ನಿಲ್ತೇನ್ಯೊಸವುಪ್ಪೀ
ಕಳಹಂಸಮಹಾಗತ ವರ್ಣಶುಭೇ ನಳಿನಾಯತನೇತ್ರೇ!
ತುಳುಭಾಷೆ ಕವಿತ್ವೊ ಪ್ರಸಾದಿಪುಲೇ ಮಮ ಜುಂಹೆಟ್ ವರ್ತ್ ||೭||

(ಶ್ರೀ ಭಾಗವತೊ ಪ್ರ. ಸ್ಕಂದೋ. ಪು. ೩)

ವೆಂಕಟರಾಜ ಪುಣಿಂಚತ್ತಾಯರು 'ಪೀಠಿಕೆ'ಯ ಭಾಗದಲ್ಲಿ ಈ ಪದ್ಯದ ಕುರಿತು ಹೀಗೆಂದಿದ್ದಾರೆ - 'ಬ್ರಹ್ಮನೆಂಬ ಒಂದು ಕೆರೆ. ಅದರ ಮೇಲುಗಡೆ ಆತನ ಮುಖವೆಂಬ ನಾಲ್ಕು ಕಮಲಕೋಶಗಳು, ಅವುಗಳ ನಡುವೆ ಉಪಸ್ಥಿತಳಾಗಿರುವ ಎಲೈ ಹಂಸವರ್ಣದವಳೇ ನನ್ನ ನಾಲಿಗೆಯ ಮೇಲೆ ಕುಳಿತು ತುಳುಭಾಷೆಯ ಕವಿತಾಶಕ್ತಿಯನ್ನು ಅನುಗ್ರಹಿಸು.

ಇಲ್ಲಿ ಕವಿಯು ಸರಸ್ವತೀ ದೇವಿಯ ಹೆಸರನ್ನು ಪ್ರಸ್ತಾಪಿಸದಿದ್ದರೂ ಆಕೆಯೇ ಎಂಬ ಅರ್ಥ ಬರುವಂತೆ ಧ್ವನಿಪೂರ್ಣವಾಗಿ ಹೇಳಿದ್ದಾನೆ. ಬ್ರಹ್ಮನ ನಾಲ್ಕು ಮುಖಗಳಲ್ಲಿ ನಾಲ್ಕು ವೇದಗಳು ಹುಟ್ಟಿದುವೆಂದೂ ಅವೈದಿಕ ವಾಙ್ಮಯವೇ ಸರಸ್ವತಿಯಾಗಿದ್ದಾಳೆಂದೂ ಕವಿಯು ಅಲ್ಲಿ ವ್ಯಕ್ತಪಡಿಸಿದ್ದಾನೆ.

ಆತನ ಇನ್ನೊಂದು ಸ್ವರಚನೆ -

ಪುಟ್ಪನಾನಿ ತುಡೆಂಗ್‌ಸ್ಟೀಂಟ್ ದಿನೋಟ್ಟಲಾರೆನನುಗ್ರಹ
ಕಟ್ಟಟೇ ನಡತ್‌ತ್ತೊಮಾವುಟಸ್ಪೆತ್ತ್ ಜಾಫಲೊ ನೀರ್‌ಟೇ
ಪುಟ್ಪಸ್ಟೀ ನಳಿನೊಂತ ಮಿತ್ತೆ ವಸೀತೊ ಕಪ್ಪೆ ಸದಾಂತೊಲಾ
ಇಷ್ಟೆಲಾ ಪರಿಶಾಯೊ ಸಾರೊಮಿ ನಾಮೂ ಪಿಂದರಿಯಗ್ರಜಾ ||೬||

(ಶ್ರೀ ಭಾಗವತೊ ಪ್ರ. ಸ್ಕಂಧ ಪು. ೧೩೩)

ಶ್ರೀಕೃಷ್ಣ ನಿರ್ವಾಣದ ನಂತರ ಅರ್ಜುನನು ಧರ್ಮರಾಯನಲ್ಲಿ ತಿಳಿಸಿ ಪರಿತಪಿಸುವ ರೀತಿ ಇದು 'ನೀರಿನಲ್ಲಿ ಹುಟ್ಟಿದ ಕಮಲದಲ್ಲಿ ವಾಸಿಸುತ್ತಿದ್ದ ಕಪ್ಪೆಯ ಹಾಗೆಯೇ ನಾವು ಹುಟ್ಟಿನಿಂದ

ಈವರೆಗೆ ಶ್ರೀಕೃಷ್ಣನ ಅನುಗ್ರಹದ ಕಟ್ಟಿನಲ್ಲಿಯೇ ವಾಸಿಸುತ್ತಿದ್ದು, 'ಅವನೇನು' ಎಂಬುದನ್ನು ತಿಳಿಯಲಾರದೆ ಹೋದೆವಲ್ಲಾ' ಎಂಬುದು ಇಲ್ಲಿಯ ಭಾವ. ತಾವರೆಯ ಮೇಲೆಯೇ ಕಪ್ಪೆ ವಾಸಿಸುತ್ತಿದ್ದರೂ ಅದಕ್ಕೆ ತಾವರೆಯ ಪರಿಮಳವಾಗಲೀ ಅದರ ಸೌಂದರ್ಯವಾಗಲೀ ಅರಿವಿಗೆ ಬರುವುದು ಸಾಧ್ಯವೇ? ಇಲ್ಲಿ ಪಾಂಡವರನ್ನು ಕಪ್ಪೆ ಎಂದೂ ಕೃಷ್ಣನನ್ನು ತಾವರೆಯೆಂದೂ ವರ್ಣಿಸಿರುವುದು ಮನೋಜ್ಞವಾಗಿದೆ.

ಇದಕ್ಕಿಂತಲೂ ಅದ್ಭುತವಾದ ಒಂದು ಕಲ್ಪನೆ ವಿಷ್ಣುತುಂಗನಲ್ಲಿದೆ ಭಕ್ತಿಯು ಹೇಗಿರಬೇಕು. ವಿರಕ್ತರ ಸುಖವೇನು ಎಂಬುದನ್ನು ಆತ ಹೇಳುವ ರೀತಿ ಹೀಗಿದೆ:

ಸೇವಿತೇ ಲೆಯೊಮಾವನೆತ್ತಿನ ಕೇವಲಾಮೃತಸಿಂಧುವೀ
ಶ್ರೀವರೇಣ್ಯವಯಂತ ಕಣ್ಣಿಟ್ ಚಿರ್ಕ್‌ಸ್ಟೀ ಮನಪಕ್ಷಿನೀ
ಬಾವೆಲಾ ಕೃತಿ ನೇಲ್‌ಪ್ಪೌಳೆ ವಿಲಾಸೊಕೊಂಡಿ ವಿರಕ್ತೆರೇ-
ಕೇವಿ ಪತ್ತ್‌ಲ ಪೊರ್ದನಪ್ಪ ಮಹಾಸುಖೊಂಟ್ ರೆಮೀಪ್ಪೊಳೀ ||೧೬||

(ಶ್ರೀ ಭಾಗವತೊ ತೃ. ಸ್ಕಂಧೊ ಪು. ೩೬೬)

ಸೇವಿಸಿ ಅಶೇಷವಾಗದ ಕೇವಲ ಅಮೃತ ಸಿಂಧುವು ಸಿಗಬೇಕಾದರೆ ಶ್ರೀ ಕೃಷ್ಣ ಅವಯುವವೆಂಬ ಕಣ್ಣಿನಲ್ಲಿ ಮನಸ್ಸೆಂಬ ಪಕ್ಷಿಯನ್ನು ಸಿಕ್ಕಿಸಿ ಬಾವಲಿಯ ಹಾಗೆ ಓಲಾಡಿಸುತ್ತಿರಬೇಕು. ಮನಸ್ಸನ್ನು ಬಾವಲಿಯ ಹಾಗೆ ಓಲಾಡಿಸುತ್ತಿರಬೇಕು ಎಂಬುದು ವಿಶಿಷ್ಟವಾದ ಕಲ್ಪನೆ. ಬಾವಲಿಯ ಹಿಡಿತ ಭದ್ರವಾದುದು. ಶರೀರ ಅಧೋಮುಖವಾಗಿ ದೃಷ್ಟಿ ಊರ್ಧ್ವಮುಖವಾಗಿಸಿ ಓಡಾಡುವ ಗುಣ ಅದರದು. ಹಾಗೆ ಮನಸ್ಸನ್ನು ಊರ್ಧ್ವಮುಖ ಮಾಡಿಸಬೇಕು ಎಂದರ್ಥ. ಒಟ್ಟಿನಲ್ಲಿ ಎಳೆ ಎಳೆಯಾಗಿ ವಿವರಿಸಬಹುದಾದ ಸುಂದರ ಪದ್ಯವಿದು.

ವಿಷ್ಣುತುಂಗ ಕೆಲವೊಮ್ಮೆ ವರ್ಣನೆಯನ್ನು ಅತ್ಯಂತ ಮನೋಜ್ಞಗೊಳಿಸಬಲ್ಲನೆಂಬುದಕ್ಕೆ ಇನ್ನೊಂದು ಉದಾಹರಣೆ. ಮಗು ಜನನಿಯ ಉದರದಿಂದ ಹೇಗೆ ಉದುರುತ್ತದೆ ಎಂಬುದು ಕವಿಯ ಲೇಖನಿಯಲ್ಲಿ ಪಡಿಮೂಡಿದ ರೀತಿ ಇದು:

ಅಟ್ಟ್‌ದೇಟತಿ ಕಷ್ಟಿತ್ತೀ, ಸಖಿ ಮಾರ್ಕುಳಿರ್ದಿಶೆಟ್ಟ್‌ತ್ತ್‌ಲಾ
ಘಟ್ಟಿಪೇಪ್ಪೆರ್ ಮುಟ್ಟೆ ಪತ್ತ್‌ಸ್ಟ್ ಬಾಲನೀಕರ ಮಾಂಪೆರ್
ಚೆಟ್ಟ್‌ಸ್ಟೀ ಮನೊಂಟಾವ ಮೇದಿನಿಟ್ಟ್‌ಪ್ಪ ಬೂಳುವೆನಂದನೇ
ವಿಷ್ಣೆಮಾಂಸ ಶರೀರೆಯಾಪ್ಪಿ ಕುಮಾರ ಚೂವುಟ ಕೌತಕೋ ||೫||

(ಶ್ರೀ ಭಾಗವತೊ ತೃ ಸ್ಕಂದೋ ಪು. ೩೭೭)

ಕವಿಯ ಮಾತನ್ನು ಅನುವಾದ ಮಾಡಹೊರಟರೆ ಮೂಲದ ಸ್ವಾತಂತ್ರ್ಯ ಕೆಡುತ್ತದೆ ಎಂದು ಗೊತ್ತಿದ್ದೂ ಇದನ್ನು ಅನುವಾದಿಸುವುದೆಂದರೆ 'ಇಕ್ಕಟ್ಟಾದ ಎಡೆಯಲ್ಲಿ ಇಕ್ಕಡೆಗಳಲ್ಲಿ ದಾದಿಯರು ಬಾಲನ ತಲೆಯನ್ನು ಎಳೆಯುತ್ತಾರೆ, ಹೊಡೆಯುತ್ತಾರೆ. ಆಗ ಕೊಳೆಯಿಂದ ಕೂಡಿದ ಮಾಂಸದ ಮುದ್ದೆಯು ಭೂಮಿಗೆ ಬೀಳುತ್ತದೆ.' ಇದು ವರ್ಣನೆಯೂ ಹೌದು. ವಿವರಣೆಯೂ ಹೌದು.

ಇನ್ನು ಯಮನ ಕಿಂಕರರು ದೇಹಿಗೆ ಕೊಡುವ ಶಿಕ್ಷೆಯನ್ನು ನೋಡುವ -

ಧೇಹೊಂಕಡೆಯಾ ಬಸ್ಪೀ ಚುತ್ಥಸ್ಥೀ ತೂಪತ್ತೊವೆರೆಡ್ಡಾ
ದೇಹೊಂಕುಳೆ ಪೂಳೊವೆರ್ ಮಡುಟ್ ಚಜಪುಪ್ಪೆರ್ ಚಣ್ಣೋ
ದೇಹೊಂಕುಳೆ ಬಾಳ್‌ಟೆ ಖಂಡಿಪೆರ್ ಪೊದ್‌ಪೇರರೆತೇನ್ಯಾ
ದೇಹೀ ನಿನೆಪಂತಿ ಫಲಂಕುಳೆಟ್ ನಭೆವುಪ್ಪುಣ ಚೋದ್ಯೊ ||೨೪||

(ಶ್ರೀ ಭಾಗವತೊ ತೃ. ಸ್ಕಂಧೊ ಪು. ೩೭೩)

ಈ ಯಮದೂತರು ಯಮಲೋಕದವರಾದರೂ ಅವರಿಗೆ ತುಳುನಾಡಿನ ಸಂಸರ್ಗವಿರಬೇಕು! ಬತ್ತಿಗೆ ಬೆಂಕಿ ಹಾಕಿ ಉರಿಸುವುದನ್ನೂ ಅವರು ಯಥೇಚ್ಛವಾಗಿ ತುಳುನಾಡಿನಲ್ಲಿ ನೋಡಿರಬೇಕು! ಅಂತೆಯೇ ತುಳುನಾಡಿನಲ್ಲಿ ಮಡುವಿನಿಂದ (ಕೊಡಲಿ) ಸೌದೆ ಇತ್ಯಾದಿಗಳನ್ನು ಹೋಳುಹೋಳನ್ನಾಗಿ ಮಾಡುವುದನ್ನು, ಸೊಪ್ಪು ಇತ್ಯಾದಿಗಳನ್ನು ಸಣ್ಣದಾಗಿ ಕೊಚ್ಚುವುದನ್ನು ಚೆನ್ನಾಗಿ ಅರೆದು ಹುರಿಯುವುದನ್ನೂ ನೋಡಿರಬೇಕು. ಹಾಗಾದುದರಿಂದ ಜೀವರಿಗೂ ಅದೇ ರೀತಿಯ ಶಿಕ್ಷೆಯನ್ನು ಯಮಲೋಕದಲ್ಲಿ ಅವರು ಕೊಡುತ್ತಾರೆ.

ವೃದ್ಧಾಪ್ಯ ಬಂದಾಗ ನರನ ದೇಹ ಸ್ಥಿತಿ ಹೇಗಾಗುತ್ತದೆ ಎಂಬುದನ್ನೂ ಕವಿ ಇನ್ನಿಲ್ಲವೆಂಬ ಹಾಗೆ ಚಿತ್ರಿಸುತ್ತಾನೆ.

ಕುರೆವೂ ಸ್ವರೊಮಂಚಿಪನಿಂಚಿಪನಾ ಶ್ಲೇಷ್ಮೊ ಮಡೆತೊಂಡ್
ಪರನೋಳಿತ ಧಾರೆಕುಳುದ್ಭವಿಪೂ, ಚಿತ್ತಸ್ವರೊ ಪೋವೋ
ಕರ್‌ಳೀ ಪಿದಯಾವು ಅಪಾನತೆಟೇ ತನು ಮೂಜಮುಡಂಕೂ
ಫೆರಿಯಾ ಮಲೊ ತಾನ್ಪಿನನೇ ಬರುವೂ ಜಾಪಣ್‌ಕಣಸ್ಟಪ್ಪಾ ||೧೦||

(ಶ್ರೀ ಭಾಗವತೊ ತೃ.ಯ. ಸ್ಕಂಧ ಪು. ೩೭೧)

ಶ್ಲೇಷ್ಮವು ಆವರಿಸಿಕೊಂಡು(ಆ ಕಡೆ, ಈ ಕಡೆ) ಸ್ವರವೂ ಕೊರೆಯಲ್ಪಡುತ್ತದೆ. ಲೋಳೆಯು ಧಾರೆಯಾಗಿ ಇಳಿಯುವುದರಿಂದ ಚಿತ್ತಸ್ವರ ಹೋಗುತ್ತದೆ. ಕರುಳು ಹೊರಗಾಗುತ್ತದೆ. ಶರೀರ ಮೂರು ಮೂಲೆಯಾಗಿ ವಕ್ರವಾಗುತ್ತದೆ. ಮಲವು ತನಗೆ ತಿಳಿಯದೆ ಹೊರಬರುವುದು.

ಹೀಗೆ ವಿಷ್ಣುತುಂಗ ಮೂಲದಿಂದ ಇದ್ದಕ್ಕಿದ್ದಂತೆ ಪದ್ಯವನ್ನು ಅನುವಾದಿಸಲೂ ಬಲ್ಲ. ಮೂಲದಿಂದ ಪ್ರೇರಿತವಾಗಿ ಪದ್ಯರಚನೆಯನ್ನು ಮಾಡಬಲ್ಲ. ಮೂಲವನ್ನು ದೂರವಿರಿಸಿ

ಸ್ವರಚನೆಯನ್ನು ಮಾಡಿಯೂ ಸೈ ಎನಿಸಬಲ್ಲ. ಹಿಂದಿನ ವಿಭಾಗದಲ್ಲಿ ಹೇಳಿದ ಮಾತುಗಳನ್ನು ನೆನಪಿಸಿ ಮತ್ತೆ ಮುಂದುವರಿಯುವುದಾದರೆ ಈ ರೀತಿಯ ಪದ್ಯಗಳು ರಸಘಟ್ಟಿಗಳು. ವಿಷ್ಣುತುಂಗನ ಸ್ವಂತಿಕೆಗೆ ಸಾಕ್ಷೀಭೂತವಾದ ಈ ರಚನೆಗಳು ವಿಷ್ಣುತುಂಗನಿಗೆ ಮಹಾಕವಿಗಿರುವ ಯೋಗ್ಯತೆಯನ್ನು, ಪ್ರತಿಭೆಯನ್ನು, ಸೂಕ್ಷ್ಮಗುಣಗ್ರಾಹಿತ್ವವನ್ನೂ ತೋರಿಸಿಕೊಡುತ್ತವೆ.

ಮೂಲಕ್ಕಿಂತ ಸೊಗಸಾದ ರಚನೆಗಳು:- ವಿಷ್ಣುತುಂಗ 'ಸ್ವೀಕರಣ' ಮಾಡುತ್ತಾನೆ ಎಂದ ಮೇಲೆ ಆ ಸ್ವೀಕರಣವು ಎಂತಹದ್ದೆಂಬುದನ್ನು ಆಗ ವಿವರಿಸುವ ಗೋಜಿಗೆ ಹೋಗಲಿಲ್ಲ. ಕನ್ನಡ ಭಾಗವತದಿಂದ ರತ್ನಗಳನ್ನು ಆಯ್ದುಕೊಂಡರೂ ತನಗೆ ಬೇಕಾದಂತೆ ಸೊಗಸಾಗಿ ಆಭರಣಗಳನ್ನು ತಯಾರಿಸಿದ ಆತನ ಔಚಿತ್ಯಪ್ರಜ್ಞೆಯನ್ನು ಗಮನಿಸಬೇಕು. ಮೂಲದ ಭಾವನೆ ವಿಷ್ಣುತುಂಗನ ಕೈಯಲ್ಲಿ ಎಷ್ಟು ಪರಿಪಾಕ ಪಡೆಯುತ್ತದೆ ಎಂಬುದನ್ನು ಮತ್ತೊಮ್ಮೆ ಮೂಲದೊಂದಿಗೆ ಹೋಲಿಸುವ ಪ್ರಯತ್ನ ಇಲ್ಲಿದೆ.

ಶ್ರೀಕೃಷ್ಣನ ಅವತಾರಗಳ ಕುರಿತು ಸೂತ ಹೇಳುವ ಮಾತು ಕನ್ನಡ ಭಾಗವತದಲ್ಲಿ ಹೀಗಿದೆ:

ಜಗದುದಾರನವತಾರ ಸಂಖ್ಯೆಯ
ಬಗೆಯ ಬಲ್ಲವರಾರು ಭೂಪಾಂ
ಶುಗಳನಭದ್ರದ ತಾರೆಗಳನಾಸಾರ ಬಿಂದುಗಳ
ತೆಗೆದು ಲೆಕ್ಕಿಸಬಹುದು ಭೃಗ್ವಾ
ದಿಗಳು ಸುರನರರವರು ಮನ್ವಾ
ದಿಗಳು ಹರಿಯಂಶಾಂಶ ಸಂಭವರಿವರು ಕೇಳೆಂದ ||೧೨||

(ಕ. ಭಾಗವತ ಪ್ರ. ಸ್ಕಂಧ ಪು. ೫)

ವಿಷ್ಣುತುಂಗನ ಕೈಯಲ್ಲಿ ಅದು ಪಳಗಿದ ರೀತಿ ಹೀಗೆ -

ಲೆಕ್ಕೊಮಾಂಪೊಳಿನಂಬರಂಟ್ಪ ಚೋಜಿಕೀನುಡುಸಂಕುಲಂ
ಲೆಕ್ಕೊಮಾಂಪೊಳಿ ಭೂಮಿಟ್ ನಿದೆಸ್ಪ್ಪತ್ತಿ ಧೂಳ್ಂತ ರಾಶಿನೀ
ಲೆಕ್ಕೊಮಾಂಪೊಳಿ ವರ್ಷಧಾರೆನಿ ಸಾಗರಾತಿರಮಾಲೆನೀ
ಲೆಕ್ಕೊ ಮಾಂಪಿಯರೇರ್ ಶ್ರೇಷ್ಠರನಂತ ಮೂರ್ತಿಗುಣೊಂಕುಳೆ ||೩೨||

(ಶ್ರೀ ಭಾಗವತೊ ಪ್ರ. ಸ್ಕಂದೊ ಪು. ೧೮)

ಅಂಬರದಲ್ಲಿರುವ ನಕ್ಷತ್ರಗಳನ್ನು ಲೆಕ್ಕಿಸಬಹುದು, ಭೂಮಿಯಲ್ಲಿರುವ ಧೂಳಿನ ರಾಶಿಯನ್ನು ಲೆಕ್ಕಿಸಬಹುದು. ಸಾಗರದ ತರಂಗಗಳ ಮಾಲೆಯನ್ನೇ ಲೆಕ್ಕಿಸಬಹುದು. ಆದರೆ ಶ್ರೀಕೃಷ್ಣನ, ಅನಂತಮೂರ್ತಿಯ ಗುಣಗಳನ್ನು ಲೆಕ್ಕ ಮಾಡುವುದಾದರೂ ಹೇಗೆ? ಇಲ್ಲಿ ಗಮನಿಸಬೇಕಾದ ಮಾತೆಂದರೆ ಸಾಧ್ಯತೆಗಳನ್ನು ಮೊದಲಿಗೇ ಹೇಳಿ ಆ ಬಳಿಕ ಅದಕ್ಕೆ ಕೊನೆಯಾಗಿ

ಅಸಾಧ್ಯತೆಯನ್ನು ಒಂದೇ ಮಾತಿನಲ್ಲಿ ಹೇಳುವುದರ ಮೂಲಕ, ಅಸಾಧ್ಯತೆಯನ್ನು ವರ್ಣಿಸುವುದಾದರೂ ಹೇಗೆಂದು ಸೂಕ್ಷ್ಮವಾಗಿ, ಪರಿಣಾಮಕಾರಿಯಾಗಿ ವರ್ಣನೆಯೇ ಮಾಡದೆ ಯಥಾಸ್ಥಿತಿಯಲ್ಲಿಯೇ ಬಳಸಿರುವುದರಿಂದ ಮೊದಲ ವರ್ಣನೆಗಳಿಂದ ಕೊನೆಯದು ಬೆಳಗುತ್ತದೆ. ಆದರೆ ಕನ್ನಡ ಭಾಗವತದಲ್ಲಿ ಈ ಕುಸುರಿ ಕೆಲಸ ನಡೆದಿಲ್ಲ. ಅಲ್ಲಿ ಒಂದೇ ಉಸುರಿಗೆ 'ಭೂಪಾಂಶುಗಳನಭ್ರದ ತಾರೆಗಳನಾಸುರ ಬಿಂದುಗಳ ತೆಗೆದು ಲೆಕ್ಕಿಸಬಹುದು' ಎಂದು ಹೇಳಿದೆ. ಇದರಿಂದ ಅದು ವಿಷ್ಣುವಿನ ಗುಣದ ಅನಂತತೆಯನ್ನು ಹೇಳಬೇಕಾದ ರೀತಿಯಲ್ಲಿ ಹೇಳುವುದರಲ್ಲಿ ಸೋತಿದೆ ಎನ್ನಬಹುದು.

ಈ ಮಾತುಗಳನ್ನು ಮತ್ತಷ್ಟು ಸ್ಪಷ್ಟಪಡಿಸುವುದಕ್ಕೆ ಮುಂದಿನ ಪದ್ಯಗಳಿಗೆ ಹೋಗುವ -

ಮುರವಿರೋಧಿಯ ತೋಟಿ ಕಂಸಾ
ಸುರ ಕೃತಾಂತನ ಕೋಟಿ ಸಾಲ್ವನ
ಶಿರಮನೊಡೆದನ ತೋಟಿ ನರಕಾಂತಕನ ಬಲು ತೋಟಿ
ಪರಮಪುರುಷನ ತೋಟಿ ಲೋಕೋ
ತ್ತರವಿಹಾರನ ತೋಟಿ ಬೇಡೆಂ
ದಿರದೆ ನಾಜೆದವಗಡಿಗೆ ಸೂಳಗಿಪ ಕಹಳೆಗಳು ||೨೩||

(ಕನ್ನಡ ಭಾಗವತ ಪ್ರ. ಸಂಪುಟ ಪು. ೨೪)

ಶ್ರೀ ಕೃಷ್ಣ ಪಾಂಡವರ ಮನೆಗೆ ಬಂದಾಗ ವಾದ್ಯ ಮೊಳಗಿದ ರೀತಿಯನ್ನು (ವಾದ್ಯದ ಧ್ವನಿಯನ್ನು) ಕವಿ ವರ್ಣಿಸುವ ರೀತಿಯದು. ವಿಷ್ಣುತುಂಗನಲ್ಲಿಯೂ ಈ ಪದ್ಯವಿದೆ. ಇಡೀ ಪದ್ಯದ ಮುಖ್ಯಪದವಾದ ತೋಟಿಯೂ ಬಳಕೆಯಲ್ಲಿದೆ.

'ನರಕಾಂತಕ ತೋಟಿ ಪಿನಾಕಿಸಖಾ ಮುರವೈರಿನ ತೋಟಿ
ವರಸಾಲ್ವನ ಕಂಸನ ಮಲ್ಲವೆರೇ ಜೈತೀ ಹರಿ ತೋಟಿ
ಗರುಡಧ್ವಜ ತೋಟಿ ಪರಾತ್ಪುರುಷಾ ಖರಮರ್ದನ ತೋಟೀಂ
ದುರಿಪುಪ್ಪೆರ್‌ನಾರ್ ಪ್ರತಾಪೊಮಿನೀ ಜನೊ ಕೇಳ್‌ಕ್‌ಣಂದೊ ||೨೫||

(ಶ್ರೀ ಭಾಗವತೊ ಪ್ರ. ಸ್ಕಂದೊ ಪು. ೮೭)

ತುಳು ಭಾಗವತದ ಈ ಪದ್ಯ ಅದರಷ್ಟಕ್ಕೇ ಸೊಗಸಾದುದು. ಅದು ಅರ್ಥ ವಿವರಣೆ ಮಾಡಿದಾಗ ಪೂರ್ತಿಯಾಗಿ ಸತ್ವವನ್ನೇ ಕಳೆದುಕೊಳ್ಳುವ ಗುಣವುಳ್ಳದ್ದು. ಒಂದು ಮತ್ತು ಮೂರನೇ ಸಾಲಿನಲ್ಲಿ 'ತೋಟಿ' ಎಂದು ಮೊದಲಿಗೇ ಎರಡು ಬಾರಿ ಪುನರಾವರ್ತಿಸಿದರೆ ಎರಡು ಮತ್ತು

ನಾಲ್ಕನೇ ಸಾಲಿನಲ್ಲಿ ಅದನ್ನು ಕೊನೆಯಲ್ಲಿ ಬಳಸುವುದರ ಮೂಲಕ ಕವಿ ಆ ತೂರ್ಯಗಳ ಮೊಳಗುವಿಕೆಯನ್ನು ಕಿವಿಗೆ ಕೇಳುವ ಹಾಗೆ ವರ್ಣಿಸುತ್ತಾನೆ. ಶಬ್ದಗಳ ಮೂಲಕವೇ ವಾದ್ಯದ ಮೊಳಗುವಿಕೆಯನ್ನು ಸಮರ್ಥವಾಗಿ ಸೆರೆಹಿಡಿಯುವುದು ಸಣ್ಣ ಮಾತಲ್ಲ. ಕನ್ನಡದ ಭಾಗವತದ ಕರ್ತೃ ಪರಿಣಾಮಗೊಳಿಸುವ ದೃಷ್ಟಿಯಿಂದ ಸೋತಿದ್ದಾನೆ. ಆತನ ವಾದ್ಯಗಳು ಸಾರುವುದಾದರೆ ವಿಷ್ಣುತುಂಗನ ವಾದ್ಯಗಳನ್ನು 'ಉರಿಪುಪ್ಪನ್' ಊದುವುದು. ಹಾಗಿದ್ದುದರಿಂದಲೇ ಮೊದಲಿನ ಮತ್ತು ಎರಡನೆಯ ಪದ್ಯಗಳ ರಚನೆಯ ಸೌಂದರ್ಯವೇ ಒಡೆದು ತೋರುವಷ್ಟರಮಟ್ಟಿಗೆ ಬೇರೆಯಾಗುತ್ತದೆ.

ಈಗ ಇನ್ನೊಂದು ಪದ್ಯವನ್ನು ನೋಡುವ. ಆದಿವರಾಹನೊಂದಿಗೆ ಹಿರಣ್ಯಾಕ್ಷನ ಯುದ್ಧದ ಸಂದರ್ಭದಲ್ಲಿಯ ಪದ್ಯವಿದು. ಯುದ್ಧದಲ್ಲಿ ಹಿರಣ್ಯಾಕ್ಷ ಮಾಯೆಯಿಂದ ರಾಕ್ಷಸರನ್ನು ಸೃಷ್ಟಿಸುತ್ತಾನೆ. ಆ ರಾಕ್ಷಸ ಸಂದೋಹ ವರಾಹನನ್ನು ಮುತ್ತುತ್ತದೆ.

ಎಲೆಲೆ ಕವಿ ಕವಿ ಸೀಳು ಹಂದಿಯ
ತಲೆಯ ತಿವಿ ತೆಗೆ ಕರುಳತಿದಿಯಸು
ಸುಲಿ ಸುರೌಘದ ದೇಹಿತಿಂದಿನಾಲಾಗಲವಸಾನ
ಕೊಳುಗುಳಿಕೆ ತಾ ಹಾರಿ ಗಡ ತಾ
ನಳವಿಗೊಟ್ಟುದು ಕೊಲ್ಲೆನುತ ಕಳ
ಕಳದ ಕಿತ್ತಾಯುಧದಲ್ಯೆದಿತು ರಾಕ್ಷಸವ್ರಾತ ||೨೬||

(ಕನ್ನಡ ಭಾಗವತ ದ್ವಿ. ಸ್ಕಂಧ ಪು. ೩೫)

ಇದನ್ನೇ ವಿಷ್ಣುತುಂಗ ವಿವರಿಸುವ ಬಗೆ ಹೀಗೆ -

ಪತ್ತ್‌ಲೇ ತಳ್‌ಪೀ ವರಾಹನೀ ಚುತ್ತಲಾ ಬಲೆಯೊಡ್ಡಿಲೇ
ಕುತ್ತ್‌ಸ್ಟೇ ಚೆಡ್‌ಸ್ಟೇ ತಿಗ್‌ಲ್ಬುಲೆ ಕಾರ್‌ಕೈಶಿರೊ ಖಂಡಿಪೀ
ನೆತ್ತೆರುರ್ಪಿಲೆ ಬಟ್ಟಲೊಟ್ಟ್‌ಸ್ಟ್ ತೂವುಟ್‌ಪ್ಪನೆ ಬೈಪವೀಂ
ದಾರ್ತ್‌ ನಾಲಿಶೆಟ್‌ತ್‌ಲಾಕುಳು ಘೆರ್ಜಿಪುಪ್ಪುಣ ಕೌತುಕೊ ||೨೯||

(ಶ್ರೀ ಭಾಗವತೊ ಪ್ರ. ಸ್ಕಂದೊ ಪು. ೩೨೫)

ಎರಡೂ ಪದ್ಯಗಳನ್ನು ಜತೆಯಲ್ಲಿಟ್ಟು ನೋಡಿದರೆ ರೌದ್ರತೆ ಮೊದಲನೆಯದರಿಂದ ಎರಡನೆಯದರಲ್ಲಿಯೇ ಹೆಚ್ಚು ಕುದಿಯುವುದನ್ನು ನೋಡಬಹುದು. ಒಂದು ಹಂದಿ ಎದುರಾದರೆ ಜನ ಹೇಗೆ ಪ್ರತಿಕ್ರಿಯಿಸಬಹುದೆಂಬುದರ ಚಿತ್ರಣ ವಿಷ್ಣುತುಂಗ ಕೊಡುತ್ತಾನೆ. ಒಂದರ ಮೂಲಕ ಒಂದು ಕ್ರಿಯೆಯನ್ನು ಪೋಣಿಸುತ್ತಾ - ಹಿಡಿಯಿರಿ (ಪತ್ತ್‌ಲೇ), ತಡೆಯಿರಿ (ತಳ್‌ಪಿ),ಸುತ್ತಲೂ ಬಲೆಯೊಡ್ಡಿ (ಚುತ್ಯಲಾ ಬಲೆಯೊಡ್ಡಿಲೇ), ಕುತ್ತ್‌ಸ್ಟೇ (ಕುತ್ತುವುದರಿಂದ), ಚೆಡ್‌ಸ್ಟೇ (ಕೆಡಹಿ),

ತಿಗ್‌ಲ್ಟುಲೇ (ಸಿಗಿಯಿರಿ), ಕಾರ್ ಕೈ ಶಿರೋ ಖಂಡಿಪೀ (ಕಾಲು ಕೈ ತಲೆ ಕತ್ತರಿಸಿ), ನೆತ್ತರುರ್ಪಿಲೆ ಬಟ್ಟಿಲೊಟ್ಟ್‌ಸ್ಟ್ (ಬಟ್ಟಲು ಒಡ್ಡಿ ನೆತ್ತರನ್ನು ಹೀರಿ), ತೂವುಟಪ್ಪನೆ ಬೈಪವಿ (ಬೆಂಕಿಯಲ್ಲಿ ಬೇಯಿಸಿ) ಹಂದಿಯನ್ನು ಮುತ್ತುವ ಕ್ರಿಯೆ ಮೂಲಕ್ಕಿಂತ ಹೆಚ್ಚು ಸತ್ತ್ವಶಾಲಿಯಾದುದು. 'ನೆತ್ತುರುರ್ಪಿಲೆ ಬಟ್ಟ ಲೊಟ್‌ಸ್ಟ್' ಎನ್ನುವುದು ಭೂತಾರಾಧನೆಗೆ ಸಂಬಂಧಿಸಿದ ಮಾತು ಎಂದೆನಿಸುತ್ತದೆ.

ವರಾಹ ಮತ್ತು ಹಿರಣ್ಯಾಕ್ಷನ ಯುದ್ಧ ಸಂದರ್ಭವನ್ನು ಇದೇ ಸಂದರ್ಭದಲ್ಲಿ ನೋಡಬಹುದು. ಮುಷ್ಟಿಯುದ್ಧ ವಿವರಣೆಯು ಕನ್ನಡ ಭಾಗವತದಲ್ಲಿ ಈ ರೀತಿ ಇದೆ. -

ಎಲವೊ ತಿವಿ ತಿವಿ ತೀರಿತೇ ಭುಜ
ಬಲದ ನಿನ್ನಗ್ಗಳಿಕೆ ಕೆಲಸಕೆ
ಕಳಸವಿದೆ ನೋಡಿಲ್ಲ ತಡವಿನ್ನೊಂದು ಗಾಯದಲಿ
ಕೊಲುವೆನೆನುತೆಡಗಾಲಲೊದೆದನು
ಖಳನ ಕೆನ್ನೆಯನೊರಲುವವನಿಗೆ
ಕಳೆವರವ ಚಾಚಿದನು ಬಿದ್ದನು ಬಿಟ್ಟ ಕಂಗಳಲಿ ||೩೬||

(ಕನ್ನಡ ಭಾಗವತ ದ್ವಿ. ಸಂ.ಪು. ೩೬)

ಇದೇ ಸಂದರ್ಭವನ್ನು ತುಳುಭಾಗವತದಲ್ಲಿ ವರ್ಣಿಸಿರುವುದು ಹೀಗೆ

ಘಟ್ಟಿಪುಪ್ಪೆರ್ ಮುಟ್ಟಪಾಯಿಸ್ಟ್ ಮೊಟ್ಟ್‌ಸ್ಟ್ ಮುಡುಪಾಯಿಸ್ಟ್
ಕಷ್ಟಿಪುಪ್ಪೆರ್ ಚೆಟ್ಟ್‌ರೆಚ್ಚಿತ್ ಬಟ್ಟೊಮಾ ಚುಲುಯರ್ಪೆರ್
ಮುಟ್ಟಿ ಮರ್ಗಿಲ್ ಬಟ್ಟಿ ಜಾನು ವ ಚೆಟ್ಟ್, ಸ್ಟೋ ರುಧಿರಂತವಾ
ಮುಷ್ಟಿಯುದ್ಧೋಮಿನಿಂಚ ದಾನವೆಸ್ಸೃಷ್ಟಿನಾಥೆಯ ವೆಂದೆರಂ ||೧೧||

(ಶ್ರೀ ಭಾಗವತೊ ತೃ. ಸ್ಕಂಧೊ, ಪು. ೩೦೮)

ನಿಜವಾಗಿ ಹೇಳುವುದಾದರೆ ಕನ್ನಡ ಭಾಗವತದಲ್ಲಿ ಮುಷ್ಟಿಯುದ್ಧವನ್ನು ಈ ರೀತಿಯಾಗಿ ಕಣ್ಣಿಗೆ ಕಟ್ಟುವಂತೆ ಹೇಳುವ ಪದ್ಯವಿಲ್ಲ. ಇದೆ ಎಂದು ಗುರುತಿಸಬಹುದಾದ ಪದ್ಯ ಈಗಾಗಲೇ ಹೇಳಿರುವಂಥದ್ದು. ಅದರಲ್ಲಿ ಮುಷ್ಟಿ ಯುದ್ಧವನ್ನು 'ತಿವಿ ತಿವಿ' ಎಂದು ಹೇಳುತ್ತಲೇ ನಿಲ್ಲಿಸಲಾಗಿದೆ. ಈ ದೃಷ್ಟಿಯಿಂದ ವಿಷ್ಣುತುಂಗನು ಕನ್ನಡ ಭಾಗವತಕಾರನಿಗಿಂತ ಮುಂದೆ ಇದ್ದಾನೆ. ಎನ್ನಬಹುದು. ಮತ್ತೆ ಮತ್ತೆ ಅನುರಣಿತವಾಗಿರುವ 'ಟ್' ಮತ್ತು 'ಸ್ಟ್' ಕಾರಗಳು ವರ್ಣನೆಯನ್ನು ಸಲಿಲಗೊಳಿಸುತ್ತದೆ. ಮೂಲಕ್ಕಿಂತ ಸೊಗಸಾಗಿದೆ ಎಂದು ಹೇಳಬಹುದಾದ ಪದ್ಯವಿದು.

ಈವರೆಗೆ ಬೇರೆ ಬೇರೆ ಶೀರ್ಷಿಕೆಯಡಿಯಲ್ಲಿ ತುಳುಭಾಗವತ ಮತ್ತು ಕನ್ನಡ ಭಾಗವತವನ್ನು ಮುಖಾಮುಖಿಯಾಗಿಸಿ ನೋಡಲಾಗಿದೆ. ಇಲ್ಲಿಯವರೆಗೆ ಸಮೀಕ್ಷಿಸಿದ ಪದ್ಯಗಳಿಗೆ ಸಂಬಂಧಿಸಿ ಹೇಳುವುದಾದರೆ ಭಾಗವತ ರಚನೆಗೆ ಸಂಬಂಧಿಸಿದಂತೆ ವಿಷ್ಣುತುಂಗನದು ತನ್ನ ಕೈಗಳನ್ನು ತಾನೇ ಕಟ್ಟಿಕೊಂಡವನ ರೀತಿಯದಾಗಿದೆ. ಆತ ಸ್ವರಚನೆಯನ್ನು ಸಮರ್ಥವಾಗಿ ಮಾಡಬಲ್ಲ. ಮೂಲವನ್ನು ಅನುಸರಿಸುವಾಗಲೂ ಸ್ವಂತಿಕೆಯ ಛಾಪನ್ನು ಹಾಕಬಲ್ಲ. ಕೆಲವೊಮ್ಮೆ ಮೂಲವನ್ನು ಮತ್ತಷ್ಟು ಸೊಗಯಿಸಬಲ್ಲ. ಈ ಸಾಮರ್ಥ್ಯವಿದ್ದರೂ ಆತ ಕನ್ನಡದ ಶ್ರೇಷ್ಠಕವಿಗಳಾದ ಪಂಪ, ಕುಮಾರವ್ಯಾಸರ ಹಾಗೆ 'ಕಾವ್ಯಕೆ ಗುರು'ವಾಗಬೇಕು ಎನ್ನುವ ಉದ್ದೇಶವಿರಿಸಿಕೊಂಡವನಲ್ಲ. 'ಅಂಬುಜ ಪ್ರಿಯನುಂಬುಟೇ ನಲಿಪುಪ್ಪಿ ಮೆನ್ಪುಲಿತಂದೆವೇ' ಎನ್ನುವ ವಿನಯವನ್ನು ಕಾವ್ಯದ ಉದ್ದಕ್ಕೂ ಪಾಲಿಸಿದ್ದಾನೆ. ಕವಿಗೆ ವಿನಯಬೇಕು. ಆದರೆ ಆ ವಿನಯ 'ವ್ಯಾಸ ಮುನೀಂದ್ರ ವಚನಾಮೃತ ವಾರ್ಧಿಯನೀಸುವೆಂ' ಎಂಬ ಆತ್ಮ ವಿಶ್ವಾಸದೊಂದಿಗೆ 'ಕವಿವ್ಯಾಸನೆಂಬ ಗರ್ವಮೆನಗಿಲ್ಲ' ಎನ್ನುವ ವಿನಯದಿಂದಿರ ಬೇಕು. ವಿಷ್ಣುತುಂಗನಿಗೆ ವಿನಯವೇ ಮುಖ್ಯವಾದುದರಿಂದ ಪ್ರತಿಭಾವಂತನಾದ ಕವಿಯೋರ್ವ 'ಹೀಗೆ ಮಾಡಬಹುದೇ' ಎನ್ನುವ ವೇದನೆಯುಂಟಾಗುತ್ತದೆ. ಅವನ ಕಾವ್ಯದ ರಾಶಿ ರಾಶಿಯಾದ ನೀರಸ ಭಾಗಗಳನ್ನು ಓದಿದಾಗ ಇದಕ್ಕೆ ಕಾರಣ ವಿಷ್ಣುತುಂಗ ಕಣ್ಣ ಮುಂದೆ ಇರಿಸಿಕೊಂಡ ಕನ್ನಡ ಭಾಗವತವೇ. ಕನ್ನಡ ಭಾಗವತದ ಕರ್ತೃಗೆ ಶ್ರೀಹರಿಯ ಲೀಲೆಯನ್ನು ವರ್ಣಿಸುವ ಉದ್ದೇಶ ಮಾತ್ರವೇ ಇರುವುದರಿಂದ ಅಲ್ಲಿ ಕಾವ್ಯ ಗುಣ ಎರಡನೇ ದರ್ಜೆಯದಾಗುತ್ತದೆ.

ಕಾವ್ಯದ ನೆಲೆಯಲ್ಲಿ ಕನ್ನಡ ಮತ್ತು ತುಳು ಭಾಗವತಗಳ ವೈಶಿಷ್ಟ್ಯವನ್ನು ನೋಡಿಯಾಯಿತು. ಒಂದರ್ಥದಲ್ಲಿ ಕವಿಯೋರ್ವನ ಪ್ರತಿಭೆಯ ಆಳ ಹರವುಗಳನ್ನು ಕಂಡುಕೊಳ್ಳುವುದು ಇಲ್ಲಿಯೆ ಎಂದೆನ್ನಬಹುದು. ಈಗ ವಿಷ್ಣುತುಂಗನ ಸ್ವಂತಿಕೆಗೆ ಸಂಬಂಧಿಸಿದ ಕೆಲ ಮಾರ್ಪಾಡುಗಳು. ಸಂಸ್ಕೃತದಲ್ಲಿ ಸ್ಕಂಧಗಳು ಅಧ್ಯಾಯಗಳಾಗಿವೆ. ಆದರೆ ಕನ್ನಡ ಭಾಗವತದಲ್ಲಿ ಸ್ಕಂಧಗಳನ್ನು ಸಂಧಿಯಾಗಿ ಮಾಡಿದರೆ ತುಳು ಭಾಗವತದಲ್ಲಿ ಸ್ಕಂಧಗಳು ಅಧ್ಯಾಯಗಳಾಗಿಯೇ ವಿಂಗಡಿಸ್ಪಟ್ಟಿವೆ. ಇದು ಸಂಸ್ಕೃತದ ಮಾದರಿಯನ್ನು ಅನುಸರಿಸಿದ ರೀತಿಯಾಗಿದೆ. ಕನ್ನಡ ಭಾಗವತದಲ್ಲಿ ಸಂಧಿಯ ಪ್ರಾರಂಭಕ್ಕೆ ೧/೨ ಭಾಮಿನಿಯೊಂದು ಕಥೆಯ ಸಾರವನ್ನು ಹೇಳಿದರೆ ತುಳು ಭಾಗವತದಲ್ಲಿ ಹೆಚ್ಚಿನ ಸಂದರ್ಭದಲ್ಲಿ ಅಧ್ಯಾಯದ ಕೊನೆಯ ಪದ್ಯ ಸಾರವನ್ನು ವಿವರಿಸುತ್ತದೆ. ಕೆಲವು ಕಡೆ ವರ್ಣನೆಯ ಸಂದರ್ಭದಲ್ಲಿ ವಿಷ್ಣುತುಂಗ ಕನ್ನಡ ಭಾಗವತಕ್ಕೆ ಭಿನ್ನವಾಗಿ ನಿಲ್ಲುತ್ತಾನೆ. ಸಂಸ್ಕೃತ ಭಾಗವತದಲ್ಲಿ ವಿಷ್ಣುವಿನ 'ವಿಶುದ್ಧ ಸತ್ತ್ವಮಯ' ರೂಪದ ವರ್ಣನೆ ಇದೆ. ಕನ್ನಡ ಭಾಗವತದಲ್ಲಿ ಅದಿಲ್ಲ. ತುಳುಭಾಗವತದಲ್ಲಿ ಇದರ ಪ್ರಸ್ತಾಪವಿದೆ. ತೃತೀಯ ಸ್ಕಂಧದಲ್ಲಿ ವಿಷ್ಣುವಿನ ವಿವರವಾದ ವರ್ಣನೆಯಿದೆ. ಕನ್ನಡ ಭಾಗವತದಲ್ಲಿ ಒಂದೇ ಪದ್ಯದಲ್ಲಿ ಒಂದೊಂದು ಅವತಾರವನ್ನು ವಿವರಿಸುವ ಪ್ರಯತ್ನವಿದೆ. ಕೌರವ ಪಾಂಡವರ

ಯುದ್ಧವನ್ನು ನಿತ್ಯಾತ್ಮ ಒಂದೇ ಭಾಮಿನಿಯಲ್ಲಿ ಮುಗಿಸಿದ್ದರೆ ವಿಷ್ಣುತುಂಗ ಅದನ್ನು ಮೂರು - ನಾಲ್ಕು ಪದ್ಯಗಳಿಂದ ವಿವರಿಸುತ್ತಾನೆ. ಅದಲ್ಲದೆ ಕಪಿಲದ ಉದ್ದೇಶವೂ ಕನ್ನಡ ಭಾಗವತದ ಮಾದರಿಯಲ್ಲಿಲ್ಲದೆ ಅದು ಸಂಸ್ಕೃತ ಭಾಗವತದ ಮಾದರಿಯನ್ನೇ ಕೆಲವೊಮ್ಮೆ ಅನುಸರಿಸುವಂತಿದೆ. ಕತೆಯು ಅಧ್ಯಾಯ ಕ್ರಮದಲ್ಲಿ ವಿಂಗಡನೆಗೊಂಡು ಸಾಗುವಾಗ ಕೆಲವೊಮ್ಮೆ ವಿವರಗಳು ಕನ್ನಡ ಭಾಗವತಕ್ಕಿಂತ ಬೇರೆಯೇ ರೀತಿಯಲ್ಲಿ ವಿಭಾಗಗೊಳ್ಳುತ್ತವೆ. ಅಂದರೆ ಕನ್ನಡ ಭಾಗವತದಲ್ಲಿ ಒಂದು ಅಧ್ಯಾಯದಲ್ಲಿ ಮುಕ್ತಾಯಗೊಂಡ ವಿವರ ಇದರಲ್ಲಿ ಮತ್ತೊಂದು ಅಧ್ಯಾಯಕ್ಕೂ ಮುಂದುವರಿಯುತ್ತದೆ. ವಿಷ್ಣುತುಂಗ ಬಹಳಷ್ಟು ಸ್ವಂತಿಕೆಯನ್ನು ತೋರಿಸುವುದು ಛಂದಸ್ಸಿನ ಪ್ರಯೋಗದಲ್ಲಿ. ವಿದ್ವಾಂಸರು ಈ ದಿಸೆಯಲ್ಲಿ ಆತ ಓರ್ವ ಪ್ರಯೋಗಶೀಲನಾದ ಕವಿ ಎಂಬುದನ್ನು ಹೇಳಿದ್ದಾರೆ. ಆತನ ಛಂದಸ್ಸಿನ ಕುರಿತಾಗಿ ಪ್ರತ್ಯೇಕ ಅಧ್ಯಯನವನ್ನೇ ಮಾಡಬಹುದು. ಪ್ರಸ್ತುತ ಪ್ರಬಂಧವನ್ನು ಎರಡು ಕಾವ್ಯಗಳ ಕಾವ್ಯಗುಣವನ್ನಷ್ಟೇ ತೌಲನಿಕವಾಗಿ ನೋಡುವುದರಿಂದ ಛಂದಸ್ಸಿನ ಮಾತು ಈ ಪ್ರಬಂಧದ ವ್ಯಾಪ್ತಿಗೆ ಮೀರಿ ನಿಲ್ಲುತ್ತದೆ. ಅದಲ್ಲದೆ ಛಂದೋ ರಚನೆಗಳಿಗೆ ಸಂಬಂಧಿಸಿದಂತೆ ತುಲನಾತ್ಮಕ ಅದ್ಯಯನವು ವಿಶೇಷವಾದುದೇನನ್ನೂ ಹೇಳದೆ ಕವಿಯ ಪ್ರಯೋಗಶೀಲತೆಯನ್ನಷ್ಟೆ ಹೇಳುವಂತಹದಾಗಿರುವುದರಿಂದ ಅದನ್ನು ಕೈಬಿಡಲಾಗಿದೆ.

ಇಲ್ಲಿಯವರೆಗೆ ಸಾಕಷ್ಟು ಉದ್ದವಾಗಿ ತುಳುಭಾಷೆ, ತುಳುನಾಡು, ಹಳೆಯ ಕಾವ್ಯ ಮೊದಲಾಗಿ ಚರ್ಚಿಸಲಾಯಿತು. ತುಳು ಪಂಡಿತರಿಗೆ ಇಲ್ಲಿ ಹೇಳಿರುವ ಕೆಲವು ವಿಷಯಗು ಸಾಮಾನ್ಯ ಎನಿಸಿರಬಹುದು. ಆದರೆ ಕನ್ನಡದ ಓದುಗರಿಗೆ ಇದರ ಅವಶ್ಯಕತೆ ಇದೆ. ಏಕೆಂದರೆ, ಕರ್ನಾಟಕದ ಬಹುತೇಕ ಕಡೆ 'ತುಳುಭಾಷೆ' ಎನ್ನುವ ಬಗೆಗೆ ಏನೊಂದು ತಿಳಿದಿಲ್ಲ. ಅಂತಹ ಭಾಷೆಯ ಇರುವಿಕೆಯ ಬಗೆಗೆ ಅವರಿಗೆ ಅನುಮಾನವಿದೆ. (ಇದಕ್ಕೆ ಇನ್ನೊಂದು ವಿರುದ್ಧವಾದ ಸಂಗತಿಯೆಂದರೆ ತುಳುನಾಡಿನಲ್ಲಿ ಬಹುತೇಕ ಮಂದಿ ನಾನು ಜಗತ್ತಿಗೇ ತಿಳಿದವರು ಎಂದು ತಲೆತುಂಬ ತುಂಬಿಕೊಂಡಿರುವುದು!) ಇಂದಿಗೂ ತುಳುಲಿಪಿ, ತುಳು ಮಾರ್ಗಕಾವ್ಯಗಳು ಇವುಗಳ ಬಗೆಗೆ ರಾಶಿರಾಶಿಯಾಗಿರುವ ಮಾಹಿತಿಗಳಿಂದ ಕನ್ನಡ ಸಾಹಿತ್ಯದ ಚರ್ಚೆಯ ಮೇಲೆ ಎಳ್ಳಷ್ಟು ಪರಿಣಾಮವಾಗಿಲ್ಲ!

ಕನ್ನಡದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಹಳಸಲು ಚರ್ಚೆಯೊಂದು ಮತ್ತೆ ಮತ್ತೆ ಬೇರೆ ಬೇರೆ ಹೆಸರಿನಲ್ಲಿ (ಉದಾ: ಸಾಂಸ್ಕೃತಿಕ ಮುಖಾಮುಖಿ ಇತ್ಯಾದಿ) ತಲೆದೋರುತ್ತಿದೆ. ಅದಕ್ಕೆ ಯಾವ ಗುರುತರವಾದ ಹೊಣೆಗಾರಿಕೆಯಾಗಲೀ, ತತ್ತ್ವಸಿದ್ಧಾಂತಗಳಾಗಲೀ ಕಂಡುಬರುವುದಿಲ್ಲ. ತಕ್ಷಣಕ್ಕೆ ಏನು ಹೊಳೆಯುವುದೋ ಅದುವೇ ಸಾಂಸ್ಕೃತಿಕ ಚರ್ಚೆ ಎನ್ನುವಷ್ಟು ವಿಚಾರವಾಗಿ ಮತ್ತು ಗರ್ವ ಸಹಿತವಾಗಿ ಆ ಚರ್ಚೆಗಳು ನಡೆಯುತ್ತಿವೆ. ಆದರೆ ತುಳುಭಾಷೆ ಮತ್ತು ತುಳು ಕಾವ್ಯ ಪರಂಪರೆಯ ಬಗೆಗೆ ಈಗ ನಡೆಯುತ್ತಿರುವ ಚರ್ಚೆಗಳೆಲ್ಲ ಸಾಹಿತ್ಯ ಮತ್ತು ಸಂಸ್ಕೃತಿಯ ನಡುವಣ ಚರ್ಚೆಗಳು ಹೇಗಿರಬೇಕೆಂಬುದಕ್ಕೆ ಮಾದರಿಗಳಾಗಿವೆ. ತುಳುವಿನ

ಬಗೆಗಿರುವ ಅಪನಂಬಿಕೆಗಳು (ಲಿಪಿಯಿಲ್ಲ, ಪ್ರಾಚೀನ ಕಾವ್ಯಗಳಿಲ್ಲ ಇತ್ಯಾದಿ) ಇಂತಹ ಚರ್ಚೆಗಳಿಂದ ದೂರವಾಗಿ ತುಳುವರಿಗೆ ಸ್ವಾಭಿಮಾನ, ಗೌರವಗಳು ಪ್ರಾಪ್ತಿಯಾಗಿವೆ. ಸಾಹಿತ್ಯ ಮತ್ತು ಸಂಸ್ಕೃತಿಯ ಚರ್ಚೆಗಳು ಅಷ್ಟು ಮಾಡಿಲ್ಲವೆಂದಾದರೆ ಅವುಗಳಿಂದ ಉಪಯೋಗವಾದರೂ ಏನು? ಕನ್ನಡದಲ್ಲಿ ಈಗ ನಡೆಯುತ್ತಿರುವುದು ಅಂತಹ ತೌಡು ಕುಟ್ಟುವ ಚರ್ಚೆಗಳೇ.

ಇದೂ ಕಾರಣವಾಗಿ, ತುಳುವಿನ ಮಾರ್ಗ ಕಾವ್ಯ ಪರಂಪರೆಯ, ಅದರ ಶೋಧನೆಯ ಹಿಂದಿನ ಸಾಹಸ ಸಹಿತವಾಗಿ ಇಷ್ಟು ವಿವರಗಳನ್ನು ಹೇಳುವುದು ಅನಿವಾರ್ಯವಾಯಿತು.

ಸಹಾಯಕ ಗ್ರಂಥಗಳು:

1. ನಾವಡ ಎವಿ, ವಾಮನ ನಂದಾವರ, ಸುಬ್ಬಣ್ಣ ರೈ, ಮಾಧವ ಪೆರಾಜೆ (ಸಂ) ತುಳು ಸಾಹಿತ್ಯ ಚರಿತ್ರೆ. ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, 2007

2. ವೆಂಕಟರಾಜ ಪುಣಿಂಚತ್ತಾಯ (ಸಂ) ಶ್ರೀ ಭಾಗವತೋ. ಮಂಗಳ ಗಂಗೋತ್ರಿ: ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, 1984

3. ವೆಂಕಟರಾಮಪ್ಪ (ಸಂ) ನಿತ್ಯಾತ್ಮಶುಕಯೋಗಿ ವಿರಚಿತ ಕನ್ನಡ ಭಾಗವತ. ಮೈಸೂರು: ಶಾರದಾ ಮಂದಿರ, 1990.

ಶ್ರೀ ಭಾಗವತಾರ್ಥ
ಪ್ರಥಮ ಸ್ಕಂದ

ಅಧ್ಯಾಯ ೧

೧. ಆಕಾಶಾದಿಕಾರ್ಯಗಳಲ್ಲಿ ಸರ್ವಜ್ಞನಾದವನಾಗಿಯೂ, ಸತ್ವ, ರಜಸ್, ತಮಸ್‌ಗಳೆಂಬ ತ್ರಿಸರ್ಗಗಳನ್ನೂ, ಸೃಷ್ಟಿ, ಸ್ಥಿತಿ, ಲಯ ಎಂಬಿತ್ಯಾದಿ ಜನ್ಮಾದಿಗಳನ್ನು ನಿರ್ಮಿಸಿದವನಾಗಿಯೂ; ಬ್ರಹ್ಮನೇ ಮೊದಲಾದ ಕವೀಶ್ವರರು ತನ್ನನ್ನು ತಿಳಿಯುವ ಹಾಗೆ ನೀರು, ತೇಜ ಮತ್ತು ಮಣ್ಣಿನ ಪಿಂಡದ ವಿನಿಮಯ ರೂಪವಾದ ತ್ರಿವೃತ್ಕರಣವೆಂಬ ಕಾರ್ಯವನ್ನು ಯಾರು ಪ್ರಾರಂಭಿಸಿದರೋ - ತನ್ನ ಸ್ವರೂಪ ಜ್ಞಾನದಿಂದ ಯಾರು ಮಾಯೆಯಿಂದ ಬಿಡುಗಡೆ ಹೊಂದಿರುವರೋ - ಆ ಪರಾತರ ಸತ್ಯಕ್ಕೆ ಕಾವ್ಯದ ಮೊದಲಲ್ಲಿ ವಂದಿಸುತ್ತೇನೆ.

೨. ಇದು ಧರ್ಮಗಳ ಸಾರಸರ್ವಸ್ವ. ವಿದ್ವಾಂಸರು ತಿಳಿದ ಹಾಗೆ, ತಾಪತ್ರಯಗಳನ್ನು ನಾಶ ಪಡಿಸುವಂತಹದ್ದು. ಅಂತಹ ಸನ್ಮಾರ್ಗವನ್ನು ತೋರಿಸಿ, ಭಾಗವತವನ್ನು ರಚಿಸಿದ, ವೇದಾಂತಗಳನ್ನು ತಿಳಿದಿರುವ ಮಹಾಮುನಿಯಾದ ವ್ಯಾಸ ಮಹರ್ಷಿಯ ಶ್ರೀ ಚರಣಕ್ಕೆ ವಂದಿಸುತ್ತೇನೆ.

೩. ವೇದಗಳೆನ್ನುವ ಕಲ್ಪತರುಗಳ ತುದಿಯಲ್ಲಿ ರಸಭರಿತವಾಗಿರುವ ಭಗವತ್ಕಥೆ ಇದು. ಇದನ್ನು ಸೃಷ್ಟಿಸಿ ತಾನೊಬ್ಬನೇ ತೆಗೆದುಕೊಳ್ಳದೆ ಈ ಸಮಸ್ತ ಲೋಕಕ್ಕೆ ತನ್ನ ಮುಖಗಳೆಂಬ ಕಮಲದ ಮೂಲಕ ಸುರಿಸಿದ ಗುರುವಾದ ಶುಕಯೋಗಿಯನ್ನು ವಂದಿಸುತ್ತೇನೆ.

೪. ನಿತ್ಯರೂ, ನಿರ್ಮಲರೂ, ನಿರಾಮಯರೂ, ರೋಗರಹಿತರೂ ಮೂರು ಮೂರ್ತಿಗಳೂ, ಪೂರ್ಣರೂ ಆಗಿ ನಿತ್ಯವೂ ವ್ಯವಹರಿಸುತ್ತಿರುವ ಬ್ರಹ್ಮ, ವಿಷ್ಣು, ಮಹೇಶ್ವರರ ಪಾದವನ್ನು ಭಕ್ತಿಯಿಂದ ಮುಟ್ಟಿ, ನಿರಂತರವಾಗಿ ಕೀರ್ತಿಸುತ್ತೇನೆ.

೫. ತನ್ನನ್ನು ತಾನು ತೋರ್ಪಡಿಸಿಕೊಳ್ಳದೆ ತನ್ನ ಬುದ್ಧಿಯ ಬಲದಿಂದಲೇ ಸಚರಾಚರವನ್ನು ನಿರ್ಮಿಸಿ, ಅದರಲ್ಲಿ ಕರ್ಮಕೃತಗಳನ್ನು ಕಣ್ಣಿನಲ್ಲಿ ಪಾಪೆ ನಲಿಯುವ ಹಾಗೆ (ಪಾಪೆ - ಕಣ್ಣಿನಲ್ಲಿರುವ ಕಪ್ಪಾದ ಗುಂಡಾದ ಭಾಗ) ಅವಾಗಾವಾಗ ಹುಟ್ಟಿ - ಸಾಯುವ ತೆರದಲ್ಲಿ ಸಂಯೋಜಿಸಿದ, ಅದಕ್ಕೆ ಸಾಕ್ಷಿಯಾದ ಆ ಪರಾತ್ಪರ ಶಕ್ತಿಗೆ ವಂದಿಸುತ್ತಾ ಕಥೆ ಹೇಳಬೇಕು ತಾನೇ?

೬. ಸುರಾಸುರರ ಕಿರೀಟಗಳ ಮಣಿ ಪ್ರಭೆಯಿಂದ ಬೆಳಗುವ ಉತ್ಕೃಷ್ಟವಾದ ಪಾದಗಳುಳ್ಳ ವಿಘ್ನೇಶ್ವರ ಮೂರ್ತಿಯೇ - ಹೊಸ ಕವಿತೆಯನ್ನು ಹೇಳುವುದಕ್ಕೆ - ನೀನು ನನಗೆ ಬುದ್ಧಿಯನ್ನು ಕೊಡಬೇಕು. ನನ್ನ ಈ ವಿನಮ್ರ ಪ್ರಾರ್ಥನೆಯನ್ನು ವಸುಧೆಯ ಬುದ್ಧಿವಂತರೂ ಪರಿಗ್ರಹಿಸಿ ಅನುಗ್ರಹಿಸಬೇಕು.

೭. ನಳಿನಾಸನನಾಗಿರುವ ಬ್ರಹ್ಮನೆಂಬ ತಾವರೆಯ ಒಂದು ಕೊಳ. ಆ ಕೊಳದ ನಡುವಿನಲ್ಲಿರುವ ಆ ನಾಲ್ಕು ಆಯತಾಕಾರದ ಕಮಲ ಮುಖಗಳ ಸುಕರ್ಣಿಕೆಯಲ್ಲಿ ನೆಲೆಯಾಗಿ ಸದಾ ಶೋಭಿಸುವ, ಕಳಹಂಸದಂತೆ ಶುಭ್ರವಾದ ಬಣ್ಣವನ್ನು ಹೊಂದಿರುವ ಶರೀರೆಯಾದ ಸರಸ್ವತಿಯೇ ನನ್ನ ನಾಲಗೆಯಲ್ಲಿ ತುಳುಭಾಷೆ ಕವಿತೆಯನ್ನು ಅನುಗ್ರಹಿಸು!.

೮. ಶುಕರು, ನಾರದರು, ವ್ಯಾಸರು, ವಸಿಷ್ಠರು, ಜಮದಗ್ನಿ, ಪುಲಸ್ತ್ಯ ಬಕದಾಲ್ಭ್ಯ, ಪರಾಶರ, ಗೌತಮ, ಕಣ್ವ, ಅಂಗೀರಸ, ಶೌನಕ, ಜೈಮಿನಿ, ಅರುಣಿ ಹಾಗೂ ಸನಕಾದಿಗಳಿಗೆ ಭಕ್ತಿಯಿಂದ ವಂದಿಸಿ ಭಾಗವತಾರ್ಥವನ್ನು ವರ್ಣಿಸುತ್ತೇನೆ.

೯. ಇದು ನಿಜವಾಗಿಯಾದರೋ ವೇದಗಳ ಸಾರ. ಆದಿಯಲ್ಲಿ ಈ ಶ್ರೀ ಭಾಗವತಾರ್ಥವನ್ನು ಬ್ರಹ್ಮದೇವರು ಶ್ರೀ ನಾರದರಿಗೆ ಸೂಚಿಸಿದರು. ಅದನ್ನು ವ್ಯಾಸರಿಗೆ ಉಪದೇಶಿಸಿದವರು ನಾರದರು. ಇದರ ಪೂರ್ಣವಾದ ವಿವರಣೆಯನ್ನು ವ್ಯಾಸರಿಂದ ಪಡೆದು ಶ್ರೀ ಶುಕರು ರಾಜನಿಗೆ ಬೋಧಿಸಿದರು.

೧೦. ನೈಮಿಷಾರಣ್ಯದಲ್ಲಿ ಪರೀಕ್ಷಿತ ರಾಜನಿಗೆ ಶ್ರೀ ಶುಕರು ಹೇಳಿದ ಈ ಪರಮಾರ್ಥವನ್ನು ಸೂತರು ಹೇಳಿದ್ದರು. ಹಿಂದೆಯೇ ಕನ್ನಡದಲ್ಲಿ ಅದನ್ನು ಪರಲೋಕ ಹಿತಾರ್ಥವಾಗಿ ಆರಾಧ್ಯನು ಪ್ರಕಾಶ ಪಡಿಸಿದ್ದನು. ಅದನ್ನೇ ನಾನು ತುಳು ಭಾಷೆಯಲ್ಲಿ ಕಾವ್ಯವಾಗಿ ಬರೆಯುತ್ತೇನೆ.

೧೧. ಕಾಳಿದಾಸ, ಭಟ್ಟನಾರಾಯಣ, ಮೇಧಾವಿ ಮೇಘ, ಮಯೂರ ಶಿವನಂತಿರುವ ವ್ಯಾಸ, ಕುಮಾರವ್ಯಾಸ, ವಾಲ್ಮೀಕಿ, ಕೋಳಿನಾತರೇ ಮೊದಲಾದವರು ಆದಿಯಲ್ಲಿ ಅನೇಕ ಶಾಸ್ತ್ರ - ಪುರಾಣಗಳನ್ನು ರಚಿಸಿದ್ದಾರೆ. ಅವರನ್ನೆಲ್ಲ ವಂದಿಸಿಕೊಂಡು ಕಥೆಯನ್ನು ವರ್ಣಿಸುತ್ತೇನೆ.

೧೨. ಕವುಚಿ ಮಲಗಿರುವ ಮಕ್ಕಳು ಚಂದ್ರನನ್ನು ಬಯಸುವ ಹಾಗೆ ಮೇಲ್ಮುಖವಾಗಿ ಮಲಗುವುದಕ್ಕೆ ಕೂಡದ ಮೂಢ ಸಮುದ್ರ ಈಜಲು ಬಯಸುವ ಹಾಗೆ, ಕಣ್ಣಿಲ್ಲದವನು ವಿಂಧ್ಯ ಪರ್ವತವನ್ನು ಏರ ಬಯಸುವ ಹಾಗೆ ನಾನೀ ಕಥೆಯನ್ನು ವರ್ಣಿಸುವುದಕ್ಕೆ ಹೊರಟಿದ್ದೇನೆಂದುಕೊಂಡರೆ ಸಾಕು.

೧೩. ಗಂಭೀರವಾಗಿ ಭೋರ್ಗರೆಯುವ ಸಮುದ್ರದಂತೆ ಈ ಭಗವತ್ಕಥೆಯಿದೆ. ಅಂಜನಾ ಪ್ರಭೆಯಾದ ಸರಸ್ವತಿ ನನ್ನ ಹೃದಯದಲ್ಲಿ ನೆಲೆಸಿ ದಾರಿ ತೋರಿಸಿದ ಹಾಗೆ ಹೇಳುತ್ತಿದ್ದೇನೆ ಎಂದು ಧರಣಿಯಲ್ಲಿರುವ ಪ್ರಾಜ್ಞರು ಕರುಣೆಯಿಂದ ನೆನೆಸಿಕೊಳ್ಳಬೇಕು.

೧೪. ಹಿಂದೆಯೇ ಕಾವ್ಯ ರಚಿಸಿದ ಸತ್ಕವಿಮುಖ್ಯರ ಪಾದಧೂಳಿಯನ್ನು ಶ್ರದ್ಧೆಯಿಂದ ತೆಗೆದುಕೊಂಡು ತಲೆಯಲ್ಲಿ ಸ್ಥಾಪಿಸಿ, ಸೂರ್ಯನೆದುರು ನರ್ತಿಸು ಮಿಂಚು ಹುಳುವಿನ ಹಾಗೆ - ಕಥೆಯನ್ನು ಹೇಳುವರೇ ಸಂಭ್ರಮಿಸುತ್ತಿದ್ದೇನೆಂದು ಕೊಳ್ಳಬೇಕು.

೧೫. ಶ್ರೀ ಭಾಗವತ ಎನ್ನುವ ಸಮುದ್ರ ದಡದಲ್ಲಿ ನಿಂತುಕೊಂಡು ಭಾಷೆಯಿಲ್ಲದವನೊಬ್ಬ ತನ್ನ ಅಂಗೈಯಲ್ಲಿ ಸ್ವಲ್ಪ ಜಲವನ್ನು ತೆಗೆದುಕೊಂಡ ಹಾಗೆ, ತುಳುಭಾಷೆಯ ಸ್ವಭಾವವನ್ನು ಚೆನ್ನಾಗಿ ತಿಳಿದುಕೊಳ್ಳದೆ ರಚಿಸುತ್ತಿರುವೆನಾದುದರಿಂದ ಶ್ರೀ ಭಾರತೀ ನನ್ನ ನಾಲಗೆಯಲ್ಲಿ ನರ್ತಿಸಲಿ!

೧೬. ಭಾಗವತವು ವೇದಗಳ ಸಾರವೆಂದಾದರೆ ಅದನ್ನು ತುಳುಭಾಷೆಯಲ್ಲಿ ಹೇಳುವುದೇ ಎಂದು ಖೇದಿಸುವವರಿರಬಹುದು. ಆದರೆ ತುಳುವಿನಲ್ಲಿ 'ತೂ' ಎಂದೂ ಸಂಸ್ಕೃತದಲ್ಲಿ ವಹ್ನಿ ಎಂದರೆ ವಿಕಲ್ಪತೆಯೇನಾದರೂ ಇದೆಯಾ ಎಂಬುದನ್ನು ವಿವೇಚಿಸಬೇಕು. ಶ್ರೀ ದೇವಕೀ ನಂದನನ ಲೀಲೆಗಳಿಗೆ ಭಾಷಾ ಮೈಲಿಗೆಯಿಲ್ಲ ಎಂಬುದನ್ನು ಸ್ವೀಕರಿಸಬೇಕು.

೧೭. ಗುರುವು ಕನ್ಯಾರಾಶಿಯಲ್ಲಿಯೂ, ಕುಂಭರಾಶಿಯಲ್ಲಿ ಚಂದ್ರ, ಬುಧ, ಕುಜ ಸೂರ್ಯರು ವೃಶ್ಚಿಕದಲ್ಲಿಯೂ, ಶನಿಯು ಧನುವಲ್ಲಿಯೂ ರಾಹುವು ಮಕರದಲ್ಲಿಯೂ, ಕರ್ಕಾಟದಲ್ಲಿ ಶಿಖಿ (ಕೇತು)ಯೂ ಇರುವುದು. ಅಂದು ತುಂಗಕುಲದ ಬ್ರಾಹ್ಮಣ ವಂಶೀಯನಾದ ವಿಷ್ಣು ಈ ಕಥೆಯನ್ನು ರಚಿಸಿದನು.

೧೮. ಹರಿನಾಮ, ಹರಿಸ್ತುತಿ, ಕೀರ್ತನೆ ಹರಿಮೂರ್ತಿಯ ಧ್ಯಾನ, ಹರಿಭಕ್ತರ ಸದ್ಗುಣ, ಸದ್ಗತಿ, ಜ್ಞಾನ, ಉನ್ನತ ಭಕ್ತಿ, ಹರಿಭಕ್ತರ ಮೋಕ್ಷ ಸಂಗತಿ, ಅವರ ಸತ್ಕರ್ಮ ವಿಶೇಷ ಹಾಗೂ ಹರಿಕತೆಯನ್ನುಳಿದು ಬೇರೆ ಇಲ್ಲಿರಲಾರದು.

೧೯. ವೇದಗಳೇ ವರ್ಣಿಸುವುದಕ್ಕೆ ಆಗದೆ ತಲೆಬಾಗಿ ನಿಂದವು. ವೇದಕ್ಕೆ ಸಂಬಂಧಿಸಿದ ಮಹಾಶ್ರುತಿಗಳು ತಿಳಿಯದೆ ಕಂಗಾಲಾಗಿವೆ. ವೇದಜ್ಞರು ಶಾಸ್ತ್ರವನ್ನು ನೋಡಿಯೂ ಮೌನಿಗಳಾಗಿದ್ದಾರೆ ಹೀಗಿರುವಾಗ ಲೋಕದಲ್ಲಿ ಆದ್ಯಂತ್ಯವೇ ಇಲ್ಲದ ಈ ಪರಿಸ್ತುತಿಯನ್ನು ನಾನು ವರ್ಣಿಸುವುದೆಂತು?

೨೦. ಭಾವ ಶುದ್ಧಿಯಿಂದ ಆಲೋಚಿಸೋಣ. ಯಾರಿಗೆ ಗುಣದೋಷಗಳಿಲ್ಲವೋ ಯಾರು ಈ ವಿಶ್ವಸಮಸ್ತಕ್ಕೆ ಅಖಿಲಾತ್ಮನೋ, ಯಾರು ಸಚರಾಚರಕ್ಕೆ ತಂದೆಯೋ, ಯಾರು ದೇವರಿಗೆ ಒಡೆಯನೋ, ಯಾರು ಮಾಯಾತೀತನೋ, ಸಮಸ್ತ ಜೀವಾತ್ಮರಿಂದ ಯಾರು ಸಂಸ್ತುತಿ ಪಡೆಯುತ್ತಾನೋ - ಆ ಏಕ ಪರಾತ್ಪುರುಷನಿಗೆ, ಪರಿಪೂರ್ಣನಿಗೆ ವಂದಿಸುತ್ತೇನೆ.

೨೧. ನೈಮಿಷವನದಲ್ಲಿರುವ ಶೌನಕಾದಿ ಮುನಿವರರು ಮಾನಮತ್ಸರ ಹೀನರಾಗಿಯೂ, ಜಗತ್ತಿಗೆ ಕಾಮಧೇನುಗಳಾಗಿಯೂ, ಜ್ಞಾನಮೂರ್ತಿಗಳಾಗಿಯೂ ಇರುವವರು. ಅವರೆಲ್ಲರೂ ಒಂದು ಕಡೆ ಧ್ಯಾನತತ್ಪರರಾಗಿ ಕೂಡಿ ಕಲಿಕಾಲ ಮುಗಿಯುವಲ್ಲಿಯವರೆಗೆ ಯಜ್ಞವೊಂದನ್ನು ನಡೆಸುವುದಕ್ಕೆ ನಿಶ್ಚಯಿಸಿದರು.

೨೨. ಸಹಸ್ರ ವರ್ಷದಿಂದ ಅವರು ಹೀಗೆ ಯಜ್ಞ ದೀಕ್ಷೆಯಲ್ಲಿರುವ ವೇಳೆಗೆ ಈಶ್ವರಾನುಮತದಿಂದ ಅಲ್ಲಿಗೆ ಸೂತ ಪುರಾಣಿಕ ಬಂದನು. ಆಗ ಶೌನಕಾದಿಗಳು ಅವನನ್ನು ಭಕ್ತಿಯಿಂದ ಬರಮಾಡಿಕೊಂಡರು.

೨೩. ಬಂದ ಸೂತನಿಗೆ ಬ್ರಹ್ಮಾಸವನ್ನು ಕಲ್ಪಿಸಲಾಯಿತು. ಅವನನ್ನು ಅತ್ಯಧಿಕವಾಗಿ ಸನ್ಮಾನಿಸಿ "ಕರ್ಮಾದಿಗಳ ಬಂಧನವನ್ನು ಬೆಂಕಿಯಲ್ಲಿ ಸುಟ್ಟು ಬಿಡಲು ದೋಷಾದಿ ಕೆಡುಕುಗಳನ್ನು ನಾಶಪಡಿಸಲು ನಮಗೊಂದು ಕತೆ ಹೇಳಬೇಕು" ಎಂದರು.

೨೪. ಇತಿಹಾಸ ಪುರಾಣ ರಹಸ್ಯಗಳನ್ನು ವ್ಯಾಸಮುನಿಯ ಕೃಪೆಯಿಂದ ನಿನ್ನಷ್ಟು ಚೆನ್ನಾಗಿ ತಿಳಿದವರು ಈ ಮಹಾಲೋಕದಲ್ಲಿ ಯಾರೂ ಇಲ್ಲವೆಂಬುದನ್ನು ಎಲ್ಲರೂ ಬಲ್ಲರು. ನಮ್ಮ ಮೇಲೆ ಕೃಪೆಯಿಟ್ಟು, ದೋಷಾಮತಿಯನ್ನು ಖಂಡಿಸುವಂತಹ ಕಥೆಯೊಂದನ್ನು ಹೇಳಬೇಕು.

೨೫. ಜನನ, ಮುಪ್ಪು, ಯೌವ್ವನ ಮೊದಲಾದವುಗಳೊಂದಿಗೆ ಈ ಧರಣಿಯಲ್ಲಿ ಹುಟ್ಟಿ, ಗಂಭೀರವಾದ ಸಮುದ್ರವನ್ನು ಈಜಿ ದಡ ಸೇರದೆ ಮಾನವರು ತತ್ತರಿಸುತ್ತಾರೆ. ಇಂತಹ ಸಮುದ್ರವನ್ನು ದಾಟಿ ಹೋಗುವ ದೊಡ್ಡ ಹಡಗೊಂದನ್ನು ನೆನಪಿಸಿ ನಮಗೆ ಅನುಗ್ರಹಿಸಬೇಕು.

೨೬. ಮನುಷ್ಯರೋ, ಮಂದಭಾಗ್ಯರೂ, ಮಂದಬುದ್ಧಿಗಳೂ, ಮಂದಕರ್ಮ ಫಲಾಶ್ರಿತರೂ, ಮಂದಸಚೇತನ ಭಾವರೂ, ಅಲ್ಪಾಯುಷಿಗಳೂ, ಶೌಚ ಸತ್ಯವಿಹೀನರೂ ಆಗಿದ್ದಾರೆ. ಇವರಿಗೆ ಮುಕ್ತಿ ಹೇಗೆ ಲಭಿಸುತ್ತದೆ?

೨೭. ಭೂರಿ ಕರ್ಮಾದಿಗಳನ್ನು ನಡೆಸುತ್ತಾ ಭೂರಿಭೋಜನ ಮಾಡುವವರೂ, ಸಕಲ ಜಂತುಗಳಿಗೆ ಉಪದ್ರಕಾರಿಗಳೂ, ಕ್ರೂರರೂ, ಶೂರರೂ, ಧೀರರೂ ಆಗಿ ಸಂಸಾರದಲ್ಲಿ ಮುಳುಗಿ ಹೋಗಿದ್ದಾರೆ. ಈ ಕಲಿಯುಗದ ಮಾನವರಾರೂ ಪರಮಾರ್ಥಗಳನ್ನು ನೋಡಲಾರರು.

೨೮. ಈ ವರೆಗೆ ಕೇಳಿಲ್ಲದ, ಈ ವರೆಗೆ ಹೇಳಿಲ್ಲದ, ಕೇಳಬೇಕೆಂದರೆ ಯಾರ ಮನಸ್ಸಿನಲ್ಲಿಯೂ ನಿಲ್ಲದ, ದಾರಿ ತಪ್ಪಿ ಹೋಗಿರುವ ಪುಣ್ಯನಾಮವದು. ಕೇಳಬೇಕೆಂದರೆ ಹೇಳುವವರು ಯಾರಿದ್ದಾರೆ? ಈ ರಹಸ್ಯವನ್ನು ತಿಳಿದವರಾದರೂ ಯಾರಿದ್ದಾರೆ? ಕೇಳುವುದಕ್ಕೆ ಸಿದ್ಧರಾದವರಾದರೂ ಎಲ್ಲಿದ್ದಾರೆ - ಇದು ಈ ಯುಗದ ವರ್ತನೆಯೇ ಆಗಿದೆ.

೨೯. ಕೇಳಿದ ಸ್ವಲ್ಪ ಹೊತ್ತಿನಲ್ಲಿಯೇ ಮಹಾದುರಿತಗಳ ಸಮೂಹವು ಅಗ್ನಿಯಲ್ಲಿ ಕಣಗಳನ್ನು ಹಾಕಿದ ಹಾಗೆ ಸುಟ್ಟುಹೋಗಬೇಕು. ಮನುಷ್ಯರು ಮಾಯಾ ಬಂಧನದಲ್ಲಿ ಸಿಲುಕಿ ಋಣ ವಿಹೀನರಾಗಿರುವುದರಿಂದ ಶ್ರುತಿಗಳನ್ನು ಅರ್ಥಮಾಡಿಕೊಳ್ಳಲು ಅಶಕ್ತರಾಗಿದ್ದಾರೆ. ಇಂತಹ ಮಾಯಾ ಬಂಧನವನ್ನು ಕಳಚುವ ಉಪಾಯವೊಂದನ್ನು ತಿಳಿಯ ಹೇಳಬೇಕು.

೩೦. ಮನುಷ್ಯರ ಜನ್ಮ ಪಾಪ ಬೀಜವು ಆಯಾಸವಿಲ್ಲದೆ - ಅದನ್ನು ಹೇಳುವುದಕ್ಕೆ ಬಾಯಿ ತೆರೆಯುವಷ್ಟರಲ್ಲಿಯೇ - ಅಗ್ನಿಯಲ್ಲಿ ಉರಿದು ಹೋಗುವಂತಾಗಬೇಕು. ಇಂತಹ ಸಾಮರ್ಥ್ಯವುಳ್ಳ ಶ್ರೀಹರಿಯ ಕಥೆಯನ್ನು ನೀವು ನಮಗೆ ಅನುಗ್ರಹಿಸಬೇಕು.

೩೧. ಕರುಣಾಕರ ಕೀರ್ತಿಯನ್ನು ಕರುಣೆಯಿಂದ ನಮಗೆ ಅನುಗ್ರಹಿಸಬೇಕು. ಉರಿಯುತ್ತಿರುವ ಭವಜ್ವರಕ್ಕೆ ಔಷಧ ನಿನ್ನಲ್ಲಿದೆ ಎಂಬುದರ ಅರಿವು ನಮಗಿದೆ. ಧರಣಿಯಲ್ಲಿರುವ ಉತ್ತಮ ಪುರುಷರ ಹಿತಾರ್ಥವಾಗಿ ಪರಮಾರ್ಥವನ್ನು ಅರಹುವುದಕ್ಕೆ ನೀನು ವಹಿಸಿಕೊಂಡಿರುವುದು ಹರಿಚಿತ್ತವೆಂದರು.

೩೨. ಸತ್ರಯಾಗವನ್ನು ಮಾಡಬೇಕು ಎನ್ನುವ ತೀರ್ಮಾನ ಪ್ರವೃತ್ತಿಯಿಂದ ಇಲ್ಲಿಯವರೆಗೆ ಇಲ್ಲಿ ಕೂಡಿದ್ದರೂ ನಿನ್ನ ದರ್ಶನ ಇಂದು ಆಯಿತು. ಇದು ದೈವ ಕಲ್ಪಿತ; ಜನ್ಮಕೃತವಾದ ಪುಣ್ಯಫಲ. ಈ ಅದ್ಭುತವನ್ನು ಇನ್ನೇನೆಂದು ವರ್ಣಿಸಲಿ!

೩೩. ಇನ್ನು ಒಂದು ಸಂಶಯವಿದೆ. ಪುರಾಣಿಕರೇ, ಪ್ರಾಣನಾಥನಾದ ಶ್ರೀಹರಿಯು ದೇವಕಿಯ ಜಠರದಲ್ಲಿ ಜನಿಸಿದನು ಎನ್ನುತ್ತಾರೆ. ಇಡೀ ಭೂಮಂಡಲ ಕೋಟಿಯನ್ನೇ ತನ್ನ ಹೃದಯದಲ್ಲಿ ಸ್ಥಾಪಿಸಿಕೊಂಡವನನ್ನು ಆಕೆ ಹೇಗೆ ಗರ್ಭದಲ್ಲಿ ಧರಿಸಿದಳು?

೩೪. ಘೋರವಾದ ಸಮಸ್ತ ದುಸ್ಸಹದುಃಖಗಳೆಂಬ ವೃಕ್ಷಾದಿಗಳ ಬೇರುಗಳು - ಸೂರ್ಯ ರಶ್ಮಿಗೆ ಮುಟ್ಟುವ ಹಾಗೆ - ಕಿತ್ತು ಮೇಲ್ಮುಖವಾಗಿ ಎತ್ತಿ ಹಿಡಿಯಬೇಕು. ಸಮುದ್ರವನ್ನು ದಾಟಿ ನಾವಿಕ ಹೋಗುವ ಹಾಗೆ - ಸಾರವಾದ ರಹಸ್ಯವನ್ನು ಹೇಳಿಕೊಡಬೇಕು.

೩೫. ವೇದಸಮ್ಮತವಾದ ಭಾಗವತ ಪ್ರಸಂಗವನ್ನು ಬಹಳ ಆದರ ಪೂರ್ವಕವಾಗಿ ಸೂತನಲ್ಲಿ ಶೌನಕಾದಿಗಳು ಹೀಗೆ ಕೇಳಿಕೊಂಡರು. ಎಂಬಲ್ಲಿಗೆ ಆದಿಸಂಹಿತೆಯಲ್ಲಿ, ಪ್ರಥಮ ಸ್ಕಂಧದಲ್ಲಿ ಪ್ರಥಮ ಅಧ್ಯಾಯವು ಯಾದವೋತ್ತಮನಾದ ಶ್ರೀಹರಿಯ ಅನುಗ್ರಹದಿಂದ ನೆರವೇರಿತು.

ಅಧ್ಯಾಯ ೨

೧. ನಾರಿ ಭಾರತೀದೇವಿ! ಪದ್ಮದಲಾಕ್ಷೀ! ಸರ್ವವಿಚಕ್ಷಣೇ! ವಾರಿಜಾಸನ ಪ್ರಿಯೆ! ಸತ್ಪುರುಷರುಗಳಿಗೆ ಉಪಕಾರಿಣೀ! ಶ್ರೀ ಹರಿಯ ಅವತಾರಕ್ಕೆ ಸಂಬಂಧಿಸಿದ ಸತ್ಸಾರವನ್ನು ನನಗೆ ಅನುಗ್ರಹಿಸಬೇಕು ಎಂದು ಸೂತನು ಧ್ಯಾನಿಸಿದನು.

೨. ಹೀಗೆ ಪ್ರೇರೇಪಿಸುವ ಸತ್ಪುರುಷರಾದ ಶೌನಕಾದಿಗಳನ್ನು ಸನ್ಮಾನಿಸಿದನು. ತನ್ನಲ್ಲಿಯೇ ಹರ್ಷಿತನಾಗಿ ಕ್ರಮಪ್ರಕಾರವಾಗಿ ಮುಕುಂದ ವ್ಯಾಸರನ್ನು ಗುರುಭಕ್ತಿಯಿಂದ ಸ್ತುತಿಸಿದನು. ವಂಚನೆಯಿಲ್ಲದೆ ಹೇಳುತ್ತೇನೆ ಎಂದು ಸೂತ ಪುರಾಣಿಕನು ಹೇಳುವುದಕ್ಕೆ ಉಪಕ್ರಮಿಸಿದನು.

೩. ಇಷ್ಟು ಚೋದ್ಯವೇನಯ್ಯಾ ಕೇಳುವುದಕ್ಕೆ ಎಂದು ಶೌನಕಮುಖ್ಯರು ಪ್ರೀತಿಯಿಂದ ವಿಚಾರಿಸುತ್ತಿದ್ದರು. ಅದನ್ನು ಕೇಳಿದ ಸೂತನು ಆತುರವಾದ ರಹಸ್ಯ ಭಕ್ತಿಯಲ್ಲಿ ಚಿತ್ತವೃತ್ತಿಯಲ್ಲಿ ಮುಳುಗಿ ಆತ್ಮದಲ್ಲಿಯೇ ವೇದವ್ಯಾಸರನ್ನೊಮ್ಮೆ ಧ್ಯಾನಿಸಿಕೊಂಡನು.

೪. ಜನಿಸಿದಾಗಲೇ ದೇಹವೇ ಕರ್ಮಬಂಧನವೆಂದು ನಿರೂಪಿಸಿ, ಘನವಾದ ಅಡವಿಯನ್ನು ಸೇರಿದ ತನ್ನ ಮಗನ ಬಗ್ಗೆ ಮೋಹದಿಂದ 'ಹೇ ಮಗಾ' ಎಂದು ವ್ಯಾಸರು ಕರೆಯಲಾಗಿ ಸರ್ವಸಚರಾಚರಗಳೂ ಅದಕ್ಕೆ ಪ್ರತಿಸ್ಪಂದಿಸಿದವಲ್ಲ - ಹಾಗೆ ಘನಮಹಿಮನಾದ ಶುಕಮುನಿಯನ್ನು ವಂದಿಸಿಕೊಂಡನು.

೫. ಸ್ವಾನುಭವ ಸಿದ್ಧವಾದ ಜ್ಞಾನರೂಪ ರಹಸ್ಯವನ್ನು ಯಾವಾಗಲೂ ತಿಳಿದುಕೊಂಡವನಾಗಿ ವೇದಗಳ ಮಸ್ತಕದಲ್ಲಿರುವ ಭಾನುಮಂಡಲಕ್ಕೆ ಸಮಾನನಾದ ಶ್ರೀ ಶುಕರಾಯನನ್ನು ತಾನು ಭಕ್ತಿಯಿಂದ, ವಿವೇಕ ದೃಷ್ಟಿಯಿಂದ ವಂದಿಸಿಕೊಂಡನು.

೬. ಆದಿಮೂರ್ತಿಯಾದ ಮುಕುಂದನನ್ನು ವಂದಿಸಿಕೊಂಡನು. ವೇದವ್ಯಾಸರನ್ನು ವಂದಿಸಿದ ಶುಕ, ನಾರದ, ಶೌನಕಾದ್ಯರನ್ನೂ ವಿಘ್ನೇಶ, ಭಾರತಿ, ಅಷ್ಟ ಗ್ರಹಗಳನ್ನೂ ಹಾಗೂ ಸಚರಾಚರಾತ್ಮಕನನ್ನು ವಂದಿಸಿದನು.

೭. ಕಣ್ಮುಚ್ಚಿ ಬಾಹು ಯುಗ್ಮಗಳನ್ನು ಮಸ್ತಕದಲ್ಲಿ ಸ್ಥಾಪಿಸಿದನು. ನಿಶ್ಚಲಾತ್ಮಕನಾಗಿ ಭಕ್ತಿಯ ಪುಳಕದಲ್ಲಿ ಮುಳುಗಿದನು. ಅಚ್ಯುತಾತ್ಮಕರಾದ ಶೌನಕರನ್ನು ಪ್ರತೀಸಲವೂ ಮನಸ್ಸಿನಲ್ಲಿ ಧ್ಯಾನಿಸಿ -" ಆಮೇಲೆ ಸಚ್ಚಾರಿತ್ರರೇ ಇನ್ನು ಹೇಳುತ್ತೇನೆ, ಕೇಳಿರಿ" ಎಂದನು.

೮. ಉತ್ತಮೋತ್ತಮವಾದ ಚೋದ್ಯವನ್ನು ನೀವು ನನ್ನಲ್ಲಿ ಕೇಳಿದಿರಿ. ನಿಮ್ಮ ಚಿತ್ತದಲ್ಲಿ ಮೂಡಿದ ಈ ಕಾರ್ಯ ವ್ಯಾಸರ ಅನುಗ್ರಹದಿಂದ ಉಂಟಾದುದು. ಈ ಕಥಾಸಮುದ್ರವನ್ನು ವೇದಸಮ್ಮತವಾಗಿ ವಿಸ್ತರಿಸುತ್ತೇನೆ. ಚಿತ್ತವಲ್ಲಭನ ಪಾದಭಕ್ತಿಗೆ ಇದು ಉತ್ತರೋತ್ತರವಾಗುತ್ತದೆ ಎಂಬುದು ಸತ್ಯವೇ!

೯. ಶಾಸ್ತ್ರಗಳಲ್ಲಿ ವಿಷ್ಣು ಭಕ್ತಿಯಿಲ್ಲದಿದ್ದರೆ ಏನು ಫಲ? ಮಂದ ಭಾಗ್ಯರು ಹುಟ್ಟಿ ಏನು ಫಲ? ವಿಪ್ರರಾಗಿ ಏನು ಫಲ? ಕಪಿಲೆ ಹಸುವನ್ನು ಸಾಕಿ ಹೆಚ್ಚು ಹಾಲು ಸಿಗದಿದ್ದರೆ ಏನು ಫಲ? ಅಂತಹ ಜನರು ಭವಾಬ್ಧಿಯಲ್ಲಿ ನಿಂತು ಆದಿ ಅಂತ್ಯವನ್ನು ನೋಡಲಾಗದಂತಾಗುತ್ತಾರೆ.

೧೦. ಆದ್ದರಿಂದ ಶಾಸ್ತ್ರದಲ್ಲಿ ಪ್ರಣೀತವಾದ ಧರ್ಮವನ್ನು ಎಲ್ಲರೂ ವರ್ಜಿಸಬೇಕು. ಸಾಕ್ಷಿಭೂತಗುಣದ ಸಾರವನ್ನು ಕೀರ್ತಿಸಿ ಅದನ್ನೇ ವಂದಿಸಿ, ಪ್ರಾರ್ಥಿಸಿ ದಂಡಿಸಿದರೆ ಆ ಫಲವಾಗಿ ವಿರಕ್ತಿ ಹುಟ್ಟಿ ಮುಕ್ತಿ ನಿಶ್ಚಯವಾಗಿಯೂ ಸಿದ್ಧಿಸುತ್ತದೆ.

೧೧. ಹರಿಪರಾಯಣರಾದ ಸತ್ಪುರುಷರನ್ನು ಆದರಿಸದೆ, ಹರಿಗೆ ಬೇಕಾದ ವಿರಕ್ತರೊಂದಿಗೆ ಸೇರಿ ಶ್ರೀ ಕಥೆಯನ್ನು ಹೇಳದೆ, ಪರಮವೈಷ್ಣವ ಪಾದ ತೀರ್ಥ ಜಲಾಭಿಷೇಕಕ್ಕೆ ಆಗದೆ, ಹರಿಕಥಾ ರಸಪಾನ ಭೂಮಿಯಲ್ಲಿ ಯಾರಿಗೆ ತಾನೇ ಸಿದ್ಧಿಸುತ್ತದೆ?

೧೨. ಕೋಟಿ ಜನ್ಮದ ಫಲದಿಂದ ಅನೇಕ ವಿಧವಾದ ವಿರಕ್ತಿಯಿಂದ ಪೂಜಿಸಿ, ದಂಡಿಸಿದುದರಿಂದ ಮನುಷ್ಯತ್ವ ಲಭಿಸಿದೆ. ಕೈಟಭಾರಿಯ ನಾಮಧಾರಕರಾದ ಪಕ್ಷದಲ್ಲಿ ನಮ್ಮ ಹಣೆಯಲ್ಲಿ ಬರೆದಿರುವ ಅಕ್ಷರವನ್ನು (ಬ್ರಹ್ಮಲಿಪಿಯನ್ನು) ಅಳಿಸಿಕೊಂಡು ಹರಿಮಂದಿರದಲ್ಲಿ ರಮಿಸಬಹುದು.

೧೩. ತನ್ನಲ್ಲಿ ಅನುರಾಗ ಹುಟ್ಟಿ ಸತ್ಕಥೆ ವಿರಚಿಸುವ ಉತ್ತಮರ ನಾಭಿ ಕಮಲದ ಕರ್ಣಿಕಾಲಯದಲ್ಲಿ ಲಕ್ಷ್ಮೀ ಸಮೇತನಾಗಿ - ಅವರ ಪಾಪವೆಂಬ ಸಮುದ್ರಕ್ಕೆ ಬಡಬಾಗ್ನಿಯಂತೆ - ನಿತ್ಯವೂ ಅಚ್ಯುತ ಶೋಭಿಸುತ್ತಾನೆ.

೧೪. ಇಂತಹ ಉತ್ತಮರ ಹೃದಯದಲ್ಲಿ ಶ್ರೀ ಪುರುಷೋತ್ತಮನು ನಿತ್ಯವೂ ನೆಲೆಸಿದರೆ, ಯಾರಿಗೆ ಭಕ್ತಿ ಶ್ರೀಕಥೆ ಸೇರುತ್ತದೆಯೋ ಅಂತಹವರಿಂದ ಧನಾಭಿಲಾಷೆ, ಮಾತ್ಸರ್ಯ ಮೊದಲಾದವುಗಳು ದೂರಹೋಗುತ್ತವೆ. ಮುಕ್ತಿಗೆ ಇದೇ ಪಥವೆಂದು ಶಾಸ್ತ್ರಗಳು ಹೇಳುತ್ತವೆ.

೧೫. ಮುಕ್ತಿ ಸಿದ್ಧಿಸಬೇಕೆಂಬವರಿಗೆ ಭಕ್ತಿ ಸಾಧನೆ ಬೇಕು. ಭಕ್ತಿ ಎಂಬುದು ಅಚ್ಯುತನ ನಾಮಕೀರ್ತನೆ ಕೇಳದೆ ಲಭಿಸಲಿಕ್ಕಿಲ್ಲ. ಹೀಗೆ ಮುಕ್ತಿ, ಭಕ್ತಿ ಹಾಗೂ ಕೀರ್ತಿಗಳು ಸಿದ್ಧಿಸಬೇಕಾದರೆ ಸಾಧು ಸಂಸರ್ಗಬೇಕು. ಈ ತತ್ತ್ವಸಾರವನ್ನು ತಿಳಿಯದ ಮೂಢರು ಮರ್ತ್ಯರಾಗಿ ಏನು ಫಲ?

೧೭. ತನ್ನ ಲೀಲಾಮಾತ್ರದಿಂದ ಅಚ್ಯುತ ಈ ಭುವನದಲ್ಲಿ ಅವತಾರವೆತ್ತಿದನು. ಹೀಗೆ ಅವತರಿಸಿ ದೇವದಾನವ, ಮಾನವ, ಪಶು ಸಂತತಿಯನ್ನು ರಕ್ಷಿಸಿದನು. ಶೀಲವಂತರೇ, ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಮುಂದೆ ಆತನ ಮಾಯಾಗುಣಗಳನ್ನು ಹೇಳುತ್ತೇನೆ.

೧೭. ಶ್ರೀ ಹರಿಯು ಏಕರೂಪನೂ, ರೂಪರಹಿತನೂ, ಅಧ್ವಯನೂ, ಅಕ್ರಿಯನೂ ಜನನರಹಿತನೂ, ಶುಚಿಯೂ, ಶೋಕಹೀನನೂ, ಅವಿನಾಶಿಯೂ, ಸರ್ವಗವ್ಯನೂ, ಸೂಕ್ಷ್ಮನು ಸುಖಾತ್ಮನೂ ಆಗಿದ್ದಾನೆ. ಲೋಕಸೃಷ್ಟಿ ಸಂಹಾರ - ಪರಿಪಾಲನೆಗೆ ತನ್ನ ಆಕೃತಿಯನ್ನು ವಿಷ್ಣು, ಬ್ರಹ್ಮ, ಶಂಕರನಾಗಿ ನಿರೂಪಿಸಿ ವಿಭಿನ್ನನಾಗಿದ್ದಾನೆ.

೧೮. ಸಾವಿರ ಶಿರಸ್ಸುಗಳನ್ನು ಪಡೆದವನಾಗಿ ಪೌರುಷರೂಪದಲ್ಲಿ ಪರಮೇಶ್ವರನಿರುವನು. ಹದಿನಾಲ್ಕು ಲೋಕಗಳನ್ನೂ ಕಾಲಿನಿಂದ ಶಿರಸ್ಸಿನವರೆಗೂ ತನ್ನಲ್ಲಿಯೇ ಸ್ಥಾಪಿಸಿ ತನ್ನಂಶದೊಂದಿಗೆ ಶ್ರೀಹರಿ ಕ್ಷೀರಸಾಗರದಲ್ಲಿ ನೆಲೆಯಾಗಿದ್ದನು.

೧೯. ಆದಿಮೂರ್ತಿ, ಅನಂತಶಾಯಿ, ಸುಖಾಪ್ತನಾದ ಶ್ರೀಹರಿಯು ತನ್ನ ಮಾಯಾವಿಕಲ್ಪತೆಯಿಂದ ನಾಭಿಕಮಲದಲ್ಲಿ ಬ್ರಹ್ಮನನ್ನು ಕಲ್ಪಿಸಿದನು. ಈ ಬ್ರಹ್ಮನ ಕಲ್ಪನೆಯಿಂದ ಮೇದಿನಿಯ ಸಚರಾಚರಗಳನ್ನು ಸೃಷ್ಟಿಸಲಾಯಿತು. ಶ್ರೀಹರಿಯ ಕಲ್ಪನಾವತಾರಗಳನ್ನು ಇನ್ನು ಕೇಳಿರಿ.

೨೦. ಅವರ ಮಾನಸ ಪುತ್ರರು ಸನಕಾದಿಗಳಾಗಿ ಸಾರವತ್ತಾದ ಬ್ರಹ್ಮಚರ್ಯವನ್ನು ಪರಿಪಾಲಿಸಿದರು. ನಾರದ ಮುನಿಯಾಗಿ ಸರ್ವರ ಹಿತಾರ್ಥ ಸಾಧಿಸಿದನು. ಹಿರಣ್ಯಾಕ್ಷನನ್ನು ವರಾಹವತಾರ ಧರಿಸಿ ವಧಿಸಿದನು.

೨೧. ನಾರಾಯಣ ಮುನಿಯಾಗಿ ತಪಸ್ಸನ್ನಾಚರಿಸಿದುದು ಮುಂದಿನ ಅವತಾರ. ಇದು ಶ್ರೀಹರಿಯ ನಾಲ್ಕನೆಯ ಅವತಾರ. ಮುಂದೆ ಕರ್ದಮ ಪುತ್ರ ಕಪಿಲನಾಗಿಯೂ, ಅತ್ರಿಯ ಪುತ್ರನಾದ ದತ್ತಾತ್ರೇಯನಾಗಿಯೂ ಐದು - ಆರನೆಯ ಅವತಾರಗಳನ್ನು ಧರಿಸಿದನು.

೨೨. ಏಳನೆಯ ಅವತಾರದಲ್ಲಿ ಯಜ್ಞನೆಂಬ ನಾಮಾಂತರದಿಂದ ಶ್ರೀಹರಿಯು ಜನಿಸಿದನು. ಎಂಟನೆಯ ಅವತಾರ ಭೂಮಿಗೆ ಅಧಿಪತಿಯಾದ ಋಷಭಾಂಕನದು. ಒಂಬತ್ತನೆಯ ಅವತಾರದಲ್ಲಿ ಪೃಥು ಚಕ್ರವರ್ತಿಯಾಗಿ ಜನಿಸಿ ಪಶುರೂಪದಲ್ಲಿ ಯಜ್ಞವನ್ನು ಸಾಧಿಸಿದನು.

೨೩. ವೇದಮೂರ್ತಿಯು ಮತ್ಸ್ಯಾವತಾರವನ್ನು ಧರಿಸಿದನು. ಬಳಿಕ ಸಮುದ್ರ ಮಥನ ವೇಳೆಯಲ್ಲಿ ಕೂರ್ಮಾವತಾರ ಧರಿಸಿ, ಮಂದರಾದ್ರಿಯನ್ನು ಆದರಿಸಿದನು. ಆದಿಯಲ್ಲಿ ಧನ್ವಂತರಿಯು ಅವತಾರ ಧರಿಸಿದನು ಎಂಬಲ್ಲಿಗೆ ಶ್ರೀಮನ್ನಾರಾಯಣನ ಹನ್ನೆರಡನೆಯ ಅವತಾರ ಮುಗಿತಾಯವಾಯಿತು.

೨೪. ನಾರಿಯಾಗಿ ಹುಟ್ಟಿ ಅಮೃತ ಭಾಂಡದಿಂದ ದೈತ್ಯರಿಗೆ ವಂಚಿಸಿದನು. ನಾರಸಿಂಹ ಅವತಾರದಲ್ಲಿ ಹಿರಣ್ಯ ಕಶಿಪುವನ್ನು ಛೇದಿಸಿದನು. ಬಲಿಯ ದ್ವಾರಪಾಲಕನಾದನು. ಇಲ್ಲಿಗೆ ಶ್ರೀಹರಿಯ ಹದಿನೈದನೆಯ ಅವತಾರವಾಯಿತು.

೨೫. ಪರಶುರಾಮನಾಗಿ ಹೈಹಯರ ವಂಶಕಾನನ ಛೇದಿಸಿದನಲ್ಲದೆ ದುರಳ ದುಷ್ಟ ಕ್ಷತ್ರಿಯರನ್ನು ಇಪ್ಪತ್ತೊಂದು ಬಾರಿ ವಧಿಸಿದನು. ಧರಣಿಯಲ್ಲಿ ಸರ್ವಪುರಾಣ ಶಾಸ್ತ್ರಗಳನ್ನು ವ್ಯಾಸರೂಪದಲ್ಲಿ ನಿರ್ಮಿಸಿ ಸರ್ವಕರ್ಮವನ್ನು ಪರಿಹರಿಸಿದನು.

೨೬. ದಶರಥನ ಮಗನಾಗಿ ತಂದೆಯ ಸತ್ಯವನ್ನು ರಕ್ಷಿಸಿ, ಲಂಕೆಯ ದಶಶಿರನನ್ನು ವಧಿಸಿ ವಿಭೀಷಣನನ್ನು ಬಹುಮಾನಿಸಿದನು; ತನ್ನ ಪತ್ನಿಯನ್ನು ಸ್ವೀಕರಿಸಿದನು. ಆ ಬಳಿಕ ದ್ವಾಪರದಲ್ಲಿ ಯದುವಂಶದಲ್ಲಿ ಬಲರಾಮ ಕೃಷ್ಣರೆಂಬ ಎರಡಂಗವಾಗಿ ಧರಣಿಯಲ್ಲಿ ಜನಿಸಿದನು.

೨೭. ರಾಮಕೃಷ್ಣರು ಶುಭ್ರ ಮೇಘದಂತೆ ವಿಶಾಲ ವರ್ಣರಾಗಿ ಜನಿಸಿ ಭೂಮಿಕಂಟಕರ ವಂಶವನ್ನು ಛೇದಿಸಿ ಧರ್ಮವನ್ನು ರಕ್ಷಿಸಿದರು. ಹೇ ಮುನೀಂದ್ರರೇ ಇಲ್ಲಿಗೆ ಇಪ್ಪತ್ತು ಅವತಾರಗಳಾದವು. ಮುಂದಿನ ಭಗವತ್ಕಥೆಯನ್ನು ಆಲಿಸಿರಿ.

೨೮. ಪುರತ್ರಯವನ್ನು ಸ್ಥಾಪಿಸಿ ಭೂಮಿಯನ್ನೇ ನಾಶಗೊಳಿಸ ಹೊರಟ ದಾನವರನ್ನು - ಈಶ್ವರನೊಂದಿಗೆ ಕೂಡಿಕೊಂಡು - ಶ್ರೀಹರಿ ಪಶುರೂಪ ಧರಿಸಿ ಅಮೃತಧಾರೆಯನ್ನು ಸುರಿಸಿದನು. ಮುಂದೆ ಬೌದ್ಧಾವತಾರದಲ್ಲಿ ವಿಪತ್ತನ್ನು ನಾಶಗೊಳಿಸಿದನು.

೨೯. ಹೀಗೆ ನಿರ್ಮಿಸಿದ ನಾಲ್ಕನೆಯ ಯುಗದಲ್ಲಿ ಧರ್ಮವು ಅವಸಾನವಾಗುತ್ತಿರಲು ಶ್ರೀಹರಿಯು ಧರ್ಮಕಂಟಕರನ್ನು ಕಲ್ಕಿ ಸ್ವರೂಪದಲ್ಲಿ ನಾಶಪಡಿಸಿ ಧರ್ಮವನ್ನು ಸ್ಥಿರಗೊಳಿಸಿದನು. ಹೀಗೆ ಪೂರ್ವ ಯುಗದಲ್ಲಿ ಧರ್ಮವನ್ನು ಸ್ಥಾಪಿಸಿದಂತೆ ಬ್ರಹ್ಮಮೂರ್ತಿ ತನ್ನ ಲೀಲೆಯಿಂದ ಆಗಾಗ ಅವತಾರವೆತ್ತುತಲೇ ಇರುತ್ತಾನೆ.

೩೦. ಮುನಿಮುಖ್ಯರೇ, ಕೇಶವನ ಆಕಾರ ಸ್ವರೂಪವನ್ನು ತಿಳಿದುಕೊಳ್ಳುವುದು ಅಶಕ್ಯ. ತೋರುವ ಗ್ರಹ ತಾರೆಗಳು, ಮನುಗಳು, ಮುನಿಸಂತತಿ, ದಿಕ್ಪತಿಗಳು, ದಕ್ಷಾದ್ಯರು ಸೂರ್ಯ - ಚಂದ್ರ ಪ್ರಜಾಪತಿಗಳಾದಿ ಸೂರಿಗಳು ಇವರೆಲ್ಲರೂ ಹರಿಯಂಶವೇ.

೩೧. ಹೇಳಿದಷ್ಟೇ ಅವತಾರವೆಂದು ನಂಬಬೇಡಿ. ಲೋಕನಾಥ ಅವತರಿಸಿದ ಅವತಾರಗಳನ್ನು ಹೇಳಿ ಮುಗಿಸಲು ಸಾಧ್ಯವಿಲ್ಲ. ವೇದಗೋಚರವಾದ ವಸ್ತುವನ್ನು ಹೇಳಿ ವರ್ಣಿಸುವ ಶ್ರೇಷ್ಠರಾದರೂ ಯಾರು? ಗುರುಪಾದ ಭಕ್ತಿಯಿಂದ ಕೇಳಿದಷ್ಟು ಹೇಳಿದ್ದೇನೆ ಎಂಬುದೇ ಸತ್ಯ.

೩೨. ಆಕಾಶದಲ್ಲಿ ತೋರುವ ನಕ್ಷತ್ರ ಸಮೂಹವನ್ನು ಲೆಕ್ಕ ಮಾಡಬಹುದು, ಭೂಮಿಯಲ್ಲಿರುವ ಧೂಳಿನ ರಾಶಿಯನ್ನು ಲೆಕ್ಕ ಮಾಡಬಹುದು. ವರ್ಷಧಾರೆಯನ್ನು ಲೆಕ್ಕ ಮಾಡಬಹುದು; ಸಾಗರದ ತೆರೆಗಳನ್ನು ಲೆಕ್ಕ ಮಾಡಬಹುದು. ಆದರೆ ಅನಂತಮೂರ್ತಿಯ ಗುಣಗಳನ್ನು ಲೆಕ್ಕ ಮಾಡುವುದಕ್ಕೆ ಯಾರು ಸಮರ್ಥರಾಗಿದ್ದಾರೆ?

೩೩. ಭೃಗು, ನಾರದರಾದಿ ಮುನೀಶ್ವರರು, ಮನುದೇವ ಸಮೂಹ, ನೆಗಳ್ತೆ ಪಡೆದಿರುವ ಮರುದ್ಗಣಗಳು, ದಿಕ್ಪತಿಗಳು, ಪ್ರಜಾಪತಿ ಸಂಘ, ಜಗತ್ತಿನಲ್ಲಿರುವ ಸಾಧುಗಳು, ಉತ್ತಮರು, ವಿದ್ವಾಂಸರು ವಿಷ್ಣು ಭಗವಾನನ ಸ್ವರೂಪವೆಂದು ಲೋಕ ಅರಿತುಕೊಳ್ಳಬೇಕು.

೩೪. ಈ ಎಲ್ಲ ಅವತಾರಕ್ಕೂ ಶ್ರೇಷ್ಠವಾದ ಅವತಾರ ಯದುವಂಶಜನಾದ ಕೃಷ್ಣನಾಗಿ ಅವತರಿಸಿದ್ದು ಅಲ್ಲವೇ? ಹಾಗೆ ಅವತರಿಸಿ ಜನಗಳನ್ನು ತಾನೇ ಸರ್ವೇಶ್ವರ ರಕ್ಷಿಸುತ್ತಿದ್ದಾನೆ. ಭೂದೇವರನ್ನು, ನಾರಿಯರನ್ನು, ಪಶುದೇವಾದಿಗಳನ್ನು ರಕ್ಷಿಸಿ, ದುಷ್ಟರನ್ನು ನಾಶಪಡಿಸುತ್ತಾನೆ.

೩೫. ಸುರವಲ್ಲಭನ ಮಂಗಲವಾದ ಈ ಅವತಾರ ರಹಸ್ಯವನ್ನು ತಿಳಿದು - ಯಾರು ಹೀಗೆ ಕೇಳುತ್ತಾರೆ, ಯಾರು ಅದನ್ನು ಹೀಗೆ ಹೇಳುತ್ತಾರೆ - ಅಂತಹ ಪುರುಷರ ದುಃಖವೆಂಬ ಮಹಾಸಮುದ್ರದ ತೆರೆಯನ್ನು ಸರಿಸಿ, ಸ್ಥಿರರಾಜ್ಯವನ್ನು ಅವನು ಕಲ್ಪಿಸಿಕೊಡುತ್ತಾನೆ.

೩೬. ಪರಮೇಶ್ವರ ಕಥಾ ರಹಸ್ಯವನ್ನು ಚೆನ್ನಾಗಿ ತಿಳಿದವರು ಯಾರಿದ್ದಾರೆ? ಲೋಕದಲ್ಲಿ ಅರವಿಂದಜನಾದ ಬ್ರಹ್ಮ, ರುದ್ರ, ಸುರಾಧಿಪತಿಗಳಿಗೂ ಅದು ಅಶಕ್ಯವಾಗಿದೆ. ಮಾಯೆಯು ಸರ್ವರರ ಮೇಲೆಯೂ ತನ್ನ ಪ್ರಭಾವವನು ಬೀರುತ್ತಾಳೆ. ಮುರವೈರಿಯ ಪಾದವನ್ನು ಆಚರಣೆ ಮಾಡಿ ನಂಬಿರುವ ಮಹಾತ್ಮರನ್ನುಳಿದು ಬೇರೆ ಯಾರಿಗೆ ತಾನೇ ಇದು ಶಕ್ಯ?

೩೭. ನಿಜವಾಗಿಯೂ ನೀವು ಧನ್ಯರು. ವಿಚಾರಿಸಿ ನೋಡಿದರೆ ಪುಣ್ಯವಂತರು. ಸಮಸ್ತ ಲೋಕವೇ ತಿಳಿದಿರುವ ಹಾಗೆ ನೀವೆಲ್ಲರೂ ಪುಣ್ಯಾತ್ಮರು. ನೀವು ಭವಸಾಗರವನ್ನು ನೋಡದೆ ಬಂಧವನ್ನು ಯಾವಾಗಲೂ ಕಡಿದುಕೊಳ್ಳುತ್ತೀರಿ.

೩೮. ವೇದಶ್ರುತಿ ಸಮ್ಮತವಾದ ವಿವರವೇ ಈ ಪುರುಷೋತ್ತಮ ಕೀರ್ತಿ. ವಾದವನ್ನು ಬಿಟ್ಟು ಮನಸಾರೆ ಈ ಸಾರವನ್ನು ಆಲಿಸಿರಿ. ಬೇಸರ ಹೊಂದಿದ್ದ ವ್ಯಾಸರ ಅಂತಃಕರಣದಿಂದ ಸ್ವಾದವಾಗಿ ಬಂದ ಇದನ್ನು ಸ್ವೀಕರಿಸಿದ ಜಂತುಗಳ ಕುಲ ಪಾವನವಾದೀತು.

೩೯. ನಿಗಮಾದಿಗಳ ಸಾರವಲ್ಲವೇ ಈ ಭಗವಾನ ಚರಿತ್ರೆ? ಜಗದೀಶ ಪರೀಕ್ಷಿತನಿಗೆ ಇದನ್ನು ಶುಕಯೋಗಿ ಮುನೀಂದ್ರರು ಹಿಂದೆ ಹೇಳಿದ್ದರು. ಅದನ್ನು ನಾನು ಆದ್ಯಂತವಾಗಿ ದೃಢಪಡಿಸಿಕೊಳ್ಳುವ ಅವಕಾಶವು ಈಗ ಭಗವಾನ್ ಪರಮೇಶ್ವರನ ಅನುಗ್ರಹದಿಂದ, ಯೋಗಾಯೋಗವೆಂಬಂತೆ ಲಭಿಸಿತು.

೪೦. ಹಸಿವು, ಬಾಯಾರಿಕೆ, ನಿದ್ರೆಗಳನ್ನು ಬಿಟ್ಟು ಭಾಗೀರಥೀ ತೀರ್ಥ ದಡದಲ್ಲಿ, ದಕ್ಷಿಣ ದಿಕ್ಕಿನಲ್ಲಿ ಪರೀಕ್ಷಿತ ಮಹಾರಾಜನು ಶ್ರೀ ಶುಕಯೋಗಿಯಿಂದ ಸಂತೋಷವಾಗಿ ಕೇಳಿ ವಿಷ್ಣು ಲೋಕವನ್ನು ಸಂಪಾದಿಸಿಕೊಂಡನು. ಸಾರಭೂತವಾದ ಅದನ್ನು ಆದ್ಯಂತ್ಯವಾಗಿ ನಾನು ಅಲ್ಲಿ ಗುರುಕೃಪೆಯಿಂದ ಕೇಳಿಕೊಂಡೆನು.

೪೧. ಸರ್ವವನ್ನೂ ಪರಿತ್ಯಜಿಸಿ ಅನಶನ ವ್ರತವನ್ನು ಕೈಗೊಂಡು ಬದ್ಧಾಂಜಲಿಯಾಗಿ ಭೂಪತಿಯು ಮುನಿಯ ಪಾದಾರ್ಚನೆ ಮಾಡಿ ಈ ಕಥಾಮೃತ ಸಾರವನ್ನು ಸೇವಿಸಿದನು. ಮುನಿಕುಶಿಕನ ಬ್ರಹ್ಮ ಶಾಪವನ್ನು ನಿರರ್ಥಕ ಮಾಡಿ ಮಹಾಸುಖದಿಂದ ನಿರಂತರವಾಗಿ ಪ್ರಕಾಶಿಸಿ ನಿಶ್ಚಯವಾಗಿಯೂ ಮುಕ್ತಿಯನ್ನು ಆತನು ಸಾಧಿಸಿದನು.

೪೨. ಶ್ರುತಿ ಸೋಡಶದ ದಿವ್ಯ ರಹಸ್ಯವನ್ನು ಹೇಳಲು ನನಗೀಗ ಬುದ್ಧಿ ಸಾಕಾಗುವುದಿಲ್ಲ. ಮತಿಯು ಇಲ್ಲವಾಗಿದೆ. ಬೋಧಿಸುವುದಕ್ಕೆ ಸ್ಮರಣ ಶಕ್ತಿ ಇಲ್ಲವಾಗಿದೆ. ಆದರೂ ಗುರುವು ತಿಳಿಸಿದ ಧೃತಿಯಲ್ಲಿ, ಗುರುವಿನ ಕರುಣೆಯಿಂದ ಎಲ್ಲರಿಗೂ ಹಿತವನ್ನುಂಟು ಮಾಡುವ ಶ್ರೀ ಭಾಗವತಾರ್ಥವನ್ನು ಹೇಳುತ್ತೇನೆ.

೪೩. ಶ್ರೀ ಭಾಗವತಾರ್ಥ ಪುರಾಣ ಕಥೆ ವೇದಾಂತ ರಹಸ್ಯ. ಹಿಂದೆ ಎಲ್ಲರಿಗಾಗಿ ಇದನ್ನು ರಚಿಸಿದರು. ಇದು ಪರಿಹಾಸದ ಸಂಗತಿಯಲ್ಲ ಎಂಬಲ್ಲಿಗೆ ದ್ವಿತೀಯ ಅಧ್ಯಾಯವಾಯಿತು. ಶ್ರೀ ಭಾರತಿಯೇ ಇನ್ನು ಮೇಲಣ ಕಥೆಯನ್ನು ನನ್ನ ಮತಿಗೆ ಗೋಚರಿಸಿ!

ಅಧ್ಯಾಯ ೩

೧. ಸೂತನು ಹೀಗೆ ಹೇಳಿದ ಸಾರವನ್ನು ಶೌನಕಾದಿ ಮುನಿಗಳು ಕೇಳಿದರು. ಮನಸ್ಸಿನಲ್ಲಿ ಎಷ್ಟೋ ವಿಚಾರ ಮಾಡಿ ಹರ್ಷ ಸಾಗರದಲ್ಲಿ ಮುಳುಗಿದರು. ಈ ಕಥಾ ಸಮುದ್ರವನ್ನು ಈಜಬೇಕೆಂದು ಮನಸ್ಸಿನಲ್ಲಿ ಅತೀ ಹರ್ಷಿತರಾಗಿ 'ಸೂತ ಕೇಳಬೇಕು' ಎಂದು ಭಕ್ತಿಯಿಂದ ಆತನಲ್ಲಿ ಕೇಳಿಕೊಂಡರು.

೨. ಸೂತಪುರಾಣಿಕರೇ ಒಳ್ಳೆಯದೇ ಆಯಿತು. ನಮ್ಮ ಮನಸ್ಸಿನಲ್ಲಿ ಇದ್ದ ವಾಸುದೇವ ಪ್ರಸಂಗವನು ತಿಳಿದು ನೀನೇ ವಿಸ್ತರಿಸಿದ್ದೀಯಾ. ವ್ಯಾಸರು ಇದಕ್ಕೆ ಗುರುವಾಗಿದ್ದರು ಎಂಬುದಕ್ಕೆ ಸಾಕ್ಷಿ ಲಭಿಸಿತು. ನಾವು ಎಷ್ಟು ಜನ್ಮದಲ್ಲಿ ಪುಣ್ಯ ಮಾಡಿದ್ದೇವೋ ಎಂದು ತಿಳಿಸುತ್ತಾರೆ.

೩. ಯಾವ ಯುಗದಲ್ಲಿ ಇದನ್ನು ವರ್ಣಿಸಿದರು? ಯಾರಿಗಾಗಿ ವರ್ಣಿಸಿದರು? ಅವರು ಎಲ್ಲಿ ಇದನ್ನು ಕೇಳಿದರು? ಇದಕ್ಕೆ ಹೇತು ಯಾವುದು? ಇದರಿಂದ ದೊರೆತ ಆದಾಯವೇನು? ಇದಕ್ಕೆ ದುಃಖ ಕಾರಣವಾಯಿತು ಎಂದಿರುವಿರಿ. ಅದು ಏನು ಎಂದು ಹೇಳಬೇಕು ಪುರಾಣಿಕರೇ ಎಂದರು.

೪. ಹರಹರಾ ಪರಮೇಶ್ವರ ಆ ಮುನಿಗೆ ಅಂತರಂಗ ಮಹಾವ್ಯಥೆ ದೊರಕೊಂಡುದಾದರೂ ಹೇಗೆ? ಈ ದೇಹಧರ್ಮ ವಿಚಿತ್ರವನ್ನು ಪರಿಹರಿಸಿದ್ದು ಹೇಗೆ? ಆಮೇಲೆ ಪುರಾಣ ರಹಸ್ಯ ಚರಿತೆಯನ್ನು ಯಾರು ಉಪದೇಶಿಸಿದರು? ಈ ಎಲ್ಲ ಅದ್ಭುತಗಳನ್ನು ಹೇಳಿರಿ.

೫. ಅನಶನ ವ್ರತವನ್ನು ರಾಜ ಕೈಗೊಳ್ಳುವುದಕ್ಕೆ ಕಾರಣವಾದರೂ ಏನು? ದನುಜ ವೈರಿಯ ಕರುಣಾಕಟಾಕ್ಷಕ್ಕೆ ಆತ ಪಾತ್ರನಾದುದು ಹೇಗೆ? ಮುನಿಶಿರೋಮಣಿಯಾದ ಶ್ರೀ ಶುಕಮುನಿಯು ಮನುಜರಿಗೆ ಲಭಿಸುವುದು ದುರ್ಲಭ. ಹೀಗಿರುವಾಗ ಅವರೀರ್ವರಿಗೆ ಸಖ್ಯತೆ ಹೇಗೆ ಲಭಿಸಿತು?

೬. ಮನುಷ್ಯ ಜನ್ಮ ಬರುವುದೇ ದುರ್ಲಭ. ಅದರಲ್ಲಿಯೂ ಮಹಾಭಾರತ ವರ್ಷದಲ್ಲಿ ಜನಿಸುವುದು ದುರ್ಲಭ. ಕಲಿಕಾಲದಲ್ಲಿ ಬ್ರಾಹ್ಮಣ ಜನ್ಮ ದೊರೆಯುವುದೂ ದುರ್ಲಭ. ಭಕ್ತಿ ಜನಿಸುವುದು ಇನ್ನೂ ದುರ್ಲಭ. ಶ್ರೀಭಗವತ್ಕಥೆ ರಚಿಸುವುದು ಮತ್ತೂ ದುರ್ಲಭ.

೭. ಪರೀಕ್ಷಿತ ಎನ್ನುವ ರಾಜ ಯಾರು? ಆತ ಯಾರ ಮಗ? ಯಾರು ಶಾಪವನ್ನು ಅನುಗ್ರಹಿಸಿದ್ದು? ಮಾಡಿದ ಅಪರಾಧ ಯಾವುದು? ಪುರಾಣಿಕರೇ, ಈ ಎಲ್ಲ ಸಾರವನ್ನೂ ತಪ್ಪದೆ, ನೀವು ವಿಸ್ತರಿಸಬೇಕು.

೮. ಇಷ್ಟು ಚೋದಿಗವೇ ಎಂದು ಶೌನಕಾದ್ಯರು ವಿಚಾರಿಸುತ್ತಿದ್ದರು. ಅದನ್ನು ಕೇಳಿದ ಸೂತನು ತನ್ನ ಚಿತ್ತವೃತ್ತಿಯಲ್ಲೇ ರಹಸ್ಯ ಭಕ್ತಿಯಲ್ಲಿ ಮುಳುಗಿದನು. ಮಾತೆ ಶಾರದೆಯನ್ನು ವ್ಯಾಸರನ್ನು ನೆನೆಸಿ ಮೆಲ್ಲನೆ ಹೀಗೆ ಹೇಳಿದನು.

೯. ಶ್ರೀಪತಿಯೂ ಪರಿಪೂರ್ಣನಾದ ಸದ್ಗುರುವೂ ಆದ ವಿಷ್ಣುವು ಲೋಕ ರಕ್ಷಿಸುವುದಕ್ಕಾಗಿ ದ್ವಾಪರದ ಆದಿಯಲ್ಲಿ ಶ್ರೀ ಪರಾಶರ ಮತ್ತು ಸತ್ಯವತೀಯರ ಸುತನಾದನು. ತಪಸ್ವಿಯಾದ ಆತನು ವ್ಯಾಸರೂಪದಲ್ಲಿ ಶ್ರೀಪಿನಾಕಿಗೆ ಸಮನಾಗಿ ಹದಿನೇಳನೆಯ ಅವತಾರವೆತ್ತಿದನು.

೧೦. ತ್ರಿದಶವಂದಿತರಾದ ವ್ಯಾಸರು ಸರ್ವ ಲೋಕ ಹಿತಕಾರಿಗಳು. ಸರಸ್ವತೀ ನದಿ ತೀರದಲ್ಲಿ ಅವರು ಸ್ನಾನ ಅರ್ಘ್ಯಾದಿಗಳನ್ನು ಸಲ್ಲಿಸಿದರು. ಬದರಿಕಾಶ್ರಮ ಪುಣ್ಯಭೂಮಿಯ ಉನ್ನತವಾದ ಗಿರಿಯಲ್ಲಿ ಅವರು ಉದಯ ಭಾಸ್ಕರನ ಹಾಗೆ ಶೋಭಿಸುತ್ತಿದ್ದಾರೆ.

೧೧. ಹೀಗೆ ಉನ್ನತವಾದ ಗಿರಿಯಲ್ಲಿ ಕುಳಿತು ಚಿತ್ತದಲ್ಲಿಯೇ ಸಚರಾಚರಾದಿಗಳ ವರ್ತನೆಯನ್ನು ಮತ್ತು ನಾಲ್ಕು ಯುಗಗಳ ವರ್ತನೆಯನ್ನು ಆಲೋಚಿಸಿದರು. ಇನ್ನು ಮೇಲೆ ಕಲಿಕಾಲ ಬಂದಾಗ ಕರ್ಮದುರ್ವೃತ್ತಿ ದುಶ್ಚರಿತಗಳೇ ಹೆಚ್ಚಾಗುತ್ತವೆ. ಕಲಿಕಾಲದ ಜನಗಳು ಚಿತ್ತದಲ್ಲಿ ಯೋಚಿಸದೆ ಅಲ್ಪವೀರ್ಯರೂ ಮಂದಬುದ್ಧಿಯವರೂ, ಕಲ್ಮಷ ಹೊಂದಿದವರೂ ಆಗುತ್ತಾರೆ.

೧೨. ನಾಲ್ಕು ವರ್ಣಗಳ, ನಾಲ್ಕು ಆಶ್ರಮಗಳ ಕರ್ಮಕಾತರ ದುಃಖವನ್ನು ಆಲೋಚಿಸಿ ಇಳಿಸಿದ ಸಾರರಹಸ್ಯವನ್ನು ಒಟ್ಟಾಗಿಯೇ ಜನ ಅರಿಯಲು ಅಸಮರ್ಥರು ಎಂದು ಅವರು ಭಾವಿಸಿದರು. ವೇದಗಳ ಸಾರವನ್ನು ಅರಿಯುವುದಕ್ಕಾಗಿ ಜನರಿಗಾಗಿಯೇ ವೇದಗಳನ್ನು ನಾಲ್ಕಾಗಿ ಅವರು ವಿಭಾಗಿಸಿದರು.

೧೩. ಅವರು ವೇದಗಳನ್ನು ಋಕ್, ಯಜುರ್, ಸಾಮ, ಅಥರ್ವಣ ಎಂಬ ನಾಲ್ಕು ಭೇದವಾಗಿ ವಿಂಗಡಿಸಿ - ಅವುಗಳ ಸಾರವನ್ನು ಇತಿಹಾಸಾದಿ ದಿವ್ಯ ಪುರಾಣಗಳಲ್ಲಿ ಅಳವಡಿಸಿದರು. ಅಲ್ಲದೆ ವರ್ಣಾಶ್ರಮ ಸಾರವನ್ನು, ತ್ರೈವರ್ಗಾದಿಗಳನ್ನು ಚೆನ್ನಾಗಿ ತಿಳಿದು ಲಕ್ಷಣಾದಿಗಳಿಂದ ನಿರೂಪಿಸಿದರು.

೧೪. ಪೈಲನೆಂಬ ಋಷಿಯನ್ನು ಕರೆದು ಋಗ್ವೇದವನ್ನು ಒಪ್ಪಿಸಿದರು. ಜೈಮಿನಿಗೆ ಸಾಮ, ವೈಶಂಪಾಯನನಿಗೆ ಯಜುರ್, ಅಥರ್ವಾಂಗಿರಸಾಖ್ಯೆಯನ್ನು ಸುಮಂತುವಿಗೂ ಹೇಳಿದರು. ಇತಿಹಾಸವನ್ನು ಸೂತನಿಗೆ ತಿಳಿಸಿದರು.

೧೫. ಹೀಗೆ ವ್ಯಾಸರು ವೇದವನ್ನು ಅವರ ಶಿಷ್ಯರಿಗೆ ಉಪದೇಶಿಸಿದರು. ಅವರ ಶಿಷ್ಯರು ಮತ್ತವರ ಶಿಷ್ಯರಿಗೆ ತಿಳಿಸಿದರು. ಮೊದಲಿನಿಂದಲೂ ವಿರಾಜಿಸುವ ಭುವನದಲ್ಲಿ ಅದನ್ನು ಪ್ರಕಾಶ ಪಡಿಸಿ ರಾಜರು, ವೈಶ್ಯರು, ಶೂದ್ರರು ಮತ್ತು ಸ್ತ್ರೀಯರೇ ಮೊದಲಾದವರಿಗೆ ಯೋಗ್ಯವಾಗುವಂತೆ ಮಾಡಿದರು.

೧೬. ನಾರಿ ಶೂದ್ರ ಜಗತ್ತಿಗೆ ಇದು ಸಾಧ್ಯವಿಲ್ಲದಿರಲಾಗಿ ಭಾರತಾದಿ ಪುರಾಣ ಸಂಹಿತೆಯನ್ನು ಅವರು ಕಲಿಸಿದರು. ಧಾರಿಣಿಯಲ್ಲಿ ಹೀಗೆ ಇಳಿಸಿದ ಕಾವ್ಯವನ್ನು ಕೇಳಿ ಸರ್ವರೂ ಸರಿಯಾದ ದಾರಿಯಲ್ಲಿಯೇ ಸಾಗಿ ನಾಲ್ಕು ಧರ್ಮವನ್ನು ಪಡಕೊಂಡರು.

೧೭. ಉತ್ತಮ, ಅಧಮ, ಮಧ್ಯಮ ಈ ಗುಣತ್ರಯದ ಪ್ರವೃತ್ತಿಯಲ್ಲಿ ವರ್ತಿಸುವ ಸಚರಾಚರಗಳಿಗೆ ಮೋಕ್ಷ ಮಾರ್ಗವನ್ನು ಕಲ್ಪಿಸಿದರು. ತಮ್ಮ ಚಿತ್ತವೃತ್ತಿಯಲ್ಲಿ ಇನ್ನೂ ಈ ಜಗತ್ತಿನಲ್ಲಿ ಚಿತ್ತನಿರ್ಮಲನಾಗದಿರುವುದಕ್ಕೆ ಕಾರಣವೇನು ಎಂಬ ತತ್ತ್ವಸಾರವನ್ನು ಯೋಚಿಸುತ್ತಿದ್ದರು.

೧೮. ವಿಷ್ಣುಮಾಯೆಯು ಸಮಸ್ತಲೋಕದಲ್ಲಿ ಕರ್ಮಕಾಮ ಪ್ರವೃತ್ತಿ ಬೇಗೆಯನ್ನುಂಟು ಮಾಡಿರುವುದು. ಪ್ರತಿನಿತ್ಯವೂ ತತ್ತ್ವಸಾರವನ್ನು ನೋಡದೆ ತೃಷೆಯಲ್ಲಿಯೇ ಜನಗಳು ಕೊರಗುವುದನ್ನು ಈಕ್ಷಿಸಿದರು. ವ್ಯಾಸರು ಆತ್ಮದಲ್ಲಿ ವಿಷ್ಣುವೇ ನಮಃ ಎಂದು ನಂತರ ಚಿಂತಿಸಿದರು.

೧೯. ಮಾಯೆಯು ಲೋಗರ ಜೀವನದ ಭಾವವನ್ನು ದಂಡಿಸುತ್ತಿದೆ. ವ್ಯಾಕುಲಾತ್ಮರು ಘಾತಭಾವರು ಇವರನ್ನೆಲ್ಲಾ ಅದು ಹುಳಿ ಹಿಂಡುವ ಹಾಗೆ ಭಂಡ ಭಂಡ ಕೆಲಸಗಳನ್ನು ಮಾಡಿಸುತ್ತದೆ ಎಂದಾದರೆ ಇಷ್ಟು ಶಾಸ್ತ್ರ ಪುರಾಣಗಳನ್ನು ಸೃಷ್ಟಿಸಿ ಫಲವೇನು ಎಂದು ತಮ್ಮಲ್ಲಿಯೇ ಚಿಂತಿಸಿ ಈಶ್ವರಾ ಶಿವಾ ಎಂದರು ವ್ಯಾಸರು.

೨೦. ನಾನು ತಪ್ಪಿದು ಎಲ್ಲಿ? ಶಾಸ್ತ್ರ ಕಲ್ಪನೆ, ತತ್ತ್ವ ರಹಸ್ಯದಲ್ಲಿಯೇ ಎಂದು ತನ್ನ ಉತ್ತಮಾಂಗವನ್ನೇ ಸೂಕ್ಷ್ಮವಾಗಿ ದೋಷ ಚಿಂತನೆಗೆ ಒಳಪಡಿಸಿದರು. ಎಲ್ಲಿಯೂ ತಪ್ಪು ಕಾಣದಿರಲು ನಿತ್ಯ ಕರ್ಮದಲ್ಲಿ ತಪ್ಪು ಬಂದಿದೆಯೋ ಎಂದು- ಬುದ್ಧಿಗೆ ಏನೆಂದೂ ಗೋಚರಿಸದೇ ಇರಲು - ಬಹಳವಾಗಿ ಶೋಕಿಸಿದರು.

೨೧. ಹಿಂದೆ ಶ್ರೀಗುರು ಬೋಧಿಸಿದ ಹಾಗೆಯೇ ಉಪದೇಶದಲ್ಲಿ ಎಲ್ಲಿಯೂ ತಪ್ಪಿ ಬೀಳಲಿಲ್ಲ. ಸೂರ್ಯಾರಾಧನೆ, ಸಂಧ್ಯಾಕರ್ಮ, ಬ್ರಹ್ಮನಾಮ ಸ್ಮರಣೆ, ಅಗ್ನಿ ಉಪಾಸನೆಯಲ್ಲಿ ಹಿಂದೆ ಬೀಳಲಿಲ್ಲ. ಇನ್ನೇನು ಮಾಡಲಿ?

೨೨. ಎಷ್ಟು ಲೋಕಕ್ಕೆ ಉಪಕಾರ ಮಾಡಿದರೆ ಏನು ಫಲ? ಬುದ್ಧಿಗೆ, ಚೇತನಕ್ಕೆ ಸಂತೋಷ ಉಂಟಾಗುವುದಿಲ್ಲವೆಂದು ಕತ್ತಲೆಯ ಎಡೆಯಲ್ಲಿ ಸೂರ್ಯನು ಮರೆಯಾದ ಹಾಗೆ - ಕದ್ರು ಪುತ್ರದ ಬಾಧೆಗೆ ತಾರ್ಕ್ಷ್ಯ (ಗರುಡ) ಹೆದರಿದ ಹಾಗೆ - ಆ ಮುನಿ ಮರುಗುತ್ತಿದ್ದನು.

೨೩. ಕನಸಿನಲ್ಲೊಂದು ಗಜರಾಜ ಮಹಾಕೊಳದಲ್ಲಿ ಮುದ್ದೆಯಾಗಿ ಮಲಗಿ ಬಹಳವಾಗಿ ದಂಡನೆಗೆ ಒಳಗಾಗುವ ಹಾಗೆ ವ್ಯಾಸಮುನಿ ತನಗೆ ತಾನೇ ತಿಳಿಯದೆ ಅನುಶೋಕಿಸುತ್ತಿದ್ದನು. ಆ ವೇಳೆಯಲ್ಲಿ ಮೇಲೆ ಅಂಬರದಲ್ಲಿ ಸಹಸ್ರ ಸೂರ್ಯ ರಶ್ಮಿ ಪ್ರಭೆಗೆ ಸಮಾನಾದ ಪ್ರಭೆಯೊಂದು ತೋರಿ ಬಂತು.

೨೪. ಸುತ್ತಲೂ ಹರಡಿರುವ ಜಡೆ, ಹೆಚ್ಚಿರುವ ರೋಮರಾಜಿ, ಹಣೆಯಲ್ಲಿ ತಿಲಕ, ಹುಬ್ಬಿನಲ್ಲಿ ಸ್ಮಶ್ರು. ಕೆಂಪು ಬಣ್ಣದ ಮೀಸೆ. ಸೊಂಟದಲ್ಲಿ ಉತ್ತಮ ಚರ್ಮಾಂಬರ ಹಾಗೂ ರುದ್ರಾಕ್ಷಿಯ ಮಾಲೆ, ಶ್ರೀ ತುಳಸೀ ಮಾಲೆಯನ್ನೂ ಧರಿಸಿ ಆ ಪ್ರಭೆ ಬರುತ್ತಿತ್ತು.

೨೫. ಆತನು ಎಡಕೈಯ್ಯಲ್ಲಿ ವೀಣೆಯನ್ನು ಧರಿಸಿದ್ದನು. ವೇದಾಂತ ರಹಸ್ಯವನ್ನು ಏರು ಧ್ವನಿಯಲ್ಲಿ ಉಚ್ಚರಿಸಿ ಉಚ್ಚರಿಸಿ ಸಂತೋಷ ಪಡುತ್ತಿದ್ದನು. ಅದರ ಅರ್ಥವನ್ನು ಬಿಡದೆ ತಪ್ಪದೆ ಕೇಳಿ ಪುಳಕಗೊಳ್ಳುತ್ತಿದ್ದನು. ಪೊಡವಿಗೆ ಅತಿ ಪಾವನರಾದ ಋಷಿಗಳು ಹೀಗೆ ನಡೆದು ಬರುತ್ತಿದ್ದರು.

೨೬. ನಮೋ ನಾರಾಯಣ ನಮೋ ನಾರಾಯಣ ನಮೋ ನಾರಾಯಣ ಎಂದು ನಿಮಿಷವೂ ತಪ್ಪದೆ ಉಚ್ಚರಿಸುತ್ತಿದ್ದನು. ಸಚರಾಚರಕ್ಕೆ ಸುಮನೋಹರವಾಗುವಂತೆ ಕಲ್ಮಷವನ್ನು ಖಂಡತುಂಡಮಾಡಿ ರಮಾನಾಥನ ಪಾದದಲ್ಲಿ ಹಾಕುವ ಮುನಿ ಹೀಗೆ ನಡೆದು ಬರುತ್ತಿದ್ದನು.

೨೭. ಆದಿ ಅಂತ್ಯ ಇಲ್ಲದ ಪುಣ್ಯ ಪುರಾಣ ಪುರುಷ ಮೇದಿನಿಗೆ ಇಳಿದು ಬರುವ ಹಾಗೆ ದೂರದಲ್ಲಿ ಶ್ರೀ ನಾರದ ಮುನಿ ಸತ್ತಮರು ಬಂದರು. ಅದನ್ನು ಈಕ್ಷಿಸಿ ವೇದವ್ಯಾಸ ಮುನಿ ಆಹ್ಲಾದ ಚಿತ್ತರಾಗಿ ಎದ್ದು ಇದಿರುಗೊಂಡನು.

೨೮. ನಾರಾಯಣ ನಾಮ ಕೇಳಿ ಅಧಿಕ ಶಿಷ್ಯ ಸಮೇತರಾಗಿ ದೂರದಲ್ಲಿ ಎದುರಾಗಿ ಬಾಹುಯುಗವನ್ನು ತಲೆಯಲ್ಲಿ ಸ್ಥಾಪಿಸಿದನು. ಈಗ ಅವನ ಹೃದಯದಲ್ಲಿದ್ದ ಮಹಾ ಶೋಕವು ಕತ್ತಲೆಯು ಸೂರ್ಯ ಪ್ರಭೆಯನ್ನು ನೋಡುವಾಗ ಹೋಗುವಂತೆ ಮಾಯವಾಯಿತು.

೨೯. ಪೂರ್ಣಚಂದ್ರನು ಉದಿಸುವಾಗ ಸಮುದ್ರ ಮದಿಸಿ ಮೇಲೆದ್ದು ಬರುವ ಹಾಗೆ ಶಿಷ್ಯ ಸಂಕುಲದೊಂದಿಗೆ ಸನ್ನಿಧಾನಕ್ಕೆ ಅವರು ಬಂದರು. ನಾರದರಿಗೆ ವಂದಿಸಿ ಸಂತೋಷದ ಕಣ್ಣೀರನಲ್ಲಿ ಮೀಯಿಸಿ ಪೀಠದಲ್ಲಿ ಸ್ಥಾಪಿಸಿದರು.

೩೦. ಉತ್ತಮವಾದ ಆಸನಕ್ಕೆ ವ್ಯಾಸ ಮುನಿಯು ನಾರದರನ್ನು ಕೈಹಿಡಿದು ಕರೆದೊಯ್ದು ಕುಳ್ಳಿರಿಸಿ ಸಂಮಾನಿಸಿದನು. 'ಸ್ವಸ್ತಿ ವರ್ಧಿಸಲಿ' ಎಂದು ಆಶೀರ್ವದಿಸಿದ ನಾರದನು ವ್ಯಾಸಮುನಿಯ ಉತ್ತಮಾನನವನ್ನು ನೋಡಿ ಬುದ್ಧಿಗೆ ಏನು ಕಳಂಕವಾಗಿದೆ ಎಂದನು.

೩೧. ಚಂದ್ರನಿಗೆ ಕಲೆಯಾದಾಗ ಆ ಕಲೆಯು ಪ್ರಜ್ವಲಿಸುತ್ತದೆ. ಹಾಗೆ ನಿಮ್ಮ ಬುದ್ಧಿಯ ಕಲ್ಮಷವು ನಿಮ್ಮಲ್ಲಿ ಮಾತ್ರವೇ ಇರದೆ ಎಲ್ಲರಿಗೂ ಹೆಚ್ಚಾಗಬಹುದು. ನಿಮಗೆ ಕುಂದೇನು ಮುನೀಶ್ವರ? ಇಡೀ ಚರಾಚರಗಳು ನೀವು ಮಾಡಿದ ಪುಣ್ಯ ಪ್ರಸಂಗಕ್ಕೆ ಸಾಕ್ಷಿಯಾಗಿವೆ.

೩೨. ಗರುಡನು ಸರ್ಪ ಬಾಧೆಗೆ ಹೆದರಿದ ಹಾಗೆ. ರಾತ್ರಿಯಲ್ಲಿ ಹೋಗುವುದು ಹೇಗೆ ಎಂದು ಸೂರ್ಯನು ಚಿಂತಿಸುವ ಹಾಗೆ, ಬಡವಾನಲನು ಚಳಿಗೆ ಹೋಗುವುದು ಎಂತು ಎನ್ನುವ ಹಾಗೆ, ಭೂಮಿಯಲ್ಲಿ ನರವೈದ್ಯರು ನಿಮ್ಮ ವ್ಯಾಧಿ ಪರಿಹರಿಸುವುದಕ್ಕೆ ನಿಷ್ಫಲರಾಗುತ್ತಾರೆ.

೩೩. ನಿಮ್ಮ ಹಾಗೆ ಪರೋಪಕಾರವನ್ನು ಹಿಂದೆ ಮಾಡಿದವರು ಯಾರಿದ್ದಾರೆ? ಭಾರತಾದಿ ಪುರಾಣ ಕಾವ್ಯವನ್ನು ಧಾರಿಣಿಯಲ್ಲಿ ಕಲ್ಪಿಸಿ ದಾರಿ ಸುಸ್ಥಿರ ಮಾಡಿ ಸರ್ವರ ವರ್ತನೆಯನ್ನು ನೀವು ತಿದ್ದಿದಿರಿ. ಇದು ಭತ್ತವನ್ನು ಗೇರಿ ಜಳ್ಳೂ ಧೂಳುಗಳನ್ನು ನಾಶಮಾಡಿದಂತೆಯೇ ಸರಿ.

೩೪. ನಿಮ್ಮ ಬುದ್ಧಿಯ ಕಲ್ಮಷವನ್ನು ಪರಿಹರಿಸಲು ಧರಣಿಯಲ್ಲಿ ಯಾರು ಶ್ರೇಷ್ಠರಿದ್ದಾರೆ? ಗಾರುಡಿಗನಿಗೆ ಸಾಧ್ಯವಾಗದ ವಿಷವನ್ನು ತೆಗೆಯುವುದಕ್ಕೆ ಯಾರಿಗೆ ಸಾಧ್ಯ? ಸೂರ್ಯನಿಗೆ ಆಗದ ಕತ್ತಲೆಯನ್ನು ಮಿಂಚುಹುಳುಗಳು ಕಳೆಯುತ್ತವೆಯೇ? ನಾರಸಿಂಹ ಜಗನ್ಮಯಾ ಎಂದನು ನಾರದನು.

೩೫. ಆ ಜನಾರ್ದನ ಭಕ್ತರಾದ ನಾರದ ಋಷಿಗಳು ವ್ಯಾಸರ ಮನದಲ್ಲಿರುವ ಚಿಂತೆಯನ್ನು ನೋಡಿ ಇದಕ್ಕೆ ಕಾರಣ ಏನೆಂದು ಕೇಳಿದರು ಎಂಬಲ್ಲಿಗೆ ಪ್ರಥಮ ಸ್ಕಂಧದಲ್ಲಿ ಮೂರನೆಯ ಅಧ್ಯಾಯ ಶ್ರೀಹರಿಯ ಕರುಣೆಯಿಂದ ಮುಗಿಯಿತು.

ಅಧ್ಯಾಯ ೪

೧. ಕೇಳಿದಿರಾ ಶೌನಕಾದಿ ಮುನಿ ಮುಖ್ಯರೇ- ವ್ಯಾಸರನ್ನು ಯಾವ ಕಷ್ಟವು ಆವರಿಸಿದ್ದು ಎಂದು ನಾರದನು ಎನ್ನಲು ಅವರೆಂದುದನ್ನು ಇನ್ನು ಕೇಳಿರಿ.

೨. ಈ ನಿಮ್ಮ ಮನಸ್ಸಿನ ಕಲ್ಮಷವನ್ನು ಪರಿಹರಿಸಲು ನಿಮಗಿಂತ ಶ್ರೇಷ್ಠರು ಯಾರಿದ್ದಾರೆ ಎಂದು ಅವರು ವಿಚಾರಿಸಲಾಗಿ ನಾರದನು ವ್ಯಾಸನಿಗೆ ಹೀಗೆಂದು ಹೇಳುತ್ತಾರೆ.

೩. ನೀವು ಹೇಳಿದ್ದು ಸರಿ. ಅದರಲ್ಲಿ ಮುಚ್ಚುಮರೆಯಾಕೆ? ಮನಸ್ಸಿನಲ್ಲಿ ಕಲ್ಮಷ ಉಂಟು. ಅದನ್ನು ಖಂಡಿಸಿ ಕಳೆಯುವ ಬಂಧುವಾದ ನೀವು ನನ್ನ ನಡವಳಿಕೆಯನ್ನು ಗುರುತಿಸಿ ಸತ್ಯವನ್ನೇ ನುಡಿದಿರಿ.

೪. ಯಾರಿಗೂ ಸಾಧ್ಯವಾಗದ ನನ್ನ ಹೃತ್ಕಮಲದ ಸಾರವನ್ನು ನೀವು ತಿಳಿಯಲು ಸಮರ್ಥರಾಗಿದ್ದೀರಿ. ಇಷ್ಟರಿಂದಲೇ ನನ್ನ ದುಃಖವೆಂಬ ನಿಶೆ ಓಡಿತು. ಆದ್ದರಿಂದ ನೀವು ನನ್ನ ದುಃಖವನ್ನು ಇಲ್ಲವಾಗಿಸುತ್ತೀರಿ.

೫. ರೋಗ ಉಲ್ಬಣಿಸಿ ದುಃಖಿಸುತ್ತಿರುವ ಮಾನವರಲ್ಲಿಗೆ - ವೈದ್ಯರು ಬಂದಾಗಲೇ ರೋಗ ಪರಿಹಾರವಾಗುವ ಹಾಗೆ - ನೀವು ನನ್ನ ಚಿತ್ತದ ಕತ್ತಲೆಯನ್ನು ನಿವಾರಿಸಿದಿರಿ.

೬. ಪರಮವೈಷ್ಣವರೆಂಬ ಮಹಾತ್ಮರ ಗುರುವೂ, ಬ್ರಹ್ಮನ ಮಗನೂ ಆಗಿರುವ ನಿಮ್ಮ ಸಮೀಪ ಮಾಯಾಂಗನೆ ಬರಲಾರಳು. ನೀವು ತಿಳಿಯದಿರುವುದು ಯಾವುದಿದೆ?

೭. ವ್ಯಾಸನು ಹೀಗೆ ಹೇಳಿದುದನ್ನು ಕೇಳಿದ ನಾರದನು ಜಗತ್ತಿನಲ್ಲಿಯ ಜನರಿಗೆ ಲೇಸನ್ನೂ ಹೆಚ್ಚಿಸಬೇಕಾದ ರಹಸ್ಯವನ್ನು ಅವನಿಗೆ ಹೇಳಿದನು.

೮. ನಿಮ್ಮ ಮನಸ್ಸಿಗೆ ಹಿತ ಆಗುವುದಿದ್ದರೆ ಅಥವಾ ಆಗದಿದ್ದರೂ ಒಂದು ಹೇಳುತ್ತೇನೆ. ಕಷ್ಟಪಟ್ಟು ನೀವು ಸೃಷ್ಟಿಸಿದ ಕತೆ ನನ್ನ ಭಾವಕೆ ಒಪ್ಪಿಗೆಯಾಗಲಿಲ್ಲ.

೯. ನಿಮ್ಮನ್ನು ದಂಡಿಸಿಕೊಂಡು ಮಹಾಲೋಕ ಹಿತಕ್ಕಾಗಿ ಅನೇಕ ಇತಿಹಾಸ ಕತೆಗಳನ್ನು ಸೃಷ್ಟಿ ಮಾಡಿದ್ದಿರಿ. ಆದರೆ ವಿಷ್ಣುವಿನ ಗುಣ ಇಲ್ಲದೆ ಆ ಕತೆಗಳ ಬಗ್ಗೆ ಏನನ್ನು ಹೇಳಲಿ?

೧೦. ವಿಷ್ಣುವಿನ ನಾಮಗುಣಗಳನ್ನು ಸರ್ವಕಡೆಯಲ್ಲೂ ಹರಡವೆ ಅನ್ಯ ಪುರಾಣ ಕತೆಯನ್ನು ಸುಮ್ಮನೆ ಮುಂದೊಡ್ಡಿ ಜನರಿಗೆ ನಿಲುಕದಂತೆ ಮಾಡಿದಿರಿ. ಇದನ್ನು ಹೇಳಿ ಏನು ಫಲ?

೧೧. ನಿಮಗೇ ಕಂಡು ಬರುತ್ತಿದೆಯಲ್ಲ - ಇದರಿಂದಾಗಿ ಚಿಂತೆಯಲ್ಲದೆ ಬೇರೇನೂ ಇಲ್ಲವೆಂದು. ನಿಮ್ಮ ಮನಸ್ಸಿನಲ್ಲಿಯೇ ಯೋಚಿಸಿ ನೋಡಿ - ಆ ಜನಾರ್ದನನ ಕೀರ್ತಿಯ ಹೊರತು ಬೇರೆ ಯಾವುದರಿಂದ ಇದನ್ನು ಹೋಗಲಾಡಿಸಬಹುದು?

೧೨. ಕೇಳಿದರೆ ಪಾತಕ ಬೀಜ ನಾಶ. ಇನ್ನೊಬ್ಬರಿಗೆ ಹೇಳಿದರೆ ಕಾಲವಿಷ ನಶಿಸುತ್ತದೆ. ತಾವೇ ಹೇಳಿದರೆಂದರೆ ಪುನರ್ ಜನ್ಮ ಇಲ್ಲವಾಗುತ್ತದೆ. ಕೊಂಡಾಡಿದರೆ ಇಹಪರವೆರಡೂ ಲಭಿಸುತ್ತದೆ.

೧೩. ನಾಲ್ಕು ಬೀಜಾಕ್ಷರದ ಮಂತ್ರವನ್ನು ಒಮ್ಮೆಯಾದರೂ ನಾಲಗೆಗೆ ತಂದರೆ ನಾಲ್ಕು ನಾಲ್ಕು ತೆರನ ಶಾಸ್ತ್ರ ಮತಗಳನ್ನು ಸಂಹರಿಸಬಹುದು. ಆಮೇಲೆ ನಾಲ್ಕು ರೀತಿಯ ಮುಕ್ತಿಯನ್ನು ಸಾಧಿಸಬಹುದು.

೧೪. ಸರ್ವವೇದ ಪುರಾಣ ರಹಸ್ಯವನ್ನು ಸರ್ವಾರ್ಥಾಗಮ ಪಂಡಿತರು ಒಪ್ಪಿದರೂ, ಸರ್ವಧರ್ಮ ರಹಸ್ಯವನ್ನು ಸೂಕ್ಷ್ಮವಾಗಿ ನೋಡಿದರೂ, ಸರ್ವಾರ್ಥವಾಗಿಯೂ ನಾರಾಯಣನ ಗುಣಕ್ಕೆ ಎಷ್ಟಕ್ಕೂ ಸಮವಾಗಲಿಕ್ಕಿಲ್ಲ.

೧೫. ನವರಸ ಭರಿತವಾಗಿ ರಚಿಸುವುದಾದರೂ ನವ ವಿರಕ್ತಿಯಿಂದ ಸೂಚಿಸುವುದಾದರೂ ನವ ವ್ಯಾಕರಣಗಳನ್ನು ತಿಳಿದರೂ ಶ್ರೀಹರಿಯ ನವವಿಧವಾದ ಭಕ್ತಿಗೆ ಎಣೆಯಿಲ್ಲ.

೧೬. ಲೋಕನಾಥನ ಕೌಸ್ತುಭ ರತ್ನಮಣಿಗೆ ಕೈ ಬಳೆಯ ಆಕೃತಿ ಸಮಾನವಾದೀತೇ? ಚಂದ್ರನು ಇಲ್ಲದಿದ್ದರೆ ನಕ್ಷತ್ರಕೋಟಿಗಳು ಜನಿಸಿ ತಾನೇ ಏನು ಫಲ?

೧೭. ಶ್ರೀನಿವಾಸ ಪದಾಂಬುಜ ಭಕ್ತಿಯಿಲ್ಲದಿದ್ದರೆ ನಾನಾ ಶಾಸ್ತ್ರಾದಿಗಳನ್ನು ಓದಿ ಏನು ಫಲ? ಮೌನ, ಸ್ನಾನ, ವ್ರತಾದಿ ಕ್ರಿಯೆಗಳಿಂದ ಮಹಾಮಾಯೆಯನ್ನು ಏನು ಮಾಡಲು ತಾನು ಸಾಧ್ಯ?

೧೮. ಶೋಡಾಶಾತ್ಮಕರಾದ ಸಮಸ್ತ ಜನರು ಶೋಡಶ ಕ್ರಿಯೆಗಳನ್ನು ತಪ್ಪದೆ ಮಾಡಿದರೂ ಎಂಟು ರೀತಿಯ ಶರೀರ ಗುಣಗಳು ಭಕ್ತಿ ವಿಹೀನರಿಗೆ ಪ್ರಕೃತಿಯೊಡನೆಯೇ ಲಭಿಸುತ್ತವೆ.

೧೯. ಪತಿಪದಾಂಬುಜ ಭಕ್ತಿ ಇಲ್ಲದ ಸತಿ ಪತಿವ್ರತೆಯೇ? ಅವಳಿಗೆ ಇಹಪರ ಉಂಟೇ? ಕ್ಷಿತಿಯ ಮೂಢರಿಗೆ ಅಚ್ಯುತ ಭಕ್ತಿಯೇ- ಸಮಸ್ತವನ್ನು ಪರಿಸಿದರೂ - ಕೊನೆಯ ಆಸರೆ.

೨೦. ಮೂಢನಿಗೆ, ಮೂರ್ಖರಿಗೆ, ಅಜ್ಞಾನಿಗೆ, ಅಂಧನಿಗೆ, ಮಹಾಗರ್ವಿಗೆ, ಕರ್ಮಠನಿಗೆ ಮಂತ್ರಿಗೆ ನಾಡ ಮಂತ್ರವಾದಿಗೆ, ಮುನಿಗೆ, ಮನುಷ್ಯಾದ್ಯರಿಗೆ ಅಚ್ಯುತ ಭಕ್ತಿಯೇ ಮೂಲ ಬಲ.

೨೧. ಸ್ನಾನ ಮೌನ, ವ್ರತಾದಿಗುಣಜ್ಞರಿಗೆ, ವಾನಪ್ರಸ್ಥರಾಗಿರುವವರಿಗೆ, ಪಾಪಿಗಳಿಗೆ, ಹೀನ ಜಾತಿಯ ಸ್ತ್ರೀ ಪುರುಷರಿಗೆ ವಿಷ್ಣು ಭಕ್ತಿಯೇ ಬಂಧು.

೨೨. ತಾಯಿಯಿಲ್ಲದ ಮಕ್ಕಳ ಕಥೆ, ಹರಿತವಿಲ್ಲದ ಖಡ್ಗಧಾರಿಗಳು, ಉಪ್ಪು ಇಲ್ಲದ ರಸಾಯನ - ಇದರಂತೆ ಹರಿನಾಮವಿಲ್ಲದ ಕತೆ ನಿಷ್ಫಲ.

೨೩. ಕಾಗೆಗಳು ಮೀಯುವ ಬಾವಿ ಕೆರೆಗಳಲ್ಲಿ ವರಹಂಸಗಳ ಅಶುದ್ಧಿ ಹೋಗುವುದೇ? ನೀರು ಬಿಸಿಯಾಗಿದ್ದರೂ 'ಕಾಯಶುದ್ಧಿ' ಯಾಗುವುದೇ? ಹಾಗಾಗಿದೆ, ವೇದಾದಿ ಶಾಸ್ತ್ರಗಳ ವಿಚಾರ.

೨೪. ನಿಮ್ಮ ಆನನದಲ್ಲಿ ಆಶ್ಚರ್ಯ ಕಂಡು ಬರುತ್ತಿದೆ. ಆದರೆ ನಾನು ಹೇಳಿದೆನೆಂದ ಮಾತ್ರಕ್ಕೆ ನೀವು ಚಿಂತಿಸದಿರಿ. ಜ್ಞಾನಸಾಗರರಾದ ನೀವು ತಿಳಿಯದಿರುವುದು ಏನಿದೆ? ಧ್ಯಾನದಲ್ಲಿ ಈಕ್ಷಿಸಿ ಬುದ್ಧಿಯಲ್ಲಿ ಉದ್ಧರಿಸಿ.

೨೫. ಲೋಕರಕ್ಷಿಸುವುದಕ್ಕಾಗಿ ಅವತಾರವೆತ್ತಿದ ಲೋಕವಲ್ಲಭರು ನೀವು. ವಿಚಾರಿಸದೆ, ಲೋಕಚಕ್ಷುವನ್ನು ನೋಡದೆ ಮಾಯೆಗೆ ಒಳಗಾಗಿ ಶೋಕಿಸುತ್ತಿರುವಿರಿ.

೨೬. ನಿಮ್ಮ ಬುದ್ಧಿಗೆ ಒದಗಿದ ಮಹಾವ್ಯಥೆಯ ಬೇರನ್ನು ಕೀಳುವುದಾದರೆ, ನೀವು ನಿರ್ಮಿಸಿದ ಶಾಸ್ತ್ರವನ್ನು ಮಾನವರು ಮೀರಿ ನಡೆದುದನ್ನು ಗಮನಿಸಬೇಕು.

೨೭. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬುದಾಗಿ ನಾಲ್ಕು ದಾರಿಗಳನ್ನು ನೀವು ಸೃಜಿಸಿದಿರಿ. ದುರ್ಮನುಷ್ಯರು ಅದರಿಂದ ಎರಡನ್ನು ಕಳೆದು ಕಾಡ ದಾರಿಯನ್ನು ಹಿಡಿದರು.

೨೮. ಮೋಕ್ಷ ಧರ್ಮವನ್ನು ಕೈ ಬಿಟ್ಟು ದುಷ್ಟರು ಅರ್ಥ, ಕಾಮ ಫಲಾಧಿಗಳನ್ನೇ ಆರಿಸಿಕೊಂಡರು. ಸುರಧ್ರುಮವನ್ನು ನೋಡದೆ ಕಾಸರಕ್ಕನ ಮರವನ್ನು ಆರಿಸಿ ಈಗ ಮರುಗುತ್ತಿದ್ದಾರೆ.

೨೯. ಕರ್ಮ ಕಾಮುಕರಾದ ಮದಾಂಧರಿಗೆ ಸನ್ಮತಿ ಬರುವುದಾದರೂ ಹೇಗೆ? ನಿರ್ಮಲ ಸ್ತನದಲ್ಲಿ ನೀರುಜಿಗುಳೆಯಾದರೂ ಕಾಮಾಸಕ್ತಿಯಿಂದಲೇ ರಕ್ತವನ್ನು ಹೀರುತ್ತದೆ ಎಂಬುದು ಸತ್ಯವೇ.

೩೦. ಗುಣ ಮಾಡಿಸಿಕೊಳ್ಳುವುದಕ್ಕೆ ದುಷ್ಟರ ತಿಳಿಯಲಾರರು. ಕಣವು ಅಗ್ನಿಯತ್ತಲೇ ಹಾರುವಂತೆ ಅವರ ಸ್ಥಿತಿಯಾಗಿದೆ. ಪ್ರಯತ್ನ ಮಾಡಿಯೂ ಫಲವಿಲ್ಲದಂತಾಗಿದೆ. ಸತ್ಕವಿತೆಗೆ ದುಷ್ಟರನ್ನು ಶುದ್ಧಿಸಲು ಶಕ್ತಿಯಿಲ್ಲದಾಗಿದೆ.

೩೧. ಭಂಡರಾದ ವಿಕಲ್ಪರನ್ನು ತಿದ್ದುವುದಕ್ಕೆ ಆಗದೆ ಪಂಡಿತರೂ ಸುಮ್ಮನೇ ಕುಳಿತ್ತಿದ್ದಾರೆ. ವ್ಯಾಸರು ಇದನ್ನೆಲ್ಲ ಉಂಟು ಮಾಡಿ ಯಾಕೆ ಪರಿಹಾರ ಮಾಡದೆ ಇದ್ದಾರೆ ಎಂದು ಅವರು ಹೇಳಿಕೊಳ್ಳುತ್ತಿದ್ದಾರೆ.

೩೨. ಲೋಗರಿಗೆ ಉಪಕಾರ ಮಾಡಿದಾಗಲೂ ಅವರಿಗದು ಸಾಕಾಗಲಿಲ್ಲ. ಅವರು ಅಧಿಕವಾಗಿ ಲೋಕಕಂಟಕರೇ ಆದರು. ಇದುವೇ ನಿಮ್ಮ ಶೋಕಕ್ಕೆ ಮೂಲವಲ್ಲವೇ ಎಂದರು.

೩೩. ಮೂಲ ಮತ್ತು ಮೇಲು ಎರಡನ್ನು ಬಿಟ್ಟು ಮಧ್ಯವಷ್ಟನ್ನೇ ಸೀಳಿಕೊಂಡರು - ಈ ಕಲ್ಮಶರು. ಮೂಲದಲ್ಲಿ ಒಳ್ಳೆಯ ಕಂದ ಫಲಾದಿಗಳಿದ್ದರೆ, ಮೇಲಿನಲ್ಲಿ ಕದಳಿಫಲ ಮುತ್ತಿರುತ್ತದೆ.

೩೪. ಮೂಲವೇ ಧರ್ಮ, ಮೇಲು ಮುಕ್ತಿ. ಇದು ಸಾಧಕ ಜನ ತಿಳಿಯಬೇಕಾದ ವಿಚಾರ. ಮೂಲ ಮತ್ತು ಮೇಲನ್ನು ಬಿಟ್ಟವರು ನಡುವೆ ಇರುವ ಅರ್ಥಕಾಮಾದಿ ಫಲಗಳನ್ನು ಅನುಭವಿಸುತ್ತಾರೆ.

೩೫. ಹೊಂಡದಲ್ಲಿ ಮುಳುಗಿ ಬಳಲುತ್ತಿರುವ ಕತ್ತೆಗೆ ಹುಚ್ಚುಗಟ್ಟುವ ಹಾಗೆ ಮತ್ತೆ ಗದರಿಸಿದ ಹಾಗೆ ಮರ್ತ್ಯ ಜನ್ಮದಲ್ಲಿ ಮಾಯೆಗೆ ಒಳಗಾಗಿ ಅದರಲ್ಲಿಯೂ ಅರ್ಥಕಾಮಾದಿಗಳಿಗೇ ನೋಡುತ್ತಾರೆ.

೩೬. ಮಂಗನು ಮಧುವನ್ನು ಸೇವಿಸಿದ ಹಾಗೆ - ಈ ನರರು ಮದಿಸಿ ಹೋಗಿದ್ದಾರೆ. ಜ್ಞಾನದೃಷ್ಟಿ ಇಲ್ಲದ ಮಹಾಮದರು ಮಾಯೆಯ ಕೈಯಲ್ಲಿ ಹಾನಿಯಾಗುತ್ತಾರೆ.

೩೭. ಪರಾತ್ಪರುಪರೇ ಸಮದೃಷ್ಟಿಯಲ್ಲಿ ನೋಡದೆ ಮಾಯೆ ಸೃಷ್ಟಿಸಿದ ಭ್ರಮೆ ತೀರದು. ಇದರ ಕ್ರಮವನ್ನು ಇಷ್ಟು ದಿನ ನೀವು ನೋಡಿದಿರಿ. ಅಜ್ಞಾನದಿಂದ ನೋಡುವುದು ಸಲ್ಲ.

೩೮. ದೊಡ್ಡ ಸಾಗರವನ್ನು ಈಜಲಿರುವ ಮನುಷ್ಯರನ್ನು ಮಲ್ಲರ ಹಂತಕನಾದ ಶ್ರೀಹರಿಯ ನಾಮಗುಣವೆಂಬ ಕಥಾ ಪಲ್ಲವದಿಂದ ಮೇಲೆತ್ತಿರಿ. ನಾಳೆಗೆ ಉತ್ತಮ ಮುಕ್ತಿ ದೃಢವಾಗಿಯೂ ಸಿದ್ಧಿಸಬಹುದು.

೩೯. ತಾಪತ್ರಯವೆನ್ನುವ ಮಹಾರುಜೆಯಲ್ಲಿ ಯಾವಾಗಲೂ ದಂಡಿಸಿಕೊಳ್ಳುತ್ತಿರುವ ಮಾನವರನ್ನು ವಿಷ್ಣುಕಥಾಮೃತ ಕಾಯುವುದು - ನೀವು ಮನಸ್ಸಿನಲ್ಲಿ ಬೇಯದೆ ಅಂತಹ ಕಥಾಮೃತವನ್ನು ನಿರ್ಮಿಸಿರಿ.

೪೦. ನಿಜಧರ್ಮ ಪ್ರವೃತ್ತಿಗಳನ್ನು ಬಿಡಿಸಿ, ವಿಷಯಾದಿಗಳ ಬಂಧನವನ್ನು ಕಳಚಿ, ಎಡೆಯಲ್ಲಿ ಬೇರೆಲ್ಲಿಗೂ ಓಡಿಸದೆ ಲಕ್ಷ್ಮೀಧರನಿರುವ ಬದಿಗೇ ವಿಷ್ಣುಕಥೆ ನಿಶ್ಚಯವಾಗಿಯೂ ಮನುಷ್ಯರನ್ನು ಕರೆದೊಯ್ಯಬಹುದು.

೪೧. ದಾರಿ ಕಾಣದೆ ಕಾಡಿನಲ್ಲಿ ತಪ್ಪಿಸಿಕೊಂಡ ಶಿಶು ಅಲೆಯುತ್ತಾ ತನ್ನ ತಾಯಿಯನ್ನು ಕರೆದು ಕೈಹಿಡಿದು ಎಳೆದುಕೊಂಡ ರೀತಿ - ಹಿಂದಿನಿಂದ ಬಂದು ವಿಷ್ಣುಪದ ರಕ್ಷಿಸಬಹುದು.

೪೨. ಹದಿನಾಲ್ಕು ಲೋಕದಲ್ಲಿ ಕರ್ಮಗತಿಯಲ್ಲಿ ಉದಿಸಿ ಆತ್ಮನನ್ನು ಕಾಣದ ಮೂಢರಲ್ಲಿ ನಿಮಗೆ ಹೆಚ್ಚಿನ ಆದರ ಇರುವುದಾದರೆ ಮುನಿಗಳೇ ಹೊಸ ಭಗವತ್ಕಥೆಯನ್ನು ಹೇಳಿ.

೪೩. ಈಗಾಗಲೇ ನಿರ್ಮಿಸಿದ ಕಥೆಯನ್ನು ನಾಶ ಮಾಡಬೇಡಿರಿ. ಸನ್ಮತಿ ಅಷ್ಟರಿಂದಲೇ ಪ್ರಕಾಶಿಸಬಹುದು. ಕರ್ಮವನ್ನು, ವೇದವನ್ನು, ಶೋಕವೆಲ್ಲವನ್ನೂ ಬ್ರಹ್ಮಾರ್ಪಣ ಮಾಡಿದರೆ ಮುಕ್ತಿ ಲಭಿಸಬಹುದು.

೪೪. ಪರಮ ವೈಷ್ಣವರಾದ ಮಹಾತ್ಮರು ಯಾವಾಗಲೂ ದುರ್ಗತಿಗೆ ಇಳಿಯಲಾರರು. ಪರಮಭಕ್ತರ ಸಂಗತಿಯನ್ನು ಆಲಿಸಿ ಶ್ರೇಷ್ಠವಾದ ಸುಖದ ಪರ್ವತದಲ್ಲಿ ಅವರು ವಿಹರಿಸುತ್ತಾರೆ.

೪೫. ಹರಿಭಕ್ತಿಯನ್ನು ಮನಸ್ಸಿನಲ್ಲಿ ನಿರ್ಧರಿಸುವವರನ್ನು ಮಾಯೆ ಯಾವಾಗಲೂ ಬೆನ್ನು ಹತ್ತಲಾರಳು. ಇಲ್ಲಿಯವರೆಗಿನ ಕರ್ಮವನ್ನು ಝಾಡಿಸಿ ಹರಿಮಂದಿರದತ್ತ ಸಂಶಯವಿಲ್ಲದೆ ಅವರೆಲ್ಲರೂ ಸೇರುತ್ತಾರೆ.

೪೬. ನಾಲ್ಕು ಬೀಜಾಕ್ಷರ ಮಂತ್ರವನ್ನು ನಾಲಗೆಯಲ್ಲಿ ಯಾರು ಹೇಳುತ್ತಾರೋ ಅವರಿಗೆ ಮುಕ್ತಿ ಸಿಗುತ್ತದೆ ಎಂದು ನಾರದನು ಹೇಳುವಲ್ಲಿಗೆ ನಾಲ್ಕನೆಯ ಅಧ್ಯಾಯ ಪೂರ್ಣಗೊಂಡಿತು.

ಅಧ್ಯಾಯ ೫

೧. ಯಾರು ಈ ಕಥೆಯನ್ನು ರಚಿಸಲು ಅರ್ಹರು ಎಂದು ಹೆಚ್ಚಿನ ಭಕ್ತಿಯಿಂದ ಶೌನಕಾದ್ಯರು ಕೇಳಿದರು. ಆಗ ಅವರೇ (ವ್ಯಾಸರೇ) ಇದನ್ನು ಶ್ರೀ ಗುರುವಿನ ಕರುಣೆಯಿಂದ ರಚಿಸಿದ್ದು ಎಂದು ಸೂತನು ಹೇಳಿದನು.

೨. ಆಮೇಲೆ ಮುನೀಶ್ವರ ಹೇಳಿದ ಕತೆಯೇನು ಅಂದು ಅವರು ಕೇಳಲಾಗಿ ಗಣಪತಿಗೆ, ಶಾರದೆಗೆ ಕೈ ಮುಗಿದು ವಂದಿಸಿ ಸೂತನು ಹೇಳಲಾರಂಭಿಸಿದನು.

೩. ಸಾಧು ಸಂಗತಿಯಿಂದ ಸಹಸ್ರಗುಣಗಳನ್ನು ಸಾಧಿಸಬಹುದು ಎಂಬುದನ್ನು ನಾರದನು ಬೋಧಿಸಿದನು. ಹಿಂದಿನ ಜನ್ಮ ಫಲವನ್ನು ಸಾಧು ಸಜ್ಜನರೇ ಕೇಳಿ - ಎಂದು ಹೇಳತೊಡಗಿದನು.

೪. ವ್ಯಾಸರೇ, ಚೆನ್ನಾಗಿ ಕೇಳಿ! ವಾಸುದೇವ ಪ್ರಸಂಗದ ಮಹತ್ತ್ವವನ್ನು. ಭೂಸುರೋತ್ತಮರ ಸಂಸರ್ಗದಿಂದ ವಾಸನಾಫಲವು ನನಗೆ ದೊರಕಿದ ಬಗೆಯನ್ನು ಈಗ ಹೇಳುತ್ತೇನೆ.

೫. ಸರ್ವಪಾಪಗಳನ್ನು ಮಾಡಿದ ಕಾರಣದಿಂದ ಪೂರ್ವಕಾಲದಲ್ಲಿ ನಾನೊಬ್ಬ ಶೂದ್ರಿಗೆ ಮಗನಾಗಿದ್ದೆ. ಆಕೆಗೆ ಆಶ್ರಯದಾತರು ಯಾರೂ ಇರಲಿಲ್ಲ. ಇದೂ ಸಾಲದೆಂಬಂತೆ ನಾನೂ ಹುಟ್ಟಿ ದಂಡನೆ ಕೊಡುತ್ತಿದೆ.

೬. ದಂಡನೆಗೊಳಗಾಗುತ್ತಿರುವಾಗ ನನ್ನ ತಾಯಿಯು ಬ್ರಾಹ್ಮಣರನ್ನು ಸೇವಿಸಲು ಹೇಳಿದಳು. ಹಾಗೆ ಪಂಡಿತರು ನನ್ನ ಕೊಂಡುಹೋಗಿ ರಕ್ಷಿಸಿದರು. ನಾನು ಅವರು ಹೇಳಿದ ಕೆಲಸವನ್ನು ಮಾಡುತ್ತಿದ್ದೆ.

೭. ಕೋಪ, ದ್ವೇಷ, ಮೋಹ, ಮದ, ಮಾತ್ಸರ್ಯ, ಹಸಿವು, ತೃಷೆ ನಿದ್ರೆ, ಭಯ ಚಾಪಲತೆಯೆಲ್ಲವನ್ನೂ - ಶ್ರೀಪತಿ ಕರುಣೆಯಿಂದ ಅವರ ಸಂಸರ್ಗದಿಂದ - ನಾನು ಬಿಟ್ಟುಬಿಟ್ಟೆ.

೮. ಕರಣೇಂದ್ರಿಯಗಳು ನನಗೆ ವಶವಾಗುತ್ತಿದ್ದವು. ಮರುಳಾಟ ಸ್ವಲ್ಪವೂ ಸಲ್ಲುತ್ತಿರಲಿಲ್ಲ. ಅವರು ಪರಮೇಶ್ವರನನ್ನೂ ಯಾವಾಗಲೂ ಕೀರ್ತಿಸುತ್ತಿದ್ದರು. ನಾನು ಅದನ್ನೂ ಆಲಿಸುತ್ತಿದ್ದೆ.

೯. ನಾಲ್ಕು ತಿಂಗಳು ಹೀಗೆ ಬ್ರಾಹ್ಮಣರನ್ನು ಸೇವಿಸಿ ದಿನಂಪ್ರತಿ ಅಲ್ಲಿ ಕೆಲಸ ಮಾಡಿ ಸಾಲ ತೀರಿಸಿದೆ. ಆಗ ಬ್ರಾಹ್ಮಣರು ಇನ್ನು ಹೋಗು ಎಂದು ನನಗೆ ಹೇಳಿದರು.

೧೦. ಅವರು ಹೋಗಲು ಹೇಳುತ್ತಿರಲಾಗಿ ನನಗೆ ಬೇಸರವಾಗುತ್ತಿತ್ತು. ತುಂಬಾ ದುಃಖದಿಂದ ನಾನು ಏಕಾಂಗಿತ್ವವನ್ನು ಪಡೆಯಬೇಕಾಯಿತಲ್ಲ ಎಂದು ಯೋಚಿಸುತ್ತಿರಲಾಗಿ ಭಕ್ತಿಯಿಂದ ಮುಕ್ತಿ ಪದವನ್ನು ಪಡೆ ಎಂದು ಉಪದೇಶಿಸಿದರು.

೧೧. ಪ್ರಣವಗಳು ಕೂಡಿದ ಮಂತ್ರವನ್ನು ಹೇಳು ಎಂದರು. ನಾಲ್ಕು ಅಕ್ಷರಗಳನ್ನು ಕಲಿಯಲು ಪ್ರಯತ್ನಿಸು - ನಮ್ಮೊಂದಿಗಿದ್ದ ಸಂಸರ್ಗದಿಂದ ಫಲದಿಂದ ನೀನು ಎಣಿಸದ ಸುಖ ಮುಂದೆ ಬರುತ್ತದೆ ಎಂದು ಹೇಳಿದರು.

೧೨. ನಾನು ತಾಯಿಯನ್ನು ರಕ್ಷಿಸಬೇಕು. ನಾನು ಅದಕ್ಕಾಗಿ ಇತರರಲ್ಲಿ ಸೇವೆಯನ್ನೂ ಮಾಡಬೇಕು. ಆ ಸಮಯಗಳಲ್ಲಿ ನನಗಾದ ಕಷ್ಟವನ್ನು ಕಲ್ಪಿಸುವುದಕ್ಕೂ ಅಸಾಧ್ಯ. ಅದನ್ನು ಶ್ರೀವಿಷ್ಣುವೇ ಬಲ್ಲ.

೧೩. ಹೀಗಿರುವಾಗ ಕೆಲವು ಕಾಲ ನನ್ನ ತಾಯಿಯು ಹಾವೊಂದರ ಕಡಿತದಿಂದ ಸತ್ತಳು. ಆಗ ನನಗಾದ ಸಂಕಟ ಇನ್ನು ಮುಂದೆ ಜೀವಿಸಿ ಇರುವ ಯಾರಿಗೂ ಬರದೇ ಇರಲಿ!

೧೪. ನನಗೆ ಐದು ವರ್ಷವಾದಾಗ ನನ್ನ ತಾಯಿ ಸ್ವರ್ಗಸ್ಥಳಾದಳು. ಕರ್ಮಗತಿಯು ನನ್ನ ವಂಚಿಸಿತೆಂದು ನೆನೆಸಿ ದಿನಂಪ್ರತಿಯೂ ಶೇಷಶಾಯಿಯನ್ನು ಸ್ಮರಿಸಿದೆನು.

೧೫. ಅವಳಿಗೆ ಬೇಕಾದ ಸಮಸ್ತ ಕ್ರಿಯೆಗಳನ್ನು ಮಾಡಿ ನಾನು ಯಾತ್ರೆಗೆ ಹೊರಟೆನು. ಜನ್ಮವನ್ನು ಪೂರ್ತಿ ಮಾಡುತ್ತೇನೆ ಎಂದು ಉತ್ತರ ದಿಕ್ಕಿನತ್ತ ನಿರ್ಗಮಿಸಿದೆನು.

೧೬. ಸಚ್ಚರಿತ್ರರು ಇತ್ತ ಮಂತ್ರವನ್ನು ಉಚ್ಚರಿಸಿ, ತಪ್ಪದೆ ಧ್ಯಾನಿಸಿದೆ. ಎಚ್ಚರದಿಂದ ಅತೀ ದೂರ ನಿರ್ಗಮಿಸಿದೆ. ಗ್ರಾಮ, ಪಥಗಳೆನ್ನದೆ ಆಯಾಸಗೊಳ್ಳದೆ ಮುಂದುವರಿದೆ.

೧೭. ಪುರ, ಗ್ರಾಮ, ಮನೆ, ಪಟ್ಟಣ ದೊಡ್ಡದಾದ ಪರ್ವತ ಪ್ರದೇಶ, ವಿಚಿತ್ರವಾದ ನದೀ ನದಗಳನ್ನು ಧರಣಿಯಲ್ಲಿ ನೋಡಿ ಮುಂದುವರಿದೆ.

೧೮. ಗಿರಿ ಗುಹೆ, ಪರ್ವತ, ದೊಡ್ಡಶಿಲೆ ಪೊದೆಬಳ್ಳಿಗಳು, ಬಿದಿರುಮೆಳೆ ದುಂಬಿಗಳ ಸಮೂಹ, ಪಕ್ಷಿಸಂಕುಲ, ಮಂಗಗಳು ದೊಡ್ಡ ಮೃಗಗಳನ್ನು ದರ್ಶಿಸಿದೆನು.

೧೯. ಸುಂದರವಾದ ಬಿದಿರು, ಕುಶಂಬಕ (?), ಮುಳ್ಳು, ಕಳಹಂಸ, ನವಿಲುಗಳು, ಮಂದಮಾರುತ, ತಾವರೆಸಂಕುಲ, ಹುಲಿ ಮೃಗಾದಿಗಳನ್ನು ಒಂದಿಷ್ಟು ಲೆಕ್ಕಿಸದೆ ಮುಂದುವರಿದೆ.

೨೦. ಜಂತುಗಳಿರುವ, ಹೆಚ್ಚಾಗಿ ಬೆಳೆದಿರುವ ಕಾಡಿನಲ್ಲಿ ಬರುವಾಗ ಒಂದು ಕಡೆ ಶಾಂತವಾಗಿ ಹರಿಯುತ್ತಿರುವ ನದೀ ಜಲವನ್ನು ಸಂತೋಷದಿಂದ ನೋಡಿ ಹಿಗ್ಗಿದೆನು.

೨೧. ಅಷ್ಟರಲ್ಲಿ ಪಾದಗಳಿಗೆ ಬಳಲಿಕೆಯಾಯಿತು. ಜಾನು, ಗುಲ್ಫ, ಕಟಿ, ಜಘನ, ನಮು, ಕಂಠ ಇವೆಲ್ಲವೂ ಬಳಲಿದವು. ಗಂಟಲು ಒಣಗಿ ಬೆವೆತು ಮೈಯ್ಯಿ ನಿಶ್ಚಲವಾಯಿತು.

೨೨. ಹೀಗೆ ದಂಡಿಸಿ ಯಾತ್ರಿಸುವಾಗ ಶುಭ್ರವಾಗಿ ಹರಿದು ಬರುತ್ತಿರುವ ನದಿಯಲ್ಲಿ ಇಳಿದು ಸ್ನಾನ ಮಾಡಿ, ಚಂಚಲ ಪಡದು ಉದಕವನ್ನು ಸೇವಿಸಿದೆ.

೨೩. ಎರಡು ಕೈಯಲ್ಲಿ ತೆಗೆದು ಎರಡು ಅಳ್ಳೆಗಳಲ್ಲಿ ನಿಲ್ಲುವಷ್ಟು ಸೇವಿಸಿದೆ. ಎರಡು ಘಳಿಗೆ ನಾನು ಏಕೋ ಭಾವದಿಂದ ಕಷ್ಟಪದವನ್ನು ಆಸ್ವಾದಿಸಿದೆ.

೨೪. ಬ್ರಾಹ್ಮಣಾದಿಗಳು ಅನುಗ್ರಹಿಸಿದ ಜಪವನ್ನು ಸನ್ಮತಿಯಿಂದ ಚಿಂತಿಸಲು, ಬುದ್ಧಿ ನಿರ್ಮಲವಾಗಿ ಪ್ರಕಾಶಿಸಲು ಬ್ರಹ್ಮಮೂರ್ತಿ ಪ್ರಸನ್ನವಾಗಿ ಕಂಡನು.

೨೫. ಲೆಕ್ಕವಿಲ್ಲದಷ್ಟು ನಿಧಿಯನ್ನು ಕನಸಿನಲ್ಲಿ ಈಕ್ಷಿಸಿದ ರೀತಿಯಲ್ಲಿ ಕೋಟಿ ಸೂರ್ಯ ಸಮಪ್ರಭಾನನ್ನು ಈಕ್ಷಿಸಿ, ಬೆಕ್ಕಸ ಬೆರಗಿನಲ್ಲಿ ಉಬ್ಬಿಹೋದೆನು.

೨೬. ಕಂಡ ಕೂಡಲೇ ಉಬ್ಬಿದ ನಾನು ಆ ಮೂರ್ತಿಯನ್ನು ಈಕ್ಷಿಸಲು, ಆ ಕೂಡಲೇ ಆ ಮೂರ್ತಿ ಮಾಯಾವಾಗಿ ಹೋಯಿತು. ಚಿಂತಿಸದೆ ನಾನು ಮತ್ತೆ ಆ ಮೂರ್ತಿಯನ್ನೇ ಪೂಜಿಸಿದೆ.

೨೭. ಮತ್ತೆ ಕಾಣದಿರಲು ಅನೇಕ ವಿಧವಾಗಿ ಬಿದ್ದು ದಂಡಿಸಿಕೊಂಡೆನು. ನನ್ನ ವರ್ತನೆ ತಪ್ಪಿದ್ದು ಎಲ್ಲಿ ಎಂದು ಗದ್ಗದ ವಾಕ್ಯದಲ್ಲಿ ತತ್ತ್ವಸಾರವನ್ನು ನೋಡದೆ ಚಿಂತಿಸುತ್ತಿದ್ದೆ.

೨೮. ದುಃಖದಿಂದ ಮನಸ್ಸಿನಲ್ಲಿ ನಿರ್ಧರಿಸಿ ಅಲ್ಲೆಲ್ಲ ವಿಸ್ತಾರವಾಗಿ ಶ್ರೀ ಹರಿಯನ್ನು ಹುಡುಕಿದೆ. ಮಗನೇ ತತ್ತ್ವವನ್ನು ಕೇಳು ಎಂದು ಗಗನದಲ್ಲಿ ಅಶರೀರ ವಾಣಿ ಕೇಳಿಸಿತು.

೨೯. ಇನ್ನು ಕಾಣಸಿಗಲಾರೆ. ಹೆಚ್ಚು ಚಿಂತಿಸಬೇಡ. ನಿನ್ನ ದುಃಖವನ್ನು ಇಲ್ಲಿಗೇ ನಿಲ್ಲಿಸು. ನಿನಗೆ ಮುಕ್ತಿ ಸಿಗಬೇಕಾದರೆ ಜಾಣನಾಗಿ ನನ್ನನ್ನು ನಿತ್ಯವೂ ಸ್ಮರಿಸು. ಹಾಗಾದಾಗ ನಾನು ಭೂಮಿಯಲ್ಲಿ ಯಾವಾಗಲೂ ಇರುತ್ತೇನೆ.

೩೦. ಯಾವಾಗಲೂ ಹೆದರಬೇಡ. ನನ್ನನ್ನು ಯಾವಾಗಲೂ ನೆನೆಸು. ಆಗ ಬೀದಿಯಲ್ಲಿ ಹುಡುಕದೆ ಪಾರ ಲೌಕಿಕ ಜೀವಕ್ಕೆ ಗಾಢವಾದ ವಿರಕ್ತಿಯ ಸುಖ ನಿನಗೆ ದೊರೆಯಬಹುದು.

೩೧. ಚಿಂತೆ (ಧ್ಯಾನ)ವೆಂಬ ಸೂರ್ಯನಿರುವ ಮನಸ್ಸಿನಿಂದ ಜಯವು ಹೋಗಲಾರದು. ನನ್ನನ್ನು ಚಿಂತಿಸುವ ಭಕ್ತರಿಗೆ ನಾನೇ ಆಶ್ರಯ ಎಂದು ಅಂತರಿಕ್ಷದಿಂದ ಬಂದ ಸರಸ್ವತಿಯು ಮಾಯವಾಯಿತು.

೩೨. ಅಶರೀರವಾಗಿ ನನಗೆ ಹೇಳಿದ ಹಿತವಿಷಯವನ್ನು ಮನಸ್ಸಿನಲ್ಲಿ ಗ್ರಹಿಸಿ ಅವನಿಗೆ ವಂದಿಸಿದೆ ಸೃಷ್ಟಿಗೆ ಕಾಣದ ಹಾಗೆ ಜ್ಞಾನರವಿಯು ನನ್ನ ಮನಸ್ಸಿನೊಳಗೆ ಪ್ರಸವಿಸಿತು.

೩೩. ಸ್ವಾಮಿ ಅರ್ಪಿಸಿದ ನಿತ್ಯ ಕಾರ್ಯದ ಫಲವಾಗಿ ನಿತ್ಯ ಸುಖದಲ್ಲಿ ಕಾಮಿಸಿದ್ದ ಈ ಮನುಷ್ಯ ಸ್ವಭಾವ ಕುಚೇಷ್ಟೆಗಳು ಮಾಯವಾಗಿ ಅಭಿಮಾನ ಬಂತು.

೩೪. ಕೊನೆಗೊಂದು ದಿನ ನನ್ನ ಕಾಯವು ಸಾಯಲಾಗಿ ಯಮಭಟರು ನನ್ನ ಕೊಂಡುಹೋದರು. ಬ್ರಹ್ಮಾಂಡವೇ ಮಾಯವಾಗಿ ಹೋಯಿತು. ಬ್ರಹ್ಮನು ತನ್ನ ಮಾಯೆಯಲ್ಲಿ ಅಡಗಿಕೊಂಡನು.

೩೫. ಸೃಷ್ಟಿಸಲಾದ ಈ ಧರಣಿಯನ್ನು ಲಯಮಾಡುವುದಕ್ಕಾಗಿ ಸಮುದ್ರವು ಮೇರೆ ಮೀರಿ ಬೆಳೆಯಿತು. ಸೃಷ್ಟಿನಾಥ ಎಲ್ಲರನ್ನು ಎಲ್ಲವನ್ನೂ ನಾಶಗೊಳಿಸಿದನು. ಅದನ್ನು ಏನೆಂದು ಹೇಳಲಿ?

೩೬. ಹೀಗೆ ವತ್ಸರ ಸಾವಿರ ಕಳೆಯಲಾಗಿ, ನಾರಾಯಣನ ನಾಭೀ ಕಮಲದಿಂದ ಬ್ರಹ್ಮನು ಜನಿಸಿ ಶೋಭಿಸಿ, ಮುಂದಿನ ಹಾಗೆ ಧರಣಿಯನ್ನು ಕಲ್ಪಿಸಿದನು.

೩೭. ಬ್ರಹ್ಮನ ಸಂಕಲ್ಪನೆಯಿಂದ ಸನಕಾದಿ ಮುನೀಶ್ವರರು ಸೇರಿದರು. ಅವರ ತೊಡೆಯಿಂದ ಶ್ರೀ ವಿಷ್ಣುವಿನ ಭಕ್ತಿಯ ಮೂಲಕ ನಾನು ಜನಿಸಿದೆನು.

೩೮. ನಾರಾಯಣ ಭಕ್ತಿಯ ಸಾರ, ಅವರ ಮಾತು ಯಾವಾಗಲೂ ತಪ್ಪದು. ಧ್ಯಾನಿಸಿ ಪಠಿಸಿದ ಕಾರಣದಿಂದ ನನಗಾದ ಕಾರುಣ್ಯವನ್ನು ಏನೆಂದು ಹೇಳಲಿ?

೩೯. ಆತನ ನಾಮ ಗುಣವನ್ನು ಯಾವಾಗಲೂ ಅಭಿವರ್ಣಿಸಿದುದರಿಂದ ಆತನು ವೀಣೆಯನ್ನು ಅನುಗ್ರಹಿಸಿ ನಾರದ ಎಂದು ನಾಮಕರಣ ಮಾಡಿದನು.

೪೦. ನಾರಾಯಣ ನಾಮವನ್ನು ಯಾವಾಗಲೂ ಹೇಳುವುದಕ್ಕೆ, ಸಜ್ಜನರಿಗೆ ಹಿತಕ್ಕೆ ನನಗೆ ಆ ನಾಮ ಸ್ಮರಣೆಯ ಮತಿಯನ್ನು ಇತ್ತನು.

೪೧. ವೀಣೆಯಲ್ಲಿ ಯಾವಾಗಲೂ ನನ್ನ ನಾಮ ಸ್ಮರಣೆಯನ್ನು ಹೇಳು - ಸರ್ವರು ಕೇಳುವ ಹಾಗೆ - ಎಂಬುದಾಗಿ ವೀಣೆಯನ್ನು ಅನುಗ್ರಹಿಸಿ ಶ್ರೀ ವಿಷ್ಣುವು ನನ್ನನ್ನು ಆಲಿಂಗಿಸಿ ಕೊಂಡನು.

೪೨. ನಿತ್ಯವೂ ಆ ಪುರುಷೋತ್ತಮ ಕಥೆಯನ್ನು ಸ್ತುತ್ಯರಾದ ಮನುಷ್ಯರೆದರಲ್ಲಿ ಹಾಡಿ ನರ್ತಿಸುವುದಕ್ಕೆ ಬೇಕಾದ ಸಾರವನ್ನು ಅನುಗ್ರಹಿಸಿದನು.

೪೩. ಉತ್ತಮ ದ್ವಿಜವೈಷ್ಣವರನ್ನು ನಾನು ಸೇವಿಸಿದ ಕಾರಣ ಮತ್ತೆ ನನಗೆ ಈ ತನು ಲಭಿಸಿತು. ಸಜ್ಜನರ ಒಡನಾಟದಿಂದ ಲಾಭವುಂಟು.

೪೪. ಪೂರ್ವಜನ್ಮ ಕೃತ್ಯಗಳ ಸಂಸ್ಮರಣೆ, ಪೂರ್ವದಲ್ಲಿ ಆಚರಿಸಿದ ಸತ್ಕ್ರಿಯೆ ಸರ್ವಜ್ಞಾನವೂ ಸರಿಯಾಗಿ ಆಶ್ರಯಿಸುವುದು - ಇದಕ್ಕೆಲ್ಲ ಹರಿಭಕ್ತಿಯೇ ಕಾರಣ, ಅದುವೇ ಮುಕ್ತಿ ಪಥ.

೪೫. ತಿಳಿದೋ, ತಿಳಿಯದೆಯೋ ಮಾನವರು ಮಾಡಿದ ಕರ್ಮಫಲಗಳನ್ನು ಅಚ್ಯುತನ ಪಾದತಳದಲ್ಲಿ ಹಾಕಿದರೆ ಕಟ್ಟಿಗೆಯನ್ನು ಸುಟ್ಟು ಹಾಗೆ ಅವು ಸುಟ್ಟು ಶುಭವಾಗುತ್ತದೆ.

೪೬. ಇದಕ್ಕಾಗುವ ಉಪಾಯವನ್ನು ಕಲ್ಪಿಸಿರಿ. ಇದರಿಂದ ಕರ್ಮ ಬರಲಾರದು. ಇದು ಸರ್ವಜನಕ್ಕೂ ಹಿತಾರ್ಥವಾಗುವುದು ಎಂದು ಮುನೀಶ್ವರನಿಗೆ ಬೋಧಿಸಿದನು.

೪೭. ಮನೆಯಲ್ಲಿರುವ ಹಾಲ ಮಹೌಷಧವನ್ನು ಬಿಟ್ಟು ದೊಡ್ಡ ಕಾಡಿನಲ್ಲಿರುವ ಬೇರನ್ನು ಹುಡುಕಿ ಎಬ್ಬಿಸಿದ ಹಾಗೆ ಜನರು ಸರ್ವ ಕಡೆಯಲ್ಲಿ ಸಲ್ಲದುದನ್ನೇ ಆಚರಿಸುತ್ತಾರೆ.

೪೮. ವಿಚಾರಿಸಿದರೆ ಹರಿನಾಮ ಗುಣಕ್ಕೆ ಮಿಗಿಲಾದ ಮಹೌಷಧ ನಿಜವಾಗಿಯೂ ಇಲ್ಲ. ಹರಿಲೋಕ ಬೇಕಾದ ಸರ್ವರಿಗೂ ಪರಲೋಕ ಹಿತಾರ್ಥವಾಗಿಯೇ ಈ ಕವಿತೆ ಇದೆ.

೪೯. ಶ್ರೀ ಭಾಗವತಾರ್ಥ ರಹಸ್ಯವನ್ನು ಈ ಭೂಮಿಗೆ ನಾರದನು ಮಹಾಭಾರತ ಕರ್ತೃವಿಗೆ ಬೋಧಿಸಿ ಶ್ರೀ ಭಕ್ತಿಯನ್ನು ಪ್ರಕಾಶಿಸಿದನು.

೫೦. ನಾರದ ಮುನಿ ಹೇಳಿದ ಸಮಸ್ತ ಗುಣದ ಸಾರವನ್ನು ತನ್ನಲ್ಲಿಯೇ ನಿರ್ಧರಿಸಿ 'ನಾರಸಿಂಹ ಜಯಾ' ಎಂದು ಶ್ರೀ ಭಗವತ್ಕಥೆಗೆ ಪ್ರೇರಿಸಿದನು.

೫೧. ಪಂಚತತ್ತ್ವ ವಿಭಕ್ತಿಯನ್ನು ನಾರದನು ಸರಿಯಾಗಿ ವ್ಯಾಸರ ಹೃತಮಲಕ್ಕೆ ಬೋಧಿಸಿದನು ಎಂಬಲ್ಲಿಗೆ, ವ್ಯಾಸನು ಚಂಚಲ ಖಂಡಿಸಿದ ಈ ಕವಿತೆಯ, ಐದನೆಯ ಅಧ್ಯಾಯವಾಯಿತು.

ಅಧ್ಯಾಯ ೬

೧. ಶ್ರೀಪತಿಯ ಪ್ರಿಯ ಮಗನಾದ ಬ್ರಹ್ಮನ ಪಾದಕಮಲಕ್ಕೆ ಅಭಿವಂದಿಸುತ್ತೇನೆ. ಆ ಪತಿವ್ರತೆಯಾದ ಭಾರತಿಯನ್ನು ಮನಸ್ಸಿನಲ್ಲಿ ಆರಾಧಿಸುತ್ತೇನೆ. ಕಷ್ಟವನ್ನು ನಿಗ್ರಹಿಸುವಂತಹ ಶ್ರೀ ಭಗವತ್ಕಥೆಯನ್ನು ವಿರಚಿಸಲು ತಾಪಸೋತ್ತಮನಾದ ಶುಕಮುನಿ ಮತ್ತು ವ್ಯಾಸರಿಗೆ ವಂದಿಸುತ್ತೇನೆ.

೨. ಸೂತನೇ, ನಾರದರ ಉಪದೇಶ ಕೇಳಿ ಮುನೀಶ್ವರ ರಚಿಸಿದ ಕವಿತೆ ಆತನ ಶುದ್ಧಬುದ್ಧಿಯಿಂದ ಬಂದಿರುವುದು. ಅದು ತುಂಬಾ ಆಳವೂ ವಿಶಾಲ ಸ್ವಾದವೂ ಅಮೃತತುಲ್ಯವೂ ಆದುದಾಗಿದೆ. ಅದನ್ನು ಹೇಳು ಎಂದು ಹರಿಭಕ್ತಿಯ ಕೌತುಕದಿಂದ ಶೌನಕಾದ್ಯರು ಹೇಳಲಾಗಿ, ಆತ ಮೆಲ್ಲನೆ ಹೇಳಲು ತೊಡಗಿದನು.

೩. ಬುದ್ಧಿಯಲ್ಲಿರುವ ಜಾಡ್ಯ ಕಲ್ಮಷ ಮುಂತಾದ ಅಡ್ಡಿಗಳು ಹೋಗಲಾಗಿ ಶುದ್ಧ ಮಾನಸನಾಗಿ ವ್ಯಾಸನು ನೋಡಿದನು. ಸಚರಾಚರಗಳೆಲ್ಲವೂ ಬುದ್ಧಿಹೀನರಾಗಿ, ಮಾಯೆಯಲ್ಲಿ ತೇಲುತ್ತಾ ಮುಳುಗುತ್ತಾ ಮಾನಸದುಃಖವೆಂಬ ಮಹಾಸಾಗರದಲ್ಲಿರುವುದನ್ನು ನೋಡಿದನು.

೪. ಮಾಯೆ ನಿರ್ಮಿಸಿದ ಮಾಯೆಯಲ್ಲಿ ಸಿಲುಕಿ ನಾರಾಯಣ ಸ್ಥಿತಿಯನ್ನು ನೋಡದೆ ಕಾರ್ಯವೆಂಬ ಕಲ್ಪನೆಯ ಗುಹೆಯಲ್ಲಿ ಸಿಲುಕಿ ಯಾವಾಗಲೂ ಆದಾಯ ಸಿಗುವ ಬಾಗಿಲ ತಿಳಿಯದೆ ಸಾಯುವ ಜಗತ್ತಿನ ಆಯಾಸವನ್ನು ತನ್ನಲ್ಲಿಯೇ ಚೆನ್ನಾಗಿ ಸೂಕ್ಷ್ಮವಾಗಿ ಅವನು ನೋಡುತ್ತಾನೆ.

೫. ಮೂಗಿನಲ್ಲಿ ಬೆರಳಿಟ್ಟು ತಲೆದೂಗಿ ವಿಸ್ಮಯದಿಂದ 'ಶ್ರೀ ಸದಾಶಿವ ವಿಸ್ಮಯ' ಎಂದು ಮನಸ್ಸಿನಲ್ಲಿಯೇ ವಿಹ್ವಲಗೊಂಡು ಘಾಸಿ ಮಾಡುವ ಮಾಯೆಯ ನಿಶಿ ಮೇಲೇಳದಂತೆ ಮಾಡಲು ವ್ಯಾಸನು ತಮ್ಮಲ್ಲಿ ದೃಢವಾದ ಮಾರ್ಗವೊಂದನ್ನು ಆಯ್ದನು.

೬. ಮತ್ತೆ ನಿರ್ಮಲಬುದ್ಧಿಯಲ್ಲಿ ಮಾಯೆ ಖಂಡಿಸಲು ಅಚ್ಯುತ ಭಕ್ತಿಯೇ ವಿಶೇಷವಾದುದೆಂಬುದನ್ನು ತಿಳಿದು ಹರ್ಷಿತನಾಗಿ ಕತ್ತಲೆಯಲ್ಲಿದ್ದ ರತ್ನವನ್ನು ತಾನು ಗುರುತಿಸಿದನೆಂದು - ತತ್ತ್ವಬುದ್ಧಿಯಲ್ಲಿ ತಾಯಿಗೆ ಸರಿಯಾದ ಜ್ಞಾನವನ್ನು ಗುರುತಿಸಿದನು.

೭. ತಾಯಿ ಇರುವಾಗ ಬಾಲರಿಗೆ ದುರ್ಲಭವಾದುದೇನು? ಶೇಷಶಾಯಿಯ ಭಕ್ತಿಯಲ್ಲಿರುವವರಿಗೆ ಮಾಯೆಯ ಭಯವಿಲ್ಲ. ತನ್ನ ಮಗನನ್ನು ನಾಶವಾಗುವ ವರೆಗೂ ಬೆಂಬಿಡದೆ ಈ ಕಥೆ ಎಂಬ ತಾಯಿಯ ಹಾಗೆ ರಕ್ಷಿಸಿ ಮುಕ್ತಿಯನ್ನು ಅನುಗ್ರಹಿಸಬಲ್ಲುದು.

೮. ಹೀಗೆ ಭಾವಿಸಿ ಮಾಯೆಯ ಭ್ರಾಂತಿಯನ್ನು ಹರಿಸಲು ಶ್ರೀಹರಿಯ ಭಕ್ತಿಯಲ್ಲಿರುವಷ್ಟು ವಿಶೇಷ ಬೇರೆಯಾವುದರಲ್ಲಿಯೂ ಇಲ್ಲವೆಂದರಿತನು ಇದರಿಂದ ಜೀವರ ಬುದ್ಧಿ ಉತ್ತಮವಾದೀತೆಂದು ನಿರ್ಧರಿಸಿ ಶ್ರೀ ಭಗವತ್ಕಥೆ ರಚಿಸಲು ಆ ಮುನಿಸತ್ತಮನು ನಿರ್ಧರಿಸಿದನು.

೯. ಸತ್ವರೂಪದಲ್ಲಿ ಮಣ್ಣಿನ ಮಡಕೆಯ ಹಾಗೆ ಈ ಜಗವನ್ನು ಶ್ರೀಹರಿಯು ನಿರ್ಮಿಸಿದನು. ಆ ತತ್ವವನ್ನೂ ತಾವೇ ನಿರ್ಮಿಸಿ ತಾನೇ ಅದರೊಳಗೆ ತನ್ನ ವರ್ತನೆಯ ಕೃತ್ರಿಮದ ಪ್ರಕಾರ ಅತ ಅಡಗಿ ಕುಳಿತ್ತಿದ್ದಾನೆ. ಹಾಗೆಯೇ ಸೂತ್ರೀಕರಿಸುತ್ತಿದ್ದಾನೆ. ಮನಸ್ಸಿಗೆ ಒಡೆಯನಾದ ಆ ಪರಮೇಶ್ವರನ ಹೊರತಾಗಿ ಇದಕ್ಕೆ ಸ್ವಾತಂತ್ರ್ಯವುಂಟೇ?

೧೦. ಇನ್ನು ಮುಕ್ತಿಮಾರ್ಗಕ್ಕೆ ಸಂಬಂಧಿಸಿದ ಸತ್ಕಥೆಯನ್ನು ಹೇಳುತ್ತೇನೆ. ಭುವನಕ್ಕೆ ವಲ್ಲಭನ ಕೀರ್ತನೆಯೂ ಸ್ತೋತ್ರಗಾನವೂ ಆದ ಇದನ್ನುಳಿದು ಲೋಕದ ಜನರಿಗೆ ಯೋಗ್ಯವಾಮದು ಇಲ್ಲ. ವ್ಯಾಸನು ತಮ್ಮಲ್ಲಿಯೇ ಇದನ್ನು ಆಲೋಚಿಸಿ ಪ್ರಸನ್ನರಾದನು.

೧೧. ಉತ್ತಮ ಬುದ್ಧಿಯಲ್ಲಿ ಕೇಳಿದರೂ ನಾಲ್ಕು ಪುರುಷಾರ್ಥಗಳು ಸಿದ್ಧಿಯಾಗುತ್ತವೆ. ಸಂತೋಷದಿಂದ, ದೃಢವಾದ ಚಿತ್ತದಿಂದ ಹೇಳಿದರೆ ಪಾಪ ಪರಿಹಾರವಾಗುತ್ತದೆ. ಅಚ್ಯುತನ ನಾಮವನ್ನು ಕೇಳಬೇಕು ಎಂದು ಇಚ್ಛಿಸುವ ಮನುಷ್ಯರಿಗೆ ತನ್ನ ಹೃದಯದಲ್ಲಿ ಆಲಯವನ್ನು ಕಲ್ಪಿಸಿ ಶ್ರೀಧರನು ಶೋಭಿಸುತ್ತಾನೆ.

೧೨. ಪರಮ ಪಾವನವಾದ ವೇದವೆಂಬ ಕಲ್ಪತರುವಿನಲ್ಲಿರುವ ಶ್ರೀಭಗವತ್ಫಲವು ಶುಕಮುನಿಯ ಮುಖಕಮಲದಿಂದ ಹರಿದು ಬಂದ ದಿವ್ಯ ಸುಧಾರಸವು. ರಸಿಕರೇ, ಗುಣಜ್ಞರೇ, ಪರಮಾರ್ಥರೇ, ತತ್ತ್ವಜ್ಞರೇ ಪ್ರಸನ್ನತೆಯಿಂದ ಇದರಲ್ಲಿರುವ ಸಾಧುಸಂಗತಿಯನ್ನು ಆಲಿಸಿರಿ.

೧೩. ಅಪಾರವಾದ ನಿಧಿಯನ್ನು ನೋಡದೆ ಲೋಗರು ಭಿಕ್ಷಾ ಪಾತ್ರೆ ಹಿಡಿದು ಹಿಡಿ ಭಿಕ್ಷೆಯನ್ನು ಬೇಡಿ ಬಳಲುವಂತೆ, ಒಡಲಲ್ಲಿರುವ ಪರಾತ್ಮವನ್ನು ನೋಡದೆ ಕರ್ಮಶತಗಳ ಸಮುದ್ರದಲ್ಲಿ ಮುಳುಗಿ ವ್ರತಾದಿ ಪ್ರತಿಜ್ಞೆಗಳನ್ನು ಮೂಢರು ಮಾಡುತ್ತಾರೆ.

೧೪. ಬಡಬಾಗ್ನಿಯಲ್ಲಿ ಬೀಳದೆ, ಮನ್ಮಥನ ಕಾಲೋಗ್ರ ವಿಷಯಾಸಮುದ್ರದಲ್ಲಿ ಮುಳುಗದೆ, ಕರ್ಮಗತಿ ಗುಹೆಯನ್ನು ನುಗ್ಗದೆ ಅಂತಕ ನಿಮ್ಮನ್ನು ಕೆಳಗೆ ಬೀಳಿಸದ ಮುನ್ನ ಉತ್ತಮವಾದ ಮಹಾನಾರಾಯಣನ ನಾಮವನ್ನು ಭಕ್ತಿ ಸಂಸರ್ಗದಿಂದ ಬಿಡದೆ ಜಪಿಸಿರಿ.

೧೫. ಅದ್ಯಂತ್ಯವಿಲ್ಲದ ನಾಮಗುಣ ಸಾರವನ್ನು ತಿಳಿದು ವೇದೋಕ್ತವಾಗಿ ಒಪ್ಪಿಗೆಯಾದ ಸತ್ಕಥೆಯನ್ನು ವ್ಯಾಸನು ರಚಿಸಿದನು. ಅದನ್ನು ಆಮೇಲೆ ಶುಕರಾಯನಿಗೆ ಉಪದೇಶಿಸಿದನು. ಅದನ್ನೇ ಮೇದಿನಿಯಲ್ಲಿ ನಾನೀಗ ಹೇಳುತ್ತೇನೆ.

೧೬. ಶುಕಮುನಿಯು ತಂದೆಯಿಂದ ಭಾಗವತಾರ್ಥಧರ್ಮ ರಹಸ್ಯವನ್ನು ಪಠಿಸಿದನು. ಬಳಿಕ ಆತನು ಸಿಂಧುವಲ್ಲಭೆಯಾದ ಗಂಗಾನದಿಯ ದಕ್ಷಿಣದ ದಡದಲ್ಲಿ, ಭೂಮಂಡಲಾಧಿಪನಾದ ಪರೀಕ್ಷಿತನಿಗೊದಗಿದ ಸರ್ಪಭಯವನ್ನು ಕೇಳಿ ಆತನಿಗೆ ಇದನ್ನು ಭೋದಿಸಿದನು. ಸಂದೇಹಗಳನ್ನು ತ್ಯಜಿಸಿ ಆತ ಮುಕ್ತಿಯನ್ನು ಪಡಕೊಂಡನು.

೧೭. ಶೌನಕಾದ್ಯರು ಸೂತನನ್ನು 'ಪರಮಭಾಗವತ' ಎಂದು ಸಂಭೋದಿಸಿದರು. ಆ ಕ್ಷಣದಲ್ಲಿಯೇ (ರಾಜಶೇಖರನಿಗೆ) ಮರಣ ನಾಟಕವೊದಗಿದ - ಆ ತರುಣ ಭೂಮಿಪನ ಜನ್ಮಕರ್ಮ ಪ್ರಸಂಗಕ್ಕೆ ಸಂಬಂಧಿಸಿದ - ಈ ಚರಿತೆಯನ್ನು ಕೇಳುವುದಕ್ಕೆ ಮನಸ್ಸಾಗಿದೆ ದಯವಿಟ್ಟು ತಿಳಿಸಿ ಎಂದರು.

೧೮. ಇನ್ನು ಸೂಕ್ಷ್ಮತೆಯಿಂದ ಶೌನಕಾದಿ ಮುನಿಗಳು ಕೇಳಬೇಕು. ಧಾರಿಣಿಯಲ್ಲಿ ಮಹಾಭಾರತ ಯುದ್ಧವಾದಾಗ ಅದರ ಅಂತ್ಯದಲ್ಲಿ ಸುಯೋಧನನು ದ್ರೋಣ ಸುತನಿಂದ ಪಂಚ ಪಾಂಡುಪುತ್ರರ ವಧೆಯನ್ನು ನೋಡಿ, ಪ್ರಾಣವನ್ನು ಬಿಟ್ಟು ಮುಕ್ತಿಯನ್ನು ಹೊಂದುತ್ತಾನೆ.

೧೯. ಪುತ್ರರ ವಧೆಯನ್ನು ನೋಡಿ ಪಾರ್ಥನು ಕೃಷ್ಣನೊಂದಿಗೆ ರಥವೇರಿ ಬಂದನು. ಆಗ ದ್ರೋಣ ಪುತ್ರನು ಇನ್ನು ತನ್ನನ್ನು ವಧಿಸುತ್ತಾನೆ ಎಂದು ಹೆದರಿ ಚಿತ್ರವಾದ ಬ್ರಹ್ಮಾಸ್ತ್ರವನ್ನು ತೆಗೆದನು. ಪಾರ್ಥನ ಶಿರಸ್ಸನ್ನು ಕತ್ತರಿಸು ಎಂದು ಆಜ್ಞಾಪಿಸಿ ಕಳುಹಿದನು.

೨೦. ಜ್ವಾಲಾಮಾಲೆಯಿಂದ ಅಷ್ಟದಿಶಾವಳೀ ಸುತ್ತ ಹೊಗೆ ಆವರಿಸಿತು. ಮೂಲವನ್ನು ಮುತ್ತಲು ಇಚ್ಛಿಸಿ ಬಿಟ್ಟ ಬಾಣವನ್ನು ಕಂಡು ಅಮರಾದ್ಯರು ಕಾಲಸೂದನ! ಶಂಬು! ಶಂಕರ! ಎಂದು ಬೊಬ್ಬೆ ಹಾಕಿ ಹೆದರಿ ಹೋಗುವ ಅದ್ಭುತವನ್ನು ಏನೆಂದು ಹೇಳಲಿ?

೨೧. ದೂರದಿಂದ ಜ್ವಲಿಸಿ ಬರುವುದನ್ನು ನೋಡಿ ಹೆದರಿದ ಅರ್ಜುನನು ನೋಡಿ ಶ್ರೀರಮಾಕರ! ತ್ರಾಹಿ! ಶಾಶ್ವತ! ಸಚ್ಚಿದಾತ್ಮ! ಜಗನ್ಮಯಾ! ದೂರವಾಗಬೇಡಿ, ಭಕ್ತವತ್ಸಲ, ಎಂದು ಹರಿಯನ್ನು ಪ್ರಾರ್ಥಿಸಿದನು. ಆಗ ಸಾರ ಬುದ್ಧಿಯಿಂದ ಶ್ರೀಕೃಷ್ಣನು ಅರ್ಜುನಾ ಎಂದು ಕರೆದುಹೇಳುತ್ತಾನೆ.

೨೨. ಭಾರತ ಯುದ್ಧಕೆಂದೇ ಅಸ್ತ್ರವನ್ನು ಸಂಗ್ರಹಿಸಿ, ನಿಮ್ಮನ್ನು ಭಂಗ ಪಡಿಸಲೆಂದು ಈ ಅಸ್ತ್ರವನ್ನು ಪ್ರಯೋಗಿಸಿದ್ದಾನೆ. ಇದಕ್ಕೆ ಪ್ರತಿಯಾಗಿ ನೀನು ಒಂದು ಅಸ್ತ್ರ ಪ್ರಯೋಗಿಸು ಎನ್ನಲಾಗಿ ಕಾಲು ಕೈ ಮುಖ ಶುದ್ಧವಾಗಿಸಿ ಬ್ರಹ್ಮಾಸ್ತ್ರವನ್ನು ಧ್ಯಾನಿಸಿದನು.

೨೩. ಬ್ರಹ್ಮನನ್ನು ಸ್ಮರಿಸಿ ಮಂತ್ರಿಸಿ ಬೇಗನೇ ಬ್ರಹ್ಮಾಸ್ತ್ರವನ್ನು ಗಾಂಢೀವಕ್ಕೆ ಸಂಧಿಸಿದನು. ಅಂತ್ಯಕಾಲದ ಮೃಡಾಕ್ಷಿಯ ರೀತಿಯಲ್ಲಿ ನಿಂತಿರಲಾಗಿ ಅದು ಅಂತ್ಯಕ್ಕೇ ಪ್ರಯೋಗಿಸಿದ ಬ್ರಹ್ಮಾಸ್ತ್ರವನ್ನು ಆಶ್ಚರ್ಯಕರವಾಗಿ ತಾಗಿತು.

೨೪. ಅವರು ಹೇಳಿದುದನ್ನು ಕೇಳಿ ದಿವ್ಯಮಹಾಸ್ತ್ರವನ್ನು ಆತನು ಪ್ರಯೋಗಿಸಲಾಗಿ ಘೋರನೆ ಆ ಅಸ್ತ್ರಗಳು ತಮ್ಮಲ್ಲಿಯೇ ಎದುರಾಗಿ ಪ್ರಕಾಶಿಸಿದವು. ಅಮರರೆಲ್ಲರೂ ಹೆದರಿ ಓಡುತ್ತಿರಲಾಗಿ ಶ್ರೀಕೃಷ್ಣನು ಇದು ಎತ್ತಣ ಪ್ರಳಯ ಎಂದು ಆಲೋಚಿಸುತ್ತಿದ್ದನು.

೨೫. ಲೋಕವನ್ನೇ ಸುಡುವ ಅಸ್ತ್ರವನ್ನು ನೋಡಿ ಅರ್ಜುನನೊಂದಿಗೆ ಅಸ್ತ್ರ ಜ್ವಾಲೆಯನ್ನು ಹೋಗಲಾಡಿಸು ಎಂದನು. ಜೋಕೆಯಲ್ಲಿ ಅರ್ಜುನ ಶರವೊಂದನ್ನು ಪ್ರಯೋಗಿಸಿ ಶರದ್ವಯದ ಜ್ವಾಲೆಯನ್ನು ದೂರ ಮಾಡಿದನು. ಹೋಗಲಿಚ್ಛಿಸಿದ ದ್ರೋಣನಂದನನ್ನು ಕಟ್ಟಿದನು.

೨೬. ಹತ್ತಿರ ಹೋಗಿ ಅರ್ಜುನನು ದ್ರೋಣನಂದನನ್ನು ರಥದೊಳಗೆ ಕಟ್ಟಿ ಆತನನ್ನು ವಧಿಸಬೇಕೆಂದು ಆಲೋಚಿಸುತ್ತಿದ್ದನು. ಸೃಷ್ಟಿನಾಥನಾದ ಕೃಷ್ಣನು ಕಾಲ ಕಳೆಯುವುದು ಏಕೆ? ಕಷ್ಟಕರ್ಮವನ್ನು ಮಾಡಿದ ಪಾಪಿಯ ಶಿರವನ್ನು ಕಡಿ ಎಂದನು.

೨೭. ಅರ್ಜುನ ಕಂದನನ್ನು ಕೊಂದ ಪಾಪಿಯ ಕಂಧರವನ್ನು ಕೆತ್ತಿ ಬಿಡು, ಆತ ಮಾಡಿದ ದೋಷಕ್ಕೆ ಪ್ರತಿಯಾಗಿ ಕಾರ್ಯ ಕೈಗೊಳ್ಳದಿದ್ದರೆ ನಿನಗೇ ನರಕವೊದಗಿತು. ಸಮಯ ಹಾಳು ಮಾಡುವುದು ಏಕೆ ಎಂದು ಅರವಿಂದ ನಾಭ ಹೇಳಿದನು. ಇಂದ್ರನಂದನ ವಂದಿಸಿ ಧರ್ಮ ರಹಸ್ಯವನ್ನು ಹೀಗೆ ಹೇಳಿದನು.

೨೮. ಕೃಷ್ಣ, ಧರ್ಮ ರಹಸ್ಯವನ್ನು ತಿಳಿದೂ ನೀನು ಹೇಳುತ್ತಿರುವುದಾದರೂ ಏನು? ಎಷ್ಟಾದರೂ ಬ್ರಾಹ್ಮಣನನ್ನು ಕೊಂದರೆ ಮೋಕ್ಷ ಇದೆಯಾ? ಎಷ್ಟಾದರೂ ಆತ ಸದ್ಗುರು ಸುತ; ಶಸ್ತ್ರವಿಹೀನನಾದ ಆತನು ಇದಲ್ಲದೆ ಓಡಿಹೋಗಲು ಪ್ರಯತ್ನಿಸುವವನು. ನೋಡಿಯೂ ಹೇಗೆ ಕೊಲ್ಲಲಿ ಹೇಳು?

೨೯. ಇಷ್ಟು ಹೇಳಿ ಅರ್ಜುನನು ಪುರವನ್ನು ಪ್ರವೇಶಿಸಿದನು. ದ್ರೋಣನಂದನನ್ನು ಕಟ್ಟಿದ ಸಾಮರ್ಥ್ಯವನ್ನು ನೋಡಿ ಬಿಟ್ಟು ಬಿಡಿ ಎಂದು ದ್ರೌಪದಿಯು ಗಂಡನಲ್ಲಿ ಹೇಳಿದಳು. ಅವಳು ಹೇಳಿದೇ ನೀತಿ ಎಂದು ಧರ್ಮರಾಯ ಹಾಗೂ ಅಮಳರೂ ಹೇಳಿದರು. ಪಾತಕಿಯನ್ನು ನನಗೆ ಕೊಡು ಖಂಡಿಸುತ್ತೇನೆ ಎಂದನು ಭೀಮ.

೩೦. ದ್ರೌಪದಿಯ ವಚನ, ನೃಪನ ಆಜ್ಞೆ, ಭೀಮನ ರೋಷ, ಶ್ರೀಕೃಷ್ಣನ ಪ್ರೇರೇಪಣೆ ಇವೆಲ್ಲವೂ ಸರಿಯಾಗುವಂತೆ ಹರಿತವಾದ ಕಠಾರಿಯಿಂದ ಮಕುಟದಲ್ಲಿರುವ ಶ್ರೀ ಮುಡಿಯನ್ನು ಕತ್ತರಿಸಿದನು. ರೂಪು ತೋರದ ಹಾಗೆ ಮಾಡಿ ಬಂಧನವನ್ನು ಬಿಡಿಸಿ ಹೋಗು ಎಂದನು.

೩೧. ಮಕುಟವನ್ನು ಖಂಡಿಸಿದ ವೇದನೆಯನ್ನು ಗಮನಿಸಿದೆ ಅಶ್ವತ್ಥಾಮನು, ಖಂಡಿಸದೆ ಬಿಟ್ಟ ತಲೆಯ ಲಾಭವನ್ನು ಗಮನಿಸಿದನು. ಬೋಳು ತಲೆಯವನಾಗಿ ತಲೆತಗ್ಗಿಸಿ ಕೊಂಡು ಹೋಗುತ್ತಿರಲು ಪಂಡಿತರೆಲ್ಲ ನ್ಯಾಯವೆಂದಂದುಕೊಂಡರು.

೩೨. ಭೂಸುರರು ಅನರ್ಥಮಾಡಿದರೆ, ಮಾಡಿದ ಅನರ್ಥಕ್ಕೆ ಪ್ರತಿ ಶಿಕ್ಷೆಯಿಲ್ಲದಿದ್ದರೆ ದೇಶದಲ್ಲಿ ಇರುವುದಕ್ಕೆ ಎಡೆಯೆಲ್ಲಿ? ವಾಸಕ್ಕೆ ಧೈರ್ಯ ಬರುವುದಾದರೂ ಹೇಗೆ? ಮನೆಯಲ್ಲಿರುವವರೇ ಮೋಸ ಮಾಡಿದರು. ಎಲ್ಲಿಗೆ ಹೋಗುವುದು? ಹಿಂಸೆ ಮಾಡುವುದಕ್ಕೆ ಯೋಗ್ಯರಾದವರಲ್ಲವೇ ಎಂದು ಪಂಡಿತರು ಹೇಳುವರು.

೩೩. ಪುತ್ರ ಶೋಕ ಮಹಾಂಬುಧಿಯಲ್ಲಿದ್ದ ಧರ್ಮರಾಯ ಪುತ್ರರಿಗೆ ಸಂಬಂಧಿಸಿದ ಊರ್ಧ್ವದೇಹಿಕ ಕರ್ಮ ತಪ್ಪದೆ ಸಲ್ಲಿಸಿದನು. ವೈದಿಕ ರೀತಿಯಲ್ಲಿ ತೃಪ್ತಿಯಾಗುವಂತೆ ತಿಲೋದಕ ಕ್ರಿಯೆಯನ್ನು ನಡೆಸಿ ಯಥಾ ಕ್ರಮದಂತೆ ರಾಜನಿದ್ದನು

೩೪. ಪಾಂಚಾಲಿಯ ಮನಸ್ಸಿನಲ್ಲಿ ಅನೇಕ ವಿಧವಾಗಿ ದ್ರೌಣಿಯು ತನ್ನ ಪುತ್ರರನ್ನು ವಧಿಸಿದುದಕ್ಕಾಗಿ, ಚಿಂತೆ ಆವರಿಸಿತ್ತು. ಇದನ್ನು ಕಂಡ ಪಾರ್ಥನು ಆಕೆಯ ಶೋಕವನ್ನು ಪರಿಹರಿಸಲು ಈ ರೀತಿಯಲ್ಲಿ ಸಮಾಧಾನದ ಮಾತುಗಳನ್ನು ಹೇಳಿದನು.

೩೫. ದ್ರುಪದಾಜ್ಮತೆಯ ಸೀರೆಯನ್ನು ಸೆಳೆದ ದುಶ್ಯಾಸನರಾದಿ ನೃಪಸಂತತಿ ಸತ್ತಿರುವುದನ್ನು ತೋರಿಸಿದನು. ಅವರಿಗಾಗಿ ದುಃಖಿಸುತ್ತಿರುವ ಪಟ್ಟದರಸಿಯರನ್ನು, ಗುಪಿತದಲ್ಲಿರುವ ಸಾಧುಗಳ ಹಾಹಾರವನ್ನೂ, ಕೃಪೆಯಿಂದ ಶ್ರೀಕೃಷ್ಣನು ದ್ರೌಪದಿಗೆ ತೋರಿಸಿದನು.

೩೬. ಭೀಮನ ರೋಷದ ಗದೆಯ ಏಟಿಗೆ ಉರುಳಿದ ಶಿರ, ಜಾನು, ಕಟಿ, ತೊಡೆ, ಜಂಘೆಗಳ ಮೇಲೆ ಉರುಳಿ ಅವರು ತಮ್ಮ ತಮ್ಮ ಪತಿಗಳನ್ನು ನೆನೆಪಿಸಿಕೊಳ್ಳುತ್ತಿದ್ದರು. ಅವುಗಳ ಮೇಲೆ ಬಿದ್ದು ಅಳುತ್ತಿರು ದೃಶ್ಯವನ್ನು ಚೆನ್ನಾಗಿ ನೋಡು ಎಂದು ತೋರಿಸಿದನು.

೩೭. ತಲೆಯನ್ನು ಕಟ್ಟಿಕೋ ಮಾನಿನಿ ಎಂದಾಗ ತಲೆಕಟ್ಟುವುದಕ್ಕೆ ಪ್ರತಿಜ್ಞೆ ಉಂಟು ಎಂಬುದನ್ನು ನನ್ನೊಂದಿಗೆ ಹೇಳಿದೆ. ಅದನ್ನು ತಪ್ಪದೆ, ಪರಮಾರ್ಥ ಬಿಡದೆ ಪರಿಪಾಲಿಸಿದನ್ನು ನೀನು ಮರೆತೆಯಾ ಭದ್ರೇ?

೩೮. ಧೃತರಾಷ್ಟ್ರನ ರಾಣಿಯರನ್ನು, ಧರ್ಮರಾಜನ (ಪತ್ನಿಯಾದ) ದ್ರೌಪದಿಯನ್ನು, ಕುಂತಿಯ ಮಕ್ಕಳನ್ನು, ರಾಜನಾದ ಕೌರವನ ರಾಣಿಯರನ್ನು ಬೇರೆ ಬೇರೆಯಾಗಿ ತಿಳಿಸಿ ಶ್ರುತಿ ಧರ್ಮ ರಹಸ್ಯ ವಿಶೇಷ ಕಥಾಮೃತ ವಾಕ್ಸುಧೆಯಿಂದ ಶ್ರೀಕೃಷ್ಣನು ದುಃಖವನ್ನು ಸಮಾಧಾನಗೊಳಿಸಿದನು.

೩೯. ಮುನಿವ್ಯಾಸರ, ಕೃಷ್ಣನ ಶ್ರುತಿ ಸಮಾನವಾದ ಮಾತುಗಳನ್ನು ಕೇಳಿದ ಬಳಿಕ ಸರ್ವರೂ ಮನಸ್ಸನ್ನು ಸಮಾಧಾನಗೊಳಿಸಿಕೊಂಡು ಗಂಗೆಯಲ್ಲಿ ಸ್ನಾನಮಾಡಿ ಆ ಮಹಾಜನಸಾಗರ ತಮ್ಮ ತಮ್ಮ ಸದನ ಹೊಕ್ಕರು. ಇತ್ತ ಧರ್ಮರಾಯನೂ ಸಿಂಹಾಸನವನ್ನು ಸ್ವೀಕರಿಸಿದನು.

೪೦. ಪರಿಣಾಮವಾಗಿ ಸರ್ವರು ಸುಖದಿಂದಿರಿ ಎಂದು ಶ್ರೀಕೃಷ್ಣನು ಧರ್ಮಜ, ಅರ್ಜುನ, ಭೀಮ, ಸಹದೇವ-ನಕುಲ, ಕುಂತೀ, ದ್ರೌಪದಿ ಮೊದಲಾದವರನ್ನು ಸಂತೈಸಿ ಯಾದವರೊಂದಿಗೆ ಪುರಕ್ಕೆ ತೆರಳುವುದಕ್ಕೆ ಶ್ರೀ ಕೃಷ್ಣನು ಅನುವಾದನು.

೪೧. ಇತ್ತ ಹೀಗಿರುವಾಗ ಅತ್ತ ಅಪಮಾನಕ್ಕೊಳಗಾದ, ತನ್ನ ಸಂಚು ತಪ್ಪಿಹೋದ ಅಶ್ವತ್ಥಾಮನು ರೋಷಿತನಾದನು. ಪಾಂಡವ ವಂಶವನ್ನು ನಾಶ ಮಾಡಲಿಚ್ಛಿಸಿ ಪಂಚಪಾಂಡವರಿಗೆ ಸೇರಿದ ಅಭಿಮನ್ಯುವಿನ ಹೆಂಡತಿಯ ಗರ್ಭಕ್ಕೆ ಒದು ಶರವನ್ನು ಪ್ರಯೋಗಿಸಿದನು.

೪೨. ನಗರದಿಂದ ಹೊರಗೆ ಯಾತ್ರಿಸಬೇಕೆಂದು ಅನುವಾಗಿ ಹೊರಡುವಷ್ಟರಲ್ಲಿ ಸ್ವಗೃಹದಲ್ಲಿ ದುಃಖದ ಘೋಷ ಕೇಳಿಬಂತು - ಜಗದೀಶ! ಜನಾರ್ದನ! ಭಕ್ತನಿಧೀ! ಕರುಣಾರ್ಣವ! ಕೃಷ್ಣಾ, ಖಗವಾಹನ! ರಕ್ಷಾ! ಕೃಪಾವನನದೀ! ಶರಣು ಶರಣು! ಎಂದು ಜನ ಮೊರೆಯಿಟ್ಟರು.

೪೩. ಅಭಿಮನ್ಯುವಿನ ಹೆಂಡತಿ ಮಹಾಸ್ತ್ರದ ಬೆಂಕಿಯಿಂದ ತಾಳಲಾರದೆ ಪ್ರಭುವಾದ ಮುಕುಂದನ ಪದಾಬ್ಜಯುಗಕ್ಕೆ ಅಭಿವಾದನ ಮಾಡಿದಳು. ಶುಭಮಸ್ತು! ಜಗನ್ಮಯ, ಭಕ್ತನಿಧಿ! ದೂರ್ವಾದಳ! ಶ್ಯಾಮಾ! ಅಭಯವನ್ನು ತನಗೆ ನೀಡು, ಮಾರಮಣ, ಎಂದು ದೈನ್ಯತೆಯಿಂದ ಬೇಡಿದಳು.

೪೪. ಬಾಣ ಬಂದು ನನ್ನನ್ನು ಇರಿಯುತ್ತಿದೆ. ಜಗನ್ಮಯಾ ನಂಬಿದವರಿಗೆ ಶೋಕ, ಭಯ, ದರಿದ್ರ, ಮಹಾವ್ಯಥೆ ಇದ್ದದ್ದೇ! ದೇಹದಲ್ಲಿ ನನಗೆ ಅಭಿಲಾಷೆ ತೀರಿತು, ಬಾಣ ಹೊಟ್ಟೆಯನ್ನೂ ಹೊಕ್ಕು ಬಾಲನಿಗೆ ತಾಗದಂತೆ ರಕ್ಷಿಸು ಎಂದು ಅಳಲಿದಳು.

೪೫. ಹೀಗೆ ಅನೇಕ ವಿಧದಿಂದ ಉತ್ತರೆ ವಿವರಿಸುತ್ತಿರಲಾಗಿ ಮಿಂಚು ಮಿಂಚುವಂತೆ ಕಿಡಿ, ಜ್ವಾಲೆ, ಹೊಗೆ, ಪ್ರಜ್ವಲಿಸಿತು. ಪಂಚಪಾಂಡವರು ಸತ್ತೇ ಹೋಗುವಂತೆ ಕಣ್ಣು ಕೋರೈಸಿ ಬರುವುದನ್ನು ಕಂಡವರು ಮೊರೆಯಿಡುತ್ತಿದ್ದರು.

೪೬. ಇದೇನು ಮೃತ್ಯು ಬರುವುದು ಎಂದು ಸರ್ವರೂ ಹೆದರುತ್ತಿದ್ದರು. ಶರವು ತಾಗುತ್ತಿರಲಾಗಿ ಪಾಂಡವರೈವರೂ ಶ್ರೀಹರಿಯನ್ನು ನೋಡಿ ನಮಗಿದು ಅಸಾಧ್ಯ ಎನ್ನುತ್ತಾ ಶ್ರೀಕೃಷ್ಣನನ್ನು ಸ್ಮರಿಸುತ್ತದ್ದರು. ಆಗ ಶ್ರೀಕೃಷ್ಣನು ಪ್ರತ್ಯಕ್ಷವಾಗಿ ಘರ್ಜಿಸಿದನು.

೪೭. ಪಾಂಡವರು ಹೆದರದಿರಿ; ಸರ್ವರೂ ಹೆದರದಿರಿ; ಗುಣಜ್ಞೆಯಾದ ಉತ್ತರೆ ಹೆದರಬೇಡ; ನಾನು ಇರುವಾಗ ನಿಮಗೆ ಹೆದರಿಕೆ ಏಕೆ? ತಾವರೆಗೆ ಸೂರ್ಯನ ರಕ್ಷಣೆ ಇರುವಾಗ ಕತ್ತಲೆಯು ಪರಿವರ್ತಿಸಿ ಕೇಡನ್ನು ಮಾಡಿತೇ ಎಂದನು.

೪೮. ಕೋಪಿಸಿ 'ಅಪಾಂಡವಾಯ' ಎಂದು ದ್ರೌಣಿಯು ಶರ ಪ್ರಯೋಗಿಸಿದನು. ಶ್ರೀಪತಿಯು ತಮ್ಮ ಬಾಹ್ಯಶಕ್ತಿಯಿಂದ ಚಕ್ರವನ್ನು ತಡೆ ಹಿಡಿದನು. ಆ ಪಿನಾಕಿಯ ಕಣ್ಣಿಗೆ ಸಮನಾದ ಶರದ ಜ್ವಾಲೆಯನ್ನು ಅಪಹಾರ ಮಾಡಿ ಆಗಲೇ ನಾಶವಾಗುತ್ತಿದ್ದ ಭಕ್ತರನ್ನು ರಕ್ಷಿಸಿದನು.

೪೯. ಶೌನಕಾದ್ಯರೇ! ವಿಚಾರ ಮಾಡಿರಿ. ಭಕ್ತವತ್ಸಲ ಭಕ್ತರನ್ನು ರಕ್ಷಿಸಿ, ಈ ರೀತಿಯಲ್ಲಿ ಸನ್ಮಾನಿಸಿ, ಬುದ್ಧಿಗೆ ಸಮಾಧಾನ ನೀಡಿದನು. ಎಂಬಲ್ಲಿಗೆ ಅಕ್ಷಯಾತ್ಮಕನ ಕೀರ್ತಿಯನ್ನು ನಿರ್ಮಿಸಿದ ಪ್ರಥಮ ಸ್ಕಂಧದಲ್ಲಿಯ ಆರನೆಯ ಅಧ್ಯಾಯವು ಮುಕ್ತಾಯವಾಯಿತು.

ಅಧ್ಯಾಯ ೭

೧. ಆದಿಮೂರ್ತಿ, ಅನಂತಶಾಯಿಯ ಪಾದವೆಂಬ ಕಮಲಕ್ಕೆ ವಂದಿಸುತ್ತೇನೆ. ವೇದ ವ್ಯಾಸರನ್ನು ನಮಿಸುತ್ತೇನೆ. ಗುರು, ಶಾರದೆ, ವಿಘ್ನೇಶ್ವರರ ಪಾದ ಭಕ್ತಿಯಿಂದ ಈ ಕಥೆಯನ್ನು ನಿಶ್ಯೇಷವಾಗಿ ಹೇಳಲು ತೊಡಗುತ್ತೇನೆ. ಸಂತೋಷದಿಂದ ಮುನಿಮುಖ್ಯರು ಸೂತನಲ್ಲಿ ಕೇಳಲು ಮುನಿಶ್ರೇಷ್ಠರು ಹೀಗೆ ಹೇಳತೊಡಗುತ್ತಾರೆ.

೨. ಹೇಳಿದ ಈ ಕಥೆಯಿಂದ ಚಿತ್ತ ನಿರ್ಮಲವಾಗಿದೆ. ಅಪಾಂಡಕ್ಷಯ ಎಂದಾತ ಹೊಟ್ಟೆಗೆ ಉತ್ತರೆಯ ಶಸ್ತ್ರವನ್ನು ಪ್ರಯೋಗಿಸಲಾಗಿ ದಂಡನೆಗೊಳಗಾಗಿದ್ದ ಮಗುವನ್ನು ಅಚ್ಯುತ ಹೇಗೆ ರಕ್ಷಿಸಿದರೆಂಬುದರ ಪಂಡಿತ ಶ್ರುತಿಯರ್ಥವನ್ನು ಚೆನ್ನಾಗಿ ತಿಳಿಯ ಹೇಳಬೇಕು ಎಂದು ಪುರಾಣಿಕನಲ್ಲಿ ಅವರು ಕೇಳುತ್ತಾರೆ.

೩. ಇಷ್ಟು ಚೋದ್ಯದಿಂದ ಶೌನಕಾದ್ಯರು ವಿಚಾರಿಸಲು ಸೂತನು ಚೆನ್ನಾಗಿ ಕೃಷ್ಣನನ್ನು ಸ್ಮರಿಸಿದನು. ಇಷ್ಟು ಆಸೆಯಿಂದ ಕಥೆಯನ್ನು ಕೇಳುತ್ತಿರುವಿರಲ್ಲ? ಅಜಾತಶತ್ರುವು ಪೌತ್ರನನ್ನು ಗರ್ಭದಲ್ಲಿಯೇ ಆದರಿಸಿದುದನ್ನು ಹೇಳುತ್ತೇನೆ, ಕೇಳಿ ಎಂದನು.

೪. ನಂಬಿದ ಜಗತ್ತನ್ನು ರಕ್ಷಿಸುತ್ತೇನೆ ಎನ್ನುವ ಪ್ರತಿಜ್ಞೆಯನ್ನು ನಡೆಸುವುದಕ್ಕಾಗಿ ಬರುವ ಬಾಣದ ಮಹಾಜ್ವಾಲೆಯನ್ನು ಮೊದಲಲ್ಲಿಯೇ ತಪ್ಪಿಸುವುದಕ್ಕಾಗಿ ಸೂಕ್ಷ್ಮ ರೂಪದಲ್ಲಿ ಅಂಗುಲಾಕೃತಿಯಾಗಿ, ಚಕ್ರಿಯು ಚಕ್ರವನ್ನೂ ಪ್ರಯೋಗಿಸಿ ಉತ್ತರೆಯ ಗರ್ಭವನ್ನು ಸೇರಿದನು.

೫. ಮುತ್ತು ಅಳವಡಿಸಿಕೊಂಡಿರುವ ಶ್ರೀಮುಡಿ ಮುಕುಟ; ಓರಣವಾಗಿರುವ ಉತ್ತಮ ಗುಂಗುರು ಕೂದಲು, ಹಣೆ, ಗಂಡಸ್ಥಳ, ಕೆನ್ನೆ, ಕುಂಡಲ; ಮುತ್ತಿಗಿಂತಲೂ ಅತಿಶಯವಾಗಿರುವ ದಂತಪಂಕ್ತಿ, ಕೆಂಪಾದ ತುಟಿ ಉತ್ತಮ ಮೃದು ಶ್ವಾಸ, ನಾಸಿಕ - ಈ ಪರಿಯಿಂದ ಕೃಷ್ಣನ ಮೂರ್ತಿ ರಾರಾಜಿಸಿತು.

೬. ಸುಪ್ರಸನ್ನವಾದ ಮುಖಾರವಿಂದ, ತಾವರೆಯ ಎಸಳಂತಿರುವ ಕಣ್ಣುಗಳು, ದೀರ್ಘ ಚತುರ್ಭುಜದ ಅಂಗ ಮುದ್ರೆ, ಉರಸ್ಥಲದಲ್ಲಿರುವ ವನಮಾಲೆ, ಕೌಸ್ತುಭ ಹಾರಗಳೊಂದಿಗೆ ವಿಪ್ರವಂದಿತನು ಸುಂದರವಾದ ಭಾಸೆ, ಕಟಿ, ತ್ರಿವಳಿಗಳಿಂದ ರಂಜಿಸಿದನು.

೭. ತಪ್ತಕಾಂಚನವರ್ಣ ವಸ್ತ್ರ, ಶ್ರೀ ಕಟಿಯಲ್ಲಿ ಕಟಿಸೂತ್ರ, ಉಜ್ವಲ ದೀಪ್ತಿಯ ನೇವಳಗೆಜ್ಜೆ, ಪಂಚಮಣಿಗಳು, ವೃತ್ತವರ್ತುಲ ಜಂಘೆ, ಜಾನು, ತೊಡೆ, ಪಾದ ಉಗುರುಗಳ ಪ್ರಭೆ, ಮುದ್ರೆಯುಂಗಿಲ, ನೂಪುರ, ಮಣಿಕಟ್ಟು ಇವುಗಳನ್ನು ಬಾಲಕನು ನೋಡಿದನು.

೮. ಅಂಕುಶ, ಧ್ವಜ, ಪಾಶ, ಸೂರ್ಯ, ಚಂದ್ರ, ವಜ್ರವರಾಕೃತಿಯಿಂದ ಅಲಂಕೃತ ಪದಪಂಕಜದಡಿಯ ಲಾಂಛನ ಪ್ರಭೆ, ಶಂಕರಪ್ರಿಯನು ಕೋಟಿ ಸೂರ್ಯ, ಚಂದ್ರ ಅಗ್ನಿ ಪ್ರಭೆಯಿಂದ ಬೆಳಗುವ ಮಾರನೆಂಬ ದಾನವ ಧ್ವಂಸಿಯನ್ನು ಬಾಲಕನು ನೋಡಿದನು.

೯. ಈ ರೀತಿಯಲ್ಲಿ ಶೋಭಿಸಿ ಹೊಟ್ಟೆಯಲ್ಲಿರುವ ಮಗುವನ್ನು ಕೊಲ್ಲಲು ಬರುವ ಅಸ್ತ್ರದ ಬಳಿಯಲ್ಲಿ ಕಂಚುಕೀ ಪತಿ ಶಾಯಿಯು (?) ಚಕ್ರ ವರಾಯುಧವನ್ನು ಧರಿಸಿ ಮಿಂಚಿನಾಕೃತಿಯಲ್ಲಿ ಸುತ್ತಲೂ ಪ್ರಕಾಶಿಸಿದರು.

೧೦. ಬಾಲಕನ ಸುತ್ತಲೂ ಕುಂಬಾರನ ಚಕ್ರದ ಹಾಗೆ ತಿರುಗುತ್ತಾ ಬಾಲಕನತ್ತ ಅಶ್ವತ್ಥಾಮನ ಶಸ್ತ್ರ ಜ್ವಾಲೆಯು ಬರುತ್ತಿತ್ತು. ಆಗ ಶ್ರೀಹರಿಯು ಗರ್ಭವು ಉರಿಯದ ಹಾಗೆ ಹಸ್ತವನ್ನು ತಾಗಿಸಿ ತಡೆದು ನಿಲ್ಲಿಸಿ ಭಕ್ತವತ್ಸಲ ಎನ್ನುವ ತನ್ನ ಬಿರುದನ್ನು ಉಳಿಸಿಕೊಂಡನು.

೧೧. ಬಹಳ ಹತ್ತಿರದಲ್ಲಿ ಶೋಭಿಸುತ್ತಿರುವ ಕರುಣಾಕರನನ್ನು ಬಾಲಕನು ನೋಡಿದನು. ಯಾರಿದು ಎಂದು ಭಕ್ತಿಯಿಂದ ಬಾಲಕನು ಕೃಷ್ಣನನ್ನು ಹಾಗೆಯೇ ನೋಡುತ್ತಿದ್ದನು. ಇಷ್ಟರವರೆಗೆ ಬಹಳ ದಂಡನೆಯಲ್ಲಿದ್ದ ದುಃಖವನ್ನು ಮರೆತು ಸುಖಾಬ್ಧಿಯಲ್ಲಿ ಮುಳುಗಿ, ಘೋರ ಯಾತನೆಯನ್ನು ಬಿಟ್ಟು ಹರಿ ಧ್ಯಾನದಲ್ಲಿ ನಿರಂತರವಾಗಿ ತೊಡಗಿದನು.

೧೨. ಉರಿಯುವ ಮಹಾಜ್ವಾಲೆಯು ಶಮನವಾಗಿ ಮನಸ್ಸಿಗೆ ಸುಖವಾಯಿತು. ಮರಣ ಭಯ ಇಲ್ಲವಾಗಿ ಹರಿಯ ರಕ್ಷಣೆಯಿಂದ ಅಮೃತತ್ವ ಲಭಿಸಿತು. ತರುಣಿಯ ಜಠರದಲ್ಲಿ ಹತ್ತು ಮಾಸ ಶ್ರೀಹರಿ ನೆಲೆಸಿದ ಕಾರಣದಿಂದ ಶಶಿವಂಶದಲ್ಲಿ ಮಗನು ಜನಿಸಿ ಧರಣಿಯಲ್ಲಿ ಶೋಭಿಸಿದನು.

೧೩. ಕುಂತೀಸುತರ ಸಂತತಿಯನ್ನು ಕ್ಷಯ ಮಾಡಬೇಕೆಂದು ದ್ರೋಣನ ಮಗನು ಬಗೆದನು. ಆ ನಿರ್ಧಾರವನ್ನು ನಿಷ್ಫಲಗೊಳಿಸಿ ಅವರನ್ನು ಸಂತೋಷಗೊಳಿಸಿ ಸಂತೈಸಿದ ಆ ಕರುಣಾಕರ ಮೂರ್ತಿಯು ಹಸ್ತಿನಾವತಿಯಲ್ಲಿ ಸಜ್ಜನರ ಅರ್ಚನೆಗೊಳಗಿದ್ದನು.

೧೪. ಕೃಷ್ಣರಾಯನ ವಿಲಾಸ ವಿಭ್ರಮ ಸತ್ಕಥೆಯನ್ನು ಇನ್ನೂ ಕೇಳಿರಿ. ಧರ್ಮರಾಯನೊಂದಿಗೆ ಸರ್ವ ಜಗತ್ತನ್ನು ಬಹುಮಾನಿಸಿದನು. ಚಾಣುರಾರಿಯಾದ ಕೃಷ್ಣನು ತನ್ನ ಪುರಕ್ಕೆ ನಿರ್ಗಮಿಸಲೆಂದು ಸೈನ್ಯವನ್ನೂ ಕೂಡಿ ವೇಣು ವೀಣಾ ಮೃದಂಗನಾದಗಳಿಂದ ಧ್ವನಿಯನ್ನು ಮೊಳಗಿಸಿದನು.

೧೫. ಅಲ್ಲಿಗೆ ಕುಂತಿ ದ್ರೌಪದಿ ಪಾಂಡವಾದಿಗಳು ಸಂಗತವಾಗಿ ಬಂದರು. ಅವರೀಗ ಚಿತ್ತದಲ್ಲಿ ಸ್ಮರಿಸುತ್ತಿದ್ದ ಅಚ್ಯುತನ ವಿರಹದಲ್ಲಿದ್ದರು. ಇಲ್ಲಿಯವರೆಗೆ ನಮ್ಮೊಂದಿಗಿದ್ದು ಈಗ ಹೋದರೆ ಏನು ಗತಿ ಜಗನ್ಮಯಾ! ಎಂದು ದಾರಿಯಲ್ಲಿ ಅಡ್ಡಬಿದ್ದು ಪ್ರಾರ್ಥಿಸಿ ಸ್ತುತಿಸಿದರು.

೧೬. ಜಯ ದೇವ ನಮೋಸ್ತು! ಮಹಾಪುರುಷಾ! ಜಗದೀಶ! ಸುರೇಶಾ! ಜಯ ಮಾಯಾವಿಮೋಹಿತ! ಸರ್ವಗತಾ! ಪರಿಪೂರ್ಣ! ಪರಾತ್ಮಾ! ಜಯ ದೇವ! ಮನುಷ್ಯ ಸಮುದಾಯಕ್ಕೆ ಶುಭಕಾರಿ! ದುರಿತಾರಿ! ನಿನಗೆ ಶರಣು! ಜಯ ಕಣ್ಣಿಗೆ ಗೋಚರನಾದ ವಸ್ತುವೇ! ರಮಾರಮಣನೇ! ಆಪ್ತನೇ! ನಮಸ್ತೇ! ಎಂದು ಸ್ತುತಿಸಿದರು.

೧೭. ನಿನ್ನ ಪಾದಕಕ್ಕೆ ವಂದಿಸುತ್ತೇನೆ. ಶರಣಾಗತ ಬಂಧುವೇ! ಕೃಷ್ಣ! ಮುರಾರಿ! ಗೋವಿಂದ! ಮುಕುಂದ! ನಿನ್ನ ಪಾದಕ್ಕೆ ವಂದಿಸುತ್ತೇನೆ. ಶ್ರೀ ವಸುದೇವ ಸುತನೇ! ನಂದಾತ್ಮಜ! ರಾಮಾ ವಂದಿಸುತ್ತೇನೆ. ಶ್ರೀ ಕಮಲೋದರನೇ! ರಮಾರಮಣನೇ! ಆಪ್ತನೇ! ನಿನಗೆ ವಂದಿಸುತ್ತೇನೆ.

೧೮. ದೇವೇಶ! ರಮೇಶ! ನೀನು ಮನುಷ್ಯ ತನುವನ್ನು ಈ ಜಗತ್ತಿನಲ್ಲಿ ಧರಿಸಿದ್ದೀಯ. ನಿಜವಾಗಿಯೂ ನೋಡಿದರೆ ನಿನ್ನ ಮಾಯೆಯನ್ನು ಯಾರು ತಾನೇ ಬಲ್ಲರು? ಸೇವಿಸುವ ದೇವತೆಗಳು ಬ್ರಹ್ಮನೇ ಮೊದಲಾಗಿ ಇಲ್ಲಿರುವ ಸಮಸ್ತ ಭೂವಲ್ಲಭವರು ಯಾರು, ತಾನೇ ನಿಮ್ಮ ಬಗ್ಗೆ ತಿಳಿದಿದ್ದಾರೆ. ಅಂದ ಮೇಲೆ ನಾವು ಹೇಗೆ ನಿಮ್ಮನ್ನು ಸ್ತುತಿಸಲಿ?

೧೯. ಅರಣ್ಯ ವಾಸದಲ್ಲಿದ್ದಾಗ ದುರುಳರು ಮಾನವನ್ನೂ ಕಳೆಯಲು ಸಿದ್ಧವಾಗಲು ಪರಿಪಾಲಿಸಿದ ಅಚ್ಯುತ ನೀನು. ಮರಣ ತಿಳಿಯದ ಭೀಷ್ಮಾದಿಗಳನ್ನು ಯುದ್ಧದಲ್ಲಿ ಜೈಸಿ ರಕ್ಷಿಸಿದ ಕೃಷ್ಣ ನಿನಗೆ ನಮಸ್ತೇ.

೨೦. ಇಂದು ಎಲ್ಲರನ್ನೂ ಅಶ್ವತ್ಥಾಮನಿಂದಾಗಿ ಬೆಂದು ಸಾಯಲಿಕ್ಕಿಲ್ಲವೇ? ಪರಿವಾರ ಸಮೇತವಾಗಿಯೂ ನೆನೆಸದಂತೆ ವ್ಯಸನದಿಂದ ಪಾರಾದೆವು. ವನಜೋದರ ನೀವಲ್ಲದೆ ಕಾಯುವವರು ಯಾರಿದ್ದಾರೆ? ಜಠರದೊಳಗೆ ಪ್ರವೇಶಿಸಿ ನನ್ನ ಕಂದನನ್ನು ಪ್ರಸಾದಿಸಿದವರೂ ನೀವಲ್ಲವೇ?

೨೧. ಅನರ್ಥಗಳು, ಅಪಜಯಗಳು ನಿತ್ಯವೂ ಬರುತ್ತಿರಲಿ. ಕುಶಲದಿಂದಿದ್ದರೆ ನಿಮ್ಮನ್ನು ಸ್ತುತಿಸಲಿಕ್ಕಿಲ್ಲವಲ್ಲ? ಸ್ವಸ್ಥವಾಗಿದ್ದಲ್ಲಿ ಜ್ಞಾನಾ ವಿವೇಕಾದಿ ತತ್ವಾರ್ಥಗಳು ತೋರಗೊಡವು. ವಿಪತ್ತಿನಿಂದಲೇ ನಿಮ್ಮ ಭಕ್ತಿಯನ್ನು ಸಾಧಿಸಬೇಕಾಗಿದೆ.

೨೨. ಧನ, ಐಶ್ವರ್ಯಾದಿಗಳು ಶತ್ರುಗಳಾಗಿ ನಿಮ್ಮ ಪಾದ ಸರೋಜವನ್ನು ನೆನೆಯುವುದಕ್ಕೆ ನಾನಾ ವಿಷಯಾದಿಗಳಿಂದ ಬಿಡಲಾರವು. ದರಿದ್ರನಿಗೆ ಮಿಗಿಲಾದ ಜನಗಳಿದ್ದಾರೆಯೇ ಎಂದು ಮಹಾಜನಗಳು ಹೇಳುತ್ತಾರೆ. ಜ್ಞಾನದೃಷ್ಟಿಯಿಂದ ಬಡತನವೇ ಒಳ್ಳೆಯದೆಂದಳು ಕುಂತಿ.

೨೩. ಸರ್ವಜ್ಞರಿಗೆ ನಿಮ್ಮ ಚರಣವೇ ಧನ. ಧನ ಎಂಬುದು ಅಶಾಶ್ವತವಾದುದು. ಮೂಲ ಧನ ಉದ್ಧರಿಸುವಂತಹದ್ದು. ಆದ್ದರಿಂದ ಮೂಲಧನವೇ ಸುಖ. ಧನವಂತರು ನಿಜವಾಗಿಯೂ ನೀವೇ. ಭಕ್ತಾಶ್ರಯರಾದ ಶ್ರೀ ಗುರುಗಳೇ, ಧನುಜಾರಿಯೇ ನಿಮ್ಮ ಪಾದವೇ ಪುಣ್ಯಧನ; ಅದಕ್ಕೆ ನಾನು ಶರಣಾಗುತ್ತೇನೆ ಎಂದಳು ಕುಂತಿ.

೨೪. ಕೆಲವರು ಹೇಳುತ್ತಾರೆ - ಶ್ರೀ ವಸುದೇವ, ದೇವಕಿಯರು ಹಿಂದೆ ಘನವಾದ ಭಕ್ತಿಯನ್ನು ಮಾಡಿದ್ದರಿಂದ ಶ್ರೀಹರಿಯು ಅವತರಿಸಿದನೆಂದು. ಇನ್ನು ಕೆಲವರು ಖಳರನ್ನು ವಧಿಸಲೋಸುಗ ಬ್ರಹ್ಮನು ಪ್ರಾರ್ಥಿಸಿದುದರಿಂದ ಅವತರಿಸಿದನೆಂದರೆ, ಮತ್ತೆ ಕೆಲವರು ಭಕ್ತರನ್ನೂ ಉದ್ಧರಿಸಲೋಸುಗ ಅವತರಿಸಿದನೆನ್ನುತ್ತಾರೆ.

೨೬. ನಿನ್ನ ನಾಮವನ್ನು ಕೇಳಿದವರು ಇಹ ಮತ್ತು ಪರಗಳೆರಡೂ ಕಾಲ ಧೂಳಿಗೆ ಸಮ ಎಂದು ತಮ್ಮ ಕೀರ್ತಿಯಿಂದಲೇ ತೃಪ್ತರಾಗುತ್ತಿದ್ದಾರೆ. ಸದಾ ನಿನ್ನೊಂದಿಗೆ ನಮ್ಮ ಸ್ನೇಹವು ಘಟಿಸಿದುದು ನಮ್ಮ ಸೌಭಾಗ್ಯ. ಇದು ನಾರದಾದಿ ಮುನೀಂದ್ರರಿಗೂ ಸಿದ್ಧಿಸುವುದೇ ಎಂದು ಕುಂತಿ ಹೇಳಿದಳು.

೨೭. ಯೋಗಿಗಳು ಆತ್ಮದಲ್ಲಿ ಕಾಣಲಾರದ ನಿನ್ನ ಪಾದವನ್ನು ನಮಗೆ ಇಂದು ಗೋಚರ ಮಾಡಿರುವಿ. ಅವತಾರವೆತ್ತಿ ನಿಮ್ಮ ಮಾಯೆಯನ್ನು ನಾನು ಕಣ್ಣಾರೆ ಕಾಣುವಂತೆ ಮಾಡಿರುವಿ. ಇಂತಹ ದೇವರೇ ನಿನಗೆ ನಮನಗಳು.

೨೮. ದೇವೇಶ! ನಿನ್ನ ಚರಣಗಳ ಲಾವಣ್ಯ ಗುಣದಿಂದಾಗಿ ಈ ವಿಶ್ವ ಪ್ರಪಂಚ, ಸಚರಾಗಳೆಲ್ಲವೂ ವಿರಾಜಿಸುತ್ತಿದೆ. ಭೂವಲ್ಲಭ! ಅನಂತಗುಣಾರ್ಣವ! ಶ್ರೀ ನಾರಾಯಣ! ಕೃಷ್ಣಾ! ಮನಸ್ಸಿಗೆ ಪ್ರಸನ್ನತೆಯನ್ನು ಪ್ರಸಾದಿಸಬೇಕಾಗಿ ಜಗದೀಶನೇ ನಮಸ್ಕರಿಸುತ್ತಿದ್ದೇನೆ.

೨೯. ಇಲ್ಲಿಯವರೆಗೆ ಸರ್ವ ಸಮೃದ್ಧಿ, ಗುಣದ ಅಮೃತಾಬ್ಧಿಯನ್ನು ತೋರಿಸಿ ಇಲ್ಲಿರುವಿಯಾ. ಈಗ ನೀನು ಹೋಗುವಿ ಎಂದಾದರೆ ನಿನ್ನ ಪಾದವನ್ನೂ ಬಿಟ್ಟು ಹೇಗೆ ಇರುವುದು? ಗತಿ, ಮತಿ, ಸ್ಥಿತಿ, ಧೃತಿಯನ್ನು ಕರುಣಿಸಿ ನೀನು ಹಿತವನ್ನುಂಟು ಮಾಡಬೇಕು. ನಿನಗೆ ಜಯವಾಗಲಿ ಶರಣು ಎಂದಳು ಕುಂತಿ.

೩೦. ನೀನು ಶರಣಾಗತ ಬಂಧು - ಸುಖವನ್ನು ನೀಡುವವನು. ತರುಣಿಯರು ಮತ್ತು ದೇವಕಿ ದೇವಜನ ಅಮೃತ ಜೀವಿಗಳಾಗಿದ್ದಾರೆ (ಮೃತ್ಯುವನ್ನು ಗೆದ್ದಿದ್ದಾರೆ) ಈ ಎರಡೂ ಕಡೆಯಿಂದಲೂ ವಿಲಾಪಿಸುವ ವ್ಯಥೆಯನ್ನು ನೀನು ಹೇಗೆ ಸಹಿಸುತ್ತೀಯ? (ಭಕ್ತರು ನಿಮ್ಮಿಂದ ಅಗಲಿಸಿಕೊಂಡಾಗ, ಅವರಿಗಾಗುವ ವ್ಯಥೆ ನಿಮಗೂ ಆಗುವುದಿಲ್ಲವೇ?) ನೀನೇ ಒಂದು ಉಪಾಯವನ್ನು ನನಗೆ ಹೇಳಿ ಕೊಡು ಎಂದು ಕುಂತಿಯು ಶ್ರೀ ಕೃಷ್ಣನಿಗೆ ಪ್ರೀತಿಭಾವದಿಂದ ನಮಸ್ಕರಿಸಿದಳು.

೩೧. ಗುಣ ಮತ್ತು ಸ್ನೇಹದುರುಳಲ್ಲಿ ಇಳೆಯಲ್ಲಿ ಯದು ಪಾಂಡವರು ಎಂಬ ಅನುಬಂಧದಲ್ಲಿ ನೀನು ಸಿಲುಕಿಕೊಂಡಿರುವಿಯಲ್ಲವೇ? ಪರಿಪಾತಕಗಳೆಲ್ಲವನ್ನು ಕಳೆದು ಬುದ್ಧಿಯನ್ನು ಸ್ಥಿರಗೊಳಿಸುವ - ಮುರಾಂತಕ! ನಳಿನಾಯತ ಲೋಚನ! ಸದ್ಗುರುವೇ ಶರಣು.

೩೨. ಜಯ ಕೃಷ್ಣ! ಜನಾರ್ದನ! ಭಕ್ತನಿಧಿ! ಮುಕ್ತಾಶ್ರಯ! ನಾಥಾ! ಜಯಗೋ ದ್ವಿಜರಕ್ಷ ಶಿಖಾಮಣಿಯೇ! ಯೋಗೇಶ! ರಮೇಶಾ! ಜಯ ಭಕ್ತದುರಾಗ್ರಹ! ದುಷ್ಟರಿಪೂ, ಸರ್ವಾಂತರಿಯಾಮೀ! ಜಯ ದೇವರ ದೇವ! ನಮೋಸ್ತು! ನೀನೇ ಗತಿ! ಶರಣು ಶರಣು! ಎಂದಳು.

೩೩. ಅಂಬುಜನಾಭನು ಬಳಿಕ ಯುಧಿಷ್ಠಿರನ ತಾಯಿಯನು ಇಷ್ಟೊಂದು ಹೊಗಳಿಕೆ ಏಕೆ ಎಂದು ಹೇಳುತ್ತಾ ಇಳೆಯಿಂದ ಮೇಲೆತ್ತಿ ಸತ್ಕರಿಸಿ ಕೊಂಡಾಡಿದನು. ಈ ರಹಸ್ಯವನ್ನು ಲೋಕವೇ ತಿಳಿಯಲಿ ಎಂಬ ಹಾಗೆ ಆ ಬಳಿಕ ಕೂಡಲೇ ನಿವಾಸಕ್ಕೆ ತೆರಳಿದನು.

೩೪. ಮನದಲ್ಲಿರುವ ಅಭಿಲಾಷೆಯೆಲ್ಲವನ್ನೂ, ನೆನೆದುದೆಲ್ಲವನ್ನೂ ಸಾಧಿಸಿರಿ ಎಂದು ಸಂತೈಸಿದನು. ರಥದಿಂದ ಇಳಿದು ಪರಿವಾರ ಸಮೇತ ಹರಿಯು ತನ್ನ ಭಕ್ತರನ್ನು ಸಂಮಾನಿಸಿದನು. ಗಜಪುರದಲ್ಲಿ ನಿಂತು ತನ್ನ ನೆನೆಯುವ ಸಾಧುಸಜ್ಜನರನ್ನು ಅನುಗ್ರಹಿಸಿದನು.

೨೫. ಭಕ್ತಲೋಚನ ಎಂಬ ಯುಕ್ತಿಯನ್ನು ತೋರಿಸಲೋಸುಗ ಶ್ರೀಹರಿಯು ಹಸ್ತಿನಾವತಿಯಲ್ಲಿ ಸ್ವಸ್ಥವಾಗಿ ವಾಸಿಸಿದನೆನ್ನುವ ವೇದ ಸಮ್ಮತವಾದ ಕಥೆಯನ್ನು ವಿಸ್ತರಿಸಿದಲ್ಲಿಗೆ ಪ್ರಥಮ ಸ್ಕಂದದ ಸಪ್ತಮಾಧ್ಯಾಯವು ಪೂರ್ಣಗೊಂಡಿತು.

ಅಧ್ಯಾಯ ೮

೧. ಚಿತ್ತಜಾರಿಯಾದ ಶಿವನ ಕುಮಾರನಾದ ಗಣಪತಿಯನ್ನು ಸ್ತುತಿಸುತ್ತೇನೆ. ಚಿತ್ತಜನಾದ ಮನ್ಮಥನ ಅಣ್ಣನ ಸತಿಯ ಕರುಣೆಯನ್ನು ಪಡೆದು, ಪೃಥ್ವಿವಲ್ಲಭನಿಗೆ ತತ್ತ್ವಧರ್ಮವನ್ನು ಬೋಧಿಸಿದ ಚಿತ್ತವಲ್ಲಭನಾದ ಹರಿಯನ್ನು ನಂಬಿರುವ ಅಜ್ಜನ ಕಥೆಯನ್ನು ಹೇಳುತ್ತೇನೆ.

೨. ಬ್ರಹ್ಮಜ್ಞಾನಿಗಳು ಮನಸ್ಸಿಟ್ಟು ಕೇಳಿ - ಪಾಂಡವರ ಭಕ್ತಿಯ ಹಿರಿಮೆಗೆ ಮೆಚ್ಚಿದ ಹರಿಯು ಪಲ್ಲಂಗವನ್ನು ಬಿಡದೆ ಹಸ್ತಿನಾಪುರದಲ್ಲಿಯೇ ಅವರನ್ನು ನಿಂತು ಸಂಮಾನಿಸಿದನು. ಆಮೇಲೆ ಬ್ರಹ್ಮಮೂರ್ತಿಯು ಸನ್ಮತಿ ಪಡೆದು ಅಲ್ಲಿಂದ ಯಾತ್ರಿಸುವ ಸಂಭ್ರಮದಲ್ಲಿದ್ದನು.

೩. ಹಸ್ತಿನಾವತಿಯಲ್ಲಿ ಅನೇಕ ದಿನ ಪರಿಣಾಮದಿಂದ ಸುಖದಿಂದ ಉಳಿದನು. ಭಕ್ತಾದಿಗಳನ್ನು ಆದರಿಸಿ, ಸಂಭಾವಿಸಿದನು. ಮತ್ತೊಂದು ದಿನ ಆ ದಯಾವನಧಿ ಹೊರಡುವುದಕ್ಕೆ ಅನುವಾಗುತ್ತಿರಲು ಧರ್ಮರಾಯನು ದಾರಿಗೆ ಅಡ್ಡವಾಗಿ ವಂದಿಸಿ ನಿಂತನು.

೪. ಕಣ್ಣೀರನ್ನು ಸುರಿಸಿ ಗದ್ಗದ ಕಂಠದಿಂದ ಶರಣಾಗತ ಬಂಧು ನಿಮ್ಮನ್ನು ಒಂದು ಕ್ಷಣವೂ ಬಿಡಲಾರೆ; ನನ್ನ ತನುವಿನಲ್ಲಿ ಪ್ರಾಣವುಳಿಯಲಾರದು. ನಿಮ್ಮ ಪಾದುಕೆಯನ್ನು ಧರಿಸಿ ಅಡವಿಯಲ್ಲಿರುತ್ತೇನೆ. ರಾಜ್ಯದ ಅನುಭವಕ್ಕೆ ಮನಸ್ಸಿಲ್ಲ ಎಂದು ಧರ್ಮರಾಯನು ಹೇಳಿದನು.

೫. ವೇದಾದಿಗಳು ನಿಮ್ಮನ್ನು ತಿಳಿಯದೆ ಹುಡುಕಾಡುತ್ತಿವೆ. ಆತ್ಮಗುಹೆಯಲ್ಲಿ ಯೋಗೀಂದ್ರ ಸಮೂಹ ನಿಮ್ಮನ್ನು ಅರಸುತ್ತದೆ. ಸೃಷ್ಟಿಯನ್ನು ಸೃಷ್ಟಿಸಿ ಮತ್ತೆ ಸಂಹರಿಸುವ ರೂಢೀಶನೇ ನಮೋಸ್ತು! ನನಗೆ ನೀನೇ ಗತಿಯೆಂದು ಧರ್ಮರಾಯನು ನುಡಿಸಿದನು.

೬. ದೇವೇಶನೇ! ನಿನ್ನ ಪಾದ ಸುಸೌಖ್ಯ ಗಣ ಸನಕಾದಿ ಋಷಿಗಳಿಗೂ ಇಲ್ಲ. ಆದರೆ ಪೂರ್ವಜನ್ಮದ ಫಲಫಲದಿಂದ ನಾವು ನಿನ್ನನ್ನು ಸೇವಿಸುತ್ತಿದ್ದೇವೆ. ಇಲ್ಲದಿದ್ದರೆ ಯಾವಾಗಲೋ ಅವಸಾನ ಹೊಂದುತ್ತಿದ್ದೆವು. ನೀನಿಲ್ಲದಿರುವ ಈ ಜೀವಕ್ಕೆ ಆಶ್ರಯವೇ ಇಲ್ಲದಾಗಿದೆ.

೭. ಬಂಧುವರ್ಗವನ್ನು ವಧಿಸಿ ದೋಷ ಮಾಡಿದ ಶರೀರ ನನ್ನದು. ಇಂತಹ ದೋಷ ಮಾಡಿದ ಶರೀರಕ್ಕೆ ಯಾವ ಗತಿ ಬರುತ್ತದೆ ಎಂಬುದನ್ನು ನೋಡಿಯೇ ನೀನು ಹೋಗಬೇಕು. ರಾಜ್ಯ ಮದದಿಂದಾಗಿ ನಾನು ಅಂಧನಾಗಿ ಹೋಗಿದ್ದೇನೆ. ಲಕ್ಷ್ಮೀಪತಿಯಾದ ನೀನು ಸುಲಭೋಪಾಯವನ್ನು ಅನುಗ್ರಹಿಸಬೇಕು.

೮.   ತುರಗಮೇಧದಲ್ಲಿ ದೋಷ ಪರಿಹಾರವಾಗಲಾರದು. ಸುರೆಯನ್ನು ಸೇವಿಸಿದ ಪಾಪ ನೀಗಲು ಮತ್ತೆ ಸುರೆಯನ್ನು ಸೇವಿಸಿದ ರೀತಿಯೇ ಇದು. ದೇಹಕ್ಕೆ ಆವರಿಸಿದ ಪಾಪವನ್ನು ಹೋಗಲಾಡಿಸಲು ಮತ್ತೆ ಪಾಪವನ್ನೇ ಲೇಪಿಸಿದರೆ ಹೇಗೆ? ನರಕವೇ ಬರುವುದಲ್ಲದೆ ಬೇರೇನು ನಿಶ್ಚಯವಾಗಿಯೂ ಬರಲಾರದು. ಆದ್ದರಿಂದ ನೀನೊಂದು ಬುದ್ಧಿಯನ್ನು ಅನುಗ್ರಹಿಸಬೇಕು.

೯. ಯುಧಿಷ್ಠಿರ ಸ್ತುತಿಯು ಸಾಕು, ಸಾಕು ಎಂದವನನ್ನು ಬಳಿಗೆ ಕರೆದು ಶ್ರೀ ಕೃಷ್ಣನು ಮಸ್ತಕದ ಮೇಲೆ ಹಸ್ತವನ್ನು ಇರಿಸಿದನು. ಲೇಪಿಸಿದ ದೋಷವೆಂದೆಯಲ್ಲ? ಅದು ನಿನಗೆ ಯಾರು ಹೇಳಿದ ಬುದ್ಧಿ? (ನೀನು ನಿರ್ದೋಷಿ) ಎಂದು ಅವನನ್ನು ತಬ್ಬಿಕೊಂಡು ಸತ್ಕರಿಸಿದನು.

೧೦. ಮಂದಹಾಸದಲ್ಲಿ ಬಳಿಕ ವ್ಯಾಸಧೌಮ್ಯರ ಮುಖವನ್ನು ಅವಲೋಕಿಸಿದನು. ಅವರನ್ನು ಚಂದದಿಂದ ಸಂಮಾನಿಸಿ ನೃಪನಿಗೆ ಬುದ್ಧಿಯನ್ನು ಹೇಳಿ ಎಂದನು. ಯುಧಿಷ್ಠಿರನನ್ನು ಉದ್ದೇಶಿಸಿ, ಭೀಷ್ಮರ ಬುದ್ಧಿಯನ್ನು ಕೇಳಿಕೊಳ್ಳುವ, ಅವರಲ್ಲಿಗೆ ಹೋಗೋಣವೆಂದನು.

೧೧. ಅಲ್ಲಿಗೆ ಮೊದಲಾಗಿ ಧರ್ಮಜ ದಿವ್ಯರಥದಲ್ಲಿ ಹೋದನು. ಅವನೊಂದಿಗೆ ಭೀಮ, ಅವನೊಂದಿಗೆ ಕಿರೀಟಿ ಮತ್ತು ಅಚ್ಯುತ; ಅವರೊಂದಿಗೆ ರಥದಲ್ಲಿ ನಕುಲಸಹದೇವರು ಹೊರಟರು. ಇವರೊಂದಿಗೆ ಭಟರೂ, ಜನರೂ ಸೇರಿ ಧರ್ಮಜ ಪ್ರಯಾಣಿಸಿದನು.

೧೨. ಪರಶುರಾಮ, ವಶಿಷ್ಠ, ಗಾರ್ಗ್ಯ, ಕಣ್ವ, ಗೌತಮ, ಕೌಶಿಕ, ಸುದರ್ಶನ, ಕಾಶ್ಯಪ, ಆಂಗಿರಸ, ಶ್ರೀ ಬೃಹದಶ್ವ, ಭರತ, ಪರ್ವತ, ಭಾರದ್ವಾಜ, ವ್ಯಾಸ, ಶ್ರೀ ಶುಕ, ನಾರದ ಹರಿನಾಮವನ್ನು ಹೇಳಿಕೊಂಡು ಬರುವುದು ಕೌತುಕವಾಗಿತ್ತು.

೧೩. ಅಜ್ಜನ ಅಂತ್ಯವನ್ನು ನಾವೂ ನೋಡಬೇಕು ಎಂದು ಸಂಭ್ರಮದಿಂದ ದೇವ, ಬ್ರಾಹ್ಮಣ, ರಾಜ, ವೈಶ್ಯ, ಶೂದ್ರ ಸಮೂಹ ಆತುರ ಪಟ್ಟರು. ವೇಗವಾಗಿ ಬಂದು ಮುಳುಗುತ್ತಿರುವ ಸೂರ್ಯನ ಹಾಗಿರುವ ಭೀಷ್ಮನ ಪಾದಕಮಲವನ್ನು ನೋಡಿದರು.

೧೪. ಹತ್ತಿರ ಹೋಗಿ ಸಮಸ್ತ ಜನಗಳೂ ಅವರ ಸುತ್ತ ನಿಂತು, ವೇದಶಾಸ್ತ್ರ ಪುರಾಣ ಕಾವ್ಯರಹಸ್ಯವನ್ನು ಘೋಷಿಸುತ್ತಾರೆ. ಸೃಷ್ಟಿಯೇ ಕಂಪಿಸುವ ಈ ಘೋಷವನ್ನು ಅವನು ಬುದ್ಧಿಯಲ್ಲಿಯೇ ಸೂಕ್ಷ್ಮವಾಗಿ ನೋಡಿ ಕಣ್ತೆರೆದು ಕೃಷ್ಣನಿಗೆ ವಾಲಿಸಿ ಕೈಮುಗಿದು ಭಜಿಸುತ್ತಾನೆ.

೧೫. ಪಾಂಡವರು ತಲೆವಾಗಿ ಅವನ ಪಾದಮುಟ್ಟಿ ನಿಂತರು. ಸುತ್ತುವರಿದು ಸರ್ವರೂ ಅವನ ಶ್ರೀಪಾದಕ್ಕೆ ವಂದಿಸಿದರು. ಪರಮ ಪಾವನರಾದ ಮುನೀಶ್ವರರು ಅವನನ್ನು ನೋಡಿ ಹೃದಯ ಕರಗಿ ಕಣ್ಣೀರು ಸ.ರಿಸಿದರು.

೧೬. ಭೀಷ್ಮಾಚಾರ್ಯರು ಆಗಮ ಶಾಸ್ತ್ರವಿಧಿ ಪ್ರಕಾರ ಮನಸ್ಸಿನಲ್ಲಿ ತಪ್ಪದೆ ಅರ್ಚಿಸಿದನು. ಹದಿನಾರು ರೀತಿಯಲ್ಲಿ ಅಚ್ಯುತನನ್ನು ವಿನಯದಿಂದ ಉಪಚರಿಸಿದನು. ಧನುಜಾರಿಯ ಪಾದವನ್ನು ಸ್ಮರಿಸಿ ಸಂತೋಷದಿಂದ ಉದಾರತೆ ಎಂಬ ಸಮುದ್ರದಲ್ಲಿ ಮುಳುಗಿ ಅವಸಾನ ಸಮಯದಲ್ಲಿ ವರ್ಧಿಸಿದನು.

೧೭. ಎರಡು ಕೈಗಳನ್ನು ಮುಗಿದು ತಲೆಯಲ್ಲಿ ಧರಿಸಿ ನಮಿಸಿರುವ ಪೊಡವಿ ಪತಿಯನ್ನು ನೋದನು. ಬಹಳ ಅನುರಾಗದಿಂದ, ಹೋಲಿಕೆಯೇ ಇಲ್ಲದ ಮುಕುಂದ ಪಾದದ ಆಧಾರ ತಿಳಿಯದೆ ಸುಮ್ಮನೆ ದುಃಖಿಸಿ ವೃಥಾ ದಂಡನೆಗೆ ಒಳಗಾಗಿರುವೆಯಲ್ಲ ಎಂದನು.

೧೮. ನೀನು ಗುರುಹತ್ಯಾದಿ ಭಯಗಳಿಂದ ಯಾಕಾಗಿಯಾದರೂ ನವೆಯುತ್ತಿರುವೆ. ಏಕಾತ್ಮನೂ ಅನಂತನೂ ಅತೀತ ಗುಣನೂ ಪರಿಪೂರ್ಣವಾದ ವರ ತತ್ತ್ವ ವಿವೇಕವನ್ನು ವಿಮರ್ಶಿಸದೆ ವಿಕಲ್ಪವನ್ನು ತಿಳಿಯದೆ ಮರುಳಾಗಿ ಹೋಗಿರುವೆ.

೧೯. ಒಂದು ಕಡೆ ಸದಾ ನಿಮಗಾಗಿ ಕುಂತಿಯು ಚಿಂತಿತಳಾಗಿದ್ದಾಳೆ. ನಿಮ್ಮ ಸಂತತಿಯನ್ನು ಈಕ್ಷಿಸಿ ರಕ್ಷಿಸುವ, ಆಯಾಸದ ಅನುಭವ, ಸಂತೋಷ, ಚಿಂತೆ ಹಾಗೂ ಸರ್ವಕ್ಕೂ ಅವನೊಬ್ಬನಲ್ಲದೆ ಯಜಮಾನನು ಯಾರು? ಇದನ್ನು ರಾಜನಾದ ನೀನು ಚೆನ್ನಾಗಿ ಮನಸ್ಸಿನಲ್ಲಿ ತಿಳಿಯಬೇಕು.

೨೦. ಕಾಲದ ನಿಯಮ ಪ್ರಕಾರ ಚರಾಚರ ಜೀವಾದಿಗಳು ಮೇಲೆ ಅಂಬರವಾಯು, ಮೇಘ ಸಮೂಹ ಎಲ್ಲವೂ ಸದಾ ಸಂಚರಿಸುತ್ತಲೇ ಇರುವವು. ಆಲೋಚಿಸಿದರೆ ನಿತ್ಯ ಭಕ್ತಿಯೇ ಸ್ಥಿರವಾದುದು. ಕಾಣುವುದೆಲ್ಲವೂ ಮಾಯೆಯ ಕೆಲಸವೇ.

೨೧. ಇವನು ಯಾರೆಂದು ಗೊತ್ತಿದೆಯೋ ಮಹಾರಾಜ? ಇವನು ಈ ಜಗತ್ತನ್ನು ಸೃಷ್ಟಿಸಿ ಸಂಹರಿಸಿ, ಪಾಲಿಸುವವನು. ಇವನು ವಸುದೇವನಿಗೆ ಮಗನಾದರೂ ಮೂರು ಗುಣಕ್ಕೆ ಮೂಲವಾಗಿದ್ದಾನೆ. ಈ ಜಗವನ್ನು ಮೋಹಿಸುವ ಮಹಾ ಮಾಯೆಯನ್ನು ಧರಿಸಿದವನಾಗಿದ್ದಾನೆ.

೨೨. ನಾರದ ಮನು ಸನಕಾದಿಗಳು ಪೂಜಿಸುವ ತೇಜೋಮಯ ಮೂರ್ತಿ ಇವನಾಗಿದ್ದಾನೆ. ಇವನು ನಮಗೆ ಇವನು ನಮ್ಮ ಬಂಧು ಎಂದೆಣಿಸಿ, ಪರಿಹಾಸ್ಯ ಮಾಡಿ ರಥ ಜೋಡಿಸುವ ಮೂಢ ಕೆಲಸವನ್ನು ಮಾಡಿದಿರಿ.

೨೩. ನೀವು ವಹಿಸಿಕೊಟ್ಟ ಭೃತ್ಯ ಕೆಲಸವನ್ನು ಅವನು ಒಪ್ಪಿಕೊಳ್ಳದಿದ್ದರೇ? ಶೋಕಹೀನ! ಅವಿನಾಶಿ! ಅಕ್ರಿಯಾ! ಸರ್ವಪೂರ್ಣಗುಣಾತ್ಮಕ! ಲೋಕವಲ್ಲಭನಾದ ಅವನಿಂದ ನನಗೆ ಈ ಸ್ಥಿತಿ ಒದಗಿತೆಂದು ವ್ಯಾಕುಲಿಸದೆ ಬುದ್ಧಿಯಲ್ಲಿ ಯಾವಾಗಲೂ ಅವನನ್ನು ಚಿಂತಿಸುತ್ತಿರು.

೨೪. ಧರಣೀಶನೇ ವಿಚಾರಿಸಿದರೆ ಇವನ ಸ್ಥಿತಿ ಅತೀ ಕೌತುಕ. ಇವನ ಬಗೆಗೆ ಸನಕಾದಿಗಳೂ ಅರಿಯರು. ತನ್ನನ್ನು ಚೆನ್ನಾಗಿ ತಿಳಿದು ಭಕ್ತರನ್ನು ಅವನು ಉದ್ಧಾರ ಮಾಡುವ ಪರಿಪಾಠವನ್ನು ಇಂದು ಅವನು ತೋರಿಸುತ್ತಿರುವುದು ನಿಮ್ಮ ಮತ್ತು ನನ್ನ ಭಾಗ್ಯ.

೨೫. ಚರಣಾಶ್ರಯದಲ್ಲಿ ಯೋಗಿಗಳು ಯಾವಾಗಲೂ ನೆನೆಸಿ ನೆಲೆಸಿದ್ದರು. ಹರ ಬ್ರಹ್ಮ ಸುರರೇ ಮೊದಲಾದವರಿಗೆ ಕೈಗೆ ಈತನು ಸಿಗನು. ಅಂತಹ ಕರುಣಾರ್ಣವ ಮೂರ್ತಿ ದೊರಕಿರುವುದು ನನ್ನ ಭಾಗ್ಯವೆಂದು ಅವರು ಸಂತೋಷಿಸಿದರು.

೨೬. ಇಂದು ನನಗೆ ಸಗೋಚರವಾಗಬೇಕು. ಕರುಣಾಲಯ! ಕೃಷ್ಣ! ಕೇವಲ ಮನುಜ ಧರ್ಮ ಎಂದೆನ್ನದೆ ಮುನಿವೃಂದ ಸಮೇತವಾಗಿ ನನಗೊಂದು ಹಿತಾರ್ಥವನ್ನು ಮಾಡಬೇಕು. ಆಮೇಲೆಯೇ ನಾನು ಅಸುವನ್ನು ವಿಯೋಗ ಮಾಡುತ್ತೇನೆ ಎಂದು ಪ್ರಾರ್ಥಿಸಿದನು.

೨೭. ನಸುಹಾಸದ ವಿಲಾಸ, ಕೆಂಪಾದ ತುಟಿ, ಸಾಲಾದ ಹಲ್ಲುಗಳು, ಕಮಲೋದರ, ಸುಂದರವಾದ ಕೆನ್ನೆ, ಕದಪು, ವರಕುಂಡಲಹಾರ, ಹೊಸತಾದ ಸುಕೌಸ್ತುಭ ಕಂಠ, ವಿಸ್ತಾರವಾದ ವಕ್ಷಸ್ಥಲ, ಪೀತಾಂಬರ, ಸುಳಿಯುಳ್ಳ ನಾಭಿ - ಈ ರೂಪಿನಿಂದ ನಿಮ್ಮ ಶ್ರೀ ಚರಣವನ್ನು ತೋರಿಸಬೇಕು.

೨೮. ಅಚ್ಯುತ ಪಾದವನ್ನು ನೆನಸಿ ಗಾಂಗೇಯನು ಮನಸ್ಸಿನಲ್ಲಿ ಸಮಾಧಾನದಲ್ಲಿದ್ದನು. ಆಗ ಧರ್ಮರಾಯನು ಕೈಮುಗಿದು, ಬಂಧು ಹತ್ಯಾ ದೋಷವನ್ನು ಕಳೆಯುವ ಪರಿಯೆಂತು ಎಂಬುದನ್ನು ಹೇಳಬೇಕೆಂದು ವಿನಯದಿಂದ ಹೇಳಿದನು.

೨೯. ಸ್ತ್ರೀಪುರುಷರ ಧರ್ಮ, ವರ್ಣಾಶ್ರಮ, ಒಳ್ಳೆಯ ಧರ್ಮ, ದಾನದ ಸ್ಥಿತಿ, ನಾನಾ ವಿಧವಾದ ಸಾರ ಧರ್ಮವಿಧಿ, ಕ್ಷತ್ರಿಯ ವೈಶ್ಯಾರಾದಿಯಾಗಿ ಭಗವಂತನಿಗೆ ಹಿತಾರ್ಥವಾದ ಧರ್ಮಗಳ ಸಾರವನ್ನು, ಅದರ ರಹಸ್ಯವನ್ನು ಸಂಕ್ಷೇಪವಾಗಿ ವಿವರಿಸಿದನು.

೩೦. ಧರ್ಮಾರ್ಥ ಕಾಮಾ ಮೋಕ್ಷಾದಿಗಳನ್ನು ತಿಳಿಸಿ ಅದರ ಮೂಲವನ್ನು ಬೋಧಿಸಿದನು. ರಾಗವಿಯೋಗ ಫಲ, ಇತಿಹಾಸ ರಹಸ್ಯವನ್ನು ಸನ್ಮಾನಿಸಿ ಬೋಧಿಸುತ್ತಿರಲಾಗಿ ಒಳ್ಳೆಯ ಷಣ್ಮಾಸವಾದ, ಸಾಧಕರಿಗೆ ಯೋಗ್ಯವಾದ ಉತ್ತರಾಯಣವು ಬಂತು.

೩೧. ಉತ್ತರಾಯಣ ಬಂತು ಎಂಬುದನ್ನು ತಿಳಿದ ಭೀಷ್ಮನು ಸುತ್ತಮುತ್ತಲೂ ಪ್ರಕಾಶಿಸುತ್ತಿರುವ ಮನಸ್ಸನ್ನೂ ಎಳೆದುಕೊಂಡನು. ಚಿತ್ತವಲ್ಲಭನಾದ ಹರಿಯ ಪಾದದಲ್ಲಿ ಅದನ್ನು ಸ್ಥಿರಗೊಳಿಸಿದನು. ವಿರಕ್ತಿ ಹುಟ್ಟಿ ಎದುರಲ್ಲಿರುವ ಶ್ರೀಹರಿಯನ್ನು ದಿಟ್ಟಿಸ ತೊಡಗಿದನು.

೩೨. ಹೃದಯದೊಳಗೆ ಶ್ರೀಹರಿಯ ವನಮಾಲ, ಚತುರ್ಭುಜ, ಬಹು ಸೌಂದರ್ಯ ಭರಿತವಾದ ಮೂರ್ತಿಯನ್ನು ನೋಡಿ ಪುನಃ ತನ್ನ ಕಣ್ಣಿನಲ್ಲಿ ಹೊರಗಡೆಯ ಶ್ರೀಕೃಷ್ಣನನ್ನು ನೋಡಿ ವಿನಯದಿಂದ ವರ್ಣಿಸಿದುದನ್ನು ನಾನೆಂತು ರಚಿಸಲಿ!

೩೩. ತ್ರಿಜಗವನ್ನೂ ಮೋಹಗೊಳಿಸುವ ನೀಲಾಂಬರ ವರ್ಣ, ನಿಜಕಾಂತಿಯ ಶ್ರೀಮುಖಕಾಂತಿ, ಸುಂದರವಾದ ಕರುಳಾಳಿ, ಸುಜನಪ್ರಿಯತೆ, ದಿವ್ಯಚತುರ್ಭುಜ, ಪೀತಾಂಬರ, ಅರ್ಜುನನ ಗೆಳೆಯನಾದ ಸ್ವಾಮಿಯ ಶ್ರೀಚರಣದಲ್ಲಿ ನನ್ನ ಮನಸ್ಸು ಸ್ಥಿರವಾಗಲಿ.

೩೪. ಕುದುರೆಯ ಖುರಪುಟದಿಂದ ಮೇಲೇಳುವ ಧೂಳಿನಿಂದ ಮರೆಯಾಗಿರುವ ಶ್ರೀಮುಖ, ಬೆವರಿನಿಂದ ಒದ್ದೆಯಾಗಿ ಮುಳುಗಿರುವ ಕುರುಳು, ಹೊರಬಂದ ಬಾಣವನ್ನೆಳೆದು ಬಿಟ್ಟಾಗ ಅಂಚಿನಲ್ಲಿ ಹರಿದ ಶ್ರೀ ಕವಚ - ಇವುಗಳಿಂದ ವಿರಾಜಿಸುವ ಪರಮಾತ್ಮನ ಪಾದದಲ್ಲಿ ನನ್ನ ದಿವ್ಯ ಮನ ಮುಳುಗಿ ಸ್ಥಿರವಾಗಲಿ.

೩೫. ಶಸ್ತ್ರವನ್ನು ಹಿಡಿಯೆನೆಂಬ ಪ್ರತಿಜ್ಞೆಯಲ್ಲಿ ನೀವಿರುವ ಹೊತ್ತಿನಲ್ಲಿ ಮಹಾಶರವೊಂದನ್ನು ಬಿಟ್ಟು ನೋಡುವ ಎಂದು ನಾನದನ್ನು ಬಿಟ್ಟೆ. ಆಗ ಭಕ್ತ ಪ್ರಿಯನೆಂಬ ಭಾಷೆಯನ್ನು ಗಮನದಲ್ಲಿರಿಸಿ ಚಕ್ರವನ್ನು ನೀನು ಹಿಡಿದೆ. ಆಗ ತುಂಬ ಸಿಟ್ಟುಗೊಂಡ ಶ್ರೀಹರಿಯಲ್ಲಿ ನನ್ನ ಮನಸ್ಸು ಸ್ಥಿರವಾಗಲಿ.

೩೬. ಕುದುರೆಗಳ ಮೈಯುಜ್ಜಿ ಅವುಗಳು ಅತಿ ಚಪ್ಪರಿಸುವಂತೆ ಕೈಗಳಿಂದ ಮಾಡಿ ರಥವನ್ನು ನಡೆಸಿಕೊಂಡು, ಎಡಗೈಯಲ್ಲಿ ಮೂಗುದಾರವನ್ನೂ ಬಲಗೈಯಲ್ಲಿ ಚಮ್ಮಟಿಗೆಯನ್ನೂ ಧರಿಸಿ ಅರ್ಜುನ ಯುದ್ಧಕ್ಕೆ ನಡೆ ಎಂದು ಅವನನ್ನು ಸಂಭ್ರಮಿಸುವ ಪಾರ್ಥನ ಗೆಳೆಯನಲ್ಲಿ ನನ್ನ ಮನಸ್ಸು ನಿಲ್ಲಲಿ.

೩೭. ರಣರಂಗದಲ್ಲಿ ಸತ್ತು ಮಲಗಿದ ಮಹಾಕುದುರೆ, ಆನೆ ಸಮೇತವಾಗಿ, ಅದರೊಂದಿಗೆ ಬಾಣದ ವೇದನೆಯನ್ನೂ ಸಹಿಸಿ, ಶ್ರೀ ಹರಿಯ ಮುಖ ಮಂಡಲವನ್ನು ನೋಡಿ, ಅದರಲ್ಲಿ ಬೆರತು ಹೋಗಿ, ವೀರರು ಮರುಳಾಗುತ್ತಾರೆ. ಆ ಕರುಣಾಕರನ ಪುಣ್ಯ ಶ್ರೀ ಪಾದಕ್ಕೆ ನನ್ನ ಮನಸ್ಸು ತಲುಪಲಿ.

೩೮. ನಾಲ್ಕು ಸಮುದ್ರಗಳ ನಡುವಿನ ಮಹಾಜನರು ಉದ್ಗಾರ ಮಾಡಲಾಗಿ ಧರ್ಮರಾಜನ ಯಾಗ ದೀಕ್ಷೆಯಲ್ಲಿ ಶ್ರೀಹರಿಯು ಶೋಭಿಸಿದನು. ಆ ಸಂದರ್ಭದಲ್ಲಿ ವಿದ್ವಾಂಸರ ಮಧ್ಯೆ ಅತಿಯಾಗಿ ನಿಂದಿಸಿದ ಚೈದ್ಯನನ್ನು ಸಂಹರಿಸಿ ಮೋಕ್ಷವನ್ನು ಕೊಟ್ಟ, ಬ್ರಹ್ಮನ ತಂದೆಯ ಪಾದದಲ್ಲಿ ನನ್ನ ಮನಸ್ಸು ಯಾವಾಗಲೂ ನೆಲೆಸಲಿ.

೩೯. ಸಕಲಾತ್ಮಕ್ಕೆ, ಚರಾಚರಕ್ಕೆ ಜ್ಞಾಪಕನೂ ಅಧ್ಯಕ್ಷ ಸ್ವರೂಪಿಯೂ, ಸಕಲಕ್ಕೂ ಜೀವ ಚೇತನನೂ, ನನ್ನ ಮನಸ್ಸಿಗೆ ಅತೀತನೂ, ಸಕಲವನ್ನು ಪ್ರೀತಿಸುವವನೂ ಮಾಯಾ ಮಹಾಪುರುಷನೂ ಆದ ದೇವನ ಪಾದತಲದಲ್ಲಿ ವಿಭ್ರಾಂತಿ, ವಿರೂಪಗಳನ್ನು ಪ್ರಕಟಿಸುವ ನನ್ನ ಬುದ್ಧಿಯನ್ನು ಸ್ಥಿರಪಡಿಸುತ್ತೇನೆ.

೪೦. ಎಂದಿತು ಮನಸ್ಸಿನಲ್ಲಿ, ಕಣ್ಣಿನಲ್ಲಿ, ಮಾತಿನಲ್ಲಿ, ಸ್ತುತಿಸಿ, ಹರ್ಷದಲ್ಲಿ ಆ ದಿವ್ಯ ತನುವಿನ ಆಕಾರ ಸ್ವರೂಪವನ್ನು ಚೆನ್ನಾಗಿ ನೋಡಿದನು. ದೇಹವನ್ನು ಒಂದಿಷ್ಟೂ ಅಲುಗಾಡಿಸಿದೆ, ಸಭೆ ಎಲ್ಲವೂ ನೋಡುತ್ತಿರುವಂತೆ ಶ್ರೀಹರಿಯ ಚರಣಾಬ್ಜದಲ್ಲಿ ಆತನ ಆತ್ಮದೊಂದಿಗೆ ತನ್ನಾತ್ಮವನ್ನು ಭೀಷ್ಮನು ಹೊಂದಿಸಿದನು.

೪೧. ಆ ವೇಳೆಯಲ್ಲಿ ಭೀಷ್ಮನ ಅಂತ್ಯಗತಿಯ ಶ್ವಾಸವನ್ನು ನೋಡಿ ಶ್ರೀಕೃಷ್ಣನು ಚಿಂತಿಸಿದನು. ಅಲ್ಲಿ ನೆರೆದಿದ್ದ ಜನರು ಹರಿ ಹರಿ ಎಂದು ಗೋಳಿಟ್ಟರು. ಅಂಬರದಿಂದ ಹೂಮಳೆ ಸುರಿಯಲಾರಂಭಿಸಿತು. ಆ ವಿಸ್ಮಯವನ್ನು ಹೇಗಾದರೂ ವಿವರಿಸಲಿ!

೪೨. ನಮ್ಮನ್ನು ಬಿಟ್ಟು ಯಾತ್ರೆ ಮಾಡಿದರು ಎಂದು ಯುಧಿಷ್ಠಿರಾದಿ ಪಾಂಡವರು ಕಡು ಶೋಕಿಸುತ್ತಾ ಶವ ಸಂಸ್ಕಾರ ಮಾಡಿ ತಮ್ಮ ತಮ್ಮ ಮಂದಿರಕ್ಕೆ ತೆರಳಿದರು. ಧರ್ಮರಾಯನೂ ಈಶ್ವರನನ್ನು ಧ್ಯಾನಿಸಿ ಗಜಮಂದಿರಲ್ಲಿದ್ದನು.

೪೩. ಪುನಃ ಶ್ರೀಕೃಷ್ಣನು ಪರಿವಾರದೊಂದಿಗೆ ಹಸ್ತಿನಾವತಿಯನ್ನು ಪ್ರವೇಶಿಸಿ ಎಲ್ಲರಿಗೂ ಚಿತ್ತ ಸಮಾಧಾನ ಹೇಳಿದನು. ಧೃತರಾಷ್ಟ್ರಾದಿ ಬಾಂಧವರ ಮತದಿಂದ ಧರ್ಮರಾಯನಿಗೆ ಪಟ್ಟನ್ನು ಕಟ್ಟಿದರು. ಜನ ಮೆಚ್ಚುವ ಹಾಗೆ ಅಸುರಾರಿಯಾದ ಶ್ರೀಕೃಷ್ಣನನ್ನು ಸ್ಮರಿಸಿ ಆತನು ಸುಖವಾಗಿದ್ದನು.

೪೪. ಇಲ್ಲಿಗೆ ಪ್ರಥಮ ಸ್ಕಂಧದಲ್ಲಿಯ ಅಷ್ಟಮ ಅಧ್ಯಾಯವಾಯಿತು. ಬುದ್ಧಿವಂತರು ಕಲ್ಮಷವನ್ನು ಖಂಡಿಸುವ ವಿಕೋಪವನ್ನು ಸಿದ್ಧಾಂತಗಳ ಸಾರರಹಸ್ಯವನ್ನು ಇದರಿಂದ ಅರಿಯಬಲ್ಲರು. ಇದನ್ನೂ ಸೇವಿಸಿದವರು ಕ್ಷೀರಸಾಗರ ನಿವಾಸಿಯಾದ ಶ್ರೀ ಮನ್ನಾರಾಯಣನನ್ನು ಹೊಂದುತ್ತಾರೆ.

ಅಧ್ಯಾಯ ೯

೧. ಗಜಮುಖನೂ ಮನೋಹರನೂ ಆದ ಗಣಪತಿಯ ಶ್ರೀ ಚರಣಕ್ಕೆ ನಮಿಸುತ್ತೇನೆ. ಶಾರದೆಯನ್ನು ವಂದಿಸಿ ಮಹಾಗುರುವಿನ ಕೃಪೆಯನ್ನು ಸಂಗ್ರಹಿಸುತ್ತೇನೆ. ಸುಜನರ ಸನ್ಮತಿಯನ್ನು ಪಡೆದು, ನೃಪನನ್ನು ಮನ್ನಿಸಿ ಶ್ರೀಕೃಷ್ಣ ದ್ವಾರಕೆಗೆ ತೆರಳಿದ ಕಥೆಯನ್ನು ಕೇಳಿ.

೨. ಭಗವಾನ್ಪರಮಾತ್ಮನ ಮಹಾತ್ಮೆ ಅತ್ಯದ್ಭುತವಾದುದು ಎಂಬುದನ್ನು ಸೂತನು ಶೌನಕರಿಗೆ ಹೇಳುತ್ತಾನೆ. ಸತ್ಯಾರ್ಣವನಾದ ಶ್ರೀಕೃಷ್ಣನ ರೋಮದ ತುದಿಯಲ್ಲಿ ಅನಂತ ಬ್ರಹ್ಮಾಂಡಗಳೇ ನೆಲೆಸಿದ್ದರೂ ಅವುಗಳ ಮೇಲೆ ಆತನಿಗೆ ಕೃಪೆಯಿಲ್ಲ.

೩. ಲಯವಾದರೂ, ಉದ್ಭವವಾದರೂ ಅದೇ ಸ್ಥಿತಿಯಲ್ಲಿರುವುದಾದರೂ ಭಯವಿಲ್ಲ, ಮಹಾಸುಖವೆಂಬುದಿಲ್ಲ, ಅತಿಚಂಚಲವಿಲ್ಲ, ನಾಶವಾಗುವ ದೇಹ ನಾಶವಾಗಲಿ ಸುಖಿಸುವುದಾದರೆ ನನ್ನ ಭಕ್ತರು ಸುಖಿಸಲಿ ಎಂಬುದರ ಹೊರತು ಶ್ರೀಹರಿಗೆ ಬೇರಾವುದರ ಪರಿವೆಯೂ ಇಲ್ಲ.

೪. ತಮ್ಮಂದಿರೊಡಗೂಡಿ ಧರ್ಮರಾಯನು ಉತ್ತಮವಾಗಿ ರಾಜ್ಯವನ್ನು ಪರಿಪಾಲಿಸಿದನು. ಕಾಣಿಕೆಗೆಂದೇ ಬರುವ ಜನರ ಸಂಖ್ಯೆಯನ್ನು ಹೇಳುವುದಕ್ಕೇ ಅಸಾಧ್ಯ. ಅವರೆಲ್ಲರನ್ನೂ ಅವರವರಿಗೆ ಉಚಿತವಾದ ರೀತಿಯಲ್ಲಿ ಮನ್ನಿಸಿ ಶ್ರೀಕೃಷ್ಣನ ಇಷ್ಟದಂತೆ ನೃಪನ ರಾಜ್ಯವು ವಿರಾಜಿಸಿತು.

೫. ಭೀಷ್ಮನ ಅಪೇಕ್ಷೆಯಂತೆ ಶ್ರೀಕೃಷ್ಣ ಕರುಣಾಕಟಾಕ್ಷದಿಂದ ಧರ್ಮರಾಯನು ಜ್ಞಾನಾತ್ಮಸಮುದ್ರನಾದನು. ತನ್ನ ಸುಖವನ್ನು ನೋಡದೆ ನೆಲವನ್ನು ಪರಿಪಾಲಿಸಿದ ವಿಧಾನವನ್ನು ನಾನು ಹೇಗೆ ವಿವರಿಸಲಿ?

೬. ಉತ್ತಮವಾದ ಕಾಣಿಕೆಯನ್ನು ಕೊಂಡು ಬರುವ ಮಹಾರಾಜರ ಸಮೂಹಕ್ಕೆ ಮೇರೆಯೇ ಇಲ್ಲ. ಕೆಲವರು ನಮಿಸಿ ಅಪ್ಪಣೆ ಪಡಕೊಂಡು ಹೊರಟು ಹೋದರೆ ಇನ್ನು ಕೆಲವರು ಅಲ್ಲಿಗೆ ಬರುತ್ತಲೇ ಇರುತ್ತಾರೆ. ಅವರೊಂದಿಗೆ ಇದ್ದ ಭಟ ಸಮೂಹವನ್ನು ನೋಡಿದವರು ಈ ಭುವನದಲ್ಲಿ ಯಾರೂ ಇಲ್ಲ.

೭. ದಿಕ್ಪಾಲಕರಾದಿಯಾಗಿ ಸಮಸ್ತ ಜನ ಭೂಪನಿಗೆ ಕೈಕಾಣಿಕೆ ಕೊಟ್ಟು ಹೋಗುತ್ತಿದ್ದರು. ನಿಷ್ಪಾಪನ ಪಾದವನ್ನು ಹಿಡಿದರೆ ಭೂಮಿಯನ್ನು ಬಿಟ್ಟು ವೈಕುಂಠವನ್ನು ಸೇರುತ್ತೇವೆ ಎಂಬ ಭಾವನೆ ಅವರಿಗಿದ್ದಿತು.

೮. ಧರ್ಮರಾಯನು ನೆನೆಸಿದಾಕ್ಷಣದಲ್ಲಿಯ ದೇವೇಂದ್ರನ ಇಷ್ಟದಂತೆ ಮಳೆಯಾಗುತ್ತಿತ್ತು. ಅಕಾಲದಲ್ಲಿ ಯಾರಿಗೂ ಮರಣ ಉಂಟಾಗುತ್ತಿರಲಿಲ್ಲ. ಸಮುದ್ರವು ರಾಜನು ಬಯಸಿದಲ್ಲಿಗೆ ನೀರನ್ನು ತುಂಬಿಸುತ್ತಿತ್ತು. ಸಂಪತ್ತು ಕುಂದದೆ ಕುಬೇರನ ಕೃಪೆಯಿಂದ ಹೆಚ್ಚುತ್ತಿತ್ತು.

೯. ಆತನು ಬ್ರಾಹ್ಮಣರು ಇಚ್ಛಿಸಿದಷ್ಟು ದಾನಧರ್ಮವೀಯುತ್ತಿದ್ದನು. ಅದೆಷ್ಟರ ಮಟ್ಟಿಗೆಂದರೆ ಮಂದರಗಿರಿಗಿಂತಲೂ ಮಿಗಲಾಗಿ. ದನಗಳು ಕೊಡುವ ಹಾಲಿನಿಂದಾಗಿ ಭೂಮಿಯೇ ಮೃದುವಾಗುತ್ತಿತ್ತು. ಧರ್ಮರಾಯನ ಅಧಿಕಾರವು ರಾಮರಾಜ್ಯವನ್ನು ಮೀರಿಸುವಂತಿತ್ತು.

೧೦. ಯಾರೊಬ್ಬರಿಗೂ ಮಹಾಘೋರ ವಿಪತ್ತುಗಳ ದೀನಾವಸ್ಥೆಯೆಂಬುದೇ ಇರಲಿಲ್ಲ. ರೋಗರುಜಿನಗಳ ಬಾಧೆಯಿಲ್ಲ. ಅನರ್ಥ, ಭಯ, ಆಯಾಸಾದಿಗಳೂ ಇರಲಿಲ್ಲ. ಬಾಧಿಸುವ ಪಿಶಾಚಿ ಭೂತಗಣಗಳ ವ್ಯಸನವೂ ಇರಲಿಲ್ಲ. ಸಜ್ಜನರ ಸಂಸರ್ಗದಲ್ಲಿ ಸ್ವಾಧೀನ ಬಲದಿಂದ ರಾಜನು ಸುಖಿವಾಗಿದ್ದನು.

೧೧. ನೊಂದೆನು ಎಂಬುದಿಲ್ಲ; ಅತಿಯಾದ ಸಂಕಷ್ಟದಲ್ಲಿ ಬೆಂದನು ಎಂಬುದೂ ಇಲ್ಲ;ಅಪೇಕ್ಷಿಸಿದನ್ನು ಕೊಡದವರಿಲ್ಲ; ಅಕಾಲ ಮರಣದ ಬಾಧೆಯಿಲ್ಲ; ಅನ್ನವಿಲ್ಲದೆ ಶಕ್ತಿ ಇಲ್ಲ ಎಂಬ ಮಾತನ್ನು ಆ ರಾಜನ ರಾಜ್ಯದಲ್ಲಿ ಕೇಳುವುದಕ್ಕೆ ಸಾಧ್ಯವೇ ಇಲ್ಲ.

೧೨. ಕಳ್ಳತನ ಎಂಬ ಶಬ್ದವೇ ಕೇಳುವುದಕ್ಕೆ ಅಲ್ಲಿಲ್ಲ; ಹಾದರ ಎಂಬುದರ ಅರ್ಥವನ್ನು ಮನಸ್ಸಿನಲ್ಲಿ ನೆನೆಸುವವರಿಲ್ಲ; ಶೂರರು ಅಹಂಕಾರ ಹಾಗೂ ನಿರ್ದಯವನ್ನು ಅರಿಯರು. ಸಾವಿರಾರು ಸಜ್ಜನ ಶ್ರೇಷ್ಠರು ಶುಭವನ್ನು ನೀಡುವವರೇ ಸರಿ.

೧೩. ಸ್ವರ್ಗವನ್ನು ಬಯಸುವರಿಲ್ಲ; ಮೋಕ್ಷವಾದರೂ ಏಕೆ ಎಂಬರು. ವರ್ಗಮೂರನ್ನು ಯಾರೂ ಅನುಷ್ಠಾನ ಮಾಡುವರಿಲ್ಲ. ಜನಸಮೂಹವೆಲ್ಲ ಧರ್ಮರಾಯನ ರಾಜ್ಯಸುಖದ ಮುಂದೆ ಮೂರು ಲೋಕದ ಸುಖವನ್ನು ಹೋಲಿಸಬಹುದೇ ಎನ್ನುವರು.

೧೪. ಭೂಮಿಯಲ್ಲಿ ನರನಾಗಿ ಹುಟ್ಟಿ ಎಷ್ಟು ಬೇಕಾದರೂ ಸುಖಿಸಬಹುದು. ಆದರೆ ಈ ಸ್ಥಳದಲ್ಲಿ, ಧರ್ಮರಾಜನ ಓಲಗದಲ್ಲಿ ಇರುವುದೆಂದರೆ ಅದು ಅರ್ಧಾಂಶವಷ್ಟೇ ಆಗುತ್ತದೆ. ಬ್ರಹ್ಮಲೋಕ, ಮಹೇಂದ್ರ ಲೋಕ ಮುಂತಾದವುಗಳಲ್ಲಿ ಕೃಷ್ಣನ ಪ್ರೀತಿಯಿಲ್ಲ; ಹಾಗಾದರೆ ಹದಿನಾಲ್ಕು ಲೋಕದಲ್ಲಿ ಇದಕ್ಕೆ ಸರಿಯಾದುದು ಇದೆಯೇ?

೧೫. ಈ ರೀತಿ ಅಚ್ಯುತನ ಆಜ್ಞೆಯಲ್ಲಿ ಸಿಂಹಾಸನವನ್ನು ಏರಿದ ರಾಜನು ಹರಿಧ್ಯಾನದಲ್ಲಿ ಮನಸ್ಸನ್ನು ನಿಲ್ಲಿಸಿ ರಾಜ್ಯವನ್ನು ಪರಿಪಾಲಿಸಿದನು. ಅಂತು ನಾಲ್ಕು ಸಮುದ್ರಗಳೂ ಘೂರ್ಣಿಸಿದ ರೀತಿಯಲ್ಲಿ ರಾಜನ ರಾಜ್ಯಭಾರವನ್ನು ನೋಡಿ ಶ್ರೀಕೃಷ್ಣನು ತಾನು ನೆನೆಸಿದ ಕಾರ್ಯ ಫಲಿಸಿತೆಂದು ನೆನೆದನು.

೧೬. ಹೀಗೆ ಹಲವು ಕಾಲ ರಾಜನೊಂದಿಗೆ ಆನಂದಿಸಿ, ಅವರ ಮನಸ್ಸನ್ನು ಕೊನೆಗೂ ಹೇಗಾದರೂ ಒಲಿಸಿದನು. ತನ್ನ ಸಾರಥಿಯನ್ನು ಕರೆದು ದಿವ್ಯದಿನದಲ್ಲಿ ಗಜಮಂದಿರದಿಂದ ಶ್ರೀಕೃಷ್ಣನು ಹಲವು ವಾದ್ಯ ರವಗಳು ಬಾರಿಸುತ್ತಿರಲು ಹೊರಟನು.

೧೭. ಮನಸ್ಸಿನಲ್ಲಿ ನೀವು ತಪ್ಪು ಭಾವಿಸದಿರಿ! ನಿತ್ಯವೂ ಸುಖಿಸಿ! ಎಂದು ಅನುರಾಗದಲ್ಲಿ ಅತಿಯಾಗಿ ಸತ್ಕರಿಸಿ ಅಭಿನಂದಿಸಿ ತನ್ನ ಪಾಳಯವನ್ನು ಸೇರಿಸಿದನು. ಮಹಾರಥವನ್ನು ಏರಿ ಸೂರ್ಯನು ಬೆಳಗುವಂತೆ ಶ್ರೀಕೃಷ್ಣನು ಕಣ್ತುಂಬುವಂತೆ ಪ್ರಕಾಶಿಸಿದನು.

೧೮. ರಥದೊಳಗಡೆ ಶ್ರೀಕೃಷ್ಣ ಏರಿದಾಗ ಸೂರ್ಯನು ಮುಳುಗಿದ ಹಾಗೆ ಆಯಿತು, ಭೂಮಿ ಸರ್ವರೂ ಕಣ್ಣಿನಲ್ಲಿಯೂ ಮನಸ್ಸಿನಲ್ಲಿಯೂ ಕಾತರಿಸಿದರು. ಕೃಷ್ಣನ ಪಾದ ವಿಯೋಗದ ವ್ಯಥೆಯಾಗಿ ಆ ಬಗೆಗೆ ಅತಿಯಾಗಿ ಆಲೋಚಿಸಿ ಕಣ್ಣೀರು ಸುರಿಸಿದ ಆಶ್ಚರ್ಯವನ್ನು ಏನೆಂದು ಹೇಳಲಿ!

೧೯. ಕುಂತಿಗೆ, ದ್ರೌಪದಿಗೆ, ಸೌಭದ್ರೆಗೆ ಧೃತರಾಷ್ಟ್ರನ ರಾಣಿ ಗಾಂಧಾರಿಗೆ ಉತ್ತರೆಯಾದಿ ಮುತ್ತೈದೆಯರಿಗೆ ಮನಕರಗಿದವು. ಆ ಸಮಯದಲ್ಲಿ ಧೌಮ್ಯಾದಿ ಮುನೀಶ್ವರರ ಮುಖಗಳು ಚಳಿಗಾಲದಲ್ಲಿ ಅರವಿಂದ ವನ ಲಯವಾಗುವ ರೀತಿಯಲ್ಲಿ ಬಾಡಿಹೋದುವು.

೨೦. ಪಂಚಾಮೃತ ಭೋಜನದಲ್ಲಿ, ಮಲಗುವಲ್ಲಿ, ಅತಿಹಾಸ್ಯ ರಸ ಪ್ರಸಂಗದಲ್ಲಿ - ಒಮ್ಮೆಯೂ ಬಿಟ್ಟರದವರು - ಈ ದಿನ ಆತನು ತಪ್ಪಿ ಬಿಡುತ್ತಾನೆ ಎಂದಾದರೆ ಈವರೆಗೆ ಅವನ ಸುಖಾನುಭವವನ್ನು ಅನುಭವಿಸಿದವರು, ಮರೆತು ಇರುವುದಾದರೂ ಹೇಗೆ?

೨೧. ಅವನ ನಾಮವನ್ನು ಕೇಳಿದವರು ಒಮ್ಮೆಯೂ ಬಿಡದೆ ಸ್ಮರಿಸುತ್ತಾರೆ. ಅಂದ ಮೇಲೆ ಅವರೊಡನೆ ನಿತ್ಯವೂ ವರ್ತಿಸುವವರು ಹೇಗೆ ಮರೆಯಬಲ್ಲರು? ಅವರ ಜತೆಯಲ್ಲಿಯೇ ನಾರಿಯರ ಕಣ್ಣುಗಳು - ಬುದ್ಧಿಯನ್ನು ಕೇಳದೆ ವ್ಯಥೆಯಿಂದ - ಅವರೊಂದಿಗೇ ಹೋಗುತ್ತವೆ.

೨೨. ನಾರಿಯರು ಅವನನ್ನು ಬೀಳ್ಕೊಟ್ಟರು. ಶ್ರೀಕೃಷ್ಣನು ನಡೆಯಲು ಅವರು ಕಣ್ಣುಗಳು ಒಮ್ಮೆ ಬಿಟ್ಟು ಬಿಟ್ಟರೂ ಮತ್ತೆ ಬಯಸಿದವು. ಮನಸ್ಸುಗಳು ಬಿಡಲಾರದೆ ಮುರಾರಿಯ ಜತೆಯಲ್ಲಿಯೇ ನಡೆದವು. (ದೃಢವಾದ ಆತ್ಮ ಸ್ಥಿತಿಗೆ ಬಂದವರು ಒಮ್ಮೆಯೂ ಆತನನ್ನು ಅಗಲಲಾರರು ಎಂದು ಇದರ ಅರ್ಥ.)

೨೩. ಶ್ರೀಹರಿಯು ಯಾತ್ರೆ ಮಾಡುತ್ತಿರಲು ದಶದಿಕ್ಕುಗಳಿಗೂ ಕೇಳುವಂತೆ ಕೊಂಬುಗಳು ಕೂಗಿದವು. ಭೇರಿ ಮೃದಂಗಗಳು ಆರ್ಭಟಿಸಿದವು. ಕೈಮಣಿ, ತಾಳ, ಶಂಖ, ಮದ್ದಳೆ, ಡೋಲು, ಡಕ್ಕೆ, ಉಡುಕ್ಕೆ ಮೊದಲಾದವು ವಾರ್ತೆಯನ್ನು ಸಾರಿದವು. ಶಾಸ್ತ್ರಾನುಮತದಲ್ಲಿ ವಿಪ್ರರು ಶ್ರೀಕೃಷ್ಣಮೂರ್ತಿಯನ್ನು ಸ್ತುತಿಸಿದರು.

೨೪. ಕೈಯ ಕಂಕಣವನ್ನು ಮೇಲೆತ್ತಿ ಶ್ರೀಹರಿಯ ಬಿರುದನ್ನು ಕೆಲವರು ಘೋಷಿಸಿದರು. ಅಕ್ಕಿ ಮಂತ್ರಿಸಿ ಕೆಲವರು ಶ್ರೀಮುಡಿಗೆ ಎತ್ತರಕ್ಕೆ ಚೆಲ್ಲಿ ಬರುತ್ತಿದ್ದರು. ಪರಮೇಶ್ವರನ ದಿವ್ಯ ಕಥೆಯನ್ನು ಅತ್ಯಂತವಾಗಿ ಘೋಷಿಸಿ ಸುತ್ತಲೂ ಬರುವ ಭಟರ ಸಂಭ್ರಮವನ್ನು ಹರನು ಮಾತ್ರ ತಿಳಿಯುವುದಕ್ಕೆ ಸಾಧ್ಯ.

೨೫. ನರಕಾಂತಕನ ತಂಟೆ, ಈಶ್ವರನ, ಮುರವೈರಿಯ ತಂಟೆ, ವೀರನಾದ ಸಾಲ್ವನ ಕಂಸನ ಮಲ್ಲರನ್ನು ಸೋಲಿಸಿದ ಹರಿಯ ತಂಟೆ, ಗರುಡ ಧ್ವಜನ ತಂಟೆ, ಪರಾತ್ಪುರುಷನ, ಖರಮರ್ಧನನ ತಂಟೆ - ಇದು ಬೇಡ ಎಂದು ಅವರ ಪ್ರತಾಪವನ್ನು ಜನ ಕೇಳುವ ಹಾಗೆ ವಾದ್ಯಗಳಲ್ಲಿ ಊದುತ್ತಿದ್ದಾರೆ.

೨೬. ಆ ವೇಳೆಯಲ್ಲಿ ಮೇಲೆ ಗಗನದಲ್ಲಿ ಸುರಾಸುರರು ವಿಮಾನವನ್ನೇರಿ ಶ್ರೀ ಹರಿಯ ಯಾತ್ರೆಯ ಸಂಭ್ರಮವನ್ನು ನೋಡುತ್ತಿದ್ದರು. "ವಾದ್ಯಘೋಷವ ಮದಾಶ್ವಗಜ, ರಥ, ದಿವ್ಯ ಪದಾತಿಗೆ ಈ ವಿಶ್ವವೇ ಕೆಳಗೆ ತಗ್ಗಿತು" ಎಂದು ಅವರು ಸ್ತುತಿಸಿದರು.

೨೭. ಧರ್ಮರಾಯನು ಪಾದುಕೆಯನ್ನು ಧರಿಸಿ ಮುಂದೆ ನಡೆದನು. ಭೀಷ್ಮನಿಗೆ ಚಾಮರ, ಅರ್ಜುನನಿಗೆ ಛತ್ರ, ವೀಳ್ಯ ಮತ್ತು ಅಡಿಕೆಯನ್ನು ಹಿಡಿದು ನಕುಲ ಸಹದೇವರು ಇಕ್ಕೆಲಗಳಲ್ಲಿ ಇದಿರುಗೊಂಡರು. ಸಾತ್ಯಕಿಯೂ ಮುಕುಂದನ ಪಯಣದೊಂದಿಗಿದ್ದನು.

೨೮. ರಾಜ ಬೀದಿಯಲ್ಲಿ ಶ್ರೀಕೃಷ್ಣ ಬರುತ್ತಿರುವ ಸಂಭ್ರಮವನ್ನು ನೋಡಿ, ರಾಜ ನಾರಿಯರು ಎರಡೂ ಕಡೆಗಳಲ್ಲಿ ಉಪ್ಪರಿಗೆಯನ್ನೇರಿದರು. ಸಂತೋಷದಿಂದ ಅವರನ್ನು ವಂದಿಸಿ, ಸ್ತುತಿಸಿ ಪುಷ್ಪವನ್ನು ಸುರಿಸುತ್ತಾ ಇಡೀ ಜಗತ್ತಿಗೇ ಕೇಳುವಂತೆ ಕೃಷ್ಣನ ಮಹಿಮೆಯನ್ನು ವರ್ಣಿಸಿದರು.

೨೯. ಹೇ ಸಖಿ, ಇವರು ಯಾರೆಂದು ನಿನಗೆ ಮನಸ್ಸಿಗೆ ಗೊತ್ತಿರುವುದೇ? ಭೂಮಿಯನ್ನೆಲ್ಲ ಹೊಟ್ಟೆಯಲ್ಲಿ ಸಂಗ್ರಹಿಸಿರುತ್ತಾರೆ. ಪ್ರಳಯದ ಕಡಲಿನಲ್ಲಿ ಮಲಗಿರುತ್ತಾನೆ. ಮಾಯೆಗೆ ಗಂಡನಾಗಿರುವ ಆನಂದವನ್ನು ಪಡೆದಿರುವ, ಧರೆಯ ರಕ್ಷೆಗೆ ಕಾಣಿಸಿದ ಈಶ್ವರನ ಬಂಧುವಾದ ಮುಕುಂದನೇ ಇವನು.

೩೦. ಕಾಲಾಂತರದಲ್ಲಿ ನಾಭಿಯ ಕಮಲದ ಮೂಲಕ ಪರಮೇಷ್ಠಿಯನ್ನು ಸೃಷ್ಟಿಸಿದನು. ಈ ಲೋಕದ ವ್ಯವಹಾರವನ್ನು ಆತನಿಗೆ ವಹಿಸಿ, ಹದಿನಾಲ್ಕು ಜಗತ್ತನ್ನು ಕಾಲಕ್ರಮದಲ್ಲಿ ತ್ರಿಗುಣಾತ್ಮದಲ್ಲಿ ಪರಿಪಾಲಿಸಿಕೊಂಡು ಬರುವ ಕಾಲಾಂತಕನಾದ ಮಹಾಪುರುಷನೇ ಈತ ಎಂಬುದಾಗಿ ಎಲ್ಲರೂ ಬಲ್ಲರು.

೩೧. ವೇದಗಳನ್ನು ಸೃಷ್ಟಿಸಿ, ಸರ್ವ ಶ್ರುತಿ ಪುರಾಣಾದಿ ರಹಸ್ಯದ ಹಾದಿಯನ್ನು ತೆರೆಸಿ, ರಜೋಗುಣದಲ್ಲಿ ನಿತ್ಯವೂ ಆನಂದಿಸಿ, ಈ ದೇಶವನ್ನು ಸೃಷ್ಟಿಸಿ, ಗೋದ್ವಿಜರನ್ನು ಪರಿಪಾಲಿಸಿದರು ಎನ್ನುವ ದೇವಕಿ ನಂದನನಾದ ಹರಿ ಇವರೆಂಬರು.

೩೨. "ಪ್ರಳಯ ಕಾಲದಲ್ಲಿ ಜಗತ್ತಿನ ಅವಸಾನವಾಗುವಾಗ ಹುಟ್ಟಿದಂತಹ ಕತ್ತಲೆಯನ್ನು ಪ್ರಳಯಾಗ್ನಿಯಿಂದ ಎಲ್ಲವನ್ನೂ ಸಂಹಾರ ಮಾಡಿರುವನಿವನು. ಆಮೇಲೆ ಮಾಯಂಗನೆಯೊಡನೆ ತಾನೊಬ್ಬನೇ ಪ್ರಳಯಕಾಲದಲ್ಲಿ ನಲಿಯುವನಿವನು. ಅತೀತ ಗುಣವುಳ್ಳ ಅತೀ ಗುಣ ಪುರುಷ" ಎಂದಿವನನ್ನು ಕರೆಯುತ್ತಾರೆ.

೩೩. "ವೇದಗಳು ಇವನಿಗೆ ಅಧೀನವಾಗಿ ತಲೆಯಲ್ಲಿ ಇರುವುದೆಂದು ಹೇಳುತ್ತಾರೆ. ವೇದಜ್ಞರು ಹೃದಯ ಕಮಲದಲ್ಲಿ ಇವನನ್ನು ಆರಾಧಿಸುತ್ತಾರೆ ಎನ್ನುತ್ತಾರೆ. ತನ್ನ ಕುರಿತು ಚಿಂತಿಸುವ ಭಕ್ತರ ಕೈಹಿಡಿದು ಹತ್ತಿರ ಎಳೆದುಕೊಳ್ಳುವ ಮಾಯಾವಾದಿ, ಅಮರೋತ್ತಮ, ಭಕ್ತನಿಧಿ" ಎಂದು ಲೋಕ ಇವನನ್ನು ಹೇಳುತ್ತದೆ.

೩೪. "ದುಷ್ಟರು ಭೂಮಿಯಲ್ಲಿ ತುಂಬಿ ಧರ್ಮದಲ್ಲಿ ತುಂಬಿರುವ ಕಟ್ಟೆಯನ್ನು ಕಡಿದು ಆರಿಸುವುದಕ್ಕೆ ಪ್ರಯತ್ನಿಸಿದರು. ತಾಮಸರ ವಧೆಗಾಗಿ ಭೂಮಿಯಲ್ಲಿ ಉದಿಸಿ ದಾರಿಯನ್ನು ನೆಲೆಗೊಳಿಸಿದ ಅಷ್ಟೈಶ್ವರ್ಯಾತ್ಮಕನಾದ ನಾರಾಯಣ ಈತ" ಎಂದರು.

೩೫. ಯಾವ ಪುಣ್ಯದಲ್ಲಿ ತಪವನ್ನು, ಲೋಪವಾಗದಂತೆ ಮಾಡಿ, ಈ ಉತ್ತಮ ಮಹಾತ್ಮನನ್ನು ದೇವಕಿ ಗರ್ಭದಲ್ಲಿ ಧರಿಸುವ ಸಾಧನೆ ಮಾಡಿದಳೋ? ಯಾವ ಪುಣ್ಯವನ್ನು ಮಾಡಿ ಇವನ ಸತಿಯರು ಪೂರ್ಣರಾದರೋ? ಗೋಪ ಕುಮಾರಿಯರ ಭಾಗ್ಯವನ್ನು ಏನೆಂದು ಹೇಳಲಿ ಎನ್ನುತ್ತಿದ್ದರು.

೩೬. ಸಖಿಯೇ ಕೇಳು, ಮೂರು ಲೋಕದ ತಲೆಮಣಿಯಾದ, ಸುಂದರ ಮುಖದ, ಕುಶಸ್ಥಳದ ವಿಭವವನ್ನು ನಾವು ವಿವರಿಸುವುದಾದರೂ ಹೇಗೆ? ಅಖಿಲಾತ್ಮಕನ ಶ್ರೀ ಚರಣವನ್ನು ಎತ್ತಿಹಿಡಿದು ಯಾವಾಗಲೂ ವೇದ ಶಿಖರದಂತೆ ಜಗತ್ತಿನಲ್ಲಿರುವ ಜನರು ವಿರಾಜಿಸುತ್ತಾರೆ.

೩೭. ಇವರ ಗುಣನಾಮಕ್ಕೆ ಸಮಸ್ತ ಪಾಪ ಸಮೂಹಗಳು ತಲ್ಲಣಿಸಿ ನಿಲ್ಲಲಾಗದೆ ಪರದೇಶ ಸೇರುತ್ತವೆ. ಇವರನ್ನು ದೃಷ್ಟಿಸಿದವರಿಗೆ ಮತ್ತೆ ಹುಟ್ಟೆಂಬುದು ಇಲ್ಲ. ಇವರ ಗುಣ ಕೀರ್ತನೆ ಮಾಡುವುದಕ್ಕೆ ವಿಧಿ ನಮಗೆ ಇಂದು ಕೈಗೂಡಿಸಿತು ಎಂದರು.

೩೮. ಹೀಗೆ ಅನೇಕ ವಿಧದಿಂದ ಅನೇಕ ಶತಾವತಾರಗಳನ್ನು ರಹಸ್ಯದ ಕ್ರಮಗಳನ್ನು ಇಕ್ಕೆಡೆಗಳಲ್ಲಿಯೂ ಅಮರಾಂಗನೆಯರು ವಿಸ್ತರಿಸುತ್ತಿದ್ದರು. ಅದನ್ನು ಪರಿಪೂರ್ಣ ಗುಣಾಢ್ಯ ಕೇಳಿ ಅತಿ ಸಂತೋಷಗೊಂಡನು. ಅವರನ್ನು ದಾರಿಯಲ್ಲಿ ನೋಡುತ್ತ ಸಭಾಮಧ್ಯಕ್ಕೆ ರಮೇಶನಾದ ಶ್ರೀಕೃಷ್ಣನು ಬಂದನು.

೩೯. ಹಸ್ತಿನಾಪುರವನ್ನು ದಾಟಿ ಹೊರ ಬಂದ ಮುಕುಂದನು ತನ್ನ ಸೈನ್ಯವನ್ನು ಅಲ್ಲಿಯೇ ಇರಗೊಳಿಸಿದನು. ವಿನಯದಿಂದ "ದ್ವಿಜರು, ಮಾಗಧ, ಸೂತ, ವೈತಾಳಿಕರು ಅರ್ಜುನನೇ ಮೊದಲಾದವರು ಹಿಂಬಾಲಿಸುವುದು ತರವಲ್ಲ" ಎಂದನು.

೪೦. ಸರ್ವರನ್ನೂ ಸಂತೈಸಿ, ಅರ್ಧದಲ್ಲಿಯೇ ನಿಲ್ಲಿಸಿ ಬರುತ್ತಿರುವ ಲಕ್ಷ್ಮೀಕಾಂತನ ಆಗಮನವನ್ನು ನೋಡುವುದಕ್ಕೆ ಅಲ್ಲಲ್ಲಿಯ ಸಮಸ್ತ ಜಂತುಗಳೂ ಬಂದವು. ಅವುಗಳೆಲ್ಲ ಮುಕುಂದನ ಪಾದಕ್ಕೆ ಅಭಿವಂದನೆ ಸಲ್ಲಿಸಿ ಮಂತ್ರಾಕ್ಷತೆ ಪುಷ್ಪವನ್ನೂ ಸಲ್ಲಿಸಿ ಸನ್ಮಾನಿಸಿದರು.

೪೧. ಬಹುದೂರದ ವರೆಗೂ ಶ್ರೀಕೃಷ್ಣನನ್ನು ಹಿಂಬಾಲಿಸಿ ಪಾಂಡವರು ಪರಿವಾರ ಸಹಿತ ಅವರ ಹಿಂದೆಯೇ ಬರುತ್ತಿದ್ದರು. ಇದನ್ನು ಕಂಡ ರಮೇಶನು ರಥವನ್ನಿಳಿದು ಅವರನ್ನು ಆಲಿಂಗಿಸಿಕೊಂಡು ಅನೇಕ ತೆರನಾಗಿ ಸನ್ಮಾನಿಸಿ ಹಿಂದಿರುಗಿ ಎಂದು ಅವರಿಂದ ಬೀಳ್ಕೊಂಡನು.

೪೨. ದೇಹ ರಕ್ಷೆಗೆ ಚತುರಂಗ ಸೈನ್ಯವನ್ನು ಕಳುಹಿಸಿ ಧರ್ಮರಾಯನು ಆ ಹರಿಗೆ ನಮಿಸಿದನು. ಮನಸ್ಸಿನಲ್ಲಿ ಅವರನ್ನೇ ಚಿಂತಿಸುತ್ತಾ ಮರಳಿದನು. ಹಾಗೆ ನೋಡಿದರೆ ಸಚರಾಚರವೆಲ್ಲವೂ ಆತನ ದೇಹ ರಕ್ಷೆಗೇ ಇದ್ದವು. ಮೋಹನಾಕೃತಿಯಿಂದ ಇಹದ ಮದವು ಹೋಗುತ್ತಿದೆಯೋ ಎಂಬ ಹಾಗೆ ಆತನು ಹೋಗುತ್ತಿದ್ದನು.

೪೩. ಕುರುಜಾಂಗಣವನ್ನು ಕಳೆದು, ಮಹಾಪಾಂಚಾಲ, ನಿತಾಖ್ಯ ನಗರಗಳನ್ನು ದಾಟಿ, ಬ್ರಹ್ಮ ಸಂವರ್ತ ಮೊದಲಾದ ಹಲವು ದೇಶಗಳನ್ನು ಗಮಿಸಿದನು. ಮಧ್ಯದಲ್ಲಿರುವ ಮತ್ಸ್ಯ ಸರಸ್ವತಿ, ಸಂವೀರ, ಮರುದ್ಧಾ ರಾಜ್ಯಗಳನ್ನು ಮುಂದೊತ್ತಿ ಯದುನಾಥನು ಕ್ಷಣದಲ್ಲಿ ಯಾತ್ರಿಸಿದನು.

೪೪. ಹಸ್ತಿನಾಪುರದಿಂದ ಪ್ರಾರಂಭಿಸಿದ ಶ್ರೀಹರಿ ಆನರ್ತದೇಶದ ವರೆಗೆ ತೆರಪಿಲ್ಲದೆ ಸೈನ್ಯದೊಂದಿಗೆ ಬಂದನು. ಸರ್ವರು ದಶದಿಕ್ಕಿನಲ್ಲಿಯೂ ಹೆಚ್ಚಿ ತುಳುಕಾಡುತ್ತಿರುವ ಪ್ರಜಾಸಾಗರವನ್ನು ನೋಡಿ ಆಶ್ಚರ್ಯಗೊಂಡರು.

೪೫. ದಾರುಕನನ್ನು ಕರೆದು ರಥವನ್ನು ನಿಲ್ಲಿಸಿ ಹೀಗೆ ಹೇಳಿದನು "ದೂರ ಪ್ರಯಾಣದ ಆಯಾಸ ಕುದುರೆಗಳಿಗಾಗಿದೆ. ಈಗಾಗಲೇ ರವಿಕಿರಣಗಳು ಪಶ್ಚಿಮ ಸಮುದ್ರದತ್ತ ಜಾರುತ್ತಿವೆ. ಇಂದು ಇಲ್ಲಿಯೆ ನಿಂತು, ನಾಳೆ ನೇರವಾಗಿ ಪಟ್ಟಣವನ್ನು ಪ್ರವೇಶಿಸುವ" ಎಂದನು.

೪೬. ಸಾತ್ಯಕಿಯ ಮತದಿಂದ ಸರ್ವರೂ ರಾತ್ರಿ ಬಂತೆಂದು ಆನರ್ತ ದೇಶದ ನಡುವಿನಲ್ಲಿಯೇ ಪಾಳಯವನ್ನಿರಿಸಿದನು. ಸರ್ವ ಪದಾತಿ ಸೇನೆ ಸಮಸ್ತರು ಮನಸ್ಸಿನಲ್ಲಿ ಶ್ರೀಕೃಷ್ಣನನ್ನೂ ವಂದಿಸಿ ಗುಡಿ ಕಟ್ಟಿ ಸುಖಿಸಿದರು.

೪೭. ಸೂರ್ಯಕಿರಣಗಳ ಕಾಂತಿಯನ್ನು ನಕ್ಷತ್ರ ಸಮೂಹಗಳು ನಿರ್ವೀರ್ಯಗೊಳಿಸಿದವು. ರವಿಯನ್ನು ನಿರ್ಮಿಸಿದ ಬ್ರಹ್ಮನ ದೇಹ ಪ್ರಭೆಯಿಂದ ಅವುಗಳಿಗೆ ರಾಜಸವುಂಟಾಯಿತು. ಲೋಕದಲ್ಲಿ ಸಾತ್ವಿಕವೂ ರಾಜಸವೂ ಇಲ್ಲ, ತಮವೇ ಎಂದು ವಿವರಿಸುವ ಹಾಗೆ ರಾತ್ರಿ ದಶದಿಕ್ಕುಗಳಿಗೂ ಕವಿಯಿತು.

೪೮. ಆಮೇಲೆ ತಾವರೆಯಂತಹ ಕಣ್ಣುಗಳುಳ್ಳ ಉದ್ಧವನ ಕೈ ಹಿಡಿದು ಶ್ರೀ ಕೃಷ್ಣನು ಕೆಳಗೆ ಇಳೆಗೆ ಇಳಿದನು. ಸಂಜೆಯ ಸಂಧ್ಯಾಕರ್ಮವನ್ನು ಮುಕುಂದ ಅಂದು ಮುಗಿಸಿದನು. ಬಳಿಕ ಅಮೃತವಾದಂತಹ ಭೋಜನವನ್ನು ಮಾಡಿ ತಾಂಬೂಲವನ್ನು ಉಪಯೋಗಿಸಿ, ಮನಸ್ಸಿನಲ್ಲಿ ಸುಖಿಸುತ್ತಾ ಸಂತೋಷದಿಂದ ನಿದ್ರಾ ರಜನಿಯ ವಶವಾದನು.

೪೯. ಇಲ್ಲಿಗೆ ಒಂಭತ್ತನೆಯ ಅಧ್ಯಾಯವಾಯಿತು. ಇದನ್ನು ವಿವರಿಸಿ, ವಾಚಿಸಿ, ಪೂಜಿಸಿದರೆ ಕೈವಲ್ಯವೆಂದು ಕವಿಗಳು ವೇದ ಪ್ರಮಾಣವಾಗಿ ಹೇಳುತ್ತಾರೆ.

ಅಧ್ಯಾಯ ೧೦

೧. ವಾರಿಜಾಸನನ ಹೆಂಡತಿಯಾದ ಶಾರದೆಯನ್ನು ಮನಸ್ಸಿನಲ್ಲಿ ಧ್ಯಾನಿಸುತ್ತೇನೆ. ಮುರಾರಿಯ ಮಗನಾದ ಬ್ರಹ್ಮನಿಗೆ ಎರಗುತ್ತೇನೆ. ಘೋರವಾದ ಸೈನ್ಯಸಾಗರದೊಂದಿಗೆ, ಅಸುರಾರಿಯಾದ ಶ್ರೀಕೃಷ್ಣನು ದ್ವಾರಕೆಯನ್ನು ಪ್ರವೇಶಿಸಿದ ಕಥೆಯನ್ನು ಹೇಳುತ್ತೇನೆ.

೨. ಮುನಿಮುಖ್ಯರಿಗೆ ಸೂತನು ಮುಂದಿನ ಕಥೆಯನ್ನು ಹೇಳತೊಡಗಿದನು. ಕಮಲನಾಭನು ಆನರ್ತ ಸುರಾಷ್ಟ್ರದಲ್ಲಿ ತುಂಬ ಸಂತೋಷದಿಂದ ಮಲಗಿರುವ ಸನ್ನಿವೇಶದಲ್ಲಿ ಸೂರ್ಯ ರಶ್ಮಿ ಉದಿಸಿ ಮೂಡಣದಲ್ಲಿ ತೋರ ತೊಡಗಿತು.

೩. ಹಾಲಿನ ಕಡಲಿನಿಂದ ಬರುವ ಜ್ವಾಲಾಮಾಲೆಯ ಚಕ್ರವೋ, ಮೂಡಣ ದಿಕ್ಕು ಎಂಬ ಹೆಣ್ಣಿನ ಕಿವಿಯ ಓಲೆಯೋ, ರವಿಯ ರಥವ ಗಾಲಿಯೋ ಎಂಬಂತೆ ಹರಿ ಓಲಗಕ್ಕೆ ಬರುವ ಸನ್ನಿವೇಶದಲ್ಲಿ ಸೂರ್ಯ ಮಂಡಲ ರಂಜಿಸಿತು.

೪. ಉದಯ ಪರ್ವತದ ತುದಿಯಲ್ಲಿ ಉದಿಸಿದ ಭಾಸ್ಕರನನ್ನು ನೋಡಿ ದುಃಖಿಸಿದ ತಾರಕೆಗಳು ಎಲ್ಲಿಗೋ ಓಡಿದವು. ಚಂದ್ರನು ಮುಖವನ್ನು ಮರೆಗೊಳಿಸಲು ಕತ್ತಲೂ ಮರೆಯಾಯಿತು. ಮಹಲೋಕದಲೆಲ್ಲ ದುಂಬಿಗಳು ಕಮಲದ ದ್ವಾರವನ್ನು ಹೊಕ್ಕವು.

೫. ಕರ ಕಮಲದ ಪುಟದ ಅರುಣಾಂಗ ಪ್ರಭೆಯ ನಡುವಿನಲ್ಲಿ ಬಿಳಿಯ ಬಣ್ಣದಾಗಿರುವ ಶಂಖವನ್ನು ಧರಿಸಿ, ಕೆಂಪಾದ ತುಟಿಯಲ್ಲಿ ಇರಿಸಲು, ಅಂಜನಾ ಪರ್ವತದ ತುದಿಯ ಕೆರೆಯ ನೀರಿನಲ್ಲಿರುವ ತಾವರೆಯ ಮಧ್ಯದಲ್ಲಿ ವಿರಾಜಿಸುವ ಕಳಹಂಸದ ಸೊಬಗನ್ನು ಅದು ನಾಚಿಸಿತು.

೬. ಭವ ಸಾಗರವನ್ನು ಹರಿಸುವಂತಹ, ರಾಜಿಸುವ ಶಂಖಧ್ವನಿಯನ್ನು ಕೇಳಿ ತವಕದಲ್ಲಿ ನಾನಾ ದಿಶೆಯಲ್ಲಿ ಎಲ್ಲರೂ ಸಂಭ್ರಮಿಸಿದರು. ಶುಭ್ರವಾಗಿ ರಾಜ್ಯದ ಜನರೆಲ್ಲರೂ ಅಲಂಕರಿಸಿಕೊಂಡು ಶ್ರೀಕೃಷ್ಣನನ್ನು ವಂದಿಸಿ ಕಾಣಿಕೆಯನ್ನೆಲ್ಲರೂ ಒಪ್ಪಿಸಿದರು.

೭. ನಡು ಬೇಸಿಗೆಯಲ್ಲಿ ಆರಿ ಹೋದ ನದಿಗಳಿಗೆ ಮಳೆ ಸುರಿಯಲು ಕೆರೆಯನ್ನು ಮೀರಿ, ಘೋಷಿಸಿ, ಓಗ್ಗಿನಾನಾ ದಿಶೆಯಿಂದ ಹರಿದು ಸಾಗರವನ್ನು ಪ್ರವೇಶಿಸುತ್ತವೆ. ಆ ರೀತಿಯಲ್ಲಿ ಹೃದಯದ ವಿರಹದಲ್ಲಿ ಅಚ್ಯುತನಿಗೆ ವಿಧಿಪೂರ್ವಕವಾಗಿ ಅವರೆಲ್ಲರೂ ಕಾಣಿಸಿಕೊಂಡರು.

೯. ಜಯಾ ದೇವ! ಜಯಾ ತ್ರಿಗದ್ಸರಿತಾ! ಜಯಾ ಲೋಕ ಮಹೇಶ! ಜಯಾ ಮೃತ್ಯು! ಜರೆಯನ್ನು ಪರಿಹರಿಸುವ! ಜಯಾ ಪಾಪವಿನಾಶ! ಜಯಾ ಕಂಟಕಹಾರಿ! ಬ್ರಹ್ಮವಂದಿತ! ಜಯಾ! ಮಾಯಾಪಹಾರಿ! ಜಯ ದೇವ! ಧನಂಜಯ! ನಿತ್ಯ! ನಿಧಿಯೇ! ಜಯಾ ಜಯಾ! ರಕ್ಷಿಸು! ನಮಸ್ತೆ ಎಂದರು.

೧೦. ತಾಯಿಗಿಂತಲೂ ನೂರ್ಮಡಿ ಪ್ರೀತಿಯಿಂದ ರಕ್ಷಿಸುವ ನಿಮ್ಮ ದಿವ್ಯ ಕಟಾಕ್ಷದ ಪ್ರೀತಿಯನ್ನು ತಿಳಿಯದೆ ಹೋದೆವು. ಅತಿಯಾದ ದಂಡನೆಯಿಂದಲೂ ಆಯುಷ್ಯ ಮದದಿಂದಲೂ ಬರುವ ಗುಣದೋಷವನ್ನು ತಿಳಿಯದೆ ಮೃತ ಜೀವಿಗಳಾಗಿದ್ದೇವೆ. ಸತ್ಪಾತ್ರ! ಜಗನ್ಮಯ! ರಕ್ಷಿಸಬೇಕು ಎಂದು ಅವರು ಅಭಿವಂದಿಸಿದರು.

೧೧. ಅಭಯ ಕರದಿಂದ ಎಲ್ಲರನ್ನೂ ಕರೆದು, ಹಾಸ್ಯ ರಸದಿಂದ ಸತ್ಕರಿಸಿ, ಸಂಭಾವಿಸಿ, ಅನೇಕ ವಿಭವದಿಂದ ಎಲ್ಲರನ್ನೂ ಉದ್ಧರಿಸಿದನು. ಅವರಿಂದ ಬೀಳ್ಕೊಂಡು ಶ್ರೀಹರಿಯು ಹರ್ಷೋದ್ಗಾರಗಳೊಂದಿಗೆ ದಿವ್ಯ ರಥವನ್ನೇರಿ ಮೆಲ್ಲನೆ ನಡೆದನು.

೧೨. ದ್ವಾರಕಾ ಪುರಿಗೆ ಶ್ರೀಕೃಷ್ಣ ಯಾತ್ರೆ ಮಾಡುತ್ತಿರಲು ಬಹು ವೇಗದಿಂದ ಉಗ್ರಸೇನನಲ್ಲಿಗೆ ದೂತರು ಹೋಗಿ ಹೀಗೆ ಹೇಳಿದರು "ಶ್ರೀ ರಮಾಕರ ಬಂದನು, ಮುರಾರಿ ಬಂದನು, ಭಕ್ತರನ್ನು ಪ್ರೇರಿಸುವ ಮುಕುಂದನಾದಂತಹ ಶ್ರೀಕೃಷ್ಣ ಸತ್ಯವಾಗಿಯೂ ಬಂದನು" ಎಂದರು.

೧೩. ಇದೋ ಯಾದವನಿಧಿ ಬಂದನು; ಚಾಣುರಾಂತಕ ಬಂದನು. ಭೂಮಿಯನ್ನು ಅಳೆದು ಮೂರು ಹೆಜ್ಜೆ ಮಾಡಿದ ವಾಮನ ಬಂದನು. ಚೇದಿ ಭೂಪತಿಯ ವೈರಿ ಬಂದನು. ವೇದ ಗೋಚರ ಬಂದನು. ಮಾಧವ, ಮಧುಕೈಟಭಾಂತಕ ಇದೋ ಹತ್ತಿರಕ್ಕೇ ಬಂದನು.

೧೪. ಬೇಗನೇ ಚಾವಡಿಯನ್ನು ಅಲಂಕರಿಸು. ಧ್ವಜ ತೋರಣಾದಿಗಳು ನಿಲ್ಲಲಿ. ಶ್ರೀ ಗೃಹಗಳ ಶೃಂಗಾರವಾಗಲಿ ಹಾಸಿಗೆ ಮಂಚದಲ್ಲಾಗಲಿ. ನಾಗರೀಕರು ಸಮಸ್ತರೂ ಕೂಡಲಿ; ಕೇರಿ ನಿರ್ಮಲವಾಗಲಿ. ಆಗಮಜ್ಞರನೆಲ್ಲ ಕೂಡಿಸು, ಇದೋ ಹತ್ತಿರದಲ್ಲಿಯೇ ಶ್ರೀಹರಿ ಬರುತ್ತಿದ್ದಾರೆ.

೧೫. ಈ ವಾರ್ತೆಯನ್ನು ಕೇಳಿದಾಗ ಹರ್ಷದಿಂದ ಕಣ್ಣುಗಳು ತೆರೆದುಕೊಂಡು ಸಮುದ್ರದಂತೆ ಅಂತ್ಯವಿಲ್ಲದೆ ಹರ್ಷಜಲ ಸುರಿಯಿತು. ಭಂಡಾರದ ಬಾಗಿಲನ್ನು ತೆರೆದು ಸಮಸ್ತ ಧನವನ್ನು ಕೈಗೆ ಕೊಡುವ ಆ ವಿಸ್ಮಯವನ್ನು ತಿಳಿಯದ ಜನಕ್ಕೆ ಹೇಗೆಂದು ವರ್ಣಿಸಲಿ!

೧೬. ಬಲರಾಮ, ಗದಾ, ಅನಿರುದ್ಧ, ಅತ್ಯುತ್ಸವದ ಸಾಂಬ, ಸಾರಣಾದಿಗಳು ಬಂದರು. ಉಳಿದ ಬಹುಸೈನ್ಯ ತಮ್ಮ ತಮ್ಮ ಪತ್ನಿಯರನ್ನು ಅಲಂಕರಿಸಿ, ಕೃಷಿಯಾದಿ ಕೆಲಸ ಕಾರ್ಯಗಳನ್ನು ತ್ಯಜಿಸಿ, ರೂಪಾನ್ವಿತನನ್ನು ನೋಡುವುದಕ್ಕೆ ಸಮಸ್ತರೂ ಅಲ್ಲಿಗೆ ಬಂದು ತುಂಬ ನೆರೆದರು.

೧೭. ಗುಡಿಯನ್ನು ಕಟ್ಟಿದರು. ತೋರಣವನ್ನು ರಚಿಸಿದರು. ಧ್ವಜವನ್ನೇರಿಸಿ, ಗಜಾಶ್ವ ರಥವನ್ನು ಅನುಮಾಡಿ ಸಮಸ್ತ ಸೈನ್ಯವೆಲ್ಲವೂ ಕೂಡಿತು. ಹಾಡುತ್ತಾ ವಸ್ತ್ರ, ಆರತಿಯನ್ನು ತಟ್ಟೆಯಲ್ಲಿಟ್ಟು (ಕಳಶ) ಕನ್ನಡಿಯೊಂದಿಗೆ ಪೂರ್ಣಕುಂಭ ಸ್ವಾಗತಗೈಯುವುದಕ್ಕೆ ಯಾದವರು ಬರುತ್ತಿದ್ದರು.

೧೮. ಕೊಂಬು, ಕನ್ನಡಿ, ಸನ್ನೆ, ಗೋಮುಖ, ನಗಾರಿಯ ಧ್ವನಿ. ತಮ್ಮಟೆಯ ಸ್ಪಂದನ, ಢಕ್ಕೆ, ಚಾರುಳಿ, ಕಂಟೆ, ಕೈದುಡಿ, ತಾಳೆ, ಶಂಖ, ಕೈಮಣಿ, ಕೊಳಲು, ವೀಣೆ, ಮೃದಂಗ, ನಾಗಸ್ವರಗಳ ಸಮುದ್ರದಂತಹ ಘೋಷದೊಂದಿಗೆ ಶ್ರೀಹರಿಗೆ ಅವರು ಎದುರಾದರು.

೧೯. ಸೂತ, ಮಾಗಧ, ವಂದಿಭಟ, ಪಾಠಕರು, ಹಾಸ್ಯಗಾರರು, ಬ್ರಾಹ್ಮಣರು, ಗಾಯಕರು, ನೃತ್ಯ -ನಾಟಕಕಾರರು, ಚತುರರಾದ ವಿನೋದ ಕಾರರು, ಹೊಗಳು ಭಟ್ಟರು. ಇವರೆಲ್ಲ ಆನಂದ ಪಡಿಸುತ್ತಿರಲು ಪ್ರೀತಿಯಿಂದ ಶ್ರೀಕೃಷ್ಣನು ಕುದುರೆಗಳನ್ನೇರಿ ಮುಂದೆ ಹೊರಟನು.

೨೦. ಸುಂದರವಾದ ಮುಖದವರು, ಶುಭ್ರವಾದ ಅಂಗದವರೂ ಎತ್ತರದ ಸ್ತನವುಳ್ಳವರು, ಓರೆಯಾದ ಕೂದಲುಳ್ಳವರು, ದಪ್ಪಗಿನ ಜಂಘೆಯವರು, ಕಟಿಸೂತ್ರದ ಧ್ವನಿಯವರು, ಅತ್ಯಂತ ಸಣ್ಣ ಸೊಂಟವಿರುವವರು, ಕಾಮಶಾಸ್ತ್ರ ಪರಿಣತರು ಶ್ರೀಕೃಷ್ಣನ ವಿರಹದ ಕಾಳ್ಗಿಚ್ಚನ್ನು ತಾಳಲಾರದೆ ಅವನಿಗೆ ಎದುರಾಗಿ ಬರುತ್ತಿದ್ದರು.

೨೨. ಮುಂದೊಂದು ರಥದಲ್ಲಿ ಯಾದವರಾಜನಾದ ಉಗ್ರಸೇನ, ವಸುದೇವ, ಬಲರಾಮ, ಅಕ್ರೂರ ಮೊದಲಾದವರಿದ್ದರು. ಅವರ ಕುಮಾರರ ಹಿಂಬದಿಯಲ್ಲಿ ವಿಸ್ತಾರವಾದ ಯಾದವ ಸೈನ್ಯ ಘೂರ್ಣಿಸತೊಡಗಿತು. ಚಂದ್ರನು ಮೂಡಿದಾಗ ಸಮುದ್ರ ಎದುರು ಬರುವ ರೀತಿಯಲ್ಲಿ ಅವರು ಜಯಘೋಷ ಮಾಡಿದರು.

೨೩. ಬ್ರಾಹ್ಮಣರ ಸಮೂಹವು ಮಂತ್ರದ ನಾಲ್ಕು ಸಾಲುಗಳನ್ನು ನಾಲಗೆಯಿಂದ ಎಡೆಬಿಡದೆ ಪಠಿಸುತ್ತಿತ್ತು. ಕೈಯಿಂದ ಮಂತ್ರಿಸಿದ ಅಕ್ಷತೆಯನ್ನು ಹಿಡಿದು ಸರ್ವ! ಸರ್ವ ಜಗನ್ಮಯಾ! ಪರಿಪೂರ್ಣ! ಸಮುದ್ರಕ್ಕೆ ಚಂದಿರನೇ ಪರ್ವತವನ್ನು ಅಂಗೈಯಲ್ಲಿ ಎತ್ತಿದ ಕೃಷ್ಣನೇ ನಮೋಸ್ತು ಎಂದು ಇದಿರ್ಗೊಳುತ್ತಿದ್ದರು.

೨೪. ದೂರದಲ್ಲಿ ನಿರೀಕ್ಷಿಸಿ ಶ್ರೀಕೃಷ್ಣನು ಮೆಲ್ಲನೆ ರಥದಿಂದ ಇಳಿದು, ತನ್ನ ಶುಭಕರವಾದ ಎರಡು ಪಾದಗಳನ್ನು ಭೂಮಿಯಲ್ಲಿ ಇರಿಸಿದನು. ಆಮೇಲೆ ಅಣ್ಣನ, ವಸುದೇವನ, ಉಗ್ರಸೇನನ, ವಿಪ್ರವರ್ಗದ, ಜ್ಯೇಷ್ಠರ ಪಾದಗಳಿಗೆ ವಂದಿಸಿದನು.

೨೫. ಉಚಿತೋಚಿತವಾಗಿ ಅಲ್ಲಿಯ ಸಮಸ್ತರನ್ನು ಅಲ್ಲಿ ಸನ್ಮಾನಿಸಿದನು. ಮೃದು ವಚನ ಗುಣದಿಂದ ಸೈನ್ಯ ಸಮೂಹವನ್ನು ಆಧರಿಸಿ, ಶ್ವಪಚ, ಅಂತ್ಯಜ, ಮೊದಲಾದವರು ಹತ್ತಿರದಿಂದ ನೋಡುವಂತೆ ಕುಂದು ಬರದಂತೆ ಸಚರಾಚರ ಮೂರ್ತಿ ಮನ್ನಿಸಿದು ಜಗತ್ತಿಗೇ ಆಶ್ಚರ್ಯವಾಗುವಂತಹದು. (ಕೃಷ್ಣನು ಯಾರಿಗೂ ಭೇದ ಮಾಡಲಿಲ್ಲ ಎಂದು ಭಾವ.)

೨೬. ಹರಿಯನ್ನು ನೋಡಿ ಎಲ್ಲ ಜನರೂ ಎದುರಾಗಿ ವಂದಿಸಿದರು. ಸಮಸ್ತ ಪರಿವಾರವೂ ಮುರಾಂತಕನ ಶರೀರವೆಂಬ ನದಿಯ ಅಮೃತದಲ್ಲಿ ಮುಳುಗಿ, ದಡವನ್ನು ಕಾಣಲಾರದೆ ಕರುಣಾಕರ ಮೂರ್ತಿಯ ಕೈಯನ್ನು ಎಲ್ಲರು ಹಿಡಿದರು. ಆಮೇಲೆ ಯಾತ್ರೆಗುಪಕ್ರಮಿಸಲಿಕ್ಕೆ ರಥವನ್ನೇರಿದರು.

೨೭. ಪುರದ ಲಕ್ಷ್ಮಿಯನು, ಸರೋವರದ ತಾವರೆಯನ್ನು, ಕಳಹಂಸದ ಗೀತವನ್ನು ಮರಿ ತುಂಬಿಯ ಗಾನವನ್ನು ಕೋಗಿಲೆಯ ಕಳರವ ವಿನೋದವನ್ನು ಮರದಲ್ಲಿರುವ ಪುಷ್ಪ, ಫಲದ ಮಾರುತ ಗಂಧವನ್ನು ತ್ವರೆಯಿಂದ ಈಕ್ಷಿಸಿ ಮೆಲ್ಲನೆ ಅಚ್ಯುತನು ಯಾತ್ರಿಸಿದನು.

೨೮. ಶುಭ ಮುಹೂರ್ತ ದಿನದಂದು ವರಬ್ರಹ್ಮಾದಿಗಳು ಬಂದರು. ಸುರ ಮಾಗಧ ಮಂದಿಯ ಸ್ವಸ್ತೀ ವಚನಗಳ ಘೋಷಣೆಯಾಯಿತು. ಬಹುವಿಧವಾದ ವಿಭವಗಳಿಂದ, ವಾದ್ಯರವದ ಆನಂದ ಸಂಭ್ರಮದಿಂದ ಧಾತ್ರೀಧರನಾದ ಶ್ರೀಕೃಷ್ಣನು ಶುಭಮಂಗಲ ಮುಹೂರ್ತದಲ್ಲಿ ರಾಜಗೃಹವನ್ನು ಪ್ರವೇಶಿಸಿದನು.

೨೯. ಪುರದ ಗೋಪುರದ ಮಾರ್ಗದ ಇಕ್ಕೆಡೆಗಳಲ್ಲಿಯೂ ವಿಚಿತ್ರವಾದ ಪತಾಕೆಯನ್ನು ಇರಿಸಿದ್ದರು. ತರತರವಾಗಿ ಕಟ್ಟಿದ ತೋರಣ, ಕಬ್ಬಿನ ಗೊಂಚಲು, ಕದಳೀ ಫಲಗಳ ಸುಂದರವಾದ ಬೆಡಗು, ದೃಷ್ಟಿ ದೋಷವನ್ನು ನಿವಾಳಿಸುವ ವಸನಗಳ ಶಿಸ್ತಿನ ಸಾಲುಗಳು ಸ್ವರ್ಗಲೋಕವನ್ನು ಹಾಸ್ಯ ಮಾಡುತ್ತಿದ್ದವು. ಆ ಪುರಲಕ್ಷ್ಮಿಯನ್ನು ನೋಡುತ್ತಾ ಅವರು ನಡೆದರು.

೩೦. ಮನೆ ಮನೆಯ ಬಾಗಿಲಲ್ಲಿ ವಿರಾಜಿಸುವ ಮುತ್ತೈದೆಯರ ಸಮೂಹವು 'ಕಂಚಿನಕ್ಕಿ' ಕನ್ನಡಿ ಕಲಶವನ್ನು ಎತ್ತಿಕೊಂಡು, ಅರಳಿದ ಕಮಲದಂತಿರುವ ಕಣ್ಣುಗಳ ಶ್ರೀಹರಿಗೆ ಆರತಿ ಮಾಡುವುದನ್ನು ಮೆಲ್ಲನೆ ನೋಡಿ ನಗರದೊಳಗೆ ಅಸುರಾರಿಯಾದ ಶ್ರೀಕೃಷ್ಣನು ಪ್ರವೇಶಿಸಿದನು.

೩೧. ಮೇಲೆ ಬಟ್ಟೆಯ ಪಟ್ಟೆಯಲ್ಲಿ ಅಲಂಕರಿಸಿದ ಬಹು ಚಿತ್ತಮಯ ಭಿತ್ತಿ, ನವರತ್ನ ಚಿತ್ರಮಯವಾದ ಆಸ್ಥಾನ ವಿಶೇಷ, ಇಳಿಯಬಿಟ್ಟಿರುವ ಹೂಮಾಲೆಯ ಕಲಶಗಳ ವಿಸ್ತಾರ ವಿಶೇಷಗಳನ್ನು ನೋಡಿ ರಾಜಾಲಯದ ಒಳ ಪ್ರವೇಶಿಸಿದನು, ಶ್ರೀಕೃಷ್ಣ.

೩೨. ಯದುವಲ್ಲಭನ ಆಗಮನವನ್ನು ಅರಮನೆಯ ಒಳಗಡೆಯಿರುವ ಸುಂದರಿಯರು ಕೇಳಿ ಅತಿ ವಿಹ್ವಲಿತರಾದರು. ಮನದಲ್ಲಿ ಮರುಳಾಗಿ ತೊಡಗಿರುವ ಕೆಲಸವನ್ನು ಅಲ್ಲಲ್ಲಿಯೇ ಬಿಟ್ಟು, ಬೇಗನೇ ನಾನಾ ಸ್ಥಳಗಳಿಂದ ಓಡೋಡಿ ಬಂದರು.

೩೩. ಎಲೆಯ ಊಟವನ್ನು ಚೆಲ್ಲಿ ಮಕ್ಕಳು ಕೈಬೀಸಿ ನೆಗೆದೋಡಿದರು. ಕರುವನ್ನು ಕೊಟ್ಟಿಗೆಯಲ್ಲಿ ಕಟ್ಟಿದರು. ಉಪ್ಪರಿಗೆಯನ್ನು, ಮಹಲುಗಳನ್ನು, ಗೋಪುರವನ್ನು, ಜಗುಲಿಯನ್ನು, ಗಂಡನನ್ನೂ ಬಿಟ್ಟು, ಬಳಲಿಕೆಯಿಂದ ಕಿಟಕಿಯ ಬಳಿಯಲ್ಲಿ ನಿಂತು ಶ್ರೀಕೃಷ್ಣನನ್ನು ನೋಡತೊಡಗಿದರು.

೩೪. ಎಷ್ಟು ಮೋಹನ ಶಕ್ತಿಯಿರುವ ಮೂರ್ತಿಯೋ, ಎಷ್ಟು ಸದ್ಗುಣ ಮೂರ್ತಿಯೋ ಎಷ್ಟು ಲೋಕ ಜಗತ್ತನ್ನು ಆಕರ್ಷಿಸುವ ಸೌಖ್ಯ ಸಮರ್ಥನೋ ಎಂಬುದನ್ನೆಲ್ಲ ತಿಳಿಯುವುದಕ್ಕೆ ಯಾರು ಸಮರ್ಥರು? ಮಹಾ ಸಮುದ್ರಗಳು ಇವರ ಸ್ಥಿತಿಯನ್ನು ನೋಡಿ ಸೋತವಲ್ಲವೇ? ಇವರ ಹೃದಯದಲ್ಲಿ ನೆಲೆಸಿದ ಶ್ರೀ ವಧು ಸತ್ಯವಾಗಿಯೂ ಧನ್ಯಳು.

೩೫. ದಿಕ್ಪತಿಗಳು ಭುಜವನ್ನು ಆಶ್ರಯಿಸಿದರು. ಹೃದಯಾಂಬುಜದಲ್ಲಿ ಯೋಗಿಗಳು ಯಾವಾಗಲೂ ಭಜಿಸುತ್ತಾರೆ. ಉರಸ್ಥಳದಲ್ಲಿ ನಿಜಮಂದಿರವನ್ನು ಲಕ್ಷ್ಮೀ ಕಲ್ಪಿಸಿದಳು. ಮತ್ತಲ್ಲಿ ಎಲ್ಲಿಯೂ ಎಡೆಯಿಲ್ಲವೆಂದು ಗುರುವಾದ ಅವನ ಮುಖವನ್ನೇ ನಾನಾ ಜನದೃಷ್ಟಿ ದೃಷ್ಟಿಸಿದವು.

೩೬. ಪಲ್ಲವಗಳು, ಛತ್ರ, ಚಾಮರ, ಬಾವುಟ, ಸಳೆ, ಸೀಗುರಿ, ಝಲ್ಲರಿ ಕೊಡಿ, ಧ್ವಜ, ಅಲ್ಲಾಡುತ್ತಿರುವ ಒಳ್ಳೆಯ ಪತಾಕೆ. ರಂಜಿಸುತ್ತಿದ್ದವು. ಅಂಬರದಲ್ಲಿರುವ ಅಮರರು ಉಲ್ಲಾಸಗೊಂಡು ವಾದ್ಯ ಘೋಷಗಳಿಂದ ಮೇಲಿನಿಂದ ಮಲ್ಲಿಗೆಯೇ ಮೊದಲಾದ ಗಂಧವೃಷ್ಟಿ ಕರೆಯುತ್ತಿರಲು ಶ್ರೀಕೃಷ್ಣ ಬರುತ್ತಿದ್ದನು.

೩೭. ಜತೆಯಲ್ಲಿ ಇರಲಿ, ಬೇರೆ ವಾಸವಾಗಿರಲಿ, ಪುಳಕದಿಂದಾಗಿ ಅವನನ್ನು ನೋಡುವ ಕಂಗಳನ್ನು ಎಣಿಸಲು ಸಾಧ್ಯವಾಗುವ ಪ್ರಭು ಯಾರೂ ಇಲ್ಲ. ಭೂಮಿಗೆ ಒಡೆಯರಾದ ಅವನ ಒಡಲಿನ ಸುಧಾರಸವನ್ನು ದೃಷ್ಟಿಯಲ್ಲಿ ಹೀರಿ ನಮಗೆ ಮರಣ ಒದಗಲಿ ಎಂಬ ದೃಷ್ಟಿಯ ಜನರೇ ಅಲ್ಲಿ ನೆರೆದಿದ್ದರು.

೩೮. ಸರ್ವ ಪರಿವಾರದವರೂ ನಿಲ್ಲಿರಿ. ಬಲವಂತರೆಲ್ಲರೂ ನಿಲ್ಲಿರಿ. ಬ್ರಾಹ್ಮಣರು ನಿಲ್ಲಿರಿ. ಯುವತೀ ಜನರೂ ನಿಲ್ಲಿರಿ. ಯದುನಾಯಕರು ನಿಲ್ಲಿರಿ. ರಾಜರು ನಿಲ್ಲಿರಿ ಎಂದು ಉತ್ತಮ ವಚನದಲ್ಲಿ ಬೋಧಿಸಿ ತಾನು ನಗರವನ್ನು ಪ್ರವೇಶಿಸಿದನು.

೩೯. ದೇವಾದಿಗಳೂ, ಮುನಿಗಳೂ ವಂದಿಸುವ ಪಾದ ಕಮಲದ ಶ್ರೀಹರಿಯು ಪುರದ ಒಳಗೆ ಹೋಗಿ ದೇವಕಿಯ ಪಾದಕಮಲದಲ್ಲಿ ಎರಗಿದನು. ಆ ಕ್ಷಣವೇ ಬರಸೆಳೆದು "ದೇವಾದಿದೇವ, ಸಮಸ್ತ ಜೀವ ಚರಾಚರಾತ್ಮಕ ಬಾ" ಎಂದು ಆ ದೇವರಾದ ಕೃಷ್ಣನನ್ನು ಅಪ್ಪಿಕೊಂಡಳು. ಅವಳು ಹರ್ಷಿಸಿದ ಭಾವವನ್ನು ನಾವೆಂತು ವರ್ಣಿಸುವುದು!

೪೦. ಕೈಗಳಿಂದ ಮೆಲ್ಲನೆ ಅವನನ್ನು ಎಬ್ಬಿಸಿದಳು. ಮಡಿಲಲ್ಲಿರಿಸಿದ ಆ ಕ್ಷಣವೇ ತಲೆಯನ್ನು ಆಘ್ರಾಣಿಸಿದಳು. ಕಣ್ಣೀರಿನಿಂದ ಅಭಿಷೇಚಿಸಿ, ಪ್ರಾಣನಾಥನಿಗೆ ಮಂದಹಾಸವೆಂಬ ಬಟ್ಟೆಯನ್ನು ಹೊದೆಸಿದಳು. ಜಿಂಕೆಯಾದಂತಹ ಕಣ್ಣುಗಳಿರುವ ದೇವಕಿ ಪುತ್ರನಿಗೆ ಗುಣಗಂಧವನ್ನು ಆಗಲೇ ಲೇಪಿಸಿದಳು.

೪೧. ತಾಯಿಯನ್ನೂ ಸಂತೋಷದಿಂದ ಬೀಳ್ಕೊಂಡ ಶ್ರೀಕೃಷ್ಣ ತನ್ನ ಅರಮನೆಯನ್ನು ಹೊಕ್ಕನು. ಗುಡಿಯನ್ನು ಕಟ್ಟಿ ಶೋಭಿಸುವ ಹದಿನಾರು ಸಹಸ್ರ ನಾರಿಯರು ಆನಂದ ತುಂದಿಲರಾದರು. ಮೃಡಬಂಧುವಾದ ಶ್ರೀಕೃಷ್ಣ ಅಲ್ಲಲ್ಲಿ ಅವರವರಿಗೆ ವಿಹಿತವನ್ನುಂಟು ಮಾಡುತ್ತ ನೆಲೆಸಿದನು.

೪೨. ತಮ್ಮವರನ್ನು ಒಮ್ಮೆಗೆ ದೂರದಿಂದ ನೋಡಿ ಆಗಳೆ ಲಜ್ಜಾ ಭರದಿಂದ ತಲೆಯನ್ನು ಸ್ತ್ರೀಯರು ಬಾಗಿಸಿದರು. ಕಣ್ಣಿನಿಂದ ಆನಂದಾಶ್ರು ಸುರಿಯುತ್ತಿರಲು ಬಹಳ ಉತ್ಸವದಿಂದ ಅವನೆದುರು ಆ ಕ್ಷಣವೆ ಹೋಗಿ, ಚರಣಕ್ಕೆ ಅಭಿವಂದಿಸಿದರು. ಆಗ ಶ್ರೀಕೃಷ್ಣ ಅವರನ್ನು ತಕ್ಕೈಸಿದನು.

೪೩. ಕೆಲವರು ಅವರ ಮುಖಾಂಬುಜವನ್ನು ಸೇವಿಸಿದರು. ಕೆಲವರು ಹಾಗೆಯೇ ನಿಂತರು. ಕೆಲವರು ತಲೆಬಾಗಿ ನೆಲವನ್ನು ಪಾದದ ಉಗುರಿನಿಂದ ಗೀಚತೊಡಗಿದರು. ಕೆಲವರು ಮಕ್ಕಳನ್ನು ಎತ್ತಿಕೊಂಡಿದ್ದರು. ಕೆಲವರು ಹಾಗೆಯೇ ನೋಡಿದರು. ಕೆಲವರು ಒಳಮನೆಯಿಂದ ನಿರೀಕ್ಷಿಸಿದರು. ಕೆಲವರು ಸ್ವೇಚ್ಛೆಯಿಂದ ಇದ್ದರು.

೪೪. ದೂರದಲ್ಲಿ ವಾಸಿಸಲಿ, ನಿತ್ಯವೂ ಕೂಡಿರಲಿ, ಅವರಿಗೆ ಅವನೇ ಪ್ರಿಯಕರನೂ ನಿತ್ಯವೂ ಹೊಸಬನು. ಈ ಸಾರವನ್ನು ತಿಳಿದ ಮುನೀಶ್ವರರು ಬಿಡದೆ ಭಜಿಸುತ್ತಾರೆ. ಅವನನ್ನು ಸ್ಮರಿಸುವ ಮನುಷ್ಯರಿಗೆ ಮತ್ತೆಲ್ಲವೂ ಶೂನ್ಯ.

೪೫. ನಾರಿಯರು ಮೋಹಿಸಿದರೆಂಬುದು ಅತಿ ಕೌತುಕವಲ್ಲ. ಭೂಮಿಯಲ್ಲಿರುವ ಚತುರ್ವಿಧ ಜಾತಿಗಳಿಗೂ ಅವನು ಜೀವಾತ್ಮಕನಲ್ಲವೇ? ಮತಿವಂತರನ್ನುದ್ಧರಿಸಿ ಯಾವಾಗಲೂ ಸರಿಗೊಳಿಸುವ ಮುಕುಂದನ ಬರವನ್ನು ಇವರೆಲ್ಲರೂ ನೋಡುತ್ತಿರುವುದು ವಿಸ್ಮಯವಲ್ಲವೇ?

೪೬. ಲೋಕದ ಜನರ ದೃಷ್ಟಿಗೆ ಗೋಚರಿಸುವುದಕ್ಕೆ ನರನಾಟಕವಾಡಿ, ನಿತ್ಯಾತ್ಮಕ ಸ್ವರೂಪನಾದ ಆತನು ಆತ್ಮರಿಗೆ ವಿಶ್ವಾತ್ಮಕನಾಗಿದ್ದಾನೆ. ಈತನೂ ಏಕಾತ್ಮನೂ, ಅರೂಪನೂ, ಅನಂತನಿಧಿಯೂ, ಅವಿನಾಶಿಯೂ, ಅಗಮ್ಯನೂ, ಲೋಕಾತ್ಮಕನೂ, ಸರ್ವಪರಾತ್ಪುರುಷನೂ, ಮಾಯಾಮೂರ್ತಿಯೂ ಆಗಿದ್ದಾನೆ.

೪೭. ಮನ್ಮಥನೇ ಎಂಬ ಭ್ರಮೆಯುಂಟುಮಾಡುವ ಸೌಂದರ್ಯವಂತನೂ ಬ್ರಹ್ಮ ಸೃಷ್ಟಿಗೆ ಮೋಹಿಸಿ ಅದನ್ನು ಕಲಕುವ ಬಲವಂತನೂ ಆದ ಶ್ರೀಕೃಷ್ಣನನ್ನು ಪ್ರೀತಿಯಿಂದ ಈಕ್ಷಿಸಿದ ನೋಟವು ನಸುಹಾಸ ಲೀಲೆಯ ಶ್ರೀಹರಿಯ ಇರುವಿಕೆಗೆ ಒಂದು ಉಗುರಿನಷ್ಟಾದರೂ ತಾಗಲಿಲ್ಲ - ಎಂದಾಗ ಆ ಅದ್ಭುತವನ್ನು ಹೇಳುವುದಾದರೂ ಏನು!

೪೮. ದೇಹವನ್ನು ಧರಿಸಿದರೂ ಕರಣೇಂದ್ರಿಯಗಳಾವುವೂ ಇವನನ್ನು ಮುಟ್ಟಲಾರವು. ಪರಿಣಾಮಕ್ಕನುಸಾರವಾಗಿ, ಪರಮೇಶ್ವರನಾಗಿ ಸಚರಾಚರದ ನಿಜಾತ್ಮದ ಅಂತರವನ್ನು ತಿಳಿದು ಅನುಗ್ರಹಿಸುತ್ತಾನೆ. ಸೂತ್ರಾತ್ಮ ಸ್ವರೂಪಿಯೇ ಪುರುಷೋತ್ತಮನ ಲೀಲೆಗಳು ಆಶ್ಚರ್ಯಗಳೇ ಸರಿ!

೪೯. ಇಷ್ಟೆಲ್ಲಾ ಹೆಚ್ಚಿನ ವಿವರಗಳೇಕೆ? ತನ್ನನ್ನು ನಂಬಿದ ಭಕ್ತಜಾತಿಯ ಹೃದಯದಲ್ಲಿ ಸದಾ ಕಾಲವೂ ದೃಢವಾಗಿ ಆಲೋಚಿಸಿ, ಭಕ್ತರೊಂದಿಗೆ ಒಂದಾಗಿ ಅವರ ಪಾದವನ್ನು ತಾನು ಧರಿಸಿ, ಪರಿಪೂರ್ಣ ಸುಖದಲ್ಲಿರುತ್ತಾನೆ ಎಂಬಲ್ಲಿಗೆ ರಚಿತಗೊಂಡ ಹತ್ತನೆಯ ಅಧ್ಯಾಯವಿದು.

ಅಧ್ಯಾಯ ೧೧

೧. ಈಶ್ವರಾತ್ಮಜನಾದ ಗಣಪತಿಯ ಪಾದಕಮಲವನ್ನು, ಮನಸ್ಸಿನಲ್ಲಿ ನಾನು ಧ್ಯಾನಿಸುತ್ತೇನೆ. ವಿಶ್ವಮಾತೆಯನ್ನು ವಂದಿಸಿ, ನಾಲಗೆಯಲ್ಲಿ ನೆಲೆಗೊಳಿಸುತ್ತೇನೆ. ಅಶ್ವಮೇಧವನ್ನು ರಚಿಸಿದ ರಾಜನು ಮೊಮ್ಮಗನಿಗೆ ರಾಜ್ಯವನ್ನು ವಿಶ್ವಾಸವಿರಿಸಿ ಕೊಟ್ಟು, ಬಾಳಿದ ಕಥೆಯನ್ನು ಹೇಳುತ್ತೇನೆ.

೨. ಶೌನಕಾದಿ ಮುನೀಶ್ವರರು ಇನ್ನು ಚಿತ್ತವಿಟ್ಟು ಕೇಳಿ! ದ್ರೋಣನ ಮಗನಾದ ಅಶ್ವತ್ಥಾಮನು ಸೋಮವಂಶವನ್ನು ಅಳಿಸಿಬಿಡಬೇಕೆಂದು ಇಚ್ಛಿಸುವನು. ಆಗ ಚಾಣುರಾಂತಕನಾದ ಕೃಷ್ಣನು ಉತ್ತರೆಯ ಗರ್ಭವನ್ನು ರಕ್ಷಿಸಿದನು. ಪಾಂಡವರಿಗೆ ಮೊಮ್ಮಗನು ಜನಿಸಿದ ಉತ್ಸವವನ್ನು ಕೇಳಿ.

೩. ಧರ್ಮರಾಯನು ಜ್ಯೋತಿಷ್ಯರನ್ನು ಕರೆಸಿದನು. ವಿದ್ವಾಂಸರ ಸಂಘವನ್ನು ಆಗಲೆ ಕರೆಸಿ ಹಸುಗಳು, ಶ್ರೇಷ್ಠವಾದ ವಸ್ತ್ರಗಳು, ಚಿನ್ನದ ರಾಶಿ, ಆಯ್ದ ಉತ್ತಮ ಕುದುರೆಗಳನ್ನು ಎಳೆ ಎಳೆದು ದಾನ ಮಾಡಿದನು. ಹೀಗೆ ಕಣ್ಣೀರಧಾರೆ ಸುರಿದು ಉತ್ಸವದ ಪ್ರಳಯದಲ್ಲಿ ಮುಳುಗಿದನು.

೪. ಪತ್ತಾಯ, ಮಾಳಿಗೆ, ಜಗುಲಿ, ಭಂಡಾರಗೃಹದಿಂದ, ದಾನದ ವಸ್ತುಗಳನ್ನು ಒತ್ತೊತ್ತಾಗಿ ಇಟ್ಟು ಪೆಟ್ಟಿಗೆಯ ಕೈಚೀಲದಲ್ಲಿ, ಕತ್ತೆ, ಎತ್ತುಗಳಲ್ಲಿ, ರಥಗಳಲ್ಲಿ, ಹೊರೆಯಾಳುಗಳಲ್ಲಿ ಹೇರಿಸಿಕೊಂಡು ರಾಜಬೀದಿಯಲ್ಲಿ ಹೋಗುವ ದಾನದ ವಿನೋದ ರಂಜಿಸಿತು.

೫. ಮದಗಜದ ಮಸ್ತಕದಲ್ಲಿ (ಕುಳಿತು) ಭೇರಿಯನ್ನು ಧ್ವನಿ ಮಾಡಿ. ಹೊಸ ವಾರ್ತೆಯನ್ನು ಘೋಷಿಸಿದರು. ಆಗ ರಾಜ್ಯದ ನಗರಗಳಲ್ಲಿ ಆನಂದಿತರಾದ ಸರ್ವರೂ ಅಲಂಕರಿಸಿಕೊಂಡು ಬೇಗ ಬಂದು ರಾಜಗೃಹ ಪ್ರವೇಶಿಸಿ ಕುಮಾರನನ್ನು ನೋಡಿ ತುಂಬ ಹರ್ಷಿತರಾದರು.

೬. ಮಗನ ಉತ್ಸವವನ್ನು ನೋಡಿ ಯುಧಿಷ್ಠಿರನು ಧೌಮ್ಯಾದಿ ಸಮಸ್ತ ವಿದ್ಯಾವಂತರಿಗೆ ವಂದಿಸಿ ಜಾತಕ ಫಲವನ್ನು ಹೇಳಬೇಕೆಂದು ಕೇಳಿಕೊಂಡನು. ಆಗ ವಿಷ್ಣುವಿಗೆ ಸಮಾನರಾದ ಆ ವಿದ್ವಾಂಸರು ತತ್ಕಾಲ ವಿಶೇಷ ಗತಿ ಹೇಗೆ ಎಂದು ತಮ್ಮ ತಮ್ಮೊಳಗೇ ವಿಚಾರಿಸತೊಡಗಿದರು.

೭. ಮಹಾರಾಜ, ಉತ್ತರೆಯ ಸುಕುಮಾರನ ಜಾತಕ ಫಲವನ್ನು ಏನೆಂದು ಹೇಳಲಿ! ಜನನಿಯ ಜಠರಕ್ಕೆ ಬಂದ ಮಹಾಘನವಾದ ವಿಪತ್ತನ್ನು; ಅದನ್ನು ಇಂದು ಹೇಳಿ ಏನು ತಾನೇ ಫಲ? ಈತ ನಿಮ್ಮ ಪುಣ್ಯ ಫಲದಿಂದಲೂ ದನುಜಾರಿಯಾದ ಕೃಷ್ಣನ ಕಟಾಕ್ಷದಿಂದಲೂ ಚಂದ್ರ ಉದಿಸುವಂತೆ ಉದಿಸಿದ.

೮. ಹೊಗೆಯಲ್ಲಿ ಬೆಳೆದ ಎಳೆಯ ಲತೆ ಬಳಲುತ್ತಿರುವಂತಹ ಸ್ಥಿತಿಯಲ್ಲಿದ್ದ ಈತನನ್ನು ಹೃದಯವನ್ನು ಪ್ರವೇಶಿಸಿ ಅಚ್ಯುತ ನೋಡಿದನು. ಈ ಜಗತ್ತಿನಲ್ಲಿ ನಿಮಗೆ ಹರಿಯು ಅನುಗ್ರಹಿಸಿದ ದಿವ್ಯ ಬಲದಿಂದ ಈತನ ಹೆಸರೂ, ಬಿರುದೂ ಮಹಾಲೋಕದಲ್ಲೆಲ್ಲ ಪಸರಿಸುವುದು.

೯. ನಾವು ಏನೆಂದು ಹೇಳುವುದು- ನಿಮ್ಮ ವಂಶವೆಂಬ ಉದ್ಯಾನವನದಲ್ಲಿ ಆದ ಉತ್ತಮ ಕಲ್ಪವೃಕ್ಷಕ್ಕೆ ಸಮನಾದ ಭಾಗ್ಯ ನಿಮಗೆ ಲಭಿಸಿತು. ಈತ ಮುಂದೆ ಭೂಪಾಲಕನಾಗಿ ಸರ್ವ ಗುಣಜ್ಞನಿಧಿಯಾಗಿ, ಅತಿ ಪೌರುಷಯುಕ್ತನಾಗಿ ಮೆರೆಯುತ್ತಾನೆ. ಹಾಗೆ ನೋಡಿದರೆ ಚಂದ್ರವಂಶದಲ್ಲಿ ಇವನಿಗೆ ಸಮನಾದವರು ಯಾರೂ ಇರಲಾರರು.

೧೦. ಸತ್ಯದಲ್ಲಿ ರಾಮನಿಗೆ, ಆಶ್ರಿತ ರಕ್ಷೆಯಲ್ಲಿ ಶಿಬಿಗೆ, ಯುದ್ಧದಲ್ಲಿ ಅರ್ಜುನನಿಗೆ, ಉತ್ತಮ ಗುಣದಲ್ಲಿ ಇಕ್ಷ್ವಾಕು (ವಂಶದ ಸೌದಂತಿ ಸುಕರ್ಮರಿಗೆ ಸಮಾನ) ಅಪ್ರತಿಮವಾದ ಪ್ರತಾಪದಲ್ಲಿ ಅಗ್ನಿಗೆ ಸಮಾನ, ಯುದ್ಧದಲ್ಲಿ ಸಿಂಹ ಪರಾಕ್ರಮಿಯೂ ಗುಣದಲ್ಲಿ ಹರಿಯೂ ಈತನಾಗುತ್ತಾನೆ.

೧೧. ಧೈರ್ಯದಲ್ಲಿ ಗುಣದಲ್ಲಿ ಸಮಸ್ತ ವಿಭವದಲ್ಲಿ ಬಲಿಗೆ ಸಮಾನನೀತ. ಉದಾರ ಗುಣದಲ್ಲಿ ದಂತಿನೃಪ, ಭಕ್ತಿಯಲ್ಲಿ ಪ್ರಹ್ಲಾದ, ಆರ್ಯಾಶ್ರಮ ಪ್ರೀತಿಯಲ್ಲಿ ಈಶ್ವರ, ದೃಢದಲ್ಲಿ ಹಿಮಾಲಯ ಪರ್ವತ, ತಾಮಸಕ್ಕೆ ಸೂರ್ಯ ಪ್ರಭೆಯೇ - ಈ ವಿಧದಲ್ಲಿ ಪ್ರವೃತ್ತಿಯವನೀತ.

೧೨. ಕಲಿಯನ್ನು ಬಂಧಿಸಿ, ಧರ್ಮವನ್ನೂ ಉದ್ಧರಿಸುತ್ತಾ ಧರ್ಮ ಮಾರ್ಗವನ್ನು ಸ್ಥಿರಗೊಳಿಸುತ್ತಾನೆ. ಖಳರನ್ನೆಲ್ಲ ಶಿಕ್ಷಿಸಿ, ಸಜ್ಜನರಿಗೆ ಅನುಕೂಲ ಮಾಡಿ ಅನೇಕ ದಿನ ವಾಸಿಸುತ್ತಾನೆ. ಕೊನೆಗೆ ಒಬ್ಬ ಬ್ರಾಹ್ಮಣನ ಶಾಪದಿಂದ ಕಲಿಯಾದ ತಕ್ಷಕ ಕಚ್ಚಿ ಮುಕ್ತಿ ಪದವನ್ನು ಹೊಂದುತ್ತಾನೆ.

೧೩. ಈತನ ಉಳಿದ ಗುಣಗಳನ್ನು ಏನೆಂದು ಹೇಳಲಿ! ಶುಕ ಮುನಿಯ ಮುಖವೆಂಬ ಕಮಲದಿಂದ ಹರಿದು ಬರುವ ಭಾಗವತಾಮೃತಪಾನವನ್ನು ಕುಡಿದು, ಆಮೇಲೆ ಪರಿಣಾಮಕಾರಿಯಾದ ಸುಖದಲ್ಲಿ ಮುಕ್ತಿ ವಧುವಿನೊಂದಿಗೆ ಪುಣ್ಯ ಗೃಹದಲ್ಲಿ (ಸ್ವರ್ಗ) ಆದ್ಯಂತವಿಲ್ಲದೆ ಬೆಳಗುತ್ತಾನೆ.

೧೪. ಹೀಗೆ ಅವನ ಮುಂದಿನ ಅನುಭವದ ಗುಣಗಳನ್ನು ಸಂಪೂರ್ಣವಾಗಿ ಸ್ತುತಿಸಿ ಪರಬ್ರಹ್ಮ ಸ್ವರೂಪರಾದ ಮುನಿಗಳು ಬೀಳ್ಕೊಂಡು ಯಾತ್ರೆ ಕೈಗೊಂಡರು. ಇತ್ತ, ಹುಣ್ಣಿಮೆಯ ಚಂದ್ರನ ಕಳೆಯನ್ನು ಮೀರಿ ಶಶಿವಂಶದ ಶ್ರೇಷ್ಠನಾದ ಆ ಪುತ್ರನು ಬೆಳೆಯುತ್ತಿದ್ದನು.

೧೫. ಹಿಂದೆ ತಾಯಿಯ ಜಠರಕ್ಕೆ ಉಂಟಾದ ಕಠೋರವನ್ನು ಪರಿಹರಿಸಿ ಯಾರು ಕಾಯ್ದುರು? ಯಾರು ತಾನೇ ಅನಾಥರಿಗೂ ಜಗತ್ತಿಗೂ ಆಶ್ರಯ ಮತ್ತು ಗತಿ? ಕಾರಣಿಕನಾದ ಮುಕುಂದನೆಂದರೆ ಯಾರು? ಹೇಗೆ? ಎಂದು ದೃಢಪಡಿಸಿಕೊಳ್ಳುವುದಕ್ಕೆ. ಆತ ಹಾಗೆಯೇ ಪರೀಕ್ಷಿಸಿದ ಕಾರಣ ಪರೀಕ್ಷಿತ ಎಂಬ ಹೆಸರನ್ನು ಪಡೆದನು.

೧೬. ಇಂತು ಪರಿಪರಿಯಲ್ಲಿ - ಪರಮ ಸೌಖ್ಯದಲ್ಲಿ, ಪೋಷಣಾದಿ ಕಾರ್ಯಗಳಿಂದ ನಿತ್ಯವೂ ಬಾಲಕ ಬೆಳೆ ಬೆಳೆದು ಕಲ್ಪವೃಕ್ಷದ ಮೊಗ್ಗೆಯಂತೆ, ಆನೆಯ ಮರಿಯ ಆಕೃತಿಯಂತೆ, ಪಾಂಡುರಾಜನಾದ ಧರ್ಮರಾಯನ ಅಭಿಲಾಷಾ ಸಮುದ್ರದ ಪೂರ್ಣ ಚಂದ್ರನಂತೆ - ದೊಡ್ಡವನಾದನು.

೧೭. ಒಮ್ಮೆ ಧರ್ಮರಾಯನು ಅಶ್ವಮೇಧ ಮಾಡಬೇಕೆಂದು ಆಲೋಚಿಸಿದನು. ಅದನ್ನು ನೆರವೇರಿಸಲು ಧನವಿಲ್ಲವೆಂದು ದುಃಖಿಸಿ, ಒಳಮನೆಯಲ್ಲಿ ಆಲೋಚನಾ ಮಗ್ನನಾದನು. ಆಗ ಅವನು ತಮ್ಮಂದಿರು ಹೊರಗೆ ಕಾಣದೆ ಅತ್ತಿತ್ತ ಅಲೆದಾಡಿ ಕೊನೆಗೆ ಒಳ ಕೋಣೆಯಲ್ಲಿ ಹುಡುಕಿ ಕಂಡರು.

೧೮. ಬಂದು ಅರಮನೆಯ ಒಳಗಡೆ ಧರ್ಮರಾಯನನ್ನು ಕಂಡು -"ರಾಜಶಿಖಾಮಣಿ ಮುಗುಡವೆಂಬ ಸುಗಂಧವನ್ನು ಉತ್ತಮವಾದ ಮುಖಕ್ಕೆ ಪೂಸಿಕೊಂಡಿರುವುದಾದರೂ ಏತಕ್ಕೆ? ನೀನು ನೆನೆಸಿದ್ದ ಕಾರ್ಯವನ್ನು ನಾವು ಮಾಡಿ ತೀರಿಸುತ್ತೇವೆ. ಒಂದು ವೇಳೆ ನಮ್ಮಿಂದ ಆಗದಿದ್ದರೆ ಕೃಷ್ಣನಿಂದಾದರೂ ಯಶಸ್ಸು ದೊರಕೀತು -ಹೇಳು" ಎಂದರು.

೧೯. "ಆಯಿತಾಯಿತು ನಿಮ್ಮ ಪೌರುಷದ ಮಾತಿರಲಿ. ಅಶ್ವಮೇಧವೆಂಬ ಯಾಗದ ಆಲೋಚನೆಯನ್ನು ಮಾಡುತ್ತಿದ್ದೇವೆ. ಲೋಕದ ಜನರನ್ನು ನೋಯಿಸದೆ ನಾನಾ ಜನಗಳನ್ನೂ, ದ್ರವ್ಯಾದಿಗಳನ್ನು ಗೆಲ್ಲುವ - ಬಂಧುಗಳನ್ನು ಕೊಂದ ದೋಷವನ್ನು ಗೆಲ್ಲುವ ಉಪಾಯವಾದರೂ ಯಾವುದು?"

೨೦. ನನ್ನ ಆತ್ಮ ಸಾಧಿಸಲಾಗದ ಕರ್ಮದ ಬಗ್ಗೆ ಏನೆನ್ನಲಿ? ಹೀಗೆ ತುಂಬಿದ ಪಾಪದ ಹೊರೆಗೆ ಕೈಕೊಡುವುದಕ್ಕೆ ಶ್ರೀ ವಲ್ಲಭನಲ್ಲದೆ ನಮಗೆ ಆಪ್ತರು ಯಾರಿದ್ದರೆ?ಬೇಗ, ತಡಮಾಡದೆ ಯಾತ್ರಿಸಿ ಶ್ರೀಧರನನ್ನು ಕರಕೊಂಡು ಬನ್ನಿರಿ ಎಂದನು.

೨೧. ಅಣ್ಣಾ, ನೀವು ಹೇಳಿದ್ದು ಪರಮಾರ್ಥವಾದ- ಈ ಹಿಂದೆಯೇ ಮಾಡಬೇಕಾಗಿದ್ದ- ಕಾರ್ಯ. ನೀವು ಸಿದ್ಧರಾಗಿರಿ. ನಾವು ಈಗಲೆ ಹೋಗಿ ಶ್ರೀಕೃಷ್ಣನಲ್ಲಿ ಹೇಳಿ ಕರೆದುಕೊಂಡು ಬರುತ್ತೇವೆ ಎಂದು ಭೀಮನೊಂದಿಗೆ ಶೀಘ್ರದಲ್ಲಿಯೇ ಅರ್ಜುನನೂ ದ್ವಾರಾವತಿಯತ್ತ ಹೊರಟನು.

೨೨. ಪರಿವಾರ ಸಮೇತವಾಗಿ ನಡೆದು ಶ್ರೀಕೃಷ್ಣನನ್ನು ಕಂಡು ಕೈ ಮುಗಿದು ವಂದಿಸಿದಾಗ ನಗುತ್ತಾ "ನೀವು ಬಂದುದು ಅಪೂರ್ವವಾದುದು, ಬರುವಾಗ ದಾರಿ ತಪ್ಪಲಿಲ್ಲ ತಾನೇ?" ಎಂದು ಆಸ್ಥಾನಕ್ಕೆ ಕರೆದುಕೊಂಡು ಹೋಗಿ ಅರ್ಜುನ ಮತ್ತು ಭೀಮನನ್ನು ಸಂತೋಷದಲ್ಲಿ ಅಪ್ಪಿಕೊಂಡನು.

೨೩. ಆಮೇಲೆ ಸರ್ವರನ್ನು ಕಳುಹಿಕೊಟ್ಟರು. ಆದರೆ ಇವರ್ರೀರ್ವರನ್ನು ಬಿಡದೆ ಇಕ್ಕೆಡೆಗಳಿಂದಲೂ ಅವರ ಕೈಹಿಡಿದು ನಡುಮಂದಿರದತ್ತ ನಡೆದು, ಭೋಜನಕ್ಕೆ ಕುಳಿತರು. ಆ ಸಮಯದಲ್ಲಿ "ಧರ್ಮರಾಯ ನಿಮ್ಮನ್ನು ಕಳುಹಿದನೇ ಅಥವಾ ನೀವಾಗಿ ಬಂದಿರೇ" ಎಂದು ಕೇಳಿದನು.

೨೪. ದೇವಾ ಜಯವಾಗಲಿ! ನಮ್ಮ ಬಿನ್ನಪವನ್ನು ಆಲಿಸಬೇಕು. ನಿಮ್ಮ ಸಖನಾದ ರಾಜನು ಕಳುಹಿಸಲಾಗಿ ನಾವು ಬಂದೆವು. ಬಂಧು ಹತ್ಯೆಯನ್ನು ದೋಷವನ್ನು ಪರಿಹರಿಸಲು ಆತನು ಹಯಮೇಧವನ್ನು ನಿಶ್ಚೈಸಿದ್ದಾನೆ. ಇದಕ್ಕೆ ನೀವು ಅನುಕೂಲಿಸದಿದ್ದರೆ ಈಗ ಸರಿಯಾಗದು ಎಂದು ಕಣ್ಣೀರಿನಲ್ಲಿ ನಿಮ್ಮ ಪದವನ್ನು ಚಿಂತಿಸುತ್ತಿದ್ದಾನೆ.

೨೫. "ನನ್ನ ಭಾವನ ಮನಸ್ಸು ಅತಿ ಕೌತುಕವಾದುದು. ಒಂದರಲ್ಲಿಯೂ ದೃಢವಿಲ್ಲ. ನನ್ನನ್ನು ನೆನೆಸುವುದಾದರೂ ಏಕೆ? ನನ್ನ ವಸ್ತು, ವಿಭವ ಇದೆಲ್ಲ ನಿಮ್ಮದು ಎಂಬ ಘನವಾದ ಈ ರಹಸ್ಯವನ್ನು ಬೋಧಿಸಿದರೂ ಆ ರಾಜ ಕೇಳಲಿಲ್ಲ" ಹೀಗೆಂದು ಅನುಮಾನದಿಂದಲೂ ವಿಸ್ಮಯದಿಂದಲೂ ಅವನು ತಮ್ಮ ತಲೆಯನ್ನು ತೂಗಿದನು.

೨೬. ಇದನ್ನು ಮಾಡಿದರೆ ನನ್ನ ಕಾರ್ಯಗತಿಯಾದರೂ ಏನಾಗುವುದು? ಇದರಿಂದಾಗಿ ನನಗೆ ಅನರ್ಥಫಲ, ಮಹಾಜನರ ವೈರ -ಇವುಗಳೇ ಸಿದ್ಧಿಸುವುದು. ಇದನ್ನು ನೋಡಿದರೆ ನಮಗೆ ಹಿಂದಿನಿಂದಲೂ ಹಿತರೂ ಬಲ ನೀಡಿದವರೂ ನೀವೇ. ಹಾಗೆ ನಿಮ್ಮನ್ನು ಕರಕೊಂಡು ಬರಲು ಹೇಳಿದ್ದಾನೆ ಎಂದಾಗ ಮೂಗಿನಲ್ಲಿ ಬೆರಳಿಟ್ಟು, ಶ್ರೀಕೃಷ್ಣ ತಲೆತೂಗಿದನು.

೨೭. ಹಾಗಾದರೆ ಅರ್ಜುನ ಕೇಳು- ಇದಕ್ಕೊಂದು ಉಪಾಯವಿದೆ- ಹೇಳುತ್ತೇನೆ. ಉತ್ತರದಿಕ್ಕಿನಲ್ಲಿ ಹಿಂದಿನವರ ವಸ್ತು ಉಂಟು. ಸಂಕೋಚ ಮಾಡದೆ ಅದನ್ನು ತೆಗೆದುಕೊಳ್ಳಬೇಕು" ಎಂದಾಗ ಶ್ರೀಕೃಷ್ಣನೊಂದಿಗೆ ಹೋಗಿ ಆ ಕ್ಷಣದಲ್ಲಿಯೇ ಧನವನ್ನು ಕೊಂಡು ಬಂದರು.

೨೮. ಅಷ್ಟೆಲ್ಲಾ ಅನರ್ಘ್ಯ ವಸ್ತುವನ್ನು ಹೇರಿಸಿ ಭೂಪತಿಗೆ ಕೊಂಡೊಪ್ಪಿಸಲು ಬೇಕಾದುದೆಲ್ಲವೂ ಬಂತೆಂದು ಮನಸ್ಸು ತುಂಬಿದವನಾದನು. ಇದನ್ನು ನಾವು ಸಾಧಿಸಲು ಶ್ರೀಕೃಷ್ಣನಲ್ಲದೆ ಬೇರಾರು ಸಮರ್ಥರು ಎಂದು ಧರ್ಮರಾಯನು ಶ್ರೀಹರಿಯನ್ನು ಮನಸ್ಸಿನಲ್ಲಿ ನೆನೆಸಿ ಹೊಂಪುಳಿಗೊಂಡನು.

೨೯. ಆಮೇಲೆ ದ್ವಾರಾವತಿಗೆ ದೂತರನ್ನು ಕಳುಹಿಸಿ 'ಬರಬೇಕೆಂದು' ತಿಳಿಸಲಾಯಿತು ಸತ್ಕಾರ್ಹನಾದ ಶ್ರೀಕೃಷ್ಣನು ಯಾದವ ಸೈನ್ಯದೊಂದಿಗೆ, ಭೂಮಿಯೇ ಕಂಪಿಸುತ್ತಿರಲು ಹಸ್ತಿನಾವತಿಗೆ ಬಂದನು. ಆಗ ಧರ್ಮರಾಯನು ಸಹೋದರರು ಮತ್ತು ಪರಿವಾರ ಸಮೇತನಾಗಿ ಅಚ್ಯುತನಿಗೆ ಅಭಿವಂದಿಸಿದನು.

೩೦. ಕಣ್ಣುಗಳಲ್ಲಿ ಅಮೃತವಾದ ಕಣ್ಣೀರು, ಕಿವಿಗಳಲ್ಲಿ ಹರಿಕೀರ್ತನೆ, ಕೈಗಳೆರಡರಿಂದಲೂ ಪಾದಗಳೆರಡರ ಅರ್ಚನೆ, ಆತ್ಮದಲ್ಲಿ ಧ್ಯಾನಾಮೃತ ಸಾರ, ಇವುಗಳೆಲ್ಲವನ್ನು ಸ್ವಲ್ಪವೂ ಕಡಿಮೆ ಮಾಡದೆ ಪರಸ್ಪರ ಅಗಲದೆ ಆಲಿಂಗನ ಮಾಡಿದನು. ಆ ಧರ್ಮರಾಯನ ಕರಣೇಂದ್ರಿಯಗಳು ಶ್ರೀಕೃಷ್ಣನೆಂಬ ಅಗಾಧವಾದ ಮಡುವಿನಲ್ಲಿ ಮುಳುಗಿದವು.

೩೧. ಜಗನ್ಮಯ! ಅಶ್ವಮೇಧ ಎಂಬ ಮಹಾಯಾಗವನ್ನು ಏಕಾಗಿ ಮಾಡಬೇಕೋ ಎನಿಸುತ್ತದೆ. ಏಕೆಂದರೆ ನಿಮ್ಮ ಪಾದ ಪದ್ಮವನ್ನು ನೋಡಿದ ಸುಖವು ಬಂಧುಹತ್ಯಾ ದೋಷವು ಒಂದಿಷ್ಟು ನಿಲ್ಲದೆ ಓಡಿಹೋಗುವಂತೆ ಮಾಡಿದೆ. ನಾನೀಗ ಘೋರ ಪಾತಕಗಳಿಗೆ ಹೆದರುವುದಿಲ್ಲ.

೩೨. ನಿಮ್ಮ ಪಾವನವಾದ ಪಾದದ ಉಗುರಿನಿಂದ ಜನಿಸಿದ ಗಂಗೆಯಲ್ಲಿ ಅಷ್ಟು ಸೂರ್ಯವಂಶಜರೂ ಮುಕ್ತಿಗೆ ಸಂದುದು ಸತ್ಯ. ಶುದ್ಧ ಮನೋಹರನೇ, ಇಂದು ನೀವು ನನ್ನ ದೃಷ್ಟಿಗೆ ಗೋಚರವಾದುದರಿಂದ ನಾವೆಲ್ಲರೂ ಸಾರಯುಕ್ತರಾದೆವಲ್ಲವೇ ಎಂದು ಭಕ್ತಿಯಲ್ಲಿ ಅಭಿವಂದಿಸಿದನು.

೩೩. "ಮಹಾರಾಜ, ಹೊಗಳು ಭಟನ ಪ್ರವೃತ್ತಿ ಸಾಕು, ಹೆಚ್ಚು. ಬೇಡ" ಎಂದು ಶ್ರೀಪತಿ ಅವನನ್ನು ನೋಡಿ, ಹೇಗೋ ಅಲ್ಲಿಂದ ಕೂಡಲೇ ಹೊರಟನು. ನರನಾರಿಯರ ಕಣ್ಣುಗಳಿಂದ, ದೀಪಾರತಿಗಳಿಂದ ದಾನವಾಂತಕನು ಶೋಭಿಸಿ, ಗೋಪುರದ ಒಳಗಡೆಗೆ ಬಂದನು.

೩೪. ಶ್ರೀಹರಿಯನ್ನು ಕರೆದುಕೊಂಡು ಒಳಗೆ ಹೋಗಿ, ಮಂಚದಲ್ಲಿ ಕುಳ್ಳಿರಿಸಿ ಪಾದಾರ್ಚನೆ ಮಾಡಿದನು. ಯಾಗಕ್ಕೆ ಬೇಕಾದ ಬಹು ಸಾಧನ ದ್ರವ್ಯಗಳನ್ನು ತರಿಸಿದನು. ಶ್ರೇಷ್ಠ ಋತ್ವಿಜರನ್ನೂ ಕರೆಸಿದನು. ಬಳಿಕ ವ್ಯಾಸ, ದೌಮ್ಯ ಮೊದಲಾದಿಗಳನ್ನು ಕರೆಸಿ, ವಿಧಿ ಪೂರ್ವಕವಾಗಿ ನಿಶ್ಚಲ ಬುದ್ಧಿಯಿಂದ ಯಾಗವನ್ನು ಕೈಗೊಂಡರು.

೩೫. ಧರಣಿಯೇ ತುಂಬಿತೆನಿಸುವಂತಹ ಬ್ರಾಹ್ಮಣವರ್ಗ, ನಾನಾ ದೆಸೆಯಲ್ಲಿರುವ ರಾಜರು, ವೈಶ್ಯರು ಶೂದ್ರಾದಿ ಜನಸಮೂಹ - ಇವರೆಲ್ಲರೂ ಓಲಗದಲ್ಲಿ ನೆರೆದರು. ಅರ್ಜುನ ಮತ್ತು ಭೀಮಾದಿಗಳ ಆಜ್ಞೆಯ ಮೇರೆಗ ಅವರವರಿಗೆ ಉಚಿತವಾದ ರೀತಿಯಲ್ಲಿ ಸನ್ಮಾನಿಸಲಾದ ಶೋಭೆಯ ಪರಿಯನ್ನು ವಿವರಿಸುವುದೆಂತು!

೩೬. ಸೂತರು, ಮಾಗಧ ವೃಂದದವರು, ವೈತಾಳಿಕರು, ನೀತಿಜ್ಞರು, ಹಾಸ್ಯ ವಿಶಾರದರು, ನಟರೇ ಮೊದಲಾದ ನಾಟ್ಯ ಜಗತ್ತು, ಬ್ರಾಹ್ಮಣರು, ಪಾಠಕರು, ವಿದ್ವಾಂಸರು - ಇವರೆಲ್ಲ ಅಧಿಕ ಸಂಖ್ಯೆಯಲ್ಲಿ ಬಂದು ಚಂದ್ರವಂಶದರಸನ ಚಾವಡಿಯಲ್ಲಿ ನೆರೆದರು.

೩೭. ಋತ್ವಿಜರು ಯಾಗಕ್ಕೆ ಸಂಬಂಧಿಸಿದ ವಿಧಿ ವಿಧಾನಗಳಿಗೆ ಕೊರತೆ ಬರದಂತೆ ಈಶ್ವರನ ಮಗನಾದ ಗಣಪತಿಯನ್ನು ಸ್ತುತಿಸಿ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದರು. ಅಗ್ನಿಗೆ ಜೂಹುವಿನ ಮೂಲಕ ತುಂಬ ತುಪ್ಪವನ್ನು ಹೋಮಿಸುವಾಗ, ಸಂತೋಷದಿಂದ ದೇವ ಸಮೂಹ ಭಕ್ಷಿಸಿ ಸಂತೃಪ್ತರಾದರು.

೩೮. ಮಂತ್ರಗಳನ್ನು ಉಚ್ಚರಿಸಿ, ಉಚ್ಚರಿಸಿ ಬಹು ಸಾಧನೆಯಿಂದ, ತಂತ್ರಜ್ಞರು ನೀಡಿದಾಗ, ಒತ್ತೊತ್ತಿ ಸಂಗ್ರಹಿಸಿ ಅಗ್ನಿ ಸೇವಿಸಿದನು. ಸೇವಿಸಿ, ಸಂತೋಷದಲ್ಲಿ ಸುಳಿ ಸುಳಿಯಾಗಿ ಹೊಗೆಯು ವ್ಯಾಪಿಸುವ ಹಾಗೆ ಬೆಳೆದನು. ಹೀಗೆ ಹಸ್ತಿನಾಪುರದರಸನ ಅಶ್ವಮೇಧ ಯಾಗವು ಬೆಳಗಿತು.

೩೯. ಭುಗಿಲ್ ಭುಗಿಲ್ ಭುಗಿಲ್ ಚಟಾಚಟಿ ಎಂದು ಉರಿಯುತ್ತಿರುವಾಗ ಸುಗಂಧ ಮೇಲೆದ್ದು ಮೇಲ್ಮುಖವಾಗಿ ನಾಲ್ಕೂ ದಿಕ್ಕಿಗೆ ವ್ಯಾಪಿಸಿತು. ಹೊಗೆ ಹೆಚ್ಚಳವಾಗಿ ಮೇರೆ ಮೀರುತ್ತಿರುವಾಗ ಯಾಗದ ವಿಶೇಷವನ್ನು ವರ್ಣಿಸಲು ಸಾಮಾನ್ಯರಾದ ನಮಗೆ ಸಾಧ್ಯವಾಗದು - ಭಗವಂತನೇ ತಿಳಿಯಬೇಕು!

೪೦. ಈ ರೀತಿಯಲ್ಲಿ ಧರ್ಮರಾಯನು ಮೂರು ವಾರ ಬಿಡದೆ ಯಾಗವನ್ನು ಶ್ರೀಹರಿಯ ಕಾರುಣ್ಯ ಬಲದಿಂದ ಆಚರಿಸಿದನು. ಇದು ಅತಿಶಯವಾದುದು, ಇಲ್ಲಿಯವರೆಗೆ ಈ ರೀತಿಯಲ್ಲಿ ಯಾರೂ ಆಚರಿಸಲಿಲ್ಲವೆಂದೂ, ಇದು ನಮ್ಮ, ಭಾಗ್ಯವೆಂದೂ ಸುರಾಸುರರು ವರ್ಣಿಸಿದರು.

೪೧. ಯಾಗಾಂತ್ಯದಲ್ಲಿ ಬಹುವಾದ್ಯಗಳ ಮೊಳಗುವಿಕೆಯೊಂದಿಗೆ, ಗಂಗಾನದಿಯಲ್ಲಿ ಮುಳುಗಿ ಓಕುಳಿಯಾಡಿದನು. ಆನೆ, ಕುದುರೆ ವಸ್ತ್ರ, ವಸ್ತು ಸಮೂಹ, ವಧುಗಳು ಮುಂತಾದ ಭೋಗ್ಯ ದಾನಾದಿಗಳನ್ನು ವಿಪ್ರರಿಗೆ ಮೊದಲಾಗಿ ಸಲ್ಲಿಸಿದನು.

೪೨. ದೇವಾದಿಗಳು ಹೊಟ್ಟೆ ತುಂಬಿ ಉಬ್ಬಸಗೊಂಡರು. ಆಹುತಿ ಕೊಡುವ ಮಂತ್ರಗಳಿಂದ ಸೇವಿಸಿ ಅಗ್ನಿಗೆ ಆಲಸ್ಯವಾಯಿತು. ಆತನ ನಾಲಗೆಗಳು ಏನನ್ನೂ ಮುಟ್ಟಾದದವು. ವಿಪ್ರರ ಇಚ್ಛೆಗಳು ತಗ್ಗಿ ಸರ್ವರೂ ಸಂತೋಷಗೊಂಡು ಮೌನಿಗಳಾದರು.

೪೩. ದಾನಗಳನ್ನು ನೀಡುವಾಗ ಕೈಗೊಳ್ಳುವುದಕ್ಕೆ ಅಂದು ಜನರೇ ಇರಲಿಲ್ಲ. ಆ ದಿನ ರಾಜನು ಸರ್ವಧನವನ್ನೂ, ಸರ್ವಸ್ವವನ್ನೂ ಹೊರೆಯಾಗಿ ಕಟ್ಟಿ, ಮೇರುಗಿರಿಯನ್ನು ತಲೆಗಿಟ್ಟಂತೆ ಇಟ್ಟನು. ಬೇರೆ ದಾನಗಳೇಕೆ? ಹೀಗೆ ಕೊಟ್ಟ, ದಾನವನ್ನು ಬ್ರಾಹ್ಮಣರು ತಮ್ಮ ಮನೆಗೆ ಕೊಂಡೊಯ್ದರು.

೪೪. ಬಳಿಕ ಧರ್ಮಜನು ಮೆಲ್ಲನೆ ಬಂದು ಹರಿಚರಣವನ್ನು ತಲೆಯಲ್ಲಿ ಧರಿಸಿ, ಕೈಮುಗಿದನು. ವಿನಯದಲ್ಲಿ "ಈ ಯಜ್ಞ ಕರ್ಮದ ಸಮಸ್ತ ಗುಣವೂ ನಿಮ್ಮ ಪಾದ ತಳಕ್ಕೇ ಬ್ರಹ್ಮಾರ್ಪಣವಾಗಿದೆ" ಎಂದು ಹೇಳಿ ಅಭಿವಂದಿಸಿದನು.

೪೫. 'ಎದ್ದು ಬಳಿಗೆ ಬಾ' ಎಂದು ರಾಜನ ತಲೆಯನ್ನು ನೆಗಹಿದನು. ನಾನು "ನಿಮ್ಮ ಒಡೆಯನೆಂಬುದಾಗಿ ಹೇಳಿ ಸರ್ವಜ್ಞನಾದ ನೀನು ಜನರನ್ನು ನಗಿಸಬೇಡ" ಎಂದು ನಳಿನೋದರನಾದ ಶ್ರೀಕೃಷ್ಣನು ಅವನನ್ನು ತಕ್ಕೈಸಿ ಸನ್ಮಾನಿಸಿದರು.

೪೬. ಆ ಬಳಿಕ ಬ್ರಾಹ್ಮಣ ಕ್ಷತ್ರಿಯ ಸಮೂಹ ಬೀಳ್ಕೊಂಡಿತು; ಋತ್ವಿಜರು, ಬ್ರಹ್ಮ ಋಷಿಗಳು ನಾನು ಜನರು ಬೀಳ್ಕೊಂಡರು. ಜನರೆಲ್ಲರೂ ಕೃಷ್ಣ ಹಾಗೂ ಧರ್ಮರಾಯಾದಿಗಳ ಗುಣ ವಿಶೇಷಗಳನ್ನು ಹೊಗಳು ಬಹುವೇಗದಲ್ಲಿ ತಮ್ಮ ತಮ್ಮ ಪುರಕ್ಕೆ ಹೊರಟು ಹೋದರು.

೪೭. ಇನ್ನು ಗಮಿಸುವುದೆಂದು ಅಸುರಾರಿಯಾದ ಶ್ರೀಕೃಷ್ಣನು ರಥವೇರುವುದನ್ನು ಕಂಡ ಧರ್ಮರಾಯನು ದಾರಿಗೆ ಅಡ್ಡಬಂದನು. ಹರಿಗೆ ಅಭಿವಾದನ ಮಾಡಿ, ತಾವು ಮಿಸುಕಾಡದೆ ವಾಸ ಮಾಡಬೇಕು- ನಮ್ಮ ಜೀವಾತ್ಮಕರಲ್ಲವೇ ನೀವು. ಹೋದ ಮೇಲೆ ಅಸು ಹೋದ ಶರೀರ ನಮ್ಮದಲ್ಲವೇ ಎಂದನು.

೪೮. "ಹಾಗಾದರೆ ಪುರಕ್ಕೆ ಮರಳಿರಿ, ಗುಣಜ್ಞರಾದ, ನನ್ನ ಆತ್ಮ ಸಖರಾದ ನಿಮ್ಮನ್ನು ಬಿಟ್ಟು ನಾವಿರುವುದಾದರೂ ಹೇಗೆ? ಯಾರಿಗೂ ಗೋಚರಿಸದ ನಿಮ್ಮನ್ನು ದೃಷ್ಟಿಸಿದ ಕಣ್ಣು ನಿಮ್ಮ ಮಾತಿನ ಇಂಪನ್ನು ಕೇಳಿದ ಕಿವಿ ನಿಮ್ಮನ್ನೊಂದಿಷ್ಟು ಅಗಲುವುದಕ್ಕೆ ಇಚ್ಛಿಸುವುದಿಲ್ಲ" ಎಂದನು.

೪೯. ಸನಕಾದಿ ಸಮಸ್ತ ಮುನಿಗಳು ತಮ್ಮನ್ನೂ ನೆನೆಸುತ್ತಿದ್ದಾರೆ. ಬ್ರಹ್ಮ, ರುಕ್ಮಿಣಿ ನಿಮ್ಮ ಪಾದ ಕಮಲವನ್ನು ಅಪೇಕ್ಷಿಸುತ್ತಾರೆ. ನೆನೆಸುತ್ತಿರುವ ಭಕ್ತರ ಭಾಗ್ಯ ನಿಧಿಯೇ! ಇಂದು ನನ್ನ ಕಣ್ಣುಗಳಿಗೆ ಕಾಣಿಸಿದ ಭಾಗ್ಯವನ್ನು ಬಿಟ್ಟು ಬದುಕುವುದಾದರೂ ಹೇಗೆ?

೫೦. "ಭವಬಂಧನವನ್ನು ಕತ್ತರಿಸುವ ನಿಮ್ಮ ಪಾದಗಳು ಹೊಸತಾಗಿಯೇ, ಶೃಂಗಾರ ರಸದಿಂದ ಯಾವಾಗಲೂ ಮೆರೆಯುತ್ತಿರುತ್ತವೆ. ನಿಶ್ಚಲವಾದ ತಮ್ಮ ದಿವ್ಯ ಕಟಾಕ್ಷದಿಂದ ನನಗೆ ಪುನರ್ ಜನ್ಮ ತಪ್ಪಿತು. ತಮಗೆ ಶರಣು" ಎಂದು ಧರ್ಮರಾಯನು ಹೇಳಿದನು.

೫೧. ತನ್ನ ಕೈಗಳಿಂದ ರಾಜನನ್ನು ಕೃಷ್ಣನು ಮೇಲಕ್ಕೆತ್ತಿದನು. ಈ ರೀತಿಯ ವಿವೇಕ ನಿನಗೆ ಹುಟ್ಟಿರುವುದು ವಿಚಿತ್ರ, ಇದು ಎಲ್ಲಿಂದ ಬಂತು? ನನ್ನ ಪ್ರಾಣವಾದ ನೃಪಾಲ ಶಿಖಾಮಣಿಯೇ ಬಾ ಎಂದು ದೇವಾದಿದೇವ ವಿನಯದಿಂದ ಆಲಿಂಗಿಸಿ ಭಾವರಸದಿಂದ ಧರ್ಮರಾಯನನ್ನು ಮನ್ನಿಸಿದನು.

೫೨. ಈ ರೀತಿಯಿಂದ ನಿತ್ಯವೂ ನೀವು ದುಃಖಿಸುವುದಾದರೆ ನಾನೇನನ್ನಲಿ? ನಮ್ಮನ್ನು ಕಂಡ ಕೂಡಲೇ ಅಳುವ ಭ್ರಾಂತರನ್ನು ನಾನು ನೋಡಿಯೇ- ಇಲ್ಲ. ಹಾಗಿದ್ದರೂ ಮರೆಯದೆ ಹೃತ್ಕಮಲದಲ್ಲಿ ನನ್ನನ್ನು ಆರಾಧಿಸಿಕೊಂಡಿರಿ. ಬುದ್ಧಿಯಲ್ಲಿ ನನ್ನನ್ನು ಬಿಟ್ಟು ಬೇರೊಂದನ್ನು ಸ್ಮರಿಸದಿರಿ.

೫೩. ಹೃದಯದಲ್ಲಿ ನನ್ನ ಧ್ಯಾನವನ್ನು ದೃಢಗೊಳಿಸಿದುದಕ್ಕಾಗಿ ನಾನು - ನಿಮ್ಮ ದೃಷ್ಟಿಗೆ ನನ್ನ ದೇಹವನ್ನು ಮರೆಮಾಡದೆ ತೋರಿಸಿದ್ದೇನೆ. ಆದರೆ ಪ್ರಪಂಚದ ಜನರಿಗೆ ನಾನು ಮರೆಯಾಗಿರುವೆನಲ್ಲವೇ? ಆದ್ದರಿಂದ ಈ ರೀತಿ ತಡೆಯಬೇಕಾಗಿಲ್ಲ ಎಂದು ಧರ್ಮರಾಯನನ್ನು ಸಂತೈಸಿದನು.

೫೪. ಹೀಗೆಂದು ಯೋಚಿಸಿ, ಪಾಂಡವರು ತಮ್ಮ ಭಕ್ತರೆನ್ನುವ ಬಂಧುತ್ವವನ್ನು ಸರ್ವರಿಗೂ ತೋರಿಸುವ ಸಲುವಾಗಿ ಕೆಲವು ಕಾಲ ಧರ್ಮರಾಯನೊಂದಿಗೆ ಸ್ನೇಹದಿಂದ, ಚೆಂದವಾಗಿ ವಾಸಿಸುತ್ತಿದ್ದನು. ಹೀಗೆ ಇಂದೀವರನಾಭನಾದ ಶ್ರೀಕೃಷ್ಣನು ಹಸ್ತಿನಾಪುರದಲ್ಲಿ ಪ್ರಶಂಸೆಗೊಳಗಾಗುತ್ತಿದ್ದನು.

೫೫. "ನಾನಿಲ್ಲದೆ ಸಚರಾಚರಕ್ಕೆ ಕ್ರಿಯೆಯಿಲ್ಲ, ನಾನು ನಿರ್ಮಲ ಬ್ರಹ್ಮ ಸ್ವರೂಪ ಎಂದು ನಿತ್ಯವೂ ಆಲೋಚಿಸಿ - ಈ ನಿಶ್ಚಯದೊಂದಿಗೆ - ಪಾದಗಳನ್ನು ನೆನೆಸುವವರಿಗೆ ನಾನು ಉತ್ತಮ ಮುಕ್ತಿಯನ್ನು ಅನುಗ್ರಹಿಸುತ್ತೇನೆ" ಸಂದೇಹವಿಲ್ಲವೆಂದನು.

೫೬. ಹೀಗೆಂದು ಯುಕ್ತಿಯನ್ನು ಹೇಳಿ ಧರ್ಮರಾಯನೊಂದಿಗೆ, ಚಂದ್ರಮುಖಿಯರಾದ ದ್ರೌಪತಿ, ಕುಂತಿ ಹಾಗೂ ಉಳಿದ ಸಮಸ್ತ ಮಂದಿಯ ಬಳಿಗೆ ಹೋಗಿ ಸತ್ಕರಿಸಿದನು. ಅರ್ಜುನನೊಂದಿಗೆ ದ್ವಾರಾವತಿಗೆ ಸಕಲ ಪ್ರಜಾ ಜನರು ನೋಡುತ್ತಿರುವಂತೆ ಹೊರಟನು.

೫೭. ಇಲ್ಲಿಗೆ ಹನ್ನೊಂದನೆಯ ಅಧ್ಯಾಯ ಸಮಾಪ್ತವಾಯಿತು. ಇದನ್ನು ಏಕಾಂತದಲ್ಲಿ ಸುಭಕ್ತರು ಹೃತ್ಕಮಲದಲ್ಲಿ ಆನಂದಿಸುತ್ತಾರೆ. ಲೋಕಾಧಿಪನಾದ ಶ್ರೀಕೃಷ್ಣನ ಕಥೆಯನ್ನು ಯಾರು ಹೇಳುತ್ತಾರೋ ಅಥವಾ ಪಠಿಸುತ್ತಾರೋ ಅವರಿಗೆ ಮರಣಾನಂತರ ವೈಕುಂಠ ಲೋಕ ಪ್ರಾಪ್ತಿಯಾಗುತ್ತದೆ.

ಅಧ್ಯಾಯ ೧೨

೧. ಗಣಪತಿಯ ಪಾದಕಮಲಕ್ಕೆ ಅಭಿವಂದನೆ ಮಾಡುತ್ತೇನೆ, ಗ್ರಂಥಜ್ಞಳಾದ ಸರಸ್ವತಿಯ ಕರುಣೆಯನ್ನು ಪಡೆದುಕೊಳ್ಳುತ್ತೇನೆ. ಬಂಧುತ್ವವನ್ನು ಬಿಟ್ಟು ವಿದುರನ ಮಾತಿನ ಬಲದಿಂದ ಅಂಧ ನೃಪನಾದ ಧೃತರಾಷ್ಟ್ರನಿಗೆ ಮೋಕ್ಷವನ್ನು ಸಂಪಾದಿಸಿದ ಕಥೆಯನ್ನು ಮಹಾಜನಗಳು ಇನ್ನು ಕೇಳಬೇಕು.

೨. ಮೇಲಣ ಕಥೆಯನ್ನು ಮುನಿಮುಖ್ಯರು ಕೇಳಬೇಕು. ದುರ್ಯೋಧನನೊಂದಿಗೆ ಮುನಿದು ಅಲ್ಲಿಂದ ಮಹಾಮಹಿಮನಾದ ವಿದುರನು ತೀರ್ಥಯಾಟನೆಗೆ ಹೋದನು. ಆ ಬಳಿಕ ಮನಸ್ಸನ್ನು ತೊಳೆದು ಶುದ್ಧ ಮನೋರಥವುಳ್ಳವನಾಗಿ, ಆಪ್ತರನ್ನು ನೆನೆಸಿಕೊಂಡು ಅವರನ್ನು ಕಾಣಲು ಹಸ್ತಿನಾಪುರಕ್ಕೆ ಬಂದನು.

೩. ದೂರದಿಂದಲೇ ವಿದುರ ಬರುವುದನ್ನು ಕಂಡ ಪಾಂಡವರು ಬಹುವಾಗಿ ಸಂತೋಷಿಸಿದರು. ಹಿಂದೆ ನಮ್ಮ ತಂದೆಯೊಂದಿಗೆ ಕೂಡಿಕೊಂಡಿದ್ದ ವಿದುರನೇ ಇವರೆಂದು ಬಹಳವಾಗಿ ಆಗ್ರಹಪಟ್ಟು, ಅವನಿಗೆ ವಂದಿಸಿದರು. ಒಳಗೆ ಕರೆದುಕೊಂಡು ಹೋಗಿ, ವೀರಾಗ್ರಣಿಗೆ ಪೀಠವನ್ನು ಒಪ್ಪಿಸಿ, ಹರುಷ ಜಲದಿಂದ ಬಹುವಾಗಿ ಕೊಂಡಾಡಿದರು.

೪. ಪ್ರಾಣಗಳು ಬರುವಾಗ ತನುವಿಗೆ ಸುಖಬರುವ ಹಾಗೆ ಶ್ರೀಕೃಷ್ಣನ ಭಕ್ತನನ್ನು ಹದಿನಾರು ರೀತಿಯಲ್ಲಿ ಪೂಜಿಸಿದರು. ಕಾಲಿನಿಂದ ಹರಿದ ಪಾದಜಲವನ್ನು ತಲೆಯಲ್ಲಿ ಧರಿಸಿ ಚಂದ್ರನನ್ನು ಧರಿಸಿದ ಈಶ್ವರನಂತಾದೆ ಎಂದು ಮಹಾರಾಜ ಹೇಳಿದನು.

೫. ಶ್ರೇಷ್ಠವಾದ ಮುತ್ತಿನಿಂದ ಕೂಡಿದ ಕಿರೀಟಧಾರಿಗಳಾದ ರಾಜಸಮೂಹವು ವಿನಯದಿಂದ ಅವನ ಬಳಿ ಸಾರಿ ಅಭಿವಂದಿಸಿ ಪರಿತೋಷಿಸಿತು. ಹರಿಭಕ್ತರಲ್ಲವೇ ಎಂದು ಪಾದದ ಧೂಳನ್ನು ತಲೆಯಲ್ಲಿ ಧರಿಸಿದ ಸಮಸ್ತ ಪರಿವಾರವನ್ನೂ ರಾಜರನ್ನೂ ಪ್ರತ್ಯೇಕವಾಗಿ ಅವನು ಆಲಿಂಗಿಸಿಕೊಂಡನು.

೬. ಮತ್ತೆ ಅಲ್ಲಿಂದ ಒಳಗೆ ಕರೆದುಕೊಂಡು ಹೋಗಿ, ಅಭ್ಯಂಗವಾದ ಬಳಿಕ, ನಿತ್ಯಾರ್ಚನೆ ಸಲ್ಲಿಸಿದನು. ಭೋಜನಗೈದು ಆಮೇಲೆ ಉತ್ತುಂಗವಾದ ಶ್ರೇಷ್ಠ ಆಸನದಲ್ಲಿ ಅವನನ್ನು ಕುಳ್ಳಿರಿಸಿದರು. ಶ್ರೀ ಪಾದವನ್ನು ಮೆಲ್ಲನೆ ಒತ್ತುತ್ತಾ ಇಲ್ಲಿಗೆ ನಡೆದು ಬಂದ ಪರಿಶ್ರಮವನ್ನು ರಾಜನು ಪರಿಹರಿಸಿದನು.

೭. ಸಂತೋಷಗೊಂಡು ಧರ್ಮರಾಯನಲ್ಲಿ "ಉತ್ತಮನಾದ ಲಕ್ಷ್ಮೀಕಾಂತನ ಕರುಣಾ ಕಟಾಕ್ಷದಿಂದ ನೆನೆಸಿದಂತಹ ಮಹಾಕಾರ್ಯ ಸಿದ್ಧಿಸಿತಲ್ಲವೇ? ಕುಂತೀ ದ್ರೌಪದಿ ಮುಂತಾದ ಜನರಿಗೆ ಪರಿಣಾಮವಲ್ಲವೇ" ಎಂದು ಸಂತೈಸಲಾಗಿ ರಾಜನು ಅವರಲ್ಲಿ ಹೀಗೆಂದನು.

೮. "ಪಿತಾಮಹನೇ ದೂರ ಹೋದರೂ ಮಕ್ಕಳೆಂದು ನೆನೆಸುತ್ತಿರುವಿರಲ್ಲ! ಅರಗಿನ ಮನೆ, ದ್ಯೂತ, ವನವಾಸ, ಮಕ್ಕಳ ಮರಣ ಮುಂತಾದ ಅನೇಕ ದೊಡ್ಡದೊಡ್ಡ ದುಃಖಗಳನ್ನು ಅನುಭವಿಸಿದರು. ನಾವು ತಮ್ಮ ದಿವ್ಯ ಕೃಪೆಯಿಂದ ಇಂದು ಇಲ್ಲಿಯವರೆಗೆ ಪ್ರಾಣ ಹಿಡಿದುಕೊಂಡಿದ್ದೇವೆ, ಬೇರೇನೆನ್ನಲಿ ಎಂದನು.

೯. ಅಯ್ಯಾ ನೀವೆಲ್ಲಿಗೆ ಹೋಗಿದ್ದೀರಿ? ದಾರಿಯಲ್ಲಿ ಏನು ವೃತ್ತಿಯನ್ನು ಕೈಗೊಂಡಿರಿ? ನಾಡಿನಲ್ಲಿ ಯಾರು ನಿಮಗೆ ಹಿತರಾದರು? ದಿನವೂ ತಮ್ಮ ಊಟ ಏನು? ಕೆಟ್ಟ ಹುಳುಗಳೆಂದು ಯಾರನ್ನು ನೋಡಿದಿರಿ? ಎಷ್ಟು ತೀರ್ಥಗಳನ್ನು ನೋಡಿದಿರಿ? ಜತೆಯಲ್ಲಿ ಯಾರಾರನ್ನು ಕರೆದುಕೊಂಡು ಎಷ್ಟೆಷ್ಟು ಕ್ಷೇತ್ರಗಳನ್ನು ನೋಡಿದಿರಿ?

೧೦. ತೀರ್ಥಗಳನ್ನೋ ಶುದ್ಧ ಮಾಡುವ ಶುದ್ಧ ಚರಣಗಳೇ ತಮ್ಮವು. ಸ್ವಾರ್ಥಕ್ಕೆ ಇಂಬು ಅಗಿಲ್ಲದ ನಿಮ್ಮ ತಿರುಗಾಟ ಜಗತ್ತಿನ ಸಾರ್ಥಕತೆಗೆ ಎಡೆಯಾಗಲೋಸುಗ ನಡೆಯಿತು. ಸಾಧುಗಳಾಗಿ ಜಂಗಮರಂತೆ ತೀರ್ಥಯಾತ್ರೆಗೈದ ನಿಮ್ಮ ಚರಣವನ್ನು ನೋಡಿದ ಕಾರಣ ನಮಗಿನ್ನು ಸ್ವಾರ್ಥವಿಲ್ಲ.

೧೧. ದೇಶಾಂತರ ಸಂಚಾರ ಮಾಡುವ ಸಂದರ್ಭದಲ್ಲೆಲ್ಲಾದರೂ ಶ್ರೀಶಾಶ್ವತ ಮೂರ್ತಿಯಾದ ಕೃಷ್ಣನನ್ನು ದರ್ಶನ ಮಾಡಿದಿರೋ? ಏನಾದರೂ ಸುದ್ದಿ ಕೇಳಿದಿರೊ? ಈ ಎಲ್ಲ ವಿವರಗಳನ್ನು ಕೇಳುವುದಕ್ಕೆ ನಮಗೆ ಆಶೆಯಿದೆ ಎಂದು ಕೇಶವ ಪ್ರಿಯನಾದ ಧರ್ಮರಾಯನು ಹರಿಭಕ್ತನಲ್ಲಿ ಸರ್ವ ತತ್ತ್ವಗಳನ್ನು ವಿಚಾರಿಸಿದನು.

೧೨. ಧರ್ಮರಾಯನು ವಿಚಾರಿಸುವಾಗ ಅವನು ತತ್ವಾರ್ಥ ವಿಚಾರಗಳೆಲ್ಲವನ್ನೂ ಹೇಳಿದನು. ಭೂಮಿಯಲ್ಲಿ ಉತ್ತಮವಾದ ನೂರು ತೀರ್ಥಗಳನ್ನು ನೋಡಿದ ವಿಶೇಷವನ್ನು ವಿವರಿಸಿದನು. ಉದ್ಧವನಿಗೆ ಹರಿ ಬೋಧಿಸಿದ ಬೋಧನೆಯನ್ನೂ, ಬಳಿಕ ಮೈತ್ರೇಯ ಮುನಿ ವಿಧಿ ಪೂರ್ವಕವಾಗಿ ಹೇಳಿದ ಕಥಾ ವಿವರಾದಿಗಳನ್ನು ವಿಸ್ತರಿಸಿದನು.

೧೩. ಕರುಣಾಕರನನ್ನು ಧ್ಯಾನಿಸಿ ಆ ಭಕ್ತ ನಿಧಿಯು ಹಸ್ತಿನಾಪುರದಲ್ಲಿ ಸಂತೋಷದಿಂದ ಅನೇಕ ದಿನ ಸುಖವಾಗಿ - ನಿಷ್ಠೆಯಿಂದ ಇತಿಹಾಸ, ಪ್ರಸಂಗ, ಕಥಾಗೋಷ್ಠಿ ಮೊದಲಾದವುಗಳಿಂದ - ಧರ್ಮರಾಯನೊಂದಿಗೆ ಇದ್ದನು. ಆ ಮೇಲಿನ ವಿಶೇಷವನ್ನು ಕೇಳಿ.

೧೪. ಒಂದಾನೊಂದು ದಿನ ಆ ವಿದುರನು ಧೃತರಾಷ್ಟ್ರನ ಅರಮನೆಗೆ ಹೋಗಿ ಕಂಡನು. ಬಹಳ ನಿಷ್ಠುರವಾಗಿ "ದೋಷಾತ್ಮಕ ಪುರದಿಂದ ಈಗಲೇ ಬೇಗನೇ ಹೊರಡು, ಹೊರಡು. ಇನ್ನು ಮುಂಬರಲಿರುವ ಅನೇಕ ವಿಧ ದೋಷಗಳನ್ನು ಹರನೋರ್ವನೇ ತಿಳಿಯಬೇಕು" ಎಂದನು.

೧೫. "ಮುಂದೆ ಅನೇಕ ವಿಧವಾದ ಅನರ್ಥಗಳು ಪ್ರಜೆಗಳಿಗೆ ಬರಲಿಕ್ಕಿವೆ. ಪರಮೇಶ್ವರನು ಕಾದರೂ ವಿಪರೀತಗಳಿಂದ ಒಳಿತಾಗುವುದು ಅಸಾಧ್ಯ. ಒತ್ತಾಯ ಪೂರ್ವಕವಾಗಿ ತರುಣಿಯನ್ನೆಳೆದುಕೊಂಡು ದೇಶಾಂತರಕ್ಕೆ ಹೋಗು, ಇಲ್ಲದಿದ್ದರೆ ಅನರ್ಥವಾದೀತು - ಹೇ ಕುರುಡಾ" ಎಂದನು.

೧೬. "ಉತ್ತಮರಾದ ಸಾಧುಗಳು ಮೊದಲೇ ಸತ್ತು ಹೋದರು. ನಿನ್ನ ಮಕ್ಕಳಾದಿಯಾಗಿ ಎಲ್ಲರೂ ನಿನ್ನ ದುರ್ಮತಿಯಿಂದ ಸತ್ತು ಹೋದರು. ಮೈದೊಗಲು ಜೋಲುತ್ತಾ ಇದೆ. ದೃಷ್ಟಿ ಮೊದಲಾಗಿ ಇಲ್ಲ. ಕೈತೋಳು ಸವೆದು ಹೋಗುತ್ತಿದೆ. ಈ ಬದುಕು ಮಹಾಕಷ್ಟ" ಎಂದನು.

೧೭. ಯಾರ ಪುರ, ರಾಜ್ಯವನ್ನು ನೀನು ವಶಗೈಯ್ಯಲು ಬಯಸಿದ್ದಿ? ಈಗ ಯಾರ ಸದನದಲ್ಲಿ ಇದ್ದೀಯ? ಈಗ ಯಾರಿಗೆ ಯಾರು ಹಿತರು? ಜೂಜಾಟವಾಡಿ ಹೊರಗಟ್ಟಿ ಯಾರನ್ನೂ ತೊಳಲಾಡಿಸಿದ್ದು? ಈಗ ನಿನಗಾಗುತ್ತಿರುವವರು ಯಾರು? ಸದ್ಗತಿಯನ್ನು ಮಾಡುವಾಗ ಪಿಂಡ ಇಡುವವರು ಯಾರು?

೧೮. ದೀರ್ಘ ಉಸಿರನ್ನು ಬಿಡುತ್ತ ಯಾರಿಗಾಗಿ ದುಃಖಿಸುತ್ತೀಯಾ? ಯಾರಿಗೆ ಮಹಾವಿಷವನ್ನು ಹಾಕಿ ಮಡುವಿನಲ್ಲಿ ಹಾಕಿದ್ದಿಯಾ? ಯಾರ ಸತಿಯನ್ನು ಹಿಡಿದುಕೊಂಡು ಬಂದು ಸಭಾ ಮಧ್ಯಕ್ಕೆ ಕರೆತಂದೆ? ಯಾರ ವೈಭವವನ್ನು ಸಂಗ್ರಹಿಸಿದಿಯಾ? ಅದೆಲ್ಲವನ್ನು ಹೇಳಿ ಇಂದೇನು ಬೆಲೆ?

೧೯. ನನಗವರು ಮಕ್ಕಳು, ನಾನವರಿಗೆ ತಂದೆಯೆಂದು ಮನಸ್ಸಿನಲ್ಲಿ ನೆನೆಸಿ, ಯಾವಾಗಲೂ ಅದನ್ನೇ ಆತ್ಮದಲ್ಲಿ ಕಲ್ಪಿಸಿ ಮರುಳಾದೆ. ನಿನಗೆ ಕಣ್ಣು ಇಲ್ಲದಿದ್ದರೂ ಆತ್ಮ ದೃಷ್ಟಿ ಮುಚ್ಚಿ ಹೋಗಿತ್ತೇ, ಭೂಪಾ? ಮಹಾಪುರುಷ, ಪುಣ್ಯಾಧಿಕ, ನನಗಿದರಲ್ಲಿ ಆಶೆ ಇಲ್ಲವೆಂದನು.

೨೦. ನೀನು ಮನಸ್ಸಿನಲ್ಲಿ ಆಲೋಚಿಸದಿದ್ದರೂ ಈ ಶರೀರವೂ ನಾಶವಾಗುವಂತಾದ್ದಲ್ಲವೇ? ಸಂಪೂರ್ಣವಾಗಿ ಚಿಂದಿಯಾದ ಬಟ್ಟೆಯ ರೀತಿಯಲ್ಲಿ ತಾನಾಗಿಯೇ ಹುಡಿಯಾಗುತ್ತದೆ. ಪಟ್ಟದ ರಾಣಿ, ಧನ, ಮಂದಿರ ಮೊದಲಾದವು ಹಿಂದಿನಿಂದ ಬರಲಾರವು. ಜತೆಯಲ್ಲಿ ಬರವಂತಹವು ಪುಣ್ಯ ಮತ್ತು ದುಷ್ಕೃತ್ಯ ಇವೆರಡೇ- ನರನಾಥ" ಎಂದನು.

೨೧. ಯಾರೂ ಇಲ್ಲದ ಅನಾಥ ದೇಹ; ಅತಿ ವೃದ್ಧ ಶರೀರ; ಭೋಜನ ಮಾಡುವುದಿದ್ದರೆ ರುಚಿಯಿಲ್ಲ, ತನುವಿಗೆ ಜೀರ್ಣಶಕ್ತಿಯಿಲ್ಲ; ಘೋರವಾದ ದೊಡ್ಡ ರೋಗ ಬೆಳೆಯುತ್ತಿದೆ. ಕರಣೇಂದ್ರಿಯಗಳೆಲ್ಲ ಶಕ್ತಿ ಕಳಕೊಂಡಿವೆ. ಇಂದ್ರಿಯಗಳು ನಾಶವಾಗಿವೆ.

೨೨. ಈ ಮನುಷ್ಯ ದೇಹ ನಿತ್ಯವಲ್ಲ- ಅಶುಚಿಯಾದುದು, ಪರಕೀಯವಾದುದು. ಈ ಸೀಮೆಯನ್ನು ಬಿಡದೆ ತನಗೆ ಉತ್ತಮವಾದ ಮಾರ್ಗವನ್ನು ವಿಚಾರಿಸಬೇಕು. ಕಾಮಾದಿ ವಿಷದ ಸಮುದ್ರವನ್ನು ಸಂಪೂರ್ಣವಾಗಿ ಜೈಸಿದರೆನ್ನುವವರನ್ನು ಕೊಂಡೊಯ್ಯಲು ಯಮದೂತರೆನ್ನುವ ಮನುಷ್ಯರಿದ್ದಾರೆ.

೨೩. ಹೇ ವಿದುರಾ ನೀನು ಇಷ್ಟೆಲ್ಲಾ ಹೇಳಿದ್ದು ಹಿತವಾದುದು ಮತ್ತು ಪರಮಾರ್ಥವೂ ಕೂಡ. ದೋಷ ಮತಿಯಾದ ನನಗೆ ಅನೇಕ ಯುಗಗಳಿಂದ ಆಚರಿಸಿಕೊಂಡು ಬರುವ ಹಿತವನ್ನು ಇಂದೆನಗೆ ಹೇಳಿ, ದೋಷ ನಾಶ ಮಾಡಿಸಿ ಸಾಗರ ದಾಟಿ ಹೋಗಲು ತಿಳುವಳಿಕೆ ನೀಡು.

೨೪. ಅಂದಿನಿಂದ ಇಂದಿನವರೆಗೆ ತೊಡಗಿದ ಮತವೊಂದೇ ಎಂಬ ನನ್ನ ನಿರ್ಣಯದ ಕರ್ಮಫಲಗಳು ನಾಶವಾಗದೆ ಮೊದಲೇ ತಿಳುವಳಿಕೆ ಬರಲಿಲ್ಲ. ಇಂದಿಗೆ ನನಗೆ ಯಥಾರ್ಥ ತಿಳುವಳಿಕೆಯ ಸುಲಭೋಪಾಯವೊಂದನ್ನು ಹೇಳು. ಮಾತಾಡದೆ ಇಲ್ಲಿಂದ ಹೋಗುವ ದೃಢವಾದ ಸತ್ಯವನ್ನು ನನಗೆ ಹೇಳು.

೨೫. ಸರ್ವವನ್ನು ಸಾಧಿಸುವುದಕ್ಕೂ ನಾನಿದ್ದೇನೆ. ಪಾಂಡವರು ತಿಳಿಯದ ಹಾಗೆ ಮೌನದಿಂದ ನಿನ್ನ ಪತ್ನಿಯೊಂದಿಗೆ ಗಮಿಸೋಣ. ಹೀಗೆಂದು ಅಂದೇ ನಡುರಾತ್ರಿಯಲ್ಲಿ ಧೃತರಾಷ್ಟ್ರನ ಕೈಯನ್ನು ಹಿಡಿದು ಕರೆದುಕೊಂಡು ನಿರ್ಮಲವಾದ ವಿದುರನು ಇರುಳಲ್ಲಿಯೇ ಬಡಗು ದಿಕ್ಕಿನತ್ತ ಯಾತ್ರಿಸಿದನು.

೨೬. ಮೆಲ್ಲನೆ ಗಂಗಾ ನದಿಯನ್ನು ಕ್ರಮಿಸಿ, ಯಾತ್ರಿಸಿದನು. ಮತ್ತೆ ದೊಡ್ಡ ಶಿಖರಗಳು, ಗ್ರಾಮ, ನದಿ ಸಂಪದ್ಭರಿತವಾದ ಪ್ರದೇಶ- ಇವುಗಳೆಲ್ಲವನ್ನೂ ದಾಟಿ ಅಲ್ಲಿಂದ ಕೈಲಾಸಗಿರಿಯನ್ನು ಸೇರಿದರು. ಆ ಬಳಿಕ ಶ್ರೀಕೃಷ್ಣನನ್ನು ಆರಾಧಿಸಿ ಮುಕ್ತಿಯನ್ನು ಕೈಗೊಂಡರು.

೨೭. ಬಳಿಕ ಉದಯದ ವೇಳೆ ನಿತ್ಯದಂತೆ ನಿತ್ಯ ಕರ್ಮವನ್ನು ಸಲ್ಲಿಸಿ, ತನ್ನ ತಂದೆಯ ಪಾದಗಳಿಗೆ ಅಭಿವಂದಿಸಲೆಂದು ಧರ್ಮರಾಯನು ತಂದೆಯ ಸನ್ನಿಧಾನಕ್ಕೆಂದು ಪುರವನ್ನು ಪ್ರವೇಶಿಸಿದನು. ಅಲ್ಲಿ ಕಾಣದಿರಲು "ಕಣ್ಣಿಲ್ಲದ ಮಹೀಪತಿ ಎಲ್ಲಿಗೆ ಹೋದರೋ; ನನ್ನ ಕರ್ಮವೇ" ಎಂದನು.

೨೮. ಧರ್ಮರಾಯನು ನನ್ನ ತಾತನೇ ಎಂದು ರಾಜಗೃಹದಲ್ಲಿ ಕೂಗಿದನು. ತುಂಬ ಚಿಂತೆಯಿಂದ ಅತನೂ ಹುಡುಕಿದಲ್ಲದೆ ಎಲ್ಲ ಕಡೆಯೂ ಹುಡಿಕಿಸಿದನು. ಒಳ್ಳೆಯ ದಾರಿಯಲ್ಲಿ ಕಾಲಿಡುತ್ತಿರುವಾಗ ಈ ಕಷ್ಟವನ್ನು ಯಾರು ತಾನೇ ನೋಡುತ್ತಾರೆ, ಛೇ ಕಷ್ಟವೇ ಎಂದು ಪರಿತಪಿಸುತ್ತಾ ಸಂಜಯನಲ್ಲಿ 'ನೀನು ತಿಳಿದಿರುವೆಯಾ' ಎಂದು ಕೇಳಿದನು.

೨೯. ಹೀಗೆಂದು ನೃಪನು ಚಿಂತಿಸುತ್ತಿರಲಾಗಿ ಕಣ್ಣೀರನ್ನು ಒರಸಿ ಆತನು "ಮಾತಾ ಪಿತರನ್ನು ಉಪಚರಿಸುವುದಕ್ಕೆಂದು ಇಲ್ಲಿಗೆ ಬಂದೆಯಾ? ಅವರೀರ್ವರೂ ಒಬ್ಬರೂ ತಿಳಿಯದಂತೆ ಗುಟ್ಟಾಗಿ ಹೊರಟು ಹೋದರು. ಕಪಟಿಗಳು ಎಲ್ಲಿಗೆ ಹೋದರು, ಏನಾದರೆಂಬುದನ್ನು ನಾನರಿಯೆ" ಎಂದನು.

೩೦. ಸಂಜಯ ಅಷ್ಟು ಹೇಳಿದ ವಾಕ್ಯವನ್ನು ಕೇಳಿ ಮನಸ್ಸಿನಲ್ಲಿ ಅಜಾತ ಶತ್ರುವು ಅಳತೊಡಗಿದನು. "ನಾವು ಮಾಡಿದ ಹಿತಾರ್ಥದಿಂದ ಪ್ರೀತಿ ಕಾಣದೆ ನಮ್ಮಲ್ಲಿ ಹೇಳದೆ ಎಲ್ಲಿಗೋ ಹೋದರು; ಎಷ್ಟಾದರೂ ಇದು ಅತೀ ಕೌತುಕಕರವಾದುದು" ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡನು.

೩೧. ನೆಲದಲ್ಲಿ ಮುಳುಗಿ ಹೋದರೋ? ಕಡು ದುಃಖದಿಂದ ತಂದೆಯವರು ಗಂಗೆಯಲ್ಲಿ ಶರೀರವನ್ನು ಹಾಕಿಕೊಡು ಬಿಟ್ಟರೆ? ಶೋಕವೆನ್ನುವ ಸಮುದ್ರದಲ್ಲಿ ಮುಳುಗಿ ಲಯವಾಗಿ ಹೋದರೋ? ದೇಶವನ್ನು ಬಿಟ್ಟು ಹೋಗುವುದಕ್ಕೆ ಕಾರಣವಿಲ್ಲ, ಅವರಿಗೆ ದೃಷ್ಟಿಯಿಲ್ಲ, ಸಾಮರ್ಥ್ಯವಿಲ್ಲ ಎಂದು ರಾಜನು ಹೇಳಿದನು.

೩೨. ಒಂದೇ ಒಂದು ದಾರಿಯೂ ಕಾಣದಿರುವಾಗ ಧರ್ಮರಾಯನು ಸಂಜಯನ ಮೇಲೆ ಬಿದ್ದು ಶರೀರವನ್ನು ದಂಡಿಸುತ್ತ ತುಂಬ ಶೋಕದಿಂದ ಅಳುತ್ತ ಭ್ರಾಂತನಾಗಿರುವ ವೇಳೆಯಲ್ಲಿ ಬ್ರಹ್ಮನ ಮಗನಾದ ನಾರದ ಮುನಿ ಭೂಮಿಗೆ ಬಂದನು.

೩೩. ಮರಣದ ಮನೆಯಲ್ಲಿ ಮಂಗಲವಾದ್ಯ ಘೋಷಿಸುವ ಹಾಗೆ, ದೇವ ಶ್ರೀ ಮುನಿಯನ್ನು ಕಂಡು ದೂರದಿಂದಲೇ ಇದಿರುಗೊಂಡನು. ಚಾವಡಿಯ ಬಳಿಗೆ ಅವನನ್ನು ಕರೆದುಕೊಂಡು ಹೋಗಿ ಪೀಠದಲ್ಲಿ ಕುಳ್ಳಿರಿಸಿ ವಂದಿಸಿ, ಭಾವ ಶುದ್ಧಿಯಿಂದ ಪೂಜಿಸಿ ಮತ್ತೆಮತ್ತೆ ವಂದಿಸಿದನು.

೩೪. ವಂದಿಸುತ್ತಿರುವ ರಾಜನನ್ನು ಮೇಲಕ್ಕೆತ್ತಿ ನಾರದನು ಆತನ ಶರೀರವನ್ನು ಪೂಸಿ, ನಿಲ್ಲು ಎಂದು ಎಬ್ಬಿಸಿದನು. ಜತೆಯಲ್ಲಿಯೇ ಕುಳಿತು "ನಿನ್ನ ಮುಖವು ಬಾಡಿರುವುದೇಕೆ" ಎಂದು ಮುನಿಯು ಕೇಳಿದನು. ಆಗ ಮಂದಹಾಸದಿಂದ ಮೆಲ್ಲನೆ ರಾಜನು ಅವನಲ್ಲಿ ಹೇಳತೊಡಗಿದನು.

೩೫. ನಿಮ್ಮಲ್ಲಿ ನಾನೀಗ ಹೇಳುವುದಕ್ಕಾದರೂ ಏನಿದೆ? ಸರ್ವಚೇತನಕ್ಕೂ ಸಾಕ್ಷಿ ನೀವು. ನೀವು ನೋಡದ ವಿಶೇಷ ಏನಾದರೂ ಇದೆಯೇ? ಆದರೂ ಕೇಳಿ. ನಮ್ಮೆಲ್ಲರನ್ನೂ ಮೀರಿ, ಹೇಳದೆ ನಮ್ಮ ತಂದೆಯವರು ಹೋದ ದಾರಿಯನ್ನು ನೀವೀಗ ಬಲ್ಲರಾದರೆ ಹೇಳಬೇಕು-ಎಂದನು.

೩೬. ಅವನು ನಿನಗೆ ಏನಾಗಬೇಕು? ಅವನಿಗೂ ನನಗೂ ಏನು ಸಂಬಂಧ? ಇದನ್ನು ಅರಿಯದೆ ಮಹಾರಾಜನಾದ ನೀನು ಭ್ರಾಂತಿಯಲ್ಲಿ ಬುದ್ಧಿಯನ್ನು ಕಟ್ಟಿಕೊಂಡಿರುವೆ. ಅವರು ಯಾರಿಗೆ ತಂದೆತಾಯಿಗಳು? ನೀನು ಯಾರಿಗೆ ಮಗ? ಈ ರೀತಿ ನೀನು ಮರುಳಾಗುವುದಕ್ಕೆ ಮಾಯೆ ಎಲ್ಲಿಂದಾದರೂ ನಿನ್ನ ನೆತ್ತಿಯನ್ನು ಹಿಡಿದಳು?

೩೭. ಈ ಜಗತ್ತು ನಿತ್ಯವೇ, ಅನಿತ್ಯವೇ? ಅಥವಾ ಎರಡೂ ರೀತಿಯಲ್ಲಿ ವರ್ತಿಸುವುದೇ? ಮಹಾರಾಜನಾಗಿ ಮನಸ್ಸಿನಲ್ಲಿ ನಿಧಾನವಾಗಿ ವಿಮರ್ಶಿಸಿ ನೀನು ನೋಡು. ನಿತ್ಯವಾದರೆ ಹಾಳಾಗದು; ಅನಿತ್ಯವಾದರೆ ಕಾಣದು. ಎರಡೂ ರಾತ್ರಿಯಲ್ಲಿ ವರ್ತಿಸುವುದಾದರೆ ಸರ್ವ ಸಚರಾಚರ ಕಂಡೂ ಕಾಣದಾಗುವುದು.

೩೮. ರಾಜನೇ ಕೇಳು - "ಸಮಸ್ತ ಜಗವೂ ನಾರಾಯಣನಿಚ್ಛೆಯಲ್ಲಿ ನಿತ್ಯವೂ ಉರುಳುತ್ತಿರುತ್ತದೆ. ಇದನ್ನು ವಿಮರ್ಶಿಸಲು, ತಿಳಿಯಲು ಯಾರಿಗೆ ತಾನೇ ಸಾಧ್ಯ? ಮಾಯೆಯಿಂದ ಇದೆಲ್ಲವೂ ನಲಿಯುತ್ತಿರುವುದು ಅತಿ ಕೌತುಕ. ಇದೆಲ್ಲವನ್ನೂ ತಿಳಿದು ಆಗಲೇ ಸಾಕ್ಷಿಮಯನಾಗಿ ದೇವರು ವಿಮರ್ಶಿಸುತ್ತಾನೆ"

೩೯. ಈ ಮಾಯೆಯಲ್ಲಿ ಹುಟ್ಟಿದ ಮಾನವರು ಮನೆ, ಮಕ್ಕಳು, ಹೆಂಡತಿ, ಚಿನ್ನ, ಇದೆಲ್ಲ ನಮ್ಮ ಸರ್ವಸ್ವ; ನೆಂಟರು, ಗೆಳೆಯರು, ನಮಗೆ ಅವರು, ಅವರು ನಮಗೆ ಆಪ್ತರು, ಒಂದೇ ಜಾತಿಯವರು ಸಂಸಾರವೆನ್ನುವ ಈ ಮೋಹ ಸಮುದ್ರವನ್ನು ಈಜುತ್ತಾರೆ.

೪೦. ಹಿಂದೆ ನೀನಾರು? ಈಗ ನಿನಗೂ ಅವರಿಗೂ ಏನು ಸಂಬಂಧ? ಇದನ್ನು ತಿಳಿದರೆ ಆಮೇಲೆ ಅವರ ಮತ್ತು ನಿನ್ನ ಸಂಬಂಧ ಎಂತಹದು? ನಿನ್ನ ಸಂಬಂಧಿಕರು ಯಾರು? ನೀನು ಯಾರನ್ನೂ ರಕ್ಷಿಸುವುದು? ನಿನ್ನನ್ನು ರಕ್ಷಿಸುವವರು ಯಾರು? ನಶ್ವರವಾದ ಈ ತತ್ತ್ವವನ್ನು ತಿಳಿಯದೆ ಲೋಕ ಹಾಳಾಗುತ್ತಿದೆ.

೪೧. ಪಂಚಭೂತಗಳ ವಿಕಲ್ಪದಿಂದ ಜನಿಸಿದ ಈ ದೇಹ; ಇದರಲ್ಲಿ ಬುದ್ಧಿ ಮತ್ತು ಅಹಂಕಾರಗಳೊಂದಿಗೆ ಹತ್ತು ಇಂದ್ರಿಯಗಳೂ ಕೂಡಿವೆ. ಹೀಗೆ ವಿಷಯಗಳ ಶೋಕವೆನ್ನುವ ವನದಲ್ಲಿ ರಾತ್ರಿಯಲ್ಲಿ ಮಿಂಚುವ ಅವಿವೇಕದಂತಿರುವ ಈ ಜಗತ್ತನ್ನು ನೀನು ನಂಬಿದೆಯಲ್ಲವೇ?

೪೨. ಒಂದು ವಸ್ತುವೇ ಅನೇಕ ಭಿನ್ನರೂಪದಿಂದ ಮಾಯೆಯಿಂದ ತೋರಿ ಬರುವುದು - ಒಂದೇ ಮಡಿಕೆಯ ಜಲದಲ್ಲಿ ಚಂದ್ರನ ಬಿಂಬ ತೋರಿ ಬರುವ ಹಾಗೆ. ಈ ಸರ್ವ ಜಗತ್ತಿಗೆಲ್ಲಾ ಆದಿಯಂತ್ಯವಿಲ್ಲದಿರುವುದು ಒಂದೇ. ಆದ್ದರಿಂದ ಒಂದೇ ಬುದ್ಧಿಯಿಂದ ವಿಮರ್ಶಿಸಿ ನಿತ್ಯವೂ, ನಿರ್ಗುಣವೂ ಅದ್ವಯವೂ ಆದ ಈ ತತ್ತ್ವವನ್ನು ವಿಮರ್ಶಿಸಬೇಕು.

೪೩. ಆ ವಿವೇಕ, ಪೂರ್ಣವಸ್ತು, ಸಮಸ್ತ ಗೋದ್ವಿಜ ರಕ್ಷಕನಾಗಿ ವಾಸುದೇವ ಎಂಬ ಹೆಸರಿನಿಂದ ಈ ಭುವನದೊಳಗೆ ಜನಿಸಿದನು. ಭೂಸುರಾದಿಗಳ ಭ್ರಾಂತ ತರ್ಕಗಳಲ್ಲಿಯೂ ಸಿಗದ ಆ ಪರಿಪೂರ್ಣನನ್ನು ಜೀವನದಲ್ಲಿ ನೋಡದೆ ಸರ್ವರೂ ಭ್ರಾಂತರಾಗುವುದು ಅತಿ ಕೌತುಕ.

೪೪. ಹಿಂದೆ ಭೂಮಿಯು ತನಗೆ ಅತಿ ಭಾರವಾಗಲು ಪ್ರಾರ್ಥಿಸಿದಾಗ ಅವನು ಜನಿಸಿದನು. ನಿಮ್ಮ ಪಕ್ಷ ವಹಿಸಿ ಅದೆಲ್ಲವನ್ನು ಬರಿದು ಮಾಡಿದನು. ನೀವು ಇಲ್ಲಿಯವರೆಗೆ ಇರುವ ಈ ಯುಗ ಅವಸಾನವಾಗುತ್ತಾ ಬಂತು. ಮೇಲಿನ ಕಥೆಯನ್ನು ಹರನೋರ್ವನೇ ಬಲ್ಲ - ನಾವು ಹೇಗೆ ವಿವರಿಸುವ?

೪೫. ರಾಜನೇ, ನೀನು ಚಿಂತಿಸದಿರು; ನೀನು ಶ್ರೀ ಜಗಧೀಶನ ಭಕ್ತರು. ಕುಂತೀ ನಂದನರು, ಹರಿಗೆ ಪ್ರೀತಿ ಪಾತ್ರರು ಎಂಬುದು ಪ್ರಸಿದ್ಧವಾಗಿಯೇ ಇದೆ. ಬುದ್ಧಿಯಲ್ಲಿ ಶ್ರೀ ಹರಿಯನ್ನೂ ಚಿಂತಿಸುತ್ತಾ ಸಮಾಧಾನಿಸಿ ಹರ್ಷದಿಂದಿರು. ಈಗ ತಿಳಿಯದಿರುವ ಮಹಾರಾಜನ ವಿಷಯವನ್ನು ನನಗೆ ತಿಳಿದಿರುವಂತೆ ಹೇಳುತ್ತೇನೆ.

೪೬. ನೀತಿವಂತನೇ ಕೇಳು. ಧೃತರಾಷ್ಟ್ರನು ತೀರ್ಥಯಾತ್ರೆಗಾಗಿ ಈ ತಾಣವನ್ನು ಬಿಟ್ಟು ಹಿಮಗಿರಿಗೆ ಹೋದನು. ನಿಮ್ಮ ತಾತನಿಗೆ ಇಂದಿನಿಂದ ಐದನೇ ದಿನದಲ್ಲಿ ಮರಣ ಬರಲಿರುವುದು. ಇದನ್ನರಿತ ಗಾಂಧಾರಿ ಅಗ್ನಿಪ್ರವೇಶ ಮಾಡಲಿರುವಳು - ಇದು ಅವರವರ ಪ್ರಾರಬ್ಧ.

೪೭. ಕಣ್ಣಿಲ್ಲದ ಮಹಾರಾಜ ಈಗ ಹೋಗಿ ಸಮಾಧಿ ಸ್ಥಿತಿಯಲ್ಲಿದ್ದಾನೆ. ಇನ್ನು ಮುಂದೆ ಪುಣ್ಯ ಸಂಪಾದನೆಗೆ ಮನಸ್ಸು ಮಾಡಿ ನಿಶ್ಚಲಾತ್ಮಕನಾಗಿ ಮುಕ್ತಿಯನ್ನು ಹೊಂದುತ್ತಾನೆ. ನೀನು ಸುಮ್ಮನೆ ಈ ವಿಷಯಗಳಿಗೆ ದುಃಖಿಸಿ ಬದುಕನ್ನು ವ್ಯರ್ಥಗೊಳಿಸದಿರು. ಕಣ್ಣೀರನ್ನು ಬಿಟ್ಟು ಮನಸ್ಸಿನಲ್ಲಿ ಹರಿಯನ್ನು ಧ್ಯಾನಿಸು.

೪೮. ಅವರನ್ನು ಕರೆದುಕೊಂಡು ಉತ್ತಮನಾದ ವಿದುರನು ಯಾತ್ರಿಸಿದ್ದಾನೆ. ಅವರ ಅವಸಾನವನ್ನು ನೋಡಿ ಮತ್ತೆ ಅಲ್ಲಿಂದ ಶೋಕವೆಲ್ಲವನ್ನೂ ತ್ಯಜಿಸಿ ತೀರ್ಥಯಾತ್ರೆ ಕೈಗೊಳ್ಳುತ್ತಾನೆ. ಈ ರೀತಿಯ ಅವಸಾನಕ್ಕಾಗಿ ನೀನು ನಿಷ್ಫಲವಾಗಿ ದುಃಖಮಾಡುತ್ತಿರುವುದೇಕೆ ಎಂದು ಆ ಮುನಿ ಹೇಳಿದನು.

೪೯. ಸಾಕು ಇನ್ನು ನಿನ್ನ ಮಂದಿರಕ್ಕೆ ಹೋಗು, ಸುಮ್ಮನೇ ಮಾಯೆಯನ್ನು ನಿನ್ನ ಬುದ್ಧಿಗೆ ಲೇಪಿಸಿ ಕೊಂಡಿದ್ದೀಯಾ, ಅದನ್ನು ಅಲ್ಲಿಂದ ನೂರು ದೀಪವನ್ನು ಪ್ರಜ್ವಲಿಸಿ ಕತ್ತಲೆಯನ್ನೂ ನಿವಾರಿಸಬೇಕು ಎಂದ ಮುನೀಶ್ವರ ಆಮೇಲೆ ತಮ್ಮ ನಿವಾಸವಾದ ಸತ್ಯಲೋಕದತ್ತ ಗಮಿಸಿದನು.

೫೦. ನಾರದನ ಸೂಕ್ತಿ ಸುಧಾರಸವನ್ನು ಕೇಳಿದ ಮಹಾರಾಜನು ಅವನು ಹೇಳಿದ ಹಾಗೆಯೇ ಮಂದಿರದೊಳಗೆ ಪ್ರವೇಶಿಸಿ ವಾಸಿಸಿದನು ಎಂಬಲ್ಲಿಗೆ ದ್ವಾದಶಾಧ್ಯಾಯವಾಯಿತು. ಇದು ಪುಂಡರೀಕ್ಷದಲಾಕ್ಷನಾದ ಕೃಷ್ಣನ ಪಾದಕ್ಕೆ ನಿತ್ಯ ಸಮರ್ಪಣೆಯಾಗಲಿ.

ಅಧ್ಯಾಯ ೧೩

೧. ಶ್ರೀ ಗುರುವನ್ನು ಸ್ಮರಿಸಿ ಕ್ರಮವಾಗಿ ವಂದಿಸುತ್ತೇನೆ. ಆ ಗಜಮುಖನ ಪಾದಕ್ಕೆ ನೈವೇದ್ಯವನ್ನು ಅರ್ಪಿಸುತ್ತೇನೆ. ಬ್ರಹ್ಮನ ರಾಣಿಯ ವಲ್ಲಭೆಯ ಆಜ್ಞೆಯನ್ನು ಪಡೆದುಕೊಂಡು ಶ್ರೀ ಗರುಡವಾಹನ ವಿಯೋಗದ ಕಥೆಯನ್ನು ಹೇಳುತ್ತೇನೆ.

೨. ಶೌನಕ ಮುನೀಶ್ವರರೇ ಕೇಳಿ, ಧರ್ಮರಾಯನು ಕೆಲವು ಕಾಲ ಹಸ್ತಿನಾಪುರದಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಆಗ ಒಂದು ದಿನ ಅರ್ಜುನನು ರಾಕ್ಷಸ ವಿರೋಧಿಯಾದ ಶ್ರೀಕೃಷ್ಣನನ್ನು ಕಾಣಲೆಂದು ಬರುತ್ತಿರಲು ಅಂದಲ್ಲಿ ನಡೆದ ಹಲವು ವಿಸ್ಮಯಗಳನ್ನು-ಕೇಳಿ.

೩. ಹಸ್ತಿನಾಪುರದಲ್ಲಿ ಕತ್ತಲೆ ಕಾಣಿಸಿಕೊಂಡಿತು. ಸುತ್ತಲೂ ಹೊಗೆ ದಟ್ಟವಾಗಿ ಮೇಲೆ ಮೇಲೆ ನೆಗಹ ತೊಡಗಿತು. ಹತ್ತು ದಿಕ್ಕುಗಳಲ್ಲಿ ಉರಿದು ಅದ್ಭುತವಾದ ಬೆಂಕಿಯು ಕಾಣಿಸಿಕೊಂಡಿತು. ಅನೇಕ ಕೌತುಕ ವಿಪರೀತಗಳು ತಲೆದೋರ ತೊಡಗಿದವು.

೪. ಭೂಮಿ ಕಂಪಿಸಿತು. ಧೂಳು ಮೇಲೆದ್ದಿತು. ಕೆಸರು ನೀರು ಅಲ್ಲಿ ಕಂಡುಬಂತು. ಗಾಳಿಯಲ್ಲಿ ತಂಪಿಲ್ಲದಾಯಿತು. ಆನೆ, ಕುದುರೆ ದುಃಖಿಸಿ ನರಳಿದವು. ಮೇಲಕ್ಕೆ ಮುಖ ಎತ್ತಿ ಜಗತ್ತಿನೆಲ್ಲೆಡೆ ನರಿಗಳು ಊಳಿಡತೊಡಗಿದವು.

೫. ಮಾವಿನ ಮರದಲ್ಲಿ ತುಂಬ ಹಲಸಿನ ಹಣ್ಣುಗಳು ಫಲಿಸಿದವು. ಹಲಸಿನ ಮರದಲ್ಲಿ ಮಾವಿನ ಹಣ್ಣುಗಳು ತೂಗಾಡಿದವು. ಹಗಲಿನಲ್ಲಿ ತಾರೆಗಳು ಯಥೇಚ್ಛವಾಗಿ ಕಂಡು ಬಂದವು. ನರಿಗಳು ನಾಲ್ಕು ದಿಶೆಗಳಲ್ಲಿಯೂ ಕೂಗುವುದಕ್ಕೆ ಪ್ರಾರಂಭಿಸಿದುವು.

೬. ಬೇಸಿಗೆಯಲ್ಲಿ ಅತಿ ಹಿಮ ತುಂಬಿಕೊಂಡಿತು. ಶೀತದಿನಗಳಲ್ಲಿ ಅತಿ ಉಷ್ಣ ಉಂಟಾಯಿತು. ಮಾಗಿಯಲ್ಲಿ ಗಾಳಿ ಮುಗಿಲಾಗಿ ಮಳೆ ಸುರಿಯಿತು. ಸಜ್ಜನರು ದುರ್ಜನರಾದರು.

೭. ದುಷ್ಟರು ಸಾಧುತನವನ್ನು ಪಡೆದು ಸುಖಿಸಿದರು. ಶಿಷ್ಟರು ಕೆಟ್ಟತನ ಕಪಟಗಳನ್ನು ಆಚರಿಸಿದರು. ಸಾಮರ್ಥ್ಯವಂತರು ಶಕ್ತಿ ಲಯವಾಗಿ ದುಃಖಿಸಿದರು. ಕಿವುಡರು ವೇದ ಪಠಿಸಿ ಅತಿಯಾಗಿ ಹರ್ಷಿಸಿದರು.

೮. ತಂದೆ -ಮಕ್ಕಳಲ್ಲಿ ಅತಿ ಘೋರ ಸಮರವಾಯಿತು. ತಂದೆಯೊಂದಿಗೆ ಮಕ್ಕಳು ತರ್ಕಕ್ಕೆ ಇಳಿದರು. ಬಂಧುಗಳು ನೆಂಟರಲ್ಲಿ ಗುದ್ದಾಟ ಕಾದಾಟವಾಯಿತು. ಸಾಧುಗಳನ್ನು ಪರಿಹಾಸ್ಯ ಮಾಡತೊಡಗಿದರು.

೯. ತಮ್ಮ ಈ ಘೋರತ್ವವನ್ನು ನೋಡು ಎಂದು ಧರ್ಮರಾಯನು ಹೇಳಿದನು. ದುರ್ನಡತೆಗಳು ಹಲವು ರೀತಿಯಲ್ಲಿ ಮೆರೆದುಕೊಂಡು ಬರುತ್ತಿವೆ. ಕರ್ಮಗತಿಯ್ನು ನೋಡಲು ಪಾರ್ಥನೂ ಇಲ್ಲಿಲ್ಲ. ಬ್ರಹ್ಮಸುತನಾದ ನಾರದನು ಹೇಳಿದ ದಿನಗಳೇ ಒಂದು ಪಕ್ಷ ಬಂದವೇನೋ!

೧೦. ಹಿಂದೆಯೇ ನಾರದರು ನನಗೆ ಶ್ರೀರಮಣ ಯಾತ್ರಿಸುವ ಕಾಲವಿದು ಎಂಬ ರಹಸ್ಯವನ್ನು ಮೊದಲೇ ಹೇಳಿದ್ದನು. ಅವನು ಬಿಟ್ಟರೆ ನಮ್ಮ ಅನುಕೂಲಕ್ಕೆ ಮಾರಿ ಬರುವುದಷ್ಟೇ! ಆದ್ದರಿಂದ ಇನ್ನು ಈ ಶರೀರವನ್ನು ಬಿಡಬೇಕು.

೧೧. ಯಾರ ಅನುಗ್ರಹದಿಂದ ನಾವು ಜನಿಸಿದೆವೋ, ಯಾರು ನಮ್ಮನ್ನು ಇಲ್ಲಿಯವರೆಗೆ ರಕ್ಷಿಸಿದರೋ, ಅಂತಹವರು ಇನ್ನು ನಮ್ಮನ್ನು ಬಿಟ್ಟರೆಂದ ಮೇಲೆ ಮರಣ ಬಾರದೆ ನಾವಿರುವುದಾದರೂ ಹೇಗೆ?

೧೨. ನನ್ನೆರಡೂ ಕಣ್ಣುಗಳೂ, ಪಾದಗಳೂ, ತೋಳುಗಳೂ ನಿತ್ಯವೂ ಚಲಿಸುತ್ತಿವೆ. ಹೊಟ್ಟೆಯಲ್ಲಿ ಸದಾ ಬೆಂಕಿ ಹೊತ್ತಿ ಉರಿಯುತ್ತಿದೆ. ಹಿಡಿದು ಅಲುಗಾಡಿಸಿದಂತಾಗುತ್ತಿದೆ. ಶರೀರ ಸಮುದ್ರ ತಡೆಮೀರಿ ಪ್ರವಹಿಸುತ್ತಿದೆ.

೧೩. ರಕ್ತದ ಮಳೆ ಅತಿಯಾಗಿ ಬೀಳುತ್ತಿದೆ. ಆಕಾಶದಲ್ಲಿ ಮುಗಿಲಾಗದೆ ಸಿಡಿಲು ಘರ್ಜಿಸುತ್ತಿದೆ. ಸುತ್ತಲೂ ಸುಳಿಗಾಳಿಯಲ್ಲಿ ಪೊದೆಗಳು ಮುರಿಯುತ್ತಿವೆ. ನಡು ಹಗಲಿನಲ್ಲಿ ಕತ್ತಲೆ ಉಂಟಾಗುತ್ತಿದೆ.

೧೪. ಅಂಬರದಲ್ಲಿ ನವಗ್ರಹಗಳು ಯುದ್ಧವನ್ನು ಆರಂಭಿಸಿವೆ. ಭೂಮಿಯಲ್ಲಿ ಹೋಮಾಗ್ನಿಯು ತುಪ್ಪದಿಂದ ಆರಿ ಹೋಗುತ್ತಿದೆ. ದನಗಳು ಕರುವಿಗೆ ಹಾಲೂಡದಿವೆ. ಹಸುವಿನ ಕೆಚ್ಚಲಲ್ಲಿ ನೊರೆ ಹಾಲು ಇಲ್ಲವಾಗಿದೆ.

೧೫. ಅರ್ಜುನನು ಯಾತ್ರಿಸಿದ ಈ ವೇಳೆಯಿಂದ ಅನೇಕ ವಿಧವಾದ ಶಕುನಗಳು ಕಾಣಿಸಿಕೊಂಡು ಅನರ್ಥ ಮತ್ತು ವಿಪರೀತ ಫಲವನ್ನುಂಟು ಮಾಡುತ್ತಿವೆ. ತೋಳಗಳು ಸಂಚರಿಸುತ್ತ ಮನುಷ್ಯರನ್ನು ಕೊಲ್ಲುತ್ತಿವೆ. ಸ್ಥಿರವಾದ ಸಿಂಹಾಸನಗಳು ನಿತ್ಯವೂ ಚಲಿಸುತ್ತಿವೆ.

೧೬. ಮತ್ತೆ ಭೂಮಿಯಲ್ಲೆಲ್ಲ ತೇವವುಂಟಾಗಿದೆ. ಭೂಮಿಯಲ್ಲಿ ಉದಿಸಿರುವ ಶಿವಲಿಂಗಗಳು ದುಃಖಿಸುತ್ತಿವೆ. ಭೂಮಿಯಲ್ಲಿರುವ ಕೆರೆಯ ನೀರ ಕದಡುತ್ತಿದೆ- ಭೀಮಾ ಈ ಎಲ್ಲ ಚೋದ್ಯವಾದ ಕೌತುಕಗಳಿಗೆ ಏನೆನ್ನೋಣ!

೧೭. ನಾಲ್ಕು ದಿಕ್ಕಿಗೆ ನೋಡಿದರೂ ತುಂಬ ಭಯವಾಗುತ್ತಿವೆ. ನಾಲ್ಕು ದಿಕ್ಕಿನ ಮೂಲೆಯಿಂದಲೂ ಪ್ರತಿಧ್ವನಿ ಧ್ವನಿಸುತ್ತಿದೆ. ನಾಲ್ಕು ದಿಕ್ಕಿನಲ್ಲಿಯೂ ಹೊಗೆ ಆವರಿಸಿ ಮೇಲೇಳುತ್ತಿದೆ. ಇದು -ನಾಲ್ಕನೆಯ ಯುಗಕ್ಕೆ ಒಪ್ಪುವ ಲಕ್ಷಣವೇ?

೧೮. ಭೂಮಿ ದೇವಿಯು ಅರ್ಧ ತಪವನ್ನು ಹಿಂದೆ ಆಚರಿಸಿದಳೇನೋ! ಅವಳಿಗೆ ಊರ್ಧ್ವಲತೆ ಲಾಂಛನ ಪದವನ್ನು ಧರಿಸುವ ಭಾಗ್ಯ ಇಲ್ಲದಾಯಿತು. ಶ್ರೀ ಕಮಲ ನಾಭನು ಸಿದ್ಧ ಜನಗಳಿಗೆ ಮಾತ್ರ ಯಾವಾಗಲೂ ಸಿದ್ಧಿಸುತ್ತಾನೆ.

೧೯. ಶಿವ ಶಿವ! ಮಹೇಶ! ಜಗದೇಕ! ಸುರವಂದ್ಯ! ಭವಭಯನಾಶ, ಕರುಣಾರ್ಣವ! ಗುಣಾಢ್ಯ! - ಹೀಗೆಂದು ಧರ್ಮರಾಯನು ದುಃಖಿಸುತ್ತಿರುವ ದಿನದಲ್ಲಿ - ಹೇಳಿದ ರೀತಿಯಲ್ಲಿ - ಪಾರ್ಥನು ಬಂದನು.

೨೦. ಕುಂದಿರುವ ತಾವರೆಯಂತಹ ಮುಖ, ರಸ ಒಣಗಿದ ತುಟಿ, ಧಾರಾಕಾರವಾಗಿ ಕಣ್ಣಿನಿಂದ ಇಳಿಯುತ್ತಿರುವ ಕಣ್ಣೀರಿನಿಂದ ಶರೀರ ಬಾಡಿ ಬಳಲಿ ಬರುತ್ತಿದ್ದನು. ಇಂದ್ರಜನಾದ ಪಾರ್ಥನನ್ನು ಆ ವೇಳೆಯಲ್ಲಿ ಧರ್ಮರಾಯನು ನೋಡಿದನು.

೨೧. ಕಣ್ಣಿಲ್ಲದ ಕುರುಡನ ಹಾಗೆ ಭೂಮಿಗೆ ಕಲ್ಲು ಪೊದರುಗಳಿಗೆ ಸಹಿತ ಎಡವಿಕೊಂಡು, ತನ್ನ ಕಣ್ಣೀರಿನಿಂದ ಶರೀರವನ್ನು ನೆನೆಸುತ್ತಾ ಪಾರ್ಥನು ಬಂದು ರಾಜನಿಗೆ ವಂದಿಸಿದನು.

೨೨. ಕಡಿದ ಮರವು ಬೀಳುವ ರೀತಿಯಲ್ಲಿ ಮೊಣಕಾಲೂರಿ ಅಣ್ಣನ ಪಾದಕ್ಕೆ ಬಿದ್ದನು. ಹೊರಳಾಡುತ್ತಿರುವ ತಮ್ಮನನ್ನು ಹಿಡಿದೆತ್ತಿ ಮೈಯನ್ನು ಸವರುತ್ತಾ ಧರ್ಮರಾಯನು ಕುಶಲೋಕ್ತಿಯಿಂದ ಚೋದ್ಯವನ್ನು ವಿಚಾರಿಸಿದನು.

೨೩. ಬಿಕ್ಕಿ ಬಿಕ್ಕಿ ಮನಸ್ಸಿನಲ್ಲಿ ಅಧಿಕವಾಗಿ ದುಃಖಿಸುತ್ತಿರುವ ಪಾರ್ಥನನ್ನೂ ತಕ್ಕೈಸಿ ಮೆಲ್ಲನೆ ಧರ್ಮರಾಯನು ದುಃಖವಾದರೂ ಏಕೆ ನಿನಗುಂಟಾಯಿತು - ಶ್ರೀಕೃಷ್ಣನ ನಗರದತ್ತ ಎಲ್ಲವೂ ಕುಶಲವೇ ಹೇಳು - ಎಂದನು.

೨೪. ನಗರದಲ್ಲಿ ಸದಾ ಆರೋಗ್ಯವಾಗಿದ್ದೆಯಾ? ದೇವರ ಕರುಣದಿಂದ ಬಾಂಧವರಿಗೆ ಆರೋಗ್ಯವೇ? ವಸುದೇವ ದೇವಕಿಯವರಿಗೆ ಆರೋಗ್ಯವೇ? ದಯಾಬ್ಧಿಯೂ ಕರುಣಾಳವೂ ಆದ ರಾಜನಿಗೆ ಕ್ಷೇಮವೇ ಎಂದನು.

೨೫. ಶ್ರೀಕೃಷ್ಣ, ಗದ, ಸಾಂಬರಿಗೆ ಕ್ಷೇಮವೇ?ಉದ್ಧವ, ಸಾತ್ಯಕಿ ಮೊದಲಾದ ಜನಗಳಿಗೆ ಕ್ಷೇಮವೇ? ಹೃದಿತ್ಯ, ಅಕ್ರೂರ, ಕೃತವರ್ಮರಿಗೆ ಕ್ಷೇಮವೇ? ಶತ್ರುಜಿತ, ಸಾತ್ವಜಿ ಮೊದಲಾದ ಜನಗಳಿಗೆ ಕ್ಷೇಮವೇ?

೨೬. ಮುಕುಂದನ ಅಣ್ಣನಾದ ಬಲರಾಮನಿಗೆ ಕ್ಷೇಮವೇ? ಅನಿರುದ್ಧ ಪ್ರದ್ಯುಮ್ನಾದಿಗಳು ಕ್ಷೇಮಿಗಳೇ? ನಂದ, ಸುನಂದ, ಶೂರಸೇನ ಮೊದಲಾದವರು ಕ್ಷೇಮವೇ? ಹಾಗೆಯೇ ಸಮಸ್ತ ಯಾದವ ಬಲಕ್ಕೆ ಕ್ಷೇಮವೇ?

೨೭. ಕಿರೀಟಿಯೇ! ಸುರ, ನರ, ಮಹೋರಗ, ಮುನೀಂದ್ರಜನ ವಂದ್ಯನೂ, ಪರಮಪುರುಷೋತ್ತಮನೂ, ಅನಾಥ ಜನಬಂಧುವೂ, ಶರಣಜನ ವತ್ಸಲನೂ ಆದ, ಪರಿಪೂರ್ಣನಾದ ರಮೇಶ ಸ್ಥಿರ ಸುಖದಲ್ಲಿ ವಾಸಿಸುತ್ತಿರುವನೇ? ದೃಢವಾಗಿ ಹೇಳು.

೨೮. ಯಾರ ಪಾದವನ್ನು ಭಜಿಸಿದವಳಾಗಿ, ನಾರಿಮಣಿಯೂ ಸತ್ರಾಜಿತುವಿನ ಮಗಳೂ ಆದ ಸತ್ಯಭಾಮೆ, ಅಂದು ಸುರಲೋಕದ ಮರವಾದ ಪಾರಿಜಾತವನ್ನು ತರುವುದಕ್ಕೆ ಸಾಧ್ಯಾವಾಯಿತೋ - ಆ ಶ್ರೀ ರಮಣ ಸುಖದಲ್ಲಿ ಇರುವನೇ ಪಾರ್ಥ?

೨೯. ದೇವ ಜನರೆಲ್ಲರನ್ನು ಸೇರಿಸಿ, ದ್ವಾರಕೆಯಲ್ಲಿಯೇ ಶ್ರೀಕೃಷ್ಣ ದೇವ ಸಭೆಯನ್ನು ಸಾಧಿಸಿದನು. ದೇವಸುಖವನ್ನು ಪೂರ್ಣವಾಗಿ ಭೂಮಿಯಲ್ಲಿ ಕಾಣಿಸಿದನು. ಅಂತಹ ದೇವಪತಿ ವಂದ್ಯನು ಕ್ಷೇಮವೇ ಕಿರೀಟಿ?

೩೦. ಲೆಕ್ಕ ಮಾಡಲು ಸಾಧ್ಯವಿಲ್ಲದಂತಹ ಮಹಿಮೆಯುಳ್ಳವನಾದ ಶ್ರೀಕೃಷ್ಣನ ರಾಜ್ಯದಲ್ಲಿ ಇಲ್ಲಿಯವರೆಗೆ ಕಳೆದೆ. ಬರುವಾಗ ಇಷ್ಟು ತಡವಾದುದು ಏಕೆ? ದೇಹಕ್ಕೆ ದುಃಖ ತುಂಬಿಕೊಳ್ಳುವಂತೆ ಮಾಡಿ ಕೊಂಡದ್ದು ಏಕೆ?

೩೧. ಆತನ ಪಾದ ಯುಗವನ್ನು ಚಿಂತಿಸುವ ಜಂತುವಿನ ಯಾವುದೇ ರೀತಿಯ ಅನರ್ಥವೂ ಅದರಿಂದ ಶುದ್ಧಿಯಾಗುತ್ತದೆ. ಹಾಗಿರುವಾಗ ಪಾದಯುಗವನ್ನು ಸೇವಿಸಿ ಬರುವ ನಿನಗೆ ಖೇದ ಹೇಗಾದರೂ ಉಂಟಾಯಿತು, ನರವೀರಾ?

೩೨. ಒಂದು ವೇಳೆ ಮಕ್ಕಳು, ಹೆಂಡತಿ, ಮುದುಕರು, ಸೋಮಾರಿಗಳು, ಕುರುಡರನ್ನು ನೋಡಿ ಪಾಲಿಸಲು ಸಾಧ್ಯವಾಗದೆ ದಂಡಿಸಿದೆಯೋ? ಅಥವಾ ಅತಿಥಿಗಳನ್ನು ನೋಡದೆ ವಂಚಿಸಿದ, ಪಾಪವು ನಿನಗೆ ತಟ್ಟಿತೇ ಎಂದು ರಾಜನು ಕೇಳಿದನು.

೩೩. ಕೋಪಕ್ಕೆ ಗುರಿಯಾಗಿ ಸತ್ಪಾತ್ರರನ್ನು ನಿಂದಿಸಿದೆಯೋ? ವಸ್ತು ವಿಷಯಾದಿಗಳಲ್ಲಿ ವ್ಯಸನಿಯಾಗಿ ಬಂದೆಯೋ? ಬ್ರಾಹ್ಮಣರು ಕೇಳಿದನ್ನುದಾನವಾಗಿ ಕೊಡಲಿಲ್ಲವೋ? ಹಸು, ಮಕ್ಕಳು, ಮುದುಕರಲ್ಲಿ ಅನರ್ಥಕಾರಿಯಾಗಿ ನಡೆದುಕೊಂಡೆಯೋ?

೩೪. ರೋಗಿಷ್ಠರನ್ನು ರಕ್ಷಿಸಲು ಸಾಧ್ಯವಾಗಲಿಲ್ಲವೇ? ಬಯಸಿದನ್ನು ಬೇಕಾದವರಿಗೆ ಕೊಡುವುದಕ್ಕೆ ಆಗಲಿಲ್ಲವೋ? ಬೇರೆ ಹೆಂಗಸರಲ್ಲಿ ಭೋಗವನ್ನು ಅಪೇಕ್ಷಿಸಿದೆಯೋ? ವೇದಜ್ಞರಾದ ಬ್ರಾಹ್ಮಣರ ಸಿಟ್ಟಿಗೆ ಗುರಿಯಾದೆಯೋ?

೩೫. ಅನೇಕ ದಿನ ಇರಲಾಗಿ ಬಂಧುಗಳು ದ್ವೇಷಿಸಿದರೋ? ಮಹಾಜನರೂ ಏನಾದರೂ ದೋಷಾರೋಪ ಮಾಡಿದರೋ? ಕುರುಡರ ಹಾಗೆ ಮುಖವನ್ನು ನೋಡದೆ ಹೃದಯದಲ್ಲಿ ಚಿಂತೆಯನ್ನು ತುಂಬಿಸಿಕೊಂಡಿರುವ ಕಾರಣವಾದರೂ ಏನು?

೩೬. ಪ್ರಾಣಸ್ನೇಹಿತನೂ, ಕರುಣೆಯೂ ಆದ ಕೃಷ್ಣನ ಮನಕ್ಕೆ ಹೆಡ್ಡತನದಲ್ಲಿ ಏನಾದರೂ ಕುಂದು ಮಾಡಿದೆಯಾ? ಬಾಣನ ವೈರಿಯಾದ ಕೃಷ್ಣನು ನಿನ್ನನ್ನು ನೋಡದೆ ಕೋಪಿಸಿದನೋ? ರಾಣಿಯರು ಕೃಷ್ಣ ತಿಳಿಯುದ ಹಾಗೆ ನಿಂದಿಸಿದರೋ?

೩೭. ಹೀಗೆ ಅತಿಯಾದ ದುಃಖದಿಂದ ಅರಮನೆಗೆ ಬಂದ ಫಾರ್ಥನನ್ನು ಅನೇಕ ರೀತಿಯಲ್ಲಿ ಧರ್ಮರಾಯನು ಕೇಳಿದನು. ಅದನ್ನು ಕೇಳಿ ಬಿಕ್ಕಿಬಿಕ್ಕಿ ಜಲವು ಸುರಿಯುವ ಹಾಗೆ ಅರ್ಜುನನು ಅಳಲು ಕಣ್ಣಿನಿಂದ ನೀರು ಸುರಿಯತೊಡಗಿತು.

೩೮. ಕೇಳಿದ ಕುತೂಹಲದ ಪ್ರಶ್ನೆಗಳೆಲ್ಲವನ್ನೂ ಪೂರ್ಣವಾಗಿ ಪಾರ್ಥನು ಗ್ರಹಿಸಿಕೊಂಡನು, ಹೇಳುವುದಕ್ಕೆ ಸಾಧ್ಯವಾಗದೆ, ಸಣ್ಣ ಧ್ವನಿಯಲ್ಲಿ ಗಂಟಲು ಕಟ್ಟಿದಂತಾಗಲು ತಲೆಬಗ್ಗಿಸಿ ನೆಲ ನೋಡುತ್ತ ತನ್ನ ಹೃದಯದಲ್ಲಿ ಮುಕುಂದನ ಪಾದಯುಗಗಳನ್ನು ಚಿಂತಿಸಿದನು.

೩೯. ಹೀಗೆ ಅರ್ಜುನನು ಬುದ್ಧಿಯಲ್ಲಿ ಅಚ್ಯುತನನ್ನು ಚಿಂತಿಸಿದನೆಂಬಲ್ಲಿಗೆ ತ್ರಯೋದಶಾಧ್ಯಾಯವಾಯಿತು. ಇದನ್ನು ಹೇಳುವ ಮತ್ತು ಕೇಳುವ ಮಂದಿಗೆ ಮರಣಾನಂತರ ವೈಕುಂಠ ಪದ ದೊರೆಯುವುದು. ಇದನ್ನು ನಂಬಿ.

ಅಧ್ಯಾಯ ೧೪

೧. ಈಶ್ವರ, ಬ್ರಹ್ಮ, ವಿಷ್ಣು, ಗಣೇಶ, ಷಣ್ಮುಖ ಹಾಗೂ ನಾರದಾದಿ ಸಮಸ್ತ ಭೂಸುರ ಸಂಘಕ್ಕೆ ವಂದಿಸುತ್ತೇನೆ. ಪಂಚ ಪಾಂಡವರಂದಿನ ದಿನ ಮೊಮ್ಮಗನಿಗೆ ರಾಜ್ಯ ಒಪ್ಪಿಸಿ ಪಂಚಬಾಣನ ತಂದೆಯಾದ ಕೃಷ್ಣನ ಪಾದವನ್ನು ಸ್ಮರಿಸಿ ಮುಕ್ತಿ ಪಡಕೊಂಡ ಕಥೆಯನ್ನು ಹೇಳುತ್ತೇನೆ.

೨. ಕಷ್ಟಗಳನ್ನು ಪರಿಹರಿಸುವ ಶೌನಕ ಮುಖ್ಯರೇ ಕಿವಿಗೊಟ್ಟು- ಕರುಣಾಸಾಗರನೂ ಭಕ್ತವತ್ಸಲನೂ ಆದ ಕೃಷ್ಣನು ಗೈದ ಅಂದಿನ ಪರಾಕ್ರಮವನ್ನು - ಕೇಳಿ. ಹರಿವಿಯೋಗದಿಂದ ಮನಸ್ಸಿನಲ್ಲಿ ಹೆದರಿದ ಧನಂಜಯನು ಧರ್ಮರಾಯನ ಚೋದ್ಯವನ್ನು ನೋಡಿ ತನ್ನಾತ್ಮದಲ್ಲಿಯೇ ಹೀಗೆ ಹೇಳತೊಡಗಿದನು.

೩. ಮನಸ್ಸಿಗೆ ದುಃಖ ಬಂದು ಸತತವೂ ಚಿಂತಿಸುತ್ತಿರುವ ಕಾರಣವೇನೆಂದು ವಿಚಾರಿಸುವ ಧರ್ಮರಾಯನಲ್ಲಿ, ಕಣ್ಣೀರನ್ನು ಒರೆಸಿಕೊಂಡು ಅರ್ಜುನನು ಅನರ್ಥದ ಕಥೆಯನ್ನು ವಿಸ್ತರಿಸಿದನು.

೪. ಅಣ್ಣ, ನಮಗೊದಗಿದ ದುಃಖವನ್ನು ಎಂತು ಹೇಳಲಿ! ನಮ್ಮ ಬಾಯಿಗೆ ಮಣ್ಣು ಹಾಕಿದ ಅವಸ್ಥೆಯಲ್ಲಿ ಯಾರಿಗೆ ಏನನ್ನು ಹೇಳೋಣ! ಕಣ್ಣಾರೆ ಕಂಡು ಅರಿಯದಿದ್ದರೂ, ಹಿರಿಯರು ವರ್ಣಿಸಿರುವುದನ್ನಾದರೂ ನಾವು ಮಾಯೆಯ ಕಾರಣದಿಂದ ಅರಿಯಲಿಲ್ಲ!

೫. ಪ್ರಾಣ ಹೋದ ಮೇಲೆ ಶರೀರವನ್ನು ನೋಡಿ ಏನು ಪ್ರಯೋಜನ? ವಿಧಿಯ ವಂಚನೆಯಿಂದ ನಮಗೆ ಅದೇ ರೀತಿಯ ಕೊರತೆ ಬಂದಿದೆ. ಚಾಣುರಾರಿಯಾದ ಕೃಷ್ಣ ನಮ್ಮೆಲ್ಲರನ್ನೂ ಬಿಟ್ಟು ಹೊರಟು ಹೋದರು. ಇನ್ನು ನಮಗೆಲ್ಲ ಏನು ಗತಿ ಎಂದು ಅರ್ಜುನನು ಚಿಂತಿಸಿದನು.

೬. ಹುಟ್ಟಿನಿಂದ ತೊಡಗಿ ಇಲ್ಲಿಯವರೆಗೆ ಅವನ ಅನುಗ್ರಹದ ಕಟ್ಟಿನಲ್ಲಿಯೇ ವಾಸಿಸುತ್ತಿದ್ದರೂ ಏನು ಫಲ? ನೀರಿನಲ್ಲಿ ಹುಟ್ಟಿ ಕಮಲದ ಮೇಲೆ ಸದಾ ವಾಸಿಸುವ ಕಪ್ಪೆಯ ಬಯಕೆಯಂತೆ ನಮ್ಮ ಬಯಕೆಯೂ ಆಯಿತು. ಸಾರವನ್ನು ನಾವು ತಿಳಿಯಲಿಲ್ಲ.

೭. ನಮಗಿವನು ಬಂಧುವೆನ್ನುವ ಅಹಂಕಾರ ಭಾವದಿಂದ ದಿನಂಪ್ರತಿಯೂ ಭಾವನ ಸ್ಥಾನವನ್ನು ಕೊಟ್ಟು, ಸುಮ್ಮನೆ ಮರುಳಾಟವಾಡಿದೆವು. ಇಷ್ಟು ಕಾಲದ ವರೆಗೆ ನಮ್ಮಲ್ಲಿದ್ದ ಮಂಕು ಬುದ್ಧಿಗೆ ಏನೆಂದು ಹೇಳೋಣ- ಶಂಖ, ಚಕ್ರ, ಗದೆಯನ್ನು ಧರಿಸಿದವನ ನಿಜವನ್ನು ಭಕ್ತಿ ಪೂರ್ವಕವಾಗಿ ನಮಗೆ ನೋಡಲಾಗಲಿಲ್ಲ.

೮. ನಾಲ್ಕೂ ಸಾಗರ ಒಂದೇ ಕಡೆ ಸೇರಿದಂತಹ ಸಭೆ ಅದು. ಅದರ ಮಧ್ಯದಲ್ಲಿ, ಯಂತ್ರದ ಹಾರಾಟವನ್ನು ತಪ್ಪಿಸಿ, ಬಾಣಪ್ರಯೋಗ ಮಾಡಿ ಅದನ್ನು ಖಂಡಿಸಿದೆನು. ದ್ರೌಪದಿಯನ್ನು ಪಡೆದು, ಬಳಿಕ ಸರ್ವರನ್ನೂ ಜಯಿಸಲು ನಮಗೆ ಸಾಧ್ಯವಾಗಿಸಿದಂತಹ ಶ್ರೀಗುರುವನ್ನು ಮರೆತು ಇನ್ನು ನಿಲ್ಲುವುದಾದರೂ ಹೇಗಣ್ಣ ?

೯. ರಾಜಶೇಖರರಾದ ಭೂಮಿಯ ಮಂಡಲಶ್ವೇರರ ಸಂಘದ ಪರಾಕ್ರಮವನ್ನು ತಡೆಹಿಡಿದು ಸರ್ವಸ್ವವನ್ನು ನಮಗೆ ಒಪ್ಪಿಸಿ ವಂದಿಸುವಂತೆ ಮಾಡಿದನು. ರಾಜಸೂರ್ಯಧ್ವರದಂತಹ ಮಹಾಕಾರ್ಯವನ್ನು ಸಾಧಿಸುವಂತೆ ಮಾಡಿದ ಆ ಜನಾರ್ದನ ಸಖ್ಯವನ್ನು ಬಿಟ್ಟು ನಾವಿರುವುದಾದರೂ ಹೇಗಣ್ಣ?

೧೦. ಅಗ್ರಪೂಜೆಗೆ ನಾವು ಶ್ರೀಹರಿಯನ್ನು ಆಯ್ಕೆ ಮಾಡಿ ಅನುಕೂಲ ಮಾಡುತ್ತಿದ್ದೆವು. ಮಹಾಪರಾಕ್ರಮಿಯೂ ಬಲಾಢ್ಯನೂ ಆದ ಚೈದ್ಯನು ಕೋಪದಿಂದ ಬಹಳ ಮಾತಾಡಿದನು. ಆಗ ಚಕ್ರವನ್ನು ಬಿಟ್ಟು ಆತನನ್ನು, ಆತನ ಸೈನ್ಯವನ್ನು ತಡೆದು ರಕ್ಷಿಸಿದ ಹರಿಯನ್ನು ಮರೆತಿರುವುದಾದರೂ ಹೇಗಣ್ಣ?

೧೧. ಹಿಂದೆ ಹದಿನೆಂಟು ಸಲ ವಿಧವಿಧವಾಗಿ ಯುದ್ಧ ಮಾಡಿ ಸೋತು ಓಡಿದ ಮಾಗಧನ ನಗರಕ್ಕೆ ವೇಶ ಮರೆಸಿ, ರಾತ್ರಿಯಲ್ಲಿ ಹೋದೆವು. ಆಗ ಭೀಮನೊಂದಿಗೆ ಯುದ್ಧವು ಸಾಧಿಸುವಂತೆ ಮಾಡಿದ ಮನಸ್ಸಿಗೊಡೆಯನಾದ ಕೃಷ್ಣನನ್ನು ಬಿಟ್ಟು ನಿಲುಲುವುದಾದರೂ ಹೇಗಣ್ಣ?

೧೨. ತನ್ನ ವೇಶವನ್ನು ಮರೆ ಮಾಡಿ ಮೆಲ್ಲನೆ ಬಂದು ನನ್ನಲ್ಲಿ ದಾನವನ್ನು ಬೇಡಿ ಕೃತಜ್ಞನಾದ ಅಗ್ನಿಯ ಮತದಂತೆ ಒಪ್ಪಿ - ಖಾಂಡವವನ ಎನ್ನುವ ದೇವರಾಜನ ವನಕ್ಕೆ ಹೋಗಿ ಅದನ್ನು ದಹಿಸಿದೆನು. ಆಗ ಬಂದ ದೇವತೆಗಳನ್ನು ಓಡಿಸಿ ಅವರ ಶ್ರಮವನ್ನು ನಿರರ್ಥಕಗೊಳಿಸಿದ ಶ್ರೀಹರಿಯ ಶರೀರ ಮಾಯವಾದುದಾದರೂ ಹೇಗೆ?

೧೩. ದುಷ್ಟನಾದ ಕೌರವನು ನಾವೆಲ್ಲರೂ ಕೂಡಿದ ಸಭೆಯ ಮಧ್ಯದಲ್ಲಿ ಪಟ್ಟದ ರಾಣಿಯಾದ ದ್ರೌಪದಿಯ ಮಾನಹಾನಿಯನ್ನು ಮಾಡಲು ತಮ್ಮನಲ್ಲಿ ಹೇಳಿದನು. ಸುತ್ತಲೂ ಸುತ್ತಿರುವ ಸೀರೆಯನ್ನು ಹಿಡಿದೆಳೆದ ಪಾಡನ್ನು ವಿವರಿಸಲು ಅಭಿಮಾನ ಹಾಳಾಗದಂತೆ ಇಷ್ಟವನ್ನು ರಕ್ಷಿಸಿದ ಇಷ್ಟವಂತನಾದ ಕೃಷ್ಣನನ್ನು ಬಿಟ್ಟು, ಹೇಗಿರುವುದು?

೧೪. ನಾವೆಲ್ಲರೂ ಹೋಗಿ ಒಟ್ಟಾಗಿ ಕಾಡಿನಲ್ಲಿ ನಿಲ್ಲಲಾಗಿ ನಮ್ಮೆಲ್ಲರನ್ನು ಹೊಗೆಯು ಆವರಿಸಿತು. ಹಿಂಬಾಲಕನಾಗಿ ಕಾಯ್ದು ಹಾಗೂ ಅಕ್ಷಯ ಪಾತ್ರೆಯನ್ನು ಸೂರ್ಯನಿಂದ ಸಂಪಾದಿಸಲು ನೆರವಾದ ಆ ಮುರಾರಿಯು ಭೂಮಿಯಲ್ಲಿ ಇಲ್ಲವಾದರೆ ನಾವು ನಿಲ್ಲುವುದಾದರೂ ಹೇಗಣ್ಣ?

೧೫. ಕಾಮ್ಯಕ ಎನ್ನುವ ವನದಲ್ಲಿ ನಾವು ವಾಸಿಸುತ್ತಿರುವಾಗ ಕಿಮ್ಮೀರನೆಂಬ ದುಷ್ಟ ದಾನವನೊಬ್ಬನು ಸಿಟ್ಟಿನಿಂದ ರಾತ್ರಿ ವೇಳೆಯಲ್ಲಿ ಬಂದು ತಾಗಿದನು. ಶ್ರೀಕೃಷ್ಣನ ಕೃಪೆಯೊಂದಿಗೆ ಅವನಲ್ಲಿ ಯುದ್ಧ ಮಾಡಿ ಭೀಮ ಸನ್ಮಾನಿಸಿದ. ಅಂತಹ ಕೃಷ್ಣನ ಪ್ರೀತಿಯ ಕೃಪೆ ತಪ್ಪಿದ ಮೇಲೆ ಇಲ್ಲಿ ನಾವಿರುವುದಾದರೂ ಹೇಗೆ ಅಣ್ಣ?

೧೬. ದೇವತೆಗಳ ಪುಷ್ಪವೃಷ್ಟಿಗೆ ಯೋಗ್ಯವಾದ ದ್ರೌಪದಿಯ ಶ್ರೀಮುಡಿಯನ್ನು ತನ್ನ ಕೈಯಿಂದ ದುಷ್ಟನು ಎಳೆಯುತ್ತಿದ್ದನು. ಅದನ್ನು ಕಟ್ಟಲೋಸುಗ ಮನಸ್ಸಿನಲ್ಲಿ ಅಚ್ಯುತನ ಪಾದಕಮಲವನ್ನು ವಂದಿಸಿ ಪ್ರತಿಜ್ಞೆ ಮಾಡಿ, ಸಾಧಿಸಿದೆ. ಅಂತಹ ಮನುಜನಾಟಕ ಮೂರ್ತಿ ಇಲ್ಲವಾದರೆಂದ ಬಳಿಕ ಇಲ್ಲಿರುವುದಾದರೂ ಹೇಗಣ್ಣ?

೧೭. ಹಿಂದೊಂದು ದಿನ ಸಾರ್ವಭೌಮನಾದ ಕೌರವ ಭೂಪತಿ ನಮ್ಮನ್ನು ನಾಶಪಡಿಸಲೆಂದು ಅಪರಾಹ್ನ ವೇಳೇಯಲ್ಲಿ ದೂರ್ವಾಸ ಮುನಿಯನ್ನು ನಮ್ಮಲ್ಲಿಗೆ ಕಳುಹಿಸಿದ್ದ. ಪೂರ್ಣಚಂದ್ರ ತೇಜಸ್ವಿಯಾದ ಆ ಮುನಿ ಬಂದಾಗ ನಮ್ಮೆದುರಲ್ಲಿ ಅವತರಿಸಿದ ಸರ್ವ ಮಂಗಲ ಮೂರ್ತಿಯನ್ನು ಬಿಟ್ಟು ಇಲ್ಲಿರುವುದಾದರೂ ಹೇಗಣ್ಣ?

೧೮. ಹತ್ತು ಸಾವಿರ ಮುನಿಗಳೊಂದಿಗೆ ಕೂಗುತ್ತಿರುವ ಸತ್ಯಸಂಧನನ್ನು ಮೀರಬಾರದು ಎಂದು ಅವನೀಶವಾದ ನೀನು ಅನರ್ಥ ವಿಪರೀತವಾಗಿ ಬಂತೆಂದು ವಿಲಾಪಿಸುತ್ತಿದ್ದೀಯೆ. ನಮ್ಮ ಮುಂದೆ ಅಚ್ಯುತನ ಮೂರ್ತಿ ಬಂದು ಭಾಗ್ಯ ದೊರಕಿತು.

೧೯. ಮಕ್ಕಳಾಟಿಕೆ ಆಯಿತು, ನಮ್ಮ ಬಾಳುವೆ ಎಂದು ಅಗ್ರಜನಾದ ನೀನು ಬಿಕ್ಕಿ ಬಿಕ್ಕಿ ಅಳುತ್ತಾ ಅತ್ಯಂತ ಚಿಂತೆಯಿಂದಿದ್ದೆ. ಸೂರ್ಯನಿಂದ ಕೊಡಲಾದ ಅಕ್ಷಯ ಪಾತ್ರೆಯಲ್ಲಿದ್ದ ಅನ್ನದ ಅಗುಳನ್ನು ತಿಂದು ಪರಿಣಾಮ ಬೀರಿದ ಚಕ್ರಿಯನ್ನು ಎಂದಿಗೆ ನೋಡಲಿ?

೨೦. ಮೂರು ಲೋಕಕ್ಕೂ ಹಸಿವಿಲ್ಲ, ನಮಗೂ ಸರ್ವವೂ ಸನ್ಮತವಾಯಿತು ಎಂದು ಆ ಮುನಿಯು ಕೃತಜ್ಞ ಪ್ರಸನ್ನನಾಗಿ ವರವನ್ನು ನೀಡಿದನು. ಲೋಕ ವಲ್ಲಭನ ಭಕ್ತರಿಗೆ ಒಮ್ಮೆಯೂ ಬಾಧಕವಿಲ್ಲವೆಂದು - ಹೇಳಿ ಹೋದನು. ಅಂತಹ ಶ್ರೀಪತಿಯನ್ನು ನಾವೀಗ ಬಿಟ್ಟು ಹೇಗೆ ಜೀವಿಸೋಣ?

೨೧. ಆದಿಯಲ್ಲಿ ಇಂದ್ರಕೀಲ ವನಕ್ಕೆ ಹೋಗಿ ತಪಸ್ಸು ಮಾಡುತ್ತಿದ್ದೆ. ಆಗ ತನ್ನ ಶರೀರವನ್ನು ಮರೆಸಿ ಈಶ್ವರನೇ ಯುದ್ಧಕ್ಕೆ ಬಂದಾಗ ನಾನು ಮುಷ್ಠಿ ಯುದ್ಧ ಮಾಡುತ್ತಿದ್ದೆ. ನೀನು ಶ್ರೀಹರಿಯ ಬಂಧುವೆಂದು ಮೆಚ್ಚಿ ನನಗೆ ವರವನ್ನು ಪ್ರಸಾದಿಸಿದರು. ಅಂತಹ ಅಚ್ಯುತನನ್ನು ಬಿಟ್ಟು ಇಲ್ಲಿರುವುದು ಹೇಗೆ?

೨೨. ಹೀಗೆ ನನ್ನ ಶರೀರದ ವಿಭವ ಹೆಚ್ಚಾಗಲು ಆಮೇಲೆ ಮೇಲುಲೋಕಕ್ಕೆ ಯಾತ್ರಿಸಿ ಸುರರಾಜನೊಂದಿಗೆ ಅರ್ಧಪೀಠವನ್ನೇರಿದೆ. ಆಗ ಸುರರಾಜ ಮಂದಿರದಲ್ಲಿ ಆಕ್ಷಣವೇ ನನಗೆ ಎಲ್ಲರೂ ಶ್ರದ್ಧೆಯಿಂದ ಕಾಣಿಕೆ ನೀಡಿ ಅಪ್ಪಿಕೊಂಡರು. ಇದು ಮಂದರ ಪರ್ವತವನ್ನು ಎತ್ತಿದ ಕೃಷ್ಣನ ಮಹಿಮೆಯಿಂದ ಸಾಧ್ಯವಾಯಿತು. ಇನ್ನು ಅಂತಹ ಸಿದ್ಧಿ ಸಿದ್ಧಿಸುವುದೇ?

೨೩. ದೇವತೆಗಳಿಗೆ ಭೀತಿಯನ್ನುಂಟು ಮಾಡುತ್ತಿದ್ದ ನಿವಾತಕವಚರ ಸಮೂಹವನ್ನು ಹಿಂಸಿಸಿ, ಯಮಲೋಕಕ್ಕೆ ಈ ಶ್ರೀಹರಿಯ ಶಕ್ತಿಯಿಂದ ಕಳುಹಿಸಿದೆ. ಇಷ್ಟು ಪೌರುಷವನ್ನು ನನ್ನ ಶರೀರಕ್ಕೆ ನೀಡಿದಂತಹ ಅಚ್ಯುತನ ಪ್ರೀತಿ ಇನ್ನು ಮುಂದೆ ನನಗೆ ಎಂದು ಸಿದ್ಧಿಸುವುದಣ್ಣಾ?

೨೪. ಕೌರವಾನ್ವಯ ವೃಕ್ಷದ ಬೇರನ್ನು ಬುಡ ಸಮೇತ ಕೀಳುತ್ತೇನೆಂದು ಧೀರನಾದ ಕೌರವನನ್ನು ಕಟ್ಟಿ ಚಿತ್ರಸೇನ ಹೋದನು. ಅವನಿಗೆ ಎದುರಾಗಿ - ನಿಮ್ಮ ಮಾತಿನಂತೆ ಅವರೆಲ್ಲರನ್ನೂ ತಂದು - ನಿಮ್ಮ ಪಾದದಡಿಯಲ್ಲಿ ಆ ಶ್ರೀಹರಿಯ ದಯೆಯಿಂದ ಹಾಕಿದೆನು. ಅಂತಹ ರಮಾಕರನಾದ ಕೃಷ್ಣನನ್ನು ಯಾವಾಗ ನೋಡಲಿ ಅಣ್ಣಾ?

೨೫. ನಮ್ಮ ವೇಶವನ್ನು ಮರೆ ಮಾಡಿ ನಾವು ವಿರಾಟನ ರಾಜಧಾನಿಯಲ್ಲಿದ್ದೆವು. ವಂಚಕನಾದ ಕೌರವನು ಉತ್ಸಾಹದಿಂದ ಹಸುಗಳ ಮಂದೆಯನ್ನು ಕದ್ದೊಯ್ದನು. ಶ್ರೀಹರಿಯ ದಯದಿಂದ ನಾನೊಬ್ಬನೇ ಅವರನ್ನು ಎದುರಿಸಿ ಅವರ ಆಭರಣಗಳನ್ನು ಎಳೆದು ತಂದೆ - ಅದಕ್ಕೆ ಕಾರಣನಾದ ಶ್ರೀ ಹರಿಯನ್ನು ಹೇಗೆ ಕಾಣಲಿ?

೨೬. ಕುರುಕುಲದ ಸೇನಾ ಸಮುದ್ರ ಯುದ್ಧವಿಚ್ಛೆಯಿಂದ ನಿಂತಿರಲು ಅವರನ್ನು ಕೊಲ್ಲಲಾರೆನೆಂದು ಪ್ರತಿಜ್ಞೆ ಮಾಡಿದೆ. ಆಗ ಸರ್ವವೂ ನಾನೆ ಎಂದಾಗಲೇ -ಕರುಣ ಸಾಗರನು ವಿಶ್ವರೂಪವನ್ನು ತನಗೆ ಪ್ರಕಾಶಿಸಿದ. ಅಂತಹ ಸೌಂದರ್ಯ ಇನ್ನು ನನಗೆ ಎಂದು ಸಿಗುತ್ತದೆ ಎಂದು ಸತ್ಯವಾಗಿಯೂ ಹೇಳಣ್ಣಾ!

೨೭. ನೋಡು, ಇವರು - ಭೀಷ್ಮ, ದ್ರೋಣ, ಗೌತಮ, ಕರ್ಣ, ಕೇರಳ, ಚೋಳ, ಪಾಂಡ್ಯರು. ಯುದ್ಧದಲ್ಲಿ ಕೂಡಿರುವುದನ್ನು ನೋಡು. ಸರ್ವ ಬಲಾಢ್ಯರನ್ನು ನೋಡು ಎಂದು ತನಗೆಲ್ಲವನ್ನೂ ವಿಸ್ತರಿಸಿದ, ಕಾಲ ಕರ್ಮಾತೀತನನ್ನು ಯಾವಾಗ ನೋಡುವುದಣ್ಣಾ?

೨೮. ನೀವೇ ನನಗೆ ಸರ್ವಸ್ವಕ್ಕೂ ರಕ್ಷಾಭಾರ ಎಂದು ಶ್ರೀಹರಿಯ ಕೈಯಲ್ಲಿ ನೀನು ನನ್ನನ್ನು ಹಿಂದೆ ಯುದ್ಧಕ್ಕೆ ಕಳುಹಿಸಿ ಕೊಟ್ಟೆ. ಭಾರವಾದ ಭೀಷ್ಮನ ಪೌರುಷವನ್ನು ಮುರಿಯುವುದಕ್ಕೆ ಯಾರಿಗೆ ಸಾಧ್ಯ? ಅವರನ್ನು ಮುಗಿಸಲು ನೆರವಾದ ಹರಿಯನ್ನು ಯಾವಾಗ ನೋಡಲಿ ಅಣ್ಣಾ?

೨೯. ಅಣ್ಣಾ, ದ್ರೋಣರೊಂದಿಗಿನ ಸಮರದಲ್ಲಿ ಬಂದ ಅವಸ್ಥೆ ಬಹಳ ಚೋದ್ಯವಲ್ಲವೇ? ಕುದುರೆಗಳಿಗೆ ಪ್ರಾಣ ಸಂಕಟವಾಗಲು ನೀರಿಗಾಗಿ ಬಾಣದಲ್ಲಿ ಭೂಮಿಯನ್ನು ಗೀರಿ ನೀರನ್ನು ತರಿಸಿದೆ. ಆಗ ಪ್ರತಿಜ್ಞೆ ಮಾಡಿದ ಅಷ್ಟು ಮಂದಿಯೂ ಚಾಣುರಾರಿಯಾದ ಕೃಷ್ಣನಾಜ್ಞೆಯಲ್ಲಿ ಸುಮ್ಮನಿದ್ದರಲ್ಲವೇ?

೩೦. ಅಸ್ತ್ರವನ್ನು ಬಿಲ್ಲಿನ ಹಗ್ಗಕ್ಕೆ ಸಿಕ್ಕಿಸಿ ಬಲಿಷ್ಠನಾದ ಅಶ್ವತ್ಥಾಮನು ಉತ್ತರೆಯ ಗರ್ಭಕ್ಕೆ ಪ್ರಯೋಗಿಸಿದನು. ಆಗ ಆ ಕಡೆಯಿಂದ ನೇರವಾಗಿ ಆ ಬಾಣವು ಬರುತ್ತಿರಲು ಅದರ ಪ್ರಭೆಯು ನೀರಿನಂತೆ ಸುತ್ತಲೂ ಮುತ್ತಿಕೊಂಡಿತು. ಆಗ ಶ್ರೀಹರಿಯು ಆಜ್ಞೆ ಮಾಡಲಾಗಿ ಚಿತ್ರದಂತೆ ಅಲ್ಲಿಯೇ ನಿಂತಿತು.

೩೧. ನಮ್ಮನ್ನು ಜೈಸಿಲು ಸಿಂಧುರಾಜನಾದ ಜಯದ್ರಥನು- ಕೌರವನು ಬಂಧುವಾಗಿ ಬಳಿಯಿದ್ದ ಕಾರಣ - ಈಶ್ವರನನ್ನು ಪ್ರಾರ್ಥಿಸಿದನು. ಆದರೂ ಹೇಳಿದ ಭಾಷೆಯ ಪ್ರಕಾರ ಸೂರ್ಯಾಸ್ತಕ್ಕೆ ಮುನ್ನ ಶರವನ್ನು ಪ್ರಯೋಗಿಸಿ ಕುತ್ತಿಗೆಯಾದ ತಲೆಯನ್ನು ಬೇರ್ಪಡಿಸಿ ಆ ಶವವನ್ನು ಅವನ ತಂದೆಯಿದ್ದಲ್ಲಿಗೆ ತಲುಪಿಸಿದೆ.

೩೨. ತರಣಿ ನಂದನನಾದ ಕರ್ಣನು ನನ್ನನ್ನು ಕೊಲ್ಲುವುದಕ್ಕಾಗಿ ಉರಗಾಸ್ತ್ರವನ್ನು ತೆಗೆದು ಶಿರಕ್ಕೆ ಸಂಧಾನ ಮಾಡಿ ಬಿಟ್ಟಾಗ ಅಚ್ಯುತನು ಭೂಮಿಯನ್ನು ಬೆರಳಿನಿಂದ ಅಮುಕಿ ಆ ಶರ ತಪ್ಪುವಂತೆ ಮಾಡಿದನು. ಅಂತಹ ಕರುಣ ಸಾಗರ ಪರಮನಿಧಿಯನ್ನು ಬಿಟ್ಟು ಹೇಗೆ ಜೀವಿಸುವುದಣ್ಣಾ?

೩೩. ಹೀಗೆ ಅನೇಕ ತೊಂದರೆಗಳೆಂಬ ಕಡಲಿನಿಂದ ಬರುವ ಅನರ್ಥಗಳನ್ನು ಪರೀಕ್ಷಿಸಿ ನಮ್ಮ ಕೈಬಿಡದೆ ರಕ್ಷಿಸುತ್ತಿದ್ದನು. ಹಾಗೆ ಇನ್ನೊಬ್ಬನಿಂದ ಸಾಧಿಸಲು ಸಾಧ್ಯವೇ? - ಅದನ್ನು ಹೇಳಿ ಪ್ರಯೋಜನವೇನು? ವಿಧಿ ನಮ್ಮನ್ನು ವಂಚಿಸಿತು. ಈ ದುಃಖ, ನೋವನ್ನು ನಾವು ಸಹಿಸುವುದೆಂತು?

೩೪. ಹುಟ್ಟಿದಂದಿನಿಂದ ಇಲ್ಲಿಯವರೆಗೆ ಒಮ್ಮೆಯೂ ಕಷ್ಟವೆಂಬುದು ಮನಕ್ಕೆ ಬಂದಿರಲಿಲ್ಲ. ನಿತ್ಯ ನೋಡಿದರೂ ಪ್ರೀತಿಗೇನೂ ಕಡಿಮೆ ಇರುತ್ತಿರಲಿಲ್ಲ. ಹತ್ತಿರ ಬಾ ಕಿರೀಟಿ, ಹೇ ಗೆಳೆಯಾ, ಬಂಧು, ಮನಸಿಂಧು - ಎಂಬ ಪ್ರೀತಿಯ, ಹೃದಯದ ವಿಶ್ವದೊಡೆಯನ ಸಲ್ಲಾಪವನ್ನು ಯಾವಾಗ ಕೇಳಲಿ?

೩೫. ಮಂದ ಮಂದವಾಗಿ ಪ್ರಕಾಶಿಸುವ ನಸುಹಾಸದ ವಿಲಾಸ; ಕುಂದ ಕುಟ್ಮಲದಂತಹ ದಂತ ಪಂಕ್ತಿ; ಸ್ವೇದ ಬಿಂದುಗಳು; ಚೆಂದವಾದ ವಿಭೂತಿಯುಳ್ಳ ಕುರುಳಾಳಿ; ಮುದ್ದು ಮುಖ; ಹೀಗೆ ಅಂದವಾಗಿರುವ ಮುಕುಂದನನ್ನು ನಾವು ಯಾವಾಗ ನೋಡುವುದೆಂದು ಹೇಳಣ್ಣಾ.

೩೬. ಹೇ ಪಾರ್ಥ, ಫಲ್ಗುಣ, ಗೆಳೆಯಾ ಬೇಗ ಬಾ ಎಂದು ನನ್ನನ್ನು ಅಚ್ಯುತ ಮೆಲ್ಲನೆ ಗುಣ ಭಾವದಿಂದ ಕಳೆಯುತ್ತಿದ್ದನು. ನಾನು ಹತ್ತಿರಕ್ಕೆ ಹೋದಾಗ, ಮಡದಿಯಾದ ಲಕ್ಷ್ಮೀಯನ್ನು ಬಾಹುವಿನಿಂದ ಗಟ್ಟಿಯಾಗಿ ಆಲಿಂಗಿಸುತ್ತಿದ್ದನು. ಬಳಿಕ ದೊಡ್ಡದಾದ ಹಸ್ತವನ್ನು ಕುತ್ತಿಗೆಗೆ ಸುತ್ತುವ ಪ್ರಿಯನನ್ನು ಯಾವಾಗ ನೋಡಲಿ.

೩೭. ಮೀಹ, ಊಟ, ಪೂಜೆ, ಸೂರ್ಯವಂದನೆ, ಸಿಂಹಾಸನ, ಯಾತ್ರೆ, ಜೂಜು, ಜಪ, ಬೇಟೆ, ನಿದ್ರೆ, ಶಯನ ಇವುಗಳಲ್ಲಿ ಯಾವಾಗಲೂ ನನ್ನೊಂದಿಗೇ ಇರುತ್ತಿದ್ದನು. ಇಂತಹ ಗುಣವುಳ್ಳ ಶ್ರೀಹರಿ ಹೋದ ಮೇಲೆ ಈ ರಾಜ್ಯದಲ್ಲಿದ್ದು ಕಾಡಿನಲ್ಲಿದ್ದ ಹಾಗೆ - ಏನು ಪ್ರಯೋಜನ?

೩೮. ಪಾತಕಿಗಳಿಗೂ, ದಡ್ಡರಿಗೂ ನಾನು ಶ್ರೀ ಗುರುವಾದೆ. ಒಳ್ಳೆಯ ಜಾತಿ ರತ್ನ ಎಂಬುದನ್ನು ತಿಳಿಯದೆ ಸೂತಕರ್ಮವನ್ನು ಮಾಡಿಸಿದೆ. ಕೃಷ್ಣನು ಬ್ರಾಹ್ಮಣರಿಂದ ಶ್ರೇಷ್ಠನೆಂದಷ್ಟೇ ತಿಳಿದೆ. ಆದರೆ ಚೇತನಾತ್ಮಕನೆಂದು ಈಗ ತಿಳಿದೆ. ಅದನ್ನು ಹೇಳಿ ಏನು ಪ್ರಯೋಜನ?

೩೯. ಅಣ್ಣ ಇನ್ನೊಂದು ವಿಶೇಷವನ್ನು ಕೇಳಬೇಕು. ಪುಣ್ಯ ವಿಹೀನನಾದ ನಾನು ದುಃಖದಿಂದ ಮುಂದೆ ಬರುತ್ತಿರಲು ಗೋಪರು ನನ್ನನ್ನು ಹಿಡಿದು ಗುದ್ದಿದರು. ಶರೀರವನ್ನು ಹುಡಿಮಾಡಿ ಪ್ರಾಣ ಮಾತ್ರವೇ ಉಳಿಯುವಂತೆ ಮಾಡಿ ನನ್ನನ್ನು ಇಲ್ಲಿಗೆ ಕಳುಹಿಸಿದರು.

೪೦. ಇನ್ನು ಹೇಳುವುದಕ್ಕೆ ಉಳಿದಿರುವುದೇನೂ ಇಲ್ಲ. ಇದೆಲ್ಲ ತಿಳಿಯದಿರುವುದಲ್ಲ. ಇನ್ನು ಹೇಳಿ ಪ್ರಯೋಜನವೇನು? ಪುಣ್ಯ ವಿಹೀನರಾಗಿ ಹೋದೆವು. ನಮ್ಮ ಭವಿಷ್ಯವೆಲ್ಲವೂ ದೂರವಾಗುವುದಕ್ಕೆ ಪೂರ್ವ ಜನ್ಮದ ಫಲವೇ ಕಾರಣ. ಶ್ರೀಹರಿಯು ಏನು ಯೋಚಿಸುತ್ತಾನೋ ಅದೇ ಆಗುತ್ತದೆ.

೪೧. ರಾಮ! ವಾಮನ! ಕೃಷ್ಣ! ಗೋವಿಂದ! ಕೇಶವ! ಅಚ್ಯುತ! ಶ್ರೀಧರ! ಶ್ರೀಮಧುದ್ವಿಷ್ಣು! ಕೇಶವ, ನರಸಿಂಹ! ಭಾರ್ಗವ! ಸೋಮವಂಶ ಶಿಖಾಮಣಿ! ಬಾಣಾಸುರ ಮರ್ಧನ! - ಹೀಗೆ ಆ ಸುಧಾ ಮಂಗಲ ಮೂರ್ತಿಯನ್ನು ವರ್ಣಿಸುವುದಾದರೂ ಹೇಗಣ್ಣಾ?

೪೨. ಇಲ್ಲಿಗೆ ಶ್ರೀ ಭಾಗವತಾರ್ಥದಲ್ಲಿ ಚತುರ್ದಶಾಧ್ಯಾಯವಾಯಿತು. ಈ ನಿರ್ಮಲವಾದ ಸಿದ್ಧಾಂತವು ನೀಚರ ಕುಲವನ್ನು ಪಾವನ ಮಾಡುತ್ತದೆ. ಇದನ್ನು ಓದಿ, ವಿಸ್ತರಿಸಿ ಕಥೆ ಹೇಳಿದ ಜನಕ್ಕೆ ವಿಷ್ಣುಪದವು ಲಭಿಸುತ್ತದೆ ಎಂಬುದು ಶಾಸ್ತ್ರಸಿದ್ಧವಾದುದು.

ಅಧ್ಯಾಯ ೧೫

೧. ಶೌನಕಾದಿ ಮುನೀಶ್ವರರೇ ಕೇಳಿ. ಮಹಾರಾಜನು ದುಃಖಿಸಿದ ಭಗವತ್ಕಥೆಯನ್ನು ಮುಂದೆ ಹೇಳುತ್ತೇನೆ. ವಾಣಿಯ ಗಂಡನಾದ, ಬ್ರಹ್ಮನ ತಂದೆಯಾದ ಶ್ರೀಹರಿಯ ಭಕ್ತಿಯಿಂದ ಅದನ್ನು ಹೇಳುತ್ತೇನೆ. ಪಾಂಡವರು ಮುಂದೆ ಕೈಗೊಂಡ ನಿರ್ಧಾರಗಳನ್ನು, ಅರ್ಜುನನು ಧರ್ಮರಾಯನಲ್ಲಿ ಹೇಳಿದ ಸತ್ಕಥೆಯನ್ನು - ಮುಂದೆ ಕೇಳಿ.

೨. ಮಹಾರಾಜ, ಯಾದವ ಬಾಂಧವರ ಕ್ಷೇಮ ಸಮಾಚಾರವನ್ನು ಕೇಳು. ಬ್ರಾಹ್ಮಣರ ಶಾಪವನ್ನೂ ಮೀರುವುದಕ್ಕೆ ಯಾರಿಗೆ ತಾನೇ ಸಾಧ್ಯ? ಬಹಳ ಮದರಿಂದ ಕುರುಡರಾಗಿ ಘೋರವಾದ ಯುದ್ಧವನ್ನು ತಮ್ಮಲ್ಲಿಯೇ ಮಾಡಿ ಹುಲ್ಲಿಗೆ ಕಾಳ್ಗಿಚ್ಚು ಹಿಡಿದಂತೆ ಸತ್ತೇ ಹೋದರು.

೩. ಅಂದಿನ ಬಿಲ್ಲು, ಅಂದಿನ ರಥ, ಅಂದಿನ ಬಾಣಗಳು - ಅಂದು ಎಲ್ಲವನ್ನು ಸಾಧಿಸಿದ ಭಟನಾದ ನಾನು - ಇಂದು ಏನಾಗಿ ಹೋದೆ! ಇಂದು ಅವುಗಳಿಂದ ಏನು ಫಲ? ನೀರಿಲ್ಲದ ಕೆರೆಯಲ್ಲಿರುವ ತಾವರೆಯಂತೆ ಹಾನಿಗೊಳಗಾಗಿರುವೆ. ರಕ್ಕಸರ ಹಗೆಯಾದ ಕೃಷ್ಣನು ತಪ್ಪಿದ ಮೇಲೆ ನನಗೆ ಪೌರುಷವಾದರು ಎಲ್ಲಿಂದ ಬರಬೇಕು?

೪. ಚಲಿಸುವ ಕರ್ಮಫಲಗಳನ್ನು ದಾಟುವುದಕ್ಕೆ ಯಾರಿಗೆ ತಾನೇ ಸಾಧ್ಯ? ಅಷ್ಟೆಲ್ಲ ರಾಶಿ ರಾಶಿಯಾಗಿದ್ದ ಕುಲವು ಅತಿ ಶೀಘ್ರದಲ್ಲಿಯೇ ಏನೂ ಇಲ್ಲದಾಗಾಯಿತು. ಆ ಬಳಿಕ 'ನನ್ನನ್ನು ಬಿಟ್ಟು ಹೋಗಯ್ಯಾ' ಎಂದು ಅಪ್ಪಿಕೊಂಡು ಈ ನೆಲವನ್ನು ಬಿಟ್ಟು ಕರುಣಾರ್ಣವ ತನ್ನ ನೆಲೆ ನಿವಾಸವನ್ನು ಸೇರಿಕೊಂಡನು.

೫. ನಿತ್ಯವೂ ಭಜನೆ ಮಾಡಿ ತೃಪ್ತಿಯನ್ನು ಕಾಣದ ಯೋಗಿಗಳು ಇದ್ದರು. ಬ್ರಹ್ಮನೇ ಮೊದಲಾದ ದೇವತೆಗಳು ಶುದ್ಧ ಮನಸ್ಸಿನಿಂದ ಅವನನ್ನು ಸ್ಮರಿಸುತ್ತಿದ್ದರು. ಮೂರು ಲೋಕದ ಒಡೆಯನೂ ಒಳ್ಳೆಯವರ ನಡುವೆ ಇರುವವನೂ ಆದವನನ್ನು ಜಡರಾಗಿ ಸದಾ ನಾವು ನಿಜವನ್ನು ತಿಳಿಯದೆ ಇದ್ದುದಕ್ಕೆ ಯಾರು ಏನೆನ್ನುತ್ತಾರೋ?

೬. "ಸಾಕು ಇನ್ನು ಅತಿಯಾಗಿ ಬೇಸರಿಸಿ ಫಲವೇನು? ಬುದ್ಧಿ ಇಲ್ಲದವರಾದ ನಾವು ನೋಡುತ್ತಿರುವಂತೆಯೇ ಲಯವಾಗಿ ಹೋದೆವು - ಭಾಗ್ಯ ಇಲ್ಲದವರಾದೆವು. ಶ್ರೀಪತಿಯನ್ನು ಕಳೆದುಕೊಂಡು ನಮ್ಮ ಮನಸ್ಸಿಗೆ ಕತ್ತಲೆ ಆವರಿಸಿದೆ." ಹೀಗೆಂದ ಧನಂಜಯನು ಗೊಂಬೆಯ ರೀತಿಯಲ್ಲಿ ಭಕ್ತಿಯಿಂದ ನಿಂತನು. ಆಮೇಲೆ ಏನೆನ್ನಲಿ?

೭. ವಿಷಯಗಳೆಲ್ಲವನ್ನೂ ಪೂರ್ಣವಾಗಿ ಮನಸ್ಸಿನಲ್ಲಿ ಆಲೋಚಿಸಿದ ಧರ್ಮರಾಯನು "ಇದು ಆಶ್ಚರ್ಯ" ಎಂದು ಕುತೂಹಲನಾದನು. "ಸಾಮ್ರಾಜ್ಯವೇಕೆ, ಸರ್ವ ವಿಭವಗಳೆಲ್ಲವೂ ಪಾಷಾಣವೆಂದು" ಮನಸ್ಸಿನಲ್ಲಿ ಮರುಗುತ್ತಾ ಯಾತ್ರೆಗೆ ಮನ ಮಾಡಿದನು.

೮. ಕೇಳಿದಾಕ್ಷಣವೇ ಕುಂತಿಯು ಶ್ರೀಹರಿಯನ್ನು ಭಕ್ತಿ ಪೂರ್ವಕವಾಗಿ ಬುದ್ಧಿಯಲ್ಲಿ ಚಿಂತಿಸಿ ದೇಹವನ್ನು ತ್ಯಜಿಸಿದಳು. ಪಾಂಡವರ ಪಟ್ಟದ ರಾಣಿಯಾದ ದ್ರೌಪದಿ ಅಚ್ಯುತ ಮೂರ್ತಿಯನ್ನು ಧ್ಯಾನಿಸಿ ಶರೀರವನ್ನು ದಂಡಿಸದೆ ತ್ಯಾಗ ಮಾಡಿಕೊಂಡಳು.

೯. ಎಡಕಾಲಿನ ಧೂಳಿಗೆ ಸಮಾನವಲ್ಲವೇ ಈ ವಿಭವಗಳೆಲ್ಲ ಎಂದು ಸಪ್ತಾಂಗವೆಲ್ಲವನ್ನೂ ಧರ್ಮರಾಯನು ತ್ಯಜಿಸಿದನು. ತಮ್ಮ ರಾಜ್ಯವನ್ನು ಮೊಮ್ಮಗನಿಗೆ ಬಿಟ್ಟು, ಪಟ್ಟಕಟ್ಟಿ, ಒಂದೇ ಮನಸ್ಸಿನಿಂದ, ಹೆದರದೆ ಅವರೆಲ್ಲರೂ ಯಾತ್ರೆಗೆ ಸಿದ್ಧರಾದರು.

೧೦. ಗುರಿಯೆಂಬ ರಥಕ್ಕೆ ವಿವೇಕವನ್ನು ಜೋಡಿಸಿ ಕೊಂಡರು. ಆತ್ಮದಲ್ಲಿ ಶಮದಮೆಯನ್ನು ಪಡೆದುಕೊಂಡರು. ಮುಕುಂದ ಪದವನ್ನು ಮನಸ್ಸಿನಲ್ಲಿ ದೃಢವಾಗಿ ನೆನೆಸಿಕೊಂಡು ಆನಂದದಿಂದ ದಾರಿ ಸಾಗಿದರು.

೧೧. ನಾನಾ ವಿಷಯಗಳಲ್ಲಿ ತೊಡಗಿಕೊಂಡಿದ್ದ ಮನಸ್ಸನ್ನು ಬಲವಾಗಿ ತಳೆದುಕೊಂಡನು. ಜ್ಞಾನ, ಬುದ್ಧಿ ಮತ್ತು ಚಿತ್ತದಲ್ಲಿ ಮನ - ಬುದ್ಧಿಗಳನ್ನು ನೆಲೆಗೊಳಿಸಿದನು. ಚಿತ್ತವನ್ನು ಆತ್ಮನಲ್ಲಿ ಇರಿಸಿ, ಭಕ್ತಿಯಿಂದ ಆನಂದಿತನಾಗಿ ಒಳ್ಳೆಯ ಮಾರ್ಗದಲ್ಲಿ ಯಾತ್ರಿಸಿದನು.

೧೨. ಧರ್ಮರಾಯನು ಮುಂದೆ; ಆತನ ಹಿಂದೆ ಭೀಮ. ಆಮೇಲೆ ಅರ್ಜುನ, ಬಳಿಕ ನಕುಲ (ಅನಂತರ ಸಹದೇವ) ನಡೆದರು. ಇವರೆಲ್ಲ ಒಂದೇ ಮನಸ್ಸಿನಿಂದ ಯಾವುದೇ ವಿಪರೀತಕ್ಕೊಳಗಾಗದೆ ಬಡಗು ದಿಕ್ಕಿಗೆ ಯಾತ್ರಿಸಿದರು. ಸಭೆ ಸರ್ವರೂ ಇದನ್ನು ಕೇಳಬೇಕು.

೧೩. ಮುಂದೆ ಹೋಗುವವನು ಹಿಂದಿನವನು ನೋಡದೆ, ಮುಂದೆ ಹೋಗುವವವನು ತನ್ನ ಹಿಂಭಾಗವನ್ನು ನೋಡದೆ ನಡೆಯುತ್ತಿದ್ದರು. ಒಟ್ಟಿನಲ್ಲಿ ಹಿಂದೆ ಮುಂದೆ, ಇಬ್ಬದಿಗಳನ್ನು ಗಮನಿಸದೆ ಒಂದೇ ಭಾವನೆಯಿಂದ ನೋಡುವವರಿಗೆ - ಕುತೂಹಲ ಉಂಟಾಗುವಂತೆ - ಬಾಣ ಹೋಗುವಂತೆ ಯಾತ್ರಿಸಿದರು.

೧೪. ಪುಣ್ಯಾತ್ಮರು ಹೀಗೆಯೇ ಹೋಗಿ ಭೂಮಿಯಲ್ಲಿಯೇ ಅತಿ ಪಾವನವಾದ, ಪುಣ್ಯಾಶ್ರಮವೂ ಆದ ಗಂಗಾನದಿಯನ್ನು ದಾಟಿದರು. ಉತ್ತರ ದಿಕ್ಕಿನತ್ತ - ಸಾಗಿದ ಆ ಪುಣ್ಯಾತ್ಮರು ಯಾವಾಗಲೂ ಶೋಭಿಸುವ ಬದರಿಕಾಶ್ರಮವನ್ನು ಸೇರಿದರು. ಹರಿಭಕ್ತರೊಂದಿಗೆ ಪುಣ್ಯಾಶ್ರಮದಲ್ಲಿ ಭಕ್ತಿಯಿಂದ ನೆಲೆಸಿದರು.

೧೫. ಮೂರು ಗುಣಗಳನ್ನು ಮೀರಿದರು. ಮೂರು ನೆಲೆಯನ್ನು ಮೀರಿದರು. ಆತ್ಮದಲ್ಲಿ ಗುಣವನ್ನು ವರ್ಜಿಸಿ, ಹತ್ಕಮಲದಲ್ಲಿ ಆತ್ಮನನ್ನೇ ನೆನೆದರು. ಅಲ್ಲಿಂದ ಹಣೆಯ ನಡುವಿನಲ್ಲಿ ಎಚ್ಚರಗೊಳಿಸಿ ಊರ್ಧ್ವ ಮುಖವಾಗಿ, ಗುಣಸಾಗರನೊಂದಿಗೆ ಲೀನವಾಗಿ ಮುಕ್ತಿ ಸತಿಯೊಂದಿಗೆ ಶೋಭಿಸಿದರು.

೧೬. ಆ ವೇಳೆಯಲ್ಲಿ ಮಹಾ ಹರಿದಾಸನಾದ ವಿದುರನು ತನ್ನಣ್ಣನಿಗೆ ಮುಕ್ತಿಯನ್ನು ಪರಿಗ್ರಹಿಸಿ ಅಲ್ಲಿಂದ ತೀರ್ಥಯಾತ್ರೆ ಕೈಗೊಂಡನು. ಪ್ರಭಾಸ ನದಿಯಲ್ಲಿ ಸ್ನಾನ ಮಾಡಿ ಬಳಿಕ ಈ ವಿಶ್ವವನ್ನು ಬಿಟ್ಟು, ನಡೆದು ಪಿತೃ ಮಂದಿರವನ್ನು ಸೇರಿದನು.

೧೭. ಮಾಂಡವ್ಯನ ಶಾಪದ ಕಾರಣದಿಂದಾಗಿ ಯಮರಾಜನು ಪಾಂಡವರ ಬಾಂಧವನಾಗಿ ನೂರುವರ್ಷ ಭೂಮಿಯಲ್ಲಿ ಬಾಳಿದನು. ಬಳಿಕ ಭಕ್ತಿ - ವಿರಕ್ತಿಗಳನ್ನು ಪ್ರಚುರಗೊಳಿಸಿ, ದೇಹಾಂತ್ಯದಲ್ಲಿ ಪಿತೃಮಂದಿರದಲ್ಲಿ ಶಿಕ್ಷೆ ನೀಡುವವನಾಗಿ ಸುಖಿಸಿದನು.

೧೮. ತನ್ನ ಅಷ್ಟೂ ಕರ್ಮಗತಿಯನ್ನು ತಾನೇ ಅನುಭವಿಸಿ, ಪ್ರೀತಿಯಿಂದ ನೂರು ವರ್ಷಗಳವರೆಗೆ ಭೂಮಿಯಲ್ಲಿ ಸುಖಿಸಿದನು. ಮಾಂಡವ್ಯನ ಶಾಪದಿಂದಾಗಿ ವೇಶ್ಯೆಯಲ್ಲಿ ಯಮರಾಜನು ಈ ಭೂಮಿಯಲ್ಲಿ ಹುಟ್ಟಿದನು. (ಆತನೇ ಈ ವಿದುರನು)

೧೯. ಬ್ರಹ್ಮಜ್ಞರು ಕೇಳಿದಿರಾ! ಸೋಮಕುಲದ ಗುಣಾಢ್ಯರಾದ ರಾಜರೂ, ಧರ್ಮಜ್ಞರೂ ಆದ ಪಾಂಡವರು ಕೃಷ್ಣನ ಕಾರುಣ್ಯವೆನ್ನುವ ಮೋಕ್ಷ ಸಂಬಂಧವನ್ನು ಪಡಕೊಂಡರು. ಈ ಕಥೆಯನ್ನು ಕೇಳಿದವರ ಕರ್ಮ ಪಾಶ ತುಂಡರಿಸಿ ಹೋಗಿ, ಕಡಿಮೆಯಾಗದ ಮೋಕ್ಷ ದೊರೆಯುವುದು.

೨೦. ಈ ಕಥಾ ಸಾರವು ಧರ್ಮ, ಅರ್ಥ, ಕಾಮ, ಮೋಕ್ಷವನ್ನು ಕೊಡುವುದು; ಧರ್ಮಿಷ್ಠರಿಗೆ ಉತ್ತಮ ಬುದ್ಧಿಯನ್ನು ಅನುಗ್ರಹಿಸುವುದು. ಕ್ಷತ್ರಿಯರಿಗೆ ಇದರಿಂದ ಆಯುಷ್ಯ ಬಲ, ಸೌಭಾಗ್ಯ ಮೊದಲಾದ ಸನ್ಮಾರ್ಗ ಲಭಿಸುವುದು. ಬ್ರಹ್ಮಜ್ಞರಿಗೆ ಉತ್ತಮವಾದ ಮುಕ್ತಿ ಲಭಿಸುವುದು; ಸರ್ವರಿಗೂ ಮೋಕ್ಷ ಉಂಟಾಗುವುದು.

೨೧. ಹೆಂಗಸರು ಈ ಕಥೆ ಕೇಳಿದರೆ ಪತಿ ಭಾಗ್ಯ ದೊರೆಯುವುದು. ಗಂಡಸರಿಗೆ ಅನೇಕ ಪುತ್ರಲಾಭ ಸಂಪದ, ಐಶ್ವರ್ಯ ಹಾಗೂ ಬಯಸಿದ ಇಚ್ಛೆ ಲಭಿಸುವುದು. ಶೂದ್ರರು ಆಲಿಸಿದರೆ ಸೌಖ್ಯ, ಶುಭ, ವೀರತ್ವ ಲಭಿಸುವುದು. ಹರಿನಾಮದಿಂದ ವೈಶ್ಯರಿಗೆ ಉತ್ತಮ ಗತಿ ನಿತ್ಯವೂ ಅನುಕೂಲಿಸುವುದು.

೨೨. ಹಲವು ಮಾತೇತಕೆ? ಈ ಕಾವ್ಯವನ್ನು ಕೇಳುವ ಸರ್ವಜನರ ಸರ್ವದೋಷ ಕತ್ತರಿಸಿ ಹೋಗುವುದು. ಸಂಸಾರವೆನ್ನುವ ಸಂಸಾರ ದಾಟಿ ಅದರಿಂದಾಚೆಗೆ ಇರುವ ಕೈವಲ್ಯ ನೆಲೆಯಲ್ಲಿ ನಿತ್ಯವೂ ಸರ್ವ ಫಲವು ದೊರಕೀತು - ಇದರಲ್ಲಿ ಸಂದೇಹವಿಲ್ಲ.

೨೩. ಇಲ್ಲಿಯವರೆಗೆ ರಚನೆಯಾದುದು ಹದಿನೈದನೆಯ ಅಧ್ಯಾಯ. ಅಧ್ಯಾತ್ಮದಂತೆಯೇ ಶ್ರೀ ಭಗವತ್ಕಥೆ ಬ್ರಹ್ಮಾರ್ಪಣವಾಗಲಿ. ಬುದ್ಧಿಯಲ್ಲಿ ಇದರ ಅರ್ಥವನ್ನು ಕಂಡುಕೊಂಡ ಸಾಧಕರಿಗೆ ಕೇಳಿದ ಸಿದ್ಧಿ ಸಿದ್ಧಿಸಿ, ನಾರಾಯಣ ಕೀರ್ತಿಯಿಂದ ಸರ್ವ ಸಮೃದ್ಧಿಯಾಗಲಿ.

ಅಧ್ಯಾಯ ೧೬

೧. ಶಿವಪುತ್ರನಾದ ಗಣಪತಿಯ ಪಾದಕಮಲಕ್ಕೆ ಕೈಮುಗಿಯುತ್ತೇನೆ. ಸರಸ್ವತಿಗೆ ಅಭಿವಂದಿಸುತ್ತೇನೆ. ಸಾಧುಗಳೂ, ಮಹಾತ್ಮರೂ ಮೊದಲಾದ ಪುಣ್ಯ ಪುರುಷರ ಕರುಣದಿಂದ ಅಭಿಮನ್ಯು ಮಗನ ವಿಶೇಷ ಕಥೆಯನ್ನು ರಚಿಸುತ್ತೇನೆ. ಮಹಾಜನರು ಕೇಳಬೇಕು.

೨. ಶೌನಕಾದ್ಯರೇ ಮನಸ್ಸಿಟ್ಟು ಕೇಳಿ. ಶ್ರೇಷ್ಠರಾದ ಪಾಂಡವರ ಮಗನಾದ ಪರೀಕ್ಷಿತನು ಜನಿಸಿ ಪಟ್ಟಾಭಿಷಿಕ್ತನಾದನು. ಹದಿನಾಲ್ಕು ಲೋಕವೂ 'ಇದು ಆಶ್ಚರ್ಯ' ಎಂದು ನಿತ್ಯ ಹೇಳುವಂತೆ ಮನ್ಮಥನ ಹಾಗಿರುವ ಆತನು ಶುಭ್ರ ಪ್ರಕಾಶಿತನಾಗಿ ಚಂದ್ರನಂತೆ ತೇಜೋಮಯನಾಗಿದ್ದನು.

೩. ಬಳಿಕ ಉತ್ತರನ ಪುತ್ರಿಯಾದ ಇರಾವತಿಯನ್ನು ವಿವಾಹವಾಗಿ ಗೃಹಸ್ಥ ಧರ್ಮದಲ್ಲಿ ಲೋಪವಾಗದಂತೆ ಎಲ್ಲ ವಿಧಿ ಕ್ರಿಯೆಗಳಿಂದ ಆಕೆಯೊಂದಿಗೆ ಸುಖ ಬಾಳುತ್ತಿದ್ದನು. ಹರಿಣಾಕ್ಷಿಯಾದ ಆಕೆಯಲ್ಲಿ ಜನಮೇಜಯನೇ ಮೊದಲಾದ ನಾಲ್ವರು ಕುಮಾರರು ಜನಿಸಿ ರಾಜ್ಯವನ್ನಾಳುವ ಪರಾಕ್ರಮವಂತರಾದರು.

೪. ಅಶ್ವಮೇದವನ್ನು ಸಾಧಿಸಲೆಂದು ತೋಳುಬಲದಿಂದ ಲೋಕದಲ್ಲಿರುವ ರಾಜರನ್ನು ಜೈಸಿದನು. ಆಮೇಲೆ ಬೃಹದ್ವಶನೇ ಮೊದಲಾದ ಋಷಿವರ್ಯರನ್ನು ಮುಂದಿರಿಸಿಕೊಂಡನು. ವಿಶ್ವತೋಮುಖನಾದ ವಿಷ್ಣುವನ್ನು ಕಲ್ಪಿಸಿಕೊಂಡು ಯಾಗವನ್ನು ಪೂರ್ಣಗೊಳಿಸಿದನು.

೫. ಆತನು ಮಾಡಿದ ಪರಾಕ್ರಮವನ್ನು ವಿಸ್ತರಿಸುವುದು ಯಾರು? ಬ್ರಹ್ಮನೇ ಮೊದಲಾದ ದೇವತೆಗಳು ಮೆಚ್ಚಿದರು. ಆತನು ನೀಡಿ ಆಹುತಿಯನ್ನು ತೆಗೆದುಕೊಂಡು ಕಣ್ಣಿಗೆ ಗೋಚರವಾಗುವಂತೆ ಪ್ರಿಯದಿಂದ ಅದನ್ನು ಸಂತೋಷದಿಂದ ಆಸ್ವಾದಿಸಿದರು.

೬. ಸೂರ್ಯ, ಚಂದ್ರ, ಬುಧ, ಗುರು, ಭೃಗುವೇ ಮೊದಲಾದ ಗ್ರಹಗಳು ಕರ್ಕಾಟದಲ್ಲಿ ಬಂದಾಗ ಭೂಮಿಗೆ ಮಳೆ ಬರುವಂತೆ ರಾಜನು ಮಾಡಿದ ದಾನ ಧರ್ಮ ವಿಶೇಷಗಳಿಗೆ ಲೆಕ್ಕವೇ ಇಲ್ಲ. ಅದನ್ನು ತರ್ಕಿಸುಬಹುದಷ್ಟೇ. ಅದರ ಹೊರತು ಹೇಳಿ ಮುಗಿಯದು. ಆ ಅದ್ಭುತವನ್ನು ಏನೆಂದು ಹೇಳಲಿ!

೭. ನೆಮ್ಮದಿಯಿಲ್ಲದೆ ಆತನ ಭೂಮಿಯಲ್ಲಿ ನೋವುಂಡವರೇ ಇಲ್ಲ. ಕಲಿಯನ್ನು ಕಟ್ಟಿ ಧರ್ಮಶಕ್ತಿಯಿಂದ ಬೀಳಿಸಿದ್ದಾನೆ. ದುಷ್ಟ, ದುರ್ಜನ, ದುರ್ವಿನೀತ, ವಿಡಂಬನ, ನಿರ್ಘೃಣಿ ಎನ್ನುವ ದುಷ್ಟ ಸ್ವಭಾವದವರ ವಾರ್ತೆಯನ್ನು ಕೇಳುವುದಕ್ಕೇ ಇಲ್ಲ. ಎಲ್ಲರೂ ಸಾಧು ಸಜ್ಜನರೇ.

೮. ದುಃಖ, ಶೋಕ, ಭಯ, ದರಿದ್ರ, ವ್ಯಾಧಿ, ದೈನ್ಯ, ಮಹಾವ್ಯಥೆ, ಮೂರ್ಖತನ, ದುರ್ಬಲ, ಜಾರತನ, ಚೋರತನ, ವಿನಾಶ, ಕೆಟ್ಟದಾರಿ, ಠಕ್ಕು, ಠೌಳಿ, ಕುಹಕ ಮೊದಲಾದುವುಗಳ ಆಡಂಬರ ಎಲ್ಲಿಯೂ ಆ ರಾಜನಿರುವ ರಾಜ್ಯದಲ್ಲಿ ನೆಲೆಯೂರಿದ್ದಿಲ್ಲ.

೯. ಹಿಂದೆ ಬಾಳಿದ ಪಾಂಡವರ ಕಾಲದಿಂದಲೂ ಹೆಚ್ಚುವರಿಯಾಗಿ ಸಂಭ್ರಮದಿಂದ ರಾಜನ ಅಪ್ಪಣೆಯಂತೆ ಜನರು ವಿರಾಜಿಸುತ್ತಿದ್ದರು. ತಾಯಿಯ ಹೊಟ್ಟೆಯಲ್ಲಿಯೇ ತನ್ನನ್ನು ರಕ್ಷಿಸಿದ ಹರಿಯನ್ನು ಬುದ್ಧಿಯಲ್ಲಿ ಧ್ಯಾನಿಸಿದನು. ನಿತ್ಯವೂ ಹಂಬಲಿಸುತ್ತಾ ತಾನು ಗೈದ ಕೃತ್ಯವನ್ನೆಲ್ಲ ಸಮರ್ಪಿಸುತ್ತಿರುವನು.

೧೦. ಕಲಿಯ ವಾರ್ತೆಯನ್ನು ಕೇಳಿ ಕಿಡಿಮಸಗಿ ರೋಶಾವೇಶದಿಂದ ಆತನಿದ್ದನು. ಭೂಮಿಯೇ ಕಾಣದಂತೆ ಸಮಸ್ತ ಜನರನ್ನು ಸೇರಿಸಿ ಅದರೊಂದಿಗೆ ಸಮಸ್ತ ಬಲವನ್ನು ಸಂಗ್ರಹಿಸಿದನು. ಬಹುವಾದ್ಯಗಳ ಸದ್ದಿಗೆ ಭೂಮಿಯೇ ಅದುರುವಂತೆ ಕಿಕ್ಕಿರಿದು ಪ್ರಳಯ ಕಾಲದಂತೆ ಘೋಷಿಸಿದನು.

೧೧. ಆ ಬಳಿಕ ಸೂರ್ಯವಂಶಜನಾದ ಪರೀಕ್ಷಿತನು ಮೇಲೆ ಸಿಂಹದ ಚಿಹ್ನೆಯಿಂದ ವಿರಾಜಿಸುವ ರಥವನ್ನು ಏರಿ ಕವಚ ಚಾಪ ಬಾಣಗಳನ್ನು ಧರಿಸಿದನು. ತಡಮಾಡದೆ ನಾಲ್ಕು ಸಮುದ್ರಗಳಿಂದ ಹರಡಿರುವ ಈ ಭೂಮಿಯಲ್ಲಿ ಶ್ರೀಹರಿಯ ಭಕ್ತಿಗೈಯದವರನ್ನು ಬೇರು ಸಹಿತ ಕಿತ್ತುಕೊಳ್ಳಲು ಯಾತ್ರೆ ಹೊರಟನು.

೧೨. ಮುತ್ತಿನ ಸತ್ತಿಗೆ, ಝುಲ್ಲರಿಗಳುಳ್ಳ ಚಾಮರಗಳು, ಬಾವುಟಗಳು, ಚಿತ್ರಗಳಿರುವ ಪತಾಕೆಯಿಂದ ಆಕಾಶವೇ ಮರೆಯಾಗಿ ಹೋಯಿತು. ಹತ್ತು ದಿಕ್ಕಿನಿಂದ ತುಂಬಿದ ಧೂಳು ಲೋಕವನ್ನು ತುಂಬಲು ಕೆಳಗೆ ತಕ್ಷಕ, ಕೂರ್ಮರು ಚಿಂತಿಸಿದರೆಂಬುದು ಕೌತುಕವಲ್ಲವೇ?

೧೩. ಹರಿವರ್ಷ, ಕಿಂಪುರುಷ, ಭದ್ರಾಶ್ವಕ, ಕೇತುಮೂಲ (ಕೇತಮಾಲ) ಕುರುಜಾಂಗಲಗಳೆಲ್ಲವನ್ನು ವಶಪಡಿಸಿದನು. ಅಲ್ಲಿಂದ ಮುಂದೆ ಸ್ಥಿರವಾದ ಭಾರತ ಖಂಡವನ್ನು ರಾಜನು ದರ್ಶಿಸಿದನು. ಅಲ್ಲಿ ಹರಿಭಕ್ತರು ಹರಿಯ ಮಹಿಮೆಯನ್ನು ವರ್ಣಿಸುತ್ತಿದ್ದರು.

೧೪. ದ್ರೋಣನ ಮಗನಾದ ಅಶ್ವತ್ಥಾಮನ ಬಾಣದಲ್ಲಿ ತಾನು ಉರಿದುಹೋದ ವಾರ್ತೆ; ಆಮೇಲೆ ಮುರವೈರಿಯಾದ ಕೃಷ್ಣ ಆಧರಿಸಿ ರಕ್ಷಿಸಿದ ಭಕ್ತಾಶ್ರಯ ಕೀರ್ತಿಯನ್ನು ಸುಂದರವಾಗಿ ಅವರು ವಿವರಿಸುತ್ತಿದ್ದರು. ಅದನ್ನು ಕೇಳಿದ ರಾಜನು ಅತಿತೋಷಿತನಾಗಿ ಶ್ರೇಷ್ಠವಾದ ರತ್ನ, ದಿವ್ಯಾಂಬರ, ಮಾಲೆಗಳಾದಿ ಸಂಭಾವನೆಯನ್ನು ಇತ್ತನು.

೧೫. ಹರಿಯ ದಿವ್ಯ ಕಥಾಮೃತ ಸಾರವನ್ನು ರಾಜನು ಸೇವಿಸಿ ಮುಂದುವರಿದನು. ಒಂದು ದೇಶದ ಸಮೀಪ ವಿಶೇಷವೊಂದು ಘಟಿಸಿತು. ಭೂಮಿ ಮತ್ತು ಧರ್ಮವು ಅತ್ಯಧಿಕವಾಗಿ ಪರರಿಂದ ಪೀಡೆಗೊಳಗಾಗಿದ್ದರು. ಅದನ್ನು ವಿವರಿಸುವುದು ಕೇಳುವುದು, ಆಶ್ಚರ್ಯವಾದುದೇ. ಆ ಚೋದ್ಯವನ್ನು ಏನೆಂದು ಹೇಳಲಿ!

೧೬. ಭೂಮಿಯು ಪಶುರೂಪವನ್ನು ಧರಿಸಿ ಬಡಕಲಾಗಿತ್ತು. ನಿಂತಲ್ಲಿಯೇ ಕದಲದೆ ಕಣ್ಣಿನಿಂದ ಕಣ್ಣೀರನ್ನು ಸುರಿಸುತ್ತ ಅತಿ ಚಿಂತೆಯಿಂದ ಇತ್ತು. ಅಲ್ಲಿಗೆ ಅತಿ ಚಿಂತೆಯನ್ನು ಮಾಡುತ್ತ ಬಸವಾಕೃತಿಯಿಂದ ಒಂದು ಕಾಲಲ್ಲಿ ಧರ್ಮನು ಬಂದನು.

೧೭. ಅಲ್ಲಿಗೆ ಬಂದು ಗೋವಿನ ರೂಪವನ್ನು ಧರಿಸಿದ ಮಹಾಧರಣಿಯ ಅಂಗವನ್ನು ನೋಡಿದನು. ಮನಸ್ಸಿನಲ್ಲಿ ಅತಿ ಕೌತುಕವೆಂದೆಣಿಸಿಕೊಂಡು ವಿನಯದಿಂದ "ಹೃದಯಕ್ಕೆ ನೋವು ಏಕೆ ಉಂಟಾಯಿತು? ನಿನ್ನ ಕಣ್ಣೀರಿನ ಬೇಗೆಗೆ ಇದ್ದ ಮರಬಳ್ಳಿಪೊದೆಗಳು ಲಯವಾಗಿವೆ. ಏಕೆ ಇಷ್ಟು ನೋವು?

೧೮. ಇದು ಘೋರವಾದ ರೋಗವೇ? ಅಲ್ಲದಿದ್ದರೆ, ಒಂದು ಪಕ್ಷ, ನಿನ್ನೊಂದಿಗೆ ಸೇರಿದ್ದ ಬಂಧುಗಳನ್ನು ಬಿಟ್ಟು ಹೋದುದರಿಂದ ಬಂದ ವೈರಾಗ್ಯವೇ? ಅಲ್ಲ, ನನಗೆ ಕಾಲಿಲ್ಲದುದನ್ನು ನೆನೆಸಿಕೊಡು ಅಳುವೆಯಾ? ಅಥವಾ ಭೂಮಿಯಲ್ಲಿ ಶೂರರಾರೂ ಇಲ್ಲವೆಂದು ಮರುಗುತ್ತಿರುವೆಯಾ?

೧೯. ಭೂಮಿಯಲ್ಲಿ ಬ್ರಾಹ್ಮಣರು ನಡೆಸುವ ದುವೃತ್ತಿಯನ್ನು ನೋಡಿ ಮರುಗುತ್ತಿರುವೆಯಾ? ಇಲ್ಲವೇ ಯಾಗದ ಫಲಕ್ಕೆ ಅತ್ಯಾಶೆ ಪಡುತ್ತಿರುವ ಸುರಮಂದಿಯನ್ನು ನೆನೆಸಿ ದುಃಖಿಸುತ್ತಿರುವೆಯಾ? ಮನುಷ್ಯರು ಅತಿ ದೋಷವನ್ನು ಆಚರಿಸುತ್ತ ನರಕವನ್ನು ಅನುಭವಿಸುವ ಜನರ ಕೋಟಲೆಗಾಗಿ ಚಿಂತೆಯೋ?

೨೦. ಗಂಡನ ರಕ್ಷೆಯಿಲ್ಲದ ನಾರಿಯರ ಸ್ಥಿತಿಗೋ, ಮತ್ತಲ್ಲದಿದ್ದರೆ ಪತಿ ರಾಕ್ಷಸನ ಹಾಗೆ ಶಿಕ್ಷಿಸುವುದನ್ನು ಎಣಿಸಿಯೋ, ಗಂಡ ಇಲ್ಲದವರಿಗೆ ಆಶ್ರಯವಿಲ್ಲವೆಂದೋ ಪತಿಯನ್ನು ವಂಚಿಸಿ ಪತಿವ್ರತಾ ವ್ರತ ಭಂಗವೆಂಬ ದೋಷವನ್ನು ಆಚರಿಸುವುದಕ್ಕೋ- ಯಾವುದಕ್ಕೆ ನೀನು ಮರುಗುತ್ತಿರುವುದು?

೨೧. ಸತ್ಕರ್ಮವನ್ನು ಬಿಟ್ಟು ಉತ್ತಮರು ಪಾಷಂಡಿಗಳಾಗಿ ದುಷ್ಕರ್ಮವೆನ್ನುವ ಅನರ್ಥದ ಫಲ ಪಡೆಯುತ್ತಾರೆ ಎಂದು ನೆನೆಸಿಕೊಂಡು ಮರುಗುತ್ತಿರುವೆಯಾ? ದುಃಖದಿಂದ ಜನರು ಗುಣವನ್ನೂ ತಿಳಿದೂ ಮೂಢಾತ್ಮಕರಂತೆ ತಿನ್ನ ಬಾರದುದನ್ನು ತಿನ್ನುತ್ತಾರೆಂಬುದನ್ನು ನೆನೆಸಿ ಶೋಕವೋ?

೨೨. ಮನೆ, ಉಡುಗೆ-ತೊಡುಗೆ, ಕುಡಿತ ಪಥೂ ಸಂಗವೆನ್ನುವ ವಿಷಯದಲ್ಲಿ ಮುಳುಗಿ ನಿತ್ಯ ವಿಧಿಯನ್ನು ಬಿಟ್ಟು ಮರುಗುತ್ತಾ ಇಳಿದುಹೋಗಿ ಸತ್ಯದಮೆ ಶಮೆ ಎನ್ನುವುದನ್ನು ಬಿಟ್ಟು ಅಶುಭಗಳನ್ನೂ ಆಚರಿಸುತ್ತಾರೆಂದು ದುಃಖಿಸುತ್ತಿರುವುದೋ, ಹೇಳು.

೨೩. ಅದಲ್ಲದಿದ್ದರೆ ಈ ಹಿಂದೆ ನಿನ್ನನ್ನು ರಕ್ಷಿಸಲೋಸುಗ ಈ ಭೂಮಿಯಲ್ಲಿ ಅವತರಿಸಿ, ಚಂದ್ರನ ಹಾಗೆ ಬೆಳಗಿ ನಾರಾಯಣ ಮೂರ್ತಿ - ಇಲ್ಲಿಯವರೆಗೆ ಇಲ್ಲಿದ್ದು ಈಗ ಯಾತ್ರಿಸಿದರೆಂಬುದಕ್ಕೆ ಮರುಗುತ್ತಿರುವೆಯಾ? ನಿನ್ನ ಮರುಗುವಿಕೆಗೆ ಮನದಲ್ಲಿ ಸ್ಥಿರವಾದ ಕಾರಣವೇನು ಎಂಬುದನ್ನು ತಾಯಿಯಾದ ನೀನು ಹೇಳಬೇಕು.

೨೪. ಸುಂದರವಾದ ಕಣ್ಣುಳ್ಳವಳೇ, ನೀನು ನನ್ನ ದುಃಖವನ್ನೂ ಆಲೋಚಿಸಿ, ನಿನ್ನ ದುಃಖ ಸಮುದ್ರಕ್ಕೆ ಮೂಲ ಕಾರಣವನ್ನು ಹೇಳಬೇಕು. ಶೀಲವತಿಯೇ ನಾವೀರ್ವರೂ ಸಮ ದುಃಖಿಗಳು ಎಂದು ವಿಚಾರಿಸಿದನು. ಆಗ ಮೆಲ್ಲನೆ ಭೂಮಾತೆ ಹೇಳಿದಳು.

೨೫. ಹೀಗೆ ಧರ್ಮನು ಅನುಮಾನಿಸಿ ಕೇಳಲಾಗಿ ಹೃದಯವೆಂಬ ಕಮಲದ ತಳದಲ್ಲಿ ಇಂದೀವರನಾಭನಾದ ನಾರಾಯಣನನ್ನು ನಿರ್ಧರಿಸಿಕೊಂಡು ಮೆಲ್ಲನೆ ಹೀಗೆ ಹೇಳಿದಳು "ತಂದೆ, ನಿನಗೊಂದೇ ಕಾಲಿರುವುದಲ್ಲವೇ, ಮತ್ತೇನು ಕೇಳಲಿಕ್ಕಿದೆ, ಒಂದೇ ಕಾರಣದಿಂದ ಅತಿ ದೋಷವನ್ನು ನಾವು ಅನುಭವಿಸಿದೆವು" ಎಂದು ಭೂಮಾತೆ ಹೇಳಿದಳು.

೨೬. ಮನಸ್ಸಿನಲ್ಲಿ ತಿಳಿದೂ ತಿಳಿದೂ ನನ್ನನ್ನು ಕೇಳುವುದೇಕೆ? ತಂದೆಯೇ ಕಾರಣವನ್ನು ಮರೆತು ನನ್ನನ್ನು ಕೇಳಿ ಇನ್ನೂ ದುಃಖವೆಂಬ ಬೆಂಕಿ ಮತ್ತೂ ಉರಿಯುವಂತೆ ಮಾಡುವುದೇಕೆ? ಬಂಧುವೇ ಹರಿಯು ನಮಗೆ ಅನುಕೂಲವಾಗಿದ್ದುದನ್ನು ಮರೆತಿರುವೆಯಾ? ವಿಧಿಯು ವಂಚಿಸಿ ನನಗೆ ಒದಗಿಸಿದ ಬಂಧನವನ್ನು ಏನೆಂದು ಹೇಳಲಿ?

೨೭. ಕೆಲವೇ ದಿನದಲ್ಲಿ ಅನೇಕ ಸುಖ ವಿಭವಗಳ ಸಾರವೆಲ್ಲವೂ ಬಂದು ಅವಸಾನವಿಲ್ಲವೆನ್ನುವ ರೀತಿಯಲ್ಲಿ ಪೂರ್ಣತೆಯನ್ನು ಪಡೆದು ಈ ಸ್ಥಿತಿಯಲ್ಲಿ ಅತೀ ಆನಂದಿಂದ ಇರುವಂತಾಯಿತು. ಆದರೆ ವಿಪರೀತ ಬಲದಿಂದ ಇದೆಲ್ಲ ಹಾಳಾಗಿ ಒಂದೇ ಕ್ಷಣದಲ್ಲಿ ಅವಸಾನವಾಯಿತು.

೨೮. ಇಂದ್ರನೇ ಮೊದಲಾದ ದೇವತೆಗಳು ನಿತ್ಯವೂ ಮನತುಂಬಿ ಮರೆಯದೆ ದೃಢಮನಸ್ಕರಾಗಿ ಶರಣು ಹೊಂದುತ್ತಿದ್ದರು. ಶ್ರೀವಿಷ್ಣುವಿನ ದಿವ್ಯ ಪಾದಕಮಲದ ಗುರುತವನ್ನು ಧರಿಸಿ ಇದೀಗ ಅದು ನಶಿಸಿ ಹೋಗಿರುವುದು ನಮಗೆ ವಿಸ್ಮಯವಲ್ಲವೇ" ಎಂದಳು ಭೂತಾಯಿ.

೨೯. ಅಂಕುಶ, ಧ್ವಜ, ವಜ್ರರೇಖೆಯ ಎಳೆಯಿಂದ ವಿರಾಜಿಸುವ, ತಾವರೆಯನ್ನು ಹೊಟ್ಟೆಯಲ್ಲಿ ಧರಿಸಿರುವ ಶ್ರೀಪಾದ ತಾವರೆಯ ಮೂರ್ತಿಯ ಗುರುತನ್ನು ಅಂಕಿತವಾಗಿ ಧರಿಸಿರುತ್ತೇನೆ. ಅದಕ್ಕಾಗಿ ಅನೇಕ ರೀತಿಯಲ್ಲಿ ಅಹಂಕರಿಸಿದ ಕಾರಣ ನಮಗೆ ಕಾಣದ ರೀತಿಯಲ್ಲಿ ಆತನು ಯಾತ್ರಿಸಿದನು. ಇದು ಸತ್ಯ.

೩೦. ಅತೀ ಅಹಂಕಾರದಿಂದ ಈ ಭೂಮಿತಾಯಿಯು ಮಿತಿಮೀರಿ ಆಡುತ್ತಾಳೆಂದು ಆ ಸಚರಾಚರವಂದ್ಯನು ಮನಸ್ಸಿನಲ್ಲಿ ಆಲೋಚಿಸಿ ಯಾತ್ರೆ ಕೈಗೊಂಡನೇನೋ! ಭೂಮಿಯಲ್ಲಿ ಪುಣ್ಯವನ್ನು ಮಾಡದ ಕಾರಣ ಸತತವೂ ನಮಗೆ ಆ ಕಮಲಾಯತನೇತ್ರನಾದ ಕೃಷ್ಣನು ದುಃಖವನ್ನು ಕರುಣಿಸಿದನು.

೩೧. ಯಾರಿಗೆ ಯಾರು ಉಪಕಾರ ಮಾಡುತ್ತಾರೆ? ಅನಾಥರಿಗೆ ಯಾರು ವ್ಯಧಿಸುತ್ತಾರೆ? ಈ ವಿಧಿಯನ್ನು ಯಾರು ಕೇಳಿ ಸಹಿಸುತ್ತಾರೆ? ಈ ವಿಧಿಯನ್ನು ಯಾರು ಪರಿಹರಿಸುತ್ತಾರೆ? ಕಾಡ್ಗಿಚ್ಚಿನಲ್ಲಿ ಬೆಂದ ಮೊಳಕೆ ಮೊಳೆಯಲಾರದಲ್ಲವೇ? ಮೂರು ಕಾಲೂ ಇಲ್ಲದ ನಿನ್ನನ್ನು ಯಾರು ರಕ್ಷಿಸುತ್ತಾರೆ?

೩೨. ನನಗಿನ್ನಾರು ಆಶ್ರಯ ನೀಡುವವರು? ಯಾರಲ್ಲಿ ನನ್ನ ಸಂಕಟವನ್ನು ಹೇಳಿಕೊಳ್ಳುವುದು? ಮೇರು ಪರ್ವತವನ್ನು ಹಾರಾಡುವಷ್ಟು ಹಗುರವಾದ ಧೂಳುಗಳ ಸಮೂಹವಾದರೂ ಆಧರಿಸುವುದೇ? ಈ ಅರಣ್ಯದ ತುತ್ತತುದಿಯಲ್ಲಿ ಯಾರಿಂದ ಉಪಕಾರವ ನಮಗೆ ಹೆಚ್ಚು ಆದೀತು ಎಂದು ದುಃಖ ಸಮುದ್ರದಲ್ಲಿ ಅವರು ಮುಳುಗಿದ್ದರು.

೩೩. ನೀಚರ ಭಾರದಿಂದ ತಲೆಯನ್ನು ಮೇಲಕೆತ್ತುವಂತಿಲ್ಲ. ಕುತ್ತಿಗೆಯನ್ನು ಬಾಗಿಸಿ ದಂಡನೆಗೆ ಒಳ ಪಡುವಂತೆ ವಿಧಿ ನಮ್ಮನ್ನು ಮಾಡಿದನಲ್ಲವೇ? ಸಮಾಧಾನದಿಂದ ಒಂದಡಿ ಹೆಜ್ಜೆ ಇಡದಂತೆ ಮಾಡಿ ನಮ್ಮನ್ನು ಮಿದಿಯುತ್ತಿದ್ದಾರೆ. ನಮಗೆ ಎಡೆಕೊಂಡ ಈ ಸೌಭಾಗ್ಯವನ್ನು ಯಾರಲ್ಲಿ ಹೇಳುವುದು - ಮರುಳಾಟವಲ್ಲವೇ?

೩೪. ಧೃತಿ, ಜ್ಞಾನ, ವಿವೇಕ, ಸುಶಾಂತಿ, ಗುಣ, ದಯೆ, ನಿರ್ಮಲ, ಶುದ್ಧ, ಶ್ರುತಿ ಸತ್ಯ ಮಹಾಕೃತಾಕಾಂಕ್ಷೆಯ ವಿಭವ, ಪರಿತೋಷ, ವಿರಕ್ತಿ, ಮತಿ, ಸದ್ಗತಿ, ಸುಖ್ಯತೆ, ಸಾಧುಗತಿ ಇವೆಲ್ಲವೂ ಹೋಗಿವೆ. ಈಗ ವಿಭ್ರಾಂತಿ ಎನ್ನುವ ಗುಣವೇ ಈ ವರೆಗೆ ನನಗೆ ಸ್ಥಿರವಾಗಿದೆ. ಹಿಂದಿನ ದಿನವೆಲ್ಲವೂ ಲಯವಾಗಿ ಹೋಗಿವೆ.

೩೫. ಗುಣಸಾಗರ ಮೂರ್ತಿಯು ನಮ್ಮನ್ನು ಬಿಟ್ಟು ಹೋದ ಬಳಿಕ ನಾವು ನೋಡುವ ಜೀವವಿಲ್ಲದ ಶರೀರದಿಂದ ಗುಣವನ್ನು ನಿರೀಕ್ಷಿಸಬಹುದೇ? ಗುಣಹೀನರು ತುಂಬಿ ಕೆಳಮುಖವಾಗಿ ಸೊರಗುವ ಪ್ರಕಾರ ವಿಧಿಯು ನಮ್ಮ ಗುಣಹೀನತೆಗೆ ದುಃಖವನ್ನೂ ಒಡ್ಡಿಸಿರುವನು.

೩೬. ಹೀಗೆ ಸಂಕಟ ಮಾಡುತ್ತಿರುವ ನನ್ನ ದಣಿವೆಂಬುದು ಇಡೀ ಮಹಾಲೋಕವನ್ನೇ ಆವರಿಸಿದೆ. ಆಶ್ರಮ ಧರ್ಮ ಹಾಗೂ ಪಿತೃಪೂಜೆ ಸಮೇತನಾಗಿ ಎಲ್ಲವೂ ನಾಶವಾಗಿವೆ. ಇದನ್ನೆಲ್ಲ ಮನಸ್ಸಿನಲ್ಲಿ ಸರಿಯಾಗಿ ಮೂಡುವ ಹಾಗೆ ನಿರೂಪಿಸಿ, ಈ ಯುಗವನ್ನು ಕಳೆಮುಕೊಳ್ಳುವ ಉಪಾಯವೇನು? ಇದನ್ನು ಯೋಚಿಸಿದರೆ ಅವನೊಬ್ಬನನ್ನು ಹೊರತು ಪಡಿಸಿ ಬೇರೆ ಯಾರಿಗೂ ಸಾಧ್ಯವಿಲ್ಲ.

೩೭. ಒಮ್ಮೆಯೂ ಕೆಳಗಿಳಿಯದೆ ಮುರಾಂತಕನ ಎದೆಯನ್ನೇರಿ ಸ್ಥಿರವಾಗಿ, ಮನಸ್ಸನ್ನು ಚಂಚಲಿಸದೆ ಶ್ರೀ ವನಿತೆ ಭಜಿಸುತ್ತಾಳೆ. ಬ್ರಹ್ಮನೂ ತನ್ನ ಅಂತಃಕರಣದಲ್ಲಿ ದಿನಂಪ್ರತಿ ಆತನನ್ನು ಭಜಿಸುತ್ತಾನೆ. ಶಿವನ ಸಖನಾದ ಆತನ ಪಾದ ನಮಗಿನ್ನು ಹೇಗೆ ಲಭಿಸುತ್ತದೆ?

೩೮. ಪರಮ ಯೋಗೀಂದ್ರರು ತಮ್ಮ ಹೃದಯಕಮಲದಲ್ಲಿ ನಿತ್ಯವೂ ಆರಾಧಿಸುತ್ತಾರೆ. ಆದರೂ ಅವನನ್ನು ಸಂಪೂರ್ಣವಾಗಿ ತಿಳಿಯದಾದರು. ಬೇರೆ ಸುಖವೆಲ್ಲವನ್ನೂ ತ್ಯಜಿಸಿ ಸ್ಥಿರವಾದ ಮನಸ್ಸಿನಿಂದ ಭಾಗವತ ಜನರು ಸೇವಿಸುತ್ತಾರೆ. ಆದ್ಯಂತ್ಯವಿಲ್ಲದ ಪರಮೇಶ್ವರನ ಶ್ರೀ ಚರಣ ಬಿಟ್ಟು ನನಗೆ ಗತಿಯೇನು?

೩೯. ಭೂಮಿಯ ಭಾರವು ಅತಿಯಾಯಿತೆಂದು ಇಲ್ಲಿ ಅವನು ಜನಿಸಿದನು. ಪಾಂಡವ ಕೌರವರೀರ್ವರಿಗೂ ಆನಂದ ಪಡುವವನಾದ ಆತನು ನೆರವಾದನು. ಸಮುದ್ರದಂತೆ ನೆರೆದ ಸಮಸ್ತ ಜನರೂ ಬಡಲಾಗ್ನಿಗೆ ಎದುರಾದಂತೆ ಅರ್ಜುನ ಬಾಣ ಪ್ರಯೋಗದಿಂದ ಉರಿದು ಹೋದರು- ಆ ವಿಚಿತ್ರವನ್ನು ಏನೆಂದು ಹೇಳಲಿ?

೪೦. ಭಾರವಾಗಿದೆ ಎಂದೆನಲು ತನ್ನೊಂದಿಗಿರುವ ಯದು ಸೈನ್ಯವನ್ನು ಶ್ರೀರಾಯ ದೃಢಮನಸ್ಸಿನಿಂದ ಕ್ಷಣದಲ್ಲಿಯೇ ನಾಶಗೊಳಿಸಿದನು. ವೈಷ್ಣವರು ತನಗೆ ಭಾರವೇ? ಈಗ ಅಧಮರು ತುಂಬಿದ್ದಾರೆ. ನನ್ನ ಭಾರಕ್ಕೆ ಹರಿಯೊದಗಿಸಿದ ಪರಿಹಾರವೇ! ಎಂದು ಭೂದೇವಿ ಹೇಳಿದಳು.

೪೧. ಹರಿಪಾದವನ್ನು ಮುಟ್ಟುವ ಸುಖದಿಂದ ಇಷ್ಟುದಿನ ಸುಖವಾಗಿ ನಾನಿದ್ದೆ. ಅವನು ನನ್ನನ್ನು ಬಿಟ್ಟು ಹೋದ ಮೇಲೆ ನನಗೀಗ ಗತಿಯೇನು? ಶ್ರೇಷ್ಠರಾದ ವೈಷ್ಣವರ ಪಾದಧೂಳಿಯ ಗುಣದ ಸಣ್ಣ ಆಸೆಯಿಂದ ಇಲ್ಲಿಯವರೆಗೆ ಜೀವ ಧರಿಸಿದ್ದೆ- ಹೀಗೆಂದು ಚಿಂತೆ ಮಾಡಿ ಯೋಚಿಸುತ್ತಾ ಇರುವೆನು.

೪೨. ಇನ್ನು ನನಗೆ ವೈಷ್ಣವರ ಪಾದ ಸ್ಪರ್ಶ ಎಲ್ಲಿಂದ ಒದಗೀತು? ನಾನು ನಿರ್ಭಾಗ್ಯೆಯಾದುದರಿಂದ ಎಲ್ಲವೂ ಕಲಿಯ ಪಾಲಾಗಿದೆ. ಬುದ್ಧಿವಂತರು ಅತಿ ದುರ್ವಿಷಯಕ್ಕೆಳಸಿ ಪಾಪಾತ್ಮಕರಾಗಿದ್ದಾರೆ. ಇದನ್ನು ನೆನೆಸಿ ನನ್ನ ಕಣ್ಣಿನಿಂದ ನಿಲ್ಲದೆ ಕಣ್ಣೀರು ಬರುತ್ತಿದೆ ಎಂದಳು, ದೇವಿ.

೪೩. ಹಲವು ಮಾತೇಕೆ - ಲಕ್ಷ್ಮೀಧರನ ಶ್ರೀಪಾದ ಕಮಲಕ್ಕೆ ನೆಲೆಯಾಗಿ ಕೊನೆಯವರೆಗೂ ನಾನು ನಿಲ್ಲಬಲ್ಲೆ ಎಂಬ ಅತ್ಯಾಶೆಯಲ್ಲಿದ್ದೆ. ಆ ಗೆಲುವೆಲ್ಲವೂ ಈಗ ನಾಶವಾಗಿ ಹೋಯಿತು. ಇನ್ನೇನು ಗತಿ, ದೇವರೇ ಎಂದು ಗತಿಸಿ ಹೋದ ಮುಕುಂದನನ್ನು ತನ್ನ ಬುದ್ಧಿಯಲ್ಲಿ ನಿಧಾನವಾಗಿ ಚಿಂತಿಸತೊಡಗಿದಳು.

೪೪. ಇಲ್ಲಿಗೆ ಹದಿನಾರನೆಯ ಸ್ವರೂಪವು ಪೂರ್ಣವಾಯಿತು. ಇದು ಭೂಮಿಯಲ್ಲಿ ಧರ್ಮಕಥಾಮೃತವೂ, ಧರ್ಮೋತ್ತರ ಸೂಕ್ಷ್ಮವೂ ಆದುದಾಗಿದೆ. ಯಾರು ಇದನ್ನು ಇಚ್ಛೆಯಿಂದ ಓದಿ ಕೇಳುತ್ತಾರೋ ಅವರು ಶುದ್ಧ ಮನಸ್ಸುಳ್ಳವರಾಗಿ ಸತತವೂ ಅಚ್ಯುತನ ಪಾದದ ಬಳಿಯಲ್ಲಿ ಸುಖಿಸುತ್ತಾರೆ.

ಅಧ್ಯಾಯ ೧೭

೧. ಉತ್ತಮ ಪ್ರಸಾದವನ್ನು ಸಲ್ಲಿಸಿ ಗಣಪತಿಯನ್ನು ಪೂಜಿಸುತ್ತೇನೆ. ಮನಸ್ಸನ್ನು ಸ್ಥಿರಗೊಳಿಸಿ ಬ್ರಹ್ಮನ ರಾಣಿಯಾದ ಶಾರದೆಯನ್ನು ಪ್ರಾರ್ಥಿಸುತ್ತೇನೆ. ಶ್ರೀ ಗುರುವಿನ ಆಶ್ರಯವಾಗುವಂತೆ ಭಜಿಸುತ್ತೇನೆ ಪರೀಕ್ಷಿತ ಮಹಾರಾಜನು ಕಲಿಯನ್ನು ಕಟ್ಟಿ ರಾಜ್ಯವನ್ನು ಬೆಳಗಿಸಿದ ಕಥೆಯನ್ನು ಮಹಾ ಜನಗಳು ಕೇಳುವಂತೆ ಹೇಳುತ್ತೇನೆ.

೨. ಬ್ರಹ್ಮಜ್ಞರೇ ಕೇಳಿ - ಮಹಾಜನರಿಗೆ ಸನ್ಮಾರ್ಗವೊದಗಲೋಸ್ಕರ ಭೂಮಾತೆ ಬೇಸರಗೊಂಡು ಧರ್ಮದೇವತೆಗೋಸುಗ ವ್ಯಾಕುಲಿಸುತ್ತಿದ್ದಳು. ಆಗ ಧರಣಿಯಲ್ಲಿ ಎಲ್ಲ ಕಡೆಯೂ ಮಡುಕಿ ಕಲಿಯು ಕೋಪದಿಂದ ಅಲ್ಲಿಗೆ ಬಂದನು.

೩. ಮಹಾರಾಜನ ಕೀರ್ತಿಯನ್ನು ಕೇಳಿ ತುಂಬ ಭಯ ವಿಹ್ವಲನಾಗಿ, ಆ ಅವಿವೇಕಿಯು ಮಾರುವೇಶದಲ್ಲಿ ಶೂದ್ರನಾಗಿ ಬಂದನು. ಭೂಮಿ ಮತ್ತು ಧರ್ಮನನ್ನು ಸಾಯಿಸಲೆಂದು ಕೊಂಕಿದ ಕತ್ತಿಯನ್ನು ಹಿಡಿದನು. ಅವರು ಚಿಂತಿಸುತ್ತಿರುವಲ್ಲಿಗೆ ಹೋದ ಕತೆಯನ್ನು ಮುನಿಮುಖ್ಯರು ಇನ್ನು ಮುಂದೆ ಕೇಳಿ.

೪. "ಎಲ್ಲೆಡೆಯಲ್ಲಿಯೂ ನಿಮ್ಮನ್ನು ಹುಡುಕಿಕೊಂಡು ನಾನು ಬರುತ್ತಿದ್ದೇನೆ. ಮಲೆಯಲ್ಲಿರಬಹುದೆಂದು ಇಲ್ಲಿಗೆ ಓಡೋಡಿ ಹೋಗಿ ದಣಿದುಹೋದೆ. ಹಸುವಿಗೆ ಬರುವುದಕ್ಕೆ ಇಷ್ಟು ದಿನ ಬೇಕಾದಿತೆಂದು ಭಾವಿಸಿ ಇಲ್ಲಿಯವರೆಗೆ ತಡೆವೆ - ಈ ಗುಣ ನಿಮಗೆ ಸಲ್ಲುವುದೇ ಎಂದು ಮರ್ಮ ಸ್ಥಾನವನ್ನು ನೋಡಿ ಎಲುಬು ಮುರಿಯುವ ಹಾಗೆ ಚೆನ್ನಾಗಿ ತುಳಿದನು.

೫. ಹಸುವನ್ನು ತಳ್ಳಿ ಮಗುಚಿ ಹಲವು ಸಲ ಗುದ್ದಿದನು. ಎತ್ತನ್ನು ಪೂರ್ಣವಾಗಿ ರಕ್ತ ಕಾರುವಂತೆ ಹಿಂಡಿ ಹಿಪ್ಪೆ ಮಾಡಿದನು. ಆಗ ಸ್ಮೃತಿ ತಪ್ಪಿ ಹೋಗಿ ಶರೀರದ ಸಂದುಗಳೆಲ್ಲವೂ ಕಳಚಿ, ರಕ್ತವು ಕಣ್ಣು, ಮೂಗು, ಬಾಯಿ, ಕಿವಿ ಎಲ್ಲ ಕಡೆಯಿಂದಲೂ ಭೂಮಿಯ ಮೇಲೆ ಹರಿಯಲಾರಂಭಿಸಿತು.

೬. ಆ ವೇಳೆಯಲ್ಲಿ ರಾಜ ಋಷಿಯೂ ಮಹಾರಾಜನೂ ಆದ ಪರೀಕ್ಷಿತ ರಾಜನು ಬಂದನು. ದೂರದಿಂದಲೇ ರಥದಲ್ಲಿ ರಾಜನು ಈ ದೃಶ್ಯವನ್ನು ನೋಡಿದನು. ಮೈ ಮರೆತು ವರ್ತಿಸುವ ಶೂದ್ರನನ್ನು, ಎತ್ತನ್ನು, ಹಸುವನ್ನು ನೋಡುತ್ತಾ ವಿಸ್ಮಯದಿಂದ ಆತನು ಮೂಗಿನ ಮೇಲೆ ಬೆರಳಿಟ್ಟನು.

೭. ಪ್ರಾಚೀನವಾದ ಸರಸ್ವತಿಯೆಂಬ ಮಹಾನದಿಯ ಬಳಿಗೆ ಬರುವಾಗ ಈ ನೀಚತ್ವವನ್ನು ಆತ ನೋಡಿದನು. ದೊಡ್ಡದಾದ ರಥವನ್ನೇರಿ ಈ ಕಳ್ಳನನ್ನು ಕಡಿದು ತುಂಡು ಮಾಡುವೆನೆಂದು ಘರ್ಜಿಸಿದನು. ಇದು ಯಾಗ್ಯವಾದ ಆಚಾರವೇ ಎಂದು ಕಠೋರವಾಗಿ ಕೇಳಿದನು.

೮. ಈ ದುಷ್ಟ ದುರಾಚಾರವನ್ನು ಮಾಡುತ್ತಿರುವ ಕುಲಗೇಡಿಯೂ ಕೆಟ್ಟ ಬುದ್ಧಿವಂತನಾದ ನೀನು ಯಾರು? ಕಳ್ಳನಾದ ನೀನು ನಿಜವೇಶವನ್ನು ಮರೆಸಿ ಅವಿವೇಕವನ್ನು ಮಾಡುತ್ತಿರುವೆ. ಈ ಕೆಲಸವನ್ನು ಚಾಂಡಾಲರಲ್ಲದೆ ಬೇರೆ ಯಾರು ಮಾಡುತ್ತಾರೆ? ಬಿಡದಿದ್ದರೆ ಈಗಲೇ ಅಂಟಿದ ಬೇರು ಸಹಿತ ಮರವನ್ನು ಬೀಳಿಸುವ ಹಾಗೆ ನಿನ್ನನ್ನು ಕಿತ್ತೆಸೆಯುತ್ತೇನೆ.

೯. ನಾಥರಿಲ್ಲದ ಅನಾಥರನ್ನು ಕೊಲ್ಲುವುದಕ್ಕೆ ಬಂದೆಯಾ ಪಾಪಿ? ನಿನ್ನ ಶರೀರವನ್ನು ಕಡಿದು ಹುಡಿಮಾಡಿ ಭೂತಗಳಿಗೆ ಒಪ್ಪಿಸುತ್ತೇನೆ ಎಂದು ಆತ ಹೇಳಿದನು. ಅವರನ್ನು ಬಿಟ್ಟು ಕಲಿಯು ಆಚೆಗೆ ಸರಿದನು. ಚಳಿಗೆ ದೇಹ ನಡುಗುವ ರೀತಿಯಲ್ಲಿ ಕೋಪದಿಂದ ರಾಜನು ನಡುಗುತ್ತಿದ್ದನು.

೧೦. ಭೂಮಿಯಲ್ಲಿ ಪರಾಕ್ರಮರಾದವರಿಲ್ಲವೆಂದು ಆಟವಾಡುತ್ತಿರುವೆಯಾ ಪಾಪಿ? ನಿನ್ನ ದುರುಳತ್ವವು ನಾನು ನೆಲೆಯಾಗಿ ನಿಂತವರೆಗೆ ನಡೆಯಲಿಕ್ಕಿಲ್ಲ. ಶ್ರೀಕೃಷ್ಣ, ಪಾಂಡವರಿಲ್ಲ, ನಾನೇ ಅರಸನೆಂದೆಣಿಸಿ ಕೊಂಡೆಯೋ? ಸುಮ್ಮನೆ ಸಾಯದೆ ಬೇಗನೇ ಹೋಗು, ಇಲ್ಲದಿದ್ದರೆ ಕೊಲ್ಲುತ್ತೇನೆ ಎಂದನು.

೧೧. ತಾಯೇ ನೀನಾರು? ಹಸುವಿನ ರೂಪವನ್ನು ಧರಿಸಿ ನಡೆಯುತ್ತಿರುವೆಯಲ್ಲ? ನಿನಗೆ ಬಂಧುಗಳು, ಆಪ್ತರು ಯಾರಿದ್ದಾರೆ? ಈ ಮಲೆಯಲ್ಲಿ ಏಕಿದ್ದೀಯ? ಘೋರವಾದ ಈ ಮಹಾ ಅಡವಿಯಲ್ಲಿ ದುಷ್ಟಮೃಗಗಳಲ್ಲದೆ ಜನಗಳಾರೂ ಇಲ್ಲ. ನೀರೂ, ಹುಲ್ಲು ಇಲ್ಲಿಲ್ಲ. ತುಂಬ ಭಯವಲ್ಲವೇ ಎಂದನು.

೧೨. ನಿನ್ನ ಮಗುವನ್ನು ಅರಸಿ ಕಾಣದೆ ಅಡವಿಗೆ ಬಂದಿರುವೆಯಾ? ಇನಿಯರನ್ನು ಇಚ್ಛಿಸಿ ವಿರಹದಿಂದ ನೋಡುತ್ತಿರುವೆಯಾ ಅಮ್ಮಾ? ನಿನ್ನನ್ನು ಸದಾ ಜತೆಗಿದ್ದು ರಕ್ಷಿಸುವ ರಕ್ಷಕರಿಲ್ಲವೇ? ನಿನ್ನ ದೇಹ ಇಷ್ಟು ತೆಳ್ಳಗಿರುವುದೇಕೆ- ಶುಭೇ, ನನ್ನಲ್ಲಿ ಈ ವಿಚಾರವನ್ನೆಲ್ಲ ಹೇಳು.

೧೩. ನೀನು ಹಸುವಾಗಿಯೇ ಉದಿಸಿರುವೆಯಾ? ಅದಲ್ಲವಾದರೆ ಜನರಿಗೆ ತಿಳಿಯದಂತೆ ನಿನ್ನ ರೂಪವನ್ನು ಮರೆಮಾಡಿ ಕೊಂಡಿರುವುದೇ? ನಿನ್ನ ನಿಜ ವಿಚಾರವನ್ನು ಮರೆಮಾಡದೆ ಎಲ್ಲವನ್ನೂ ಹೇಳು, ಮಂಗಲೆಯೇ ನಿನ್ನ ದೇಹವನ್ನು ನಾನು ರಕ್ಷಿಸುವೆ. ನನ್ನ ದೈವವೇ ಹೇಳು.

೧೪. ತಂದೆ, ಬಸವನೇ ನೀನು ಯಾರು? ನಿನ್ನದು ನಿಜ ವೇಶವೇ? ಯಾರನ್ನು ನೋಡುವುದಕ್ಕೆ ಇಲ್ಲಿಗೆ ಬಂದೆ? ಇನ್ನಾದರೂ ಶೋಕವನ್ನು ಬಿಡು ಒಂದೇ ಕಾಲು ಉಳಿಯುವಂತೆ ಉಳಿದ ಕಾಲುಗಳನ್ನು ಯಾರು ಕಡಿದರು? ಅಯ್ಯೋ ಕಷ್ಟವೇ, ಎಂದು ಆ ರಾಯನು ತನ್ನ ಕೈಗಳಿಂದ ಕಣ್ಣುಗಳೆರಡನ್ನೂ ಒರೆಸಿಕೊಂಡನು.

೧೫. ಸುರರಾಜನೋ? ದಿಕ್ಪತಿಗಳಲ್ಲಿ ಒಬ್ಬನೋ? ಗಂಧರ್ವರ ಪಕ್ಷದವನೋ? ಉರಗೇಶ್ವರನೋ? ಯಕ್ಷನೋ? ಮಾನವನೋ? ಗ್ರಹ ಜಾತಿಯಲ್ಲಿ ಇದ್ದ ಯಾರಾದರೋ? ಪರಮಾರ್ಥವನ್ನು ಸತ್ಯವನ್ನು ಬಿಡದೆ ಹೇಳು. ಮನಸ್ಸಿನಲ್ಲಿ ಉರಿಯೇಕೆ? ಮೂರು ಕಾಲುಗಳು ಇಲ್ಲವಾದುದು ಹೇಗೆ?

೧೬. ಈ ಭೂಮಿಯಲ್ಲಿ ಇಷ್ಟರ ವರೆಗೆ ಕಣ್ಣೀರು ಸ್ಥಿರವಾದುದಿಲ್ಲ. ಹೆಸರಾಂತ ಪಾಂಡವರ ಬಲದಿಂದ ಇರುವ ನಾನು ಈ ದುಃಖವನ್ನು ನೋಡುವಂತಾಯಿತಲ್ಲ? ಸತ್ಯವನ್ನು ಹೇಳಿದರೆ- ಪಾದವನ್ನು ತುಂಡರಿಸದ ದುರಾತ್ಮ ದೇವತೆಗಳ ಒಡೆಯನಾದ ಇಂದ್ರನೇ ಆದರೂ - ಆತನ ತಲೆಯನ್ನು ತುಂಡು ಮಾಡುತ್ತೇನೆ - ಸಂಶಯಬೇಡ.

೧೭. ನಿನ್ನ ಕಾಲುಗಳನ್ನು ತುಂಡು ಮಾಡಿದ ಬಲಾಢ್ಯನು ಯಮನೇ ಆಗಿರಲಿ - ಅವನಿಗೆ ನೆನಸಲಾಗದ ಸೋಲನ್ನುಂಟು ಮಾಡುತ್ತೇನೆ - ಸಂದೇಹವನ್ನು ನೀನು ಬಿಡು. ಮನುಜರಲ್ಲಿ ಉತ್ತಮರನ್ನು ಉದ್ಧರಿಸಿ, ದುಷ್ಟರನ್ನು ಕೊಲ್ಲದ ರಾಜನಿಗೆ ಇಹದಲ್ಲಿ ಸುಖವಿಲ್ಲವೆಂದಾಗ ಪರಲೋಕವಂತೂ ಇಲ್ಲ ತಾನೇ?

೧೮. ಎಷ್ಟೆಷ್ಟು ಕಷ್ಟಗಳನ್ನು ಜನರಿಗೆ ಯಾರು ಮಾಡಿದರೋ ಅಷ್ಟಷ್ಟು ಪ್ರತಿಫಲಗಳನ್ನು ಆತ ದೃಢವಾಗಿಯೂ ತಪ್ಪದೆ ಅನುಭವಿಸುತ್ತಾನೆ. ರಕ್ಷಕರಿಲ್ಲದ ಸಜ್ಜನರನ್ನು ಕೆಟ್ಟವನು ಉಪದ್ರಿಸಿದನೆಂಬ ಕಾರಣಕ್ಕೆ ಪ್ರೀತಿಯಿಂದ ಅಚ್ಯುತನನ್ನು ನೆನೆಸಿ ತಿಳಿದವನಾದ ನಿನ್ನಲ್ಲಿ ಕ್ಷಮೆ ಕೇಳುತ್ತೇನೆ.

೧೯. ಗುಣವನ್ನು ಆಚರಿಸುವ ಮನುಷ್ಯನಿಂದ ಭೂಮಿಯಲ್ಲಿ ಗುಣ ಉಂಟಾಗುತ್ತದೆ. ಗುಣಹೀನನು ಬಲವಂತನಾದರೆ ಅಲ್ಲಿ ವಿಪರೀತವುಂಟಾಗುತ್ತದೆ. ಗುಣವಂತನೇ ನಿನ್ನ ಕಾಲುಗಳನ್ನು ಕಡಿದ ರಾಜ ಯಾರು ಎಂದು ನನ್ನಲ್ಲಿ ಹೇಳಬೇಕು ಎಂದು ರಾಜ ಕೇಳಿದಾಗ ಧರ್ಮನು ನಕ್ಕು ಹೀಗೆ ಹೇಳಿದನು.

೨೦. ನಾನಾ ವಿಧವಾಗಿ ರಾಜನು ವಿಚಾರಿಸಲಾಗಿ ಅವನು ಹೇಳಿದನು. ಚಂದ್ರವಂಶದಲ್ಲಿ ಉದಿಸಿದ ನಿನಗೆ ಈ ನುಡಿ ಯೋಗ್ಯವಾದುದೇ. ಕೆಟ್ಟವರನ್ನು ನಾಶಪಡಿಸಿ, ಮದಮತ್ತರನ್ನು ಶಿಕ್ಷೆಗೆ ಗುರಿ ಪಡಿಸಿ ಧರ್ಮವನ್ನು ನೆಲೆಯಲ್ಲಿ ನಿಲ್ಲಿಸಿದ ಪುಣ್ಯಾತ್ಮರಾದ ಪಾಂಡವರ ಮಗನಲ್ಲವೇ ನೀನು - ಎಂದನು ಧರ್ಮ.

೨೧. ಗುಣಕ್ಕೆ ಅಚ್ಯುತ ಮೆಚ್ಚುತ್ತಾನಲ್ಲದೆ, ಅಸತ್ಯವಂತರಿಗೆ ಗುಣವಂತನು ನಿಜವಾಗಿಯೂ ಒಲಿಯುವುದಿಲ್ಲ. ಇದು ಪ್ರಪಂಚದ ಜನರು ತಿಳಿದಂತಹ ಸತ್ಯ. ಗುಣವಂತನಾದ ಕೃಷ್ಣನು ಧನಂಜಯನಿಗೆ ಸಾರಥ್ಯವನ್ನು ಮಾಡಿ ಮಹಾತ್ಮರೊಂದಿಗೆ ಒಂದಾಗಿದ್ದನು. ಅಂತಹವರ ಅತ್ಯುತ್ತಮನಾದ ಮೊಮ್ಮಗನಲ್ಲವೇ ನೀನು ಎಂದನು.

೨೨. ತನ್ನ ಸಂಪೂರ್ಣ ಬುದ್ಧಿವಂತಿಕೆಯನ್ನು ತೋರ್ಪಡಿಸಿ ಸಾರಥ್ಯ ಮಾಡಿದನು. ಮುನಿಗಳೆಲ್ಲ ನಾಚುವಂತೆಯೂ, ವೇದಗಳಿಗೂ, ಸ್ತ್ರೀಯರ ಮನಸ್ಸಿಗೂ ಆಶ್ಚರ್ಯವಾಗುವಂತೆ ಮಾಡಿಸಿದ ಹರಿಭಕ್ತರವರು. ವನಮಾಲಿಯಾದ ಕೃಷ್ಣನ ಭಕ್ತರಿಗೆ ಹದಿನಾಲ್ಕು ಲೋಕದಲ್ಲಿಯೂ ಭಯವಿದೆಯೇ?

೨೩. ನನ್ನ ಕಾಲುಗಳನ್ನು ತುಂಡು ಮಾಡಿದ ಬಲಾಢ್ಯ ಯಾರೆಂದು ವಿಚಾರಿಸುತ್ತಿರುವೆ? ಮನುಷ್ಯರ ಗುಣದೋಷವನ್ನು ಉಂಟುಮಾಡುವುದು ದೈವವೋ? ಕರ್ಮಗತಿಯ ಆರಂಭವೋ? ಎಂಬ ಸಾರವನ್ನು ಯಾರು ತಿಳಿದಿದ್ದಾರೆ? ಆದ್ದರಿಂದ ಯಾರನ್ನು ನಾನು ದೂರಲಿ?

೨೪. ಹೀಗೆ ಹೇಳುವುದನ್ನು ಕೇಳಿ ಆ ವೀರನು ತನ್ನಲ್ಲಿಯೇ ವಿಮರ್ಶಿಸಿ ತತ್ವವನ್ನು ಅವಲೋಕಿಸಿದನು. ಯಾರಿಗೂ ತಿಳಿಯದ ಗುಟ್ಟಾದ ನೀತಿಯನ್ನು ನನಗೆ ಹೇಳಿದವನು ಧರ್ಮನೇ - ಎಂದು ತಿಳಿದನು.

೨೫. ಮನಸ್ಸಿನಲ್ಲಿ, ಮಾತಿನಲ್ಲಿ, ಪ್ರೇರಿಪಿಸುವ ನಿಜ ವರ್ತನೆಯನ್ನು ವಿವೇಚಿಸಿ ನೋಡಲಾಗಿ 'ಧರ್ಮ'ನೇ ಇವನೆಂದು ತಿಳಿದನು. ಮನಸ್ಸಿನಲ್ಲಿ ಆ ಹರಿಭಕ್ತನು ಅಚಲಾತ್ಮಕನಾಗಿ - 'ಸಚರಾಚರಕ್ಕೆ ಈ ವಿಧಿ ಬಂದುದೇ, ನನ್ನ ಕರ್ಮವೇ' ಎಂದನು.

೨೬. ಬೇರೆಯವರನ್ನು ನಿಂದನೆ ಮಾಡಿದರೆ ದೊರೆಯುವ ಫಲವೇ ತನಗೆ ಲಭಿಸುತ್ತದೆ ಎಂದು ತಿಳಿದನು. ಬುದ್ಧಿಯಲ್ಲಿ ವಿಮರ್ಶಿಸಿ, ರಹಸ್ಯವನ್ನು ನಮಗೆ ಈ ಧರ್ಮನು ಹೇಳಿದನು. ಹರಿ ಮಾಯೆಯಲ್ಲಿ ಮುಳುಗಿದ ಮೂಢರ ಸ್ಥಿತಿ ನೋಡೋಣ ಎಂದು ಸೂಕ್ಷ್ಮವಾದ ಧರ್ಮವನ್ನು ಬಿಡಿಸಿ ತಿಳಿಯದಿರುವುದನ್ನು ವಿವರಿಸಿದನು.

೨೭. ನನ್ನ ಪೂರ್ವಜರಿರುವಾಗ ಅನ್ಯಾಯ, ಅಪರಾಧ, ಅಧರ್ಮ ನಡೆಯುತ್ತಿರಲಿಲ್ಲ. ಅದೆಲ್ಲವೂ ನನ್ನ ಕಾಲದಲ್ಲಿ ಉಂಟಾಗಿ ಅದನ್ನು ನೋಡುವಂತೆ ವಿಧಿ ಮಾಡಿದನಲ್ಲವೇ? ನಿನಗೆ ಶೌಚ, ಸತ್ಯ, ದಯೆ, ತಪಸ್ಸು ಎನ್ನುವ ನಾಲ್ಕು ಕಾಲಗಳಿವೆ. ಇಂದು ಮೂರೂ ಲಯವಾಗಿ ಸತ್ಯವೆನ್ನುವ ಒಂದು ಪಾದ ಮಾತ್ರ ಉಳಿದಿದೆ.

೨೮. ಧರ್ಮನ ಬಲಕ್ಕೆ ಮತ್ತು ಸ್ಥಿರತೆಗಿದ್ದ ಆ ಮೂರೂ ಕಾಲುಗಳೂ ತಪ್ಪಿ ಹೋದುವು. ಸ್ಥಿರವಾಗಿ ಉಳಿದಿರುವ ಸತ್ಯ. ಪಾದವನ್ನೂ ಶಾಶ್ವತವಾಗಿ ಇಲ್ಲವಾಗಿಸುತ್ತೇನೆಂದು ತಾನು ಬದುಕ ಬಯಸಿದ ಅಧರ್ಮ - ವಿರೋಧಿಸುತ್ತಿರುವನೇ? ಹರಿ! ಹರಿ! ಎಂದು ಕಲಿಯ ವರ್ತನೆಯನ್ನು ನೋಡಿ, ಮನಸ್ಸಿನಲ್ಲೇ ನಿರ್ಧರಿಸಿ ಆತನು ಮರುಗುತ್ತಿರುವನು.

೨೯. ಹಸುವಿನ ರೂಪದಲ್ಲಿರುವ ಭೂಮಿದೇವಿಯನ್ನೇ ನೋಡಿದರೂ ಆಕೆ ಕೃಷ್ಣನ ವಿರಹದಿಂದ ತೆಳ್ಳಗಾಗಿ ಬೇಸರಿಸುತ್ತಿರುವಳೆಂದು ಕಂಡು ಬರುತ್ತದೆ. ಶ್ರೀಹರಿಯ ವಿಚಿತ್ರ ಪದ ಚಿಹ್ನೆಗಳನ್ನು ಧರಿಸಿದ ಸುಂದರವಾದ ಶರೀರದ ಚೆಲುವು ಮಾಸಿ ಹೋಯಿತೆಂದು ಆಕೆಯ ಮನಸ್ಸಿಗೆ ಚಿಂತೆಯಾಗಿದೆ.

೩೦. ಅಂಕುಶ, ಧ್ವಜ, ವಜ್ರ ಲಾಂಛನದಿಂದ ಬೆಳಗುತ್ತಿದ್ದ ಶ್ರೀಪಾದದ ಅಂಕಿತ ಇಲ್ಲವಾಯಿತು. ಕಲಿಕಾಲದಲ್ಲಿರುವ ಮನುಷ್ಯರು ಎನಗೆ - ತನಗೆ ಎಂದು ಜಗತ್ತನ್ನೇ ತುಂಡು ಮಾಡುತ್ತಾರೆಂದು ಕೇಳಿ ಸಂಕಟದಿಂದ ಅಡವಿಯನ್ನು ಭೂಮಿತಾಯಿ ಹೊಕ್ಕಳು - ಇದು ಸತ್ಯವೆಂದು ನಿರ್ಧರಿಸಿದನು.

೩೧. ಅವರ ವರ್ತಮಾನವನ್ನು ಯೋಚಿಸಿ, ಮನಸ್ಸಿನಲ್ಲಿ ಹೀಗೆ ಅನುಮಾನಿಸಿದನು. ಖಂಡಿತವಾಗಿಯೂ ಇದರಿಂದ ನನಗೆ ಅಪಕೀರ್ತಿ ಬಂತೆಂದು ನಿಶ್ಚೈಸಿ ಹಸುವನ್ನು ಮತ್ತು ಬಸವನನ್ನು ಬಹುಮಾನಿಸಿದನು. ಶೂದ್ರನ ರೂಪದಲ್ಲಿರುವ ಕಲಿಯ ತಲೆಯನ್ನು ಕತ್ತರಿಸುತ್ತೇನೆಂದು ಕಠಾರಿಯನ್ನೆಳೆದನು.

೩೨. ಹರಿತವಾದ ಖಡವನ್ನು ಜಡಿದು ಝಳಪಿಸುತ್ತಾ ಶೂದ್ರನಾದ ಕಲಿಯ ತಲೆಯನ್ನು ಕಡಿದು ಬಲಿಯಾಗಿ ಚೂರು ಮಾಡುತ್ತೇನೆಂದನು. ರೋಷದಿಂದ ಜ್ವಲಿಸುವ ಶಿವನಂತೆ ಘರ್ಜಿಸಿದನು. ಹಿಡಿದು ಕೊರಳಿಗೆ ಖಡ್ಗ ತಾಗಿಸಲು ರಾಜನ ಗುಣಲಕ್ಷಣವನ್ನು ಬಿಟ್ಟು ಆತ. ನೀಳವಾಗಿ ಕಾಲಿಗೆ ಎರಗಿದನು.

೩೩. ಹಸುವನ್ನೂ ಧರ್ಮನನ್ನೂ ಸಾಯಿಸಿ, ನೀನೇ ಸಾಯಲಿಕ್ಕೆ ಬಯಸಿದೆಯಾ ಮುಂಡೆ ಮಗನೇ? ತಲೆಯನ್ನು ಕಡಿದು ನೆಲೆಯನ್ನು ತಪ್ಪಿಸುತ್ತೇನೆ ಎಂದು ರಾಜನು ಗದರಿಸಿದನು. ಕಲಿಯು ಹೆದರಿ ನನ್ನ ದೇಹವನ್ನು ಕಾಪಾಡಿಕೊಡಬೇಕೆಂದು ಭೂಮಿಯಲ್ಲಿ ಬಿದ್ದು ಶರಣು ಶರಣು ಎಂದು ಪ್ರಾರ್ಥಿಸಿದನು.

೩೪. ಅಯ್ಯೋ ಮಹಾರಾಜ, ನನ್ನ ಪ್ರಾಣವನ್ನು ರಕ್ಷಿಸು. ನಿನಗೆ ನಾನು ಎದುರಾಗಲು ಸಾಧ್ಯವೇ? ನೀನಲ್ಲದೆ ಎಲ್ಲರಿಗೂ ಹಿತರಾದ ರಾಜರು ಇದ್ದಾರೆಯೇ? ಸಾಯಲು ಹೆದರಿ ನಾನು ಈ ಮಲೆಯಲ್ಲಿ ಅಡಗಲು ಬಂದೆ. ನೀನು ಇಲ್ಲಿಗೂ ಬಂದ ಮೇಲೆ ನನಗಿನ್ನು ಬೇರೆ ಗತಿಯೇ ಇಲ್ಲ.

೩೫. ನಿನ್ನ ಕೀರ್ತಿ ಪರಾಕ್ರಮವು ಎಲ್ಲ ಕಡೆಯೂ ಬೆಳೆದು ಯಾವಾಗಲೂ ಸೂರ್ಯನ ಕಿರಣಗಳು ಪ್ರಕಾಶಿಸುವ ತೆರನಾಗಿ ಭೂಮಿಗೆ ಆನಂದವನ್ನುಂಟು ಮಾಡಿದವು. ನನ್ನ ಕಾಲ ಪ್ರವೃತ್ತಿಗಳು ನಡೆಯುವೆ ನಾನುಗೈದುದು ದೋಷವೆಂದಾದರೆ ಬೇಡ. ಇನ್ನು ನನ್ನನ್ನು ಕಾಪಾಡು ಎಂದನು.

೩೬. ಅನ್ಯಾಯವನ್ನು ಮಾಡಿದಾತನು ಪ್ರಾರ್ಥಿಸುವಾಗ ಕೊಲ್ಲದಿದ್ದರೆ ಅದು ಹೇಗಾದೀತು? ಎಂದು ತನ್ನ ಮನಸ್ಸಿನಲ್ಲಿ ಯೋಚಿಸಿ ಧರ್ಮಕ್ಕೆ ಸರಿಯಾದ ಮಾರ್ಗವೊಂದನ್ನು ಹುಡುಕಿದನು. ಹೇಡಿಯು ಬಲಾಢ್ಯರಿಗೆ ಅಂಜಿಕೆ ಪಡುವುದು ಸಹಜವೆಂದು ಆ ಧನ್ಯಾತ್ಮನು ಈತನನ್ನು ಕೊಲ್ಲಬಾರದೆಂದೂ ತೀರ್ಮಾನಿಸಿದನು. ಆದರೆ ಇನ್ನು ಮುಂದೆ ಯಾರನ್ನೂ ಈತನು ಮುಟ್ಟಬಾರದೆಂದು ತೀರ್ಮಾನಿಸಿದನು.

೩೭. 'ಶರಣು ಹೊಕ್ಕವರನ್ನು ಕೊಲ್ಲೆನು (ಬಿಡುತ್ತೇನೆ) ಕಲಿಯೇ, ಬೇಗನೆ ಪರದೇಶಕ್ಕೆ ನನ್ನ ರಾಜ್ಯವನ್ನುಳಿದು ಹೊರಟು ಹೋಗು ಎಂದನು. ಕಲಿಯು "ಧರೆಯೆಲ್ಲವೂ ನಿನಗಾಗಿದೆ ಇದನ್ನು ತಿಳಿದು ಎಲ್ಲಿಗೆ ಹೋಗುವುದು (ಅದಲ್ಲದಿದ್ದರೆ) ಒಂದು ಪಕ್ಷ ಸಾಯುವುದೇ ನನ್ನ ವಿಧಿಯಾಗಿರಬಹುದು, ರಾಜನೇ" ಎಂದನು.

೩೮. "ಅತಿಯಾಗಿ ನಿಷ್ಠುರನಾಗದೆ ಒಂದೆಡೆಯಲ್ಲಿ ಇರಗೊಳಿಸು. ಬ್ರಹ್ಮನು ಈ ಯುಗವನ್ನು ನನ್ನ ಪ್ರಾಬಲ್ಯಕ್ಕಾಗಿಯೇ ಸೃಷ್ಟಿಮಾಡಿದನು. ಇಷ್ಟು ಹೇಳಿದರೂ ಏನು ಫಲ? ಮುದುಕನು ಯವ್ವನವನ್ನು ಇಚ್ಛಿಸುವ ಹಾಗೆ ಈಗ ನಿರ್ಗತಿಕನಾದ ನನ್ನನ್ನು ಒಂದು ಆಶ್ರಯ ಮಾಡಿ ರಕ್ಷಿಸು" ಎಂದನು.

೩೯. ಕಲಿಯು ಪ್ರಾಣ ಭಯದಿಂದ ಭಯಗೊಂಡು ಹೀಗೆ ಬೇಡುತ್ತಿರುವುದನ್ನು ಕೇಳಿ ಬ್ರಹ್ಮ ಕಲ್ಪನೆಯನ್ನು ತಪ್ಪಿಸಿದವನೆಂಬ ಅಪರಾಧ ಬೇಡ ಎಂದು ತೀರ್ಮಾನಿಸಿದನು. "ಮಾಂಸ, ಜೂಜು, ಕುಡಿತ ಇದಲ್ಲದೆ ಹೆಂಗಸರ ಬುದ್ಧಿಯಲ್ಲಿ ನಿನ್ನ ನೆಲೆಯನ್ನು ಕಂಡುಕೊಂಡು ಸುಖವಾಗಿ ನೀನು ಕಾಲವನ್ನು ಕಟ್ಟಿ,

೪೦. ಸ್ಥಿರತೆಯನ್ನು ಕಳೆದುಕೊಳ್ಳದೆ ಈ ನಾಲ್ಕು ಕಡೆಗಳಲ್ಲಿ ಸುಖವಾಗಿರು ಎಂದು ರಾಜನು ಹೇಳಿದನು. ಮತ್ತೆ ಬೇರೊಂದನ್ನು ನೆನೆದು ಕೈ ಮುಗಿದು "ಇದರ ಮೂಲಕ ನನಗೆ ತೃಪ್ತಿಯನ್ನು ಅನುಗ್ರಹಿಸಿದಿರಿ; ಇನ್ನೊಂದನ್ನೂ ಒಪ್ಪಿಸಿ ಎಂದು ಆ ದುರಳನು ಹೇಳಿದಕ್ಕೆ ಚಿನ್ನವನ್ನು ನೆಲೆಯಾಗಿ ಒಪ್ಪಿಸಿದನು.

೪೧. ಇನ್ನು ಹೆಚ್ಚಿನ ಶಕ್ತಿಯು ಲಭಿಸಿತು ಎಂದು ಸಂಕಲ್ಪಿಸಿ ಮದಮತ್ತನಾಗಿ ತನ್ನ ಪರಿವಾರ. ಸಮೇತನಾಗಿ ಆಯಾಯಾ ಸ್ಥಾನಗಳಲ್ಲಿ ನೆಲೆಯಾದನು. ಈ ಮೂಲಕ ಭೂಮಂಡಲವನ್ನೆಲ್ಲ ಸ್ಥಿರವಾಗಿ ವಶಗೊಳಿಸಿ, ಈಶ್ವರನೇ ಮೊದಲಾದ ಸುರರನ್ನೂ ವಶಗೊಳಿಸದೆ ಬಿಡೆನೆಂದು ಆ ಅವಿವೇಕಿಯು ಸಿದ್ಧನಾದನು.

೪೨. ಮದ, ವಿಹ್ವಲ, ದುರ್ಬಲ, ದುರ್ವಿಷಯ, ದುರ್ನೀತಿ, ವಿಡಂಬ, ಕದನ, ಅಸತ್ಯ, ಪರಾಭವ, ಅನ್ಯಾಯ, ವಿರೋಧ, ಬಂಧುತ್ವದಲ್ಲಿ ವಂಚನೆ, ಹಾದರ, ಕಳ್ಳತನ, ಸುಳ್ಳು, ಕಲಹ, ಅದರೊಂದಿಗೆ ದುಃಖ, ಆಗ್ರಹ - ಇವುಗಳೊಂದಿಗೆ ಸೇರಿ ಕಲಿಬಾಂಧವರು ಬಹಳ ಸುಖಿಸಿದರು.

೪೩. ಐದು ನೆಲೆಗಳಲ್ಲಿ ಕಲಿಯನ್ನು ಸ್ಥಿರಗೊಳಿಸುವುದರ ಮೂಲಕ ಆತನನ್ನು ಬಂಧಿಸಿದ ಭೂಪನು ಕಳೆದುಕೊಂಡಿದ್ದ ಧರ್ಮನ ಮೂರೂ ಪಾದಗಳನ್ನು ಮತ್ತೆ ಬರುವಂತೆ ಮಾಡಿದನು. ಭೂಮಿಯಲ್ಲೆಲ್ಲ ಧರ್ಮನು ಸಂಚರಿಸುವುದಕ್ಕೆ ಮಾರ್ಗವನ್ನು ಸ್ಥಿರಗೊಳಿಸಿದನು. ಆಗ ದುಃಖವನ್ನು ಬಿಟ್ಟು ಭೂಮಿ ತಾಯಿ ಮೈದುಂಬಿಕೊಂಡು ಕಳೆಯೇರತೊಡಗಿದಳು.

೪೪. ಕಣ್ಣೀರು ಮರೆಯಾಗಿ, ದೇಹ ಪುಳಕಗೊಂಡಿತು. ಬಹಳವಾಗಿ ಆನಂದದಿಂದ ಉದ್ಗರಿಸಿ ಮೈದುಂಬಿಕೊಂಡು, ಹಿಗ್ಗಿ, ರೋಮಾಂಚನಗೊಂಡಳು. ಈ ರೀತಿ ರಾಜನಾದ ಪರೀಕ್ಷಿತನ ಶಕ್ತಿ ಎಲ್ಲವೂ ಹಿಂದಿನಂತೆಯೇ ಪರಿವರ್ತನೆಗೊಂಡವು. ಹೀಗೆ ಚೋದ್ಯವೆನಿಸುವ ಚಂದ್ರವಂಶಜನ ಕೀರ್ತಿಯನ್ನು ಹೇಗೆಂದು ಬಣ್ಣಿಸುವ!

೪೫. ಭೂಮಿತಾಯಿಯು ಮೈಕೈ ತುಂಬಿಸಿಕೊಂಡಳು. ಧರ್ಮಸ್ಥಿತಿ ಬದಲಾವಣೆಗೊಂಡಿತು. ಸುತ್ತಲೂ ಸುಖವು ಸರ್ವರಿಗೂ ಉಂಟಾಯಿತು. ಎಳವೆಯಲ್ಲೇ ಮರಣ ಉಂಟಾಗುವುದು ಎಲ್ಲರಿಗೂ ತಪ್ಪಿತು. ಆಗ ಭಾಗವತ ಶಿರೋಮಣಿಯು ಹಸ್ತಿನಾಪುರದತ್ತ ಹಿಂದಿರುಗಿದನು. ಅವನೊಂದಿಗೆ ಅವನ ಸಮಸ್ತ ಪರಿವಾರವೂ ತಮ್ಮ ದೇಶಕ್ಕೆ ಯಾತ್ರಿಸಿತು.

೪೬. ಎಂದೂ ಮುಗಿಯದಂತಹ ಯಶೋಧನವನ್ನು ಸಂಗ್ರಹಿಸಿ, ತನ್ನ ದಿವ್ಯ ಅರಮನೆಯಲ್ಲಿ ಆಯ್ದ ಮಹಾಹರಿಭಕ್ತರ ಪಾದಕ್ಕೆ ವಂದಿಸಿದನು. ಶ್ರೀ ದೇವಕೀ ನಂದನನನ್ನು ತನ್ನ ಹೃದಯಕಮಲದಲ್ಲಿ ಪೂಜಿಸಿ, ಪುಣ್ಯ ಕಥಾವಿವರವನ್ನು ಕೇಳಿದನು.

೪೭. ಯಾವಾಗ ನೀವಿಲ್ಲಿಗೆ ಬಂದು ಸ್ಥಿರಮಾಡಿ ನೆಲೆಯಾದಿರೋ ಆ ದಿನಗಳಿಂದ ಆ ರಾಜನು ಹಸ್ತಿನಾಪುರದಲ್ಲಿ ಆನಂದ ವಿಭವಗಳಿಂದ ಆಳುತ್ತಿದ್ದನು. ವಿಸ್ತಾರವಾದ ನಾಲ್ಕು ಸಮುದ್ರಗಳ ನಡುವಿರುವ ಭೂಮಿಗೆ ಏಕ ಚಕ್ರಾಧಿಪತಿಯಾಗಿ ಅವನು ಬಾಳಿದನು. ಶ್ರೀನಾಥನನ್ನು ಧ್ಯಾನಿಸುತ್ತಾ ಸುಖದಿಂದ ರಾಜ್ಯ ಪದವಿಯನ್ನು ಈಗ ಅನುಭವಿಸುತ್ತಿದ್ದಾನೆ.

೪೮. ಯಾವಾಗ ಕೃಷ್ಣ ಮತ್ತು ಪಾಂಡವರು ಹೊರಟು ಹೋದರೋ ಅಲ್ಲಿಂದ ಮೊದಲ್ಗೊಂಡು ಕಲಿಯೇ ಸ್ಥಿರವಾಗಿರುತ್ತಾನೆಂದು ಲೋಕದಲೆಲ್ಲ ಪ್ರಸಿದ್ಧವಷ್ಟೇ! ಆದರೆ ಈ ರಾಜನ ಆಜ್ಞೆಯ ಪ್ರಕಾರ ಆತ ಸೆರೆಸಿಕ್ಕು ಸರ್ವರಿಗೂ ಕ್ಷೇಮವು ಉಂಟಾಗಿ ಹರಿಭಕ್ತಿ ಉದಿಸಿತು.

೪೯. ಕಲಿಯು ಹೆದರಿ ನಡುಗಿಕೊಂಡು ವೈಷ್ಣವರನ್ನು ನೋಡಬಹುದೇನೋ! ಮನಸ್ಸಿನಲ್ಲಿಯೂ ಆತನು ಹತ್ತು ಸಲವಾದರೂ ಅವರ ಹೆಸರುಗಳನ್ನು ನೆನಸಕೂಡದು. ಕಲಿಯ ಆ ಸಾಮರ್ಥ್ಯ ಹಾಗೂ ಕಾರ್ಯ ಮಧಾಂಧರಲ್ಲಿ ಸಾಗುವುದಲ್ಲದೆ, ಹರಿಭಕ್ತನಾಗಿ ಸೇವಿಸುವ ಮಹಾಜನರಲ್ಲಿ ಮಾತ್ರ ನಡೆಯಲಾರದು.

೫೦. ಆ ರಾಜನು ಚಿತ್ತದಲ್ಲಿ ಬಹುವಾಗಿ ಗೋವರ್ಧನ ಪರ್ವತವನ್ನು ಮೇಲಕ್ಕೆತ್ತಿದ ಹರಿಯ ಪಾದವನ್ನು ಸ್ಮರಿಸುತ್ತಿದ್ದನು. ಈ ಯುಗ ಯೋಗ್ಯವಲ್ಲವೆಂಬ ತತ್ತ್ವನ್ನರಿತೇ ಹಾಲಿನ ಸಮುದ್ರದ ನಿವಾಸಿಯಾದ ಶ್ರೀ ಹರಿಯನ್ನು ಭಜಿಸುತ್ತಿದ್ದನು. ಜಗತ್ತು ಮೋಕ್ಷವನ್ನು ಪಡೆಯಲೆಂದು ಕಲಿಯನ್ನು ಆತ ಬಂಧಿಸಿದನಲ್ಲವೇ?

೫೧. ಆ ಮಹಾಪುರುಷನು ನಿಜ ರಾಜ್ಯದ ಮಹಾವಿಭವದ ಆನಂದವನ್ನು ಮರೆತನು. ಚತುರಂಗ ಪದಾತಿ ಯುದ್ಧ ಭಂಡಾರವನ್ನೂ ಮರೆತನು. ಹೆಂಡತಿ, ಮಗ ಪ್ರದಾನಿಗಳ ಬಲವನ್ನು ವಿಷಯಾದಿ ಸುಖಗಳನ್ನೂ ಮರೆತನು. ಆದರೆ ಹೃದಯದಲ್ಲಿ ಮುಕುಂದನ ಪದವನ್ನು ಮರೆಯದೆ ಭಜಿಸಿದನು.

೫೨. ಸಕಲಾಂತರ್ಯಾಮಿಯಾದ ಶ್ರೀ ಹರಿಯು ದೊಡ್ಡದಾದ, ಕಠಿಣವಾದ, ಕೆಟ್ಟಕರ್ಮದಿಂದ ತಾಯಿಯ ಹೊಟ್ಟೆಯಲ್ಲಿ ನನ್ನನ್ನು ಕಾಯ್ದನು. ಮಹಾಲೋಕದ ಜನರೆಲ್ಲರನ್ನೂ ಜನಿಸಿದ ದಿನದಿಂದಲೇ ಧರ್ಮೋತ್ತರ ಮಾರ್ಗದಲ್ಲಿ ಪಾಲಿಸಿದನು. ಇನ್ನು ಮೇಲೆಯೂ ಅವನೇ ನನಗೆ ಆಶ್ರಯ ಎಂದು ಭೂಪತಿಯು ನಿರ್ಧರಿಸಿದನು.

೫೩. ಇರುವ ಸಮಸ್ತ ಸಂಪತ್ತಿಗೂ ಈ ರಾಜ್ಯ ವಿಭವಕ್ಕೂ ಆ ಜಗನ್ಮಯನೇ ಇರುವವನು - ನಾವು ಅವನ ಭೃತ್ಯರು ಮಾತ್ರವಲ್ಲವೇ ಎಂದು ಎಳ್ಳಿನಷ್ಟೂ ಆತನ ಸ್ಮರಣೆಯ ಬಂಧವನ್ನು ಬಿಡದೆ ಮನಸ್ಸಿನಲ್ಲಿ ಧ್ಯಾನಿಸಿದನು. ಸಿಂಹಾಸನದಲ್ಲಿ ಕೇವಲ 'ಪ್ರಜೆಗೊಳಿಗೊಬ್ಬ ರಾಜ' ಎಂಬ ಪ್ರಕಾರ ಕುಳಿತಿರುತ್ತಿದ್ದನು.

೫೪. ಇಲ್ಲಿಗೆ ಸಪ್ತಾದಶಾಧ್ಯಾಯ ಸ್ವರೂಪವು ಮುಗಿಯಿತು. ಸಪ್ತಾವರಣಗಳು ತಪ್ಪದ ಹಾಗೆ ಭೂಪೇಂದ್ರನು ನಿಂತ ಕಥೆಯಿದು. ಇದನ್ನು ವಾಚಿಸಿ, ಪೂಜಿಸಿ, ಕೇಳಿದ ಜನಗಳಿಗೆ ಸೂರ್ಯ ಮಂಡಲವನ್ನು ದಾಟಿದ, ಅದರಾಚೆಯ ಮುಕ್ತಿಯು ಲಭಿಸಬಹುದು.

ಅಧ್ಯಾಯ ೧೮

೧. ಬ್ರಹ್ಮನ ತಲೆಯನ್ನು ಖಂಡಿಸಿದ ಶಿವನಂದನನಾದ ಗಣಪತಿಗೆ ಎದುರಾಗಿ ವಂದಿಸುತ್ತೇನೆ. ಬ್ರಹ್ಮನ ಹೆಂಡತಿಯಾದ ಶಾರದೆಯನ್ನು ಆರಾಧಿಸಿ, ಗುರು ಪಾದವನ್ನು ಭಕ್ತಿಯಲ್ಲಿ ವಂದಿಸುತ್ತೇನೆ. ಬ್ರಹ್ಮಶಾಪವನ್ನು ಧರಿಸಿದ ರಾಜನು ತನ್ನ ಮಗನಿಗೆ ಒಮ್ಮೆಯೇ ರಾಜ್ಯದ ಸ್ಥಿರ ಪಟ್ಟಾಭಿಷೇಕವನ್ನು ಮಾಡಿದನು. ಆಮೇಲೆ ಸದ್ಗತಿಗೆ ಅನುವಾದ ಪುಣ್ಯಕಥೆಯನ್ನು ಹೇಳುತ್ತೇನೆ.

೨. ಮುನಿಮುಖ್ಯರೇ ಈ ಕಥೆಯನ್ನು ನಿರ್ಧರಿಸಿಕೊಳ್ಳಿ - ರಕ್ಕಸರ ವೈರಿಯಾದ ಶ್ರೀ ಹರಿಯ ಅಧಿಕವಾದ ದೃಢ ಭಕ್ತಿಯಿಂದ ಆತನು ನೆನೆಸಿದನು. ನಾಲ್ಕು ಸಮುದ್ರಗಳ ಮಧ್ಯದಲ್ಲಿ ಮಹಾಪರಾಕ್ರಮದಿಂದ ಅನೇಕ ದಿನ ಭೂಭಾರವನ್ನು ಧರಿಸಿದನು. ಇಹಲೋಕಾನುಭವದಿಂದ ನೆನೆಸದಂತಹ ಸೌಭಾಗ್ಯವನ್ನು ಆ ಭಾಗವತ ಶಿರೋಮಣಿಯು ಪಡೆದನು.

೩. ಹೀಗೆ ಅನೇಕ ದಿನವಿದ್ದು, ಒಮ್ಮೆ ಪರಿವಾರ ಸಮೇತನಾಗಿ ಬೇಟೆಯಾಡಲೆಂದು ವ್ಯಸನಿ ಅಲ್ಲಿಯೇ ಒಂದು ಮಹಾ ಅರಣ್ಯಕ್ಕೆ ಬಂದನು. ಹಿಂದೆ ತನ್ನ ತಾತನಿಗೆ ಶಾಪ ಬಂದುದನ್ನು ತಿಳಿಯದೆ - ಹೋಗಲಿಚ್ಛಿಸಿದನು.

೪. ಕೊಡಲಿ, ಒನಕೆ, ಮುಸಲ, ಪರಿಘಾದಿ ಮಹಾಶಸ್ತ್ರಾಸ್ತ್ರಗಳನ್ನು ಧರಿಸಿದನು. ದೊಡ್ಡದಾಗಿರುವ ಅನೇಕ ನಾಯಿಗಳ ಬಲವನ್ನು ಹೊರಡಿಸಿಕೊಂಡು ಸಮಸ್ತ ಪರಿವಾರದೊಂದಿಗೆ ಒಂದು ವನವನ್ನು ಹೊಕ್ಕನು. ಅದರಲ್ಲಿ ಪ್ರಾಣಿಗಳೆಲ್ಲವನ್ನೂ ಎಲ್ಲಿಯೂ ಉಳಿಯದ ಹಾಗೆ ಕೊಂದುಹಾಕಿದನು.

೫. ಹೀಗೆ ಸಂಚರಿಸಿ ಅನೇಕ ಪ್ರಾಣಿಗಳನ್ನು ಕೊಲ್ಲುತ್ತಿರಲು ಅದರಲ್ಲಿ ಒಂದು ಹಂದಿಯು ಅವನಿಗೆ ತಿಳಿಯದಂತೆ ಓಡತೊಡಗಿತು. ಅದನ್ನು ಕಂಡ ಭೂಪತಿಯು ಹಿಂದಿನಿಂದಲೇ ಹಿಂಬಾಲಿಸಿದನು. ಅದು ಸುಳಿವು ಸಿಗದಂತೆ ವೇಗವಾಗಿ ಓಡಿ ಕಾಣದಾಯಿತು. ಅದರೊಂದಿಗೆ ಬಂದ ರಾಜನು ತುಂಬ ಬಾಯಾರಿಕೆಯಾಗಿ ಒಬ್ಬ ಬ್ರಹ್ಮ ಋಷಿಯ ಆಶ್ರಮವನ್ನು ನೋಡಿ ಅಲ್ಲಿಗೆ ಹೋದನು.

೬. ಆ ಆಶ್ರಮದಲ್ಲಿ ಅಂಗಿರಸ ಎನ್ನುವ ಮುನಿಯು ಇದ್ದನು. ಆತನು ಇಂದ್ರಿಯ ವೃತ್ತಿಯನ್ನು ತಡೆದು ಮನಸ್ಸಿನಲ್ಲಿ ಸ್ಥಾಪಿಸಿದ್ದನು. ಗುರಿಯನ್ನು, ಕರಣೇಂದ್ರಿಯಗಳನ್ನು ಹಾಗೂ ಬುದ್ಧಿಯನ್ನು ದನುಜಾಂತಕನಾದ ಕೃಷ್ಣನ ಪಾದದಲ್ಲಿ ನಿಲ್ಲಿಸಿದ್ದನು. ಬಾಹ್ಯಾಂತರ ವೃತ್ತಿಯನ್ನು ತಿಳಿಯದವನಾಗಿ ಇರಲು ಅವನ ಬಳಿಗೆ ಹೋಗಿ ರಾಜನು ಅವನನ್ನು ಕಂಡನು.

೭. ಮೂರು ನೆಲೆಯನ್ನು ಮೀರಿ ನಾಲ್ಕರಲ್ಲಿ ಸಂಪೂರ್ಣವಾಗಿ ಆತನು ಸ್ಥಿರಗೊಂಡಿದ್ದನು. ಮೂರು ಗುಣವನ್ನು ಬಿಟ್ಟು ಯೋಗಾಕ್ಷಿಯಲ್ಲಿ ನೆಲೆಯಾಗಿದ್ದನು. ನಾರುಬಟ್ಟೆಯನ್ನು ನಡುವಿಗೆ ಸುತ್ತಿ, ಪರಮೇಶ್ವರನ ಹಾಗೆ, ಜಲಜಾಕ್ಷನಾದ ಕೃಷ್ಣನನ್ನು ಧ್ಯಾನಿಸುವ ಆ ಮುನಿಯಲ್ಲಿ ಭೂಪನು ಪ್ರಾರ್ಥಿಸಿದನು.

೮. ಬಾಯಾರಿಕೆಯಿಂದ ಅತಿ ಬಳಲಿದವನಾಗಿ ನೀರನ್ನು ಅವರಲ್ಲಿ ಬೇಡಿದನು. ಕಣ್ಣಾರೆ ನೋಡಿಯೂ ಕರ್ಮ ವಶದಿಂದ ತಿಳಿಯದೆ, ವಿಷಯಾನ್ವಿತನಾಗಿ, ಅವರು ಮಾತಾಡಲಿಲ್ಲವೆಂದು ಅತಿ ಕೋಪಗೊಂಡನು. 'ನನಗೆ ಪ್ರಿಯರಾಗದೆ ಮೌನಿಯಾಗಿ ಧಿಕ್ಕರಿಸಿದುದೇಕೆ' ಎಂದುಕೊಂಡನು.

೯. ನಾವಿಲ್ಲಿ ಮೂರು ವರ್ಗದವರಿಗೂ ಪೂಜಾರ್ಹರಾಗಿದ್ದೇವೆ. ಸಹಜವಾಗಿ ಸತ್ಕರಿಸಿ ಆದರಿಸುವ ಗೌರವಿಲ್ಲದಿದ್ದರೆ ಹೋಗಲಿ - ಉಚಿತೋತ್ತರವಾಗಿ ಮಾತಾಡಿಸುವ ಸಂಪ್ರದಾಯವನ್ನೂ ಬಿಟ್ಟು ಮೌನಿಯಾದರು - ನಾವು ಅತಿ ದೀನರಾಗಿ ಹೋದೆವು.

೧೦. ಹೀಗೆಂದು ಮನಸ್ಸಿನಲ್ಲಿ ಅನೇಕ ವಿಧವಾಗಿ ನೊಂದುಕೊಂಡ ಆತನು ನಿಂದೆ ಮಾತುಗಳನ್ನಾಡಿ ವಿಧಿವಂಚನೆಯಿಂದ ಕೋಪಿಸಿದನು. ಬಳಿಕ ಇಂದ್ರನ ಮಗನಾದ ಅರ್ಜುನನ ಮಗನಾದ ಪರೀಕ್ಷಿತನು ಬಿಲ್ಲಿನಿಂದ ಒಂದು ಸತ್ತ ಹಾವನ್ನು ತೆಗೆದು ಕುಳಿತುಕೊಂಡಿದ್ದ ಮುನೀಶ್ವರನ ಕೊರಳಿಗೆ ಸುತ್ತುವರಿಸಿ ಅಲ್ಲಿಂದ ಹೊರಟು ಹೋದನು.

೧೧. ಹೀಗೆ ರಾಜನು ಹೋದಾಗ ಇದನ್ನು ಮುನಿಪುತ್ರನಾದ ಕೌಶಿಕನು ಕೇಳಿ ಕೋಪಗೊಂಡನು. ಸರ್ವ ಋಷಿಗಳ ಮಧ್ಯ "ನಮ್ಮನ್ನು ರಕ್ಷಿಸುವ ಭೂಭುಜರ ಒಳ್ಳೆಯ ವರ್ತನೆಯ ವಿಪರೀತವನ್ನು ಕೇಳಿದಿರೋ, ಇದು ಕಲಿಕಾಲವಲ್ಲವೇ", ಎಂದನು.

೧೨. ನಮ್ಮನ್ನು ರಕ್ಷಿಸಲೆಂದು ಆದಿಯಲ್ಲಿ ಬ್ರಹ್ಮನು ಈ ರಾಜರನ್ನು ಸೃಷ್ಟಿಸಿದನು. ಈಗ ನಮಗೆ ವಿಪರೀತವನ್ನಾಚರಿಸಿ ಈ ಕೆಟ್ಟವರು ಮದಾಂಧಕರಾಗಿ ಒಳ್ಳೆಯ ದಾರಿಯನ್ನು ಬಿಟ್ಟು ಅಪರಾಧವೆಸಗುತ್ತಿದ್ದಾರೆ. ಇದಕ್ಕೆ ಸರಿಯಾದ ಪರಿಹಾರ ಮಾಡದೆ ಕ್ಷಮಿಸಿದರೆ ಮುಂದಕ್ಕೆ ಒಳಿತಾಗದು.

೧೩. ಶ್ರೀಹರಿ ಮತ್ತು ಅರ್ಜುನರಿರುವಾಗ ನಮಗೆ ಈ ರೀತಿಯ ಕಷ್ಟ ಪ್ರವೃತ್ತಿಗಳು ಬಂದಿಲ್ಲ. ದುಷ್ಟರ ತಲೆಯನ್ನು ಕಡಿದು, ಸಜ್ಜನರನ್ನು ಅವರು ಸಲಹುತ್ತಿದ್ದರು. ಇನ್ನು ದುಃಖಿಸುವುದೇಕೆ - ನನ್ನ ಸತ್ಯವನ್ನು ಒಂದು ಕ್ಷಣ ಲೋಕವೇ ನೋಡಲಿ ಎಂದು ರಾಜನು ಮಾಡಿದ ಅಪರಾಧವನ್ನೆಣಿಸಿ ಕೋಪವೆಂಬ ಬೆಂಕಿಯಿಂದ ಉರಿಯುತ್ತಿದ್ದನು.

೧೫. 'ಈ ರೀತಿಯಲ್ಲಿ ಅನೇಕ ವಿಧದಿಂದ ಶೋಕಿಸುವುದೇಕೆ? ನಟ್ಟಿರುವ ಬಾಳೆಯನ್ನು ಬೀಳಿಸಲು ಪ್ರಳಯ ಕಾಲದ ಗಾಳಿಯೇಕೆ? ಈ ಕಷ್ಟವನ್ನು ಉಂಟು ಮಾಡಿದಾತನನ್ನು ಮೂಡಿದ ಸೂರ್ಯನು ಮುಳುಗುವ ಮುನ್ನವೇ ವಿಷಭರಿತನಾದ ಆ ತಕ್ಷಕನು ಮುಟ್ಟಿ, ಕೊಂಡೊಯ್ಯಲಿ' ಎಂದನು.

೧೬. ಏಳನೇ ದಿನದ ಉದಯಕ್ಕೆ ತಕ್ಷಕನು ಆ ರಾಜನನ್ನು ಕಚ್ಚಲಿ ಎಂದು ವಿಷಯುಕ್ತವಾದ ಶಾಪವನ್ನು ಕೊಟ್ಟನು. ಬಳಿಕ ಆತನು ತಂದೆಯ ಬಳಿಗೆ ಬಂದು ಸರ್ಪಭೂಷಣನಾದ ಶಿವನ ಹಾಗೆ ಶೋಭಿಸುವ ಸೌರ್ವಭೌಮನನ್ನು ನೋಡಿದನು. ಭೂಮಿಯಲ್ಲಿ ಬಿದ್ದು ದುಃಖಿಸಲು ಆ ಮುನಿಯು ಮಗನನ್ನು ನೋಡಿದನು.

೧೭. ಮಗನ ಧ್ವನಿಯಿಂದ ಮೆಲ್ಲನೆ ದೃಷ್ಟಿಯನ್ನು ಮುನೀಶ್ವರನು ತೆರೆದನು. ತನ್ನ ಕೊರಳಲ್ಲಿ ಸುತ್ತಿಕೊಂಡಿರುವ ಸತ್ತ ಸರ್ಪವನ್ನು ದೂರಕ್ಕೆಸೆದನು. ಆನಂದಿಸಿ ಮಗನನ್ನು 'ಮಗನೇ ಹೆದರದಿರು' ಎಂದು ಸಂತೈಸುತ್ತಾ ಆ ಕ್ಷಣವೇ ಪ್ರೀತಿ ಮಾತಿನಿಂದ ಆತ ಮಾಡಿದ ಕೃತ್ಯವನ್ನೆಲ್ಲ ಕೇಳಿದನು.

೧೮. ರಾಜನು ಸಾಯಬೇಕೆಂದು ಮಗನು ಹೇಳಿರುವುದನ್ನು ಕೇಳಿದಾಗ ಅವನಲ್ಲಿ ತುಂಬ ಸಿಟ್ಟು ಮಾಡಿ ಕಣ್ಣನ್ನು ಕೆಂಪಗೆ ಮಾಡಿದನು. "ಪಾಪಿಯೇ ನಿನ್ನ ಬುದ್ಧಿಯಲ್ಲಿ ಈ ರೀತಿಯ ಕರ್ಮವು ಏಕೆ ಜನಿಸಿತು" ಎಂದು ಹೇಳುತ್ತಾ ಆಗಲೇ ಅವನು ಬೇಸರಿಸಿದನು. ಆ ಸಂಕಟವನ್ನು ಯಾರು ಸಹಿಸಬಹುದು?

೧೯. ಹೇ, ದುಷ್ಟದುರಾತ್ಮ, ಸುಮ್ಮನೇ ಮಹಾಪುರುಷನನ್ನು ಕೊಂದೆ. ಈಗ ಉಂಟಾದ ಈ ಸ್ಥಿತಿಯು ಯಾವ ಕಾಲಕ್ಕೂ ಸುಳ್ಳಾಗದು. ಅದರಿಂದ ನಮಗುಂಟಾಗುವ ಅಪಕೀರ್ತಿಯು ಸೂರ್ಯ, ಚಂದ್ರ, ಭೂಮಿಗಳಿರುವ ದಿನದವರೆಗೆ ಹೋಗದು. ನಿನ್ನ ದುರ್ವತನೆಗಾಗಿ ನಾನು ಯಾವ ದಿಕ್ಕಿನಲ್ಲಿ ಬಿದ್ದು ಸಾಯಲಿ?

೨೦. ಸರಿಯಾಗಿ ಯೋಚಿಸದೆ ನೀನು ಈ ಮಹಾಲೋಕದ ಜನರಿಗೆ ಕೆಟ್ಟದನ್ನು ಬಯಸಬಹುದೇ? ಆ ರಾಜನು ನಮಗೆ ಮಾಡಿದ ಅಪರಾಧವಾದರೂ ಯಾವುದು? ಮುನಿ ಶ್ರೇಷ್ಠರಿಗೆ ಸೋಲೆಂಬುದು ಇದೆಯೇ ಅಥವಾ ಅಂತಹದನ್ನು ಈ ಹಿಂದೆ ನೀನು ಕೇಳಿರುವೆಯಾ? ಆದರೆ ಆ ಸೋಲು ಎಂಬುದು ಈಗ ನೀನು ಮಗನಾದುದರಿಂದ ಬಂದಂತಾಯಿತು!

೨೧. ಮಗನೇ, ಮಹಾಪಾಪ ಫಲದಿಂದ, ಭಾಗವತ ಶ್ರೇಷ್ಠರಿಗೆ ಚೂಡಾಮಣಿಯಾದ ರಾಜನನ್ನು ನೀನು ಶಪಿಸಿದೆಯಲ್ಲಾ? ಇದರಿಂದ ಹರಿಭಕ್ತರ ವಿರೋಧವೂ ಅಧಿಕ ದೋಷವೂ ನಮಗೆ ದೊರಕೊಂಡಿತು. ತನ್ನ ಭಕ್ತನು, ನಾಶವಾಗಲು ಬ್ರಹ್ಮನ ತಂದೆಯಾದ ನಾರಾಯಣನು ನಮ್ಮನ್ನು ದೂರುವನು.

೨೨. ಧರ್ಮಕ್ಕೆ ಚ್ಯುತಿ ಉಂಟಾಯಿತು. ಬ್ರಹ್ಮತ್ವವನ್ನು ಪಡೆಯಲು ಅಪರಾಧವುಂಟಾಯಿತು. ಮಹಾಲೋಕದ ತುಂಬೆಲ್ಲ ದುರ್ಮಾಗಗಳು ಬೆಳಗಿ ಸಾಧನೆಯಿಂದ ಹೆಚ್ಚಳವಾಗುವಂತಾಯಿತು. ಸರ್ವಥಾ ನಮಗೆ ಅನ್ಯಗತಿಯಿಲ್ಲವೆಂದು ಬ್ರಹ್ಮಾತ್ಮಜನಾದ ಅಂಗೀರಮುನಿಯು ನೆನೆನೆನೆದು ದುಃಖಿಸಿದನು.

೨೩. ನಮ್ಮನೀಗ ರಕ್ಷಿಸಲು ಆ ರಾಜನಲ್ಲದೆ ಬೇರಾರಿದ್ದಾರೆ? ನಮಗೆ ಕೈಯಲ್ಲಿ ಆಯುಧ, ಸಂಪತ್ತು, ಚತುರಂಗ, ಬಲವೇನಾದರೂ ಇದೆಯೇ? ನಮ್ಮ ರಕ್ಷಕನನ್ನು ನಾವೇ ವಿರೋಧಿಸಿದೆವೆಂದಾದರೆ ಇಂತಹ ಜನಗಳಿಗೆ ತೊಂದರೆ ಬಾರದಿದ್ದೀತೇ? ಹೆಣೆದ ಕಯ್ ಬೇಲಿಯನ್ನೇ ಕಿತ್ತು ಹಾಕಿದರೆ ಕಾಯುವುದಕ್ಕೆ ಯಾರಿದ್ದಾರೆ?

೨೪. ಮಗನೇ ಈ ರಾಜನೆಂದರೆ ಯಾರೆಂದು ತಿಳಿದಿರುವೆ! ಪೂರ್ವದಲ್ಲಿ ಸರ್ವರಿಗೂ ಹಿತವಾಗಲೆಂಬ ಉದ್ದೇಶದಿಂದ ನಾರಾಯಣನೇ ಭೂಮಿಯಲ್ಲಿ ರಾಜನನ್ನು ಸೃಷ್ಟಿ ಮಾಡಿದನು. ಈ ಸನ್ಮಾರ್ಗವನ್ನೂ ತಿಳಿಯದೆ, ವಿಚಾರ ಮಾಡದೆ (ಸರ್ವವನ್ನೂ) ಹಾಳು ಮಾಡಿದೆಯಲ್ಲಾ!

೨೫. ಇನ್ನು ಮುಂದೆ ಹುಟ್ಟುವ ಈ ಪ್ರಜಾಜನರನ್ನು ನಿತ್ಯವೂ ಯಾರು ಪರಿಪಾಲಿಸುತ್ತಾರೆ? ನಿಲ್ಲದ ಅನರ್ಥಗಳನ್ನು ಶಿಕ್ಷಿಸಿ ಒಳ್ಳೆಯ ಜನಗಳನ್ನು ಯಾವಾಗಲೂ ಸರಿಯಾಗಿ ಪಾಲನೆ ಮಾಡುವವರು ಯಾರು? ದೀರ್ಘಾಲೋಚನೆಯ ಮೂಲಕ ವಿರಾಜಿಸಿ ರಕ್ಷಿಸುವ ರಾಜರಿಲ್ಲದಿದ್ದರೆ ಭೂಮಿಗೆ ಇನ್ನಾರು ಆಶ್ರಯ - 'ಹರಿಹರಿ' ಎಂದನು.

೨೬. ಆ ರಾಜಋಷಿಯು ಏಕೆ ಇಲ್ಲಿಗೆ ಬಂದನೊ? ಬಂದು ನನ್ನನ್ನೇಕೆ ನೋಡಿದನೋ? ಕಣ್ಣನು ಮುಚ್ಚಿಕೊಂಡು ನಾನೇಕೆ ತಪಸ್ಸಿಗೆ ಕುಳಿತ್ತಿದ್ದೆನೋ? ಸತ್ತ ಹಾವಿನ ಹೆಣ ಇಲ್ಲಿ ಏಕಾದರೂ ಇತ್ತೋ? ಅದನ್ನು ತೆಗೆದು ಆತನು ಕೊರಳಿಗೆ ಏಕೆ ತೂಗಿ ಹಾಕಿದನೋ? ನನ್ನ ಮಗನಿಗೇಕೆ ಕೋಪ ಬಂತೊ?

೨೭. ದೇವೋತ್ತಮ! ದೇವಮಹಾಪುರುಷಾ! ಧರಣೀಧರ! ದೇವದೇವೇಶ! ವಿರಾಜಿತ! ಸಂಜ್ಞವಂತಾ! ವರದೇಶ! ರಮೇಶ! ದೇವಾತ್ಮ! ದೈತ್ಯ ಸಂಹಾರ! ಅಂತರ್ಯಾಮಿಯದ ದೇವ! ದೇವೋತ್ತಮ ಪೂಜಿತ! ಸತ್ಯನಿಧಿ! ಪುರುಷೋತ್ತಮ! ನಿನಗೆ ವಂದಿಸುತ್ತೇನೆ.

೨೮. ನಿಮ್ಮ ಕರುಣಗೆ ಶ್ರೀ ಜಗಧೀಶ್ವರನೇ ನಾನು ಅನ್ಯಾಯ ಮಾಡಿದೆ. ದುಷ್ಟನಾದ ನನ್ನ ಮಗನಿಂದ ನಿಮ್ಮ ಭಕ್ತನಿಗಾದ ಕೇಡನ್ನು ನಿರ್ಣಯಿಸಿ ಮನ್ನಿಸುವವರು ಬೇರೆ ಯಾರು? ನನ್ನ ಪುತ್ರನು ಕೆಟ್ಟ ನಡತೆಯಿಂದ ಮಾಡಿದ ಸರ್ವ ಪಾಪವೂ ಹಾವಿನ ಹಾಸುಗೆಯಲ್ಲಿರುವ ನಿನಗೆ ಅರ್ಪಣೆಯಾಗಲಿ.

೨೯. ಸಜ್ಜನರಾದವರು ಎಷ್ಟೊಂದು ಅನರ್ಥಗಳು ಉಂಟಾದರೂ ಶರೀರ ಸುಖಗಳನ್ನು ಒಂದಿಷ್ಟೂ ನೆನೆಸಲಾರರು. ಸುಪ್ರೀತರಾಗಿ ಮನಸ್ಸಿನಲ್ಲಿ ಪರಮಾತ್ಮನನ್ನು ಧ್ಯಾನಿಸುತ್ತಲೇ ಇರುವುದು ಸತ್ಯಯುತರಾದ ಸಜ್ಜನರ ಅಚ್ಚರಿಯಾದ ಕ್ರಮವೇ ಸರಿ.

೩೦. ಇತ್ತ ನಡೆದ ಮುಂದಿನ ಕಥೆಯನು ಕೇಳಿ. ಅಲ್ಲಿಂದ ತನ್ನ ದಾರಿ ಹಿಡಿದು ನಡೆದ ರಾಜನು ಹೀಗೆ ಯೋಚಿಸತೊಡಗಿದನು. ಯಾವುದೋ ಸಂಚಿನಂತೆ ಮುನಿಯ ಆಶ್ರಮದಲ್ಲಿ ನಡೆದ ಈ ಕ್ರಿಯೆಯು ಈ ವರೆಗೆ ನಮಗೆ ಕಂಡು ಬಂದಿಲ್ಲ. ಅಂತಹ ಕುಮತಿಯು ಎಲ್ಲಿಂದ ತಾನೇ ಉಂಟಾಯಿತು?

೩೧. "ಎಲ್ಲಾ ವರ್ಣಗಳಿಗೂ ಸದ್ಗುರುಗಳು ಬ್ರಾಹ್ಮಣರೇ ಆಗಿದ್ದಾರೆ. ಅವರು ನಾವೆಲ್ಲ ಒಮ್ಮತದಿಂದ ಸದಾ ಪೂಜಿಸಬೇಕಾದ ಉತ್ತಮದೈವಗಳಾಗಿದ್ದಾರೆ. ಹಾಗೆ ನೋಡುವುದಾದರೆ ಸರ್ವರಿಗೂ ಅವರು ನೆಲೆ. ನಾನು ದುರ್ನೀತಿಕ್ಕೆಳೆಸಿದ್ದೆನಲ್ಲಾ" ಎಂದು ರಾಜನು ಅತೀವ ಶೋಕಕ್ಕೊಳಗಾದನು.

೩೨. "ಈ ದಿನ ನಾನು ಅನೇಕ ಪ್ರಜಾ ಜನರನ್ನು ಕೂಡಿಕೊಂಡು ಬೇಟೆಗೆ ಏಕಾದರೂ ಹೋದೆನೋ? ನಾನೇಕೆ ಮುನಿಯ ಆಶ್ರಮಕ್ಕೆ ಹೋದೆನೋ? ಅಲ್ಲಿ ಬಿದ್ದಿದ್ದ ಸತ್ತಹಾವನ್ನು ನಾನೇಕೆ ತೆಗೆದೆನೋ? ಅದನ್ನು ಬಿಲ್ಲಿನಿಂದ ತೆಗೆದು ನಾನೇಕೆ ಕೊರಳಿಗೆ ತೊಡಿಸಿದೆನೋ?"

೩೩. "ಧ್ಯಾನದಿಂದ ಎಚ್ಚರಗೊಂಡ ಮೇಲೆ ಆ ಮುನೀಶ್ವರರು ಏನೆನ್ನುವನೋ? ಆ ಅನ್ಯಾಯ ಫಲದಿಂದ ನನಗೆ ಏನು ಬರಲಿಕ್ಕಿದೆಯೋ? ಏನು ಬಂದರೂ ಈಗ ನನಗೆ ಭಯವಿಲ್ಲ. ಈ ಒಳ್ಳೆಯವರೊಂದಿಗೆ, ಸರ್ವಜ್ಞರ ಬಗೆಗೆ ನಾನು ಎಂತಹ ಮರೆವನ್ನು ತಾಳಿದೆ, ಆಶ್ಚರ್ಯ" ಎಂದುಕೊಂಡನು.

೩೪. "ಇಂದೇ ಅಪಮೃತ್ಯು ನನಗೊದಗಿದರೂ ಅದಕ್ಕೆ ನನ್ನ ವಿರೋಧವಿಲ್ಲ. ನನ್ನ ರಾಜ್ಯವು ಪೂರ್ಣವಾಗಿ ಹಾಳಾದರೂ ನನ್ನ ಮನಸ್ಸಿಗೆ ಭಯವಿಲ್ಲ. ಇಂದು ತೋರಿದ ಕೆಟ್ಟಬುದ್ಧಿಗೆ ಧರ್ಮಜ್ಞರಲ್ಲಿ ಪರಿಹಾರ ಎಂಬುದಿಲ್ಲವಾದರೆ ಮಾತ್ರ ಇದಕ್ಕ ಕೊನೆಮೊದಲು ಎಂಬುದೇ ಇಲ್ಲ"

೩೫. "ನನಗೆ ತೋರಿದ ಈ ಕೆಟ್ಟತನವು ಇನ್ನೊಂದು ದಿನ ಬೇರೆ ಮನುಷ್ಯರಿಗೂ ಕಾಣಿಸುವುದು ಅಸಾಧ್ಯವೇ ಸರಿ. ನನ್ನ ದೈವವು ಹೇಗೋ" ಎಂದು ಅನುಮಾನಿಸುತ್ತ ತನ್ನಷ್ಟಕ್ಕೇ ತಾನೇ ನಡೆತರುತ್ತಿದ್ದನು. ಸಮಯದಲ್ಲಿ ರಾಜನಿಗೆ ಮುನಿಯಿತ್ತ ಶಾಪವು ತಿಳಿದುಬಂದಿತು.

೩೬. ಇವನ್ನು ಕೇಳಿದಾಕ್ಷಣ ಆತನು ಹೃದಯದಲ್ಲಿ ಚಿಂತನೆಗೊಳಗಾದನು. ಶ್ರೀ ಪುರುಷೋತ್ತಮನಿಗೆ ನಮ್ಮ ಮೇಲೆ ಕೃಪೆಯುಂಟಾಯಿತು. ನನ್ನ ಭಕ್ತನು ಭೂಮಿಯ ಮಾಯೆಯಿಂದ ದಂಡನೆಗೊಳಗಾಗುತ್ತದ್ದಾನೆಂದು ಬೇಗನೇ ದೂತನನ್ನು ಅವನು ಕಳುಹಿಸಿದ್ದಾನೆ. ಇದರಿಂದ ಮಿಗಿಲಾದ ಪುಣ್ಯ ಈ ಹಿಂದೆ ಯಾರಿಗಾದರೂ ಲಭಿಸಿದೆಯೇ?

೩೭. ಎಲ್ಲ ಪಂಡಿತರು ತಿಳಿಯದಂತಹ ತಪ್ಪು ನನ್ನಲ್ಲೇನೂ ಇಲ್ಲ. ಬ್ರಾಹ್ಮಣರತ್ರ ಕೋಪ ಮಾಡಿಕೊಂಡು ದೋಷವುಳ್ಳವರಾಗುವುದಿಲ್ಲ. ಹಾಗಾದುದರಿಂದ ಉಪ್ಪು ನೀರಿನಲ್ಲಿರುವ ಬದಲಾಗಿ ಅಮೃತ ಸಾಗರದಲ್ಲಿ ಮುಳುಗಿರಬೇಕೆಂದು ಅವರು ಸರ್ಪದ ಮೂಲಕ ನನ್ನನ್ನು ಕರೆದುಕೊಂಡರು.

೩೮. "ಕೀರಸಾಗರ ವಾಸಿಯಲ್ಲಿಗೆ ಹೋಗಿ ನಿತ್ಯ ಸುಖಿಯಾಗಿರು" ಎಂದು ಆ ಋಷಿಯು ಕರುಣೆಯಿಂದ ಉಪದೇಶಿಸಿದ ಎಂದು ಆ ರಾಜನು ಭಾವಿಸಿದ. ಆ ಬಳಿಕ ಆತನು ವೇಗವಾಗಿ ಮಂದಿರವನ್ನು ಪ್ರವೇಶಿಸಿದನು. ಬಳಿಕ ಆತನು ಸೈನ್ಯವನ್ನೆಲ್ಲ ನೆರಹಿ, ತನ್ನ ಮಗನಿಗೆ ರಾಜ್ಯದ ಸ್ಥಿರ ಪಟ್ಟಾಭಿಷೇಕವನ್ನು ಮಾಡಿದನು.

೩೯. ಮುನಿಮುಖ್ಯದಿಂದ ವಿಧಿಪೂರ್ವಕವಾಗಿ ಗಂಗಾಜಲವನ್ನು ತರಿಸಿಕೊಂಡು ಸರ್ವ ಜಗತ್ತನ್ನೂ ಜನಮೇಜಯನ ವಶಕ್ಕೊಪ್ಪಿಸಿದನು. ಆತನು ಡಂಗುರ ಸಾರಿಸಿ ಮಗನಿಗೆ ಪಟ್ಟ ಕಟ್ಟುತ್ತಿರಲು ಜನ ಕಪ್ಪಕಾಣಿಕೆ ಇತ್ತು ಪೊಡಮಡುತ್ತಿರಲು ಮಂಗಲ ವಾದ್ಯಗಳು ಮೊಳಗಿದವು.

೪೦. ಇಲ್ಲಿಗೆ ಹತ್ತರ ಮೇಲೆ ಎಂಟು ಅಧ್ಯಾಯಗಳಾದುವು. ಇದು ಗುಣಸಾಗರನಿಗೆ ಸನ್ಮತವಾದ ಸತ್ಕಥೆಯಾದ ಶ್ರೀ ಭಾಗವತಾರ್ಥವು. ಮನಸಿಟ್ಟು ಈ ಕತೆಯನ್ನು ಹೇಳಿ - ಕೇಳಿದ ಜನಗಳಿಗೆ ಸತ್ತ ಬಳಿಕ, ನಾರಾಯಣ ಮೂರ್ತಿಯು ಎಣಿಸಲಸಾಧ್ಯವಾದ ಮಹತ್ತ್ವವನ್ನು ಅನುಗ್ರಹಿಸುವನು.

ಅಧ್ಯಾಯ ೧೯

೧. ಅಂಗಜಾಂತಕನಾದ ಶಿವನ ಪುತ್ರ ಗಣಪತಿಗೆ ಬಾಗಿ ನಮಿಸುತ್ತೇನೆ. ಬ್ರಹ್ಮನ ಮಡದಿಯಾದ ಸರಸ್ವತಿಯ ಪಾದವನ್ನು ಸೇವಿಸುತ್ತೇನೆ. ಶರೀರ ನಾಶವಾಗುವುದೆಂದು ತಿಳಿದು ಶ್ರೀ ಮುನಿಗಳ ಸಂಘವನ್ನು ಕಂಡ ಕಥೆಯನ್ನು ಇನ್ನು ಮುಂದೆ ರಚಿಸುತ್ತೇನೆ.

೨. ಶೌನಕಾದಿ ಮನೀಶ್ವರರೇ ಇನ್ನು ಮೇಲಣ ಪುಣ್ಯ ಪ್ರಸಂಗವನ್ನು ಆಲಿಸಿರಿ. ರಾಜನಾದ ಪರೀಕ್ಷಿತನು ಎಲ್ಲ ರಾಜ್ಯಭಾರವನ್ನೂ ಮಗನಿಗೊಪ್ಪಿಸಿದನು. ಬಳಿಕ ಹಸ್ತಿನಾವತಿಯಿಂದ ಹೊರವಂಟು ನಿಧಾನವಾಗಿ ಗಂಗಾನದಿಯ ತೀರದತ್ತ ಭೂಪತಿಯು ಬಂದನು.

೩. ರಾಜರಲ್ಲಿ ಶ್ರೇಷ್ಠನಾದ ಪರೀಕ್ಷಿತನು ಋಷಿ ಪುತ್ರ ಶಾಪವನ್ನು ಕೇಳಿದಾಕ್ಷಣ ಭಕ್ತಿ ಭಾರದ ವಶದಿಂದ ರಾಜ್ಯದ ಆಶೆಯನ್ನು ತೊರೆದನು. ರಾಜಮಾನಸಾದ ಮುಕುಂದ ಪಾದ ಕಮಲದಿಂದ ಹುಟ್ಟಿದ ಆ ಜನನಿ ಭಾಗೀರತಿ ನದಿಯ ಬಳಿಗೈದಿದನು.

೪. ಗಂಗೆಯಲ್ಲಿ ಮೈದೊಳೆದುಕೊಂಡು ಶುದ್ಧ ಮಾನಸನನಾಗಿ ದಡದ ಭೂಮಿಯನ್ನು ಸೆಗಣಿಯಿಂದ ಸಾರಿಸಿದನು. ವಿಪುಲವಾದ ದರ್ಭೆಹುಲ್ಲನ್ನು ಗಂಗೆಯಲ್ಲಿ ನೆನೆಸಿ ಸುತ್ತೆಲ್ಲ ಚೆಲ್ಲಿದನು. ಬಳಿಕೆ ಗಂಗೆಯೇ ಮೊದಲಾದ ಎಲ್ಲ ದೇವತೆಗಳನ್ನು ವಂದಿಸಿ ಅಲ್ಲಿಯೇ ಕುಳಿತುಕೊಂಡನು.

೫. ದಕ್ಷಿಣಾ ದಡದಲ್ಲಿ ಆ ರಾಜನು ಉತ್ತರಾಭಿಮುಖನಾಗಿ ಕುಳಿತನು. ಬಳಿಕ ಪವಿತ್ರವಾದ ಪಾದಗಳಿರುವ, ತಾವರೆಯ ಮೇಲೆ ಕುಳಿತಿರುವ ಬ್ರಹ್ಮನನ್ನು ಭಕ್ತಿಯಿಂದ ನೆನೆದನು. ಮನಸ್ಸಿನ ಮೂಲಕ ಆತನ ಉತ್ತಮಾಂಗವನ್ನು ತಲೆಯಲ್ಲಿ ಧರಿಸಿದನು. ಹೀಗೆ ಕಣ್ಣು ಮುಚ್ಚಿ ಧ್ಯಾನಿಸುತ್ತಿರಲು ಈ ಉತ್ತರೋತ್ತರವಾದ ಕೀರ್ತಿಯು ಭೂಮಿಯಲ್ಲೆಲ್ಲ ಪ್ರಕಾಶಿಸಿತು.

೬. ಕೇಳಿದಾಕ್ಷಣವೇ ಅನೇಕ ಪುಣ್ಯ, ಗಿರಿ, ನದಿ, ಗುಹೆಗಳಲ್ಲಿದ್ದ ಸರ್ವ ಮುನೀಶ್ವರರು ಹಿಂಡುಹಿಂಡಾಗಿ ಬಂದರು. ಅವರು ಸೂರ್ಯಚಂದ್ರಾದಿಗಳ ಕಾಂತಿಯನ್ನು ಮಿರಿಸಿದ ಪರಿಯಿಂದ ತಂಡೋಪ ತಂಡವಾಗಿ ಸಾಗರೋಪಾದಿಯಲ್ಲಿ ಬರತೊಡಗಿದರು. ಸಮುದ್ರ ಮೊರೆತದಂತೆ ಅವರು ಬರುವ ಪರಿಯನ್ನು, ಸಂಭ್ರಮವನ್ನು ಬ್ರಹ್ಮನಷ್ಟೇ ಬಲ್ಲ.

೭. ಭರದ್ವಾಜ, ವಶಿಷ್ಠ, ಚ್ಯವನ, ಅಗಸ್ತ್ಯ, ಗಾರ್ಗ್ಯ, ಗಾಧಿ, ಸುಷೇಣ, ಪರಾಶರ, ಬೃಹದಶ್ವ, ದಧೀಚಿ, ಭಾರ್ಗವ, ಗೌತಮ, ಮುದ್ಗಲ, ಕೌಶಿಕ (ದ್ರವೀಳೇಶ?) ವ್ಯಾಸ, (ಅರಿಷ್ಟಕ?) ಮೇಧಾವಿಯಾದಿಯಾಗಿ;

೮. ದೇವರ್ಷಿ ನಾರದ, ಅತ್ರಿ, ಶರದ್ವನು, ಮೈತ್ರೇಯ, ಪುಲಸ್ತ್ಯ, ಪರಶುರಾಮ, ಕಣ್ವ, ಕಶ್ಯಪ, ಅಂಗೀರಸ, ಲೋಮಶ, ಔರ್ವ, ದೂರ್ವಾಸ, ಸೌಭರಿ, ಜೈಮಿನಿ, ಗಾಲವ ಹಾಗೂ ಸನಕಾದಿಗಳೂ ಸಮೇತರಾಗಿ;

೯. ದೈವಜ್ಞರು, ರಾಜ ಋಷಿಗಳು, ಬ್ರಹ್ಮಜ್ಞರು, ವೈಶ್ಯರು, ದೇವಾತ್ಮಕರು ಮತ್ತು ಶೂದ್ರರೇ ಮೊದಲಾದವರು ಪರಿವಾರ ಸಮೇತರಾಗಿ ದೈವಜ್ಞನನ್ನು ನೋಡಲು ಬಂದರು. ಅದನ್ನು ನೋಡಿದ ಮಹಾರಾಜನು ಆನಂದದಿಂದ ಕುಳಿತಲ್ಲಿಂದ ಎದ್ದನು.

೧೦. ಆ ವೇಳೆಯಲ್ಲಿ ಅಂಗೈಗಳನ್ನು ಮುಚ್ಚಿ ತಲೆಯಲ್ಲಿರಿಸಿದ ಆ ಭೂಪನು ಸಂತೋಷದ ಸಮುದ್ರದಲ್ಲಿ ತೇಲಿ ಹೋದನು. ಆ ಸಭೆಗೆ ಎದುರಾಗಿ ನಡೆದು ಬಂದು ಆತನು ಇದು ಪರಮೇಶ್ವರನ ಸಂಕಲ್ಪವಲ್ಲವೇ ಎಂದುಕೊಂಡನು. ನಿಮ್ಮಂತಹ ತೀರ್ಥ ಸ್ವರೂಪಿಗಳು ನಮ್ಮಲ್ಲಿಗೈಯ್ತುರುವುದು (ನಮ್ಮ) ಸೌಭಾಗ್ಯ ಎಂದನು.

೧೧. ಹರಿಯೋ ಹರಿ! ಇಂತಹ ಸೌಭಾಗ್ಯವು ಈ ಹಿಂದೆ ಯಾರಿಗೆ ತಾನೇ ದೊರಕಿದೆ? ಭೂಮಿಯ ಉತ್ತಮ ಸಾಧುಗಳ ಆಗಮನವು ಆಶ್ಚರ್ಯಕರವೆಂದನು. ಅವರನ್ನು ಇದಿರುಗೊಂಡು ಸಾಷ್ಟಾಂಗ ಪ್ರಣಾಮ ಮಾಡಿದನು. ವಿಧಿವತ್ತಾಗಿ ಹದಿನಾರು ವಿಧಾನಗಳಿಂದ ಆ ಸಮಸ್ತರನ್ನೂ ಪೂಜಿಸಿದನು.

೧೨. ಹಿರಿಯರಿಗೆ ಸಂತೋಷಮಯದಿಂದ ಅಭಿವಂದನೆ ಮಾಡಿದನು. ಅವರ ಪಾದದಡಿಯ ಧೂಳನ್ನು ತೆಗೆದು ತನ್ನ ತಲೆಗೆ ಮೇಲಿನಿಂದ ಸಿಂಪಡಿಸಿಕೊಂಡನು. ತಾವರೆಯ ಎಸಳಿನಂತಹ ಕಣ್ಣುಗಳಿರುವ ಶ್ರೀಹರಿಗೆ ನಮ್ಮಲ್ಲಿ ಅದೆಷ್ಟು ಕರುಣೆಯೋ ಎಂದು ಕೈಯನ್ನು ತಲೆಯಲ್ಲಿರಿಸಿಕೊಂಡು ಸರ್ವಜ್ಞರ ಎದುರಿನಲ್ಲಿ ಕುಣಿದಾಡಿದನು.

೧೩. ಆ ವೇಳೆಯಲ್ಲಿ ದೇವಾನುದೇವತೆಗಳು ಸುರಾಸುರರು ಅನೇಕ ವಿಧದಲ್ಲಿ ಕೊಂಡಾಡಿ ಪರಮಾಶ್ಚರ್ಯವೆಂದು, ಆ ರಾಜನ ಮೇಲೆ ಹೂ ಮಳೆಯನ್ನು ಸುರಿಸಿದರು. ಅನೇಕ ವಿಧವಾಗಿ ಮಂಗಳವಾದ್ಯಗಳು ಮೊಳಗುತ್ತಿರಲು ಅವರೆಲ್ಲರೂ, ರಾಜನಾದ ಪರೀಕ್ಷಿತನ ಒಳ್ಳೆಯ ಗುಣಗಾನವನ್ನು ಮಾಡುತ್ತ ಕುಣಿದಾಡಿದರು.

೧೩. ಅವರೆಲ್ಲರನ್ನೂ ಪೀಠಗಳನ್ನಿತ್ತು ರಾಜನು ಮನ್ನಿಸಿದನು. ಎಲ್ಲರಿಗೂ ಪ್ರತ್ಯೇಕವಾಗಿ ನಮಸ್ಕರಿಸಿ, ಪೂಜಿಸಿದನು. ಆಮೇಲೆ "ನಿಮಗೆಲ್ಲರಿಗೂ ನನ್ನ ಮೇಲೆ ಇಷ್ಟೊಂದು ದೃಢವಾದ ಕರುಣೆಯಿರಲಾಗಿ, ಪ್ರೀತಿಯನ್ನಿರಿಸಿರುವಿರಿ. ಇಲ್ಲದಿದ್ದರೆ ಇದು ಖಂಡಿತವಾಗಿಯೂ ಸಾಧ್ಯವಿರಲಿಲ್ಲ" ಎಂದು ರಾಜನು ಹೇಳಿದನು.

೧೪. "ನೀವೆಲ್ಲರೂ ಈ ಭೂಮಿಯಲ್ಲಿ ಉತ್ತಮರೂ, ಸತ್ಯಾತ್ಮರೂ, ಪುಣ್ಯಾತ್ಮರೂ ಆಗಿದ್ದೀರಿ. ದುರುಳರ ನಾಯಕನಾಗಿರುವ ಮಹಾರಾಜಧಮನು ನಾನಾಗಿದ್ದೇನೆ. ನೆನಸದ ಈ ಸೌಭಾಗ್ಯವು ನನಗೆ ಹೇಗೆ ಲಭಿಸಿತೋ!" ಎಂದು ಅರಸನು ಆಶ್ಚರ್ಯ ಚಕಿತನಾಗಿ ಒಳ್ಳೆಯತನದಿಂದ ಅವರನ್ನು ಮನ್ನಿಸಿದನು.

೧೫. ನನಗೆ ನಿಮ್ಮೆಲ್ಲರನ್ನು ತೋರಿಸಿದ ಆ ಮುನಿಪುತ್ರನು ಸದ್ಗುರುವೂ, ಗುಣವಂತನೂ ಹೌದು. ಘನವಾದ ಈ ಸಂಸಾರವೆಂಬ ಸಮುದ್ರದಲ್ಲಿ ಮುಳುಗಿಸದೆ ನನಗೆ ದಡವನ್ನು ತೋರಿಸಿದನು. ಸೂರ್ಯನ ಕಿರಣವನ್ನು ನೋಡಿರದ ನೀರು ಜಿಗಣೆಯ ಹಾಗೆ ನಾನೂ ಇರಬಾರದೆಂದು ರಕ್ಕಸರ ವೈರಿಯಾದ ಶ್ರೀಹರಿಯು ನನಗೆ ಆತನ ಶ್ರೀಪಾದ ಕಮಲವನ್ನು ಪ್ರಸಾದಿಸಿದನು.

೧೬. ಈಗಲೇ ತಕ್ಷಕನು ವಿಷದ ಬೆಂಕಿಯಿಂದ ದೇಹವನ್ನು ಸುಟ್ಟು ಬಿಡಲಿ. ನನಗೆ ಮನಸ್ಸಿನಲ್ಲಿ, ಮರಣ ಭಯದಿಂದಾಗಿ ತಪ್ಪು ಇರಲಾರದು. ಶ್ರೀಹರಿಗೆ ನನ್ನ ಮೇಲೆ ಹಿತವುಂಟಾದ ಮೇಲೆ ಬೇರೆ ವಿಚಾರವೇನಿದೆ? ಈಗಲೇ ನನ್ನನ್ನು ಶ್ರೀಹರಿಯ ವೈಕುಂಠ ಪುರಕ್ಕೆ ಬೀಳ್ಕೊಡಿ.

೧೮. ನಾನು ಯೋಚಿಸುತ್ತಿರುವ ಒಂದು ಮಾತನ್ನು ಸಾವಧಾನದಿಂದ ಹೇಳುತ್ತೇನೆ. ಪರಮಾತ್ಮನ ಪಾದಗಳಲ್ಲಿ ಮನವು ಸ್ಥಿರವಾಗಿ ನಿಲ್ಲುವಂತಾಗಬೇಕು. ಭಾಗವತರ ಸಂಪರ್ಕದ ಸರ್ವಸ್ವದಲ್ಲಿ ನನ್ನ ಮನಸ್ಸು ಸರಿಯಾಗಿ ಮೂಡುವಂತೆ -

೧೯. ಇದಕ್ಕೆ ನೀವು ಸದಾ ನನಗೆ ಅನುಗ್ರಹಿಸಬೇಕು. ಇದು ಆಗದ ಹೊರತು - ನನ್ನ ದೈವವು ತಿಳಿದಂತೆ ಬೇರೇನೂ ನನ್ನ ಮನಸ್ಸಿನಲ್ಲಿಲ್ಲ. ಇದಕ್ಕೆ ಬೇಕಾದ ಉಪಾಯವನ್ನೂ, ಒಳ್ಳೆಯ ಬುದ್ಧಿಯನ್ನೂ ದಯಪಾಲಿಸಿರೆಂದು ಪಾದಗಳೆಂಬ ಕಮಲಗಳನ್ನು ಹಿಡಿದು ಆ ಗುಣಸಾಗರ ಮೂರ್ತಿಯಾದ ಪರೀಕ್ಷಿತನು ಅವರನ್ನು ಪ್ರಾರ್ಥಿಸಿದನು.

೨೦. ಕುಂತೀಸುತರಾದ ಪಾಂಡವರೇ ಮೊದಲಾದ ಹೊಗಳಿಕೆಯ ಫಲವೋ, ಲಕ್ಷ್ಮೀಕಾಂತನಿಗೆ ನನ್ನ ಮೇಲೆ ಇರುವ ಅನುರಾಗವೋ ಕೈಗೂಡಿದ ಹಾಗಾಯಿತು. ಈ ಅಂತ್ಯಕಾಲದಲ್ಲಿ ನನಗೆ ಮಹಾತ್ಮರ ಆಗಮನವು ಒದಗಿತು. ಎಷ್ಟು ಜನ್ಮಗಳಲ್ಲಿ ನಾನು ಅದೆಷ್ಟು ಪುಣ್ಯ ಕಾರ್ಯಗಳನ್ನು ಮಾಡಿದ್ದೇನೋ!

೨೧. ಎಲೆ ಸತ್ಪುರುಷರೇ! ಸಜ್ಜನರೇ! ಸರ್ವಾತ್ಮರೇ! ಶುದ್ಧ ಮನುಷ್ಯರೇ, ಲೋಕಹಿತಾತ್ಮಕರೇ! ನನ್ನ ಪುಣ್ಯ ವಿವೇಕದ ನೆಲೆಯನ್ನು ನೋಡಲಿರುವ ಮಹಾತ್ಮರೇ, ನನಗೆ ಒಂದು ಉಪಕಾರವನ್ನು ನೀವು ಈಗ ಮಾಡಲೇಬೇಕು. ಅಯ್ಯಾ ಒಡೆಯರೇ, ನಿಮಗೆ ವಂದಿಸುತ್ತೇನೆ.

೨೨. ನನಗೆ ಇಹ - ಪರ ಗತಿಯ ಅಭಿಲಾಷೆಯು ಮನಸ್ಸಿನಲ್ಲಿಲ್ಲ. ನೀವು ನನಗೆ ಒಂದು ಹಿತಕಾರ್ಯವನ್ನು ಸಾಧಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ರಕ್ಕಸರ ವೈರಿಯಾದ ಶ್ರೀಹರಿಯ ಶ್ರೀಪದ ಸತ್ಯತೆಯ ನೆರಳಿನಲ್ಲಿ ಸದಾಕಾಲವೂ ಮೌನವಾಗಿ ಇರುವ ಮಹಾಬುದ್ಧಿವಂತಿಕೆಯನ್ನು ಪಡೆಯುವುದು ಹೇಗೆ ಎಂಬುದನ್ನು ಹೇಳಬೇಕು.

೨೩. ನೀವು ನನಗೆ ಕರುಣಾಪೂರ್ವಕವಾಗಿ, ನಾನು ಕಷ್ಟವೆಂಬ ಸಮುದ್ರವನ್ನು ದಾಟಿ ಆಚೆಯ ದಡವನ್ನು ಸೇರುವ ಉಪಾಯವನ್ನು ಯೋಚಿಸಿ ಒಂದು ರಹಸ್ಯವನ್ನು ಪ್ರಸಾದಿಸಬೇಕು. ಪರಮಾತ್ಮನ ಊರಿಗೆ ಪ್ರವೇಶಿಸುವಂತಹ ಪರಮಾರ್ಥವನ್ನು ನನಗೆ ಉಪದೇಶಿಸಬೇಕು. ನಿಮಗಿದೋ ಅಭಿವಂದನೆ! ಎಂದು ಹೇಳಿದನು.

೨೪. ಆತನು ನೆಲದಲ್ಲಿ ಬಿದ್ದು ವಂದಿಸುತ್ತಿರುವುದನ್ನು ಅನೇಕ ಬ್ರಾಹ್ಮಣರು ಕೊಂಡಾಡಿದರು "ಪುಣ್ಯಾತ್ಮನೇ" ಎಂದು ಕರೆದರು. ನೀನು ಈಗಾಗಲೇ ಕಷ್ಟಗಳೆಂಬ ಸಮುದ್ರವನ್ನು ದಾಟಿ ಆಚೆಗೆ ಹೋಗಿದ್ದೀಯಾ. ಇನ್ನು ಗುಟ್ಟಾದ ಮರ್ಮವೇನೂ ನಿನಗೆ ಹೇಳಬೇಕಾಗಿಲ್ಲ. ನೀನು ಜನ್ಮಾನುಬಂಧವನ್ನು ಕೇಳಬೇಕಾಗಿಲ್ಲ. ಯಮನ ಭಯವು ನಿನಗೆ ಎಳ್ಳನಿತೂ ಇಲ್ಲ ಎಂದರು.

೨೫. ಮಹಾರಾಜನೇ ನಿನಗೆ ಕರ್ಮಗಳ ಬಂಧನವೆಂಬುದಿಲ್ಲ. ಕಾಮವೆಂಬ ಪಾಪದಿಂದ ದೋಷಮುಕ್ತನಾಗಿದ್ದೀಯ, ಕಾಲಭಯವೆಂಬ ವಿಷವನ್ನು ಮೀರಿ ನಿಂತಿರುವೆ. ಷಡ್ವರ್ಗಗಳ ಸಂಬಂಧವನ್ನು ಕಳಚಿಕೊಂಡಿರುವೆ. ಕಷ್ಟಗಳೆನ್ನುವ ಮಾಯೆಯನ್ನು ಖಂಡಿಸಿರುವೆ ನೃಪತಿಯೇ ನಿನಗೆ ಎಣೆಯಾದವರು ಇನ್ನಾರಿದ್ದಾರೆ?

೨೬. ಸಮುದ್ರವು ಮೊರೆಯುವ ಹಾಗೆ ಸಮಸ್ತ ಜನಗಳ ಆಶೀರ್ವಚನಗಳು ಮೊರೆಯ ತೊಡಗಿದವು. ಹರಿ ಹರಿ ಎಂಬ ವಾದ್ಯ ಮೊಳಗುವಿಕೆಯಿಂದ ನೆಲ ನುಗ್ಗಡಿಸಿ ಹೋಯಿತು. ಭೂಮಿಯು ತುಂಬಿ ತುಳುಕುವಂತೆ ದೇವತೆಗಳು ಆಗಸದಿಂದ ಹೂವಿನ ಮಳೆಯನ್ನು ಸುರಿಸಿದರು.

೨೭. ಹೀಗಿರುವಾಗ ಕಷ್ಟಗಳನ್ನು ದೂರಮಾಡುವವನೂ, ಜ್ಞಾನಾತ್ಮಸಮುದ್ರನನೂ ಆಗಿರುವ ವ್ಯಾಸನ ಮಗನಾದ ಶುಕಯೋಗಿ ಮುನಿಯು ಪ್ರಭಾವಳಿಯಿಂದ ಬಹುವಿಧವಾಗಿ ಪ್ರಕಾಶಿಸುತ್ತ ತೇಜೋಮಯನಾಗಿ ಕಂಡನು. ಐದು ಮುಖದ ಶಿವನಿಗೆ ಸರಿ ಸಮಾನನಾಗಿ ಘನತೆಯಿಂದ ಅವನು ಬರುತ್ತಿರುವುದನ್ನು ಎಲ್ಲರೂ ನೋಡಿದರು.

೨೮. ಜಡನೋ, ಹುಚ್ಚನೋ ಇಲ್ಲವೇ ಪಾನಮತ್ತನೋ ಎಂದು ಭೂಮಿಯ ಎಲ್ಲ ಕುಮಾರರು ಆತನಿಗೆ ಕೈಕೊಟ್ಟು, ಅವನ ಸುತ್ತಮುತ್ತ ನಡೆತರುತ್ತಿದ್ದರು. ಭೂಮಿಯು ಪಾವನವಾಗುವ ರೀತಿಯಲ್ಲಿ ಮೆಲ್ಲನೆ ಆತನು ನಡೆತರುತ್ತಿದ್ದನು.

೨೯. ಅರಳಿದ ಕೆಂದಾವರೆಯಂತಿರುವ ವಿಶಾಲ ಕಣ್ಣುಗಳು ಆತನವು. ಚಂದ್ರನನ್ನು ಮೀರಿಸಿದ ಮುಖ ಸುಕುಮಾರ ಶರೀರಕ್ಕೆ ಅನುಗುಣವಾದ ಪಾದಗಳು, ತೊಡೆ ತಲೆ ಹಾಗೂ ಕೆನ್ನೆ, ಬಿಡಿಸಲ್ಪಟ್ಟ ಹೊಳೆಯುವ ಜಟಾಮಕುಟ, ಸುಂದರವಾದ ಮೂಗು, ಕಾಂತಿಯುತವಾದ ಹಲ್ಲುಗಳು, ಕೆಂಪಾದ ತುಟಿ, ಇವುಗಳಿಂದಲೂ -

೩೦. ಮೊಳಕಾಲುಗಳ ವರೆಗೆ ನೀಳವಾಗಿರುವ ಎರಡು ಕೈಗಳು, ಅಗಲವಾದ ಎದೆ, ತೇಜೋಮಯವಾದ ಶಂಖದಂತಿರುವ ಕೊರಳು, ಸುಂದರವಾದ ಸುಳಿಯಾಗಿರುವ ಹೊಕ್ಕುಳು ಹಾಗೆಯೇ ಆ ಹಿಂಭಾಗ, ಆ ದಿಗಂಬರತೆ, ಆ ಗೂಢ ಕಳೆಯಿಂದ ನಿತ್ಯವೂ ಆನಂದಮಯನಾದ ಸಹಜ ಜ್ಞಾನ ಸಮುದ್ರನನ್ನು ಸಭೆ ನೋಡಿತು.

೩೧. ಕಾಂತಿಯುತವಾದ ನೀಲಬಣ್ಣದಿಂದ ಬೆಳಗುವ ದಿವ್ಯ ಶರೀರವಿರುವ, (ನೋಡಲು) ಶ್ರೀ ಹರಿಗಿಂತಲೂ ಆತನು ಹೆಚ್ಚಾಗಿ ಸುಂದರನಾಗಿದ್ದನು. ಭೂಮಿಯ ಎಲ್ಲ ಯೋಗೀ ಜನಗಳಿಗೆ ಸದ್ಗುರುವಾಗಿರುವ ಆ ಸೂರ್ಯನನ್ನು ಕಂಡ ಕೂಡಲೇ ಸಭೆ ಸಮಸ್ತರೂ ಜೋರಾಗಿ ಜಯವೆಂದು ಹೇಳುತ್ತಾ ಎದುರಾದರು.

೩೨. ಪೂರ್ಣಚಂದ್ರನು ಉದಯಿಸುತ್ತಿರಲು ಸಮುದ್ರವು ಮೊರೆಯುತ್ತ ಮುಂಬರಿಯುವ ಹಾಗೆ, ವಾದ್ಯಘೋಷಗಳೊಂದಿಗೆ ಮುನಿಯ ಗುಣಗಾನ ಮಾಡಿದರು. ನಾವು ಧನ್ಯರಾದೆವೆಂದು ತಲೆಯಲ್ಲಿ ಕೈಗಳನ್ನು ಇಟ್ಟು ಆ ಪೂರ್ಣ ಪುಣ್ಯರು ಧೂಳಿನಲ್ಲಿ ಅವರ ಪದಕಮಲಕ್ಕೆ ನಮಿಸಿದರು.

೩೩. ಕೂಡಿರುವ ಸಭಾ ಸಮುದ್ರ ನಡುವೆ, ಆ ರಾಜನು ಜೋಡಿಸಿದ ಮಂಗಲವಾದ ಕೈಗಳೆರಡನ್ನ ತಲೆಯಲ್ಲಿರಿಸಿ, ಗಾಢ ಶ್ರದ್ಧೆಯಿಂದ ಭೂಮಿಯ ಮೇಲೆ ಬಿದ್ದನು. ಪಾದಕ್ಕೆ ಅಭಿನಂದಿಸಿ, ಸಚೇತನವಾಗಿ ಕೈ ಮುಗಿದು ಭಕ್ತಿಯಿಂದ ಸ್ತುತಿಸತೊಡಗಿದನು.

೩೪. ಜಯ ಕರ್ಮವಿದುರ! ಜಯ ಜರಾಮರಣಗಳೆಂಬ ಭವಸಿಂಧು ವಿನಾಶ! ಜಯ ಬ್ರಹ್ಮ ಸದಾತ್ಮ ಜಯ ಜಗದ್ಭರಿತ! ಜಯ ಪರಿಪೂರ್ಣ ಜಯಪದೇಶ! ಜಯ ದೇಹ ವಿರಕ್ತ! ಜಯ ವರಿಂಚಿನುತ! ಜಯ ಕರುಣಾ ಸಮುದ್ರ! ಜಯ ಪೂರ್ಣ ಸುಖಾಬ್ಧಿ ಸುಖಾಂತ ಗುರು! ಜಯ ವರದೇಶ ನಮಸ್ತೇ! ಎಂದು ಸ್ತುತಿಸಿದರು.

೩೫. ಅವರನ್ನು ಕಾಡಿಸಿ ಸುತ್ತಮುತ್ತ ಅಂಡಲೆಯುತ್ತ ಬರುತ್ತಿದ್ದ ಬಾಲಕರು ಇದನ್ನೆಲ್ಲವನ್ನೂ ನೋಡಿ, ಭಯಭೀತರಾಗಿ ದೂರಕ್ಕೆ ಓಡಿದರು. ಆಗ ಮಹಾರಾಜನಾದ ಪರೀಕ್ಷಿತನು ಅವರನ್ನು ಭಕ್ತಿಯಿಂದ ಪೂಜಿಸಿದನು. ಸಿದ್ಧಮಾಡಿದ ಶ್ರೇಷ್ಠತರವಾದ ಪೀಠದೆಡೆಗೆ ಅವರನ್ನು ಕರೆದೊಯ್ದನು.

೩೬. ಅವರನ್ನು ಸಿಂಹಾಸನದ ಬಳಿಗೆ ಕರೆದೊಯ್ದು ರಾಜನು ಕುಳ್ಳಿರಿಸಿದನು. ಮುನಿಯ ಪಾದಕಮಲಗಳನ್ನು ತೊಳೆದು ಅರ್ಚಿಸಿ, ಆ ಜಲವನ್ನು ತಲೆಯಲ್ಲಿ ಧರಿಸಿದನು. ಆಮೇಲೆ ಶ್ರೀಹರಿಯನ್ನು ಬಳಿಗೆ ಕರೆತರುವ ಈ ಪಾದಗಳು ಯಾವಾಗಲೂ ನನಗೆ ಸತ್ಯವಾದುವುಗಳೇ ಎಂದು ಹೇಳಿದನು.

೩೭. ಇದು ಯದುಗಳಲ್ಲಿ ಉತ್ತಮನಾದ ಶ್ರೀಕೃಷ್ಣನ ಅನುಗ್ರಹದ ಕಡೆಗಣ್ಣ ನೋಟದಿಂದ ನನಗೆ ಲಭಿಸಿರುವುದಾಗಿದೆ. ಅದಲ್ಲದಿದ್ದರೆ ಯೋಗಸಮ್ಮತವಾದ ವಾರ್ತೆಯನ್ನು ಯಾರು ತಾನೇ ತಿಳಿಯಬಲ್ಲರು? ಇಂತಹ ಸದವಕಾಶವು ಮೂಢರಾಜರಾದ ನಮ್ಮಂತವರಿಗೆ ಸದರವೇ? ಬದುಕಿನಲ್ಲಿ ಇದರಿಂದ ಮೇಲಣವಾದ ಯಾವುದಾದರೂ ಮುಕ್ತಿ ಇನ್ನು ನನಗೆ ಲಭಿಸಲಿರುವುದೇ?

೩೮. ಆ ರಾಜನು ಮುಂದೆ ಬಂದು ಅವರ ಪಾದಕಮಲಗಳನ್ನು ಆದರಿಂದ ಪೂಜಿಸಿದನು. ಅವರ ಪಾದಧೂಳನ್ನು ಭಕ್ತಿಪೂರ್ವಕವಾಗಿ ಶಿರದಲ್ಲಿ ಸ್ಥಾಪಿಸಿದನು. ಕೈ ಜೋಡಿಸಿ ಮುಂದುಗಡೆಯಲ್ಲಿ ನಿಂತು ಪ್ರಾರ್ಥಿಸಿದನು. ಏಳುದಿನಗಳಿಗಿಂತ ಮೊದಲೇ ಮುಕ್ತಿ ದೊರಕುವ ಮಾರ್ಗವನ್ನು ಅವರಲ್ಲಿ ವಿಚಾರಿಸಿದನು.

೩೯. ಅನೇಕ ರೀತಿಯಲ್ಲಿ ಎದುರಾಗಿ ನಮಸ್ಕರಿಸಿ ಆ ನೃಪತಿಯು ಅವರನ್ನು ಆರಾಧನೆಗೈದನು. ಅವರ ಬಳಿಯಲ್ಲಿ ಕೈಮುಗಿದು ವಿನಯದಿಂದ "ನಿಮಗೆ ನನ್ನಲ್ಲಿ ಇಷ್ಟೊಂದು ಹಿತವುಂಟಾಗಿರುವುದು ಆಶ್ಚರ್ಯಕರವಾದುದು. ಶ್ರೀಹರಿಯ ಕಡೆಗಣ್ಣ ನೋಟವು ನಿಜವಾಗಿಯೂ ನನ್ನ ಮೇಲಿದೆ. ಇದು ಎಂತಹ ಆಶ್ಚರ್ಯ" ಎಂದು ಹೇಳಿದನು.

೪೦. ನಿಮ್ಮ ಪಾದಗಳನ್ನು ನೋಡಲು ಯಾರಿಗೆ ತಾನೇ ಸಾಧ್ಯವು? ಅದು ಕಣ್ಣಿಗೆ ಗೋಚರವಾದ ಮಾತ್ರಕ್ಕೇ ಭಾಗ್ಯವು ಹೆಚ್ಚಾಗಬಲ್ಲುದು. ಶಿಕ್ಷಿಸಲಿರುವ ಗುರುಕರುಣವು ಲಭಿಸಿದ ಮೇಲೆ, ಸಿಟ್ಟುಗೊಂಡ ತಕ್ಷಕನು ನನಗೆ ನೋವನ್ನು ಹೇಗೆ ತಾನೇ ಉಂಟು ಮಾಡಿಯಾನು?

೪೧. ನಿಮ್ಮಂತಹ ಪಂಡಿತರು ನಮ್ಮ ಮೇಲೆ ಇಟ್ಟಿರುವ ಪ್ರೀತಿಯು ಎಷ್ಟೊಂದು ತೀವ್ರತರವಾದುದೋ! ನಿಮ್ಮ ಈ ಪ್ರೀತಿಗೆ ಕಾರಣವೆನ್ನುವುದು ಇರಲು ಸಾಧ್ಯವೇ? ಇಂತಹ (ಸೌಭಾಗ್ಯವು)ಹಿಂದೆ ಯಾರಿಗಾದರೂ ಸಿದ್ಧಿಸಿರುವುದೇ? ಚೇತನಗಳನ್ನು ಶುದ್ಧಿಗೊಳಿಸಲು ನೀವೆಲ್ಲರೂ ಬಂದಿರುವಿರಲ್ಲವೇ? ನನಗಾಗಿ ಕೃಪೆದೋರಲು ಬಂದಿರಲ್ಲ, ನಾನೆಷ್ಟು ಧನ್ಯನೋ! ಎಂದನು.

೪೨. ಪ್ರೀತಿಯಿಂದ ಅಭಿನಂದಿಸಿ ನಿಮ್ಮಲ್ಲಿ ಒಂದು ರಹಸ್ಯವನ್ನು ಕೇಳೋಣವಂತೆ. ಮೂಢರಾಗಿರುವ ಎಲ್ಲ ಮನುಷ್ಯರೇ ಚೇತರಿಸಿಕೊಂಡು ಕೇಳಿ. ಈ ದೇಹದ ಅವಸಾನದ ವೇಳೆ ಭಯವನ್ನು ನಿವಾರಿಸಲು ಯಾವ ಕಾರ್ಯವನ್ನು ಕೈಗೊಳ್ಳಬೇಕು? ಇಂತಹ ಸನ್ಮತಿಯನ್ನು ನಮಗೆ ಜಗನ್ಮಯನೇ ನೀನು ಕರುಣಿಸಬೇಕು.

೪೩. ಸದ್ಗತಿಗನುಸಾರವಾಗಿ ನಾವು ಮಾಡಬೇಕಾದ ಕೆಲಸ ಯಾವುದು? ಸ್ತುತಿ ಯಾವುದು? ಜಪಿಸಬೇಕಾದ ಉತ್ತಮ ಮಂತ್ರ ಯಾವುದು? ನಂಬಬಹುದಾದ ಇರುವ ಮೂರ್ತಿ ಯಾವುದು? ಇದನ್ನು ಸಮಾಧಾನದಿಂದ ಸೂಕ್ಷ್ಮತೆಯಿಂದ ಶಾಸ್ತ್ರಗಳಲ್ಲಿ ಹೇಳಿರುವ ಹಾಗೆ ನೀವು ನನಗೆ ಅನುಗ್ರಹಿಸಬೇಕು.

೪೪. ನಾನು ನಿಮಗೆ ಶಿಷ್ಯನಂತೂ ಅಲ್ಲ. ಆದರೆ ನೀವು ಗುರುಗಳೂ ತಂದೆಯೂ ಆಗಿದ್ದೀರಿ. ಮಗನಿಗೆ ಬುದ್ಧಿ ಹೇಳುವ ಹಾಗೆ ನನಗೆ ನಿಮ್ಮ ಕರುಣೆಯಾಗಬೇಕು. ನಾನು ಕೇಳಿ - ತಿಳಿದುಕೊಳ್ಳಲು ಬುದ್ಧಿಯಿಲ್ಲದವನಾಗಿದ್ದೇನೆ. ಏನಾದರೂ ಹಾನಿ - ವೃದ್ಧಿಗಳು ಬಂದರೆ ಅದು ನಿಮಗೇ ಸಲ್ಲುತ್ತವೆ, ಜಗನ್ಮಯನೇ ನನಗೆ ಅನುಗ್ರಹಿಸಿ.

೪೫. ಹತ್ತಿರವೇ ಇದ್ದ ಅಕಾಲ ಮೃತ್ಯುವನ್ನು ನಾನೀಗ ಸಮೀಪಿಸುತ್ತಿದ್ದೇನೆ. ಮೂರು ಲೋಕಗಳಿಂದ ವಂದಿತನೇ ನನಗೆ ಒಂದು ಉಪದೇಶವನ್ನು ಅನುಗ್ರಹಿಸಬೇಕು ಎಂದು ಎರಡು ಪಾದಗಳನ್ನು ಕಣ್ಣುಗಳಿಗೆ ಒತ್ತಿಕೊಂಡನು. (ಮತ್ತೆ) ಭಕ್ತಿ ಪೂರ್ವಕವಾಗಿ ಅವರ ಪಾದಗಳೆರಡನ್ನು ಮುಟ್ಟಿ ಬುದ್ಧಿಪೂರ್ವಕವಾಗಿ ನಮಸ್ಕರಿಸಿದನು.

೪೬. ಇಲ್ಲಿಗೆ ಹತ್ತೊಂಬತ್ತನೆಯ ಅಧ್ಯಾಯವಾಯಿತು. ಪ್ರಥಮ ಸ್ಕಂದದಲ್ಲಿ ಸಿದ್ಧಾಂತಿಸಿ ನಿರ್ಮಿಸಿದ ಈ ಕವಿತೆಯನ್ನು ತಿದ್ದಿ ಗೌರವಿಸಿ, ಬಹುಮಾನಿಸಿದ ಪಂಡಿತರಿಗೆ ತಾವರೆಯಂತೆ ಕಣ್ಣುಗಳಿರುವ ಶ್ರೀಹರಿಯ ಪಾದಗಳ ಆರಾಧನೆಯಾಗುವಂತಾಗಲಿ.

ಶ್ರೀ ಭಾಗವತಾರ್ಥ

ಎರಡನೆಯ ಸ್ಕಂಧ

ಅಧ್ಯಾಯ ೧

೧. ಆನೆಯ ಮುಖನಾದ ಗಣಪತಿಯನ್ನು ಪೂಜಿಸುತ್ತೇನೆ. ಶಾರದೆಯನ್ನು ಅಭಿನಂದಿಸುತ್ತೇನೆ. ಗುರುವಿನ ಶ್ರೀಪಾದವನ್ನು ಭಕ್ತಿಯಿಂದ ಸ್ಮರಿಸುತ್ತೇನೆ. ಕೈಮುಗಿದು, ಶ್ರೀ ಶುಕರು ಮರಣ ಕಾಲದಲ್ಲಿ ಮುಕ್ತಿಯ ದಾರಿಯನ್ನು ಪರೀಕ್ಷಿತನಿಗೆ ಹೇಳಿದ ಕಥೆಯನ್ನು ಹೇಳೋಣವಂತೆ.

೨. ಎಲ್ಲವನ್ನೂ ಬಲ್ಲ ಮುನೀಂದ್ರರೇ, ಈ ಶ್ರೀ ಭಾಗವತಾರ್ಥವನ್ನು ನಿರ್ಧರಿಸಿಕೊಳ್ಳಿರಿ. ಸರ್ವಾತ್ಮನಾದ ಪರೀಕ್ಷಿತನಿಗೆ ಶುಕಮುನಿಯು ಉಪದೇಶಿಸಿದ ಕಥಾಸಾರದ ತಿರುಳಿದು. ಸರ್ವಾತ್ಮರ ಹಿತಾರ್ಥವನ್ನು ದೃಷ್ಟಿಯಲ್ಲಿರಿಸಿ ನಾನು ಇದನ್ನು ಹೇಳುತ್ತೇನೆ. ಸರ್ವ ಪ್ರಜೆಗಳಿಗೂ ಉತ್ತಮ ಮುಕ್ತಿಗತಿಯಾದ ಇದನ್ನು ಉತ್ಸಾಹದಿಂದ ಆಲಿಸಿರಿ.

೩. ಉಪವಾಸ ವ್ರತ ಹಿಡಿದು ಭೂಪತಿಯು ಹೀಗೆ ಪ್ರಾರ್ಥಿಸಿ ಅಭಿನಂದಿಸಿದನು. ಆ ಭಾಗವತೋತ್ತಮನ ಗುಣ – ಲಕ್ಷಣ, ಒಳ್ಳೆಯ ಮಾತು, ವಿವೇಕ - ಇವುಗಳನ್ನು ಜ್ಞಾನದೃಷ್ಟಿಯಿಂದ ನೋಡಿದನು. ಪೂರ್ಣ ಸಾಗರರಾದ ಶ್ರೀ ಶುಕ ಮುನಿಗಳು ಚಿಂತಿಸಿ ಅವನನ್ನು ಬರಸೆಳೆದು ಹೀಗೆಂದು ಮನ್ನಿಸಿಕೊಳ್ಳುತ್ತಿದ್ದರು. (ಆ ಸತ್ಯವನ್ನು ಈಗ ಕೇಳಿರಿ)

೪. ಹೀಗೆ ಮನಸ್ಸಿನಲ್ಲಿ ಚಿಂತಿಸಿ, ಆ ಮುನಿಯು ಮುಗುಳುನಗೆಯನ್ನು ಬೀರಿದನು. ತನ್ನ ಆತ್ಮದಲ್ಲಿ ಮುಳುಗಿ ಬುದ್ಧಿಯನ್ನು ದೃಢಗೊಳಿಸಿದನು. ನಿಧಾನವಾಗಿ ಸಂತೋಷಚಿತ್ತನಾಗಿ ನಾಲಗೆಗೆ ಪರಿಪೂರ್ಣವಾದ ಕಥಾಸಮುದ್ರದಲ್ಲಿ ಮುಳುಗಿ ಹೋಗಿರುವೆಯಲ್ಲ ಎಂದು ರಾಜನನ್ನು ಆಲಿಂಗಿಸಿಕೊಂಡನು.

೫. ರಾಜರಲ್ಲಿ ಶ್ರೇಷ್ಠನಾದವನೇ, ಒಳ್ಳೆಯವನೇ (ಇತ್ತ)ಬಾ. ಪಾಂಡವರ ಕಾಲದವನೇ, ಸರ್ವಲೋಕಕ್ಕುಪಕಾರಿಯೇ (ಇತ್ತ) ಬಾ ಎಂದು ಸ್ನೇಹದಿಂದ ಅವನನ್ನು ಬರಸೆಳೆದು ಎತ್ತಿ ಆಲಿಂಗಿಸಿದರು. ಆತನ ವಿಶಾಲವಾದ ಕಿರೀಟದಲ್ಲಿ ಕೈಯನ್ನು ಇರಿಸಿ ಹೀಗೆ ಹೇಳಿದನು.

೬. ಮಹಾರಾಜನೇ ನೀನು ಕೇಳಿರುವ ಚೋದ್ಯವು ಸರ್ವ ಜಗತ್ತಿಗೇ ಸಾರಭೂತವಾದುದು. ಇದರಿಂದ ಮೇಲೆ ಎಲ್ಲವೂ ಶೂನ್ಯ. ಇದರ ಪ್ರೇರಣೆಯನ್ನು ನೀನು ತಿಳಿಯದೇ ಬುದ್ಧಿಯಿಂದ ಎಷ್ಟನ್ನು ಕೇಳಿರುವೆಯೋ ಅಷ್ಟು ಸತ್ಯವಾದುದು. ಸಾಯುವ ಕೊನೆಯ ಗಳಿಗೆಯಲ್ಲಿ ಕಾರ್ಯವೇನೆಂಬುದನ್ನು (ಈಗ) ಹೇಳುತ್ತೇನೆ.

೭. ರಾಜನೇ ಯಾರಿಗೆ ಮರಣವು ದೂರವಾಗಿದೆ ಅಥವಾ ಹತ್ತಿರವಾಗಿದೆ ಎಂಬುದರ ರಹಸ್ಯವನ್ನು ಮನುಷ್ಯರಾದವರು ಯಾರು ತಾನೇ ಬಲ್ಲರು? ದುರುಳರಿಗೆ ಗೊತ್ತಾಗದ ಹಾಗೆ ಯಮನ ದೂತರು ನರಕ ವಾಸವನ್ನು ವಿಧಿಸುತ್ತಾರೆ. ಆಗ ಅವರ ಗೋಳನ್ನು ಯಾರಿಗೆ ತಾನೇ ಹೇಳುವುದು?

೮. ನಾನು ಈಗಲೇ ಸಾಯುತ್ತೇನೆ ಎಂದು ಮೊದಲೇ ವಿವರಿಸಿ ಹೇಳಲು ಸಾಧ್ಯವಿಲ್ಲ. ನಿಮ್ಮ ಪ್ರಾಣವನ್ನು ಕೊಂಡು ಹೋಗಲು ನಾನು ಬರುತ್ತೇನೆ ಎಂದು ಕಾಲನೂ ಹೇಳುವುದಿಲ್ಲ. ನೋಡ ನೋಡುತ್ತ ಇಲ್ಲವಾಗುವ ಈ ಜನಗಳು ಬಂದ ಹಾಗೆಯೇ ಹೋಗುತ್ತಾರೆ ಮತ್ತೆ ಹುಟ್ಟಿ ಬರುತ್ತಾರೆ. ಕರ್ಮ ಬಂಧನ ತೀರುವ ವರೆಗೆ ಇದು ಸಾಗುತ್ತಲೇ ಇರುತ್ತದೆ.

೯. ಹೊಟ್ಟೆಯಲ್ಲಿರಲಿ, ಹುಟ್ಟಿರಲಿ, ಲೀಲೆಯಿಂದ ನಲಿಯುತ್ತಿರಲಿ; ಗುಹೆಯಲ್ಲಿರಲಿ, ಊರಿನಲ್ಲಿರಲಿ, ಯೌವ್ವನದಿಂದ ಮದಿಸಿರಲಿ, ವಿಹರಿಸುತ್ತಿರಲಿ, ದುಃಖಿಸುತ್ತಿರಲಿ, ಮದೋನ್ಮತ್ತವಾಗಿರಲಿ; ಒಂದು ಗಳಿಗೆಯೆಂದು ನೋಡದೇ ದೂತರು ಸೂಚಿಸಿದಾಗ ನಡೆಯುತ್ತಿರಲೇ ಬೇಕು.

೧೦. ಬೆಟ್ಟದಲ್ಲಿರಲಿ, ಗವಿಯಲ್ಲಿರಲಿ, ಕಲ್ಲಡಿಯಲ್ಲಿ ಅವಿತಿರಲಿ; ಸ್ವರ್ಗದಲ್ಲಿರಲಿ, ಭೂಮಿಯಲ್ಲಿರಲಿ, ಪಾತಾಳದಡಿಯಲ್ಲಿರಲಿ; ವೈಭವದಲ್ಲಿರಲಿ, ದೀನನಾಗಿರಲಿ, ಕಾಡಿನಲ್ಲಿರಲಿ; ಅವರು ತೋರಿಸಿದಾಗಲೇ ಬಳಲಿದವರೆಲ್ಲರೂ ಸುಮ್ಮನೇ ಯಾತ್ರಿಸಬೇಕು.

೧೧. ಸಾಗರದ ನಡುವೆಯಿರಲಿ, ಬೆಟ್ಟಗುಹೆಯನ್ನೇ ಹೊಕ್ಕಿರಲಿ ಭೋಗದಲ್ಲಿ ತಲ್ಲೀನನಾಗಿರಲಿ, ತನ್ನ ತಂದೆಯ ಮಡಿಲಲ್ಲೇ ಇರಲಿ; ನೂರು ಯಾಗವನ್ನು ಪೂರ್ಣಗೊಳಿಸಲಿ, ಮೂಢಮಾನವರೇ ಆಗಿರಲಿ; ಕಾಲನ ಭಟರು ತೋರಿಸಿದಾಗಲೇ ವೇಗವಾಗಿ ಅತ್ತಕಡೆ ಎದ್ದು ಹೋಗಬೇಕು.

೧೨. ಮುಂದೆ ತೇಲುತ್ತಿರುವನೊಬ್ಬನ ಕಾಲನ್ನು ಹಿಂದಿನವನೊಬ್ಬ ಹಿಡಿದು ನನ್ನನ್ನು ರಕ್ಷಿಸು ಎಂದು ಸಂಭ್ರಮಿಸುತ್ತ (ನೀರಲ್ಲಿ ಇಬ್ಬರೂ ಒಟ್ಟಿಗೇ ಕೊಚ್ಚಿಕೊಂಡು) ಹೋಗುವ ಹಾಗಿದೆ ಇದು. ನಂಬಿಕೆಯಿಲ್ಲದ ದೇಹವನ್ನೂ ಸುಸ್ಥಿರವೆಂದು ತಿಳಿದು ಮನುಷ್ಯರು ಹೆಣ್ಣು - ಮಣ್ಣು- ಸಂಸಾರ ಸಾಧನವೆಂದು ಹಂಬಲಿಸುತ್ತಾರೆ.

೧೩. ಹರಿಯನ್ನು ನೆನಸದಿರುವ ಈ ಸೋಮಾರಿಗಳ ಜಗತ್ತನ್ನು ಯಮದೂತರು ಬರಲಾರದ ಭಂಗವನ್ನು ಬರಿಸಿ ನರಕದೊಳಗೆ ತೊಳಲಾಡಿಸುವರು. ಹರಿಪರಾಯಣರಾದವರು ಇದಕ್ಕೆಲ್ಲ ಹೆದರುತ್ತಾರೆಯೇ? ಯಮನ ತಲೆ ಕಾಣದಂತೆ ದಾರಿ ಸರಿದು, ಆಗಮ ಸ್ಥಿತಿಯತ್ತ ಸಂಚರಿಸುತ್ತಾರೆ.

೧೪. ಹಗಲಲ್ಲಿ ಅಚ್ಯುತನ ಪಾದಕಮಲವನ್ನು ಚಿಂತಿಸುವರೇ ಅವರಿಗೆ ಸಮಯವಾದರೂ ಎಲ್ಲಿದೆ? ಆಗ ಬಗೆ ಬಗೆಯ ವಿಷಯ ವ್ಯವಹಾರ ಕಲ್ಪನೆಯೇ ಆಯಿತು. (ಇನ್ನು) ರಾತ್ರಿಯಲ್ಲಿ ಬಳಲಿ. ಗಾಢನಿದ್ರೆಯಾಯಿತು. ಹೀಗೆ ಮೂಢರಾದವರೆಲ್ಲರೂ ವೇದಗಳ ಸಾರವನ್ನು ತಿಳಿಯದೆ ಆಯುಷ್ಯವನ್ನು ಕಳೆಯುತ್ತಿರುತ್ತಾರೆ.

೧೫. ಬಾಲಕರಾಗಿದ್ದಾಗ ಅನೇಕ ಕೀಟಲೆಗಳನ್ನು ತೋರಿಸುವುದಾಯಿತು. ಬೆಳೆದ ಮೇಲೆ ಯೌವ್ವನ ಮದದಿಂದ ಕಾಮಪರಾಕ್ರಮ ಪ್ರದರ್ಶನವಾಯಿತು. ಬಾಲ್ಯ - ಯೌವ್ವನ ಕಳೆದು ಹೋದ ಮೇಲೆ ಮುದುಕರಾಗಿ ದಂಡನೆಗೊಳಗಾಗುವುದಾಯಿತು. ಹೀಗೆ (ಮೂಢರಾದ) ಈ ಜನಗಳು ಕಾಲನ ಆಲಯವನ್ನು ಪ್ರವೇಶಿಸುತ್ತಾರೆ.

೧೬. ತನ್ನ ತಂದೆ, ಮಗ, ಗೆಳೆಯ - ಎಲ್ಲ ಬಾಂಧವರೂ ತನ್ನ ಎದುರಲ್ಲೇ ಸತ್ತು ಹೋಗುವುದನ್ನು ಈ ಮನುಜರು ನೋಡುತ್ತಾರೆ. ಅಷ್ಟಾದರೂ ಅವರಿಗೆ ದೃಢಮನಸ್ಸೆಂಬುದಿಲ್ಲ. ಭಾಪುರೇ ಮಾಯಾ ಕಲ್ಪನೆಯೇ! ಶ್ರೀಹರಿಯ ಧ್ಯಾನವು ಎಳ್ಳಷ್ಟೂ ಮನಸ್ಸಿಗೆ ಒಡಿಸದಂತೆ ಈಕೆ ನೋಡುಕೊಳ್ಳುತ್ತಾಳಲ್ಲ!

೧೮. ಹಾಗಾದುದರಿಂದ ಮನುಷ್ಯರಾದವರು ಮನೆಕೆಲಸಗಳನ್ನೆಲ್ಲ ಪೂರೈಸಿ, ದಾನವಾಂತಕನ ಪಾದಭಕ್ತಿಯ ಸಾರವಾದ ಈ ಕಥೆಯನ್ನು ನಿತ್ಯವೂ ಹಾಡಬೇಕು. ಅದನ್ನು ನೆನೆಸಿ, ಹೊಗಳಿ, ಓದಿ ಶ್ರದ್ಧೆಯಿಂದಿರಲು ತಾನಾಗಿಯೇ (ಎಲ್ಲ) ದುಃಖವೆಂಬ ಸಮುದ್ರವೂ ನಾಶವಾಗುವುದು. ನೃಪತಿಯೇ ಇದಕ್ಕೆ ಸಂಶಯಬೇಡ.

೧೯. ಇದು ವೇದ, ಪುರಾಣ, ಶಾಸ್ತ್ರಯುಕ್ತವಾದ ಧರ್ಮದ ಹೃದಯದ ರಹಸ್ಯ. (ಧರ್ಮವೆಂದರೆ ವೇದ, ಪುರಾಣ ಮತ್ತು ಶಾಸ್ತ್ರಯುಕ್ತವಾದುದು) ಇದು ಅನೇಕ ಫಲಗಳುಳ್ಳ ಶ್ರೀ ಭಾಗವತಾರ್ಥ. ಇದುವೇ ಪುರುಷಾರ್ಥಗಳ ಸರ್ವ ಗುಣ. ಹರಿಭಕ್ತಿಗೇ ಇದುವೇ ಬೀಜ. ಇದನ್ನು (ಇನ್ನು ಮುಂದೆ) ಸೇವಿಸುವ ಪಂಡಿತರು ಶ್ರೇಷ್ಠ ಸೌಭಾಗ್ಯದ ಜನರಾಗುವರು.

೨೦. ಶ್ರೀ ಹರಿನಾಮಕ್ಕೆ ಸಂಬಂಧಿಸಿದ ಕಥಾಸಾರವನ್ನು ಯಾರು ತನೇ ಸೇವಿಸದಿರುವರು? ಯೋಗ ನಿಗೂಢರಾದ ಪುರಾಣ ಪಂಡಿತರು ಯಾರು ತಾನೇ ಈ ಕಥೆಯನ್ನು ಕೇಳದಿರುವರು? ಯಾರಿಗೆ ಬೇಕಾದರೂ ಭಕ್ತಿ ಸಿದ್ಧಿಸುವುದೆಂಬುದು ನಿಶ್ಚಯವೇ. ಈ ಕಥೆಯ ಬೇರು ಇದೀಗ ನಿಶ್ಚಯವಾಗಿಯೂ ನನ್ನ ಬುದ್ಧಿಯಲ್ಲಿ ಸ್ಥಾಪನೆಯಾಗಿದೆ.

೨೧. ತಂದೆಯಾದ ವ್ಯಾಸ ಮುನೀಂದ್ರರ ಕರುಣೆಯಿಂದ ನನಗಿದು ಒದಗಿ ಬಂದಿದೆ. ದ್ವಾಪರಾಯುಗದಲ್ಲಿ ಈ ಮಹಾಕವಿತಾರಸವು ಸಂದು ಹೋಗಿರುವುದಾಗಿದೆ. ಛಂದೋಭರಿತವಾಗಿ ರಚಿಸುವ ಈ ಪುಣ್ಯನಾಮ ಸಮುದ್ರವನ್ನು (ಎಲ್ಲರೂ) ಗಮನವಿಟ್ಟು ಕೇಳಿ. ಭೂಪತಿಯು ದೃಢಚಿತ್ತನಾಗಿ (ಅವರ ಮುಂದೆ) ನಿಂತಿದ್ದನು.

೨೨. ಬಳಿಕ ಶುಕರು ಪರೀಕ್ಷಿತನನ್ನು ಕುರಿತು ಹೀಗೆಂದರು: ಭೂಮಿಗೊಡೆಯನೇ, "ಈ ಪುರಾಣ ಗುಟ್ಟಿನ ಬಗೆಗೆ ಯಾರಿಗೆ ದೃಢ ನಿಶ್ಚಯ ಉಂಟಾಗುವುದೋ ಅವರು ಶ್ರೀಹರಿಯ ಚರಣ ಭಕ್ತಿಯಲ್ಲಿ ದೃಢತೆಯನ್ನು ಪಡೆದು ನಿರ್ಮಲರಾಗುತ್ತಾರೆ. ತಾಪವೆಲ್ಲವನ್ನೂ ನಾಶಗೈದು, ಕತ್ತಲೆಯನ್ನು ಕಳೆದು, ಭವವೆಂಬ ಕೂಪದಿಂದ ಮೇಲೆತ್ತುವ ಈ ಇತಿಹಾಸವನ್ನು ನೀನು ಕೇಳಬೇಕು.

೨೩. ಹಲವು ಯೋನಿ ಮುಖದಿಂದ ಬಂದಿರುವುದರಿಂದ, ತಲೆತುಂಬಾ ಹುಣ್ಣಾಗಿರುವ ನಾಯಿಯಂತೆ ನೆಲೆಕಾಣದೆ ನೆಗೆದಾಡುತ್ತಲೂ ಇರುವ ಜೀವವಿದು. ಹೊಕ್ಕುಳಲ್ಲಿ ಕಮಲವಿರುವ ಶ್ರೀಹರಿಯ ಭಕ್ತಿಯು ದೃಢವಾಗಿ ನೆಲೆಯಾಯಿತೆಂದರೆ ಅದಕ್ಕಿಂತ ಮಿಗಿಲಾದ ಸುಖವು ಇನ್ಯಾರಿಗಿದೆ?

೨೪. ಆತನ ಗುಣಗಳನ್ನು ಮರೆತು ಅನೇಕ ದಿನಗಳ ವರೆಗೆ ಬದುಕಿ ಫಲವಾದರೂ ಏನು? ನಿಜವಾಗಿ ಹೇಳುವುದಾದರೆ ಈ ಎರಡೇ ಘಳಿಗೆ ಪರಿಪೂರ್ಣವಾದುದು. ಇದು ತೆರೆದಿಟ್ಟಿರುವ ಚರಿತೆಯಲ್ಲವೇ? ಪುರಷಾರ್ಥ ನಾಲ್ಕರಲ್ಲಿ ಇದುವೇ ಶಾಶ್ವತವಾದುದು. ಇದು ಆಗದಿದ್ದರೆ ಏನು ತಾನೇ ಪ್ರಯೋಜನ? ಇದಕ್ಕೆ ಈ ಜನ್ಮವೇ ಮೂಲವಾದುದು.

೨೫. ಸೃಷ್ಟಿಪಾಲನಾದ ರಾಜನೇ, ಇತ್ತ ಕೇಳು. ಹಿಂದೆ ಖಟ್ವಾಂಗನೆಂಬ ರಾಜಋಷಿಗೆ ಎರಡೇ ಗಳಿಗೆಯಲ್ಲಿ ಮುಕ್ತಿಯು ಲಭಿಸಿತು. ಇದನ್ನು ತಿಳಿದು ಎಲ್ಲ ಪುರಾಣ ಕಥಾ ತತ್ತ್ವಾರ್ಥಗಳನ್ನು ಒಟ್ಟಾಗಿ ಕೇಳಿ ಒಂದೇ ದೃಷ್ಟಿಯಿಂದ ಧ್ಯಾನಿಸಬೇಕು. ಅದಕ್ಕೆ ಈ ಜನ್ಮವೇ ಮೂಲವೆನಿಸುತ್ತದೆ.

೨೬. ನೃಪತಿಯೇ, ನಿನಗೆ ಏಳು ದಿವಸಗಳ ಆಯುಷ್ಯವು ಇನ್ನೂ ಇರುವುದು. ಇದನ್ನು ವಿವರವಾಗಿ ತಿಳಿದು ಪೂಜಿಸಿದರೆ ಅಪಾರವಾದ ಪುಣ್ಯವು ನಿನಗೆ ಲಭಿಸುವುದು. ಅವಿವೇಕವನ್ನು ನಿವಾರಿಸಿ, ಇಹ - ಪರಗಳೆರಡಕ್ಕೂ ವಿಧಿಸಿರುವ ಕರ್ಮವನ್ನು ಶ್ರೀಹರಿಗೆ ಒಪ್ಪಿಸಿದೆಯೆಂದಾದರೆ ನೀನು ಸತ್ಯವಾಗಿಯೂ ಮುಕ್ತಿಪದವನ್ನು ಪಡೆಯುವೆ.

೨೭. ದೇಹದಿಂದ ಪ್ರಾಣವು ಹೋಗುತ್ತಿರುವ ಕಾಲಕ್ಕೆ ಅತಿಯಾಗಿ ಕಂಪಿಸುವುದು ಸಲ್ಲ. ಉದ್ವೇಗ ಪಡವೆ ಗಟ್ಟಿಯಾದ ಮನಸ್ಸು ಹೊಂದಬೇಕು. ವಿಷಯಗಳನ್ನು ತ್ಯಜಿಸಿ, ಹತ್ತು ದಿಕ್ಕುಗಳ ಪಾಶವನ್ನು ಕತ್ತರಿಸಬೇಕು. ಮನೆ-ಮಕ್ಕಳು-ಹೆಂಡತಿ ಇತ್ಯಾದಿ ಮೋಹಗಳನ್ನು ಬಿಡಬೇಕು. ಧಾರಣಯೋಗದ ಮೂಲಕ ಮುಕ್ತಿಯನ್ನು ಎಲ್ಲರೂ ಸಂಪಾದಿಸಬೇಕು.

೨೮. ಇಂದ್ರಿಯಗಳನ್ನು ತನ್ನ ಬುದ್ಧಿಯೊಳಗು ಮಾಡಿ, ನಿಶ್ಚಿಂತೆಯಿಂದ ಕುಳ್ಳಿರಿಸಬೇಕು. ಶರೀರ ವಿಕಲ್ಪನೆಗಳಿಗೆ ಸೋಲದೆ ಅಂತಃಕರಣದಲ್ಲಿ ಸಚ್ಚಿನ್ಮಯನ ಯೋಗಧಾರಣೆ ಮಾಡಬೇಕು. ಹೀಗೆ ಸ್ಥೂಲಾತ್ಮಕನಾಗಿ ಸತ್ ಚಿಂತೆಯಲ್ಲಿ ತೊಡಗಿದಾಗ ಸರ್ವರಿಗೂ ಮುಕ್ತಿಯುಂಟಾಗುತ್ತದೆ.

೨೯. ಹೀಗೆಂಬ ಮುನೀಶ್ವರನ ಮಾತಿನ ಧಾರೆಯ ಸಾರವನ್ನು ಕೇಳಿದ ನೃಪತಿಯು ಮುಗುಳುನಗೆಯನ್ನು ತಾಳಿದನು. ಮನದಲ್ಲಿ ಅಧಿಕ ಕುತೂಹಲಗೊಂಡನು. ಚಂದ್ರಕುಲದವನಾದ ಆ ನೃಪತಿಯು ಬಳಿಕ ಈ ಧಾರಣ ಯೋಗವನ್ನು ನನ್ನ ಕುತೂಹಲವು ನಿವಾರಣೆಯಾಗುವಂತೆ ಅರಿತುಕೊಳ್ಳುವ ಉಪಾಯವನ್ನು ತಿಳುಹಿಸಿರಿ ಎಂದನು.

೩೦. ಹಾಗಾದರೆ ನಾನು ಹೇಳುವುದನ್ನು ಚೆನ್ನಾಗಿ ಕೇಳು. ಧಾರಣಯೋಗದ ಬಗೆಗೆ ನಾನು ಧ್ಯಾನಿಸಿ ಹೇಳುತ್ತೇನೆ. ಮನಸ್ಸನ್ನು ದೃಢಗೊಳಿಸಿ ನಿರ್ಧಾರಾತ್ಮಕವಾಗಿ ಭಜಿಸುವ ಜನಗಳಿಗೆ ರೂಪಾಕೃತಿಯಾದ ಪುಣ್ಯಪುರುಷನ ಸ್ಥೂಲ ಶರೀರದ ಅವಯವಗಳಲ್ಲಿಯೇ ಬ್ರಹ್ಮಾಂಡವೇ ಅಡಗಿರುತ್ತದೆ. ಇದನ್ನು ವಿಶದವಾಗಿ ಹೇಳುತ್ತೇನೆ.

೩೧. ಆತಳ ವಿತಳ ಸುತಳಗಳೆಂಬುವು ಆತನ ಸೊಂಟ ಮತ್ತು ಹಿಂಭಾಗದಲ್ಲಿರುವವು. ರಸಾತಳವು ಮಂಡಿಭಾಗದಲ್ಲಿಯೂ ಮಹಾತಳವು ಮುಂಗಾಲಿನ ಕೆಳಗೂ ಇರುವುದು. ತಳಾತಳವೂ ಅದರಡಿಯಲ್ಲಿರುವ ಪಾತಾಳವೂ ಆತನ ಹೊಳೆಯುತ್ತಿರುವ ಪಾದದಲ್ಲಿಯೂ

೩೨. ಭೂಲೋಕ, ಮಹಾಭುವರ್‌ಲೋಕ, ಸ್ವಲೋಕ, ಮಹಾಜನ ಲೋಕಗಳು ಅಂಗಾಲಿನಲ್ಲಿ ಇವೆ. ಸತ್ಯಲೋಕವು ಸ್ಥೂಲಾತ್ಮಕನಾದ ಶ್ರೀಹರಿಯ ಹೊಕ್ಕುಳಿನ ಕೆಳಗೂ, ವರಲೋಕವು ನೆತ್ತಿಯಲ್ಲಿಯೂ ನೆಲೆಯಾಗಿರುವುದನ್ನುಒಂದೊಂದಾಗಿ ಚಿಂತಿಸಬೇಕು.

೩೩. ತಲೆ, ಮೂಗು, ದೃಷ್ಟಿ, ಕಿವಿ, ಮುಖ, ಪಾದಗಳು, ತೋಳುಗಳಲ್ಲಿ ವಿರಾಡ್ಪುರುಷ ಸಾರಸಾರವೆಲ್ಲವೂ ಇದೆ. ಆತನ ಶರೀರದಲ್ಲಿ ಅಷ್ಟದಿಕ್ಕುಗಳೂ ಸುರಾಸರರೂ, ಮಾನವರೂ, ಪಕ್ಷಿ ಸಂಕುಲವೂ ಮೊಟ್ಟೆಯಿಂದ ಹುಟ್ಟುವ, ದೇಹದಿಂದ ಹುಟ್ಟುವ, ಬೆವರಿನಿಂದ ಹುಟ್ಟುವ ಜೀವಿಗಳೆಲ್ಲವೂ, ನಿರಾತ್ಮಕಗಳೆಲ್ಲವೂ ಜನಿಸುತ್ತವೆ.

೩೪. ಇಂತಹ ಸೂತ್ರಧಾರಿಯಾದ ಮಹಾಪುರುಷನ ಅಂಶವಾದ ಒಂದು ಅವತಾರವು ಸೂಕ್ಷಾಂತರವಾಗಿದೆ. (ಅದರ ಬಗೆಗೆ) ನಾನು ಜತನದಿಂದ ಇನ್ನು ಮುಂದೆ ಹೇಳುತ್ತೇನೆ. ಹೃದಯದಲ್ಲಿ ಬೇಗುದಿಯನ್ನು ಪಡದೆ ಸತ್ ಚಿಂತೆಯಲ್ಲಿ ತೊಡಗಿರಬೇಕಾದರೆ ಮುಂದಿನ ಉಪಾಯವೊಂದನ್ನು ಆಲಿಸು.

೩೫. ಉಂಗುರವಿಟ್ಟ ಬೆರಳುಗಳ ಕಾಂತಿಯೊಂದಿರಲು, ಉಗುರಿನ ಹೊಳಪಿನಿಂದಲೂ ಗಟ್ಟಿಯಾದ ಕಾಲುಗಳು, ಮಂಡಿ ಹಿಂಭಾಗ, ಸೊಂಟ, ನೆರಿಗೆ ನೆರಿಗೆಯಾಗಿ ಉಟ್ಟ ಪಿತಾಂಬರವೂ ನೇವಳವೂ ಇರಲು, ಹೊಕ್ಕುಳ ಬಳಿಯ ತ್ರಿವಳಿಗಳಾದಿಯಾಗಿ.

೩೬. ನಡು ಭಾಗದಲ್ಲಿರುವ ಬಾಸೆ, ವಿಸ್ತಾರವಾದ ಎದೆ, ಕೌಸ್ತುಭ, ವೃಕ್ಷಸ್ಥಲ, ನಿಡಿದಾದ ನಾಲ್ಕು ಶಂಖದಂತಹ ಕೊರಳು ಬಾಹೂಗಳೂ ಹೊಳಪಿಗೆ ಧರಿಸಿದ ಮಣಿಮುದ್ರೆ, ಬಳೆಯಿಂದ ಶೋಭಿತವಾದ ಶಂಖದಂತಹ ಕೊರಳು ಸರ್ವಾಭರಣಾದಿಯಾಗಿ ನೀನು ಹೃದಯಕಮಲದಲ್ಲಿ ಅವನನ್ನು ಭಕ್ತಿಯಿಂದ ಭಜಿಸಬೇಕು.

೩೭. ಸುಂದರವಾದ ಕೆನ್ನೆ ಹಾಗೂ ಗಲ್ಲ, ತೊಂಡೆ ತುಟಿ, ಬಿಳಿದಾದ ಹಲ್ಲುಗಳ ಸಾಲು, ಮೂಗು, ಮುಗುಳುನಗೆ, ವರಕುಂಡಲ, ಬಳ್ಳಿಯಂತಹ ಹುಬ್ಬುಗಳು, ಸುಂದರವಾದ ಕಣ್ಣುಗಳು, ಪೂರ್ಣಚಂದ್ರನಂತಿರುವ ಮುಖಮಂಡಲಾದಿಯಾಗಿ ಮರೆಯದೆ ಹೃದಯಕಮಲದಲ್ಲಿ ನೆಲೆಗೊಳಿಸಬೇಕು.

೩೮. ಅರ್ಧಚಂದ್ರನ ಸೊಬಗನ್ನು ಮೀರುವ ಹಣೆ, ಮುಂಗುರುಳು, ಹತ್ತುದಿಕ್ಕುಗಳಿಗೂ ಬೆಳಗುತ್ತಿರುವ ರತ್ನಖಚಿತವಾದ ದೊಡ್ಡ ಕಿರೀಟ ಕರುಣಾಕರನೂ, ನೀಲಿಬಣ್ಣನೂ, ಶುಭನೂ, ಪರಿಪೂರ್ಣ ನೂ ಗುಣಾಢ್ಯನೂ ಎಂದಾತನ ಸೌಂದರ್ಯವನ್ನು ಬುದ್ಧಿಯಲ್ಲಿ ನೆಲೆಗೊಳಿಸಿ, ಪ್ರೀತಿಯಿಂದ ನಿರೂಪಿಸಿಕೊಳ್ಳಬೇಕು.

೩೯. ಪಾದಗಳ ಧೂಳು, ಉಂಗುರವಿಟ್ಟ ಬೆರಳು, ಪಾದ, ಪಾದದ ಹರಡು, ಮಂಡಿ, ಕಾಲು, ನಡು, ನಡುಭಾಗ, ತ್ರಿವಳಿಗಳು, ಶ್ರೀವಕ್ಷ, ಕೊರಳು, ನಾಲ್ಕು ಕರಗಳಲ್ಲಿರುವ ಶ್ರೇಷ್ಠವಾದ ಆಯುಧ, ಮುದ್ದುಮುಖ, ಕುರುಲಾಳಿ, ಕಿರೀಟ - ಈ ರೀತಿಯಾಗಿ ಆತ್ಮದಲ್ಲಿ ಆತನ ಸೌಂದರ್ಯವನ್ನು ನಿರೂಪಿಸಿ ಆರಾಧಿಸಬೇಕು.

೪೦. ಸಾವಿರ ಸೂರ್ಯರನ್ನು ಮೀರಿಸುವ ಕಿರೀಟಶ್ರೀ, ತಾವರೆಯಂತಿರುವ ಮುಖದ ಕಾಂತಿ, ಕಮಲದ ನಾಳದಂತಿರುವ ಕೊರಳು, ಅಗಲವಾದ ಎದೆ, ನಡು, ಹೊಕ್ಕುಳು, ತೆಳುವಾದ ಸೊಂಟದ ಭಾಗ, ಜಂಘೆ, ಜಾನು, ಪಾದ, ಉಗುರು, ವೀರಮುದ್ರೆ, ಅಂಕುಶ, ಧ್ವಜ, ಪಾದರೇಖೆ -ಹೀಗೆ (ವಿವರ ವಿವರವಾಗಿ) ಧ್ಯಾನಿಸಬೇಕು.

೪೧. ಇದು ದ್ವಿತೀಯ ಸ್ಕಂಧದ ಪ್ರಥಮಾಧ್ಯಾಯ. ಆಧ್ಯಾತ್ಮ ತಲದಲ್ಲಿ ದೃಢವಾಗಿದ್ದು, ಸ್ಥಿರವಾದ ಬುದ್ಧಿಯಿಂದ ಭಜಿಸುವ ಬುದ್ಧಿಯಿಂದ ಇದನ್ನು ಆಲೈಸಬೇಕು. ಹೀಗೆ ಮಾಡಿದರೆ ಗೋವರ್ಧನ ಪರ್ವತವನ್ನು ಎತ್ತಿ ಹಿಡಿದ ಶ್ರೀಕೃಷ್ಣನ ಪಾದವನ್ನು ಕೀರಾಬ್ಧಿ ಪಟ್ಟಣದಲ್ಲಿ ಸೇವಿಸುತ್ತಿರಬಹುದು.

ಅಧ್ಯಾಯ ೨

೧. ಶೌನಕರೇ ಇನ್ನು ಮೇಲೆ ಉತ್ತಮವಾದ ಕಥಾ ಸಾರವನ್ನು ಕೇಳಿರಿ. ವೀರಾಗ್ರಣಿಯಾದ ಪರೀಕ್ಷಿತನಿಗೆ ಅವರು ಉಪದೇಶಿಸಿದ ಭಗವತ್ಸುಧೆಯನ್ನು ಕೇಳಿರಿ. ಈ ಮೂರ್ತಿಯನ್ನು (ಶ್ರೀ ಹರಿಯನ್ನು) ನಂಬುವ ಯಾರಿಗಾದರೂ ಕಾಲಭಯವೆಂಬುದು ಇಲ್ಲವೆಂದು ಪ್ರಸಿದ್ಧಿಯೇ ಇದೆ.

೨. ಈ ಮೂರ್ತಿಯನ್ನು ಮನಸ್ಸಿನಲ್ಲಿ ದೃಢಗೊಳಿಸಿ, ಸ್ಥಿರಗೊಳಿಸಿದರೆಂಬ ಮನುಷ್ಯರಿಗೆ ಯಮನ ಭಯವೆಲ್ಲಿದೆ? ಅಪಮೃತ್ಯುವೂ ಒದಗಲಾರದು. ಆ ಮುಕ್ತಿ ಸುಖಕ್ಕೆ ಸಮನಾದ ಸುಖ ಇತರ ಹಲವು ಯುಕ್ತಿಗಳಲ್ಲಿಲ್ಲ. ಸ್ವಾಮಿಯ ರೂಪ ಮತ್ತು ತಾನು ಇವೆಲ್ಲದರ ಹೊರತು ಜಗವೆಲ್ಲವೂ ಶೂನ್ಯವಾಗಿರುವುದು.

೩. ಈ ಮೂರ್ತಿಯ ಗುಣಗಳನ್ನು ಚಂಚಲಗೊಳ್ಳದೆ, ಸ್ಥಿರವಾಗಿ ಬುದ್ಧಿಯಲ್ಲಿ ನೆಲೆಗೊಳಿಸಿದ ಮಾನವರಿಗೆ ಮತ್ತೆಯಮನ ಭಯವೆಲ್ಲಿದೆ? ಹದಿನಾಲ್ಕು ಜಗತ್ತಿನಲ್ಲೆಲ್ಲೂ ಅವರಿಗೆ ಯಾವ ಮಾಯೆಯೂ ಎದುರಾಗದು. ತಮ್ಮಿಷ್ಟಕ್ಕೇ ತಾವಿದ್ದು, ಯಾವುದೇ ಸಂಶಯಗಳಿಲ್ಲದೆ ಅವರು ಆನಂದಪದದಲ್ಲಿ ಸುಖಿಸುತ್ತಾರೆ.

೪. ಎಲ್ಲ ಯುಗಗಳೂ ಜನಾರ್ದನನ ಪಾದಗಳಿಂದಲೇ ಉದ್ಭವವಾಗಿವೆ. ಸಂಪೂರ್ಣವಾಗಿ ಅಲ್ಲಿಂದಲೇ ಪ್ರಕಾಶಿಸಿವೆ. ಮತ್ತು ಹೆಚ್ಚಳವಾಗಿವೆ. ಹಾಗೆಯೇ ಲಯವಾಗಿದೆ. ಈ ಒಳಗನ್ನು ಬಲ್ಲ ಮಹಾತ್ಮರು ಆ ಸಂಸ್ಕಾರ ಬಲದಿಂದ ಎಲ್ಲವೂ ವಿಷ್ಣುಮಯವೆಂದು ತಿಳಿದು, ಭೇದವೆಣಿಸಿದೆ ಅಗಲಿರುತ್ತಾರೆ.

೫. ಇದನ್ನು ತಿಳಿಯದ ಅವಿವೇಕಿಗಳು ತಾಪತ್ರಯವೆಂಬ ಸಾಗರದಲ್ಲಿ ವಿಷಯ ಸುಖದ ಕಾರಣದಿಂದಾಗಿ ತಲೆಕೆಳಗಾಗಿ ಮುಳುಗುತ್ತಾರೆ. ಅಂತಹ ಮದ ಮತ್ತರನ್ನು ನರಕದೊಳಗೆ ಕಾಲಿನಿಂದ ಒದೆಯುತ್ತಾರೆ. ಅವರು ಹರಿಪದವನ್ನು ಚಿಂತಿಸದೆ, ಅಲ್ಲೇ ಹುಟ್ಟಿ, ಅಲ್ಲೇ ಸಾಯುತ್ತಾರೆ.

೬. ಮನುಷ್ಯರಿಗೆ ಹಿಂದಿನ ಜನ್ಮದ ಫಲದಿಂದ ಸುಖ, ದುಃಖಗಳುಂಟಾಗುತ್ತವೆ. ಶರೀರವನ್ನು ಸೇರಿಕೊಳ್ಳುವ (ಈ) ಕರ್ಮಫಲಗಳನ್ನು ಯಾರಿಂದ ಮೀರಲಾದೀತು? ಘೋರವಾದ ಪಾಪ ಮತ್ತು ಪುಣ್ಯಗಳ ಫಲವಾಗಿ ಬರುವ ಪ್ರೇರಣೆಯನ್ನು ಯಾರಿಗೆ ತಾನೇ ತಪ್ಪಿಸಲಾದೀತು?

೭. ಬೇಡಾ ಎಂದು ನಿಷೇಧಿಸಿದರೆ ಶರೀರದ ಅನುಭವಗಳು ಹೋಗಲಾರವು. ಬೇಡಾ ಎಂದು ಅತಿಯಾಗಿ ದಂಡಿಸಿದರೂ ದುಃಖಗಳು ಬರಲಾರವು. ಮೂಡಾತ್ಮರಾಗಿ ಮನುಷ್ಯರು ಆಯುಷ್ಯವನ್ನು - ಓಡುವ ಮನಸ್ಸನ್ನು ಹರಿಚಿಂತನೆಯಲ್ಲಿ ನಿಲ್ಲಿಸದೆ - ಕೇಡುಗೊಳಿಸಿಕೊಳ್ಳುತ್ತಾರೆ.

೮. ಈ ಭೂಮಿಯೇ ಇರುವಾಗ ಹಾಸುಗೆಯೇಕೆ? ಮಂಚಗಳ ಮೌಢ್ಯವೇಕೆ? ತಲೆಯನ್ನಿಡುವುದಕ್ಕೆ ಕೈಗಳಿರುವಾಗ ತಲೆದಿಂಬುಗಳೇಕೆ? ನಾರುಡುಗೆಗಳಿರುವಾಗ ಬಟ್ಟೆಗಳೇಕೆ? ವಿದ್ಯಾಭರಣ ಇರುವಾಗ ಚಿನ್ನ, ಬೆಳ್ಳಿ, ಎನ್ನುವ ಅನರ್ಥಕಗಳಾದ ಆಭರಣಗಳು ಏಕೆ?

೯. ಬೊಗಸೆಯಿರುವಾಗ ಬಟ್ಟಲುಗಳೇಕೆ? ಗುಡ್ಡಗವಿಗಳಿರುವಾಗ ಮನೆಯೇಕೆ? ಹಣ್ಣು - ಹಂಪಲುಗಳಿರುವಾಗ ಕ್ಷೇತ್ರ, ಧನಧಾನ್ಯಗಳೇಕೆ? ನದಿ, ತೀರ್ಥಗಳಿರುವಾಗ ಕೆರೆ - ಬಾವಿ - ಕೊಳಗಳೇಕೆ? ಮುಕ್ತಿ ಸುಖ ಇರುವಾಗ ಸ್ತ್ರೀಯರ ಸುಖವೇಕೆ? ಇದನ್ನು ಬಿಟ್ಟುಜಗತ್ತು ಏಕೆ ಮರುಳಾಗಿದೆ?

೧೦. (ಶ್ರೀಹರಿಯನ್ನು) ತಿಳಿದ ಮನುಜರು ಜಗತ್ತಿನಲ್ಲಿಯೇ ಎಲ್ಲ ಗುಣಗಳುಳ್ಳವರಾಗಿದ್ದಾರೆ. ಬಂಧುವರ್ಗದವರು ನಿರೀಕ್ಷಿಸಿದಕ್ಕಿಂತಲೂ ಹೆಚ್ಚಾಗಿ ನಿತ್ಯವೂ ಆಧರಿಸುತ್ತಾರೆ. ಶ್ರೀಹರಿಯ ಭಕ್ತಿಯು ಇಚ್ಛಿಸಿದವರಿಗೆ ತಂದೆ - ತಾಯಿಗಳಾಗಿವೆ. ಭಕ್ತವತ್ಸಲನು ಎಲ್ಲವನ್ನೂ ಅರಿತು ತಾನೇ ಅನುಗ್ರಹಿಸುತ್ತಾನೆ.

೧೧. ಈ ಸುಖದ ಸಂಘವನ್ನು ಸಂಪಾದಿಸಿ ನಿತ್ಯವೂ ಸುಖಿಯಾಗಿರದೆ, ವಿಷಯಗಳಲ್ಲಿ ಮುಳುಗಿ ನೋವಿನಿಂದ ದಂಡನೆಗೊಳಗಾಗುತ್ತಾರೆ. ಆಶೆ ಎನ್ನುವ ದೊಡ್ಡದಾದ ಬಳ್ಳಿಯನ್ನು ಕಡಿಯುದೆ, ಧರ್ಮವನ್ನು ಚರಿಸಿದವರಾಗಿ ಇವರು, ಏನೂ ಸಿದ್ಧಿಯೂ ಆಗದೆ, ಭೂಮಿಯಲ್ಲೇ ಸುತ್ತುತ್ತಾ ಇರುತ್ತಾರೆ.

೧೨. ಯೌಗಿಕ ಅನುಭವಗಳನ್ನು ಮನುಷ್ಯರಾರೂ ಬಯಸಬೇಕಾಗಿಲ್ಲ. ವಿಧಿ ಕಲ್ಪನೆಯನ್ನು ಬಿಡದೆ ತಾವೇ ಬಂದು ಅವು ಅನುಕೂಲಕ್ಕೊದಗುತ್ತವೆ. ದುಃಖ ಬರಬೇಕೆಂದು ದುಃಖಿಗಳೇ ಆದರೂ ಬಯಸುತ್ತಾರೆಯೇ? ಮುಕುಂದನ ಭಕ್ತಿಗೆ ಯಾವುದೇ ಇಷ್ಟಾರ್ಥಗಳು ಬೇಕಾಗಿಲ್ಲ.

೧೩. ಆತ್ಮ ಎಂಬ ಮನೆಯಲ್ಲಿ ಯಾವಾಗಲೂ ಸಂತೋಷದಲ್ಲಿರುವವನೇ ರಾಜ. ಸಂತೋಷಪಟ್ಟರೂ ಅವನೇ ಇಲ್ಲಿ ದೇವೇಂದ್ರನೂ ಬ್ರಹ್ಮನೂ ಆಗುತ್ತಾನೆ. ಸಂತೋಷಗೊಂಡ ಮಹಾಜನಗಳೇ ಪರಬ್ರಹ್ಮ ಸ್ವರೂಪರು. ಇದನ್ನು ಸರಿಯಾಗಿ ತಿಳಿಯಬೇಕು.

೧೪. ಸಂತೋಷ ಪಡದ ರಾಜನು ದರಿದ್ರನೇ. ಅದಿಲ್ಲದ ದೇವೇಂದ್ರನೂ ಅಧಮನೆಂಬುದು ಲೋಕ ಪ್ರಸಿದ್ಧವೇ. ಸಂತೋಷ ಇಲ್ಲದ ಚತುರ್ಮುಖನೂ ದುರ್ಮುಖನೇ. ಇದನ್ನು ಸರಿಯಾಗಿ ತಿಳಿ. ಹಾಗೆಯೇ ಸಂತೋಷ ಇಲ್ಲದ ಈ ಮಹೇಶ್ವರನೂ ಕನಿಷ್ಠನೆಂಬುದನ್ನು ತಿಳಿಯಬೇಕು.

೧೫. ರಾಜಶ್ರೇಷ್ಠನೇ, ನೀನು ಸಂತೋಷವನ್ನು ಪಡಕೊಂಡು ನಿತ್ಯವೂ ಸುಖಿಯಾಗಿರು. ನಿನ್ನನ್ನು ಕೆಡಿಸುವ ಬಯಕೆಯನ್ನು ಮನಸ್ಸಿನಿಂದ ತ್ಯಜಿಸಿ, ಮನಸ್ಸಿಗೆ ಒಪ್ಪಿದ ಶ್ರೀಹರಿಯ ಪಾದಕಮಲದ ರಸವನ್ನು ಹೀರಿ ಅತಿಯಾಗಿ, ಬೆಳೆದು ಬುದ್ಧಿಪೂರ್ವಕವಾಗಿ ಕಷ್ಟಕರ್ಮವನ್ನು ತ್ಯಜಿಸು.

೧೬. ಭೂಮಿಗೊಡೆಯನೇ ಕೇಳು! ಯೋಗೀ ಜನಗಳಿಗೆ ಮುಕ್ತಿ ಲಭಿಸುವರೇ ಪ್ರೇರಣಾರ್ಥಕವಾದ ಎರಡು ಸತ್ಪಥಗಳಿವೆ. ಇದನ್ನು ಮನವಿಟ್ಟು ಕೇಳು. ಸಾರವೆನಿಸಿದ ಅಭ್ಯಾಸಯೋಗವನ್ನು ಮನಸ್ಸಿನಲ್ಲಿ ನಿರ್ಧರಿಸಿ, ವೀರತ್ವವನ್ನು ಸಂಗ್ರಹಿಸಿ ಇಷ್ಟಾರ್ಥವನ್ನು ಸಾಧನೆಗೈಯುತ್ತಾರೆ.

೧೭. ಗಾಳಿಯನ್ನು ಹೃದಯದಲ್ಲಿ ಸ್ಥಾಪಿಸಿ, ಎಲ್ಲ ದ್ವಾರಗಳನ್ನು ಕ್ಷಣ ಬಂಧಿಸಬೇಕು. ಹಾರಾಡುವ ಮನಸ್ಸನ್ನು ಆತ್ಮಗೃಹದಲ್ಲಿ ಸ್ಥಾಪಿಸಿ, ಅಲ್ಲಿಂದಲೂ ಮೆಲ್ಲನೆ ಎಬ್ಬಿಸಬೇಕು. ದೃಷ್ಟಿಯನ್ನು ಮೇಲ್ಮುಖವಾಗಿಸಿ, ಮಧ್ಯನಾಡಿಗೆ ತಂದು, ಆತ್ಮನನ್ನು ನೆತ್ತಿಯಲ್ಲಿ ಪ್ರೇರೇಪಿಸಬೇಕು.

೧೮. ನಡುನೆತ್ತಿಯ ಮಧ್ಯೆ ವೈಹಾಯಸದ ಹಾಗೆ ಒಡೆದು, ಮೇಲ್ಮುಖವಾಗಿ, ನೆಲೆಗೊಂಡಿರುವ ಅಷ್ಟ ವಿಧದ ಅನುಭವಗಳನ್ನು ನಿತ್ಯವೂ ಬಿಡದೆ ಅನುಭವಿಸಬೇಕು. ಸಂತೋಷಗೊಂಡು ಭೂಮಿಯಲ್ಲಿ ಅವತಾರಗೊಂಡು ಆ ಮಹಾಗುಣಿಗಳಾದ ಯೋಗಿಗಳು ಕಲ್ಪಾಂತರದ ವರೆಗೆ ಭೂಮಿಯಲ್ಲಿ ಅವತಾರಗೊಳ್ಳುತ್ತಾರೆ.

೧೯. ಹೀಗೆ ಜನಗಳಿಗೆ ಯೋಗ ಮತವೊಂದಿದೆ. ಇನ್ನು ಮತ್ತೊಂದು ಅದ್ಭುತ ಪ್ರಯೋಗವನ್ನು ಈಗ ಕೇಳಿರಿ. ಇದನ್ನು ಚೆನ್ನಾಗಿ ತಿಳಿಯಬೇಕಾದ ಕಾರಣದಿಂದ ನಾನು ತಿಳಿಯಹೇಳುತ್ತೇನೆ ಎಂದು ಅವರು ರಾಜನಿಗೆ ವೈಹಾಯಸ ಯೋಗವನ್ನು ಉಪದೇಶಿಸಿದನು.

೨೦. ಪರಮೇಶ್ವರನ ಪಾದಗಳನ್ನು ಇಚ್ಛಿಸುವ ಈ ಸಂಬಂಧದಲ್ಲಿ ಸುಷುಮ್ನಾ ದ್ವಾರದಿಂದ ಹೊರಟು ನಿರ್ಗಮಿಸಿ, ವೈಶ್ವಾನರ ಲೋಕವನ್ನು ಮೀರಿ ಅಲ್ಲಿಂದ ಶಿಂಶುಮಾರಾ ಚಕ್ರದಲ್ಲಿ ಸುಖಿಸಿ, ಅತೀ ಸೂಕ್ಷ್ಮ ಪಥಗಳನ್ನು ಸೇರಿ, ತಪೋಲೋಕಕ್ಕೆ ಯೋಗಿಯು ಗಮಿಸುವನು.

೨೧. ಇದ್ದ ಹಾಗೆಯೇ ಅನೇಕ ದಿನ ನಿಲ್ಲುವಾಗ ಸಿಟ್ಟುಗೊಂಡ ನಾಗರಹಾವಿನ ಮುಖದಿಂದ ಹೊರಟ ಬೆಂಕಿಯ ಹಾಗೆ - ಜಗತ್ತು ಲಯವಾಗುವುದು. ಅಲ್ಲಿಂದ ಆತನು ಸಿದ್ಧಪದಕ್ಕೆ ಬಂದು ಅಲ್ಲಿಂದ ಆನಂದ ಪದಕ್ಕೆ ಬರುತ್ತಾನೆ. ಮತ್ತೆ ಪರಮೇಷ್ಠಿ ಪದವನ್ನು ನಿತ್ಯವೂ, ಬಿಡದೆ ಅನುಭವಿಸುತ್ತಾನೆ.

೨೨. ಅಲ್ಲಿ ಜನನ - ಮರಣ ಭಯವಿಲ್ಲ; ನಿತ್ಯೋತ್ಸವವೇ ಇರುವುದು. ಅಲ್ಲಿ ಯೋಗಿಯೂ ಅಧಿಕ ಸುಖಿಯಾಗಿ ನಿಶ್ಚಿಂತೆಯಿಂದ ಇರುತ್ತಾನೆ. ಶ್ರೀಹರಿಯ ಭಕ್ತಿಯ ಸುಖವನ್ನು ಮರೆತರೆ ಅಲ್ಲಿ ಇರುವಂತೆಯೇ ಇಲ್ಲ. ಅದಕ್ಕಿಂತ ಮಿಗಿಲಾದ ಪದವು ಇನ್ನಿಲ್ಲ. ರಾಜನೇ ಈ ವಿನೋದವನ್ನು ಕೇಳು.

೨೩. ಅನಂತರ ಕಲ್ಪಗತಿಗೆ ಅವಸಾನವಾಗುವವರೆಗೆ ಅಲ್ಲಿಯೇ ಇರುತ್ತಾನೆ. ಅಲ್ಲಿಂದಲೂ ನೆಲೆ ತಪ್ಪಿ ಇನ್ನೆಷ್ಟೋ ಶರೀರವನ್ನು ಹೊಂದುತ್ತಾನೆ. ಆಗ ನೀರಿನಲ್ಲಿ ನೀರೂ, ಭೂಮಿಯಲ್ಲಿ ಭೂಮಿ, ಗಾಳಿಯಲ್ಲಿ ಗಾಳಿ, ಬೆಂಕಿಯಲ್ಲಿ ಬೆಂಕಿ, ಆಗಸದಲ್ಲಿ ಆಗಸ - ಇವೆಲ್ಲವೂ ಸ್ವರವನ್ನು ತುಂಬಿಕೊಂಡು ನಿಲ್ಲುತ್ತವೆ.

೨೪. ರೂಪದಲ್ಲಿ ಕಣ್ಣನ್ನೂ ಕಿವಿಯನ್ನು ಶಬ್ದದಲ್ಲಿಯೂ ರಸದಲ್ಲಿ ನಾಲಗೆಯನ್ನೂ ವಾಸನೆಯಲ್ಲಿ ಮೂಗನ್ನೂ ನಿಲ್ಲಿಸುವ ಭೂಮಿಯ ಆ ಉತ್ತಮತ್ವವನ್ನು ನಾಶಗೊಳಿಸಬೇಕು. ಮನೋವಿಕಾರಗಳನ್ನು ಲೇಪಿಸುವ ಇಂತಹ ವಿಕಾರತೆಗಳಿಂದ ಯೋಗಿಯು ದೃಢಚಿತ್ತನಾಗುತ್ತಾನೆ.

೨೫. ಬೇರೆಬೇರೆಯಾಗಿ ನಿಂತಿರುವ ಅಹಂಕೃತಿಯನ್ನು ಈ ಅವಯವಗಳಲ್ಲಿ ಮರೆಗೊಳಿಸಬೇಕು. ಅವಯವ ಸ್ವರೂಪವನ್ನೂ, ತತ್ತ್ವವನ್ನೂ ಅಹಂಕಾರದಿಂದ ಹುಟ್ಟಿರುವ ಅವಸ್ಥೆಯನ್ನು ನಿರಾಕರಿಸಬೇಕು. ಆಗ ಪರಿಣಾಮ ಸುಖದಿಂದ ಭೂಮಿಯಲ್ಲಿ ಯೋಗತ್ರಯದಿಂದ ಇರುತ್ತಾರೆ.

೨೬. ಸ್ಥಿರವಾಗಿ ಹಾಗೆ ಅನುಭವಿಸುವ ಮಹಾ ಯೋಗಾತ್ಮ ವಿರಕ್ತರಿಗೆ ಮತ್ತೆ ಯಾವುದೇ ಜನನವನ್ನೂ ಪ್ರವೇಶಿಸಲು ಇರುವುದೇ? ಕರಟಿ ನಾಶವಾಗಿರುವ ಬೀಜವು ಭೂಮಿಯಲ್ಲಿ ಮೊಳಕೆಯೊಡೆಯುವುದುಂಟೇ? ಹಾಗೆ ಯಾವಾಗಲೂ ಗೂಢಾನುಭಾವಿಗಳು ಸುಖಿಸುತ್ತಿರುತ್ತಾರೆ.

೨೭. ನೃಪತಿಯೇ ಈ ಎರಡು ಮಾರ್ಗಗಳನ್ನು ನಾನು ತಿಳಿಸಿರುವೆನಷ್ಟೇ. ಇದು ಹಿಂದೆ ಬ್ರಹ್ಮನಿಗೆ ವಿಷ್ಣುವು ತಿಳಿಸಿದ ಕಥೆಯು. ಶ್ರೀಹರಿಯ ಭಕ್ತರು ಈ ಯೋಗ ಪಥದಲ್ಲಿ ಮನಸ್ಸನ್ನು ದಂಡಿಸಿ, ಮನಸಾರೆ ಮುಕುಂದನನ್ನು ನಿಜಭಕ್ತಿ ಸುಖದಿಂದ ಧ್ಯಾನಿಸುತ್ತಾರೆ.

೨೮. ಹರಿಭಕ್ತಿಗೆ ಮುಕ್ತಿಯೊಂದೇ ಮಹಾಪಥ ತಾನೇ? ನಿರೀಕ್ಷಿಸದೆಯೇ ಅಪಮಾರ್ಗಗಳು ಬಂದು ಹೋಗುವ ದಾಸೀ ಹಾಗೂ ವಧುಗಳಾಗಿವೆ. ಶರೀರವನ್ನು ಘಾಸಿಗೊಳಿಸುವುದಾದರೂ ಏತಕ್ಕೆ? ಅಭ್ಯಾಸ ಗುಣದಿಂದ ಭಕ್ತಿಯಿಂದ ಜೀವಿಸಿದರೆ ಅಕ್ಷಯವಾದ ಮೋಕ್ಷವು ಲಭಿಸುವುದು.

೨೯. ಈ ಭೂಮಿಯಲ್ಲಿ ಶ್ರೀ ವ್ಯಾಸ ಮುನೀಂದ್ರನು ಶ್ರೀಹರಿಯ ಭಕ್ತಿತತ್ತ್ವ ಶ್ರುತಿಸಾರವನ್ನು ಭೋದಿಸಿ ಮೂರು ಬಾರಿ ಜನಿಸಿದ್ದನು. ಜನನ ಸ್ಥಿತಿಯಾದ ಮಹಾವಿಷಯವು ಲಯವಾಗುವ ಮುನ್ನ ವನಮಾಲಿ ಸ್ವರೂಪದಿಂದ ಹಿತಕಾರಣ ಮೂರ್ತಿಯು ಈಗ ಜನಿಸಿದ್ದನು.

೩೦. ಶ್ರೀ ಭಾಗವತ ಎನ್ನುವ ಪುರಾಣ ಕಥೆಯನ್ನು ಆ ಮುನೀಶ್ವರನು ರಚಿಸಿದ್ದಾನೆ. ಈ ಭೂಮಿಯಲ್ಲಿ ಹುಟ್ಟಿರುವ ಸರ್ವಜನಗಳಿಗೂ ಅತ್ಯದ್ಭುತವಾದ ಸ್ವಭಾವ ವಿರಕ್ತಿಯನ್ನು ಆ ಮೂಲಕ ಅನುಗ್ರಹಿಸಿದ್ದಾನೆ. ಅಂತಹ ಹರಿಯ ಪಾದಕಮಲಗಳ ಭಕ್ತಿಯು ಸಂದೇಹವಿಲ್ಲದೆಯೇ ನಿನಗೆ ಪ್ರಸಾದಿಸುವುದು.

೩೧. ಹಿಂದೆ ಶ್ರೀ ವಿಷ್ಣುವ ಬ್ರಹ್ಮನಿಗೆ ಭೋದಿಸಿದ ದಿವ್ಯ ಕಥೆಯಿದು. ಇದನ್ನು ಬ್ರಹ್ಮನು ವಿಸ್ತರಿಸಿದ್ದ. ಇದನ್ನು ಬ್ರಹ್ಮನ ಮಗನಾದ ನಾರದನು ವ್ಯಾಸರಿಗೆ ಹೇಳಿದನು. ಈ ಇತಿಹಾಸ ಪ್ರಸಂಗವನ್ನು ಕ್ರಮ ತಪ್ಪದಂತೆ ನಾನು ನಿನಗೆ ಹೇಳಿದ್ದೇನಲ್ಲವೇ?

೩೨. ಆದುದರಿಂದ ನೃಪತಿಯೇ ಕೇಳು. ಈ ಕಾರಣದಿಂದ ದಿವ್ಯವಾದ ವರಭಾಗವತಾರ್ಥವನ್ನು ನಿರ್ಣಯಿಸಿ, ಗುಣನಾಮ ರಹಸ್ಯವನ್ನು ಅನುಸರಿಸಬೇಕು. ಇದನ್ನು ರಚಿಸಿ, ಕೇಳಿ ನಿತ್ಯವೂ ಧ್ಯಾನಿಸಿ ನಿತ್ಯವೂ ಒಂದು ಸಲವೂ ಕೂಡ ಮನಸ್ಸನ್ನು ಚಂಚಲಗೊಳಿಸದೆ ಮನಸ್ಸಿನಲ್ಲಿ ಸ್ಮರಿಸುತ್ತಿರಬೇಕು.

೩೩. ಮರಣವು ಸನ್ನಿಹಿತವಾಗಿರುವ ಮನುಷ್ಯರಿಗೆ ಸ್ಮೃತಿಯು ಹೆಚ್ಚಾಗಿರುವುದು. ಇದನ್ನು ನೃಪತಿಯಾದ ನೀನು ತಿಳಿದಿರುವೆಯಲ್ಲ! ಅದಕ್ಕಾಗಿ ಹೇಳಿದೆನು. ಮರಣವೇ ನಿಶ್ಚಯವೆಂದು ತಿಳಿದ ಮನುಷ್ಯರಿಗೆ ಹರಿಪಾದ ಸ್ಮರಣೆಯ ವಿಶೇಷವನ್ನುಳಿದರೆ ಬೇರೆ ಯಾವ ಗತಿಯೂ ಇಲ್ಲ.

೩೪. ಹರಿಪರಾಯಣರಾದ ಸತ್ಪುರುಷರ ಮುಖವೆಂಬ ಕಮಲದಿಂದ ಒಸರಿದ ಈ ಭಗವತ್ಕಥೆಗೆ ಕಿವಿಯೆನ್ನುವ ಅಂಗೈಯನ್ನು ಒಡ್ಡಿ ರಸಪಾನವೆನ್ನುವ ಸಜ್ಜನ ಸಂಗವನ್ನು ಮಾಡಬೇಕು. ಇದನ್ನು ನೋಡಿದ ಅಚ್ಯುತನು ಕೈಹಿಡಿದೆಳೆದುಕೊಂಡು, ತಮ್ಮಂದಿಗೆ ಇರಿಸಿಕೊಂಡು ಅನುಗ್ರಹಿಸುತ್ತಾನೆ.

೩೫. ದ್ವಿತೀಯ ಸ್ಕಂಧ ಪ್ರಸಂಗದಲ್ಲಿ ಇದು ಎರಡನೆಯ ಅಧ್ಯಾಯ. ಸಿದ್ಧೇಶ್ವರ ಯೋಗವಿಶೇಷ ಕಥೆಯಾದ ಇದು ಭಗವಂತನೆಂಬ ಅಮೃತದ ಸಾರವಾಗಿದೆ. ಬುದ್ಧಿಪೂರ್ವಕವಾಗಿ ವಿಸ್ತರಿಸಿ ಬಹುಮಾನಿಸಿದವರು ಅಧ್ವೈತ ದೃಷ್ಟಿಯಿಂದ ಸಂದೇಹವಿಲ್ಲದೆ ಸುಖಿಗಳಾಗುತ್ತಾರೆ.

ಅಧ್ಯಾಯ ೩

೧. ಸರ್ಪಾಭರಣನ ಮಗನಾದ ಗಣಪತಿ, ಶ್ರೀ ಶಾರದೆ, ಲಕ್ಷ್ಮೀ, ಗುರು, ವಿಷ್ಣು, ಪಿತಾಮಹನಾದ ಶಂಕರ, ಸೂರ್ಯಾದಿ ಗ್ರಹಗಳು - ಇವೆರಲ್ಲರ ಚರಣದಡಿಯ ಧೂಳಿನ ಬಲವನ್ನು ಆಧಾರವೆಂದು ಗ್ರಹಿಸಿ ಇನ್ನು ಮುಂದೆ ನಾನು ಶ್ರೀಭಾಗವತಾರ್ಥವನ್ನು ವಿರಚಿಸುತ್ತೇನೆ.

೨. ಎಲೈ ಪರೀಕ್ಷಿತ ರಾಜನೇ ವಿವೇಚಿಸು. ತನಗೆ ಮರಣ ಉಂಟಾಗುತ್ತಿರಲು ಸರ್ವರೂ ಶ್ರೀಹರಿಯನ್ನು ಹೃದಯ ಕಮಲದಲ್ಲಿ ಆರಾಧಿಸಿದರೆ ಈ ಧರಣಿಯಲ್ಲಿ ಅವರವರು ಅನುಭವಿಸುವ ಮಹಾಸಾಮ್ರಾಜ್ಯ ಸುಖವೇಂಬುದನ್ನು ಈಗ ನೀನು ತಿಳಿದುಕೊಳ್ಳಲೆಂದು ಹೇಳುತ್ತೇನೆ.

೩. ಪರಮೇಶ್ವರನನ್ನು ಧ್ಯಾನಿಸಿ, ಪೂಜಿಸಿದ ಫಲದಿಂದ ಬ್ರಾಹ್ಮಣರಾಗುತ್ತಾರೆ. ದೇವೇಂದ್ರನ ಅನುಗ್ರಹವನ್ನು ಪಡೆವರೆ ಮಹಾರಾಜರಾಗುತ್ತಾರೆ. ಪ್ರಜಾಪತಿಯಾದ ಬ್ರಹ್ಮನ ಆರಾಧನೆಯ ಫಲದಿಂದ ಪ್ರಜಾಧಿಕಾರಿಯಾಗುತ್ತಾರೆ. ಮನ್ಮಥನ ಹೆಂಡತಿಯಾದ ರತಿಯ ಅನುಗ್ರಹದಿಂದ ಸರಿಸಂಪತ್ತು ಸೌಭಾಗ್ಯ ಸಮೃದ್ಧಿಯುಂಟಾಗುತ್ತದೆ.

೪. ತೇಜಸ್ಸು, ವಿಭಾವ, ಪ್ರಾಣಾದಿಗಳು ಅಗ್ನಿಯ ಕರುಣೆಯ ಬಲದಿಂದ ಲಭಿಸುವುದು. ಮನ್ಮಥ ರೂಪವೂ ವೀರ್ಯವೂ ರುದ್ರನನ್ನು ಪೂಜಿಸಿ ಪಡೆದ ಅನುಗ್ರಹವಾಗಿದೆ. ಅದಿತಿಯ ಕರುಣೆಯಿಂದ ಭೋಜ್ಯಗಳನ್ನು ಕಲ್ಪಿಸಿಕೊಂಡು ಸಾಧಕರು ಸಾಧನೆಯನ್ನು ಹೊಂದುತ್ತಾರೆ.

೫. ದಿವ್ಯ ಸಾಧಕರಾದವರು ಅದಿತಿಯ ಮಗನ ಕಾರುಣ್ಯ ಬಲದಿಂದ ಭೂಮಿಯ ಅಧಿಕಾರವನ್ನು ಹೊಂದುವರು. ವಿಶ್ವದೇವನ ಅನುಗ್ರಹದಿಂದ ಕೊನೆಯಿಲ್ಲದಷ್ಟು ಸಾಧನೆಗಳನ್ನು ಪಡೆಯಬಹುದಾಗಿದೆ. ಅಶ್ವಿನೀ ದೇವತೆಗಳ ಅನುಗ್ರಹದಿಂದ ಸುವಿರಕ್ತರಾದರು ಆಯುಷ್ಯವನ್ನು ಸಾಧಿಸಿಕೊಳ್ಳುತ್ತಾರೆ.

೬. ಭೂಮಿದೇವಿಯ ಸೇವೆಯಿಂದ ಜನರು ಸಂಪತ್ತು ಮತ್ತು ಅಭಿವೃದ್ಧಿಯನ್ನು ಪಡೆದು ಸಂಭ್ರಮಿಸುತ್ತಾರೆ. ಲಕ್ಷ್ಮೀಯ (ಭಜನೆಯಿಂದ) ರೂಪ, ಪ್ರತಿಷ್ಠೆಗಳನ್ನು ಪಡೆಯುತ್ತಾರೆ. ಗಂಧರ್ವರ ಆರಾಧನೆಯಿಂದ ಲೋಕದಲ್ಲಿ ರೂಪವಂತರಾಗುತ್ತಾರೆ. ಊರ್ವಶಿಯ ಕಾರುಣ್ಯದಿಂದ ಪತ್ನಿಯನ್ನು ಪಡೆಯುತ್ತಾರೆ.

೭. ಸ್ವಾಯಂಭುವಿನ ಅನುಗ್ರಹದಿಂದ ಎಲ್ಲ ಯಾಗಗಳನ್ನು ಮಾಡುತ್ತಾರೆ. ಪ್ರಾಚೇತಸನ ಭಜನೆಯಿಂದ ಸರ್ವಾರ್ಥ ಕೋಶಗಳು ಲಭಿಸುತ್ತವೆ. ಗಿರಿಜೇಶನಾದ ಶಿವನ ಅನುಗ್ರಹದಿಂದ ಸರ್ವಾಗವು ವಿದ್ಯೆಗಳು ಲಭಿಸುತ್ತವೆ. ಉಮೆಯು ಕರುಣೆಯಿಂದ ಸರ್ವಾತ್ಮರೂ ದಂಪತಿಗಳಾಗುತ್ತಾರೆ.

೮. ಪುಣ್ಯಾತ್ಮನಾದ ಹರಿಯ ಮತದಿಂದ ಧರ್ಮವೂ ಅರ್ಥವೂ ಲಭ್ಯವಾಗುತ್ತವೆ. ಪಿತೃದೇವರ ಭಜನೆಯಿಂದ ಸಂತತಿಗೆ ಮೋಕ್ಷ ಲಭಿಸುತ್ತದೆ. ಕುಬೇರನ ಅನುಗ್ರಹದಿಂದ ಸಂಪತ್ತು ಲಭಿಸುತ್ತದೆ. ಮರುದ್ಗಣಗಳ ಅನುರಾಗದಿಂದ ಸರ್ವವೂ ಜನಗಳಿಗೆ ಲಭ್ಯವಾಗುತ್ತದೆ.

೯. ನಿರುತಿಯ ಅನುಗ್ರಹದಿಂದ ಮನುಜರಿಗೆ ರಾಜಪದವಿಯು ಲಭ್ಯವಾಗುತ್ತದೆ. ಚಂದ್ರನ ಮನಸ್ಸಿನ ನಿರ್ಧಾರದಿಂದ ಗ್ರಾಮಾಧ್ವರಗಳಾಗುತ್ತವೆ. ಹೀಗೆ ಒಬ್ಬೊಬ್ಬರನ್ನು ಆರಾಧಿಸುವುದರಿಂದ ಅವರವರಿಗೆ ಈ ರೀತಿಯ ಇಷ್ಟಾರ್ಥಗಳು ಲಭ್ಯವಾಗುತ್ತವೆ. ಆದರೆ ವನಮಾಲಿಯ ಭಕ್ತಿಯಿಂದ ಮುಕ್ತಿಪದವನ್ನು ಯಾರು ತಾನೇ ಪಡೆಯುತ್ತಾರೆ, ಹೇಳು?

೧೦. ಹೀಗೆ ಅನೇಕ ವಿಧವಾಗಿ ದಂಡಿಸಿ (ಅದರಿಂದ ಬಂದ) ಫಲವಾದರೂ ಏನು? ಹರಿಭಕ್ತಿಯ ವಿನಾ ಬೇರೆ ಯಾವುದರಿಂದಲೂ ಪಂಚತ್ವವನ್ನು ಪಡೆಯಲಾಗುವುದಿಲ್ಲ. ಬುದ್ಧಿಯಲ್ಲಿರುವ ಚಂಚಲತೆಯನ್ನೆಲ್ಲ ಬಿಟ್ಟು, ಅಂಬುಜನಾಭನಾದ ಶ್ರೀಹರಿಯನ್ನು ಅರ್ಚಿಸಿ ಭಕ್ತರ ಸಂಗವನ್ನು ಪಡೆದನೆಂದಾದರೆ ಆಗ (ಆತನು) ಧನ್ಯ.

೧೧. ರಾಜಶೇಖರನಾದ ಪರೀಕ್ಷಿತನಿಗೆ ಶ್ರೀಶುಕರು ಹೇಳಿದ ಪ್ರಸಂಗವನ್ನು ಜನಾರ್ದನನ ಭಕ್ತರಾದ ಶೌನಕರು ಕೇಳಿ ಮರು ರಚನೆಗೆ ತೊಡಗಿದರು. ಸರ್ವರೂ ಅವರನ್ನು ಭಕ್ತಿಯಿಂದ ಮತ್ತೆ ಮತ್ತೆ ವಿಚಾರಿಸಿಕೊಂಡರು. ಆಗ ಶುಕರು ಜಗತ್ತಿನ ಒಡೆಯನಾದ ಭಕ್ತಿಸಾರವನ್ನು ಹೀಗೆಂದು ಹೇಳಿದರು.

೧೨. ಇದು ವೇದವ್ಯಾಸರು ಶುದ್ಧಬುದ್ಧಿಯಿಂದ ಕಟ್ಟಿದ ಭಗವತ್ಕಥೆ. ಬಾದರಾಯಣನು ಇದನ್ನು ಪರೀಕ್ಷಿತ ರಾಜನಿಗೆ ವಿಸ್ತರಿಸಿದನು. ವೇದಸಾರವಾದ ಇದನ್ನು ಕೇಳಲು ವಿಷ್ಣುದಾಸರ ಅನುಜ್ಞೆಯಿಂದ, ಅನೇಕ ಜನ್ಮ ಫಲದಿಂದಾಗಿ ನಾವು ಈ ಮೇದಿನಿಯಲ್ಲಿ ಹುಟ್ಟಿದ್ದೇವೆ.

೧೩. ಆದಿ ಮೂರ್ತಿಯೂ ಅನಂತಶಾಯಿಯೂ, ಭೇದರೂಪಗುಣಾಕಾರನೂ ಆದ ಶ್ರೀಹರಿಯನ್ನು ಆದರದಿಂದ ಕೀರ್ತಿಸದೆ ಭೂಮಿಯಲ್ಲಿ ಇದ್ದು ಫಲವಾದರೂ ಏನು? ಭೂಮಿಯಲ್ಲಿ ಜನಿಸಿರುವ ಹಸು-ಎಮ್ಮೆಗಳಿಗಿಂತಲೂ ಅವರು ನಿಕೃಷ್ಟರು. ಅವರು ಕೀಳುಮಟ್ಟದವರು. ಅಂತಹ ಭೇದಕಲ್ಮಷ ಕಾತರರಿಗೆ ಎಲ್ಲಿಂದ ಸದ್ಗತಿ ಲಭ್ಯವಾಗುವುದು? (ಇಲ್ಲವೇ ಇಲ್ಲ) ಇದನ್ನು ಸತ್ಯವೆಂದು ತಿಳಿಯಿರಿ.

೧೪. ಹರಿಕಾವ್ಯವನ್ನು ಕೇಳಲು ಹೋಗದ ಕಾಲುಗಳು ಮರಗಟ್ಟಿ ಹೋಗಿವೆ. ಹರಿನಾಮವನ್ನು ಕೇಳದ ಕಿವಿಗಳು ಮರದ ಬಿಲಗಳಾಗಿವೆ. ಹರಿಭಕ್ತರನ್ನು ನೋಡದ ಕಣ್ಣುಗಳು ನವಿಲುಗರಿಯಲ್ಲಿರುವ ಕಣ್ಣುಗಳಾಗಿವೆ. ಹರಿಕೀರ್ತನೆಯನ್ನು ಮಾಡದ ಈ ಮುಖವು ಬಿಲವೆಂದು ಸ್ಪಷ್ಟವಾಗಿ ತಿಳಿದಿರಲಿ.

೧೫. ಹರಿನಾಮ ಗುಣಸ್ತುತಿಯನ್ನು ಹೇಳದ ಸ್ವರವು ಕಪ್ಪೆಗೆ ಸಮ. ಹರಿಭಕ್ತರನ್ನು ವಂದಿಸಿ ಕಯ್ಯಿಗಳು ಹಾವುಗಳೇ ಸರಿ. ಹರಿಪಾದ ಸರೋಜವನ್ನು ಮೂಸದ ಶ್ವಾಸವು ನರಿನಾಯಿಗಳ ಶ್ವಾಸಕ್ಕೆ ಸಮ. ಹರಿಭಕ್ತಿಯಿಲ್ಲದ ಶ್ವಾಸಗತಿಯು ಕಮ್ಮಾರನ ತಿದಿಯ ದಂಡಕ್ಕೆ ಸಮ ಎನ್ನುತ್ತಾರೆ.

೧೬. ಹರಿದಾಸರನ್ನೂ ನೋಡದ, ಭಾಗದ ಶಿರವು ರಾಗಿಯ ದಾನಕ್ಕೆ ಸಮ. ಹರಿಕೀರ್ತನೆಯಿಂದ ಚಂಚಲಗೊಳ್ಳದ ಮನವು ಕಗ್ಗಲ್ಲಿಗೆ ಸಮ. ಹರಿಭಕ್ತರ ಸಂಗವನ್ನು ಬಿಟ್ಟ ನರರು ಕೋತಿಗಳಾಗಿದ್ದಾರೆ. ಹರಿಗೆ ಅರ್ಪಿಸದ ಭೋಜನವೂ ನಾಯಿಯ ಆಹಾರಕ್ಕೆ ಸಮವಾಗಿದೆ.

೧೭. ಹರಿಧ್ಯಾನ ಮತದಲ್ಲಿ ಕರಗಿ, ಹರಿನಾಮವನ್ನು ಸ್ತುತಿಸಿ, ಹರಿಭಕ್ತಿಯ ಸುಸ್ವರವನ್ನು ಕೇಳಿ ರೋಮಾಂಚನವಾಗಿ ಗದ್ಗದಿಸಿ, ಹರಿಯನ್ನು ವಂದಿಸಿ, ನರ್ತಿಸಿ, ಆನಂದ ಭಾಷ್ಪವನ್ನು ಸುರಿಸಿ, ಬುದ್ಧಿಯನ್ನು ಹರಿಪಾದ ಧೂಳಿಗೆ ಅಭಿಷೇಕಗೊಳಿಸುವಲ್ಲಿ ಜೀವರು ಅಮೃತವನ್ನೈದುವರು.

೧೮. ನಿತ್ಯವೂ ಭಾಗವತಾರ್ಥ ಕಥೆ ಎಂಬ ಅಮೃತ ಕಡಲಿನಲ್ಲಿ ಮುಳುಗಿ, ಸ್ತುತಿಗಳನ್ನು ಹೇಳಿ, ಕಲಿಸಿ, ಗುಣನಾಮಗಳನ್ನು ವರ್ಣಿಸಿ, ಆತನ ಮೂರ್ತಿಯನ್ನು ಹೃದಯದಲ್ಲಿ ನಿರ್ಧರಿಸಿ ಆರಾಧಿಸದಿರುವ ಈ ಮರ್ತ್ಯರು ಮರದ ಬೊಂಬೆಗಳೆಂಬುದೇ ದೃಢ. ಅವರನ್ನು ಹೆಣವೆಂದರೂ ಆದೀತು.

೧೯. ಭಗವತ್ಕಥೆಯ ಸಾರವನ್ನು ಶ್ರೀ ಶುಕರು ಪರೀಕ್ಷಿತ ರಾಜನಿಗೆ ಹೇಳಿದರು. ಆ ನಿಗಮದ ರಹಸ್ಯವನ್ನು ನೀವು ವಿಸ್ತರಿಸಿ ಹೇಳಬೇಕೆಂದು ಋಷಿಗಳು ಕೇಳಿದರು. ಆಗ ಭಗವಾನರೇ ನೀವು ವಿಚಾರಿಸಿ ನಿರ್ಧರಿಸಿ ಎಂದು ಆ ಗುಣವಂತನಾದ ಸೂತನು ಮತ್ತೆ ಯೋಚಿಸಿ ಶ್ರೀ ಭಾಗವತಾರ್ಥವನ್ನು ಹೇಳಲು ಪ್ರಾರಂಭಿಸಿದನು.

೨೦. ವೇದ ಸ್ವರೂಪಿಗಳಾದ ಮುನೀಶ್ವರರೇ ವಿಧಿ ನಿಯಮಗಳಿಂದ ಆಲಿಸುವ, ಬ್ರಹ್ಮಾತ್ಮ ಸ್ವರೂಪಿಯಾದ ಶ್ರೀ ಶುಕರ ವಾಕ್ಸುಧೆಯನ್ನು ಉಪಯೋಗಿಸಿದ ಭೂಪತಿಯು ಅವರನ್ನು ಅನೇಕ ವಿಧದಿಂದ ಸನ್ಮಾನಿಸಿದನು. ಕುತೂಹಲದಿಂದ ತಲೆದೂಗಿದನು. (ಅದಲ್ಲದೆ) ಚಿತ್ತ ಸಮ್ಮೋಹದಿಂದ ಮುಳುಗಿ, ಹಿಗ್ಗಿ, ಅನೇಕ ರೀತಿಯಿಂದ ಸಂತೋಷಗೊಂಡನು.

೨೧. ಕೈಗಳನ್ನು ಮುಗಿದು ಅವರ ಪದಗಳಿಗೆ ಬಾಗಿ, ಆತನು ಹೀಗೆ ಹೇಳಿದನು. ಸ್ವಾಮೀ ನಿಮ್ಮ ಕರುಣೆಯಾಗಲಿ! ಈ ಅಮೃತವನ್ನು ಸೇವಿಸಿದ ನನಗೆ ಮರಣದ ಭೀತಿಯು ನಾಶವಾಗಿ ಹೋಯಿತು. ದುಸ್ತರವಾದ ಸಮುದ್ರನ್ನು ದಾಟಿ, ಮುಕುಂದನನ್ನು ಸಮೀಪಿಸುವಂತೆ ಮಾಡುವ ಪ್ರಸಂಗವನ್ನು ವಿಸ್ತರಿಸಿ ಅನುಗ್ರಹಿಸಿ.

೨೨. ಎಷ್ಟೋ ವಿಧವಾಗಿ ಪೂಜಿಸಿದ ಪುಣ್ಯ ಫಲದಿಂದ ನಿಮ್ಮ ಪಾದ ಕಮಲವು ಇಷ್ಟು ಗಟ್ಟಿಯಾಗಿ ನನಗೆ ಆಸರೆಯಾಯಿತು. ಇದು ನನ್ನ ಜನ್ಮಫಲವು. ಪ್ರೀತಿಯಿಂದ ನಿಮ್ಮೊಂದಿಗೆ ಸಂವಾದಿಸಲು ಲಭಿಸಿರುವ ಈ ಯೋಗ್ಯತೆಯು ಬದುಕಿನಲ್ಲಿ ನಾನು ಇಷ್ಟಾದರೂ ಮಾಡಿರುವ ಪುಣ್ಯಫಲದಿಂದ ಸೇರಿದುದು ಎಂದನು.

೨೩. ಈ ಹಿಂದೆ ಬ್ರಹ್ಮನು ನಾರದನಿಗೆ ಪಾಪ ನಾಶ ಮಾಡುವ ಈ ದಿವ್ಯಕಥಾ ಮೃತವನ್ನು ಅನುಗ್ರಹಿಸಿದನು. ಅದನ್ನು ಅದರಿಂದ ಆಲಿಸಿದ ನೀವು ಈಗ, ಅದನ್ನು ಸಂರಕ್ಷಿಸಿದ, ಇತರರಿಗೆ ಒದಗಿಸಿದ ವಿವರಗಳನ್ನು ನನಗೆ ಹೇಳಬೇಕು, ನಿಮಗೆ ಜಯವಾಗಲಿ! ಎಂದನು.

೨೪. ನಾನು ಕೇಳಲಿರುವುದು ನಾರದ ಮುನಿಯು ಆಯ್ದ ಪ್ರಸಂಗ. ಹೇಳುವವನು ಲೋಕಪಿತಾಮಹಾನದ ಬ್ರಹ್ಮ. ಹರಿಯೋ ಹರಿಕೃಷ್ಣಾ! ಇದನ್ನು ಆಲೋಚಿಸಿದರೆ ಉತ್ತಮ ಪಂಡಿತರ ಸಂಸರ್ಗವು ಎಂತಹುದೋ! ಇದನ್ನು ಕೇಳದ ಜಗತ್ತಿನ ನಿರಾಯುಷವನ್ನು (ಕತ್ತಲೆಯನ್ನು) ಸೂರ್ಯನೂ ಸಹ ಪರಿಹರಿಸಲಾರನು.

೨೫. ಹೀಗೆಂದು ರಾಜನು ಶುಕನ ಎರಡೂ ಪಾದಗಳಿಗೆ ಭಕ್ತಿಯಿಂದ ಕೈಮುಗಿದು ಪ್ರಾರ್ಥಿಸಿದನು. ಆಗ ಎಷ್ಟೋ ಪಾಪಗಳನ್ನು ದೂರಮಾಡುವ ಮೂರ್ತಿಯಾದ ಶುಕನು ಮನಸ್ಸಲ್ಲಿ ನೊಂದಕೊಂಡನು. ಆಮೇಲೆ ಮನಸ್ಸಿನಲ್ಲಿಯೇ (ಒಂದು) ನಿರ್ಧಾರಕ್ಕೆ ಬಂದು, ಬೊಗಸೆ ಕಯ್ಯನ್ನು ಹಿಡಿದುಕೊಂಡು, ವೇದಾಂತ ಮತವಾಗಿ ದಿವ್ಯ ಸ್ವರೂಪವನ್ನು ವರ್ಣಿಸಿದನು.

೨೬. ಜಯ ದೇವಾ! ಪರಾತ್ಪರುಷ! ಮಾಯಾಮಯಲೀಲಾ! ಜಯ ಪರಿಸ್ಥಿತಿ ಪಾಲನ! ಸಂಹರಣಾ! ಶಕ್ತಿತ್ರಯ ಅಪಾರಾ! ಜಯ ಸರ್ವಗುಹಾಶ್ರಯ! ಸಾತ್ವಪತೇ! ಸಚ್ಚಿನ್ಮಯ ರೂಪಾ! ಜಯ ದೇವ! ಅಖಿಲಾತ್ಮಕ! ಹಂಸ! ಪರಂಜ್ಯೋತೀಶ! ನಮಸ್ತೇ ಎಂದನು.

೨೭. ಜಯ ಜಯ! ಯೋಗೀ ಮನೋದ್ಭವ ದೂರ! ಹರಾ! ಪರಬ್ರಹ್ಮ ನಿಗೂಢಾ! ಜಯ ಪುಣ್ಯ ಪುರಾಣ! ಪುರಾಧಿಪತಿ! ವ್ಯತಿರಿಕ್ತ! ಅತಿಕ್ತ! ಜಯ ಪಾವನ! ಪಂಕಜನಾಭಾ! ಜಯಾ ಪಾಪಾಂತಕ! ಶೂನ್ಯಾ! ಜಯ ತ್ರೈಗುಣ! ತ್ರೈಮತ ದಶಿರಾ! ಪರಿಪೂರ್ಣ! ನಮಸ್ತೇ! ಎಂದನು.

೨೮. ಜಯ ವಿಷ್ಣು! ವಿರಿಂಚ! ಮಹೇಶ್ವರಾ! ಜಗದಂತರ್ಯಾಮೀ! ಜಯ ವಿಘ್ನ ವಿನಾಯಕ! ವಿಘ್ನಹರಾ!ಪಾಪಘ್ನ! ಅಶುಭಘ್ನಾ! ಜಯ ಜನ್ಮವಿಹೀನ! ಜರಾಮರಣಾ! ಜಯಸ್ವಾಮಿ ನಮಸ್ತೆ! ಎಂದನು.

೨೯. ಜಯ ಭೂಮಿಪತಿ! ಜಯ ಯಜ್ಞಪತಿ! ಜಯ ಶ್ರೀಪತಿ ಸಿದ್ಧ! ಜಯ ಲೋಕಪತೀ! ಜಯ ಬ್ರಹ್ಮಪತೀ! ಜಯ ಧಾರಣಯೋಗ! ಜಯ ವೃಷ್ಣಿಪತಿ ಜಯ ಭೋಜಪತಿ! ಜಯ ಶುದ್ಧ ವಿಶುದ್ಧಾ! ಜಯ ಸರ್ಗ! ನಿಸರ್ಗ! ವಿನಾಶಹರಾ! ಜಗಧೀಶ ನಮಸ್ತೇ! ಎಂದನು.

೩೦. ನಮೋ ಸಹಸ್ರಶಿರಾ! ನಮೋ ಸಹಸ್ರಮುಖಾ! ನಮೋ ಸಹಸ್ರ ದೃಶಾಢ್ಯಾ! ನಮೋ ಸಹಸ್ರಕರಾ! ನಮೋ ಸಹಸ್ರಪದ! ನಮೋ ಸಹಸ್ರ ಶ್ರವಣಾ! ನಮೋ ಸಹಸ್ರ ಶ್ವಸಾ! ನಮೋ ಸಹಸ್ರ ವಿಭೂಷಣಾ! ನಮೋ ಷೋಡಶ! ನಮೋ ಸುವಿರಾಟ್ ಪುರುಷೇಂದ್ರಾ! ನಮೋ ನಾಮ ವಿಕಲ್ಪ! ಪರತ್ರಪರಾ! ನಮೋ ಬ್ರಹ್ಮಾಂಡಾ!

೩೧. ಜಯ ನಾರಾಯಣ! ಅಖಿಲ ಜೀವಮಯಾ! ಪುರುಷೋತ್ತಮ ರೂಪಾ! ಜಯ ನಾರದವಂದಿತ! ನಾಮರಸಾ! ನರನಾರಾಯಣ! ಜಯ ವಾಸುದೇವ! ನರಾಂಗಸಖಾ! ನರಕಾಂತಕ ಶೌರಿ! ಜಯ ನಾಗಕುಲಾಂತಕವಾಸಿ! ನಮೋ! ನಮೋ! ಆತ್ಮ ನಮಸ್ತೇ ಎಂದನು.

೩೨. ಹೀಗೆಂದು ಅವರು ಪಾಪ ಪರಿಹಾರಕನಾದ ಹರಿಯ ಶ್ರೀ ಚರಣವನ್ನು ಹೃದಯಾಂಬುಜದಲ್ಲಿ ಮನಸಾರೆ ನಿರೂಪಿಸಿದರು. (ಅದರಿಂದ) ತನ್ಮಯರಾಗಿ ಆನಂದಿಸಿ, ಬಳಿಕ ಆ ಸತ್ಪುರುಷನಾದ ಪರೀಕ್ಷಿತನನ್ನು ಆಲಿಂಗಿಸಿ ಸತ್ಕರಿಸಿದನು. ಆಮೇಲೆ "ಮಗನೇ!" ಎಂದು ಕರೆಯುತ್ತ ಆ ಶುಕಮೂರ್ತಿಯು ಹೇಳತೊಡಗಿದನು.

೩೩. ಇಲ್ಲಿಗೆ ಶ್ರೀ ಭಾಗವತಾರ್ಥೋ ಕಾವ್ಯದ ಮೂರನೆಯ ಅಧ್ಯಾಯವಾಯಿತು. ಅಧ್ಯಾತ್ಮಕ ವಿದ್ಯೆಯನ್ನು ಶುದ್ಧಿಸುವ ಇದು ವೇದ ರಹಸ್ಯವೂ ಹೌದು. ಯಾರು ಶುದ್ಧಾತ್ಮಕರಾದವರು ಇದನ್ನು ನಿರ್ಧಾರದಿಂದ ಬಹುಮಾನಿಸುತ್ತಾರೋ ಅವರು ಅಚ್ಯುತನ ಸದ್ರೂಪವನ್ನು ಪಡೆಯುತ್ತಾರೆ.

ಅಧ್ಯಾಯ ೪

೧. ರಾಜನೇ ಕೇಳು! ಒಂದು ದಿನ ಶ್ರೀನಾರದ ಮುನಿವರ್ಯನು ಬ್ರಹ್ಮನ ಆಸ್ಥಾನಕ್ಕೆ ಹೊರಟನು. ಹಿರಿದಾದ ಆ ಒಡ್ಡೋಲಗದಲ್ಲಿ ಅವನನ್ನು ಕುಳ್ಳಿರಿಸಲು ಕೈಮುಗಿದು, ತಂದೆಯೇ ನನ್ನ ಅಪರಾಧ ನೂರು ತಪ್ಪುಗಳನ್ನು ಮನ್ನಿಸು ಎಂದನು.

೨. ನನಗೆ ಮನಸ್ಸಿನಲ್ಲಿ ಹಿಡಿತವಿಲ್ಲ. ನೀವು ಅದನ್ನು ತಿಳಿದು, ಮಗನೆಂಬುದನ್ನು ಮರೆತು ಸಂಶಯ ಪರಿಹಾರ ಮಾಡಬೇಕು. ನಾವು ಸೂಕ್ಷ್ಮವಾಗಿ ನೋಡಿದರೆ ಈ ಲೋಕ, ಸಚರಾಚರಗಳೆಲ್ಲವೂ ಸಣ್ಣದಾಗಿ ಕಾಣುತ್ತವೆ. ಇದನ್ನು ಕಾಪಾಡುವವರು ಯಾರು? ನನಗೆ ಇದನ್ನು ತಿಳಿಸಬೇಕು.

೩. ಈ ಜನಗಳ ಎಲ್ಲ ರೀತಿಯ ಏಳಿಗೆಗೆ ಇಲ್ಲಿ ನೀನು ತಾನೇ ಇರುವವನು? ಜೀವ ಇರುವ ಹಾಗೂ ಇಲ್ಲದಿರುವುದನ್ನು ಹುಟ್ಟಿಸುವುದನ್ನು ಇರುವ ಹಾಗೆ ಕೇಳೋಣವೆಂದು ಬಂದೆ. ಇದನ್ನು ಎಳ್ಳಷ್ಟೂ ವಂಚಿಸದೆ ನನಗೆ ನೀನು ತಿಳಿಸಿ ಹೇಳಬೇಕು.

೪. ತಂದೆಯವರೇ, ಕೈಯಲ್ಲಿಯ ಕನ್ನಡಿಯ ಹಾಗೆ ಇದು ನಿಮ್ಮ ಬುದ್ಧಿಗೆ ಗೋಚರಿಸದೆ ಇರಲಾರದು. ನಿಮ್ಮ ಅನುಗ್ರಹದಿಂದ ಇದನ್ನು ತಿಳಿದುಕೊಳ್ಳಬೇಕು ಎಂದು ತುಂಬ ಆಶೆಯಿಂದ ಬಂದಿದ್ದೇನೆ. ತರತರವಾಗಿ ಕಾಣುವ, ಉಂಟಾಗಿ ತೋರುವ ಈ ಹಲವು ವಿಸ್ಮಯಗಳಿಂದ ಕೂಡಿರುವ ಈ ಜಗವು ಯಾವಾಗಲೂ ನಿಮ್ಮಲ್ಲಿಯೇ ಮುಳುಗಿ ಹೋಗುತ್ತದೆ ಎಂದು ನನ್ನ ನಂಬಿಕೆ.

೫. ಯಾರಿಂದಾಗಿ ನೀವು ಈಗ ಇದನ್ನು ಸಾಧಿಸಿರುವುದು? ಇದಕ್ಕೆ ನಿಮಗೆ ಗುರು ಯಾರು? ನಿಮಗೆ ಉಪದೇಶ ನೀಡಿದ ತೇಜಸ್ಸುಳ್ಳ ಮೂರ್ತಿ ಯಾರು? ಮೊದಲು ಜನಿಸಿದವರು ಯಾರು? ಎಷ್ಟು ದಿನಗಳ ತಪಸ್ಸು ನಡೆಯಿತು? ನಿಮ್ಮೊಂದಿಗೆ ಧ್ಯಾನ ಮಾಡಿದ ಪ್ರೇರಕರು ಯಾರು? ಇದೆಲ್ಲವನ್ನೂ ವಿಸ್ತಾರವಾಗಿ ನನಗೆ ಹೇಳಬೇಕು.

೬. ಮಗನಿಗೆ ಕೆಟ್ಟಬುದ್ಧಿ (ಬಂತೆಂದು) ಮನಸ್ಸಿನಲ್ಲಿ ಕೆರಳಬೇಡಿ. ಕಳೆದುದನ್ನು ತಿಳಿಯದೆ, ನಾನು ಮೂಢಾತ್ಮನಾಗಿ ಇದನ್ನು ವಿಚಾರಿಸುತ್ತಿದ್ದೇನೆ. ಗುರುವೇ! ತಂದೆಯೇ! ನನ್ನ ದೈವವೇ! ನಮಗೆ ತಿಳಿಯಲೆಂದು ಎಲ್ಲವನ್ನೂ ಅನುಗ್ರಹಿಸಿ. ಇದನ್ನು ಕೇಳಿ ಯಾರಾದರೂ ನಗುತ್ತಾರೆ ಎಂದಾದರೆ ಅದನ್ನು ನೀವು ದಯಮಾಡಿ ಕ್ಷಮಿಸಿ.

೭. ಮಹಾರಾಜನೇ ಇತ್ತ ಕೇಳು! ಹೀಗೆಂದು, ಬ್ರಹ್ಮನೊಡನೆ ವಿಶ್ವದ ಗುಟ್ಟುಗಳೆಲ್ಲವನ್ನೂ ಬಗೆಬಗೆಯಾಗಿ ನಾರದನು ವಿಚಾರಿಸುತ್ತಿದ್ದನು. ಆತನ ಮಾತುಗಳಿಗೆ ಮನಸ್ಸಿನಲ್ಲಿಯೇ ಬ್ರಹ್ಮನು ಯೋಚಿಸಿದನು. ಬಳಿಕ ಬುದ್ಧಿಪೂರ್ವಕವಾಗಿ ನಿರ್ಧರಿಸಿ, ಆತನು ಮುಗುಳ್ನಕ್ಕನು. ನಿಧಾನಕ್ಕೆ 'ಮಗನೇ' ಎಂದು ಕರೆಯುತ್ತ ಹೀಗೆ ಹೇಳಿದನು.

೮. ಮರುಳಾ! ನಿನ್ನೊಡನೆ ನಾನು ಏನೆಂದು ಹೇಳಲಿ? ಹರಿಯೋ ಹರಿ! ಕಾಡಿನಲ್ಲೊಬ್ಬಳು ಕಿವುಡಿಯೂ ಕುರುಡಿಯೂ ಆದ ತರುಣಿಯೋರ್ವಳು ಮಹಾಕುರುಡನಾದ ತನ್ನ ಗೌಡ ಗಂಡನನ್ನು ಚಕ್ರೇಶ್ವರ ಎಂದು ತಿಳಿದಿರುವಂತೆ, ನೀನೀಗ ಕೇಳುತ್ತಿರುವ ವಿಚಾರವಾಯಿತು ಎಂದನು.

೯. ತಿಳಿದೂ ತಿಳಿದೂ ನೀನು ಕೇಳುತ್ತಿರುವೆಯಲ್ಲ, ಮಗನೇ! ಲೋಕ ಹಿತಕ್ಕೆಂದು ನೀನು ಇದನ್ನು ಕೇಳುತ್ತಿರುವುದು ಆಶ್ಚರ್ಯವೇ ಸರಿ? ಅದಲ್ಲದಿದ್ದರೆ ತಿಳಿಯದೆ ಒಂದು ಪಕ್ಷ ನೀನಿದನ್ನು ಕೇಳುತ್ತಿರುವುದಾದರೂ ಆಶ್ಚರ್ಯವೇ ಸರಿ. ಇದಕ್ಕೆಲ್ಲ ಮುಂದೆ ಸರಿಯಾದ ಅರ್ಥವನ್ನು ತಿಳಿಯಪಡಿಸುವವನು ಶ್ರೀ ಹರಿಯೊಬ್ಬನೇ ಸರಿ. ನನಗೇನು ತಾನೇ ತಿಳಿಯಲು ಸಾಧ್ಯ!

೧೦. ಸಚರಾಚರದಲ್ಲಿ ನಾನು ಯಾರಾಗಿದ್ದೇನೆ? ನನ್ನನ್ನು ಚೆನ್ನಾಗಿ ತಿಳಿಯಬಲ್ಲವರು ಯಾರು? ನನ್ನನ್ನು ಮೇರುಗಿರಿ ಹೊತ್ತುಕೊಂಡೀತೇ? ಶಿಶುಗಳು ಯಾರಾದರೂ ಹೊತ್ತುಕೊಳ್ಳುವನೇ? ಪುತ್ರನೇ! ದಿನವೂ ಅಗ್ನಿಗೆ ಹಾಗೂ ಸುರಸಮುದಾಯಕ್ಕೂ ಯಜ್ಞವನ್ನೂ ಸಲ್ಲಿಸಬೇಕು. ನಿಮ್ಮನ್ನುಳಿದು ಇನ್ನಾರಿಗೂ ಪ್ರೇರೇಪಿಸುವುದಕ್ಕೆ ಸಾಧ್ಯವಿಲ್ಲ.

೧೧. ನೀನು ಕೇಳಿರುವ ಸರ್ವಜಗತ್ತಿಗೂ ನನ್ನಿಂದಾಗಿ ಹುಟ್ಟಿದ ಈ ಚಂದ್ರ, ಅಗ್ನಿ, ಸೂರ್ಯ, ನಕ್ಷತ್ರ ಮತ್ತು ಗ್ರಹಗಳು ವಾಚಾಳಿಯಾದ ತಿಳಿಯಪಡಿಸುವ ವೇದ, ಪುರಾಣಿಕರು ವಿದ್ವಾಂಸರು ಇವರಿಗೆಲ್ಲ ಯಾರು ಗುರು? ಇದೆಲ್ಲವನ್ನೂ ಗಂಭೀರವಾಗಿ ಪರಾಮರ್ಶಿಸುವುದಾದರೆ ಅಚ್ಯುತನೇ ಗುರು- ನಾರದ, ನೀನು ಇದನ್ನೂ ಚೆನ್ನಾಗಿ ತಿಳಿಯಬೇಕು.

೧೨. ವಿಭುದರು ಅದನ್ನೂ ಸೇವಿಸಬೇಕು. ಯಮನು ಸರ್ವಜಗತ್ತನ್ನೂ ಸಂಹರಿಸುವವನಾಗಿದ್ದಾನೆ. ಹಾಗಾದುದರಿಂದ ಶ್ರೀಹರಿಯ ಅಪ್ಪಣೆಯ ಮೇರೆಗೆ ಈ ನಿತ್ಯ ವಿಧಿಯನ್ನು ನೀನು ಅನುಸರಿಸು.

೧೩. ಮಾಯವಧುವು ಲಜ್ಜೆಯಿಂದ ಪಕ್ಕಕ್ಕೆ ಸರಿದು ನಿತ್ಯವೂ ಮುಖವನ್ನು ಮರೆಸುತ್ತಾಳೆ. ಭಯಭಕ್ತಿಯಿಂದ ನಿತ್ಯವೂ ಆತನ ಸತ್ಕ್ರಿಯೆ ಆಚರಿಸುತ್ತಾಳೆ. ಈ ನೆಲೆಯನ್ನು ತಿಳಿಯದ ದುರಾತ್ಮಕರು ಆತನನ್ನು ಗುರು - ಬ್ರಹ್ಮನಲ್ಲವೆಂದು ತತ್ತ್ವವನ್ನು ತಿಳಿಯದೇ ಹೇಳುತ್ತಾರೆ. ಇದಕ್ಕಿಂತ ಅಧಿಕವಾದ ಚೋದ್ಯವು ಇನ್ನೊಂದಿಲ್ಲ.

೧೪. ಆತನಿಂದಲೇ ಸರ್ವ ಸುರಾಸುರ ಮಾನವ ಜಾತಿಗಳೆಲ್ಲವೂ ಹುಟ್ಟಿರುವುದು. ಆತನಿಂದಲೇ ವೇದಗಳು, ಬ್ರಾಹ್ಮಣರು ಸೃಷ್ಟಿಯಾಗಿರುವುದು. ಸರ್ವಾತ್ಮಕನಾದ ಆತನು ಈ ರೀತಿಯಲ್ಲಿ ತನ್ನ ಮೂಲಕವೇ ವರ್ತಿಸುತ್ತಿರುತ್ತಾನೆ. ಆತನನ್ನುಳಿದು ಬೇರೊಬ್ಬ ಪೂರ್ಣಾತ್ಮಕನು ಕಾಣಿಸಲಾರನು.

೧೫. ಯೋಗಿಗಳು ಆತನನ್ನೇ ಹೃದಯದಲ್ಲಿ ಭಜಿಸುತ್ತಿರುವುದು. ಯಾಜ್ಞಿಕರು ಮಂತ್ರದ ಮೂಲಕ ಯಜ್ಞ ಮಾಡುವುದು ಅವರನ್ನೇ. ಆಗಮ ಸಾಂಖ್ಯ ಮೊದಲಾದ ಸುಜನ ಮತಗಳು ಆತನನ್ನೇ ನೋಡುತ್ತಿರುವುದು. ಈ ಭಕ್ತಜನರಿಗೆಲ್ಲ ನಿಜವಾದ ಮುಕ್ತಿಯನ್ನು ಅನುಗ್ರಹಿಸುವುದು ಆತನೇ.

೧೬. ಶ್ರುತಿಗಳು ಹೊಗಳುತ್ತಿರುವುದೂ ಆತನನ್ನೇ. ವೇದಗಳಲ್ಲಿ ಮತ್ತೆ ಮತ್ತೆ ವಿಜೃಂಭಿಸುವುದೂ ಆತನೇ. ಈ ಯುಗವನ್ನು ಗ್ರಹ - ತಾರೆಗಳ ಸಮೇತವಾಗಿ ಮುಗಿಸುವ ಅಧಿಕಾರವೂ ಅವನಿಗೇ ಇರುವುದು. ವೇದೋಚ್ಚಾರಣೆಯ ಮೂಲಕ ಪ್ರಜೆಗಳ ಕರ್ಮಗಳ ಬೇರ್ಪಡಿಸುವುದೂ ಆತನೇ.

೧೭. ಮಗನೇ ಆತನಿಂದಲೇ ಹಿಂದೆ ನಾನು ಜನಿಸಿದೆನು ಎಂಬುದನ್ನು ನೀನು ಚೆನ್ನಾಗಿ ತಿಳಿದಿರು. ಆತನಿಂದಲೇ ಈ ಪ್ರವೃತ್ತಿಗಳನ್ನು ಆಚರಿಸಿಕೊಂಡು ಸುಖವಾಗಿರುವುದು. ಆತನು ಕೃಪೆಯಿಟ್ಟು ಈ ಸಚರಾಚರಗಳೆಲ್ಲವನ್ನೂ ಆದಿಯಲ್ಲಿ ನಮಗಾಗಿ ಸೃಷ್ಟಿಸಿದ್ದಾನೆ. ನಮಗೇ ಆತನೇ ಗುರು. ಅವನ ಹೊರತು ಅನ್ಯಗತಿಯಿಲ್ಲವೆಂಬುದನ್ನು ತಿಳಿ.

೧೮. ಸತ್ವ - ರಜಸ್ಸು - ತಮ ಎಂಬ ಮೂರು ಗುಣಗಳಿಂದ ಈ ಜಗವು ಮೀರುವುದಕ್ಕೇ ಸಾಧ್ಯವಿಲ್ಲವೆನ್ನುವಂತೆ ವರ್ತಿಸುತ್ತಿದೆ. ಆತ್ಮವನ್ನು ಒತ್ತೆಕೊಟ್ಟು ಈ ಸಂಸಾರ ಸಮುದ್ರದಲ್ಲಿ ಜನರು ಈಜುತ್ತಿರುತ್ತಾರೆ. ಅವರು ನಿತ್ಯಾತ್ಮನ ವಿಶುದ್ಧ ಪರಾತ್ಪುರುಷನ ನೆಲೆಯನ್ನು ಅರಿತಿರುವುದಿಲ್ಲ.

೧೯. ಪರಮಾತ್ಮನ ಸಂಕಲ್ಪದಿಂದ ಈ ಮಾಯೆಯು ಜಗತ್ತಿನಲ್ಲಿ ಹುಟ್ಟಿದ್ದಾಳೆ. ಆತ್ಮವನ್ನು ಧರಿಸಿಕೊಂಡು ಮಡಿಕೆಯಲ್ಲಿರುವ ಚಂದ್ರನ ಹಾಗೆ ಆಕೆ ಸಂಚರಿಸಿದಳು. ಅದ್ವಯ ಭಾವನೆಯಲ್ಲಿ ಕೌತುಕರಾಗಿದ್ದ ಜನಗಳೊಂದಿಗೆ ಆಕೆ ಬೆರೆತಿದ್ದಳು. ನೋಡುವವರಿಗೆ ಕೈಗನ್ನಡಿಯ ಹಾಗೆ ಅವಳು ಪ್ರಕಾಶಿಸುತ್ತಿದ್ದಳು.

೨೦. ಅವುಗಳಿಂದ ಮೂರು ಮೂರು ವಿಧವಾದ ಅಹಂಕಾರವು ಪ್ರಕಾಶಿತವಾಯಿತು. ಅದರಿಂದ ಭೌತಿಕ ಮತದಲ್ಲಿ ಪ್ರಪಂಚವು ಉದ್ಭವವಾಯಿತು. ಈ ವಿಕಾರ ಗುಣಗಳಿಗೆ ತ್ರಿಗುಣಗಳೆಂದು ನಾಮಕರಣ. ಸೃಷ್ಟಿಸ್ಥಿತಿಗಳಿಗೆ ಬೀಜೋಪಾದಿಯಲ್ಲಿರುವ ಈ ಭೇದವನ್ನು ಯಾವಾಗಲೂ ತಿಳಿದಿರು.

೨೧. ಮಗನೇ, ಆ ಜಗದೇಕನ ಮಹಿಮೆಯು ವಿಸ್ಮಯಕಾರಿಯಾದುದು. ಆಕಾಶ, ಬೆಂಕಿ, ವಾಯು, ಜಲ, ಭೂತಳ ಇವುಗಳೆಲ್ಲವೂ ಈ ಭೌತ ವಸ್ತುಗಳಿಂದಲೇ ಮರು ಹುಟ್ಟು ಪಡೆದವು. ಅದಲ್ಲದೆ ದಶ ಇಂದ್ರಿಯಗಳಾದಿಯಾದ ಸರ್ವ ಜಗತ್ತು ಇದರಿಂದಲೇ ಹುಟ್ಟಿತು. ಗುಣ - ವೃದ್ಧಿಯ ಭೇದವನ್ನು ತಿಳಿದು ತಪ್ಪದೆ ಈ ಕ್ರಮವನ್ನು ತಿಳಿಯಬೇಕು.

೨೨. ಇಂದ್ರಿಯದ ವಿಕಾರ ನಿಮಿತ್ತದಿಂದ ಈ ಜಗತ್ತು ಸೇರಿಕೊಂಡಿರುವುದಾಗಿದೆ. ನಮ್ಮನ್ನು ಪ್ರೇರೇಪಿಸುವ ಈ ಮನಸ್ಸು ಉಭಯ ಇಂದ್ರಿಯದ ಅನುಬಂಧ ನಿಮಿತ್ತವೇ ಆಗಿದೆ. ಮರುತ, ಮನಸ್ಸುಗಳಿಂದ ಉದಿಸಿ, ಶ್ರೋತ್ರಾದಿ ಗುಣಗಳಿರುವ ಈ ತನುವನ್ನು ಮಾಯೆಯು ಕಾರುಣ್ಯದಿಂದ ಉಂಟು ಮಾಡಿರುವಳು.

೨೩. ತತ್ತ್ವಗಳು ಲೋಕದಲ್ಲಿ ಬೇರೆಬೇರೆಯಾಗಿ ಜನಿಸಿ ಪ್ರಕಾಶಿಸುತ್ತವೆ. ಅವುಗಳನ್ನು ಪ್ರೀತಿಯಿಂದ ಪಡೆದುಕೊಳ್ಳುವರೇ ಧಾತುಗಳಿಲ್ಲದೆ ಕೇವಲ ಉಮೇದಷ್ಟೇ ಇರುವುದನ್ನು ತಿಳಿದು, ಆತ್ಮ ತಲದಲ್ಲಿ ಚೇತಸನ್ನು ಆತನು ಪ್ರಕಾಶಿಸಿದರು. ಆ ಕಾರಣವು ಏನೆಂದು ತಿಳಿಯದೆ ಲೋಕವು ಮರೆಯಿತು, ಇದು ನಿಜ.

೨೪. ಹತ್ತು ಸಾವಿರ ವರ್ಷಗಳವರೆಗೆ ಈ ಭೂಮಿಯು ನೆಲೆತಪ್ಪಿತು. ಆಗ ಜಗತ್ತಿನ ಸಚರಾಚಾರಗಳಿಗೆಲ್ಲ ಉತ್ಸಾಹವೇ ಇಲ್ಲದಂತಾಯಿತು. ಇದನ್ನು ತಿಳಿದು ಮತ್ಸ್ಯಾವತಾರದ ಮೂಲಕ ತೆಗೆದು ಉದ್ಧರಿಸಿದರು. ಮಗನೇ ಹೀಗೆ ಆ ವಿರಾಟಪ್ಪುರುಷನು ಅದನ್ನು ಸ್ಥಿರಗೊಳಿಸಿದುದು ಆಶ್ಚರ್ಯವೇ ಸರಿ.

೨೫. ಸಾವಿರ ಮುಖಗಳು, ಸಾವಿರ ತಲೆಗಳು ಸಾವಿರ ಕಣ್ಣುಗಳು, ಸಾವಿರ ಕಿವಿಗಳು ಸಾವಿರ ಮೂಗುಗಳು, ಸಾವಿರ ಕೈಗಳು, ಸಾವಿರ ಪಾದಗಳು - ಹೀಗೆ ಆ ಪರಮ ಜ್ಞಾನಿಯು ಕಾಲಿನ ತುದಿಯಿಂದ ಶ್ರೀ ಮಕುಟದ ವರೆಗೆ ಈ ಲೋಕವೆಲ್ಲವನ್ನೂ ಬೇರೆ ಬೇರೆ ಕ್ರಮದಿಂದ ಪೂರ್ಣವಾಗಿ ಧರಿಸಿಕೊಂಡನು.

೨೬. ಪಾದದಲ್ಲಿ ಪಾತಾಳವೂ, ಮುಂಗಾಲಿನಲ್ಲಿ ರಸಾತಳವೂ, ಜಂಘೆಯಲ್ಲಿ ಅದೆಷ್ಟೋ ತಳಾತಳಗಳೂ, ಜಾನುವಿನಲ್ಲಿ ಸುತಳವೂ, ತೊಡೆಯಲ್ಲಿ ಮಹಾತಳವೂ, ಸೊಂಟದಲ್ಲಿ ವಿತಳ ಮತ್ತು ಅತಳವೂ ಇರಲು ಸ್ತಂಭ ಸಮನಾಗಿ ಚಿತ್ತೇಳು ಜಗತ್ತನ್ನೂ ಧಾತೃವು ಧರಿಸಿದನು.

೨೭. ಮೂಲದಲ್ಲಿ ಭೂತಳವೂ, ನಾಭಿಯಲ್ಲಿ ಭುವರ್ಲೋಕವೂ, ಹೊಟ್ಟೆಯಲ್ಲಿ ಸ್ವರ್ಲೋಕವೂ, ಎದೆಯಲ್ಲಿ ಮಹಲೋಕವೂ, ಗಂಟಲಲ್ಲಿ ಜನಲೋಕವೂ, ಹಣೆಯಲ್ಲಿ ತಪಲೋಕವೂ, ಮುಖದಲ್ಲಿ ಸತ್ಯಲೋಕವೂ ನೆತ್ತಿಯಲ್ಲಿ ಬ್ರಹ್ಮಾಂಡವೂ ಇರುತ್ತಿರಲು.

೨೮. ಐವತ್ತು ಕೋಟಿ ವಿಶಾಲವಾಗಿರುವ ಸ್ಥೂಲ ರೂಪದ ಶ್ರೀಹರಿಯು; ಆತನ ಹೃದಯದಲ್ಲಿಯೂ ಐವತ್ತು ಕೋಟಿ ವರ್ತುಲಗಳು. ಇದು ಶಾಸ್ತ್ರಸಿದ್ಧವಾಗಿರಲು ಪಂಚಭೂತಗಳಿಂದ ಜನಿಸಿರುವ ಮೂರು ಗುಣಗಳು ಮಾಯೆಯ ಮೂಲಕ ಮರೆಮಾಚಿಕೊಂಡಿವೆ.

೨೯. ಬೆಂಕಿಯು ಮುಖದಿಂದಲೂ, ಸೂರ್ಯ- ಚಂದ್ರರು ಕಣ್ಣಿನಿಂದಲೂ ಹಗಲು-ರಾತ್ರಿಗಳು ಕಣ್ಣಿನ ರೆಪ್ಪೆಗಳಿಂದಲೂ, ಹುಟ್ಟಿನಿಂದ ಯಮನೂ, ಭುಜಗಳಿಂದ ಕ್ಷತ್ರಿಯರೂ, ಸರ್ವ ಸುರಾಸುರರು ರೋಮಗಳಿಂದಲೂ;

೩೦. ನಾನು ನಾಭಿಯಿಂದಲೂ, ಈಶ್ವರನೂ, ಜಠರದಿಂದಲೂ ವಿಜ್ಞಾನ ಮಯವಾಗಿ ಜನಿಸಿದೆವು. ಆತನ ವಿಲಾಸದಿಂದ ಮಾಯೆಯೂ, ಈ ಧರಣಿಯನ್ನು ರಕ್ಷಿಸಲೋಸುಗ ಸರ್ವ ಸಚರಾಚರಗಳೆಲ್ಲವೂ ಜನಿಯಿಸಿದವು.

೩೧. ಮಾಯಾಂಗನೆಯು ಮಹಾಲೋಕ ಜಗತ್ತನ್ನು ಧರಿಸಿಕೊಂಡು ಆತ್ಮದ ನಿಜವನ್ನು ತಿಳಿಯದ ಜನಗಳನ್ನು ನಿತ್ಯವೂ ಮಹಾಬಾಧೆಗಳಿಂದ ಮುಳುಗಿಸಿ, ಮೇಲೆಕ್ಕೇಳಿಸುತ್ತಿರುವಳು. ಈ ಭೂಮಿಯಲ್ಲಿ ಪ್ರಕಾಶಮಾನವಾಗಿ, ನಾನಾ ವಿಧವಾದ ಮಹಾಭಂಗವನ್ನು ಅವಳು ಉಂಟು ಮಾಡುವಳು.

೩೨. ಸುರರು, ಮಾನವರು, ದಾನವರು, ಗಂಧರ್ವರು, ವಿದ್ಯಾಧರರು ಯಕ್ಷರು ಕಿನ್ನರ -ಕಿಂಪುರುಷಾದಿ ಮಹಾ ಪಶು - ಪಕ್ಷಿ ಸಮೇತವಾಗಿ, ಅವರ ರೋಮ ಕೋಟಿಯಲ್ಲಿರುವ ನಾನಾ ಅಜಾಂಡ ವಿಭೂತಿಗಳನ್ನು ತಿಳಿದು ಹೇಳಲು ನನಗೆ ಸಾಧ್ಯವೇ ಇಲ್ಲ.

೩೩. ಮುಂದುವರಿದು ಬ್ರಹ್ಮನು ನಾರದನಿಗೆ ತನಯನೇ ಕೇಳು! ಹೀಗಿರುವ ಅಜಾಂಡ ಘಟಗಳಲ್ಲಿ ನನ್ನಿಂದಲೂ ಅಧಿಕವಾದ ಅನೇಕ ಬ್ರಹ್ಮರ ಸಮುದಾಯ ಉಂಟಾಗಿ ಲಯಗೊಂಡು ಆಸಂದಲ್ಲಿರುತ್ತಾರೆ. ಹೀಗೆ ವ್ಯವಸ್ಥಿತವಾಗಿ ಸಮುದ್ರದ ತೆರೆಗಳ ಹಾಗೆ ಏರಿ - ಇಳಿಯುವ ಆತನ ಜಗತ್ತಿನ ವಿಲಾಸವನ್ನು ಏನೆಂದು ಹೇಳಲಿ ಎಂದನು.

೩೪. ಕಲ್ಪಾಂತರದ ಅವಸಾನ ಕಾಲದಲ್ಲಿ ಸಾಗರದಲ್ಲಿ ಒಂದು ಎಲೆಯ ಮೇಲೆ ಮಗುವಾಗಿ ಆತನು ಪವಡಿಸಿದ್ದನು. ಹೀಗೆ ಅನೇಕ ಯುಗಗಳೇ ಸಂದು ಹೋದವು. ಆಗ ಆತನು ಸುನಾಭಿಯ ತಾವರೆಯಿಂದ ನನ್ನನ್ನು ಸೃಷ್ಟಿಸಿದನು. ನಾನು ಆ ಕತ್ತಲೆಯಲ್ಲಿ ಸಮುದ್ರದ ಮೊರೆತವನ್ನು ಕೇಳಿ ಹೆದರಿಕೆಯಿಂದ ಮುದುಡಿಕೊಂಡಿದ್ದೆನು.

೩೫. ನಾನು ಭಯದಿಂದ ಏನೂ ಮಾಡಲಾಗದೆ ಒಂದು ದಿಕ್ಕಿಗೆ ನಿರೀಕ್ಷಿಸಿದೆನು. ಹೀಗೆ ನಾಲ್ಕು ದಿಕ್ಕಿಗೆ ನೋಡಲಾಗಿ ಒಂದೊಂದಾಗಿ ನನ್ನಂತೆಯೇ ಇರುವ ನಾಲ್ಕು ಮುಖಗಳು ನನಗೆ ಉಂಟಾದುವು. ಮತ್ತೆ ಅಂಜಿಕೆಯಿಂದ ವಿಹ್ವಲಗೊಂಡು ನಾಳದ ಮೂಲಕ ಅಲ್ಲಿಂದ ಕೆಳಗೆಡೆ ಇಳಿದೆನು. ಹೊಟ್ಟೆಯಲ್ಲಿ ಸ್ಥಳ ಕಾಣದೆ (ಮೇಲೆ ಬರಲು) ನೂರು ವರ್ಷ ಅಲ್ಲಿಯೇ ಇದ್ದೆನು.

೩೬. ಆಮೇಲೆ ಭಯ ಪೀಡಿತನಾಗಿ ನಾನು ನೆಲೆಗಾಣದೆ ಕರ್ಣಿಕೆಗೆ ಬಂದೆನು. ಅಲ್ಲಿಯೇ ನಿಶ್ಚಲವಾಗಿ ದೃಢತೆಯಿಂದ ಭಜಿಸಲು ಆತನು ಪ್ರತ್ಯಕ್ಷನಾದನು. ಆತನು ಜಗಸ್ಥಿತಿಯನ್ನು ಉಂಟು ಮಾಡಿದ ರೀತಿಯನ್ನು (ನನಗೆ) ಕಲಿಸಿದನು. ಆಮೇಲೆ ಆತನ ಮತವಿಡಿದು ಈ ಬ್ರಹ್ಮಾಂಡನನ್ನು ಸೃಷ್ಟಿಸಿ ನೆಲೆಗೊಂಡೆನು.

೩೭. ಹಲವು ಮಾತೇಕೆ! ಅಜಾಂಡ ಸ್ಥಿತಿಯೂ ಮಣಿಹೋಮವೂ ನನಗಾಯಿತು. ಜಲಜೋದರನಾದ ಶ್ರೀಹರಿಯ ಮಹಾನುಗ್ರಹದಿಂದ ನನ್ನಲ್ಲಿ ಈ ಕಲ್ಪನೆಗಳಾದುವು. ಇದರ ಅಂತ್ಯದಲ್ಲಿ ಈಶ್ವರನು ಈ ಜಗತ್ತನ್ನು ಮರ್ದಿಸಿ ನಾಶಗೊಳಿಸುತ್ತಾನೆ. ಆಗ ಜಗತ್ತಿಗೆ ಮಲಿನ ಉಂಟಾಗದ ಹಾಗೆ ಕಮಲಾಯತನೇತ್ರನಾದ ಆ ಶ್ರೀ ಹರಿಯು ಜಗತ್ತನ್ನು ರಕ್ಷಿಸುತ್ತಾನೆ.

೩೮. ಇಂದ್ರ, ಅನಲ, ಯಮ, ನಿರುತಿ, ವರುಣ, ವಾಯು, ಚಂದ್ರ, ಶಿವ, ತಾರೆಗಳು, ಗ್ರಹಗಳೆಲ್ಲ ಆತನ ಮತವಿಡಿದು, ಈ ಲೋಕಹಿತಕ್ಕಾಗಿಯೇ ಸಂಸಾರಿಕರಾಗಿ ನೆಗಳ್ತೆವೆತ್ತವರಾಗಿದ್ದಾರೆ. ಹರಿಯ ಮಹಿಮೆಯನ್ನು ವಿವರಿಸಲು ನನಗೆ ಸಾಧ್ಯವಿಲ್ಲ. ಆತನೇ ಬಲ್ಲನಷ್ಟೇ!

೩೯. ಆ ಪುಣ್ಯ ಪುರಾಣನ ಅಭಿಮತದಿಂದ ನನ್ನ ಕೈಲಾದಷ್ಟು ಸಾಧ್ಯವೇ ಎಂದು ತಾನೇ ನಾನೀ ಸೃಷ್ಟಿ ವಿಧಾನ ಕಾರ್ಯವನ್ನು ಕೈಗೊಂಡಿದ್ದು? ಆತನ ನೆನಪು ನನ್ನಲ್ಲಿರುವುದರಿಂದ, ರಜೋಗುಣದ ಲೇಪವೂ ನನಗಿಲ್ಲ. ಹಾಗೆಯೇ ನಾನು ಆತನ ಶ್ರೀಪಾದವನ್ನು ಭಜಿಸುತ್ತಿರುವುದರಿಂದ ನನಗೊಂದಿಷ್ಟು ಭಯವೂ ಇಲ್ಲ.

೪೦. ಒಂದೊಂದು ಯುಗದಲ್ಲಿಯೂ ಆತನು ನಮ್ಮ ಸಂಕಟಗಳಿಗಾಗಿ ಅವತರಿಸಿದ್ದಾನೆ. ಒಂದೊಂದು ಅವತಾರವೆತ್ತಿದಾಗಲೂ ಭೂಮಿಯಲ್ಲಿ ಉದ್ಭವಿಸಿದ ಒಂದೊಂದು ಮದಾಂಧರನ್ನು ನಿರ್ಮೂಲನೆ ಮಾಡಿದ್ದಾನೆ. ಹೀಗೆ ಒಂದೊಂದು ವಿಧದಿಂದ ಆತನು ತನ್ನ ಭಕ್ತರನ್ನು ರಕ್ಷಿಸಿದ್ದಾನೆ.

೪೧. ನಾನು, ಈಶ್ವರ, ದಕ್ಷ, ಪ್ರಜಾಪತಿಗಳು, ಮನು, ದೇವ ಸಮೂಹ, ನಿರ್ಮಲರಾದ ಆ ಯೋಗಿಗಳು ಸನಕಾದಿ ಸಮಸ್ತರು, ಸೂರ್ಯ, ಚಂದ್ರ, ಅಗ್ನಿ, ಮಾರುತರು ಹಾಗೆಯೇ ಋಷಿಗಳಲ್ಲಿ ನೀನೂ ಆದಿಯಾಗಿ ಆ ಶ್ರೀನಾಥನ ಅವತಾರವೆಂಬುದನ್ನು ಚೆನ್ನಾಗಿ ತಿಳಿ.

೪೨. ದೇವತೆಗಳು, ಮಾನವರು, ದಿವ್ಯರಾದ ಮಹೇಶ್ವರರು, ಹಾವುಗಳು, ಸಿದ್ಧರು, ಗರುಡರು, ಅಪ್ಸರರು, ಕಿನ್ನರರು, ಗಂಧರ್ವರು, ವಿದ್ಯಾಧರರು, ಸಮೂಹವೆಲ್ಲವೂ ಪರಮಾತ್ಮನ ಅಂಶವೇ. ಹಾಗೆಯೇ ಭೂತ ಪಿಶಾಚಿಗಳು, ರಾಜರು, ಉತ್ತಮರು ಮೊದಲಾದವರೆಲ್ಲರೂ ಪರಮಾತ್ಮನ ಅಂಶದವರೆಂಬುದನ್ನು ಸರಿಯಾಗಿ ತಿಳಿ.

೪೩. ಮಗನೇ! ಅತಿಯಾದ ಶೋಭೆಯೂ ಅತಿಯಾದ ಶ್ರುತಿಯೂ, ಅತ್ಯಧಿಕ ಹಿತವಾದ ಬುದ್ಧಿಯೂ, ಅತಿ ವಿದ್ಯೆಯೂ, ಅತಿ ಸ್ಮೃತಿಯೂ, ಅತಿ ಆಗಮವೂ, ಅತಿ ಸಂಪದ ಸಾರವೂ, ಅತಿ ಐಶ್ವರ್ಯವೂ ಅತಿ ಸತ್ವ ಬಲವೂ, ಅತಿ ನ್ಯಾಯಸ್ಥಿತಿಯೂ, ಅತಿ ಸತ್ಯಮತಿಯೂ ಆ ಪರಮಾತ್ಮನ ಅಂಶವೇ ಎಂದು ಚೆನ್ನಾಗಿ ತಿಳಿ.

೪೪. ಆದಿಯಲ್ಲಿ ನಾರದರು ಚತುರ್ಮುಖನಿಂದ ಶ್ರೀ ಭಾಗವತಾರ್ಥವನ್ನು ಕೇಳಿ ಪ್ರಪಂಚವನ್ನು ತಿಳಿದುಕೊಂಡರು. ಇಲ್ಲಿಗೆ ನಾಲ್ಕನೆಯ ಅಧ್ಯಾಯವು ಮುಕ್ತಾಯಗೊಂಡಿತು. ಈ ಲೋಕದ ಜನರು ಹೇಳಿ - ಕೇಳಿದ ಮಾತ್ರಕ್ಕೆ ಅವರಿಗೆ ಅಕ್ಷಯ ಮೋಕ್ಷವು ಲಭಿಸುವುದು.

ಅಧ್ಯಾಯ ೫

೧. ಭವನಂದನನೂ, ಸರ್ವಭಯಾಪಹರನೂ, ಶರಣಾಗತ ಬಂಧುವೂ, ಭುವನೇಶ್ವರಿ - ಸಾಧುಗಳಿಂದ ವಂದಿಸಲ್ಪಟ್ಟವನೂ, ಕಮಲಾಸನನಿಗೆ ಪ್ರಿಯನೂ ಆದ ಶ್ರೀಹರಿಗೆ ಜಯವಾಗಲಿ! ಸುವಿವೇಕವೂ ಅಮೃತಸಾಗರವೂ ಆದ ಕಥೆಯನ್ನು ಅಂದು ಬ್ರಹ್ಮನು ನಾರದನಿಗೆ ಹೇಳಿದನು. ಮುಕುಂದನ ಅವತಾರ ಶ್ರುತಿಯ ಆ ವಿವರವನ್ನು ಈಗ ಮಹಾಜನಗಳು ಕೇಳಿರಿ.

೨. ಶಶಿವಂಶ ಶಿಖಾಮಣಿಯಾದ ಮಹಾಮಹಿನಾದ ಅಭಿಮನ್ಯುವಿನ ಬಲಾಢ್ಯ ಶಿಶುವಾಗಿರುವ ಪರೀಕ್ಷಿತ ರಾಜನೇ ಉತ್ಸಾಹದಿಂದ ಭಗವತ್ಕಥೆ ಸಾರವನ್ನು ಕೇಳು. ಕುಶಜಾಸನನೆನಿಸಿದ ಬ್ರಹ್ಮನು ನಾರದನಿಗೆ ಹೇಳಿದ ಮಹಾಕಥಾ ಸಾರವನ್ನು ಕಣ್ಣಿಗೆ ಕಟ್ಟುವಂತೆ ಸಂಪೂರ್ಣವಾಗಿ ನಾನು ಹೇಳುತ್ತೇನೆ. ಅದನ್ನು ನೀನು ಕೇಳುವಿಯಂತೆ.

೩. ಯುಗವು ಮುಗಿದ ಅಂತ್ಯದಲ್ಲಿ ಆ ಪ್ರಳಯ ಕಾಲದಲ್ಲಿ ಮುಕುಂದನು ಮತ್ಸ್ಯಾಕೃತಿಯಲ್ಲಿ ತನ್ನ ಶರೀರವನ್ನು ನೆಗಳ್ತೆಗೊಳಿಸಿದನು. ಈ ಹಿಂದೆ ಮಂದರ ಗಿರಿಯನ್ನು ಬಂಧಿಸಿ, ಸಮುದ್ರದಲ್ಲಿ ಕೆಡಹಲಾಗಿ ಅದನ್ನು ಎತ್ತುವ ಸಲುವಾಗಿ ಖಗವಾಹನನಾದ ಶ್ರೀ ಹರಿಯು ಕೂರ್ಮಾಕೃತಿಯಿಂದ ಅವತಾರವೆತ್ತಿದನು.

೪. ಹಿಂದೆ ಭೂಮಿಯು ರಸಾತಳಕ್ಕೆ ತಗ್ಗಲು ನಾನು ದುಃಖಿಸುತ್ತಿದ್ದೆನು. ಆಗ ಅದನ್ನು ನೋಡಿದ ಪರಮಾತ್ಮನು ಮಹಾವರಾಹವತಾರವಾಗಿ ನಾಸಿಕದಿಂದ ಕಾಣಿಸಿಕೊಂಡನು. ಈ ಭೂಮಿಯನ್ನು ಸ್ಥಿರವಾಗಿ ನಿಲ್ಲುವಂತೆ ಮಾಡಿದನು. ಆಮೇಲೆ ನರ - ನಾರಾಯಣಾವತಾರದಿಂದ ಯೋಗವನ್ನು ಸೃಜಿಸಿದರು.

೫. ಮುನಿಪುಂಗವನೇ ಕೇಳು! ಆದಿಯಲ್ಲಿ ಕರ್ದಮೆಯ ಮಗನಾಗಿ ಜನಿಸಿ, ಕಪಿಲವೆಂದು ಅಭಿಧಾನ ಪಡೆದನು. ತನ್ನ ತಾಯಿಗೆ ಮಹಾಲೋಕಕ್ಕೇ ಗೊತ್ತಾಗುವಂತೆ ಮೋಕ್ಷವನ್ನೂ ಕರುಣಿಸಿದನು. ಅತ್ರಿಗೆ ಮಗನಾಗಿ ಜನಿಸಿ ಆ ಕಥೆಯು ಜಗತ್ತಿನಲ್ಲೆಲ್ಲ ಪಸರಿಸುವಂತೆ ಮಾಡಿದರು.

೬. ಆದಿಯಲ್ಲಿ ಯಜ್ಞಪುರುಷವೆಂಬ ಹೆಸರಿನಲ್ಲಿ ಈತನು ಉದಿಸಿದ್ದನು. ನೃಪನಾದ ನಾಭಿಗೆ ಮಗನಾಗಿ ವೃಷಭನೆಂಬ ನಾಮದಲ್ಲಿ ಅವತಾರವೆತ್ತಿದನು. ಪೃಥು ಚಕ್ರವರ್ತಿಗೆ ಮಗನಾಗಿ ಜನಿಸಿ ಭೂಮಿಯಲ್ಲಿ ಪಶುಕುಲವನ್ನು ಉಂಟು ಮಾಡಿದನು. ಹೀಗೆ ಹಿಂದೆ ಅನೇಕ ವಿಭೂತಿಗಳಾಗಿ ಅಂಬುಜನಾಭನು ಉದಿಸಿದ್ದನು.

೮. ಈ ಹಿಂದೆ ಧ್ರುವನೆಂಬ ಬಾಲಕನು ತನ್ನ ಐದನೇ ವರ್ಷದಲ್ಲಿ ಆತನನ್ನು ಭಜಿಸಲಾಗಿ ಅವನಿಗೆ ಧ್ರುವಲೋಕವನ್ನು ಅನುಗ್ರಹಿಸಿದನು. ಸಕಲ ಪ್ರಜೆಗಳು ನೋಡುತ್ತಿದ್ದಂತೆ, ಮರಣ ಕಾಲ ಸಮೀಪನಾದ ಒಬ್ಬಯೂಥಪತಿಯು ಆತನನ್ನು ಬಹುವಾಗಿ ಸ್ತುತಿಸಲು, ಅವನಿಗೆ ಭೂಮಿಯಲ್ಲೇ ಸಿಗದ ಮೋಕ್ಷವನ್ನು ಪರಿಪಾಲಿಸಿದನು.

೯. ಸಮುದ್ರ ಮಥನದ ವೇಳೆ ಧನ್ವಂತರಿಯಾಗಿ ಈತನು ಜನಿಸಿದನು. ಆತನ ಕೈಯಲ್ಲಿರುವ ಅಮೃತ ಕಲಶವನ್ನೂ ಒಡೆಯಲಾಗಿ, ಮೋಹಿನಿಯ ರೂಪದಲ್ಲಿ ಅದನ್ನು ಸಂಗ್ರಹಿಸಿದನು. ಅಮೃತವನ್ನು ವಂಚಿಸಿದ ದೈತ್ಯ ಸಮೂಹವೆಲ್ಲವನ್ನೂ ಮೋಹಮದಾಂಧತೆಯಲ್ಲಿ ಮರುಳಾಗುವ ಹಾಗೆ ಮಾಡಿ-

೧೦. ಆ ತರಳೆಯು ತನಗೆ ಒಪ್ಪದಿರಲು ಆ ರಾಕ್ಷಸರು ಪರಸ್ಪರಲ್ಲೇ ಗುದ್ದಾಡಿ ಸತ್ತು ಹೋದರು. ಬಳಿಕ ಮುಂದಣ ಅವತಾರದಲ್ಲಿ ನಡು ಕಂಭದಿಂದ ದುರುಳನಾದ ಹಿರಣ್ಯ ಕಶಿಪುವಿನ ವಧೆಗೆಂದೇ ಜನಿಸಿದನು. ನರಸಿಂಹಾವತಾರ ತಾಳಿ ಆ ಬಲಶಾಲಿಯಾದ ಆತನನ್ನು ವಧಿಸಿ ಆತನ ಕರುಳಿನ ಮಾಲೆಯನ್ನು ನಾರಾಯಣ ಮೂರ್ತಿಯು ಕೊರಳಲ್ಲಿ ಧರಿಸಿದನು.

೧೧. ಬಲಿ ಎಂಬ ಅತಿಬಲನು ಈ ಭೂಮಿಯಲ್ಲಿ ಅತಿ ಸಾಹಸಿಯಾಗಿದ್ದನು. ಆಗ ಕಾಶ್ಯಪನಿಗೆ ವಾಮನವಾಗಿ ಜನಿಸಿದ ಶ್ರೀ ಹರಿಯು ಬಲಿಯಲ್ಲಿ ದಾನವನ್ನು ಕೇಳಿದನು. ಮೂರಡಿ ನೆಲೆಯನ್ನು ಬೇಡಿ, ಆತನನ್ನು ವಂಚಿಸಿದನು. ಹಾಗೆಯೇ ಆತನ ಭಕ್ತಿಗೆ ಒಂದು ದ್ವಾರ ರಕ್ಷಕನಾಗಿಯೂ ಶ್ರೀ ವಾಮನಮೂರ್ತಿಯು ನೆಲೆಯಾದನು.

೧೨. ಈ ಭೂಮಿಯಲ್ಲಿ ಅರ್ಜುನನೆಂಬ (ಕಾರ್ತವೀರ್ಯಾರ್ಜುನ) ಮಹಾ ಅಧಮರಾಜನೊಬ್ಬನಿದ್ದನು. ಕೊಡಲಿಯಿಂದ ಅವನನ್ನು ಭೇದಿಸಿದಲ್ಲದೆ ಇಪ್ಪತ್ತೊಂದು ಭಾರಿ ಕ್ಷತ್ರಿಯರನೆಲ್ಲ ನಿರ್ಮೂಲನಗೊಳಿಸಿದನು. ಜಡಮಾನವರೆಲ್ಲ ವೇದ ಶ್ರುತಿ ಸಾರಗಳನ್ನೆಲ್ಲ ಖಂಡಿಸುತ್ತಿರಲು ವ್ಯಾಸಮುನಿಯ ಅವತಾರದಲ್ಲಿ ಅವತಾರವೆತ್ತಿದನು.

೧೩. ನಮಗೆಲ್ಲರಿಗೂ ಆಪ್ತರೆಂದೆನಿಸಿ, ಇಕ್ಷ್ವಾಕು ಕುಲದಲ್ಲಿ ತಾವರೆಯಂತೆ ಅಗಲ ಲೋಚನನಾದ ಶ್ರೀಹರಿಯು ಶ್ರೀರಾಮನಾಗಿ ಅವತಾರವೆತ್ತಿದನು. ತನ್ನ ತಂದೆಯ ಸತ್ಯವನ್ನು ರಕ್ಷಿಸಲೋಸುಗ, ಸತಿ ಸಹಿತವಾಗಿ ನಿಮಿಷ ಮಾತ್ರದಲ್ಲಿ ಅನುಜಾತನೊಡಗೂಡಿ ದಂಡಕಾರಣ್ಯಕ್ಕೆ ಹೋದನು.

೧೪. ಅತಿಯಾಗಿ ಹೆಚ್ಚಿಗೆಯಾಗಿದ್ದ ರಾಕ್ಷಸ ವಂಶವನ್ನು (ಶ್ರೀರಾಮನ ಅವತಾರದಲ್ಲಿ) ಸಂಹಾರ ಮಾಡಿದನು. ಶ್ರುತಿದೂರನೆನಿಸಿದ ಶ್ರೀರಾಮಚಂದ್ರನ ಕೋಪಕ್ಕೆ ವರುಣನು ಬೆಚ್ಚಿದನು. ಶ್ರೀರಾಮನ ಇಚ್ಛೆಯಂತೆಯೇ ಬೆಟ್ಟಗಳಿಂದ ದಾರಿಯನ್ನು ಸುಗಮಗೊಳಿಸಲಾಯಿತು. ಮಗನೇ! ಇಂತಹ ಶ್ರೀಹರಿಯನ್ನು- ಸತ್ಯಾರ್ಣವನಾಜ್ಞೆಯಾಗಿ ಹೇಳುತ್ತೇನೆ - ಯಾರಿಗೂ ಮೀರುವುದಕ್ಕೆ ಸಾಧ್ಯವಿಲ್ಲ.

೧೫. ದೇವತೆಗಳನ್ನು ಅಟ್ಟಿಸಿ ಪಾರಾದ ದಶಕಂಧರನ ದಿವ್ಯವಾದ ಎದೆಯು ತಾಗಲು ಐರಾವತದ ನಾಲ್ಕು ದಂತಗಳೂ ಮುರಿದವು. ಅವನಿಂದ ಮಿಗಿಲಾದ ಶೂರರು ಬದುಕಿರುವವರಲ್ಲಿ ಇನ್ನಾರು ತಾನೇ ಇದ್ದಾರೆ. ಅಂತಹವನನ್ನೂ ಶ್ರೀರಾಮನಿಂದ ಮುರಿದು ಬಿದ್ದು ಹೋದನು. ಆತನ ವೀರ್ಯವಂತಿಕೆಯನ್ನು ಏನು ತಾನೇ ಹೇಳಲಿ!

೧೬. ದುರ್ಗ ಸಮುದ್ರಗಳ ನಡು ಮಧ್ಯದಲ್ಲಿ ಗಿರಿದುರ್ಗಗಳಿಂದ ಸುತ್ತುವರಿಯಲ್ಪಟ್ಟು ಮಹಾರಕ್ಷಸರು ಮಾಯದಿಂದ ಘೋರತರವಾದ ದುರ್ಗಗಳನ್ನು ಕಟ್ಟಿದ್ದರು. ಇಂತಹ ರಾಕ್ಷಸರಾದ ಉಗ್ರಾಂತಕ, ನರಾಂತಕ, ವೀರ್ಯಬಲ, ನರಕಾಂತಕ ಮೊದಲಾದ ಪಡೆಯನ್ನು ಬೇರುಸಮೇತವಾಗಿ ಆತನು ತನ್ನ ಬಲದಿಂದ ವಧಿಸಿದನು.

೧೭. ಕಡಲಾಕೃತಿಯಿದ ವರ್ದಿಸುತ್ತಿದ್ದ ರಾಕ್ಷಸರನ್ನು ತನ್ನ ಬಾಣವೆಂಬ ಬಡಬಾಗ್ನಿಯಿಂದ ಶ್ರೀರಾಮಚಂದ್ರನು ಸಂಹರಿಸಿದನು. ಪೊಡವಿಗೆ ಅತಿಪಾವನವೆನಿಸಿದ ಈ ಕಥೆಯು ರಾಮಾಯಣವೆಂದೂ ಪ್ರಸಿದ್ಧಿಯಾಯಿತು. ಹಾಗೆಯೇ ಆತನ ಪರಾಕ್ರಮವೂ ಬ್ರಹ್ಮಾಂಡದಲ್ಲೆಲ್ಲ ಪ್ರಸಿದ್ಧಿಯಾಯಿತು.

೧೮. ದ್ವಾಪರಾಯುಗದ ಅಂತ್ಯದಲ್ಲಿ ಭೂಮಿಯು ತಡೆಯಲಾರದೆಂಬಷ್ಟು ಮಹಾಭಾರದಿಂದ ತುಂಬಿ ಮುಳುಗುತ್ತಿರಲು, ಪಶುವಿನಾಕೃತಿಯಿಂದ ಅದನ್ನು ವಿಸ್ತರಿಸಿದರು. ಹಾಗೆಯೇ ನನ್ನಿಂದ ಆಗದೆಂದು ಭೂಮಿಯು ಕ್ಷೀರಸಾಗರ ತಡಿಗೆ ಹೋಗಿ ಜಗಧೀಶನಿಗೆ ಹುಯ್ಯಲಿಟ್ಟು ತಿಳುಹಿಸಿದಳು.

೧೯. ಆಗ ವಸುದೇವನಿಗೆ ಮಗನಾಗಿ ದೇವಕಿಯರ ಉದರದಲ್ಲಿ ಆತನು ಜನಿಸಿದನು. ಘನರಾತ್ರಿಯಲ್ಲಿ ಆತನು ಮಥುರಾ ನಗರಿಗೆ ಎತ್ತಿಕೊಂಡು ಹೋದನು. ತನ್ನ ಮಗನನ್ನು ಗೋಕುಲದಲ್ಲಿ ಬಿಟ್ಟು ಮಹಮಾಯೆಯಲ್ಲಿ ಆತನು ತನ್ನ ಮಂದಿರದಲ್ಲಿ ವಾಸಿಸತೊಡಗಿದನು. (ಮುಂದೆ) ಕೃಷ್ಣನ ಕಥೆಯನ್ನು ಕೇಳು.

೨೦. ಮೊಲೆಯುಂಡು ಪೂತನಿಯನ್ನು ಸಂಹರಿಸಿದನು. ಬಂಡಿಯನ್ನು ಪುಡಿಮಾಡಿ ಶಕಟಾಸುರನನ್ನು ಕೊಂದನು. ಗಾಳಿಯ ರೂಪದಲ್ಲಿ (ಎದುರಾದ) ರಾಕ್ಷಸನನ್ನು ಒತ್ತಿ ಇರಿದು ಕೊಂದನು. ಮಡಿಕೆಯನ್ನು ಒಡೆದನೆಂದು ತಾಯಿಯು ಮರಕ್ಕೆ ಕಟ್ಟಿ ಹಾಕಲಾಗಿ ಮರವನ್ನು ಕೆಡಹಿ ಅಮಳಾರ್ಜುನರ ಶಾಪವನ್ನು ಪರಿಹರಿಸಿದನು.

೨೧. (ಮಡುವಿನ) ವಿಷವನ್ನು ಸೇವಿಸಿ, ಬಿದ್ದ ಗೋಪಾಲರು ಅವರ ಪಶುವೃಂದ ಸಮೇತವಾಗಿ, ವಿಸಜಾಂಬಕನಾದ ಶ್ರೀಹರಿಯ ದಿವ್ಯ ಕಟಾಕ್ಷತೆಯಿಂದ ಮರಳಿ ಹುಟ್ಟುವಂತೆ ಮಾಡಿದನು. ನೀರಿನ ವಿಷವು ನಿರ್ವಿಷವಾಗುವ ಹಾಗೆ ಸರ್ವರಿಗೂ ಹಿತವನ್ನುಂಟು ಮಾಡಿ, ವಿಷಕಾರಿಯಾದ ಕಾಳಿಂದಿಯನ್ನು ನಿಗ್ರಹಿಸಿ ರಮಣಾಖ್ಯ ಪುರಕ್ಕೆ ಹೊರವಂಟನು.

೩೩. ಮತ್ತೆ (ಮುಂದಣ) ಕತೆಯನ್ನು ಕೇಳು. ಯಾವತ್ತೂ ಸಲ್ಲುವ ಮಹಾಕ್ರತುವು (ಈಗ) ಗೋವರ್ಧನ ಪರ್ವತಕ್ಕೆ ಸಲ್ಲುತ್ತಿರುವುದನ್ನು ಕಂಡ ಅಮರೇಂದ್ರನು "ಇದರ ಅರ್ಥವನ್ನು ನೋಡೋಣವೆಂದು" ತೀರ್ಮಾನಿಸಿದನು. (ಆ ಬಳಿಕ ಆತನು) ಸಂವರ್ತ ಮೇಗರೆಂಬ ಜಲಧಾರೆಯಿಂದ ಆ ಶೈಲವನ್ನೆಲ್ಲ ಜಲಮಯ ಮಾಡಲಾಗಿ ಏಳುದಿನಗಳ ವರೆಗೆ ಈ ಬಾಲಶಿಖಾಮಣಿಯು ಆ ಶೈಲವನ್ನೇ ತನ್ನ ಎಡಗೈಯಲ್ಲಿ ಎತ್ತಿ ಹಿಡಿದನು.

೩೪. ಬಕಾಸುರ, ವತ್ಸಾಸುರ, ಪ್ರಲಂಬನಾಸುರ, ಅಘಾಸುರ, ಕೇಶಿ, ತುರಗ ಮೊದಲಾದವರನಲ್ಲದೆ, ರಾಸಭ ದೇನುಕ, ಖರನೆಂಬ ಅಸುರರನ್ನೂ ಈ ಅಖಿಲಾತ್ಮಕನು ವಧಿಸಿದನು. ವಿಕಸನಗೊಂಡು ಮುಂದೆ ಬರುವ ದಾವಾಗ್ನಿಯನ್ನು ಕಣ್ಣು ಮುಚ್ಚುವಷ್ಟರಲ್ಲಿ ಕೃಷ್ಣ ನಿವಾರಿಸಿದ ಕಥೆಯನ್ನು ಅಕಟಾ, ಪುತ್ರನೇ ನಾನೆಂದು ಹೇಳಲಿ!

೩೫. ಮಡಿಕೆಯನ್ನು ಒಡೆದುದೇಕೆ ಎಂದು ಅಧಿಕ ರೋಷದಿಂದ ಯಶೋಧೆಯು ತರಳನ ದೇಹವನ್ನು ಒಂದು ಎಡೆಯಲ್ಲಿ ಹಗ್ಗದಿಂದ ಬಂಧಿಸಲಾಗಿ ಎರಡಂಗುಲದಷ್ಟು ಹಗ್ಗ ಕಡಿಮೆಯಾಯಿತು. ಆಗ ಇನ್ನೂ ಅನೇಕ ತರದ ಎಷ್ಟು ಹಗ್ಗಗಳನ್ನು ತಂದರೂ ಸಾಕಾಗಲಿಲ್ಲ. ಆಗ ಮೊದಲಿನ ಹಗ್ಗದಿಂದಲೇ ಕಟ್ಟಿಸಿಕೊಂಡು ದಾಮೋದರ ಎಂದು ಕರೆಸಿಕೊಂಡನು.

೩೬. ಶ್ರೀ ರಮಣನನ್ನೂ ತನ್ನ ನಂದನನೆಂದು, ಅರ್ತಿಯಿಂದ ತೊಡೆಯನ್ನೇರಿಸಲಾಗಿ ನಡು ಬಾಯಿಯಲ್ಲಿ ಹದಿನಾಲ್ಕು ಜಗತ್ತು ತುದಿ ಮೊದಲಾಗಿ ಕಂಡು ಆ ಕಾಂತೆಯು ಭಯಗೊಂಡಳು. ಅತ್ಯಂತ ಮಾಯೆಯಲ್ಲಿ ಮುಳುಗಿ ಆ ನಳಿನಾಯತ ನೇತ್ರೆಯಾದ ಯಶೋಧೆಯು ತನ್ನನ್ನೇ ತಾನು ಮರೆತಳು.

೩೭. ನಂದಗೋಪಾಲನು ವರುಣಾಲಯವನ್ನು ಪಡೆಯಬೇಕೆಂದಿಚ್ಛಿಸಲು ಅದನ್ನು ಸಾಧಿಸಿ ತೋರಿಸಿದನು. ನಡುರಾತ್ರಿಯಲ್ಲಿ ತಂದೆಯನ್ನು ಹಾವು ನುಂಗಲಾಗಿ ಅದರಿಂದ ಬಿಡಿಸಿದನು. ಮಯನ ಮಗ ಸಹಿತವಾಗಿ ಒಂದಿರುಳು ಗಿರಿಯನ್ನು ಎತ್ತಿ ನಿಂತುಕೊಂಡನು. ಹೀಗೆ ವಿಪರೀತ ಉಂಟಾಗದಂತೆ ಮುರವೈರಿಯಾದ ಶ್ರೀಕೃಷ್ಣನು ಜನರೆಲ್ಲರನ್ನೂ ಕಾಪಾಡಿದನು.

೩೮. ಹಗಲಿನಿಂದ ರಾತ್ರಿಯವರೆಗೆ ವನದೊಳಗೆ (ತೊಳಲಾಡಿದ) ಪರಿಶ್ರಮದಿಂದ ಮಧ್ಯರಾತ್ರಿಯಲ್ಲಿ ಗೋಪಾಲಕರೆಲ್ಲರೂ ನಿದ್ರೆ ಮಾಡಿದರು. ಆಗ ದಿವ್ಯ ಪುರುಷನ ಮಹಿಮೆಯನ್ನು ನೋಡಿದವರಿಗೆ ಕಣ್ಣಿಗೆ ಕಾಣುವಷ್ಟರ ಮಟ್ಟಿಗೆ ವೈಕುಂಠ ವಿಶೇಷವನ್ನು ಶ್ರೀ ಕರುಣಾಕರ ಮೂರ್ತಿಯು ತೋರ್ಪಡಿಸಿದನು.

೩೯. ಮಡಿವಾಳನನ್ನೂ, ಮಲ್ಲವರನ್ನು ಹಾಗೂ ಮದ ಬಂದ ಆನೆಯನ್ನು ಈತನು ಕೊಂದನು. ತನ್ನ ಮಾವನನ್ನು, ಮಾಗಧನನ್ನು ಹಾಗೂ ಯವನರ ಸೈನ್ಯವನ್ನು ಕೊಂದನು. ಮುರ, ಹಂಸಕ, ಪೌಂಢಕ, ಡಿಬಿಕ ಹಾಗೂ ಸಾಲ್ವರನ್ನು ಕೊಂದನು. ಹೀಗೆ ಅವರೆಲ್ಲರನ್ನು ಕೊಂದು ಕಮಲದಂತೆ ಅಗಲವಾದ ಕಣ್ಣುಗಳುಳ್ಳ ಶ್ರೀಹರಿಯು ಭೂಮಿಯ ಭಾರವನ್ನು ಪರಿಹರಿಸಿದನು.

೨೯. ಇರುಳಾಗಲು ಚಂದ್ರನ ಬೆಳದಿಂಗಳಲ್ಲಿ ವೃಂದಾವನದಲ್ಲಿ ಚಿನ್ನದ ಕೊಳಲನ್ನು ನುಡಿಸಿ ಮಧುರ ಗೀತವನ್ನು ಹಾಡಿದನು. ಅದಕ್ಕೆ ಲೋಕವು ಅತಿಯಾಗಿ ಮೋಹಗೊಂಡಿತು. ತರುಣಿಯರನ್ನು (ಅವರ ಬಟ್ಟೆಯನ್ನು ಕದಿಯುವುದರ ಮೂಲಕ) ವಂಚಿಸಿದನು. ಶಂಖ-ಚೂಡರೆಂಬ ರಾಕ್ಷಸರನ್ನು ಸರಿಯಾದ ಸಮಯದಲ್ಲಿ ಕೊಂದನು. ಎಲೈ ಮುನಿಯೇ! ಹೀಗೆ ಶ್ರೀ ಬಾಲಮುಕುಂದನು (ಈ ಎಲ್ಲ) ಬಿರುದಿನಿಂದ ಪ್ರಕಾಶಿಸಿದನು.

೩೦. ಆದಿಯಲ್ಲಿ ವಲ್ಕಲ, ಕಾಶಿಪತಿ, ಶೃಂಗಾಲಕ ದೈತ್ಯರನ್ನು ಈತನು ಸಂಹರಿಸಿದನು. ರುಗ್ಮ, ಬ್ರಹ್ಮದತ್ತ, ಶಿಶುಪಾಲ ರಾಜಾಧಿರಾಜರನ್ನೂ ಸಂಹರಿಸಿದನು. ದಂತಮುಖ, ಸಪ್ತ ಋಷಭರನ್ನು ಕೊಂದುದಲ್ಲದೆ, ನರಕಾಸುರನ ಸೈನ್ಯ ಶತವನ್ನು ಈ ದೂವಾನದಳ ಶ್ಯಾಮನು ಸಂಹರಿಸಿದನು.

೩೧. ರಾಮ, ಕಾಮ, ಬಲಾಢ್ಯರಾದ ಯುಧಿಷ್ಠಿರನೇ ಮೊದಲಾದ ಜಗತ್ತಿಗೆ ತಾನು ರಕ್ಷಕರಾಗಿ ಉಭಯರಿಗೂ ಪರಾಕ್ರಮವನ್ನು ಪ್ರದರ್ಶಿಸುವಂತೆ ಮಾಡಿದನು. ಯುದ್ಧ ಭೂಮಿಯಲ್ಲಿ ಮಲೆತು ನಿಂತು ಕ್ಷತ್ರಿಯರನ್ನು ಹೋಮಿಸುವುದರ ಮೂಲಕ ಭೂ ಭಾರವನ್ನು ಜಗಧೀಶ್ವರನ್ನು ಪರಿಹರಿಸಿದನು.

೩೨. ತ್ರಿಪುರಗಳನ್ನು ಸ್ಥಾಪಿಸಿಕೊಂಡು ಶೋಭಿಸುತ್ತಿದ್ದ ದಾನವರನ್ನು ಗೆಲಲರಿಯದೆಂದು, ವ್ರತನಿಷ್ಠರನ್ನು ಚೆನ್ನಾಗಿ ಕೆಡಿಸುವದಕ್ಕಾಗಿ ಬೌದ್ಧಾವತಾರವನ್ನು ತಾಳಿದನು. ಆಮೇಲೆ ಪಾಷಡಿಂತನವನ್ನು ಬೋಧಿಸಿ ಅವನಿಯನ್ನು ರಕ್ಷಿಸಿದನು. ಮಗನೇ! ಹೀಗೆ ಅವತಾರವೆತ್ತಿ ಪ್ರಬುದ್ಧನು ಈ ಧರಣಿಯಲ್ಲಿ ಮೆರೆದನು.

೩೩. ಆಮೇಲೆ ಈ ಕಲಿಕಾಲದಲ್ಲಿ ವರವೈಷ್ಣವರ ಬೀಡುಗಳಲ್ಲೆಲ್ಲ ಜಿನನ ನಾಮಸುಧೆಯು ಮೇರೆ ಮೀರುವಂತೆ ಕೆತ್ತಿಸಿದನು. ಪೃಥ್ವೀಶ್ವರರೆಲ್ಲ ಅನಾಮಿಕರಾಗುವರೆಂದೂ ಚತುರಾಶ್ರಮಗಳು ಒಂದೇ ಆಶ್ರಮಗಳಾಗುವವೆಂದೂ ಮಸ್ಸಿಗೆ ಹೊಳೆಯುತ್ತಿರುವ ಕಲ್ಕಿ ಸ್ವರೂಪಿಯಾಗಿ ಅವತರಿಸಿದನು.

೩೪. ಮಗನೇ! ನಾವು ಸತ್ರದಲ್ಲಿರಲು ನಮ್ಮ ಸಂದೇಹಗಳು ಪರಿಹಾರವಾಗುವಂತೆ, ಸೂರ್ಯ ಮುಳುಗುವ ಮುನ್ನವೇ ಹಯಗ್ರೀವನ ಮೂರ್ತಿಯಲ್ಲಿ ಕಾಣಿಸಿಕೊಂಡು ಸರ್ವರ ಡಂಭಗಳನ್ನೂ ಬಿಡಿಸಿದನು. ಹೀಗೆ ಸರ್ವನೂ, ಸತ್ಯಸಮುದ್ರನೂ ಆದ ಮಹಾಪುರುಷನ ಬಗೆಗೆ ಆಸಕ್ತಿಯಿಂದ ಕೇಳು.

೩೫. ಹಿಂದೆ ನನಗೆ ಸಂದೇಹ ಉಂಟಾಗಲು ಪ್ರಸನ್ನವಾಗಿ ವರ ಹಂಸ ಸ್ವರೂಪವನ್ನು ಧರಿಸಿ ಮುಕುಂದನು ದೇವಶ್ರುತಿಯನ್ನು ನನಗೆ ತಿಳುಹಿಸಿದನು. ತಿಳಿಯುವುದಕ್ಕೆಂದು ಸನಕಾದಿಗಳು ಕೇಳಿದಾಗ ಅವರಿಗೆಲ್ಲ ದ್ವಂದ್ವ ನಿವಾರಣೆಯಾಗುವಂತೆ ಈ ಇಂದೀವರನಾಭನು ಮಾಡಿದನು.

೩೬. ಯೋಗಗಳನ್ನು ಉದ್ಧರಿಸಿ ಧರಣಿಯ ಪರಿಪಾಲಕನಾಗಲೆಂದು, ನಾಗಾಶ್ರಯನಾದ ಶ್ರೀ ವಿಷ್ಣುವು ಸನಕಾದಿಗಳಾಗಿ ಅವತಾರವೆತ್ತಿದನು. ಆಮೇಲೆ ನೀನಾಗಿ ಜನಿಸಿ (ನಾರದನಾಗಿ) ಆತ್ಮೋಪದೇಶಗಳನ್ನು ಬೇಗನೇ ಬೋಧಿಸಿದರು. ಮಗನೇ ಈ ಗರ್ವ ವಿಲಾಸದ ಅದ್ಭುತ ಲೀಲೆಯನ್ನು ಏನೆಂದು ಹೇಳಲಿ?

೩೭. ಎಲ್ಲ ಯುಗಗಳಲ್ಲಿಯೂ ಉತ್ತಮವಾದ ದಿವ್ಯ ಅವತಾರವನ್ನು ಧರಿಸಿದನು. ಸುರ -ಗೋ-ದ್ವಿಜ ಕಂಟಕರನ್ನೂ ಜೈಸಿ, ಧರ್ಮವನ್ನು ಪರಿವರ್ತಿಸಿದನು. ಪರಿಪಾಲಿಸುವ ಮಹಾತ್ಮನ ಆ ಎಲ್ಲ ಅವತಾರಗಳನ್ನು ಯಾರು ತಾನೇ ಬಲ್ಲರು? ನಮಗೆ ತರತರವಾಗಿ ಕಂಡ ಈಶ್ವರನ ಅವತಾರಗಳನ್ನು ಲೆಕ್ಕಿಸಲು ನಾಗೇಶನಾದ ವಾಸುಕಿಗೂ ಸಾಧ್ಯವಲ್ಲ.

೩೮. ಆತನ ದಿವ್ಯಾವತಾರದ ಮಹಿಮೆಯನ್ನು ಯಾರು ತಾನೇ ತಿಳಿಯುವುದಕ್ಕೆ ಸಾಧ್ಯ? ದೂರದಿಂದಲೇ ಬೊಬ್ಬಿಡುವ ವೇದಮಹಾ ಶ್ರುತಿಗಳಿಗೂ ಆತ ಅತೀತನೇ. ಅಪಾರವಾಗಿರುವ ಬ್ರಹ್ಮಾಂಡ ಕಟಾಹ ಅಂಬರ ತಾರೆಗಳನ್ನು ಜೈಸಿ ಅತೀ ಸಾರವಾಗಿ ವಿರಾಜಿಸುವ ಅದ್ಭುತವನ್ನು ಏನೆಂದು ತಾನೇ ಹೇಳುವುದು?

೩೯. ಮುನೀಂದ್ರನೇ! ಇವನ ಮುಂದೆ ಕೇಳು. ನಾನು ಆ ಮಹಾಪುರುಷನ ಕರುಣೆಯಿಂದ ಆತನನ್ನು ಚೆನ್ನಾಗಿ ತಿಳಿದಿದ್ದೇನೆ. ಪ್ರಜಾಪತಿಗಳು, ಭೃಗ್ವಾದಿ ಜಗತ್ತು ಆತನನ್ನು ತಿಳಿದಿದ್ದಾರೆ. ಈಶ್ವರ, ಮನು ಮೊದಲಾದ ಆ ಶತರೂಪಿಯನ್ನು ಅವತಾರವನ್ನು ತಿಳಿದವರೇ. ಪ್ರಹ್ಲಾದನೂ ಆತನ ಮಹಿಮೆಯನ್ನು ಬಲ್ಲವನಾಗಿದ್ದಾನೆ.

೪೦. ಮನು ಪತಿಗಳು (ಅವರ) ಪೌತ್ರಾದಿ ಸಮೂಹಗಳು, ಅವರನ್ನರಿಯುವರು. ಬಲಿ, ಅಂಬರೀಶ, ಧ್ರುವ, ರವಿಜ, ಸೂರ್ಯಾದಿಗಳು ಅರಿವರು. ಮುಚುಕುಂದ, ಗಯಾ, ಮಾಂಧಾತೃ, ವಿದೇಹರೂ ಆತನನ್ನು ಬಲ್ಲರಲ್ಲದೆ ಮಾರುತಿ ಸೌಭರಿ ಪಾರ್ಥಾದಿಗಳೂ ಆತನನ್ನರಿವರು.

೪೧. ವ್ಯಾಸ, ಪರಾಶರ, ಶುಕ, ದೇವಲ, ಭೀಷ್ಮರು ಆತನನ್ನು ಬಲ್ಲರು. ಉದ್ಧವ, ಶಿಬಿ, ಸಾರಸ್ವತ ನೃಪ, ಇವರೆಲ್ಲರೂ ಆತನನ್ನು ಅರಿಯುವರು. ವಂಶಾವತಾರಕರು, ವಿಜ್ಞಾನ ವಿವೇಕ ನೆಲೆಗೊಂಡ ಸಿದ್ಧ ಮುನೀಶ್ವರರೂ ಸಂಪರ್ಕ ಭಗವಾನನ ವಿಚಿತ್ರವನ್ನು ಅರಿಯುವರು.

೪೨. ಈಗ ಹೇಳಿದ ಗುಣಜ್ಞರ, ನಾರಿಯರ ಸಂಪರ್ಕದಲ್ಲಿರುವ, ಆ ಪುಣ್ಯ ಮಹಾತ್ಮರ ಪುಣ್ಯಕಥೆಯನ್ನು ಮನಸಾರೆ ಕೊಂಡಾಡಿ ಯಾವತ್ತೂ ಹೇಳುವ ಮಹಾತ್ಮರನ್ನು ಈಶ್ವರನು ಸಂಸಾರ ಸಮೇತವಾಗಿ ಕೈ ಹಿಡಿದು ಉತ್ತಮ ಪದಕ್ಕೆ ಕರಕೊಂಡು ಹೋಗುವನು.

೪೩. ಒಂದಂತೂ ಸ್ಪಷ್ಟವಾಗಿ ಕೇಳು. ಈ ಧರೆಯಲ್ಲಿ ಹರಿನಾಮ ಗುಣದ ಪುಂಜಗಳಲ್ಲಿ ಅರ್ಧಾಕ್ಷರವನ್ನಾದರೂ ಆಲೋಚಿಸಿ ಎಂಬುದನ್ನು ರಂಜನೆಯಿಂದ ಹೇಳಿ, ಪ್ರಕಾಶ ಪಡಿಸುವ ಸರ್ವಜ್ಞರ ಭಾಗ್ಯವನ್ನು ಏನು ತಾನೇ ಹೇಳಲಿ! ಅದು ಈ ಭೂಮಿ, ಈ ಸೂರ್ಯ ಇರುವ ತನಕ ಎಲ್ಲಿಗೂ ಹೋಗಲಾರದು (ಶಾಶ್ವತವಾದುದೆಂಬ ಭಾವ)

೪೪. ನಾನು ತಿಳಿದಷ್ಟರ ಮಟ್ಟಿಗೆ ಸರ್ವವನ್ನೂ ವರ್ಣಿಸಿದೆನು. "ವಿಷ್ಣ್ವೋರ್ಣೀಕ ವೀರ್ಯಾಣಿ" (ವಿಷ್ಣು ಓರ್ವನೇ ಅದ್ಭುತವಾದವನು) ಎನ್ನುವ ಮಹಾಶ್ರುತಿಯನ್ನು ವಿಸ್ತಾರವಾಗಿ ಹೇಳಿದೆನು. ವರ್ಣಾನಾತ್ಮಕವಾಗಿ ನೋಡುವುದಾದರೆ, ಆತನನ್ನುಳಿದು, ಈ ಧರಣಿಯಲ್ಲಿ ಇನ್ನಾರೂ ಇಲ್ಲ. ಆ ಸರ್ವಾತ್ಮಕನ ಲೀಲೆಯನ್ನು ನಿರ್ಣೈಸಿ ವಿವರಿಸಲು ನನಗೆ ಸಾಧ್ಯವಿಲ್ಲ.

೪೫. "ಏಕೋ ಮಯ ವಿಷ್ಣು" ಎನ್ನುವ ಶ್ರುತಿ ವಾಕ್ಯವು ತ್ರೈಲೋಕದಲ್ಲೆಲ್ಲ ಪ್ರಕಾಶಿಸಿದುದನ್ನು ನೀನು (ಈಗ) ಕೇಳಿದೆ. ವೇದಾದಿಗಳನ್ನು ಈ ನರರು ತತ್ವಾಧನ ತಿಳಿಯದೇ ವಿಭಾಗಿಸಿದುದು ತಾನೇ? ಆಕಾರನೂ, ನಿರಾಮಯತತ್ತ್ವ ನಿಧಿಯೂ ಆದ ಅವನನ್ನು ಪೂರ್ಣವಾಗಿ ಯಾರು ತಾನೇ ಬಲ್ಲರು?

೪೬. ಹಾಗೆ ನೋಡುವುದಾದರೆ ಈಗ ನಾನು ಹೇಳಿದುದಷ್ಟೇ ಶ್ರೀ ಭಾಗವತಾರ್ಥ ಸಂಕುಚಿತ ಬುದ್ಧಿಯಿಂದ ಹೀಗೆ ಹೇಳಿದುದಲ್ಲ. ಸಂಕ್ಷಿಪ್ತವಾಗಿ ಈ ರಹಸ್ಯವನ್ನು ನಾನು ರಚಿಸಿದೆನು. 'ಶ್ರುತಿಗಳೆಲ್ಲ ಇದುವೇ' ಎಂದು ನೀನು ಸರ್ವಾತ್ಮಕರಿಗೆಲ್ಲ ಹಿತವಾಗುವಂತೆ ಪ್ರಕಟ ಪಡಿಸು ಮಗನೇ! ಇದು ಲೋಕಹಿತಾರ್ಥವಾದುದು.

೪೭. ಮಾನವನಾಗಿ ಜನಿಸಿದರೆ ಏನು ತಾನೇ ಪ್ರಯೋಜನ? ವೇದಾದಿ ಪುರಾಣಗಳನ್ನು ನೆಲೆಯಾಗಿಸಿಕೊಂಡರೇನಾಯಿತು! ಧರ್ಮಗಳ ಸಾರವನ್ನೆಲ್ಲ ಚೆನ್ನಾಗಿ ತಿಳಿದುದರಿಂದ ತಾನೇ ಏನು? ಸಾಂಖ್ಯ ಮತಾನುಷ್ಠಾನದಿಂದ ಏನು ತಾನೇ ಪ್ರಯೋಜನ? ಇವೆಲ್ಲವೂ ಹರಿಭಕ್ತಿಗೆ ವಿರಕ್ತವಾದುವುಗಳೇ. ನಿಜವಾಗಿಯೂ ಪ್ರಜೆಗಳಿಗೆ ಹರಿಭಕ್ತಿಯೊಂದೇ ಸಾರವಾಗಿರುತ್ತದೆ.

೪೮. ವರ್ಣಗಳಿಗೆ ಸಂಬಂಧಿಸಿದಂತೆ ಇರುವ ನಾಲ್ಕು ಪರಿಶ್ರಮಗಳಿಂದ ಫಲವೇನು? ಕನ್ಯಾದಿ ಶ್ರೇಷ್ಠವಾದ ಸ್ವರ್ಣಾಂಬರಗಳನ್ನು ಕೊಟ್ಟು (ಕನ್ಯಾದಾನ? ವಸ್ತ್ರಾದಾನ?) ತಾನೇ ಏನು ಪ್ರಯೋಜನ? ತನ್ನಿಚ್ಛೆಯಿಂದಲೇ ವರ್ಧಿಸಿದ ಮಾಯೆಯ ನರಕವನ್ನು ಹೋಗದೇ, ಸನ್ನದ್ಧರಾದವರು (ಹರಿಭಕ್ತರು) ಭಕ್ತಿಯ ಮೂಲಕ ಭಕ್ತಿಯನ್ನು ಪಡೆಯಬಹುದು.

೪೯. ಹಲವು ಜನ್ಮಗಳಲ್ಲಿ ನಿರಂತರವಾಗಿ ಜನಿಸುವ ಈ ಸಂಸಾರ ಸುಖವು ಕಾಳ್ಗಿಚ್ಚಲ್ಲವೇ? ಅಚ್ಯುತನ ಗುಣನಾಮ ಸಾರವನ್ನು ತಿಳಿಯದೆ, ಖಳರಾಗಿ ವೃಥಾ ಕೆಟ್ಟುಹೋಗಬೇಡಿ. ಬೇಗನೇ ಹರಿಭಕ್ತಿ ಸಾರವನ್ನು ಗ್ರಹಿಸಿ ಸ್ಪಷ್ಟವಾಗಿ ತಿಳಿಯಿರಿ.

೫೦. ಆ ಕಾರಣದಿಂದ, ಅಶೇಷವಾದ ಜಗತ್ತಿನ ಹೇತುವಾಗಿ ನಿಶ್ರೇಯಸದ ಸಾಧನವನ್ನು (ಹರಿಭಕ್ತಿಯನ್ನು) ಯಾವಾಗಲೂ ಕೇಳಿದರೆ ಅಕ್ಷಯ ಮೋಕ್ಷವು ಲಭ್ಯವಾಗುತ್ತದೆ. ಇಷ್ಟನ್ನು ಅವನು (ಬ್ರಹ್ಮನು) ವಿಸ್ತ್ರತವಾಗಿ ಪ್ರಕಾಶ ಪಡಿಸುತ್ತಿರಲು ಹರ್ಷಚಿತ್ತನಾದ ನಾರದನು ಅದೆಲ್ಲವನ್ನು ಕೇಳಿ ಅಂತಃಕರಣದಲ್ಲಿಯೇ ಬಹುವಿಧದಿಂದ ಹಿಗ್ಗಿದನು.

೫೧. ಬ್ರಹ್ಮನಿಗೆ ಸಂತೋಷದಿಂದ ವಂದಿಸಿ ಆತನಿಂದ ನಾರದನು ಬೀಳ್ಕೊಂಡನು. ನಾನಾ ಜಂತುಗಳ ಹಿತಾರ್ಥವಾಗಿ ಅಲೆದಾಡುತ್ತಿದ್ದ ಆತನು ಈ ಸಾರವನ್ನು ವ್ಯಾಸನಿಗೆ ಉಪದೇಶಿಸಿದನು. (ಆಮೇಲೆ) ತುಂಬಾ ಕೌತುಕಗೊಂಡು ಆತನು (ವ್ಯಾಸಮುನಿ) ನಮಗಾಗಿ ಅದರ ಅಂತರಂಗವನ್ನು ಉಪದೇಶಿಸಿದನು.

೫೨. ನಾನು ಪರಿಪೂರ್ಣ ಗುಣಾಂಬುಧಿಯೆಂದು ವಿಶ್ವಾಸವಿಟ್ಟ ಕಾರಣದಿಂದ ಶುಕ ಮುನಿಯು ನನಗೆ ಶ್ರೀ ಭಾಗವತಾರ್ಥವನ್ನು ಉಪದೇಶಿಸಿದರು. ಅದನ್ನು ಹೇಳಿದ ನನಗೆ ದೃಢವಾಗಿಯೇ ಅದರಲ್ಲಿಯೇ ಮನವು ಬೇರೂರಿದೆ. ಗುರು ದಿವ ಕಟಾಕ್ಷದಿಂದ ದೊರೆತ ಹರಿ ಭಕ್ತಿಯ ಸಾರವನ್ನು ನಾನು ಎಷ್ಟೆಂದು ಹೇಳಲಿ.

೫೩. ಹರಿಸಂಹಿತೆಯಾದ ಭಾಗವತದ ಐದು ಅಧ್ಯಾಯಗಳಾದುವು. ಇದು ದಿವ್ಯ ಕಥಾಮೃತವಾಗಿ ವಿರಚನೆಗೊಂಡಿತು. ಕಿವಿಗಳಿಂದ ಈ ಭೂಮಿಯಲ್ಲಿ ಇದನ್ನು ಯಾರು ಓದಿ - ಕೇಳುತ್ತಾರೋ ಆ ನರ - ನಾರೀ ಜಗತ್ತಿಗೆ ಪರಿಪೂರ್ಣ ಗುಣಾಂಬುಧಿ ಯಾದ ಶ್ರೀಹರಿಯು ಸಾರೂಪ್ಯ ಪದಗಳನ್ನು ನೀಡುತ್ತಾನೆ.

ಅಧ್ಯಾಯ ೬

೧. ಶಿವ, ಗಣಪತಿಯರ ಪಾದಯುಗಗಳಿಗೆ ಅಭಿವಂದನೆ ಹೇಳುತ್ತೇನೆ. ಚಂದ್ರಮುಖಿಯಾದ ಸರಸ್ವತಿಯನ್ನು ಧ್ಯಾನಿಸಿ ಹೃತ್ಕಮಲದಲ್ಲಿ ವ್ಯಾಸಮುನೀಂದ್ರರನ್ನು ಸ್ಥಾಪಿಸುತ್ತೇನೆ. ಶಶಿವಂಶಜನಾದ ಪರೀಕ್ಷಿತ ರಾಜನಿಗೆ ಶ್ರೀ ಶುಕರು ದಶಲಕ್ಷಣ ಸಾರ ಸಹಿತ ವಿವರಿಸಿದ ದಿವ್ಯಕಥಾ ರಸವನ್ನು (ಹೇಳುತ್ತೇನೆ) ಮಹಾರಜನಗಳು ಕೇಳಿ.

೨. ಧರಣೀಪತಿಯೇ ಕೇಳು! ಸರ್ಗ, ವಿಸರ್ಗ, ಸ್ಥಿತಿ, ಪೋಷಣ, ತುಂಬಾ ವಿಸ್ತಾರವಾದ ವಿಯುಕ್ತಿ ವಿಶಿಷ್ಟತೆ, ಮನ್ವಂತರ, ಜನಸ್ತರಣ, ಸಂಹಾರಣ, ಮುಕ್ತಿ ಎಂಬ ದಶಲಕ್ಷಣಗಳಿಂದ ಕರುಣಾಕರನ ಕೀರ್ತಿಯನ್ನು ಹೇಳುತ್ತೇನೆ.

೩. ಭೂತೇಂದ್ರಿಯಗಳೆಲ್ಲವೂ (ಮಹಾ) ವಿಕೃತಿಯೆನಿಸುವುವು. ಅನುಭೂತಿಯೆನಿಸುವ ನೀತಿ ಸರ್ಗವು ರಾಜಸದಿಂದಾಗಿ ಧಾತುವಿನಿಂದ ಹೊರಟಿರುವುದೇ ಪೌರುಷ. ಆ ಸೃಷ್ಟಿಯಿಂದಲೇ ವಿಸರ್ಗ. ಈ ಸಚರಾಚರ ಗಳೆಲ್ಲವೂ ಈ ವಿಸರ್ಗದಿಂದಲೇ ಉದಯಿಸಿದವು.

೪. ಕ್ಷಿತಿಪೋತ್ತಮನೇ ಕೇಳು! ವೈಕುಂಠ ವಿಜಯವೇ 'ಸ್ಥಿತಿ' ಎಂಬ ಅಭಿಧಾನ. ಮತಿಯಿಂದ ಗ್ರಹಿಸುವುದೆಲ್ಲವೂ ಪೋಷಣವೇ. ತ್ರೈಲೋಕದ ಜನಕ್ಕೆ ಇರುವ ಸತತವಾದ ಕರ್ಮವಿಭೇದ ಗತಿಯೇ ಯುಕ್ತಿ. ಸ್ಮೃತಿ ವಾಸನೆಯೇ ಸರ್ವ ಜಗತ್ತಿಗೂ ಹಿತಕಾರಿಯಾದುದು.

೫. ವರ್ಣಾಶ್ರಮ ಧರ್ಮ ಮಹಾಸ್ಥಿತಿಯನ್ನೇ ಮನ್ವಂತರವೆಂದು ಕರೆಯುತ್ತಾರೆ. ನಿಜವಾಗಿಯೂ ನೋಡುವುದಾದರೆ ಅವು ಸರ್ವ ಹಿತಾರ್ಥಗಳಾದುವುಗಳು. ಇದನ್ನು ಚೆನ್ನಾಗಿ ತಿಳಿಯಿರಿ. ನಾಗನ ಮೇಲೆ ಮಲಗಿರುವ ಶ್ರೀ ಹರಿಯ ಸತ್ಕಥೆಯೇ ಸಾಧು ಪೂರ್ಣರ ಸ್ತೋತ್ರ ಕಥಾವಿವರಗಳು. ಅವುಗಳು ಎಲ್ಲರಿಗೂ ಪವಿತ್ರವಾದುವುಗಳೇ.

೬. ವ್ಯಕ್ತಗಳನ್ನೆಲ್ಲವನ್ನೂ ಸಂಹರಿಸಿದ ಮಾಯಾಮಸಕದ ವ್ಯಕ್ತಗಳ ಸಾರಸುಧಾರಸವನ್ನು ನಿಶ್ರೇಯಸವೆಂದು ಕರೆಯಲಾಗುವುದು. ಅದು ಮುಕ್ತಿಗೆ ಅಧಿಪತಿಯಾದುದು; ಸಜೀವರಿಗೆ ಅದುವೇ ಗತಿಯು. ಸರ್ವ ಮೃತರಿಗೂ ಅದುವೇ ಸುರಸಾಧನವು. ನೃಪತಿಯೇ ಇದನ್ನು ನಂಬು.

೭. ನೃಪತಿಯೇ ಕೇಳು! ಹತ್ತನೆಯದು ಜಗತ್ಸೃಷ್ಟಿ, ಸ್ಥಿತಿಯ ಸಂಹಾರ ವಿಕಾರವು. ಗುಪಿತಾತ್ಮನೂ, ಪರಾತ್ಪರ ಬೋಧಮಯನೂ, ಅವಿನಾಶಿಯೂ, ಅಗತ್ಯನೂ, ವಿಪದಾಶ್ರಯನೂ, ಮಹಾಪುರುಷನೂ, ಆನಂದವಿದಗ್ಧನೂ ಉಪಮೆಯೇ ಇಲ್ಲದವನೂ ಆದ ಮಹಾಶ್ರಯನು (ಆದ ಆತನು) ಸಾಕ್ಷಾತ್ ಆತ್ಮ ಸ್ವರೂಪಿಯೇ ಆಗಿದ್ದಾನೆ.

೮. ಆತನನ್ನು ಸ್ಥಿರಗೊಳಿಸಲೆಂದೇ ಒಂಭತ್ತು (ಲಕ್ಷಣ) ಪದಗಳನ್ನು ಹೇಳಲಾಯಿತು. ಛತ್ತದಲ್ಲಿ ಅಕ್ಕಿಸಿಗದೇ ಆಯಾಸಗೊಂಡು ಮಿದಿದು ಏನು ತಾನೇ ಪ್ರಯೋಜನವು? ಹೀಗೆ ಆರಂಭದಲ್ಲಿಯೇ ನಿರಾಶ್ರಯವೂ ನಿಷ್ಫಲವೂ ಆದರೆ ಬದುಕೇ ಇರದು.

೯. ಆಶ್ರಯಗಳು ಕಾಣದ ಈ ಸ್ಥಿರ ಜಂಗಮಗಳು, ಮಾಯೆ, ಆಶ್ರಯವೆಂದು ತಿಳಿಯಲಾಗುವ ವೇದ - ವಿಧಾನಗಳು, ಒಂಭತ್ತು ಲಕ್ಷಣಗಳಿಗೆಲ್ಲ ಆಶ್ರಯವೇ ಈ ಶ್ರೀಹರಿಯು. ಈತನು ನಿರಾಶ್ರಯನೂ ನಿರಭಾಸಿಕನೂ ಆಗಿದ್ದಾನೆ. ತನಗೆ ತಾನೇ ಆಶ್ರಯನೂ ಆಗಿರುವ ಆತನು ನಿರಾಮಯನೂ ಆಗಿದ್ದಾನೆ.

೧೦. ತನ್ನ ಭಾವಾ ವಿಲಾಸವನ್ನು ರಕ್ಷಿಸುವುದಕ್ಕಾಗಿ ತಾನೇ ಮಾಯೆಯನ್ನು ನಿರ್ಮಿಸಿ, ತನ್ನ ಚೇತನ ಸಾಕ್ಷಿಯನ್ನು ಮಾಯೆಯಲ್ಲಿ ಗರ್ಭೀಕರಿಸಿಕೊಂಡನು. ಚಿನ್ನದ ಆಭರಣಗಳನ್ನು ಒರೆಗೆ ಹಚ್ಚಿ ನೋಡುವ ಹಾಗೆ, ಮನಕ್ಕೆ ಆಶ್ಚರ್ಯವಾಗುವಂತೆ ಆತನು ದ್ವಯವೆನ್ನುವಂತೆ ಪ್ರಕಾಶಗೊಂಡನು.

೧೧. ನೃಪತಿಯೇ ಮಹಾಮಾಯೆಯ ಮೂಲವನ್ನು ವಿವರವಾಗಿ ತಿಳಿಯಲು ಯಾರಿಗೆ ತಾನೇ ಸಾಧ್ಯ? ಆತನ ಮೂಲವನ್ನು ತಿಳಿಯಲಾಗದೆ, ಆತನ ನಿಜವನ್ನು ತಿಳಿಯಲಾಗದೆ ವೇದ - ಪುರಾಣ-ಶಾಸ್ತ್ರಗಳು (ಈ ಜಗತ್ತಿನಲ್ಲಿ) ಒದ್ದಾಡುತ್ತಿವೆ. ಅಂದ ಮೇಲೆ ಜಡ - ಜಂತುಗಳು ಮನಸ್ಸಿನಲ್ಲಿ ಸ್ಮರಿಸುವುದನ್ನು ಬಿಟ್ಟು ಹೇಗೆ ತಾನೇ ಆತನನ್ನು ತಿಳಿಯುತ್ತಾರೆ.

೧೨. ಚಿತ್ತದಲ್ಲಿ ದೃಢಭಾವದಿಂದ ಆಲಿಸುವುದಾದರೆ, ಕುತೂಹಲಕಾರಿಯಾದ ಒಂದು ಪಥವನ್ನು ನಾನು ಹೇಳುತ್ತೇನೆ. ವೇದಗಳಲ್ಲಿ ಭಕ್ತಿಗಿಂತ ವಿಶೇಷವಾದುದು ಏನೂ ಇಲ್ಲ. ನಾಲಗೆಯಲ್ಲಿ ಎರಡರಕ್ಷರವನ್ನು ನುಡಿದು ಲಯವಾಗುವ ಸುಖದ ತುತ್ತನ್ನು ನೋಡದೆ, ನರರು ವೃಥಾ ಸದಾಶ್ರಮದಿಂದ ಬಳಲುತ್ತಿದ್ದಾರೆ.

೧೩. ಹಲವು ವೇದ-ಪುರಾಣ- ಶಾಸ್ತ್ರಕಥೆ - ಇತಿಹಾಸವೆಂಬ, ಕಾನನದಲ್ಲಿ ದಾರಿ ಕಾಣದೆ ಅನೇಕ ವಿಧವಾಗಿ ದಂಡನೆಗೊಳಗಾಗುತ್ತ, ಮತ-ಭೇದದ ಕಾರಣದಿಂದಾಗಿ ಜ್ಞಾನವಿಮೂಢರು ಸೊರಗುತ್ತಿದ್ದಾರೆ. ಸುಲಭ ಸಾಧ್ಯವಾದ ಈ ಭಕ್ತಿ ಪಥವನ್ನು ನರರಾದವರು ನೋಡುತ್ತಿಲ್ಲ.

೧೪. ಶ್ರೇಷ್ಠವಾದ ವೇದ -ಪುರಾಣ ಶಾಸ್ತ್ರ ಮತಗಳಲ್ಲಿರುವ ರಹಸ್ಯವನ್ನು ನರರು ವಿಷಯಾತುರರಾಗಿ ನೋಡದೆ, ಅಂತಃಕರಣದಲ್ಲಿ ಪರಮೇಶ್ವರನ ನಿರ್ಮಲ ಪಾದಯುಗವನ್ನು ಆರಾಧಿಸಬೇಕು. ಆಗ (ದುರಿತಗಳೆಲ್ಲ) ಪರಿಹಾರವಾಗಿ ತಾನೇ ತಾನಾಗಿ ಭಕ್ತಿ ಸುಖವು ದೊರಕೊಳ್ಳುವುದು.

೧೫. ಭಕ್ತ ಜನರ ಸಾಂಸಾರಿಕ ನಡೆಯು ಕಲಿಕಾಲದ ಕಲ್ಮಷವನ್ನು ಖಂಡಿಸುವುದು. ಸರ್ವರೂ ಭಜಿಸಿದರೆ ಅದು ಹೃದಯಾಂಬುಜದಲ್ಲಿ ನೆಲೆಯಾಗುವುದು. ಇದಕ್ಕಾಗಿ ಸಂಕಟ ಪಡುತ್ತಿರುವುದಾದರೂ ಏಕೆ? ಹಾಲು ರೋಗವನ್ನು ಸಂಹರಿಸುವ ದಿವ್ಯೌಷಧ. (ದಿವ್ಯೌಷಧ ಎಂಬಂತಿರುವ) ಮುಕುಂದನನ್ನು ಭಜಿಸದೆ, ತೊಳಲಾಡುವುದು ಚೋದ್ಯವೇ ಸರಿ.

೧೬. ತಿಳಿಯದೇ ತನ್ನ ನಾಮವನ್ನು ಉಚ್ಛರಿಸಿದವರಿಗೆ ಕೈಗೊಳಿಸುವ ಕೃಪಾಳುವಾತನು. ಇಂತಹವನನ್ನು ನೆನೆಯದೆ ಜನರು ಮದತುಂಬಿದವರಾಗಿ ಇರುವುದಾದರೂ ಏತಕ್ಕೆ? ಶ್ರುತಿ ಪಂಡಿತರು ತಿಳಿಯದ ಜನಗಳಿಗೆ ತಿಳುಹಿಸಿದರು. (ಆದರೆ) ಕೆಟ್ಟ ಜನಗಳಿಗೆ, ನಿರ್ಭಾಗ್ಯರಿಗೆ ತಿಳಿಯ ಹೇಳಿದರೆ ಫಲವಾದರೂ ಏನು?

೧೭. ಶ್ರೀ ರಮಣನ ಭಕ್ತಿಯ ಸಾರವು ಹತ್ತಾಗಿ ವಿರಾಜಮಾನವಾಯಿತು. ಮರ್ತ್ಯರಿಗೆ ತತ್ತ್ವಾನುಚರವಾಗಲಿ ಎಂದು ವೇದ -ಪುರಾಣಗಳನ್ನು (ರಚಿಸಲಾಯಿತು.) ಚಿತ್ತ ಶುದ್ಧತೆಯಿಂದ ರಚಿಸಿದ ಪಥವು ಒಂಭತ್ತು ಪ್ರಕಾರವಾಗಿದೆ. ಎಲೈ ಪೃಥ್ವೀಶ್ವರನೇ! ದಶಲಕ್ಷಣ ಸಾರವನ್ನು ತಪ್ಪದೆ ನೆನೆಯುತ್ತಿರು.

೧೮. ಈ ವೇದ-ಪುರಾಣಗಳ ಗುಟ್ಟನ್ನು ಹಿಂದೆ ಮೈತ್ರೇಯ ಮುನಿಯು ಅಚ್ಯುತನ ಇಚ್ಛೆಯಂತೆ ವಿದುರನಿಗೆ ಸಾರವತ್ತಾಗಿ ಹೇಳಿದನು. ಆ ಸಾಗರೋಪಮವಾದ ಅರ್ಥವನ್ನು ಸಂಗ್ರಹಿಸಿ ಪರೀಕ್ಷಿತ ರಾಜನು ಕುರು ರಾಜಧಾನಿಗೆ (ಹಸ್ತಿನಾವತಿಗೆ) ಪ್ರವೇಶಿಸಿದನು. ಇದು ಆಶ್ಚರ್ಯಕರ ವಾದ ವಿಶ್ವಂಭವನ ಲೀಲೆ!

೧೯. ಇದು ವೇದ-ಪುರಾಣ, ಸುಮಂಗಲರ ಪುರುಷಾರ್ಥನೆಂಬಂತಿರುವ ಭಕ್ತಿಯ (ಕಥೆಯಾಗಿದೆ) ಇದು ಲೋಕಕವಾಟವೆನಿಸಿದ ಶ್ರೀಹರಿಯ ಆನಂದ ವಿರಕ್ತಿಯಾಗಿದೆ. ಇದನ್ನು ವಾಚಿಸಿ, ವರ್ಣಿಸಿ ಕೇಳುವ ಸೌಭಾಗ್ಯರಾದ ಜನಗಳಿಗೆ ಅಚ್ಯುತನು ಮೇಲಣ ಅಕ್ಷಯ ಮೋಕ್ಷವನ್ನು ಪ್ರಸಾದಿಸುತ್ತಾನೆ.

೨೦. ಅದ್ವೈತ ವಿವೇಕ ರಹಸ್ಯವಾದ ಇದು ದಶಲಕ್ಷಣ ಸಾರವಾಗಿದೆ. ಶುದ್ಧಾತ್ಮಕ ತತ್ತ್ವ ವಿಭೇದ ಮತವಾದ ಇದು ಶ್ರೀ ಭಾಗವತಾರ್ಥವಾಗಿದೆ. ಇದು ದ್ವಿತೀಯ ಸ್ಕಂಧದ ಆರನೆಯ ಅಧ್ಯಾಯವಾಗಿದೆ. ಇದು ಗೋವರ್ಧನ ಪರ್ವತವನ್ನು ಎತ್ತಿದವನ ಪಾದಗಳಿಗೆ ನಿತ್ಯವೂ ಆರಾಧನೆಯಾಗಲಿ!

ಶ್ರೀ ಭಾಗವತಾರ್ಥ
ತೃತೀಯ ಸ್ಕಂಧ

– ೧ –

೧. ಈಶ್ವರನ ಮಗನೇ! ಸತ್ಕವಿತಾಸಾರ ರಸ ಸಾರವನ್ನು ಅನುಕೂಲಿಸಬೇಕು. ವಾಣಿಯೇ! ನಿತ್ಯವು ವಚನಗಳನ್ನು ತಿದ್ದಿ ಸಂಭಾವಿಸಿಕೊಳ್ಳುತ್ತಿರಬೇಕು. ಜಾಣರಾದವರು ಇದನ್ನು ವಿಚಾರಿಸಿ ನೋಡಿ ನ್ಯೂನತೆಯಿರದ ಹಾಗೆ ನೋಡಿಕೊಳ್ಳಬೇಕು. ನಾನು ಕಣ್ಣಿಲ್ಲದಿದ್ದರೂ ಗುರುವಿನ ಕರುಣದಿಂದ ಏರುತ್ತೇನೆ.

೨. ಆದಿಯಲ್ಲಿ, ಧೃತರಾಷ್ಟ್ರನ ಸುತನಿಗೂ ಪಾಂಡವರಿಗೂ ಸಂಧಾನವೆನ್ನುವ ಕೊಂಡಿ ಕಳಚಿದ ದಿನ, ನಿದ್ರಾವಶವಾಗುವ ಗಳಿಗೆಯಲ್ಲಿ ಆತನಿಗೆ (ಧೃತರಾಷ್ಟ್ರನಿಗೆ) ವಿದುರನು ಬೋಧಿಸಿದ ಯುಕ್ತಿಗಳನ್ನು ಕೇಳಿ. ಇದು ವಿದುರನು ನಗರದ ಬಂಧುತ್ವವನ್ನು ಹರಸಿ ಹೋದ ಕಥೆಯಾಗಿದೆ.

೩. ಧರಣೀಶ್ವರನೇ ಕೇಳು! ಹಿಂದೆ ಪಾಂಡವರ ಹಾಗೆ ಹರಿಭಕ್ತನಾಗಿ ವಿದುರನು ಮೈತ್ರೇಯನಲ್ಲಿ ತಲೆಬಾಗಿ ಪ್ರಾರ್ಥಿಸಿ ಕೇಳಿದನು. ಆಗ ಆತನು ವಿದುರನಿಗೆ ಯಥಾನುಸಾರ ಅಚ್ಯುತನ ಗುಣಮಂಗಲ ಸಾರವನ್ನು ಪ್ರಸಾದಿಸಿ, ಭಾಗವತಾರ್ಥ ರಹಸ್ಯವನ್ನು ಕೊಂಡಾಡಿದನು.

೪. ಹಾಗೆಂದು ಹೇಳುವಾಗ ಅತೀ ಕೌತುಕಗೊಂಡು ತಲೆಬಾಗಿಸಿ ಹೀಗೆಂದು ಆತನು ಕೇಳಿದನು. ಮುನಿಗಳಿರಾ! ಮಿತ್ರಕುಮಾರನು (ಮೈತ್ರೇಯ) ವಿದುರನಿಗೆ ಸಖ್ಯತೆಯಿಂದ ಪ್ರಸಾದಿಸಿದ ಸತ್ಕಥವಿತಾ ಸಾರವನ್ನು ನನಗಿಂದು ಕಂಡರಿಯವ ರೀತಿಯಲ್ಲಿ ತಾತ್ಪರ್ಯಾರ್ಥವನ್ನು ವಿಸ್ತರಿಸಬೇಕು.

೫. ಮಿತ್ರಕುಮಾರನೆನಿಸಿದ ಭಾಗವತಾಂಕನನ್ನು ಆತನು ಯಾವಾಗ ನೋಡಿದನು? ಅವರು ಯಾವಾಗ ಗೃಹವನ್ನು ತ್ಯಜಿಸಿದರು? ಹೊರಡಲು ಕಾರಣವೇನು? ಹೃದಯದೊಳಗೆ ಶ್ರೀನಿವಾಸ ಭಕ್ತನಿಗೆ ಪರಾಭವವಾದರೂ ಆಯಿತೇ? ಆ ಮಹಾರಾಜನು ಹೊರಹೋಗಲು ಬಂದ ಕಷ್ಟವಾದರೂ ಏನು?

೬. ಹಿಂದೆ ಪರೀಕ್ಷಿತ ರಾಜನಿಗೆ ಹೃದಯದಲ್ಲಿ ಚಂಚಲತೆಯುಂಟಾಗಲು ಹೀಗೆಂದು ಶುಕರಾಯ ಮುನಿಯಲ್ಲಿ ಕೇಳಿದನು. ಆಗ ಆರಣೇಯನು ತನ್ಮಯತೆಯಿಂದ ಹಿಂದೆ ಅನುಭವಿಸಿದ ಸಾಧನೆಯನ್ನು ಹೇಳಬೇಕೆಂದು ಅನುವಾದನು. ಇದನ್ನು ಶಿವನಿಗೆ ಸಮಾನರಾದ ಮಾನ್ಯರು ಕೇಳಿರೆಂದು ಸೂತ ಪುರಾಣಿಕನು ಹೇಳಿದನು.

೭. ಹಾಗಾದರೆ ಕೇಳು! ಹಿಂದೆ ಕೌರವನು ವಂಚಿಸಲು ಭೂಮಿಯನ್ನು ಬಿಟ್ಟು, ಪಾಂಡವರು ಹೋದರು. ಆಗ ಶ್ರೀಪತಿಯು ಹಸ್ತಿನಾಪುರಕ್ಕೆ ಆಗಮಿಸಿ, ಎಲ್ಲ ವೈಪರೀತ್ಯಗಳನ್ನು ನಿವಾರಿಸಿ ಸಂಧಿಯ ಬಗೆಗೆ ಮಾತಾಡಿದನು.

೮. ತನ್ನ ನಿಜರೂಪವನ್ನು ಅಂದು ಪ್ರಕಾಶಿಸಿ ಸಾರ್ವತ್ಮಕನಾಗಿ ಎಲ್ಲರಿಗೂ ನಿಜದ ಅರಿತವನ್ನು ಕಲ್ಪಿಸಿ ಹರಿಯು ಅಲ್ಲಿಂದ ಯಾತ್ರಿಸಿದನು. ನಮಗೆ ವಿಜಯವಾಗಲಾರದು ಎಂದು ಆ ರಾತ್ರಿಯಲ್ಲಿ ನಿದ್ರೆಯನ್ನುಳಿದು ಆ ನೃಪತಿಯು (ಧೃತಿರಾಷ್ಟ್ರನು) ವಿದುರನನ್ನು ಬರಹೇಳಿದನು.

೯. ತಮ್ಮನೇ ಹೇಳು! ನನಗೆ (ಈ ರೀತಿಯಾಗಿ) ಅತಿಯಾದ ದುಃಖವು ಉಂಟಾಗುತ್ತಿದೆ! ಕೆಟ್ಟ ಮನಸ್ಸನ್ನು ನಿರಾಕರಿಸಿ ಅತೀ ಸಾರವತ್ತಾದ ಬುದ್ಧಿಯನ್ನು ಪ್ರಸಾದಿಸು. ನನ್ನ ಮಕ್ಕಳು ದುಮ್ಮಟಿಗಳು. ಅವರಾದರೋ ಸಾಧು ಸಜ್ಜನರು. ಹೀಗೆ ಅವರೀರ್ವರ ಕರ್ಮಗಳೆರಡಾಗುತ್ತಿರಲು ನಾನು ಏನು ಮಾಡಲಿ?

೧೦. ಧರ್ಮರಾಯನು ಆಶಿಸಿರುವಂತೆ ನೆಲದಲ್ಲಿ ಅರ್ಧ (ಭಾಗ)ವನ್ನು ಕೊಡು. ಅರಣ್ಯ ವಾಸವನ್ನು ಮಾಡಿ ದಂಡನೆಗೊಳಗಾದ ಧರ್ಮರಾಯನಿಗೆ ವಿಪರೀತವಾಗದಿರಲಿ. ಮಲಿನಾತ್ಮರಾದ ನಿನ್ನ ಮಕ್ಕಳ ಕುಹಕತನವನ್ನು ಮುಂದುವರಿಸಬೇಡ. ಧೃತರಾಷ್ಟ್ರ ಮಹೇಶನೇ! ನಿನಗಿರುವ ಇಹಪರಗಳೆರಡನ್ನೂ ನೀನು ಸಾಧಿಸು.

೧೧. ಧರ್ಮನಂದನನು ನೀನು ಮಾಡಿದ ದುಷ್ಕೃತ್ಯಗಳನ್ನು ಸೈರಿಸಿದ್ದಾನೆ. ನೋಡೋಣ ಎಂದು (ಕಾದುಕೊಂಡಿರುವ) ವೈರಿಗಳು ನಿನಗೆ ಎಲ್ಲ ಕಡೆಯೂ ಕಾಯುತ್ತಿದ್ದಾರೆ. ಆತನ ತಮ್ಮನಾದ ಭೀಮಸೇನನ ಪೌರುಷವು ನಿಮ್ಮಲಿದೆಯೇ? ಅಂದು ವಶ ಮಾಡಿಕೊಂಡ ಅರ್ಧಭೂಮಿಯನ್ನು ಇಂದು ಅವರಿಗೆ ಕೊಡು.

೧೨. ಭೂಪಾಲನೇ! ಅವರು ದೈವಾಧಿಕರು. ನಿನ್ನ ಮಕ್ಕಳಿಗೆ ಅದು ಶೂನ್ಯವು. ಸ್ತುತಿಪಾಠಕರು ಒಡೆಯನನ್ನು ದೂರಿದರೆ ಕುಲನಾಶವಾದೀತೆಂದು ತಿಳಿದಿರು. ಈ ಲೋಕದಲ್ಲಿ ಅವರನ್ನೂ ದೈವಜ್ಞರೆಂದು ಮುಕುಂದನು ಮನ್ನಿಸುತ್ತಾನೆ. ಐವರೂ ನನ್ನ ಪ್ರಾಣವೆನ್ನುವ (ದೇವರ) ಬಲ ಅವರಿಗಿದೆ.

೧೩. ಸಂಧಿಗೆಂದು ಆತನು ಇಲ್ಲಿಗೆ ಬಂದು - ಅದು ಆಗುವುದರಲ್ಲಿದ್ದಾಗ ನಿನ್ನ ಮಕ್ಕಳು ಕೆಟ್ಟಮಾತುಗಳನ್ನಾಡಿ ರೋಷದಿಂದ ಸರ್ವಾತ್ಮಕನನ್ನು ತಿಳಿಯದೆ ದೂಷಿಸಿದರು. ಕುಲಕ್ಷಯವಾಗುವುದರಲ್ಲಿ ಇದು ಸಂದೇಹವೇ ಇಲ್ಲವೆನ್ನುವಂತೆ ಅವರು ವರ್ತಿಸಿದರು. ಸಾಧುಗಳನ್ನು ಸನ್ಮಾನಿಸದ ಪೊಡವಿಯೇ ನಶಿಸಿ ಹೋಗಲಿ! (ನಮಗೇನಂತೆ ಎಂಬ ಭಾವ)

೧೪. ಅಯ್ಯಾ! ನೀನು ದೈವದ ಪ್ರೀತಿಗೆ ದೂರವಾದೆಯಲ್ಲ? ಕುರುವಂಶ ಕಲ್ಪವೃಕ್ಷದ ಬೇರನ್ನೂ ಕೂಡ ಎಳೆದು ತೆಗೆದರಲ್ಲ! ಮಾರಿಯೊಂದಿಗೆ ಎದುರಾಗುವ ಕುರಿಗಳಿಗೆ ಎಂದಾದರೂ ಬಾಳುವೆ ಸಾಧ್ಯವೇ? ದುರ್ಬಲಾದ ಮಕ್ಕಳು ಓಡಲು ಸಾಧ್ಯವಿಲ್ಲವಲ್ಲ? ಇದು ಸತ್ಯವಾದುದು.

೧೫. ಅಯ್ಯಾ! ಆ ಮಹಾತ್ಮನ ವಿಶ್ವರೂಪವನ್ನು ಕಣ್ಣಾರೆ ನೀನೇ ನೋಡಿದೆಯಲ್ಲ! ಅಷ್ಟಭೂತಿ ವಿಲಾಸವಾದ ಪ್ರಪಂಚವಾದ ಸಭೆಯನ್ನು ಕಂಡೆಯಲ್ಲ!ಮೋಹಪಾಶ ವಿಲಾಸದ ಕಡುಕಷ್ಟವನ್ನು ಏನು ತಾನೇ ಹೇಳಲಿ? ದುಷ್ಟನಾದ ಕೌರವನ ಬುದ್ಧಿ ಮಾತನ್ನು ಕೇಳಿ ಸರ್ವರೂ ಕೆಟ್ಟು ಹೋದರು ಇದು ಸರ್ವಥಾ ಸತ್ಯ!

೧೬. ಅಂಧನಾದರೆ ದೋಷವೇನಿಲ್ಲ. ಆದರೆ ಬುದ್ಧಿಯಲ್ಲಿ ಮದಾಂಧನಾಗಬೇಡ. ನಿನ್ನ ಪುತ್ರರ ಮತ್ತು ಪಾಂಡವರ ಬಾಂಧವ್ಯ ಸಂಬಂಧವು ತಪ್ಪದ ಹಾಗೆ ಸಂಧಿಯನ್ನು ನಡೆಸು. ಸಿಂಧುಶಾಯಿಯಾದ ಕೃಷ್ಣನ ಸಂಬಂಧ ಕಾರಣವಾಗಿ ಪರಸ್ಪರ ಕೂಡಿಕೊಂಡಿರೆಂಬ (ಕೀರ್ತಿಗೆ) ಚತರಾಬ್ಧಿ ಪರಿಮಿತವಾದ ಈ ಭೂಮಿಯಲ್ಲಿ - ನಿಮ್ಮನ್ನು ಹೋಲುವ ಭೂಪರಾದರೂ ಯಾರಿದ್ದಾರೆ? (ಯಾರೂ ಇಲ್ಲ ಎನ್ನುವ ಭಾವ)

೧೭. ವಿಷದ ಭಕ್ಷ್ಯಗಳನ್ನು ತಿನ್ನಿಸಿ, (ಹಗ್ಗದಿಂದ) ಬಿಗಿದು ನೀರಿಗೆ ಎಸೆದೆ. ವಿಷಮವಾದ ಅರಗಿನರವಾಸವನ್ನು ಕಲ್ಪಿಸಿ (ದ್ರೌಪದಿಯ) ತಲೆಯನ್ನು ಹಿಡಿದೆಳೆಸಿದೆ. ವಿಷಮಾಕ್ಷನಂತಿರುವ ದೂರ್ವಾಸ ಮುನಿಯನ್ನು ಕಾಡಿಗೆ ಕಳುಹಿಸಿದೆ. ಭೂಪಾಲನೇ ಇಂತಹ ವಿಷಯಗಳೆಲ್ಲವೂ ಉಜ್ವಲವಾಗುವ ಹಾಗೆ ಧರ್ಮಾತ್ಮಜನೂ ಕಲ್ಪಿಸಿದನು.

೧೮. ಹಲವು ಮಾತುಗಳೇಕೆ? ಇಹಪರಗಳೆರಡೂ ಬೇಕೆಂದಾದರೆ ಕೃಷ್ಣನನ್ನು ಕರೆಸಿ, ಧರಣಿಯಲ್ಲಿ ಉಳಿದ ಅರ್ಧಭಾಗವನ್ನು ಅವರಿಗೆ ಅನುಗ್ರಹಿಸು. ಕುಲಕ್ಕೆ ಅಧೋಗತಿ ಬರಬೇಕೆಂದರೆ ಈ ನಾಯಿಗಳ ಸ್ನೇಹವನ್ನು ಬಿಡು. ನಿನಗೆ ಬದುಕಬೇಕೆಂಬಾಸೆ ಇದ್ದರೆ ಕುಲಕ್ಕೆ ಮೌಲ್ಯಯುತರಾದವರನ್ನು ಕರೆಸಿ ಮನ್ನಿಸು.

೧೯. (ಹೀಗೆಂಬ ವಿದುರನ) ಈ ನುಡಿಗಳನ್ನು ಸೈಂಧವ, ದುಶ್ಯಾಸನ ಹಾಗೂ ಕರ್ಣಾದ್ಯರು ಅನುಮಾನದಿಂದಲೇ ಕೇಳಿಸಿಕೊಂಡರು. ಹಾಗೆ ಕೇಳಿಸಿಕೊಂಡು ಸುಯೋಧನನ ಕಿವಿಯಲ್ಲಿ ಪೂರ್ಣವಾಗಿ ಹಾಕಿದರು. ಘನ ರೋಷಾಗ್ನಿಯಿಂದ ದೃಷ್ಟಿಗಳು ಜ್ವಲಿಸುತ್ತಿರಲು, ರೌದ್ರಾನಲರಾಗ್ನಿ ದೇಹವು ಕಂಪನಕ್ಕೊಳಗಾಗಲು ಮೈ ನಿಮಿರಿಸಿಕೊಂಡು ಭಯಂಕರವಾಗಿ ಹಲವಿಧವಾಗಿ ಛೇಡಿಸಿದನು.

೨೦. ದುರ್ವೃತ್ತ ದುರಾತ್ಮನಾದ ನಿನ್ನ ತಮ್ಮನು ಏನು ನೀತಿಗಳನ್ನು ಬಲ್ಲನು? ಪಾಪ ಯಾವಾಗಲೂ ವೈರಿಗಳ ಪೌರುಷವನ್ನು ಹೊಗಳುತ್ತ ವೃದ್ಧರನ್ನು ಬಾಲರನ್ನು ಬೆದರಿಸುತ್ತಿರುತ್ತಾನೆ. ಸ್ವತಃ ಹೀನಾಶ್ರಯನಾದ ಈತನು ರಾಜ ಸ್ವಧರ್ಮ ಮತಗಳನ್ನು ಏನು ತಾನೇ ಬಲ್ಲನು? ಎಷ್ಟಾದರೂ ಅದು ಸಚರಾಚರ ಸ್ವಭಾವವೇ ಸರಿ!

೨೧. ನಾಯಿಯೇ ಮೊದಲಾದ ಪ್ರಾಣಿಗಳಾದರೂ ಉಂಡ ಮನೆಯನ್ನು ರಕ್ಷಿಸುತ್ತವೆ. (ಉಂಡ ಮನೆಗಾಗುವ) ವ್ಯಥೆಯನ್ನು ಸೈರಿಸಲಾರದೆ, ಏಕಾಗ್ರತೆಯಿಂದ ಕಾದು ಬೇರೆಯವರನ್ನು ಓಡಿಸುತ್ತದೆ. ಈ ನೀಚನನ್ನು ರಕ್ಷಿಸಿ ಏನು ಫಲವಿದೆ? ಜನ್ಮಾಂತರದ ಹಾನಿಯು ಇವನಿಂದಲೇ ಉಳಿದು ಬಂದಿರುವುದು. ಸದನದಿಂದ ಇವನನ್ನು ಓಡಿಸಿರಿ.

೨೨. ಹೀಗೆಂಬ ಮಾತುಗಳ ಅಲಗು ಹೃದಯದಲ್ಲಿ ತಾಗುತ್ತಿರಲು, ಮನಸ್ಸಿನಲ್ಲಿ ನೊಂದು ಉರಿ ಹೊರಬರುತ್ತಿರಲು ವಿದುರನು ಚಿಂತಾತುರನಾದನು. ಘನ ಜ್ಞಾನ ವಿವೇಕಗಳನ್ನು ಪಡೆಯುವ ವಯಸ್ಸಿನಲ್ಲಿ ಈತನು ಮದೋನ್ಮತ್ತನಾದವಲ್ಲ! ಮಾಯಾ ವನಿತೆಯ ಮಹಿಮೆಯಲ್ಲವೇ ಎಂದೆಣಿಸಿಕೊಂಡು ದ್ವಾರದಲ್ಲಿಯೇ ಧನುವನ್ನು ತುಂಡರಿಸಿದನು.

೨೩. ಆ ಮಂದಿರದಲ್ಲಿ ಅಣ್ಣನಿಗೆ ವಂದಿಸಿ ಬೀಳ್ಕೊಳ್ಳುತ್ತಿರುವಾಗ (ಹೀಗೆಂದು) ವಿದುರನು ಹೇಳಿದನು; ಈ ಮೂಢರು ಜನಿಸಿ ವಂಶವನ್ನು ನಿರ್ಮೂಲನಗೊಳಿಸಲಿರುವರು. ಆ ಮಾರುತಿಯು, ಭಾಷೆಯನ್ನು ಹೇಳಿದಂತೆಯೇ ನಿನ್ನ ಮಕ್ಕಳನ್ನು ಕೊಲ್ಲುವನು. ಕ್ಷೇಮದಿಂದ ಕರೆಸಿಕೊಂಡವನು ಹಾಳು ಗಂಜಿಯನ್ನು ಕುಡಿದ ರೀತಿಯಿದು ಎಂದು ಅಣ್ಣನಿಗೆ ಹೇಳಿದನು.

೨೪. ಅಷ್ಟು, ಹೇಳಿ ಆತನು ತೀರ್ಥಾಟನೆಗೆಂದು ಹೊರಟನು. ದುಷ್ಟಾಗ್ರಹಣದಿಂದ ಇಷ್ಟರವರೆಗೆ ವೃಥಾ ಕಾಲ ಹರಣವನ್ನು ಮಾಡಿದೆನು. ಪಾಪಿಷ್ಠರ ಸಂಗದಿಂದ, ಎಷ್ಟೆಷ್ಟೋ ಯುಗಗಳು ಅಳಿಸಿ ಹೋದವು. ಅಷ್ಟೆಲ್ಲವನ್ನೂ ತೀರಿಸುತ್ತೇನೆಂದು ನಗರದಿಂದ ಹೊರವಂಟನು.

೨೫. ಹಾಲಿನಲ್ಲಿ ಮಜ್ಜಿಗೆಯೆಲ್ಲವೂ ಸಾರೂಪ್ಯ ಪಡೆಯುವುದು. ಹಾಲಿನಲ್ಲಿ ಮಜ್ಜಿಗೆಯು ತನ್ನ ನಿಜವನ್ನು ಬಿಡದು. ಇದು ಸಂಸರ್ಗ ವಿಭೇದವೆನಿಸುವುದು. ಸಜ್ಜನರಾದವರು ದುಷ್ಟರನ್ನು ಆಶ್ರಯಿಸಿದರೆ ದುಷ್ಕೃತ್ಯವೇ ಲಭಿಸುವುದು (ಆದರೆ) ದುರ್ಜನರಾದವರು ಸಜ್ಜನರ ಸಂಗ ಮಾಡಿದರೆ ಸಜ್ಜನಿಕೆ ಬರಲಾರದು.

೨೭. ಹೀಗೆಂದು ಅನುಮಾನ ವಿರಕ್ತಿಯಿಂದ ಅವರ ಬಂಧವನ್ನು ಬಿಟ್ಟುಬಿಟ್ಟು ಆತ್ಮತಲದಲ್ಲಿ ಅಬುಜಾಕ್ಷನಾದ ಶ್ರೀಹರಿಯ ಪಾದವನ್ನು ಸಂದೇಹಿಸದೆ ದೃಢಗೊಳಿಸಿ ಕೊಂಡನು. ನದಿಗಳೋಪಾದಿಯ ಅಘ ಸಂಹರಣವೆನಿಸಿದ ಬಹುತೀರ್ಥಗಳನ್ನು ನೋಡುವೆನೆಂದು ಆತನು ಸಾಧುಗಳ ಸಂಸರ್ಗದೊಂದಿಗೆ ಗಮನಿಸಿದನು.

೨೮. ಕುರುಕುಲಾನ್ವಯ ಭಾಗಲಕ್ಷ್ಮಿಯು ಶರೀರ ವರ್ಧನೆಯಾಗಿಯೂ, ದುರುಳರ ಆಯುಷ್ಯ ಹಾಗೂ ಯಶೋಗುಣ ಧನಕೀರ್ತಿಯು ಯಾತ್ರೆ ಹೊರಡುವಂತೆಯೂ, ಪರಮ ಭಾಗವತಾಂಕ ಭೂಷಣನು ತೀರ್ಥ ತೀರ್ಥಗಳೆಲ್ಲವನ್ನು ಸಂಚರಿಸಿದನು. ಹೀಗೆ ಭೂಮಿಯಲ್ಲೆಲ್ಲ ಸಂಚರಿಸುತ್ತ ಭೂಮಿಯನ್ನೇ ಪಾವನಗೊಳಿಸಿದನು.

೨೯. ಹರಿಮಂದಿರಗಳೆಲ್ಲವನ್ನೂ ಮಾತ್ರವಲ್ಲದೆ ಅಲ್ಲಿಯ ಹರಿಭಕ್ತರನ್ನೂ ವೀಕ್ಷಿಸಿದನು. ಹರಿದಾಸರೊಂದಿಗಿದ್ದು ಹರಿನಾಮ ಗುಣಸಾರವನ್ನು ಹೀರಿದನು. ಹರಿಪಾದ ರಸಾಯನವನ್ನು ನಿತ್ಯವೂ ಪಾರಾಯಣ ಮಾಡಿ, ಹರಿವಾರ್ತೆಯಿಂದ ತುಷ್ಟಿಗೊಂಡು, ನಾನಾ ದೆಸೆಗಳಿಗೆ ಯಾತ್ರಿಸಿದನು.

೩೦. ಪುಣ್ಯಾಶ್ರಮಗಳಿರುವ ಗಿರಿಶಿಖರಗಳಲ್ಲಿ, ಅರಣ್ಯಗಳೆಲ್ಲ ಕಡೆಗಳಲ್ಲಿ, ಪುಣ್ಯ ನದೀನದ, ತೀರ್ಥಗಳಲ್ಲಿ ಕ್ಷೇತ್ರಗಳೆಲ್ಲ ಕಡೆಗಳಲ್ಲಿ, ಪುಣ್ಯಾಗಮಗಳಾದ ದಿವ್ಯ ಗೃಹಗಳಲ್ಲಿ, ಸರಸಿಗಳೆಲ್ಲದರಲ್ಲಿ, ಪುಣ್ಯಾತ್ಮನಾದ ವಿದುರನು ಪುಣ್ಯಕೋಸ್ಕರವಾಗಿ ನಿರೀಕ್ಷೆಯಿಂದ ಯಾತ್ರಿಸಿದನು.

೩೧. ಎಲ್ಲಿ ಮಹೋತ್ಸವ ದೇವಗೃಹ ಇರುವುದೋ ಎಲ್ಲಿ ಉತ್ತಮ ಸಾರವಿರುವುದೋ, ಎಲ್ಲಿ ಅಚ್ಯುತನ ಮಹಿಮಾಮೃತಗಾನ ಪಾರಾಯಣವಿರುವುದೋ, ಎಲ್ಲಿ ಹರಿಸ್ಮರಣಾದಿ ಶುಭ ಸಂಸರ್ಗ ಶ್ರೇಷ್ಠವಿರುವುದೋ, ಅಲ್ಲೆಲ್ಲ ಬಿಡದೆ ಹರಿದಾಸನು ವಿಚಾರಿಸಿ ಯಾತ್ರಿಸಿದನು.

೩೨. ತ್ರಿಶವಣವೆಂಬ ಸ್ನಾನವನ್ನು ಮಾಡಿ ಜಟಾಬದ್ಧನಾಗಿ, ಕುಶಜನಾಭನಾದ ವಿಷ್ಣುವಿನ ಗೂಢಭಕ್ತಿಯಿಂದ ಜೀರ್ಣವಸ್ತ್ರನಾಗಿ, ಕೃಶ ಶರೀರನಾಗಿ ವಿಚಿತ್ರ ವೇಷವನ್ನು ಧರಿಸಿದನು. ಅಮಿತ ಭಕ್ಷಣೆ ಮಾಡುತ್ತ ವಿಷಮರಾರೂ ತಿಳಿಯದಂತೆ ಅವಧೂತ ವೇಷವನ್ನು ಧರಿಸಿದನು.

೩೩. ಹಾಗೆಯೇ ನಡೆದು ಅಸಂಖ್ಯಾತ ಕ್ಷೇತ್ರ ತಟಗಳೆಲ್ಲವನ್ನೂ ನೋಡಿದನು. (ಮುಂದೆ) ನಡೆದು ಪ್ರಭಾಸ ಕ್ಷೇತ್ರವನ್ನು ನೋಡಿದನು. ಆಗ ಅಲ್ಲಿರುವ ಜನಗಳಿಂದ ಕುರುಭೂಮಿಗೆ ಬಂದ ಪಡೆಯು ಭಾರತ ಯುದ್ಧದಲ್ಲಿ ಮಡಿದು ಮುಕ್ತಿ ಪಡೆದ ಶ್ರೀಕೃಷ್ಣ ವಿಲಾಸದ ಕಥೆಯನ್ನು ಕೇಳಿದನು.

೩೪. ಕುರು-ಪಾಂಡವರು ಮಾರಾಂತು ತಮ್ಮಲ್ಲಿಯೇ ಪರಾಭವನ್ನೂ ಹೊಂದಿ, ಮರುತಾತ್ಮಜನ ಕೈಯ್ಯ ಗದೆಯ ಬಿರುಸಿನಿಂದ ಸ್ವರ್ಗ ನಾರಿಯರೊಂದಿಗೆ ಸೇರಿದುದನ್ನೂ, ಗೋತ್ರ ಹತ್ಯೆ ನಡೆದ ಕಥೆಯನ್ನೂ ಕೇಳಿದನು. ಆಮೇಲೇ ತೀರ್ಥ ಕ್ಷೇತ್ರಗಳನ್ನು ಸಂಚರಿಸಿ ಸುತ್ತಲೂ ನೋಡಿದನು.

೩೫. ಮನುತೀರ್ಥ, ಭಾರ್ಗವತೀರ್ಥ, ಅತ್ರಿಸುತ ತೀರ್ಥ ಅಲ್ಲಿಂದ ಸುಧಾಕರ ತೀರ್ಥವನ್ನೂ ನೆನಸಿದನು. (ಅಲ್ಲಿಂದ) ಅಗ್ನೀವರ ತೀರ್ಥ, ಇನತೀರ್ಥ, ಮಹಾಗ್ರಹತೀರ್ಥ, ಪೃಥುತೀರ್ಥವೇ ಮೊದಲಾದ ತೀರ್ಥ ತೀರ್ಥಗಳೆಲ್ಲವನ್ನೂ ಅನುಭವಿಸಿ, ಸರಸ್ವತೀ ನದೀ ತೀರದಲ್ಲಿ ಸ್ನಾನ ಮಾಡಿದನು.

೩೬. ಅಂತಿಂತು ಅನೇಕ ಶತ ತೀರ್ಥಗಳನ್ನು ಆತನು ನಿರೀಕ್ಷಿಸಿದನು. (ಅದಲ್ಲದೆ ಆತನು) ಪಂಚವಕ್ತ್ರನಾದ ಬ್ರಹ್ಮನಿಗೆ ಸಮಾನರಾದ (ಅನೇಕ) ಬ್ರಾಹ್ಮಣ ರಾಜಭಕ್ತರನ್ನು ದರ್ಶಿಸಿದನು. ಕುಲ ನಾಶನದ ಮಹಾತ್ಮೆಗೆ ಚಂಚಲಗೊಂಡು ವಿಪ್ಪಲನಾದನು. ಕಂಚುಕಿ ಪತಿಯ ಮಾಯೆಯನ್ನು ಯಾರು ತಾನೇ ಜಯಿಸುವರೆಂದು ಮನಸಿನಲ್ಲಿಯೇ ಅಂದುಕೊಂಡನು.

೩೭. ಭೂಪಾಲನೇ ಕೇಳು! ಕುರುಂಜಾಗಣಕ್ಕೆ ಸೇರಿದ ಸೌರಾಷ್ಟ್ರ, ಸಂವೀರ, ಸುವತ್ಸ ದೇಶಗಳೆಲ್ಲ ಪರ್ಯಟನೆ ಮಾಡಿ ಆ ಭಕ್ತನಿಧಿಯು ಕ್ಷೇತ್ರಗಳನ್ನು ದರ್ಶಿಸಿದನು (ಮುಂದೆ) ಅಲ್ಲಿಂದಲೂ ಸಂಚರಿಸಿ, ಯಮುನಾ ನದಿಯೆಂಬ ವರತೀರ್ಥ ನದಿಯ ಬಳಿಗೆ ವಿದುರನು ಬಂದನು.

೩೮. (ಹಾಗೆ) ಬರುತ್ತಿರಲು ಅಲ್ಲಿ ತಲೆಯಲ್ಲಿ ಪಾದುಕೆಯನ್ನು ಗಟ್ಟಿಯಾಗಿ ಹಿಡಿದುಕೊಂಡು, ಅತಿ ಭದ್ರ ಗಾತ್ರನಾದ ಉದ್ಧವನು ಹರಿ ಭಕ್ತಿಯ ಸಾರವಾದ ಕಣ್ಣೀರನ್ನು ಸುರಿಸುತ್ತ ಪರಿಪೂರ್ಣ ಸುಖದಿಂದ ಮುದಿಸಿದ್ದನು. ತೇಜೋಮಯ ಶರೀರನಾಗಿ ವರಭಾಗವತಾಂಕನು ದೂರದಲ್ಲಿ ಬರುವುದನ್ನು ವಿದುರನು ನೋಡಿದನು.

೩೯. ಪ್ರಾಣಗಳು ಉದಿಸಲು ಶರೀರ ಸುಖದಿಂದ ಆನಂದಿಸಿ ದಿವ್ಯ ತಾಣಗಳು ವರ್ಧಿಸುವ ಹಾಗೆ, ನಡೆದ ಶ್ರಮ ವಿದುರನಿಗೆ ಹೋಯಿತು. ಜಾಣನೆನಿಸಿದ ವಿದುರನು ಉದ್ಧವನಿಗೆ ಎದುರಾಗಿ ಓಡಿಬಂದು ಆತನ ಶರೀರವನ್ನು ಎರಡು ಕೈಗಳಿಂದ ಬಿಗಿಯಾಗಿ ಅಪ್ಪಿ ಆಲಿಂಗನಗೈದನು.

೪೦. ಈ ಉಭಯ ಭಾಗವತರ ಅನುಬಂಧ, ಸ್ನೇಹ, ಭಕ್ತಿ ಸುಖವನ್ನು ತಿಳಿದು ರಚಿಸಲು ನನಗೆ ಸಾಧ್ಯವಾಗಲಾರದು! ಇದುವೇ ಅವಸಾನವೋ ಎಂಬಂತೆ ನೆನೆನೆನೆದು ಆಗಾಗ ಕೈಗಳಿಂದ ಬಿಗಿಯಾಗಿ ಅಪ್ಪಿಕೊಂಡು, ಪಾನ ಮತ್ತರಾದವರ ಹಾಗೆ ಗಾಢವಾದ ಅನುಭವಗಳನ್ನು ತಿಳಿದುಕೊಂಡರು.

೪೧. ಸಂಭಾಷಣೆಯಿಂದ ಕ್ಷೇಮ ಸಮಾಚಾರಗಳನ್ನು ಒಬ್ಬೊಬ್ಬರಾಗಿ ಕೇಳಿಕೊಂಡರು. ಆನಂದಾಶ್ರುಗಳಲ್ಲಿ ಪರಸ್ಪರ ಮುಳುಗಿ ಕಣ್ಣೀರನ್ನು ತೊಡೆದುಕೊಂಡರು. ಸ್ವಾಮಿಯಾದ ಯದುನಾಥನೇ ಮೊದಲಾಗಿ ಸಮಸ್ತರೂ ಪರಿಣಾಮವೇ ಎಂದು ಉದ್ಧವನಲ್ಲಿ ವಿನಯದಿಂದ ವಿದುರನು ಕೇಳಿದನು.

೪೨. ವಿದುರ - ಉದ್ಧವರ ವಿನಯ - ಸಂಭಾಷಣ ಸೌಖ್ಯದ ವದನಾಮೃತದ ಸುಖಾನುಮತದ ಈ ಕಾವ್ಯ ಪುರಾಣದ ಪದವಾಗಿ ರಚಿಸಿದ ಇಲ್ಲಿಗಿದು ಅಧ್ಯಾಯ ಸ್ವರೂಪ ಪಡೆಯಿತು. ಇದು ತೃತೀಯ ಸ್ಕಂಧದ ಮಹಾತ್ಮೆಯ ಮೊದಲ ಅಧ್ಯಾಯವೆನಿಸಿತು.

ಅಧ್ಯಾಯ ೨

೧. ಶೌನಕಾದಿ ಮುನೀಶ್ವರರೇ! ಸೂಕ್ಷ್ಮವಾಗಿ ಆಲಿಸಿರಿ. ಅಂದು ಪರೀಕ್ಷಿತ ರಾಜನು ಶ್ರೀ ಶುಕರಾಯ ಮುನಿಯಲ್ಲಿ ವಿಚಾರಿಸಲು ಅವನು ಶ್ರೀ ನಿಕೇತನನ ಮುಖ್ಯನಾಮ ಮತಾಬ್ಧಿ ಗುಣಗಳನ್ನು ಹೇಳಿದನು. ಅದಕ್ಕೆ ಪ್ರತಿಯಾಗಿ ಉದ್ಧವನೂ ವಿದುರನಲ್ಲಿ ಕುಶಲೋಕ್ತಿಯನ್ನು ಕೇಳಿದನು.

೨. ಹಿಂದೆ ಕಮಲಾಸನನು ಧರೆಯ ಭಾರವನ್ನು ಪರಿಹರಿಸಲೆಂದು ಪ್ರಾರ್ಥಿಸಲಾಗಿ ಕರುಣೆಯಿಂದ ಪುಣ್ಯನಿಧಿಯಿಂದ ಪುರುಷೋತ್ತಮನು ಜನಿಸಿದನು. ಶೂರತನುಜನಾದ ವಸುದೇವನಿಗೆ ಜನಿಸಿದ ಶ್ರೀ ಮುಕುಂದ ರಾಯನ ಚರಣಗಳಿಗೆ ಕ್ಷೇಮವೇ (ಈ) ತತ್ವಾರ್ಥವನ್ನು ಹೇಳು!

೩. ಹರಿಯ ಜಠರದಲ್ಲಿ ಅನೇಕ ಬ್ರಹ್ಮಾಂಡಗಳುದಿಸಿ ಲಯವಾಗುತ್ತವೆ. ಬ್ರಹ್ಮಜ್ಞಳಾದ ದೇವಕಿಗೆ ಸುಕ್ಷಮವೇ ಎಂಬುದನ್ನು ಹೇಳು. ಬ್ರಹ್ಮನನ್ನೇ ಪಡೆದ ಪರಾತ್ಪರುಷನ ತಂದೆಯಾದ ವಸುದೇವನು ಸ್ವಸ್ಥನಾಗಿ ಸುಖದಿಂದ ಹೆಮ್ಮೆಯಿಂದಿರುವನೋ ಎಂಬುದನ್ನು ತಿಳಿದಿದ್ದರೆ ಹೇಳು.

೪. ಉದ್ಧವನೇ! ಯದುವಲ್ಲಭನಾದ ಶ್ರೀಹರಿಯಲ್ಲಿ ರುಕ್ಮಿಣಿಯು ಹಿಂದೆ ಸಂತಾನಕ್ಕಾಗಿ ಪ್ರಾರ್ಥಿಸಿದಳು. ಆಗ ಮದನಾರಿಯ ಅನುಗ್ರಹವನ್ನು ಪಡೆದು ಪಟ್ಟದ ಕುಮಾರನುದಿಸಿದನು. ಹೀಗೆ ಹುಟ್ಟಿ ಸದನದಲ್ಲಿ ವಿರಾಜಿಸುತ್ತಿರುವ ಪ್ರದ್ಯುಮ್ನನ ಪಾದಗಳಿಗೆ ಸುಕ್ಷೇಮವೇ ಎಂಬುದನ್ನು ಮರೆಯದೇ ಹೇಳು.

೫. ಹಿಂದೆ ಅರಸುತನವನ್ನು ದೂರದಲ್ಲಿಯೇ ವರ್ಜಿಸಿ, ಸಿಂಹಾಸನದಲ್ಲಿ ಶ್ರೀಹರಿಯು ಸ್ಥಿರಗೊಳಿಸಿದ ಉಗ್ರಸೇನಾಧಿಪತಿಗೆ ಸುಕ್ಷೇಮವೇ? ವರಮಾಲೆಯನ್ನು ಅನುಗ್ರಹಿಸಿ, ಗುಹೆಯಿಂದ ಶ್ರೀಕೃಷ್ಣನು ಎಳೆತಂದ ತರುಣಿ ಜಾಂಬವತಿಗೆ ಸುಖವೇ - ಎಂಬುದನ್ನು ಬಾಯ್ತುಂಬ ಹೇಳು.

೬. ಉದ್ಧವನೇ! ಹಿರಿಯ ದಿವ್ಯ ಕಟಾಕ್ಷನು ಬಂಧವನ್ನು ಚೆನ್ನಾಗಿ ಸಂಪಾದಿಸಿ, ಅಂದು ಅರ್ಜುನನಲ್ಲಿ ಶಸ್ತ್ರಗತಿಯ ಅಭ್ಯಾಸವನ್ನೆಲ್ಲ ಕಲಿತು ಬಿಲ್ಲು ವಿದ್ಯಾವಿಗಡ್ಡ ಮಹಾನಿಪುಣನೆಂದೆನಿಸಿದ ಆ ಜಾಣ ಸಾತ್ಯಕಿಯು ಪರಿಣಾಮವೇ ಎಂಬ ಸ್ಥಿತಿಯನ್ನು ನೀನು ಬಲ್ಲೆಯಾದರೆ, ಎಲ್ಲವನ್ನೂ ಹೇಳು.

೭. ಅಯ್ಯಾ ವಿಭುವೇ! ಹರಿಭಕ್ತನ ಮನಸ್ಸಿಗೆ ಅತೀತ ಗುಣನಾಗಿ ಮಾರ್ಗದಲ್ಲಿ ಕಾಣುತ್ತಲೇ ಹರಿಪಾದ ರಜಗಳಲ್ಲಿ ಬಿದ್ದು ಹೊರಳಾಡಿ, ಬಿದ್ದುಬಿಡುವ ಹರಿದಾಸ ಅಕ್ರೂರನಿಗೆ ಸನ್ಮತವೇ? ಇದೆಲ್ಲವನ್ನೂ ನೀನು ಪ್ರಸಾದಿಸಬೇಕು.

೮. ಮುರ ವೈರಿಗೆ ಮೊಮ್ಮಗನೂ ಉದಾರ ನಿಧಿಯೂ, ಶೌರ್ಯಾಂಬುನಿಧಿಯೂ ಹದಿನಾಲ್ಕು ಲೋಕದೊಳಗೆ ಯಾರೂ ಹೋಲದ ರೂಪವುಳ್ಳವನೂ ಆದ ಅನಿರುದ್ಧನಿಗೆ ಪರಿಣಾಮವೇ? ಹಾಗೆಯೇ ಉಳಿದ ಸಮಸ್ತ ಪ್ರಜಾ ಜನರಿಗೂ ಕ್ಷೇಮವೇ ಎಂಬುದು ನಿನಗೆ ತಿಳಿದಿದ್ದರೆ ಎಲ್ಲವನ್ನೂ ಹೇಳು.

೯. ಮುರವೈರಿಯ ಪಾದಗಳನ್ನು ಸೇವಿಸುವ ವರ ಪಾಂಡುತನಯರು ದುರ್ಯೋಧನನ ವಂಶವನ್ನೆಲ್ಲ ಯಮಾಲಯಕ್ಕೆ ಕಳುಹಿಸಿದರೇ? ವಂಶ ಪರಂಪರೆಯಾಗಿ ಬಂದ ಸಿಂಹಾಸನದಲ್ಲಿ ಧರ್ಮರಾಯನು ಸ್ಥಿರವಾದನೆ? ಭೂಪತಿಕಾರ್ಯವು ಸಿದ್ಧಿಯಾಯಿತೇ - ಎಂಬುದನ್ನು ಸರಿಯಾಗಿ ತಿಳಿದಿದ್ದರೆ ಹೇಳು.

೧೦. ಭೀಮನ ಪೌರುಷದ ಕೋಪವೆಂಬ ಬೆಂಕಿಗೆ ಕೌರವಾನುಜನ ಆಹುತಿ ತಡವಾಗದಿರುವಂತೆ ಯುದ್ಧ ಭೂಮಿಯೆಂಬ ಕುಂಡದ ನಡುವೆ ಆಯಿತು. ಕೌರವನ ತೊಡೆಗಳನ್ನು ಜುಹುವೆಂಬ ಗದೆಯಿಂದ ಹೋಮಿಸಲಾಯಿತು. ಆ ಮಹಾಪೂರ್ಣಾಹುತಿ ಕ್ರಮವನ್ನು ಪಾಂಡವರು ಸಾಧಿಸಿದರೇ ಎಂದು ವಿದುರನು ಕೇಳಿದನು.

೧೧. (ಶಿವನು) ವೇಷವನ್ನು ಮರೆಸಿ ಮಾಡಿದ ಕಾಳಗದಲ್ಲಿ ಅತೀ ಮೋಹಿಯಾಗಿ ಅನೇಕ ಸಲ ವಶತಪ್ಪಲು, ತರುಣಿಯ ಅಭಿಲಾಷೆ (ಪಾರ್ವತಿಯ) ಪೂರ್ಣವಾಗುವಂತೆ, ಶಂಭು ಪ್ರತ್ಯಕ್ಷವಾದನು. (ಆಗ) ಅರಿನಾಶನಕ್ಕೆಂದು ಸಂಹಾರಣಾಸ್ತ್ರವನ್ನು ಪಡೆದು ಜಯಶಾಲಿಯಾದ, ಹರಿಸಖನಾದ ಅರ್ಜುನನು ಸುಕ್ಷೇಮಿಯೋ ಎಂದು ಹೇಳು.

೧೨. ಕಣ್ಣನ್ನು ಸುತ್ತುವರಿದ ರೆಪ್ಪೆಯ ಹಾಗಿರುವ ಸೃಷ್ಟಿನಾಥನ ಪಾದದ್ವಯಗಳಿಗೆ (ಪಾಂಡವರು) ಅನುಕೂಲವಾಗಿ ಇದ್ದಾರೆಯೇ? ಪರಾಕ್ರಮಿಗಳಾದ ನಕುಲ-ಸಹದೇವರ ಪದವಿಷ್ಟರಗಳಿಗೆ ಕ್ಷೇಮವೇ? ಪಟ್ಟಣದಲ್ಲಿ ನಾಶವಾಗದ ಹಾಗೆ ಎಲ್ಲರೂ ಸುಖಿಗಳಾಗುವರೇ?

೧೩. ಕುಂತಿದೇವಿಯು ಸುಕ್ಷೇಮವೇ? ದ್ರೌಪದಿ ಸಮಚಿತ್ತದಲ್ಲಿರುವಳೇ? ಸಾಮ್ರಾಜ್ಯದಲ್ಲಿ ಕುಂತೀಸುತರೆಲ್ಲರೂ ಏಕಮತದಿಂದ ಬಾಳುತ್ತಿರುವರೇ? ಧೃತರಾಷ್ಟ್ರನಿಗೆ ಅಂತ್ಯದಲ್ಲಿ ಎಲ್ಲವೂ ತಪ್ಪಿ ಹೋಗಿ ದುರ್ಗತಿ ಬಂತಲ್ಲ ಎಂದು ಅನೇಕ ರೀತಿಯಲ್ಲಿ ನಾನು ಮನಸ್ಸಿನಲ್ಲಿಯೇ ಚಿಂತಿಸುತ್ತಿದ್ದೇನೆ.

೧೪. ಯಾರು ದುಃಖಿಸಿದರೆ ಏನು ಫಲ? ಮುರವೈರಿಯು ಭೂಮಿಯ ಭಾರವನ್ನು ತೀರಿಸುವುದಕ್ಕೆ ಯೋಚಿಸಿದನು. ಆ ಪ್ರಕಾರ ಕುರು -ಪಾಂಡವ ಧಾರುಣೀಶ್ವರರಲ್ಲಿ ವೈರವನ್ನು ಹುಟ್ಟಿಸಿದನು. (ಹೀಗೆ) ಎಲ್ಲ ರಾಜ-ಮಹಾರಾಜರೂ ದೊಡ್ಡ ಹುಲ್ಲಿನ ರಾಶಿಗೆ ಕಾಳ್ಗಿಚ್ಚು ತಾಗಿದಂತೆ ನಾಶವಾಗಿ ಹೋದರು.

೧೫. ದುಷ್ಟನಾದ ನಿನ್ನ ಮಗನು ಹೇಳಿದುದನ್ನು ಕೇಳದೆ, ಹರಿಯು ಇಚ್ಛೆಯಂತೆ, ಸಜ್ಜನರೊಂದಿಗೆ ಸುಖಿಯಾಗಿರುವ ಎಂದು ನಾನು ಬುದ್ಧಿ ಹೇಳಿದೆ. ದುಷ್ಟಜನರು ಆಸ್ಥಾನದಿಂದ ನನ್ನನ್ನು ಹೊರಹಾಕಿದರು. ಅದುವೇ ಹಿತವೆಂದು ನಾನು ದಾರಿಯೆಲ್ಲ ಸುತ್ತಿ ತುಳಿದು ಅನೇಕ ಶತ ತೀರ್ಥಗಳನ್ನು ಮಿಂದು ಬಂದಿದ್ದೇನೆ.

೧೬. ನಿತ್ಯವಲ್ಲದಿರುವ ದೇಹ, ಬಂಧು-ಬಾಂಧವರೆಲ್ಲರೂ ಮೃತ್ಯುವಿನ ವಶವರ್ತಿಯಾಗಿ ಉದಿಸಿ ಲಯವಾಗುತ್ತಾರೆ. ಮೃತ್ಯುವು ಆ ಮುರವೈರಿಗೆ ವಶವರ್ತಿಯೆಂದು ತಿಳಿದ ನಾನು ಚಿತ್ತವಲ್ಲಭನ ಅಂಘ್ರಿ ಯುಗ್ಮಗಳನ್ನು ನಿತ್ಯವೂ ನೋಡುತ್ತಿರುತ್ತೇನೆ.

೧೭. ತನು ವಿಹೀನನಾದವನಿಗೆ ಜನ್ಮವೆಲ್ಲಿಯದು? ಕಾಮಕಲ್ಪನೆಯೂ ಶೂನ್ಯವೇ ಚಿನುಮಯನು ಕರಣೇಂದ್ರಿಯಗಳಿಲ್ಲದ ಕರ್ಮ ವಿಹೀನವೇ ಆಗಿದ್ದಾನೆ. (ಹಾಗೆ) ನೋಡುವುದಾದರೆ ಆತನು ಅಗಮ್ಯವಾದ ಲೋಕ ಹಿತಾರ್ಥ ಕಾರಣನಾಗಿದ್ದಾನೆ. ಮಾಯೆಯಿಂದ ಜನ ಮನೋಹರನೆನಿಸಿದ ಆತನು ತತ್ತ್ವವೃತ್ತಿಯಲ್ಲಿ ನಿತ್ಯವೂ ವರ್ತಿಸುತ್ತಿರುತ್ತಾನೆ.

೧೮. ಕಾರುಣ್ಯ ಮತದಿಂದ ಶ್ರೀರಾಯ ಪದಾಬ್ಜ ಸಾರದ ಅಮೃತಾ ರಸವನ್ನು ತಪ್ಪದೆ ನನ್ನ ಕರ್ಣ ಪಟಲ ಪ್ರಸಾದಿಸು. ಲೋಕಹಿತಾರ್ಥ ನಿಧಿಯೇ (ನನ್ನ ಬಯಕೆಯನ್ನು) ಪೂರೈಸು ಎಂದು ವಿದುರನು ಹೇಳಿದನು. ಆಗ ಆ ನಾರಾಯಣ ಭಕ್ತನಾದ ಉದ್ಧವನು ಮನಸಿನಲ್ಲಿ ಲೋಕವನ್ನೇ ಮರೆತನು.

೧೯. ಸೋಮವಂಶ ಶಿಖಾಮಣಿಯಾದ ಜನಮೇಜಯವೇ ಕೇಳು! ವಿದುರನು ಕಾಮಿತಾರ್ಥಕ್ಕಾಗಿ ಸ್ಪರ್ಧಿಸಲು ಸ್ವಾಮಿ ಭಕ್ತನಾದ ಉದ್ಧವನು ಮನಸ್ಸಿನಲ್ಲಿ ಅತಿಯಾಗಿ ನೊಂದನು. (ಬಳಿಕ) ತಾನು ಆತ್ಮತಲದಲ್ಲಿ ಹರಿಯನ್ನು ಧ್ಯಾನಿಸಿದನು.

೨೦. ಉದರದಲ್ಲಿ ಶೂಲವು ನಾಟಿದ ರೀತಿಯಲ್ಲಿ, ಶ್ರೀ ಹರಿಯನ್ನು ಚಿಂತಿಸಲು ಜ್ವಾಲೆಯು ವರ್ಧಿಸಿತು. ಮೇಲೆ ಮೇಲಕ್ಕೆ ಜ್ವಲಿಸುವ ಯಾಗದ ಬೆಂಕಿಯ ಹಾಗೆ ಯಾಗಾಗ್ನಿಗೆ ಸಮಾನವಾದ ಮನಸನ್ನು ಭಾಗ ಮಾಡಿದನು.

೨೧. ಹುಟ್ಟಿ ನಡೆದಾಡುವ ಸಮಯದಲ್ಲಿ ಅಚ್ಯುತನಲ್ಲಿ ಮನಸ್ಸಿಟ್ಟಿರಲು, ಹಾಲಿನ ಬಟ್ಟಲನ್ನು ತೆಗೆದುಕೊಂಡು ತಾಯಿಯು ಕರೆಯಲು, ಈತನು ಹರಿಯನ್ನು ಬಿಟ್ಟು (ತಾಯಿಯ) ಬಳಿಗೆ ಹೋಗಲಾರನು.

೨೨. ನೃಪಾಲನೇ! ಐದು ವರ್ಷಗಳಿಂದಾರಂಭಿಸಿ, (ಇಲ್ಲಿಯವರೆಗೆ) ಹರಿಯ ಪಾದತಲದಲ್ಲಿಯೇ ವಯೋವೃದ್ಧನಾದನು. ದೃಢಚಿತ್ತನಾಗಿ (ಆತನು) ಪೂರ್ಣ ಸುಖಾಂಬುಧಿಯಾದನು.

೨೩. ಆತನ ಪಾದ ಸರೋಜ ಸುಖಾಂಬುಧಿಯಲ್ಲಿ ಧೀರನಾದ ಉದ್ಧವನು ಮುಳುಗಿದನು. ಅಂತ್ಯವನ್ನು ಈಕ್ಷಿಸುತ್ತ ಆತ್ಮ ತಲದಲ್ಲಿ ಎರಡು ಗಳಿಗೆ ಪ್ರೇರಣೆಗೊಳಗಾಗಿ ಆ ಧೀರನು ಚಿಂತಿಸಿ ಬಾಹ್ಯಮತವನ್ನು ತಿಳಿದನು.

೨೪. ತನ್ಮಯತ್ವವು ಜನಿಸಲು ಸುಖಾಶ್ರು ಜಲವನ್ನು ದೇಹಕ್ಕೆಲ್ಲ ಒಮ್ಮೆ ಅಭಿಷೇಕ ಮಾಡಿಕೊಂಡನು. ಗಾಢವಾದ ವಿವೇಕದಲ್ಲಿ ಬ್ರಹ್ಮನಲ್ಲಿ ಲೀನನಾಗಿ ನಿರ್ಮೂಲನವಾದ ತನುವಿನ ಪುಳಕಕ್ಕೊಳಗಾದನು.

೨೫. ಎರಡು ಗಳಿಗೆ ಆತ್ಮತಲದಲ್ಲಿ ಚಿಂತಿಸಿ, ಅಂತರಾತ್ಮಕ ಭಕ್ತಿ ಸುಖದಲ್ಲಿ ಮುಳುಗಿದನು. (ಆಮೇಲೆ) ಮೆಲ್ಲನೆ ಬುದ್ಧಿ ಗೋಚರವಾಗಲು, ತನ್ನ ಎದುರಿರುವ ಭಕ್ತನನ್ನು ದರ್ಶಿಸಿದನು.

೨೬. ಹರಿಮಂದಿರದಲ್ಲಿದ್ದು, ಭೂಮಿಗೆ ಅವತರಿಸಿದ ಹರಿಭಕ್ತಿಯುಳ್ಳ ಭಕ್ತರಿಗೆ ಸದೃಶನಾಗಿ, ಅರಳುತ್ತ, ದೃಶ್ಯಗಳ ಮೈಯರಿತು (ಆ) ಪರಿಪೂರ್ಣನು ಮೇಲಣ ಕಥೆಯನ್ನು ಹೇಳಿದನು.

೨೭. ತದೇಕಚಿತ್ತದಿಂದ ಕೇಳಿರಿ! ಕೃಷ್ಣನ ಉಗುರಿನ ಅನುದಿವವಾದ ಭಾನುಮಂಡಲವು ಅಸ್ತಮಿಸಿ ಹೋಯಿತು. (ಆಗ) ಲೋಕವು ತಮಾಂಧತೆಯಿಂದ ಹಾನಿಯಾಗಿ ಹೋಯಿತು. ವೇದ ಪುರಾಣಿಕರೆಲ್ಲರೂ ಮೌನಿಗಳಾದರು.

೨೮. ಮಧುವಿನಲ್ಲಿ ಜನಿಸಿದ ನೊಣಗಳು ಮಧುರತೆವೆಂದು ನಿತ್ಯವೂ ಮಧುವನ್ನು ಹೀರುತ್ತಿರುತ್ತವೆ. ಅದು ಆರಿಹೋಗುತ್ತಲೇ ನಾಶವಾಗುವ ಹಾಗೆ - ವಿದುರನೇ! ಪರಾಭವವನ್ನು ಏನೆಂದು ವಿವರಿಸಲಿ?

೨೯. ಈ ಲೋಕದ ಜನಗಳು ತಮ್ಮನ್ನು ಸೃಷ್ಟಿಸಿದ ಇಂದಿರಾಪತಿಯ ಲೀಲಾ ವಿನೋದವನ್ನು ಅರಿತರೇ? (ಇಲ್ಲ ಎನ್ನುವ ಭಾವ) (ಯಾದವರು) ಜತೆಯಾಗಿಯೇ ಇದ್ದರೂ (ತಮ್ಮ) ಬಂಧುವೆಂದೆಣಿಸಿಯೇ ಅಂತ್ಯವನ್ನು ಹೊಂದಿದರು.

೩೦. ಮಹಾಪುರುಷನ ಇಂಗಿತವನ್ನರಿತ ಪಾಂಡವರು ಬೆರತು ಅವನಲ್ಲಿ ರಮಿಸಿದರೂ ರಜ ತುಂಬಿ ಬುದ್ಧಿ ಭ್ರಮೆಯಿಂದ ಪ್ರಾಣವಾಯು ತುಂಬಿದ ಆಕೃತಿಯ ಹಾಗೆ - ಮರುಳಾಗಿ ಹೋದರು.

೩೧. ಎಳ್ಳಷ್ಟೂ ಪುಣ್ಯವಿಲ್ಲದ ಸಮಸ್ತರ ಅನೇಕಾನೇಕ ವಿಲಾಸಗಳನ್ನು ಕಣ್ಣಾರೆ ನೋಡಿ, ಅವರ ಐಶ್ವರ್ಯವನ್ನೂ ಆರಿಸಿದರು. ಇದನ್ನು ಎಣಿಸಿದರೆ, ಅತಿ ಕೌತುಕವಾದ ಮಾಯೆಯಲ್ಲವೇ?

೩೨. ಹಿಂದೆ ನೋಡದ, ಕೇಳದ - ನಂಬುವುದಕ್ಕೆ ಸಾಧ್ಯವೇ ಇಲ್ಲವೆಂಬ - ಅನೇಕ ಆಡಂಬರಗಳನ್ನು ವಿರಾಜಿಸಿ ಶ್ರೀಹರಿಯು ಗಮಿನಿಸಿದನು. ಈಗ ಜಗತ್ತು ಹಂಬಲಿಸಿದರೆ ಏನು ಪ್ರಯೋಜನ?

೩೩. ಮಹಾಮಾಯೆಯ ಶಕ್ತಿಯನ್ನು ಏನೆಂದು ಹೇಳೋಣ?ಮಹಾಲೋಕವು ಅತ್ಯಧಿಕವಾಗಿ ಮೋಹಿಸುವುದು. ಇಂತಹ ಮಹಿಮೆಗಳನ್ನು ಮನಸ್ಸಿನಲ್ಲಿಯೇ ಎಣಿಸಿ, ಮಹಿಮಾರ್ಣವನಾದ ಶ್ರೀ ಹರಿಯು ಚೋದ್ಯಬಟ್ಟನು.

೩೪. ಹಗಲು -ಕತ್ತಲೆಯಾಗುವ ರೀತಿಯಲ್ಲಿ, ನಿಬಿಡವಾಗಿ ಮೋಹಿಸುವ ಮಾಯಾ ಪ್ರಪಂಚವನ್ನು ಮತ್ತೆ ಸಂಗ್ರಹಿಸೋಣವೆಂದು ಜಗತೀ ವಲ್ಲಭನು ಚೋದ್ಯವನ್ನು ಪ್ರವೇಶಿಸಿದನು.

೩೫. ಯಾವ ಮಾನವರು ಆತನನ್ನು ನೋಡಿಲ್ಲ? ಆತನ ಶ್ರುತಿಯನ್ನು ಯಾರು ಕೇಳಿಲ್ಲ? ಧರ್ಮಜನ ಮಹಾಯಾಗ ಸಭಾಸ್ಥಲ ಯಾರು ಕೂಡಿಲ್ಲ? (ಅಲ್ಲಿ ಆತನ ವಿಶ್ವರೂಪವನ್ನು ಯಾರು ನೋಡಿಲ್ಲ ಎಂಬ ಭಾವ)

೩೬. ಸೂರೆಹೋದ ನಿಧಿಯ ರೀತಿಯಲ್ಲಿ ಉತ್ತಮ ಅಧಮ, ಮಧ್ಯಮರೆಂಬವರು - ಆತನ ದಿವ್ಯ ವಿಲಾಸ ಅಮೃತವನ್ನು ಕುಡಿದು ದಣಿಯಲಾರರು. ಗೋಪಿಕಾ ಸ್ತ್ರೀಯರು ಎಷ್ಟೊಂದು ಸಂತೃಪ್ತರಾದರೋ?

೩೭. ಆತನ ವಿಲಾಸ, ವಿಭ್ರಮವನ್ನು ಭಾವಿಸಿ ನಿತ್ಯವೂ ನೋಡಬೇಕೆಂಬ ಅಪೇಕ್ಷೆಯಿಂದ ಗೋವಳರ ಹೆಣ್ಣುಗಳೆಲ್ಲರೂ ಗೃಹವನ್ನು ಬಿಟ್ಟು ಗರ್ವದಿಂದ ರಾತ್ರಿಯೆಲ್ಲ ಸೇವಿಸುತ್ತಾರೆ.

೩೮. ಭೂಮಿಯು ಭಾರವನ್ನು ತಾಳಲಾರದೆ ಬ್ರಹ್ಮನಲ್ಲಿ ಮೊರೆಯಿಟ್ಟಳು. ಆತನು ಕ್ಷೀರಸಾಗರದ ಶ್ರೀಹರಿಯನ್ನು ಸ್ತುತಿಸಲು ಆತನು ಗೋಕುಲದಲ್ಲಿ ಜನಿಸಿದನು.

೩೯. ಜನ್ಮರಹಿತನಾಗಿರುವ ಮಹಾಪುರುಷೋತ್ತಮನೂ ಕುಜನ ಸಂತತಿಯಲ್ಲಿ ಜನಿಸಿದರು. ವಸುದೇವನಿಗೆ ಮಗನಾಗಿ (ಜನಿಸಿ) ಆತನ ನಿಜ ಗೃಹದಲ್ಲಿ ವಿರಾಜಿಸಿದರು. ಆಶ್ಚರ್ಯವಿದು!

೪೦. ಭವಭಯಗಳನ್ನು ಸಂಹರಿಸುವ ಮಹಾ ಭಯ ನಿವಾರಣನು ರಾತ್ರಿಯಲ್ಲಿ ಮೆಲ್ಲನೆದ್ದು, ಭಯಗೊಂಡ ಗೋಕುಲನನ್ನು ಸಮೀಪಿಸಿ, ಅಲ್ಲಿಯ ಸಮಸ್ತರ ಭಯಗಳನ್ನೂ ಪರಿಹರಿಸಿದನು.

೪೧. ಯಾದವನ ಮಗನಾದ ಕೃಷ್ಣನ ಕೌತುಕಗಳನ್ನು ಕೇಳು. ಪೂತನಿಯ ಮೊಲೆಯಲ್ಲಿ ತುಂಬಿದ್ದ ವಿಷವನ್ನು ತೊಡೆಯನ್ನೇರಿ ಉಂಡು, (ವಿಷದ ಆಕೆಯನ್ನು) ಘಾತಿಸಿ, ಮೋಕ್ಷವನ್ನು ಪ್ರಸಾದಿಸಿದನು.

೪೨. ಮಡಿಲಲ್ಲಿ ಇಟ್ಟುಕೊಂಡು ಆತನನ್ನು (ಶ್ರೀಹರಿಯನ್ನು) ಯಶೋಧೆಯು ವಾತ್ಸಲ್ಯದಿಂದ ಆದರಿಸುತ್ತಿರಲು, ಅವಳಿಗೆ ಆ ಕ್ಷಣವೇ ಹತ್ತಿರದಿಂದಲೇ (ತನ್ನ) ಬಾಯಿಯಲ್ಲಿಯೇ ಜಗತ್ತೆಲ್ಲವನ್ನೂ ತೋರಿಸಿದನು. ಸೃಷ್ಟಿನಾಥನ [ಈ] ವಿಲಾಸವು ಅದ್ಭುತವಾದುದು.

೪೩. ತೊಟ್ಟಿಲಲ್ಲಿರುವ ಬಾಲ ಮುಕುಂದನ ಪಾದಗಳ ಗಾಳಿಗೆ ವಿಹ್ವಲಗೊಂಡ ಶಕಟಾಸುರನು ಕೊಲ್ಲಲೆಂದು ಭೂಮಿಯ ಮೇಲೆ ಹತ್ತಿರವೇ ಬರುತ್ತಿರುವುದನ್ನು (ಶ್ರೀ ಹರಿಯು) ನೋಡಿದನು.

೪೪. ಮಾರುತಾಸುರನು ಬಾಲಕನನ್ನು ಮೆಲ್ಲನೆ, ಎಳೆದು ಅಂಬರದತ್ತ ಎಸೆಯಲಾಗಿ, ಭೂಮಿಗೆ ಬಂದು ಅವರೀರ್ವರನ್ನು ವಧಿಸಿದನು. ಅಂದು ನಂದಗೋಕುಲವಿಡೀ ಘೋರವಾಗಿತ್ತು.

೪೫. ಒಂದು ದಿನ, ಕರುಗಳನ್ನು ಮೇಯಿಸಿ ಶ್ರೀ ಹರಿಯು ಉದ್ಯಾನವನದಲ್ಲಿ ಮಲಗಿದ್ದನು. ಆಗ ಅಘಾಸುರನು ನುಂಗುತ್ತಿರಲು, ಆತನನ್ನು ಸಂಹರಿಸಿದನು. ಹೀಗೆ ಶ್ರೀಹರಿಯು ಜಗತ್ತನ್ನು ಉದ್ಧರಿಸಿದನು.

೪೬. ಬಾಲಕರೊಂದಿಗೆ ವಿನೋದಿಸುತ್ತ ಸಂತೋಷದಿಂದಿರುವಾಗ, ಬ್ರಹ್ಮನು (ಕೃಷ್ಣನ ಲೀಲೆಯನ್ನು ನೋಡಲೆಂದು) ಬಾಲಕರನ್ನು ಅಡಗಿಸಿದನು. ಆಗ ಅಷ್ಟು ಮಂದಿಯನ್ನು ತಾನು ಧರಿಸಿ, ಲೋಲ ಲೋಚನನಾದ ಶ್ರೀಹರಿಯು ಅವನನ್ನು ಮೋಹಿಸಿದನು.

೪೭. ಸತ್ಕ್ರಿಯೆಯಿಂದ ಕರ್ಮಗಳನ್ನು ನಿಗ್ರಹಿಸಿದಿರಿ; ಮುನಿಗಳು ನಿರ್ಮಲಾಂತಃಕರಣದಲ್ಲಿ ಈಕ್ಷಿಸಿದಿರಿ. ನನ್ನ ಪುತ್ರನಲ್ಲವೇ (ಎಂದು) ಸನ್ಮತಿಯಿಂದ ಆ ಜನನಿಯು ಬ್ರಹ್ಮಮೂರ್ತಿಯನ್ನು ಎತ್ತಿಕೊಳ್ಳುವಳು.

೪೮. ತಂಟೆಯನ್ನು ನಿಲ್ಲಿಸಲೆಂದು ಶ್ರೀಹರಿಯನ್ನು ಒಂದು ಕಡೆ ಹಗ್ಗದಿಂದ (ಮರಕ್ಕೆ) ಬಂಧಿಸಲಾಯಿತು. ಆಗ ಭೂಮಿಯಲ್ಲಿ ಬೆಳೆದು ನಿಂತಿದ್ದ ಮರವನ್ನು ಬೀಳಿಸಿ, ರೂಢಿವಲ್ಲಭನು ಮೋಕ್ಷವನ್ನು ಪ್ರಸಾದಿಸಿದನು.

೪೯. ಕೊಕ್ಕರೆಯಾಕೃತಿಯಾಗಿ ಒಬ್ಬ ದೈತ್ಯನು ತನ್ನನು ನುಂಗುತ್ತಿರಲು ಕೊಕ್ಕನ್ನು ಸೀಳಿದನು. ಗಂಗಾನದಿಯ ಆ ಕಡೆಗಿದ್ದ ದೈತ್ಯನನ್ನು ವಧಿಸಿದ ಶಾಂರ್ಗಿಲೀಲೆಗಳು ನೋಡಲು ಅದ್ಭುತವೇ ಸರಿ!

೫೦. ಕರುವಿನ ರೂಪವನ್ನು ಧರಿಸಿ, ಲತಾಕುಂಜದಲ್ಲಿ ಅತ್ತಿತ್ತ ಸಂಚರಿಸುತ್ತಿದ್ದ ದಾನವನನ್ನು, ಒಂದು ಕೈಯಿಂದಲೇ ಹಿಡಿದೆತ್ತಿ ತಿರುಗಿಸಿ, ಕಂಜನಾಭನಾದ ಶ್ರೀಹರಿಯು ಆತನನ್ನು ಆಶ್ಚರ್ಯಕರವಾಗಿ ವಧಿಸಿದನು.

೫೧. ಧೇನುಕನೆಂದೆನ್ನುವ ದಾನವನು ತಾಲವನದಲ್ಲಿ ಅಂದು ಕೊಬ್ಬಿ ನಿಂತಿರಲು ಕೃಪಾವನಧಿಯು ಆತನನ್ನು ಸಗೋತ್ರವಾಗಿ ಸಂಹರಿಸಿದನು. ನಾನು ಆತನ ಕಥೆಯನ್ನು ಏನು ತಾನೇ ರಚಿಸಲಿ!

೫೨. ನೆರೆದ ಗೋಪಾಲರೆಲ್ಲರನ್ನೂ ವೃಷಭಾಕಾರದಿಂದ (ಓರ್ವ ದಾನವನು) ಘರ್ಜಿಸಿ ಹೆದರಿಸುತ್ತಿರಲು ಆತನನ್ನು ಹಿಡಿದು ಭೂಮಿಗೆ ಬೀಳಿಸಿ, ಮೇಲುಲೋಕಕ್ಕೆ ಕಳುಹಿಸಿದನು.

೫೩. ಗೋಪ ಬಾಲಕರ ಹಾಗೆ, ಒಳ್ಳೆಯ ವೇಷವನ್ನು ತಾಳಿ (ದಾನವನು) ಒಬ್ಬನು ಭೂಮಿಯಲ್ಲಿ ಕಾಣಿಸಿಕೊಂಡನು. ಆತನನ್ನು ಪ್ರಲಂಬಾಸುರನೆಂದು ಗುರುತಿಸಿ, ಮುಕ್ತಿಯ ನಿಜಾಲಯವನ್ನು ಪ್ರಾಪ್ತಿಸಿದನು.

೫೪. ಭೂಮಿಯಲ್ಲಿ ಹಸುವಿನ ರೂಪದಲ್ಲಿ ಮೂದಲಿಸುತ್ತ (ಹೇಷಾಕಾರ ಮಾಡುತ್ತ) ಬರುವುದನ್ನು ನೋಡಿ, ವೇದ ಗೋಚರನಾದ ಶ್ರೀ ಹರಿಯು ಬಾಯಿಗೆ ಕೈಯನ್ನಿಟ್ಟು ಆತನ ಈ ಭೂಮಿಯು ಬಾಳ್ವೆಯನ್ನೇ ಕೊನೆಗಾಣಿಸಿದನು.

೫೫. ಕಾಳಿಂದಿಯ ವಿಷದ ಮಡುವಿನಲ್ಲಿಳಿದು, ಕಾಳಿಂಗವನ್ನು ಮರ್ಧಿಸಿ, ವಿಷವನ್ನೂ ಕಾರಿಸಿದನು. (ಆ ಬಳಿಕ) ಕಾಳಿಂದಿಯಲ್ಲಿ ಸತ್ತ ಕರುಗಳನ್ನು ಕಾಳಿಂಗ ಮರ್ಧನನು ಕರುಣೆಯಿಂದ ರಕ್ಷಿಸಿದನು.

೫೬. ತಿಂಗಳ ಬೆಳಕಿನಲ್ಲೊಂದು ದಿನ ವನದಲ್ಲಿ ಆತನು ಪೊಂಗೊಳಲನ್ನು ನುಡಿಸುತ್ತಿರಲು ಗೋಪಿಕಾ ಸ್ತ್ರೀಯರು ಚಿತ್ತದಲ್ಲಿ ಮೋಹಗೊಂಡರು. ಆಗ ಮಂಗಲಾತ್ಮಕನಾದ ಶ್ರೀಹರಿಯು, ತಂಡತಂಡೋಪವಾಗಿರುವ ಗೋಪಿಕೆಯರನ್ನು ಮೋಹಿಸಿದನು.

೫೭. ಬಾಲಕರು ವನವನ್ನು ಪ್ರವೇಶಿಸಿದಾಗ ಬೆಂಕಿಯು ಕಾಣಿಸಿಕೊಂಡಿತು. ಅದರಿಂದ ಗೊಂದಲಗೊಳ್ಳುತ್ತಿರಲು, ಅಗ್ನಿಯನ್ನು ಸೇವಿಸಿ, ಗೋಪಕುಲದಲ್ಲಿ ಹುಟ್ಟಿದ ಶ್ರೀಹರಿಯು ಸರ್ವರನ್ನೂ ಕಾದನು.

೫೮. ವರುಣಾನಾಲಯವಾದ ಸಮುದ್ರವನ್ನು ಹೊಕ್ಕ ಸಾಂದೀಪಿನಿಯ ಕುಮಾರನನ್ನು ಕೃಷ್ಣನು ಹೋಗಿ ಕರಕೊಂಡು ಬಂದನು. ಹಾವು ನುಂಗಿದ ಬಾಲಕನನ್ನು ಬಿಡಿಸಿ, ಮರಣ ಭಯವನ್ನು ಕಳೆದನು.

೫೯. ಅಂಗೀರಸನ ನಾರಿಯರ ಸ್ಥಿತಿಯನ್ನು ಮಂಗಳಾತ್ಮಕನು ತಿಳಿದು ಪರಿಹರಿಸಿದನು. ಗೋವರ್ಧನನನ್ನು ಪೂಜಿಸಿದ ಗೋಪಕುಮಾರಕರು ಗೋಪಿಕಾಂಗನೆಯರ ಕಾರ್ಯವನ್ನು ಸಾಧಿಸಿದನು.

೬೦. ಹೀಗೆ ಗೋಕುಲದಲ್ಲಿ ಏಕಾದಶ ಸಂವತ್ಸರದ ವರೆಗೆ ಮುರಾಂತಕನಿದ್ದನು. ಬಳಿಕ ಆ ಕೃಪಾಕರನು ಎಲ್ಲರನ್ನೂ ಸಂತೈಸಿ, ಹೋಗುವುದಕ್ಕೆ ಮನಸ್ಸಿನಲ್ಲಿಯೇ ನಿರ್ಧರಿಸಿದನು.

೬೧. ಭಕ್ತನಾದ ಅಕ್ರೂರನೊಂದಿಗೆ, ಮಧುರಾಪುರಿಗೆ ಬಂದು ಸುಖವಾಗಿದ್ದನು. ಧೂರ್ತತನವನ್ನು ತೋರಿಸಿದ ಮಹಾರಜಕನನ್ನು ಕೊಂದು ಎಲ್ಲರನ್ನೂ ಸಂದೇಹಕ್ಕೆ ಎದೆಗೊಡದಂತೆ ಸೇರಿಸಿಕೊಂಡನು.

೬೨. ಲೀಲೆಯಿಂದ ಅಲ್ಲಿಂದಲೂ ಮುಂದೆ ಹೋಗುತ್ತಿರಲು, ಮಾಲೆಕಾರನ ಶಿಲ್ಪಿಕೆಯನ್ನು (ಕುಬ್ಜೆ) ಆಧರಿಸಿದನು. ಮೇಲಾದ ವೃದ್ಧೆಯನ್ನು ಸುಂದರಿಯನ್ನಾಗಿಸಿ ಶ್ರೀಹರಿಯು ದೊಡ್ಡ ಧನುವನ್ನು ಆಶ್ಚರ್ಯಕರವಾಗಿ ಖಂಡಿಸಿದನು.

೬೩. ಮದ ತುಂಬಿದ ಆನೆಯನ್ನು ಮಲ್ಲರನ್ನು ಪ್ರಜ್ಞೆ ತಪ್ಪಿಸಿದನು. ಮಾವನನ್ನೂ ಸಂಹರಿಸಿದನು. ಸೆರೆಮನೆಯಲ್ಲಿರುವ ತಾಯಿ ತಂದೆಯ ಚರಣಗಳಿಗೆ ಭಕ್ತಿಯಿಂದ ಅರ್ಚಿಸಿ, ವಂದಿಸಿ, ಮನ್ನಿಸಿದನು.

೬೪. ವಂದಿಸಿದಾಗ ಅವರು ಎತ್ತಿ ತೊಡೆಯಲ್ಲಿಟ್ಟುಕೊಂಡು, ಇಂದಿರಾ ಪತಿಯ ನೆತ್ತಿಯನ್ನು ಆಘ್ರಾಣಿಸಿದರು. ಮಂದಹರ್ಷ ಜಲದಿಂದ (ಶ್ರೀಹರಿಯು ಅಭಿಷೇಕಿಸುತ್ತಿರಲು) ಸಂಭ್ರಮದಿಂದ ಮಂದಹಾಸವನ್ನು ತಳೆದರು.

೬೫. ಉಗ್ರಸೇನನನ್ನು ಆ ಯದುವಲ್ಲಭನು ಸಿಂಹಾಸನವನ್ನೇರುವಂತೆ ಮಾಡಿದನು. ಕಾಣಿಕೆಕೊಟ್ಟು, ಅಣ್ಣನೊಂದಿಗೆ ಆತನನ್ನು ಉಪಚರಿಸಿದನು. ಆಗ ಆ ಸಮಯದಲ್ಲಿ ಸರ್ವರಿಗೂ ವ್ಯಗ್ರ ಹೋಯಿತು.

೬೬. ಮಂಗಲಾತ್ಮಕನಾದ ಶ್ರೀಹರಿಯು ರಾಯನ ಮುಖದೆದುರು ತಲೆಬಾಗಿ, ಪೊಡಮಟ್ಟು, ಏನಪ್ಪಣೆ ಎಂದು ಅಂಗಾಭಿನಯದಿಂದಲೇ ವಿಚಾರಿಸುವನು. ನೃಪತುಂಗವನೇ! ಆ ವಿಭವಗಳನ್ನು ಏನೆಂದು ಹೇಳಲಿ?

೬೭. ಹೀಗೆ ನಿಲ್ಲುವಲ್ಲಿಗೆ ಇದು ಅಧ್ಯಾಯವಾಯಿತು. ಸಂಚಯವಾಗಿ ಹೇಳಿದ ಇದು ಎರಡನೆಯದು. ಚಂಚಲಿಸಿದೆ (ಇದನ್ನು) ಕೇಳಿ, ಧೃಢಚಿತ್ತರಾದ ಜನಗಳಿಗೆ ನಿಜವಾದ ಮುಕ್ತಿಯು ಲಭಿಸುವುದು. ಇದಕ್ಕೆ ಸಂಶಯವಿಲ್ಲ.

ಅಧ್ಯಾಯ ೩

೧. ಶೌನಕಾದಿ ಮುನೀಂದ್ರರು ಕೇಳಿದಿರೇ! ಶ್ರೀ ಶುಕನು ಪ್ರೀತಿಯಿಂದ ಆ ನರಾಧಿಪನಾದ ಪರೀಕ್ಷಿತರಾಯನೊಡನೆ ಶ್ರೀ ಭಗವತ್ಕಥೆಯನ್ನು ವಿಸ್ತರಿಸಿದನು. ಧ್ಯಾನ ತತ್ಪರನಾದ ಉದ್ಧವನು ಅಂದು ಅಚ್ಯುತಾತ್ಮ ವಿಯೋಗವನ್ನು ಹೇಳಿದ ಪ್ರಸಂಗವನ್ನು ಇನ್ನು ನಾನು ರಚಿಸುತ್ತೇನೆ. ಧೃಢಚಿತ್ತದಿಂದ ಕೇಳಿ.

೨. ಕುರುಕುಲಾಗ್ರಣಿಯೇ ಕೇಳು! ಅಚ್ಯುತನು ಕಾಶಿಯಲ್ಲಿ ಬ್ರಾಹ್ಮಣನೊಬ್ಬನ ಗುರುಕುಲದಲ್ಲಿ ವಿದ್ಯಾಭ್ಯಾಸವನ್ನು ಮಾಡಿದನು. ಗುರುಪತ್ನಿಯ ಅಪ್ಪಣೆಯ ಮೇರೆಗೆ ಮಡಿದ ಗುರುಸುತನನ್ನು ಕಾಣಿಕೆಯಾಗಿ ಒಪ್ಪಿಸಲು, ಸಾಂದಿತ ಗುರುವು ಬಹಳವಾಗಿ ಆದರಿಸಿದನು.

೩. ಮಾಗಧ - ಯವನ ಮೊದಲಾದ ಮಹಾಬಲಾಢ್ಯ ಸಮುದ್ರವನ್ನು ದಿವ್ಯ ಬಾಣಗಳನ್ನು ವೇಗವಾಗಿ ಪ್ರಯೋಗಿಸಿ, ಅಪೋಶನ ಮಾಡಿದನು. ಆಗಮಜ್ಞನದ ಶ್ರೀಹರಿಯು ಮುರಾಸುರ, ಪೌಂಡ್ರಕ, ಬ್ರಹ್ಮದತ್ತ, ಸಾಲ್ವನೇ ಮೊದಲಾದ ಅಸುರ ತಂಟೆಯನ್ನು ತಪ್ಪಿಸಿದನಲ್ಲದೆ, ಚೈದ್ಯ, ನರಕಾಸುರರನ್ನು ಹಿಂಸಿಸಿದನು.

೪. ಸಮರದಲ್ಲಿ ಅತಿ ಬಲಾಢ್ಯರಾದ ಹಂಸ ಡಿಬಿಕಾದ್ಯರನ್ನು ಶ್ರೀ ಹರಿಯು ವಧಿಸಿದನು. ಮಹಾಲೋಕಕ್ಕೆಲ್ಲ ತಿಳಿಯುವಂತೆ, ರುಕ್ಮಿಣಿಯನ್ನು ಮದುವೆಯಾದನು. ಅಮರಾಲಯಕ್ಕೆ ಹೋಗಿ ತಮ್ಮ ತಾಯಿಗೆ ಕುಂಡಲವನ್ನು ಒಪ್ಪಿಸಿ ನಮಿಸಿದನು. ಬಳಿಕ ತನ್ನ ವಲ್ಲಭೆಯೊಂದಿಗೆ ಅಲ್ಲಿಂದ ಹೊರಟು ಯಾತ್ರಿಸಿದನು.

೫. ಸುರಕಲ್ಪ ವೃಕ್ಷವನ್ನು ದೇವಲೋಕದಿಂದ ಕಿತ್ತು ಹೋಗುವಾಗ ಯುದ್ಧಕ್ಕೆಂದು ಸುರ ಸಮೂಹವು ಎದುರಾಗಿ ಬರುತ್ತಿರುವುದನ್ನು ಶ್ರೀಕೃಷ್ಣನು ನೋಡಿದನು. ಸಂಗ್ರಾಮದಲ್ಲಿ ಅವರನ್ನು ಜೈಸಿ ವೇಗವಾಗಿ ಬಂದು, ದ್ವಾರಕಾವತಿಯಲ್ಲಿ ಪರಿಣಾಮದಿಂದ ಸುರ-ದಾನವ ವಂದ್ಯನಿದ್ದನು.

೬. ನರಕಾಸುರನ ಮನೆಯಲ್ಲಿದ್ದ ಹದಿನಾರು ಸಹಸ್ರ ಕುಮಾರಿಯರನ್ನು, ಸುದತಿಯರನ್ನು ಒಂದೇ ಮುಹೂರ್ತದಲ್ಲಿ ವಿವಾಹವಾದನು. ಭಾರವಾದ ಗೃಹಸ್ಥ ಧರ್ಮವನ್ನು ಸುಸೂತ್ರವಾಗಿ ನಡೆಸಿಕೊಂಡು ಯದುವಲ್ಲಭನು ಶೋಭಿಸಿದನು. ವಿದುರನೇ! ಇದು ಧರಿತ್ರಿಯಲ್ಲಿಯೇ ಆಶ್ಚರ್ಯಕರವಾದುದು.

೭. ಒಬ್ಬೊಬ್ಬ ಸ್ತ್ರೀಯರಿಗೂ ಆತನಿಂದ ಬೇರೆ ಬೇರೆ ಮಕ್ಕಳು ಹುಟ್ಟಿದರು. ಶ್ರೀಕೃಷ್ಣನ ಪ್ರತ್ಯಕ್ಷ ಸ್ವರೂಪವನ್ನು, ಗುಣವೀರ್ಯ ಬಲಗಳನ್ನು ಪಡೆದು ವೃದ್ಧಿಸಿದ ಆ ಯದು ಸೈನ್ಯವೆಂಬ ಸಾಗರವನ್ನು ನಾವು ಏನೆಂದು ಹೇಳೋಣ? (ಯದು) ಸಮೂಹವು ಜಗಕ್ಕೇ ಆಶ್ಚರ್ಯವೆಂಬಂತೆ ಶ್ರೀಕೃಷ್ಣನು ಪ್ರಚುರಪಡಿಸಿದನು.

೮. ವಿದುರನೇ ಕೇಳು! ಶೋಭಾಯಮಾನವಾದ ಶ್ರೀಹರಿಯು ಸೀಮಂತ ಪಂಚಕವೆಂಬ ತೀರ್ಥಯಾತ್ರೆಯನ್ನು ಮಾಡಿದನು. ಬಾಧಕರಿಗೆ ಶತ್ರುವೆನಿಸಿದ ಶ್ರೀಕೃಷ್ಣನು ಅಲ್ಲಿ ಸಮಸ್ತ ಬಾಂಧವ - ಸಂಕುಲಗಳಿಗೂ ದರ್ಶನವನ್ನಿತ್ತನು. ಆಗ ಸರ್ವರೂ ತಮ್ಮ ಅಭಿಲಾಷೆಯನ್ನು ತೀರಿಸಿ, ಆತ್ಮತತ್ವವನ್ನು ತಿಳಿದುಕೊಂಡರು. (ಆ ಮೂಲಕ) ಅವರೆಲ್ಲರೂ ಈ ಭವಗಳನ್ನು ಖಂಡಿಸಿ, ಯೋಗ್ಯವಾದ ಸದ್ಗತಿಯನ್ನು ಸಾಧಿಸಿದರು.

೯. ಪುತ್ರನ ಬಯಕೆಯಲ್ಲಿರುವ ರುಕ್ಮಿಣಿಯ ಮನದ ಅಭಿಲಾಷೆಯನ್ನು ದಯಾನಿಧಿಯು ತಿಳಿದುಕೊಂಡನು. (ಅದನ್ನು ಪೂರೈಸಿದನು ಎಂಬ ಭಾವ) ಕೈಲಾಸ ಪರ್ವತಕ್ಕೆ ಪ್ರವೇಶಿಸಿ ಶಿವನ ಗುಣಗಳನ್ನು ಕೀರ್ತಿಸಿದನು. ಆತನ ಅನುಜ್ಞೆಯನ್ನು ಪಡೆದು ನೂತನತೆವೆತ್ತು ಬಂದಮೇಲೆ, ಷೋಡಶ ಸಹಸ್ರ ನಾರಿ ಸಮೂಹದೊಡನೆ ಶ್ರೀಹರಿಯು ಇದ್ದನು.

೧೦. ಬಾಣ! ಪೌಂಡ್ರಕ, ದಂತವೃಕ್ಷ! ವಿಘೂರಥ! ದ್ವಿವಿಧ ಮೊದಲಾದವರ ಬಲವನ್ನು ಕುಂದಿಸಿದನು. ಚೈದ್ಯ ವಲಲ ಮೊದಲಾದ ಅತೀ ವೀರ್ಯರಿಂದಾದ ಭೂಮಿ ಭಾರವನ್ನು ತಗ್ಗಿಸಿದನು. ಧರಣಿಯಲ್ಲಿದ್ದಾಗ ಪಾಂಡವರ ಪಕ್ಷವನ್ನು ಸೇರಿ ಮಹಾಭಾರತಕ್ಕನುವಾದನು.

೧೧. (ವಿದುರನೇ) ಮುಂದೆ ಕೇಳು! ಬಾಂಧವರನ್ನು ಎರಡು ಸಮೂಹವನ್ನಾಗಿ ಮಾಡಿ, ಕ್ಷತ್ರಿಯರನ್ನೆಲ್ಲ ಆ ಎರಡು ಪಕ್ಷಗಳಲ್ಲಿ ಕೂಡಿ ಹಾಕಿದನು. ಸಕಲ ಸೈನ್ಯ ಸಮೇತವಾಗಿ ಎರಡು ಭಾಗವಾಗಿ ಕುರುಕ್ಷೇತ್ರದಲ್ಲಿ ಬಂದು ನಿಂತ ಅವಸ್ಥೆಯನ್ನು ತಿಳಿದು ವಿವರಿಸಲು ಯಾರಿಂದ ತಾನೇ ಸಾಧ್ಯ?

೧೨. ದ್ರೋಣ -ಭೀಷ್ಮ, ಕರ್ಣ - ಶಲ್ಯ, ಕೃಪಾ -ಜಯದ್ರಥರೆಂಬ ರಾಜರು ಭೀಮ, ಧರ್ಮಜ, ಪಾರ್ಥ, ಮಾದ್ರಿ ಕುಮಾರರೊಂದಿಗೆ ಹಗೆ ಸಾಧಿಸಿದರು. ಹಲವು ಆ ರಾಯ ಮಂಡಲಿಗಳು ಸತ್ತು ಕೋಣವಾಹನನಾದ ಯಮುನ ಪಟ್ಟಣ ಸೇರಿದರು.

೧೩. ಹದಿನೆಂಟು ದಿನಗಳಲ್ಲಿ ಅವೆಲ್ಲವನ್ನೂ (ತಾನು) ಸರಿ ಮಾಡಿದ ಮುಕುಂದನು ಹಸ್ತಿನಾವತಿಯಲ್ಲಿ ಧರ್ಮಜನಿಗೆ ಪಟ್ಟಾಭಿಷೇಕವನ್ನು ಮಾಡಿದನು. ಅಲ್ಲಿಂದ ಬಂದು, ಆಮೇಲೆ ನನ್ನ ಬಾಲಕರು ಸರಿಯಾಗಿ ನಡೆಸುತ್ತಾರೆಯೇ ಎಂದು, ಆತನು ತನ್ನ ಮನಸ್ಸಿನಲ್ಲಿ ನಿರ್ಧರಿಸಿ, ದೃಢಗೊಳಿಸಿದನು.

೧೪. ನನ್ನ ಮಕ್ಕಳನ್ನು ಹರನಿಂದಲೂ, ಅಂತಕನಿಂದಲೂ ಗೆಲ್ಲಲು ಸಾಧ್ಯವಿಲ್ಲದಿರುವಾಗ, ಸಂಗ್ರಾಮ ಮುಖದಲ್ಲಿ ಅವರೊಂದಿಗೆ ಯಾರಿಗೆ ತಾನೇ ಗೆಲುವು ಸಾಧ್ಯ? (ಆದರೆ) ಬ್ರಾಹ್ಮಣ ಶಾಪ ಮುಖದಿಂದಷ್ಟೇ ಅವರನ್ನು ರಕ್ಷಿಸಬೇಕಾಗಿರುವುದು ಎಂದು ಶ್ರೀಹರಿಯು ಕುಲನಾಶನದ ಬುದ್ಧಿಯನ್ನು ನಿರ್ಧರಿಸಿ ಕುತೂಹಲಗೊಂಡನು.

೧೫. ಬಂದು, ಧರ್ಮಜನು ಹರಿಪುರದಲ್ಲಿ ಸಿಂಹಾಸನವನ್ನು ಏರುತ್ತಿರಲು, ಅಶ್ವತ್ಥಾಮನಿಂದ ಪ್ರಯೋಗಿಸಲ್ಪಟ್ಟ ಶಸ್ತ್ರವಹ್ನಿಯನ್ನು ಹಿಡಿದು ಸಂಹರಿಸಿದನು. ಉತ್ತರೆಯ ಜಠರದಲ್ಲಿರುವ ಬಾಲಕನ ಮೃತ್ಯುವನ್ನು ಪರಿಹರಿಸಿ, ಜಗಧೀಶ್ವರನಾದ ಶ್ರೀಹರಿಯು ಭಕ್ತರನ್ನು ಗೆಲ್ಲಿಸಿ ಈ ರೀತಿಯಾಗಿ ರಕ್ಷಿಸಿ, ಖ್ಯಾತಿವೆತ್ತನು.

೧೬. ಅಶ್ವಮೇಧನನ್ನು ಮೂರು ಸಲ ಧರ್ಮಜನು ನೆರವೇರಿಸುವಂತೆ ಮಾಡಿ, ಶರಣಜನರಾದ ಪಾಂಡವರನ್ನೂ ಪರಿಪಾಲಿಸಿದನು. ಅವರಿಗೆ ಶ್ರೇಯೋಭಿವೃದ್ಧಿಯನ್ನುಂಟು ಮಾಡಿದನು. ಪರಮಪುರುಷನು ಸಮಸ್ತರನ್ನೂ ಕ್ಷಣ ಮಾತ್ರದಲ್ಲಿ ಆದರಿಸಿದನು. ಸರ್ವರನ್ನು ಬಹಳವಾಗಿ ಸನ್ಮಾನಿಸಿ, ಅಮರ ಪ್ರಭುವಾದ ಶ್ರೀಹರಿಯು ಹಸ್ತಿನಾಪುರದಲ್ಲಿ ವಿರಾಜಮಾನನಾದನು.

೧೭. ಮೂರುಲೋಕದಲ್ಲೆಲ್ಲ (ಕೀರ್ತಿಯು ಬೆಳಗುವಂತೆ) ಧರ್ಮರಾಜನ ರಾಜ್ಯವನ್ನು ಶ್ರೀಹರಿಯು ರಕ್ಷಿಸಿದನು. (ಹೀಗೆ) ತೇಜಪೂರ್ಣವಾಗಿ ಸುಖದಿಂದ ದ್ವಾರಕಾಪುರ ಮಂದಿರದಲ್ಲಿ ನಿಂತನು. ಆ ಜಗತ್ಪತಿಯೂ, ಭಕ್ತ ವತ್ಸಲನೂ ಆದ ಶ್ರೀಹರಿಯು ಸರ್ವ ವೇದ-ಪುರಾಣ ಶಾಸ್ತ್ರಗಳನ್ನು ಓಜೆಯಿಂದ ನಡೆಸಿಕೊಂಡು ಅನೇಕ ದಿನಗಳ ವರೆಗೆ ಭೂಮಿಯಲ್ಲಿಯೇ ಇದ್ದನು.

೧೮. ಯಾವ ವಿಧದಿಂದ ಆಚರಿಸಿದ ಪುಣ್ಯ ಫಲವೋ ಇದು! ಆತನೊಂದಿಗೆ ನಿತ್ಯವೂ ಸೇವಿಸಿ, ನಲಿದು, ವಿನೋದಿಸಿ, ಹಾಡಿ, ಭಜಿಸುವ ಹಾವ-ಭಾವ, ವಿಲಾಸ - ವಿಭ್ರಮ ಕಾಯ ಸೌಖ್ಯಾಮೃತಗಳನ್ನು ನೋಡುನೋಡುತ್ತ ತೃಪ್ತಿ ಸಿಗದೆ ನರ್ತಿಸುವುದು ಕೌತುಕವೇ ಸರಿ.

೧೯. ಮಧುರಾಮೃತದಿಂದ ವಿರಾಜಿಸುತ್ತಿರುವ ಮಧುಸೂದನ ವಚನಾಮೃತವನ್ನು ಸೇವಿಸಿದ ಮಾನವ ದೃಷ್ಟಿಗಳು ಮರಳಲಾರವು. ಸ್ತ್ರೀಯರು ಒಮ್ಮೆಯಾದರೂ ತನ್ನ ಮುಖವನ್ನೋ, ಅಧರವನ್ನೋ ದೃಷ್ಟಿಸಿದರೆಂದರೆ, ಅಧಿಕವಾಗಿ ಮೋಹಿಸಿ ನಿತ್ಯವೂ ಮನದಲ್ಲಿ ತುಂಬಿಸಿಕೊಂಡು ನಿಲ್ಲುತ್ತಾರೆ.

೨೦. ಹೀಗೆ ರಮಿಸಿ, ಆತ್ಮಸುಖೇಶ್ವರನಲ್ಲಿ ಪರಿಣಮಿಸಿ ನಿಂತಿರಲು, ಬ್ರಹ್ಮನೇ ಮೊದಲಾದ ಸುರೌಘವು ಆತನನ್ನು ಪ್ರಿಯದಿಂದ ಅರ್ಚಿಸುತ್ತಿದ್ದರು. ಎಲ್ಲರನ್ನೂ ಆ ಸುಖದಿಂದ ಕ್ರಮ ತಪ್ಪಿಸಲೆಂದು, ಗಮನಕ್ಕನುವಾದನು. ಅದಕ್ಕಾಗಿ ತನ್ನೊಳಗೇ ಆ ಕಮಲಾಸನೆನಿಸಿದ ಬ್ರಹ್ಮನಿಂದ ಪಂಥ್ಯನು ದಾರಿಯನ್ನು ಅಣಿ ಮಾಡುತ್ತಿದ್ದನು.

೨೧. ಆ ವೇಳೆಯಲ್ಲಿ ಬ್ರಹ್ಮ ಮುನಿಗಳ ಶಾಪಾಗಮನ ಕಾರಣದಿಂದ ಶ್ರೀ ವಲ್ಲಭನು ಸರ್ವರನ್ನೂ ಸೇರಿಕೊಂಡು ತೀರ್ಥಾಟನೆಗೆ ಹೊರಟನು. ಆ ಸಂದರ್ಭದಲ್ಲಿ ಗೋವಸ್ತ್ರ, ಸುವರ್ಣ, ವರಾಭರಣ, ಕನ್ಯಾದಿ ದಾನವನ್ನಿತ್ತು ಸಮಸ್ತ ಭೂವಿಪ್ರರನ್ನು ಮನ್ನಿಸಿ, ಅರ್ಚಿಸಿದನು.

೨೨. ಅವರು ಪಾನಮದಾಂಧತೆಯಿಂದ ದುರ್ಭಾಷಣೆಗಳನ್ನು ಮಾಡುತ್ತಾ ಯುದ್ಧಾಸಕ್ತರಾಗಿ ತಳ್ಳಾಟ, ಗುದ್ದಾಟಗಳನ್ನು ಮಾಡುತ್ತ ಆನೆ-ಕುದುರೆಗಳನ್ನೇರಿ ಶಸ್ತ್ರಾಸ್ತ್ರಗಳನ್ನು ಹಿಡಿದು ಕಾದಾಡಿದರು. ಅವುಗಳೆಲ್ಲ ಮುಗಿಯಲು ಅಲ್ಲೇಯಿದ್ದ ಜೊಂಡುಹುಲ್ಲನ್ನು ಮುಷ್ಟಿಯಲ್ಲಿ ಹಿಡಿದು ಪರಸ್ಪರ ಕಾದಾಡುತ್ತ ಲಯವಾದರು.

೨೩. ನಡು ಬೇಸಿಗೆಯ ದಾವಕ್ಕೆ ಕಾನನದಲ್ಲಿ ವೃಕ್ಷಗಳ ಸಮೂಹವು ಘರ್ಷಿಸಿ, ಹೊಗೆಯಾಡಿ ಕಿಡಿಕಿಡಿಗೊಂಡು, ಜ್ವಾಲೆ ಹೊರಹೊಮ್ಮಿ ಉರಿಯಿಂದ ನಶಿಸಿ ಹೋಗುವ ಹಾಗೆ, ಯದು ಸಾಗರ ಸೈನ್ಯವು ಅರೆರಾಶಿಯಾಗುವ ಮೊದಲೇ ಆಶ್ಚರ್ಯಕರವಾಗಿ ಲಯವಾಯಿತು. ಆ ಘೋರತೆಯನ್ನು ಏನೆಂದು ಹೇಳಲಿ!

೨೪. ಬ್ರಹ್ಮಶಾಪ ಫಲದಿಂದ ಸರ್ವರೂ ಒಮ್ಮೆ ಯಾತ್ರಿಸುವುದನ್ನು ಈಕ್ಷಿಸಿ, ನಿರ್ಮಲಾತ್ಮಕವಾದ ಶ್ರೀಹರಿಯು ಮಾಯೆಯ ಗುಣವನ್ನು ಚಿಂತಿಸಿ ತುಂಬಾ ಆಶ್ಚರ್ಯಕರವಾಗಿದೆ ಎಂದುಕೊಂಡನು. ಬಳಿಕ ಒಂದು ಅಶ್ವತ್ಥ ವೃಕ್ಷದಡಿಯಲ್ಲಿ ಕರ್ಮಬಂಧನವನ್ನು ತೀರಿಸಲೆಂದು ಅಚ್ಯುತನು ಕಾಲುಗಳನ್ನು ಮುಂದಕ್ಕೆ ಮಾಡಿ ವಿಶ್ರಮಿಸಿದನು.

೨೫. 'ಮಗನೇ ಬದರಿಕಾ ವನಕ್ಕೆ ಹೋಗು' ಎಂದು ನನ್ನನ್ನು ಬೀಳ್ಕೊಟ್ಟ ಅವರನ್ನು ಬಿಟ್ಟು, ಬಂದು ಕಡು ವೇದನೆಗೊಂಡೆನು. ಜಡರ ಹಾಗೆ ಮೌನ ತುಂಬಿಕೊಂಡು ಅಲ್ಲಿಯೇ ವ್ಯಸನದಿಂದ ಆಗ ಆತನು ಇದ್ದನು. ಶೋಕ ಶಿಖಿಯು ಬಹಳವಾಗಿ ಸುಡುತ್ತಿರಲು ಮಗ್ಗುಲಾಗಿಯೇ ಇದ್ದು ಬಳಲುತ್ತಿದ್ದನು.

೨೬. ನನ್ನ ಭಾಗ್ಯವು ತಪ್ಪಿ ಹೋಯಿತಲ್ಲ ಎಂದು ಮನಸ್ಸಿನಲ್ಲಿ ಎಣಿಸಿಕೊಂಡು, (ಇನ್ನು) ಚಿಂತಿಸಿ ಫಲವೇನೆಂದು ಆ ಕ್ಷಣವೇ ನಾನು ಹಿಂದಿನಿಂದಲೇ ನಡೆದುಹೋದೆನು. ಆಗ ಸುಗಂಧ ಶರೀರನಾಗಿ ಮುಕುಂದನು - ಒಮ್ಮೆ ನೋಡುವ ಹಾಗೆ - ಮುಕುಂದ ಮೂರ್ತಿಯು ನಿಜ ದರ್ಶನವನ್ನು ಮಾಡುತ್ತ ಅಲ್ಲಿದ್ದನು. ಆ ಚೋದ್ಯವನ್ನು ಏನೆಂದು ಹೇಳಲಿ!

೨೭. ಬಂದು ಸರಸ್ವತೀ ಎಂಬ ನದೀ ತೀರದಲ್ಲಿಯ ಸಣ್ಣ ಅಶ್ವತ್ಥ ಮರದ ಬುಡದಲ್ಲಿ ಹರಿಯು ಒರಗಿದ್ದನು. ಅಲ್ಲಿ ಹದಿನಾಲ್ಕು ಲೋಕವನ್ನೂ ಬೆಳಗುವ ಸಹಸ್ರ ಸೂರ್ಯನ ತೇಜಸ್ಸನ್ನೂ ಧರಿಸಿ, ಪ್ರತ್ಯಕ್ಷದರ್ಶಿಗಳಿಗೆ ಶೋಭಿಸುವ ದಿವ್ಯ ಅವಯವ ಮೂರ್ತಿಯು ಕಾಣಿಸಿಕೊಂಡನು.

೨೮. ಜಲಯುಕ್ತವಾದ ಮೇಗ ಸಮೂಹಗಳನ್ನು ಮೀರಿಸುವ ಕಾಂತಿಯಿಂದ, ಚತುರ್ಭುಜಗಳು ವಿರಾಜಿಸುತ್ತಿರಲು, ಕಂಕಣ ಮುದ್ರೆಯು ಶೋಭಿಸುತ್ತಿರಲು ಸುಜನಾಗತ ಬಂಧುವೆನಿಸಿದ ಆ ಶ್ರೀ ಹರಿಯ ಕಂಬುಕಂಧರ, ವನಮಾಲೆ, ಶ್ರೀವತ್ಸ, ನಯನಗಳು ಕುರುಳೋಳಿಗಳು ನಿಜವೈಭವದಿಂದ ಚೆನ್ನಾಗಿ ಶೋಭಿಸುತ್ತಿದ್ದುವು.

೨೯. ಹರಿಯ ಸುಂದರವಾದ ಮುದ್ದು ಮುಖಾಂಬುರುಹವೂ, ಮಕುಟಗಳ ಕಾಂತಿಯೂ, ಅಂದವಾದ ಹಲ್ಲುಗಳು, ತುಟಿ, ಗಂಡಸ್ಥಲವೂ, ಶುಭ್ರವಾಗಿ ನೆರಿಗೆಯಾಗಿರುವ ಕೆಂಪು ಬಣ್ಣದ ಬಟ್ಟೆಯೂ ಜಘನ -ಜಾನುವೂ ಪಾದನಖಗಳೂ ನೋಡಲು ಅತ್ಯದ್ಭುತವೆನಿಸಿರುವವು.

೩೦. ಆ ಸಮಯದಲ್ಲಿ ಭಾಗವತಾಂಕನಾದ ಶ್ರೀ ಮೈತ್ರೇಯನು (ಅಲ್ಲಿಗೆ) ಬಂದನು. ಈ ಹಿಂದೆ ಎಷ್ಟು ಯುಗಗಳಲ್ಲಿ ನಿರಂತರವಾಗಿ ಆತನು ಪುಣ್ಯವನ್ನು ಮಾಡಿದ್ದನೋ? ಆತನ ಕೈಗಳನ್ನು ಮುಟ್ಟಿ ಚಿತ್ತವಲ್ಲಭನಾದ ಶ್ರೀ ಹರಿಯು ಚಿತ್ತದಲ್ಲಿರುವ (ಕಳಂಕವನ್ನೆಲ್ಲ) ಖಂಡಿಸುವ ಹಾಗೆ, ಆ ಸಮಯದಲ್ಲಿ ನಿಂತಿದ್ದನು.

೩೧. ಕಂದನೇ! ನಿನ್ನ ವರ್ತಮಾನವನ್ನು ನಿದ್ರೆಯಲ್ಲಿ ನಾನು ದರ್ಶಿಸಿ ತಿಳಿದೆನು. ಈ ಜಗತ್ತಿನ ಆತ್ಮ ಭಾವ ವಿಕಲ್ಪವು ಚೆಂದವಾಗಿರುವ ಮುತ್ತಿನ ಮಣಿಯಂತಿರುವುದು. ಬಂಧುವೇ ನಾನೀಗ ಮಂದ ಬುದ್ಧಿಗೆ ಆಶ್ರಯವಾಗಿರುವ ಬಂಧನಗಳನ್ನು ತೊಲಗಿಸಿ ಮುಕ್ತಿ ಮಾರ್ಗಗಳನ್ನು ಸಾಧಿಸಲು ನಿರ್ಣಯಿಸುತ್ತೇನೆ ಎಂದನು.

೩೨. ನೋಡುತ್ತ ಇದ್ದ ಹಾಗೆಯೇ ಜಗತ್ತೆಲ್ಲವೂ ಬಗೆ ಬಗೆಯ ಭೂಷಣವಾಗಿ ಶೋಭಿಸುವ ಹಗೆ – ಉದಿಸಿ, ಮಾಯಾವಾಗುತ್ತದೆ. ತ್ರಿಗುಣ ಭಾವ ಮತದಿಂದ, ಮಾಯಾ ವಿಕಲ್ಪ ಮೋಹನವಾಗಿ, ಮನಸ್ಸಿನಲ್ಲಿ ನಿಶ್ಚಯವಾಗುವವರೆಗೆ, ಸತ್ಯವೆಂದು ಪ್ರಮಾಣಿತವಾಗುತ್ತದೆ.

೩೩. ಪೂರ್ವ ಸೃಷ್ಟಿಯಲ್ಲಿ ವಸುಮತಿಯಲ್ಲಿ ನೀನೊಬ್ಬನು ಭಕ್ತಿಯಿಂದ ಅವನನ್ನು ಅರ್ಚಿಸಿ, ದಿವ್ಯ ಸತ್ರ ಸಭೆಯಲ್ಲಿ ವಿಷಯ ಬಂಧ ನಿವೃತ್ತಿಯನ್ನು ಹೊಂದಿದ್ದೀಯ. ಬ್ರಹ್ಮನಿಗೆ ಆದಿಯಲ್ಲಿ ನಾನು ಉಪದೇಶಿಸಿದ - ಯಾರಿಗೂ ತಿಳಿಯಲು ಅಸಾಧ್ಯವಾದ ಈ ಪರ ತತ್ತ್ವವನ್ನು ಲೋಪವಿಲ್ಲದಂತೆ ಹೇಳುತ್ತೇನೆ.

೩೪. ಪರಮಭಾಗ್ಯ ಶಿಖಾಮಣಿಯು ಪರಮ ದೇಹವನ್ನು ಧರಿಸಿ ನಿಂತನು. ಪರತರವಾದ ದಿವ್ಯ ಪದಗಳು ಯಾರಿಗೆ ತಾನೇ ಸಿದ್ಧಿಸೀತು? ಪರಮಭಕ್ತಿಯಿಂದ ನಿತ್ಯವೂ ತನ್ನನ್ನು ಸೇವಿಸುವವರಿಗೆ, ಆ ದಯಾನಿಧಿಯು ದಿವ್ಯ ದೃಷ್ಟಿಯಿಂದ ಈಕ್ಷಿಸಿ ಆ ಕ್ಷಣವೇ ನಿಜ ತತ್ಫಲವನ್ನು ಕರುಣಿಸಿ, ಅವರಿಗೊದಗುತ್ತಾನೆ.

೩೫. ನಾನು ಏನೆಂದು ಹೇಳಲಿ! ಆಗುವ ಭಾಗ್ಯವರ್ಧನವನ್ನು ನಿಶ್ಚೈಸಿ ಅಚ್ಯುತನು ಭಕ್ತಿಯ ಗೂಢವನ್ನು ಆಲೋಚಿಸಿ, ಜ್ಞಾನದಲ್ಲಿ ತಾನೇ ಯೋಚಿಸಿದನು. (ಆ ಬಳಿಕ) ಧ್ಯಾನಿಸುತ್ತಿರುವ ಮಿತ್ರರು ನಂದನರನ್ನು ಬಳಿಗೆ ಕರೆದು, "ನಾನು ಹೇಳಿದುದೆಂದು ಈ ಶ್ರೀ ಕಥೆಯನ್ನು ವಿದುರನಿಗೆ ಹೇಳಿ" ಎಂದನು.

೩೬. ಬಳಿಗೆ ಕರೆದು ಮಕುಟದಲ್ಲಿ ಶ್ರೀಕರ ಪಲ್ಲವನ್ನರಿಸಿ, ಮಂದಹಾಸವನ್ನು ತಳೆದು ಶ್ರೀಕೃಷ್ಣನು ಆಗಮ ರಹಸ್ಯವನ್ನು ನಮಗೆ ಉಪದೇಶಿಸಿದನು. ಈ ಆಗಮ ರಹಸ್ಯವನ್ನು ಮರೆಯದೆ ಭೂಮಿಯಲ್ಲಿ ಸದಾ ಒಂದಿಷ್ಟು ದುಃಖಿಸದೆ ಇರು ಎಂದು ಆತನು ನನ್ನನ್ನು ಬರಸೆಳೆದು ಈ ಶ್ರೀ ಪಾದುಕೆಯನ್ನು ನನಗೆ ಪ್ರಸಾದಿಸಿದನು.

೩೭. ಬಲವಂದು, ಅಭಿವಂದಿಸಿ, ಪಾದರಜದಲ್ಲಿ ಅಭಿಷೇಚನಗೊಂಡೆನು. ಜಲಜಾಕ್ಷನನ್ನು ಧ್ಯಾನಿಸಿ, ವಿಹ್ವಲಿಸಿ, ವಿರಹಾನಲನಾಗಿ ಮನಸ್ಸಿನಲ್ಲಿಯೇ ಗಟ್ಟಿಯಾಗಿ ನಿರ್ಧಾರಕ್ಕೆ ಬಂದೆನು. (ಬಳಿಕ ಅಲ್ಲಿಂದ) ಬೀಳ್ಕೊಂಡು (ಈ ಕಡೆಗೆ) ಬಂದೆನು. ಎಲೆ ಬಂಧುವೇ, ಕಳೆದ ಕಥೆಯನ್ನೆಲ್ಲ ಏನೆಂದು ವಿವರಿಸಲಿ!

೩೮. ಆತನಲ್ಲಿ ದೃಢಗೊಳಿಸಿದ ಆತ್ಮ ದುಃಖವನ್ನು ಯಾರು ತಾನೇ ಸೈರಿಸಿಯಾರು? ಈ ಧರಿತ್ರಿಯಲ್ಲಿರುವ ಸಾವಿರಾರು ಬುದ್ಧಿಗಳೆಲ್ಲವನ್ನು (ಅದು) ಖಂಡಿಸಬಲ್ಲುದು. ಇದು ಸತ್ಯವೇ ಸರಿ. ಮೀರಿದ ವಿರಹದಿಂದ ಆತನು ಉಪದೇಶಿಸಿದ ಈ ವಚನಗಳಿಂದ, ಆತನ ದಿವ್ಯ ಮತದಿಂದ (ಉಂಟಾದ) ಭಕ್ತಿಯಿಂದ ಪ್ರಾಣವೇ ಹಾರಿ ಹೋಗುತ್ತಿದೆ.

೩೯. ಇದನ್ನು ವಿಸ್ತರಿಸಿ ಫಲವೇನು! ನಾರಾಯಣಾಶ್ರಮದಲ್ಲಿ ಆ ಮುನಿಯು ಮೈತ್ರೇಯ ಇರುವಾಗ ಅಲ್ಲಿಗೆ ಹೋಗಿ ಎಲ್ಲವನ್ನೂ (ಉದ್ಧವನು) ಕೇಳಿದನು. ಆ ವೇಳೆಗೆ ಅಸ್ತಮಿಸಿದ ಮುಹೂರ್ತ ಕಾಲವು ಕಳೆಯಿತಷ್ಟೇ ಎಂದು (ಆಗ) ಅವನು ಚಿಂತಿಸಿದನು.

೪೦. ಇಷ್ಟು ಹೇಳಿ ಬದರೀ ನಿವಾಸದಿಂದ ಉದ್ಧವನು ಹೊರವಂಟನು. ಆತನು ಅಷ್ಟಾದರೂ ತನ್ನನ್ನು ಅಚ್ಯುತನು ನೆನೆಸಿದ ವಿಸ್ಮಯವನ್ನು ನೆನೆಸುತ್ತ ಹೋದನು. ಮನಸ್ಸಿನಲ್ಲಿ ಕಾತರಿಸಿ, ವಿರಹಾತುರದಲ್ಲಿ ದುಃಖಿಸಿ, ಚೇತನಾತ್ಮಕನನ್ನು ಧ್ಯಾನಿಸಿ, ವಿದುರನು ಮೆಲ್ಲನೇ ಹೊರಟು ಹೋದನು.

೪೧. ಧಾರಣೀಪತಿಯೇ ಕೇಳು! ಮೈತ್ರೇಯನ ಚರಣಗಳನ್ನು ಆತನು (ಉದ್ಧವನು) ಹೋಗಿ ನಿರೀಕ್ಷಿಸಿ ಕರುಣೆಯಿಂದ ವಂದಿಸಿ, ನಿಂದು ಅಪಾರವಾಗಿ ಸ್ತುತಿಸಿದನೆಂಬ ಸಂಧಿಗೆ ಅಧ್ಯಾಯವು ಮೂರು ಆಯಿತು. ಶ್ರೀ ಭಗವತ್ಕಥೆಯ ಸ್ಕಂಧವೂ ಮೂರಾಯಿತು.

ಅಧ್ಯಾಯ ೪

೧. ಜನಮೇಜಯನ ತಂದೆಯಾದ ಪರೀಕ್ಷಿತನೇ ನಿಧಾನಿಸುವನಾಗು. ನಿನ್ನ ಪೂರ್ವಜನು ವನಮಾಲಿಯ ಮಹಾಭಕ್ತನೂ ಆದ ವಿದುರನು ಮೈತ್ರೇಯನನ್ನು ಕಂಡು ವಿನಯದಿಂದ ನಮಿಸಿದನು. ಪಾದಗಳ ಧೂಳನ್ನು ಧರಿಸಿ ಕೈಯನ್ನು ತಲೆಯಲ್ಲಿರಿಸಿದನು. (ಆಮೇಲೆ) ಆನಂದರಸದಲ್ಲಿ ಮುಳುಗಿ ಆತನು ಹೀಗೆಂದು ವಿಚಾರಿಸಿದನು.

೨. (ಮುನಿವರನೇ) ಕರುಣೆಯಿಂದ ಪ್ರಸಾದಿಸು! ಈ ನರಲೋಕವು ಅದ್ಭುತವಾದುದು ಪರಿಣಾಮವಾಗಲೆಂದು ಬಯಸಿ ಈ ಇಹಲೋಕವನ್ನು ಬಯಸುವವರು ಪರಿತೋಷವಿಲ್ಲದೆಯೇ ವ್ಯಥಿಸುತ್ತಾರೆ. ಸುಖವನ್ನು ಇಚ್ಛಿಸಿ ದುಃಖವನ್ನು ಹೊಂದುತ್ತಾರೆ. ಇದನ್ನು ಖಂಡಿಸುವ ಕೌಶಲ್ಯವನ್ನು ನೀನೇ ಹೇಳಬೇಕು.

೩. ಸುಮತಿಯನ್ನು ನೀನೇ ಪ್ರಸಾದಿಸಬೇಕು! ನೀನು ಭಕ್ತರ ಮೇಲೆ ಮಮಕಾರವನ್ನುಳ್ಳ ಮಹಾತ್ಮನಲ್ಲವೇ? ಮುಕುಂದನ ಆನಂದಕ್ಕೆ ವಿಮುಖರಾದ ಮೂಢಮನುಷ್ಯರಿಗೆ ನೀನು ಆಶ್ರಯಿಯಲ್ಲವೇ? ನನ್ನನ್ನು ಕ್ಷಮಿಸಿ ನೀನು ತತ್ವಾರ್ಥ ಮುಂತಾದ ಬುದ್ಧಿಯನ್ನು ಕಂಡರಿಸುವಂತೆ ಮಾಡು ಎಂದನು.

೪. ಈ ಭೂಮಿಯು ಯಾರಿಂದ ಜನಿಸಿತು? ಇದಕ್ಕೆ ಧಾತೃವು ಯಾರು? ಯಾರ ಇಚ್ಛೆಯಿಂದಾಗಿ ಸರ್ವ ಗ್ರಹಾದಿಗಳು ನಿತ್ಯವೂ ಸುತ್ತು ಬರುತ್ತಿರುವುದು? ಅಂತ್ಯದಲ್ಲಿ ಇದು ಯಾರಲ್ಲಿ ಕೂಡುವುದು (ಮತ್ತು ಇದರ) ಸಂಹಾರಕರು ಯಾರು? ಇದು ಪ್ರೇರೇಪಿಸುತ್ತಿರುವುದು ಹೇಗೆ? ಇದನ್ನು ದೃಢವಾಗುವಂತೆ ನನಗೆ ಕರುಣಿಸು. ನಿನಗೆ ಜಯವಾಗಲಿ ಎಂದನು.

೫. ಹೇ ಮುನಿನಾಥ! ನನಗೆ ಮಹಾವಿಶ್ವಂಭರಲೀಲೆ ಎಂಬ ಸಮುದ್ರದ ವಿಚಿತ್ರವಾದ ಅವತಾರ ಕಥೆಯನ್ನು ಹೇಳಬೇಕು. (ಹಾಗೆಯೇ) ವೇದಾಂತರ ರಹಸ್ಯವನ್ನು ಹೇಳಬೇಕು. (ಅದರೊಂದಿಗೆ) ನಿನ್ನಾಜ್ಞೆಯಿಂದ ನಿತ್ಯವೂ ಬಿಡದೆ, ಮನಸ್ಸಿಟ್ಟು ನನ್ನಲ್ಲಿ ಆತ್ಮ ಪ್ರಕಾಶವನ್ನುಂಟು ಮಾಡುವ ಮಹಾಭಗವತ್ಕಥಾ ಸಾರವನ್ನೂ ಹೇಳಬೇಕು.

೬. ವ್ಯಾಸನು ಹಿಂದೆಯೇ ಧರೆಗೆಲ್ಲ ಹಿತಾರ್ಥ ಮತದಿಂದ ಸನ್ಮಾರ್ಗವಾದ ಭಾರತ ಪೌರಾಣ ರಹಸ್ಯವನ್ನೆಲ್ಲ ವಿರಚಿಸಿದನು. ಹಾಗಾದರೂ ಅಂತಃಕರಣದಲ್ಲಿ ಆತನಿಗೆ ಪರಿಪಾಕವೆಂಬುದುಂಟಾಗಲಿಲ್ಲ. ಆಗ ಹರಿಯ ಶ್ರೀ ಕಥೆಯನ್ನು ಮತ್ತೆ ನಿರ್ಮಿಸಿದನು. ಅದು ಆತನಿಗೆ ಶುದ್ಧಿಯನ್ನು ತಂದಿತು.

೭. ಮನುಜಾದಿಗಳೆಲ್ಲರೂ ಸಾರವಾದ ಅಮೃತಾಂಬುಧಿಯನ್ನು ಬಿಟ್ಟು, ಸೂರ್ಯಪ್ರಭೆಯ ಬಳಿಯಲ್ಲಿ ವಿರಾಜಿಸುವ ನದಿಯನ್ನು ಈಜುವಂತೆ, ಧೀರರಾದವರು ಅಂತ್ಯವೇ ಇಲ್ಲದ ಸಂಸಾರ ಸಮುದ್ರವನ್ನು ಈಜುತ್ತಾರೆ. ಅಂತಹ ಶ್ರೀರಾಮ ಚರಿತ್ರವನ್ನು ಏನೆಂದು ಹೇಳಲಿ! ಅತ್ಯದ್ಭುತವೆಂದನು.

೮. ಎಷ್ಟೆಷ್ಟೋ ಪಠಿಸಿದ ಮೇಲೆಯೂ ಮಹಾತ್ಮರು ಆತನನ್ನು ಮರೆಯಲಾರರು. ಚರಗಳನ್ನು ಎಷ್ಟೊಂದು ಭಜಿಸಿದರೂ ಸೇವೆ ಸಾಕೆನಿಸದು. ಎಷ್ಟೊಂದು ಇತಿಹಾಸವನ್ನು ಕೇಳಿದರೂ ತೃಪ್ತಿ ಬರಲಾರದು. ಆತನ ನಾಮ ಸುಚರಿತ್ರವು ಯಮನ ಭಯವನ್ನು ಹೋಗಲಾಡಿಸುವುದು.

೯. ವ್ಯಾಸಾನುಮತವಾದ ಅನೇಕ ಕಥೆಯನ್ನು ಈ ಹಿಂದೆ ನಾನು ಕೇಳಿದ್ದೆನು. ಆಮೂಲಾಗ್ರವಾಗಿ ಚರ್ಚಿಸಿಯೂ ಶ್ರೀಕೃಷ್ಣಾ ಕಥಾಬ್ಧದ ಸೇವೆಯೂ ಅಸಾಧ್ಯವಾಗಿರುತ್ತ, ನಿಮ್ಮನ್ನು ಬೇಡಿಕೊಳ್ಳುತ್ತಿದ್ದೇನೆಂದು (ತಿಳಿದು) ನನಗೆ ಲೇಸನ್ನು ಅನುಗ್ರಹಿಸಬೇಕಯ್ಯ ವಿಭೋ ಎಂದು ಅಭಿನಂದಿಸಿದನು.

೧೦. ಇಷ್ಟನ್ನು (ಆತನು ಹೇಳಿ) ಅಭಿನಂದಿಸುತ್ತಿರಲು, ಸಂತೋಷಗೊಂಡು, ಕೃಷ್ಣನ ಪ್ರೀತಿಯು ಮೇರೆವರಿಯುತ್ತಿರಲು, ಸಂತೋಷ ಮದದಿಂದ ಆತನು ಉಬ್ಬಿಹೋದನು. ಕುತೂಹಲದಿಂದ ಈತನನ್ನು ಸತ್ಕರಿಸಿ ಹರಿಯು ತನ್ನಲ್ಲಿ ಹೇಳಿದ ವಾರ್ತೆಗಳನ್ನು ಹೃತ್ಕಮಲದಲ್ಲಿ ಚಿಂತಿಸಿ ಆನಂದಿಸಿದನು.

೧೧. ಅಯ್ಯಾ! ನೀನು ಹೇಳಿದುದು ಸರ್ವರಿಗೂ ಹಿತವಾದುದೇ. ಪುಣ್ಯಾತ್ಮನಾದ ವ್ಯಾಸನ ಮಗನೆಂದು ಹೇಳುವ ಫಲವು ಮಾಂಡವ್ಯ ಋಷಿಯ ಶಾಪ ನಿಮಿತ್ತವಾಗಿ ಕಾಣಿಸಿಕೊಂಡಿತು. ಹಿಂದೆ ಆತನು ಭೂಮಿಯಲ್ಲಿ ಜನಿಸುವುದಕ್ಕೆ ಯೋಗಫಲವಾದವನೇ ಯಮರಾಯನು. ಹೀಗೆಂದು ಮೈತ್ರೇಯನು ಆತನನ್ನು ಸತ್ಕರಿಸಿ ಮನ್ನಿಸಿದನು.

೧೨. ಹಾಗಿರುವಾಗ ಯೋಗಸಿಧಿಯಾದ ಪುರುಷೋತ್ತಮನು ದೇಹವನ್ನು ತ್ಯಾಗ ಮಾಡುವ ಸಮಯದಲ್ಲಿ ನಿನ್ನನ್ನು ನೆನೆದುದಲ್ಲವೇ? ನಿನ್ನನ್ನು ಹೊರತಾಗಿ ಈ ಭೂಮಿಯಲ್ಲಿ ಬೇರೆ ಯಾರನ್ನು ಆತನು ನೆನೆಸಿದನು ಎಂದು ಆತನನ್ನು ವಿದುರ ಮನ್ನಿಸಿಕೊಂಡು ಆಶ್ಚರ್ಯದಿಂದ ಗಾಢವಾಗಿ ಆಲಿಂಗಿಸಿದನು.

೧೩. ಈ ವಿಶಾಲ ಜಗತ್ತಿನಲ್ಲಿ ಉದ್ಭವಿಸಿರುವ ಸೂರ್ಯ ಚಂದ್ರಮರಾದಿಯಾಗಿ ಸರ್ವಸುರಾಸುರರಲ್ಲಿ, ಶ್ರೀ ಹರಿಯು ಯಾರನ್ನು ಇಷ್ಟಪಟ್ಟನು? (ನಿನ್ನನ್ನು ಮಾತ್ರವಲ್ಲವೇ?) ಹಾಗಿರುವಾಗ ಭೂಮಿಯೊಳಗೆ ನಿನ್ನ ಭಾಗ್ಯಕ್ಕೆ ಹೋಲಿಸುವುದಾದರೂ ಯಾರನ್ನು? ಶಂಕರಾದಿ ಸಮಸ್ತ ಶಕ್ತಿಯೂ ನಿನ್ನ ಭಾಗ್ಯವನ್ನು ತಿಳಿಯಲಾರದು.

೧೪. ಭಗತ್ಕಥೆಯನ್ನು ಸೇವಿಸುವ ಹರಿಭಕ್ತನಲ್ಲವೇ ನೀನು? ಜಗತ್ತಿನೆಲ್ಲ ಕಡೆ ಹುಡುಕಿದರೂ ನಿನ್ನನ್ನು ಹೋಲುವ ಜಂತುವೂ ಇರಲಾರದು. ಮಹಾತ್ಮರ ಬಗೆಯನ್ನು ಪೂರ್ಣವಾಗಿ ಯಾರು ತಾನೇ ಬಲ್ಲರೆಂದು ಮಗುಳೊಮ್ಮೆ ವಿದುರಾಂಕನನ್ನು ನೋಡಿ, ಆಶ್ಚರ್ಯದಿಂದ ಆತನು ಆಲಿಂಗಿಸಿಕೊಂಡನು.

೧೫. ಪರಿಪೂರ್ಣ ಗುಣಾಢ್ಯನು ತಾನು ಎನ್ನುವ ಅಹಂಕಾರಕ್ಕೊಳಗಾಗದೇ, ತನಗೆ ತಾನೇ ಆಶ್ರಯನಾಗಿ, ಆತ್ಮ ಸಗಾಢ ಪ್ರಸನ್ನ ನಿಧಿಯೂ ತಾನೇ ಆದನು. ತಾನೇ ತನ್ನ ಲೀಲೆಗಳನ್ನು ಎಣಿಸಿ, ತನ್ನ ಭಾವವಿಕಲ್ಪದ ಆನಂದ ವಿಭೂತಿಯಲ್ಲಿ ಮಹಮಾಯೆಯನ್ನು ಈ ಹಿಂದೆ ಉಂಟು ಮಾಡಿದನು.

೧೬. ಆ ಮಾಯೆಯ ಶಕ್ತಿ ಗುಣಗಳಲ್ಲಿದ್ದ ಮೂಲ ಮಹಾಪ್ರಕೃತೀ ತತ್ವಗಳನ್ನು ಲೋಕ ಸಮೇತವಾಗಿ ಉಂಟು ಮಾಡಿದನು. ಮುಂದೆ ಶಬ್ದದಿಂದಾಗಿ ಸಾಮಾನ್ಯವಾದ ಪಂಚಭೂತಗಳೂ, ಪಂಚೇಂದ್ರಿಯಗಳೂ ಜನಿಸಿದುವು. ಆದರೆ ಈ ಜನಮಂದಿಗೆ ಈ ವಿಷಯಗಳು ಆನಂದ ಸಮುದ್ರವಾಗಿ ತೋರಿದುವು.

೧೭. (ಬಳಿಕ) ಈಶ್ವರನಾಜ್ಞೆಯ ಶಕ್ತಿಯಿಂದ ತತ್ವಾದಿ ಸಮೂಹ ಜನಗಳೇ ಮೊದಲಾದ ಪ್ರಪಂಚವು - ಬ್ರಹ್ಮನಿಂದಾದಿಯಾಗಿ ಹುಲ್ಲಿನವರೆಗೆ - ಸೃಷ್ಟಿಯಾದುವು. ತಾವರೆಯ ಮೇಲೆ ಕುಳಿತ ಬ್ರಹ್ಮನು ಮನಸ್ಸಿನಲ್ಲಿಯೇ ಅಹಂಕರಿಸಿ ಸ್ಥಿತಿವರ್ತಕವಾದ ಲೋಕ ಪ್ರವೃತ್ತಿಯನ್ನು (ಸೃಷ್ಟಿ ಕಾರ್ಯವನ್ನು) ಕೈಗೊಂಡನು.

೧೮. ಸೃಷ್ಟಿ - ಸ್ಥಿತಿಗೆ ಬ್ರಹ್ಮನಾದರೆ ಲೋಕವನ್ನು ಪಾಲಿಸುವವನು ಶ್ರೀಹರಿಯಾಗಿದ್ದಾನೆ. ವಿಪರೀತವಾಗದಂತೆ ನಾಶಮಾಡುವುದಕ್ಕೆ ಈಶ್ವರನಿದ್ದಾನೆ. ಎಂಟು ದಿಕ್ಕಿನಲ್ಲಿದ್ದು ತುಷ್ಟಿಗೆ ಅನುಕೂಲವಾಗುವಂತೆ ಸುರಾಧಿಪರು (ಅಷ್ಟ ದಿಕ್ಪಾಲಕರು) ಇದ್ದಾರೆ. ಗೃಹ -ತಾರಾ ಸಂಘವು ಗಂಟು ಹರಿದು ಹೋಗದಂತೆ ಚಲಿಸುತ್ತಿರುತ್ತದೆ.

೧೯. ಉರಗಾದ್ಯರು, ಕಿನ್ನರ, ಗಂಧರ್ವ, ವಿದ್ಯಾಧರ ಪಕ್ಷ್ಯಾದಿ ಸಂಘ ಮರುದ್ಗಣ, ಖೇಚರ ಕಿಂಪುರುಷ ಸಮೂಹ (ಗಳಾದಿಯಾಗಿ) ಗರುಡ ಚಾರಣ, ಅಪ್ಸರ, ಸಿದ್ಧೇಶ್ವರರೇ ಒಳಗೊಂಡಂತೆ ನಾನಾ ಸ್ಥಳಗಳಲ್ಲಿ ಪರಿವಾರಕರಾಗಿ ವಿರಾಜಿಸಿದರು.

೨೦. ವೇದಗಳಲ್ಲಿರುವ ಮಹಾಪಥವನ್ನು ಹಿಂದೆಯೇ ತಿಳಿದು, ಶ್ರೀಹರಿಯು ನಾನಾಶ್ರಮಗಳಿಗೆ ಅನುಗುಣವಾಗಿ ಧರೆಯನ್ನು ಸೃಷ್ಟಿಸಿದನು. ಈ ಆಶ್ರಮ ಭೇದಗಳನ್ನು ಯಾರು ವಿವರ್ಜಿಸುತ್ತಾರೋ ಅವರನ್ನು ತಿಳಿದು ನೋಡಿ, ಧರ್ಮೋತ್ತರಕ್ಕಾಗಿ ಅಂತಕನು ವಧಿಸುತ್ತಾನೆ.

೨೧. ವಿದುರನೇ ಕೇಳು! ಪರಿಪೂರ್ಣಗುಣಾಬ್ಧಿಯಾದ ಶ್ರೀಹರಿಯ ಮುಖದಿಂದ ದ್ವಿಜ, ಮಾರುತ, ವಹ್ನಿಗಳೂ, ಭುಜದಿಂದ ಧರಣೀಶರರೂ ಉದ್ಭವಿಸಿದರು. ತೊಡೆಯಿಂದ ಅಸಂಖ್ಯಾತ ವೈಶ್ಯ ಜನರೂ, ಚರಣಗಳಿಂದ ಶೂದ್ರರೂ ಜನಿಸಿದರು. ಇದು ಲೋಕ ಮಹಾತ್ಮೆ ಎಂಬ ನಾಲ್ಕು ವರ್ಣಗಳ ಕ್ರಮವಾಗಿದೆ.

೨೨. ಈ ನಾಲ್ಕು ಪ್ರಕಾರವಾದ ವರ್ಣಗಳು ಜನಿಸುವುದಕ್ಕೆ ಆತನೇ ಕಾರಣನು. ಈ ನಾಲ್ಕನ್ನು ತಪ್ಪದೇ ರಕ್ಷಿಸುವುದಕ್ಕೆ ಇರುವಂತನೂ ಆತನೇ. ಈ ನಾಲ್ಕು ಪ್ರಕಾರವಾದ ಜಗತ್ತನ್ನು ಲಯಗೊಳಿಸಿದುದೂ ಆತನೇ. ಈ ನಾಲ್ವರಿಗೆ ಸುಖ - ದುಃಖಾದಿಗಳ ಅನುಭೋಗಕ್ಕೆ ಆಶ್ರಯನು ಅವನೇ ತಾನೇ?

೨೩. ಸಕಲಾಶ್ರಮ ವರ್ಣ ಜಗತ್ತಿಗೆ ಜನ್ಮ ಕಾರಣನು ಆತನೇ. ಸಕಲ ಕ್ರಿಯೆಗಳಲ್ಲಿಯೂ ಸಂದೇಹವೇ ಇಲ್ಲದಂತೆ ಆತನಿದ್ದಾನೆ. ಆತನ ಪದವು ಸಕಲಕ್ಕೂ, ಸರ್ವಾಭ್ಯುದಯಕ್ಕೂ ಮೂಲವಾದುದು. ಸಕಲಾತ್ಮನನ್ನು ಬುದ್ಧಿಯನ್ನು ವಂಚಿಸಿದರೆ ಮತ್ತೆ ಎಲ್ಲಿಂದ ಸೌಖ್ಯ ಸಿದ್ಧಿಸೀತು?

೨೪. ವಿಚಾರಿಸಿ ನೋಡಿದರೆ ಶ್ರೀ ಮುಕುಂದನ ಪಾದಾರವಿಂದವನ್ನು ಬುದ್ಧಿಯಿಂದ ಮರೆತಂತಹ (ಆ) ಮನುಷ್ಯರಿಗೆ ಮತ್ತೆಲ್ಲಾದರೂ ಕ್ಷೇಮ ಉಂಟೇ? ಭೂಮಿಯ ಸಮಸ್ತ ಜಂತುಗಳಿಗೂ ಮಾಯೆಯು ಕೈಮಸಕದಿಂದ ನಿತ್ಯವೂ ವಿಷಯಾಪೇಕ್ಷಿತರಾದ ತಾಮಸಿಗಳು ಹುಟ್ಟುತ್ತಾರೆ.

೨೫. ಪತಿಯನ್ನು ನಿರಾಕರಿಸಿದ ಭಾರ್ಯೆಗೆ ಸತ್ಕ್ರಿಯೆಯೂ ಯಥಾ ಫಲವೂ ಎಲ್ಲಿಂದ ಬರುವುದು ಪಿತೃ -ಪಿತಾದಿಗಳನ್ನು ದ್ವೇಷಿಸುವ ಪುತ್ರರಿಗೆ ಸದ್ಗುಣವೆಲ್ಲಿಯದು? ಪತಿಯೂ, ಪಿತೃವೂ, ಪ್ರಿಯನೂ, ಬಂಧುವೂ ಆದ ಶ್ರೀಹರಿಯನ್ನು ಬಿಟ್ಟು ಸಹಸ್ರ ವ್ರತಗಳನ್ನು ಆಚರಿಸಿದರೇನು? ವಿಷ್ಣುಭಕ್ತಿಯಿಲ್ಲದಿದ್ದರೆ ಇದರಿಂದ ಏನಾಗುತ್ತದೆ?

೨೬. ಭೂಮಿಯ ಜೀವ ಸಂತತಿಗಳು ಸಮುದ್ರದಲ್ಲಿದ್ದು ಬೆಳೆಯುತ್ತವೆ. (ಭೂಮಿಯ)ಮಲಿನ ಕಶ್ಮಲ ನೀರಿನಲ್ಲಿರುವ ದೇಹವನ್ನು ರಕ್ಷಿಸಲೆಂದು ಇರುವ - ಜಲಜನಾಭನ ಭಕ್ತಿ ಪೂರ್ಣ ಸಮುದ್ರವನ್ನು ಬಿಟ್ಟು - ಈ ನರರು, ನೆಲೆಯಿಲ್ಲದೆ ಶರೀರ ವಾಂಛೆಯನ್ನು ಬಯಸಿ ಲಯವಾಗುವರು.

೨೭. ಹೀಗೆ ಮಾಯೆಯಲ್ಲಿ ವರ್ತಿಸುವ ಶ್ರೀಹರಿಯ ಮಹಿಮೆಯಿಂದ ಬೆಳಗಿ ಏಕ ಸ್ವರೂಪವಾಗುತ್ತದೆ. ನೋಡುವುದಕ್ಕೆ ಈ ಕಾರ್ಯವು ಆಕಾಶದಲ್ಲಿ ಚಂಚಲಿಸುವ ಮೇಘಗಳ ಮಾಲೆಯಂತೆ ತೋರುವುದು.

೨೮. ಈ ಮಹಮಾಯೆಯ ನಟನೆಗಳನ್ನು ವರ್ಣಿಸಲು ಯಾರಿಂದ ತಾನೇ ಸಾಧ್ಯವಿದೆ. ವಾರಿಜಾಕ್ಷನಾದ ಶ್ರೀಹರಿಯ ಕಟಾಕ್ಷದಿಂದ ಗುರು ಶಿಕ್ಷಿಸಿದ ಸನ್ಮತಿಯ ಮೂಲಕವಾಗಿ (ಆತನನ್ನು) ಧ್ಯಾನಿಸಿ ಸಾಧ್ಯವಾದಷ್ಟು ಕೃಷ್ಣಕಥಾ ರಸವನ್ನು ವಿವರಿಸಿದ್ದೇನೆ. ಇನ್ನು ಮುಂದೆ ಹೇಳಲಿರುವ ಅದ್ಭುತವನ್ನು ಸಾರಾಸಾರ ವಿವೇಚನೆಯಿಂದ ಕೇಳಿ.

೨೯. ಕಿವಿಗಳಿಗೆ ಉತ್ತಮ ಕೀರ್ತಿಫಲ, ಕಣ್ಣುಗಳಿಗೆ ಸುಮೂರ್ತಿ, ವಿವರಿಸುವ ನಾಲಗೆಗೆ ಸದ್ಗುಣವಾಗಿರುವ ಆತನನ್ನು ನಿತ್ಯವೂ ಕೈಗಳಿಂದ ಅರ್ಚಿಸೋಣ. ಸುವಿವೇಕರು ಮೂಸಿ ನೋಡುವ. ಪಾದಾರ್ಚನೆ ಮಾಡಿ, ಹೊಸದಾಗಿ ನಿರೂಪಿಸೋಣ, ನಿತ್ಯವೂ ಬಿಡದಿರೋಣ!

೩೦. ಚಿತ್ತಶುದ್ಧಿಯಿಂದ ಕೇಳಿರಿ! ಈ ಜಗತ್ತು ನಿತ್ಯವೂ ಉದಯಿಸುತ್ತಿರುವುದು. ಚಿತ್ತವಲ್ಲಭ ಮೂರ್ತಿಯ ಭೇದಾವತಾರ ದಿವ್ಯ ಪ್ರಸಂಗವನ್ನು ಆಸಕ್ತಿಯಿಂದ ಕೇಳಿದ ಜನಗಳಿಗೆ ಮುಂದಕ್ಕೆ ಸದ್ಗತಿಯುಂಟಾಗುವುದು. ಇಲ್ಲಿಗೆ ಶ್ರೀ ಭಗವತ್ಕಥೆಯ ನಾಲ್ಕನೆಯ ಅಧ್ಯಾಯವು ಪೂರ್ತಿಯಾಯಿತು.

ಅಧ್ಯಾಯ ೫

೧. ಕಮಲಾಸನನ ರಾಣಿಯಾದ ಶಾರದೆಯ ಪಾದಾರವಿಂದಕ್ಕೆ ಅಭಿವಂದನೆಯನ್ನು ಹೇಳುತ್ತೇನೆ. ಗಜಾನನ ಪರಿಶುದ್ಧವಾದ ತಾವರೆಯಂತಹ ಶ್ರೀ ಚರಣಗಳನ್ನು ಸ್ಮರಿಸುತ್ತೇನೆ. ಕಲ್ಪಾವಸಾನದಲ್ಲಿ ಕಮಲಾಸನನು ಹರಿಯನ್ನು ಕೀರ್ತಿಸಿ, ಸೃಷ್ಟಿಯನ್ನಂಟು ಮಾಡಿದ ಸ್ತುತಿಯನ್ನು ರಚಿಸಲು ಗುರುವು ನನಗೆ ಅನುಗ್ರಹಿಸಬೇಕು.

೨. ಲಕ್ಷ್ಮೀಕಾಂತನ ಚರಿತಗಳನ್ನು ವಿಸ್ತಾರವಾಗಿ ಹೇಳಿದುದನ್ನು ಕೇಳಿ, ವಿದುರನು ಮನಸ್ಸಿನಲ್ಲಿ ಆನಂದಿಸಿದನು. ಹಿಂದೆ ಬ್ರಹ್ಮನು ಸಚರಾಚರಗಳನ್ನು ಉಂಟು ಮಾಡಿದ ಕಥೆಯನ್ನು ಯಥಾವತ್ತಾಗಿ ನನ್ನ ಬುದ್ಧಿಗೆ ಮನದಟ್ಟಾಗುವಂತೆ ಅನುಗ್ರಹಿಸಬೇಕು ಎಂದು ಆತನು ಅಭಿವಂದಿಸಿದನು.

೩. ಕೌರವಾಗ್ರಣಿಯೇ! ಹಿಂದಣ ಬ್ರಹ್ಮಾಂಡ, ಭೂಮಿ, ವಾಯು, ಜಲ, ಅಗ್ನಿ, ಅಂಬರ ಮೊದಲಾದುವು ಅವುಗಳ ಸ್ಥಿತಿಯನ್ನು ಪ್ರಾಪ್ತಿಸಿಕೊಂಡದ್ದನ್ನು. ಇನ್ನು ಕೇಳು! ಬ್ರಹ್ಮನು ರಚಿಸಿದ ಮಡಕೆಗಳು ಮುಳುಗಿ ಪೂರ್ಣಗೊಂಡಾಗ, ಮಹಾಜಲಧಿಯಲ್ಲಿ ಒಂದಾಗಿ ಶೂನ್ಯತೆಯನ್ನು ಧರಿಸಿ ಶ್ರೀಹರಿಯು ಇದ್ದನು.

೪. ಹೀಗೆ ಜಗತ್ತು ದಿವ್ಯ ಸಹಸ್ರ ವತ್ಸರ ಮುಳುಗಿ ಲಯವಾಯಿತು. ಪಂಚಭೂತ ಮಯಾತ್ಮಕನಾದ ಶ್ರೀಹರಿಯು ಸಚಾರಾಚರಗಳನ್ನು ಸ್ಥಾಪಿಸಿದನು. ದೇಹಗಳ ವಂಚನೆಗೆ ಮಹಾಮಾಯೆಯನ್ನೊಪ್ಪಿಸಿದನು. ಪ್ರಳಯ ಕಾಲದಲ್ಲಿ ಅತ್ತ ಅಡಗಿ ತಾನು ತನ್ನಲ್ಲೇ ಹೀಗೆ ಶೋಭಿಸಿ ರಮಿಸಿದನು.

೫. ಕೇಳಿದೆಯಾ! ಹೀಗೆ ಅನೇಕ ಕಾಲ ಕಳೆಯುತ್ತಿರಲಾಗಿ (ಮತ್ತೆ) ಮುಕುಂದನು ಕಲ್ಪನೆಯಲ್ಲಿ ಪ್ರಪಂಚವನ್ನು ಸೃಷ್ಟಿಸಬೇಕೆಂದಾಯಿತು. ಆಗ ತನ್ನಲ್ಲಿ ತಾನೇ ಕಲ್ಪಿಸಿಕೊಂಡಾಗ ನಾಭಿಯಿಂದ ಚಿನ್ನದ ತಾವರೆಯು ಜನಿಸಿತು. ಅದು ಸಹಸ್ರ ಸೂರ್ಯ ಪ್ರಭೆಯಿಂದ ಬೆಳಗುತ್ತ ಅತಿಶುಭ್ರವಾಗಿ ಅದ್ಭುತವೆನಿಸುವಂತೆ ಜನಿಸಿತು.

೬. ಆತನು ಮೂಲ ಸುಷುಮ್ನ ನಾಡಿಯು ಮಧ್ಯ ರಂಧ್ರದಲ್ಲಿ ಅಜನನ್ನು ಕಲ್ಪಿಸಿ ರೂಪುಗೊಳಿಸಿದನು. ಶ್ರೀಹರಿಯು ಯೋಚಿಸಿ, ನಾಭಿ ತಾವರೆಯ ಮಧ್ಯದಲ್ಲಿ ಬ್ರಹ್ಮನನ್ನು ಆವಿರ್ಭವಗೊಳಿಸಿದನು. ರಾತ್ರಿಯಲ್ಲಿ ವಾಯುವಿನ ಅಬ್ಬರವನ್ನು ಕೇಳಿ ಅಜನು ಹೆದರಲಾಗಿ ವಿಧಾತನಿಗೆ ನಾಲ್ಕು ಮೊಗಗಳಾದುವು.

೭. ಪ್ರಳಯಾಬ್ಧಿಯ ಮೇಲೆ ಅಂಬುಜೋದರನು ಹಲವು ಕಾಲ ನೆಲೆಸಿದನು. ನಳಿನೋದರನಾದ ಶ್ರೀಹರಿಯ ಹೊಕ್ಕುಳಿನಲ್ಲಿ ಜಗತ್ತನ್ನು ಸೃಷ್ಟಿ ಮಾಡಲೆಂದು ಜನಿಸಿದನು. ನಳಿನಾಸನನು ನಾಭಿ ಸರೋವರದಲ್ಲಿ ನೆಲೆಯಾಗಿ, ಸಮಸ್ತ ಪ್ರಳಯಗಳನ್ನು ನೋಡಿ ಬುದ್ಧಿಭ್ರಮೆಯಾಗಿ ಹೆದರಿದನು.

೮. ಕಲ್ಪಾಂಬುಧಿಯ ಘರ್ಜನೆ ಮಾರುತನ ಧ್ವನಿ, ಕತ್ತಲೆಯಿಂದ ಕಲ್ಪನೆಗೂ ಜಾಗೆಯಿಲ್ಲ ಎಂದು ಅಧಿಕ ಭಯಗೊಂಡನು. ತಾನು ಹುಟ್ಟಿದ ದಾರಿಯಲ್ಲಿ ಕೆಳದಾರಿಯಾಗಿ ಹೋದನು. ಅಲ್ಲಿಯೂ ನಿಲ್ಲುವುದಕ್ಕೆ ಸಾಧ್ಯವಿಲ್ಲದೆ ಹರಿಯೇ ಹರಿಯೆಂದನು!

೯. ಒಮ್ಮೆಲೇ ಅಧೋಮುಖಿಯಾಗಿ ಗಮಿಸಿದನು. ಅಲ್ಲಿಯೂ ಇರುವಂತಿರಲಿಲ್ಲ. ಮುಂದೆ ದಾರಿಕಾಣದಿರಲು ಆತನಿಗೆ ನಡುಕ ಉಂಟಾಯಿತು. ಅಲ್ಲಿ ಇಲ್ಲಿ ಎಂದು ನೂರು ವರ್ಷಗಳವರೆಗೆ ಆತನು ಅಲ್ಲಿಯೇ ಮುಂದೆ ಮಾಡಬೇಕಾದ ಕರ್ತವ್ಯ ಹೊಳೆಯದೇ ಹಾಗೆಯೇ ಉಳಿದನು. ಈ ಚೋದ್ಯವನ್ನು ಏನೆಂದು ಹೇಳಲಿ!

೧೦. ಹೀಗೆಯೇ ಅನೇಕ ವತ್ಸರ ಕಳೆಯಲು, ಸ್ಥಿರ ಕರ್ಣಿಕೆಗೇ ಮತ್ತೆ ಮರಳಿದನು. ಆತನಿಗೆ ನೆಲೆ ಕಾಣದೆ ದಂಡಿಸುತ್ತಿರಲಾಗಿ ಆನಂದ ವಿದಗ್ಧನಾದ ಶ್ರೀಹರಿಯು ಹೀಗೆಂದು ಅನುಗ್ರಹಿಸಿದನು. 'ಎಲೈ ಬ್ರಹ್ಮನೇ! ಎರಡು ಅಕ್ಷರಗಳನ್ನು ದೃಢತೆಯಿಂದ ಕೇಳು. (ಇದರಿಂದ) ಮುನ್ನೂರ ಇಪ್ಪತ್ತು ವಿಂಶತಿ ವರ್ಷಗಳ ಕಾಲವೂ ಮಿಗಲಾಗಿ ನಿನಗೆ ಗೆಲುವು ಉಂಟಾಗುವುದು ಎಂದನು.

೧೧. ಆತನು ಅಶರೀರ ಸರಸ್ವತಿಯನ್ನು ಧ್ಯಾನಿಸಿ ಮನದಲ್ಲಿ ಆನಂದಿಸುತ್ತ ತಾವರೆಯ ನಡುವಿನಲ್ಲಿಯೇ (ತನ್ನ) ಸುಶರೀರವನ್ನೂ ಸ್ಥಿರಗೊಳಿಸಿದನು. (ಅರ್ಥಾತ್ ಸ್ಥಿರವಾಗಿ ನೆಲೆಯಾದನು) ಹೃತ್ಕಮಲದಲ್ಲಿಯೇ ಬಹುವಾಗಿ ವಂದಿಸಿ, ಷೋಡಶೋಪಚಾರವನ್ನು ಶ್ರೀಹರಿಗೆ ನೆರವೇರಿಸಿ ಅಜನು ಧ್ಯಾನಿಸಿದನು.

೧೨. ಹೃದಯಾಂಬುರಹದಲ್ಲಿ ನಿಜ ಮಂತ್ರವನ್ನೂ ಮತ್ತೆ ಮತ್ತೆ ಉಚ್ಚರಿಸಿ, ಸುಜನ ಪ್ರಿಯ ಮೂರ್ತಿಯ ಗುಣಗಳ ದೃಢವಾಗಿ ಭಜಿಸಿದನು(ಆಗ) ರಜಸ್ಸನ್ನು ಲಯಮಾಡಿ ಸಹಸ್ರ ಸೂರ್ಯ ಪ್ರಭೆಯಲ್ಲಿ ವಿರಾಜಿಸುತ್ತಿದ್ದ ನಿಜವೇಶನನ್ನು ಮರೆಮಾಡಿದ ಕೃತಿಯನ್ನು ಏನೆಂದು ವರ್ಣಿಸಲಿ!

೧೩. ಕರಣೇಂದ್ರಿಯ ಭಾವ ವಿಕಲ್ಪವನ್ನು ಏಕೀಕರಿಸಿಕೊಂಡು, ಮೂಲ ಸುಷುಮ್ನ ನಾಡಿಯಲ್ಲಿ ಸ್ಥಿರಗೊಳಿಸಿದನು. ಆ ತೇಜೋಮಯ ಮೂರ್ತಿಯನ್ನು ಪರಿಪೂರ್ಣವಾಗಿ (ಕಲ್ಪಿಸಿಕೊಂಡನು)ತ್ರೈಗುಣವನ್ನು ಮೀರಿ ಓಂಕಾರ ಬಲದಿಂದ ಅರಿಷಡ್ವರ್ಗಗಳನ್ನು ಕಳೆದು ಮೂರ್ಧ್ನಿಯಲ್ಲಿ ಸಂಪೂರ್ಣತೆಯನ್ನು ಪಡೆದನು.

೧೪. ಹೀಗೆ ದಿವ್ಯ ಶತ ಸಂವತ್ಸರ ಆತನನ್ನು ಧ್ಯಾನಿಸಲಾಗಿ, ಆತನ ಮನಸ್ಸಿನಲ್ಲಿ - ಕಟ್ಟಿಗೆಯನ್ನು ಘರ್ಷಿಸಿದಾಗ ಉಂಟಾಗುವ ಕೆಂಪನೆಯ ಅಗ್ನಿಯ ವರ್ಣವನ್ನು ಧರಿಸಿದನು. ಶತಸೂರ್ಯ ಶಶಾಂಕ ಕಾಂತಿಯಿಂದ ಆಶ್ಚರ್ಯಕರವಾಗಿ ಆನಂದ ಗುಣದಿಂದ ಪ್ರಕಾಶಿಸಿದನು.

೧೫. ಮಾಯೆಯ ಉಭಯ ಪ್ರಪಂಚ ವಿಕಾರ ಸಂಭವವನ್ನು ಬ್ರಹ್ಮನು ನೋಡಿದನು; ಈ ಮಹಾದಾದಿ ಭೂತ ಸಮೂಹವು ನೋಡದ ವಸ್ತುವನ್ನು ಬ್ರಹ್ಮನು ನೋಡಿದನು; ಪರಮೇಷ್ಠಿಯ ಕರ್ಮ ವೃತ್ತಿಗೆ ಕಾಣ ಸಿಗದುದನ್ನು ಬ್ರಹ್ಮನು ನೋಡಿದನು; ಈ ರವಿಯ ಕಾಲ ಚಕ್ರವು ಪ್ರವೇಶಿಸದ ಶುದ್ಧ ನಿವಾಸವನ್ನು ಬ್ರಹ್ಮನು ನೋಡಿದನು.

೧೬. ಸಾತ್ವಿಕರಾದವರ ಸರ್ವ ವಿಭೂತಿಯ ಸಾರ ಸಂಪದ ವಸ್ತುವೂ, ಸಕಲ ನಿತ್ಯ ಸುಖಾಂಕುರಗಳನ್ನು ಒಟ್ಟುಗೂಡಿಸುವ ಬೀಜವೂ, ಎರಡು ರೀತಿಯ ಭಾವಗಳು ಕಾಣದ, ತ್ರೈಗುಣವನ್ನು ಮೀರಿದ ವಸ್ತುವೂ ವಿಕುಂಠ ಸಾರದ ಕರ್ತೃವೂ ಆದ ಶ್ರೀಹರಿಯನ್ನು ಕೀರ್ತಿಸುತ್ತ ನೋಡಿದನು.

೧೭. ಸುಂದರವಾಗಿರುವ ದೀರ್ಘ ಚತುರ್ಭುಜಗಳೂ ಸುಕುಮಾರ ಗಾತ್ರವೂ ಅರುಣಾಂಬರವೂ ಆಯುತವಾಗಿರುವ ತಾವರೆಯಂತಹ ನಯನಗಳೂ, ಶ್ಯಾಮಳ ವರ್ಣವೂ, ಸುಂದರವಾದ ಭೂಷಣವೂ, ಒಪ್ಪಿದವು. ಸಾರಸನ್ಮತವಾದ ಪಾರಮೇಷ್ಠ್ಯ ವಿಭೂತಿ ಸನ್ಮತಿಯಲ್ಲಿ ಬಾಗಿಲ ಬಳಿಯಲ್ಲಿ ನಿಂತ ಭೂರಿ ಭಕ್ತ ಸಮೂಹವನ್ನು ಬ್ರಹ್ಮನು ನೋಡಿದನು.

೧೮. ಆ ಪುರದಲ್ಲಿ ಅನೇಕ ದೀಧಿತಿಯಿಂದ ಇಂದ್ರಲೋಕವನ್ನು ಮೀರಿದ ಸಭೆಯಲ್ಲಿ, ದಿವ್ಯ ಸಹಸ್ರ ಭಾಸ್ಕರ ಪ್ರಭೆಯನ್ನು ಜಯಿಸಿದ ಶ್ರೀ ಮಕುಟವು (ಒಪ್ಪಿರಲು) ಕಾಪಥವನ್ನು ಕಳೆಯುವ ದಿವ್ಯ ಮುಖಾಬ್ಜವೂ ಕುಂತಳವೂ ಶೋಭಿಸುತ್ತಿರಲು ನಯನಾಮೃತೇಕ್ಷಣಮೂರ್ತಿಯಾದ ಶ್ರೀಹರಿಯನ್ನು ಬ್ರಹ್ಮನು ನೋಡಿದನು.

೧೯. ಮಂದಸ್ಮಿತವಾದ ಮುಖಾಂಜ - ನಯವಾಗಿರುವ ಗಂಡ; ಚಂದವಾಗಿ ವಿರಾಜಿಸುವ ಕುಂಡಲ - ಸುಮನೋಹರವಾದ ಹಲ್ಲುಗಳು; ಕೆಂಪಾದ ಅಧರಾಮೃತ - ದೀಧಿತಿಯಿಂದ ಬೆಳಗುವ ರೇಖೆಯ ಸರ್ವ ಸೌಂದರ್ಯವೆತ್ತ ಶ್ರೀ ವತ್ಸದಿಂದೊಪ್ಪುವ ಗುಣ ಮಹಿಮಾರ್ಣವನನ್ನು ಬ್ರಹ್ಮನು ನೋಡಿದನು.

೨೦. ಕೋಟಿ ಸೂರ್ಯಚಂದ್ರಾಗ್ನಿಗಳನ್ನು ಮೀರಿಸಿದ ಶ್ರೀ ಮಕುಟ ಆಜಾನುಲಂಬಿತ ಹಸ್ತಗಳೂ, (ಹಸ್ತಕೊಪ್ಪುವ) ಕಂಕಣ, ಬಾಹು ಮುದ್ರೆ ಜಘಾನ? ಉಂಗಿಲಗಳು, ಪೀನವಾದ ದಿವ್ಯ ಜಘನ ಪೀತನ, ಕಟಿ ಪ್ರಭೆಯನ್ನುಂಟು ಮಾಡುವ ಪೀತವಸ್ತ್ರ, ಧ್ಯಾನಗೋಚರವಾದ ಜಾನುಪಾದಗಳು - ಇವುಗಳನ್ನು ಬ್ರಹ್ಮನು ನೋಡಿದನು.

೨೧. ವೇದವೇದ್ಯರೂ, ಶುಭಾಂಗರೂ, ಉಪನಿಷದಾದಿ ತತ್ತ್ವ ಸುಸೇವ್ಯರೂ, ತಾರ್ಕಿಕರು ಜ್ಯೋತಿಷಿಗಳೂ, ಕಿನ್ನರ ಅಪ್ಸರಾದಿರಾಗ ಸಮೂಹವೂ, ಆದಿಶಕ್ತಿ, ಸಹಸ್ರ ಸಂಭವ ಎಂಬಿತ್ಯಾದಿ ಭೇದ ಭಾವಗಳಿಲ್ಲದೆ, ಎಲ್ಲರೂ ಆ ಪುರದಲ್ಲಿ ಆದಿಮೂರ್ತಿಯೂ ಅನಂತ ಶಾಯಿಯೂ ಆದ ಶ್ರೀಹರಿಯ ಪಾದಪಲ್ಲವವನ್ನು ನೋಡಿದನು.

೨೨. ಸಾಮದಿಂದ ಹೀಗೆ ಶೋಭಿಸುವ ಸಾರೂಪ್ಯ ಜಗತ್ತಿನ ಶುಭಾಂಗನನ್ನು ಆಲೋಕ ಸಾಯುಜ್ಯರು ಸನ್ಮತಿಗಳು, ಶರಣಾಗತರು, ಮೂಲಾಗಮ ವಿದ್ಯರು ಸಭಾಸದರು, ವರ ಪಾಠಕರು, ಗಾನರು, ಶೀಲಜ್ಞರು ಇವರೆಲ್ಲರೂ ಮುತ್ತಿಕೊಂಡಿರುವುದನ್ನು ಬ್ರಹ್ಮನು ನೋಡಿದನು.

೨೩. ತ್ರೈಲೋಕ್ಯ ಸಮಸ್ತರ ಮೂಲಗೃಹವೂ, ಭಯನಿವಾರಣವೂ, ನಿತ್ಯವೂ ಸಾಧುಗಳಿರುವ ದಿವ್ಯ ಗೃಹವೂ, ಸುಖ - ಸೌಖ್ಯವನ್ನು ಪಡೆಯುವ ನೆಲೆಯೂ ನಿಜಾಗಮ ಶೋಭ ಗೃಹವೂ, ಭಕ್ತಿ ಜಲಧಿಯಲ್ಲಿ ಸುಳಿದಾಡಲೆಂದಿರುವ ಶುದ್ಧಗೃಹವೂ ಆದ ಆವಾಸ ಸ್ಥಾನವನ್ನು (ಅಜನು) ನೋಡಿದನು.

೨೪. ಯಮನು ಬೆಂಬೆತ್ತಲು ಓಡಿ ಹೋಗಿ ಅವಿತುಕೊಳ್ಳಲಿರುವ ಏಕಾಂತ ನಿವಾಸವೂ, ಭ್ರಮಾಧೀನನಾಗಿ ನಿತ್ಯವೂ ಮನ್ಮಥನಿಂದ ವಿರೋಧವವುಂಟಾಗಲು ಸುಖವಾಗಿರಬಹುದಾದ ನಿವಾಸವೂ, ನಿಮಿಷದಲ್ಲಿ ಕ್ರೋಧ ಭಯವನ್ನು ಕಳೆಯಲಿರುವ ಪರಿಣಾಮ ನಿವಾಸವಾಗಿ, ಸಮಸ್ತರಿಗೂ ಅಮೃತಾನ್ನ ಉದ್ಭವವಾಗುವ ಶುಭಯೋಗ ನಿವಾಸವೂ ಆಗಿ ಅದು ಶೋಭಿಸಿತು.

೨೫. ಹೀಗೆ ವಿಲಾಸ ವಿಕುಂಠ, ಗುಣಗಳಿಗೆ ಆವಾಸ ಸ್ಥಾನವಾಗಿರುವುದನ್ನು ನೋಡಿ, ಒಡನೆಯೇ ಸುಖಾಶ್ರುಗಳುಂಟಾಗಲು ಭಯಭಕ್ತಿಯುಂಟಾಯಿತು. ಆಗ ಕೈಗಳನ್ನು ಜೋಡಿಸಿ ಶಿರದಲ್ಲಿರಿಸಿ 'ಶರಣೋ ಶರಣೊಂದು' ಪಂಚಾಯುಧನಾದ ಬ್ರಹ್ಮನು ವಂದಿಸಿದುದನ್ನು ನಾಮ ಹೇಗೆಂದು ವರ್ಣಿಸಲಿ!

೨೬. ಪೊಡಮಟ್ಟು ಭಕ್ತಿ ಸುಖದ ಕಡಲಿನಲ್ಲಿ ಮುಳುಗಿದನು. ಕೂಡಲೇ ಎದ್ದು ಕೈ ಮುಗಿದು ಹರಿಯ ಶ್ರೀ ಮುಖವನ್ನು ನೋಡಿದನು. ಬಿಡದೆ ಹೊರಬರುತ್ತಿರುವ ಆನಂದಾಶ್ರುಗಳಿಂದ ಮೆಲ್ಲನೆ ಪೊಡವೀಧರನಾದ ಶ್ರೀಹರಿಯ ಸ್ತೋತ್ರವನ್ನು ವರ್ಣಿಸಿದನ್ನು ಯಾರು ತಾನೇ ವಿವರಿಸಬಹುದು?

೨೭. ಜಯದೇವ! ನಿರಾಶ್ರಯ! ನಿತ್ಯಸುಖ! ಭಕ್ತಾಶ್ರಯ! ಅಪಾರ! ಜಯ ದೇಹಿಕ! ದೇಹ ವಿನಾಶಕರ! ಸರ್ವಾಂತರ್ಯಾಮಿ! ಜಯಸರ್ವಚರಾಚರ - ಮೂಲ ನಿಧೀ! ಪರಿಪೂರ್ಣ! ಗುಣಾಢ್ಯ! ಜಯ ದೈತ್ಯವಿನಾಶನ! ಕಾಲಹರ ಕರುಣಾರ್ದ್ರ ನಮಸ್ತೇ ಎಂದು ಸ್ತುತಿಸಿದನು.

೨೮. (ಇಂತು) ಪೂರ್ಣವಾದ ಕಥಾಮೃತವು ಇಲ್ಲಿಗೆ ಐದಾಯಿತು. (ಹೀಗೆ) ಶ್ರೀಭಾಗವತಾರ್ಥವು ಸುಮನೋಹರವೂ, ವಿಲಾಸಕಥೆಯೂ ಆದುದಾಗಿದೆ. ಸುಮನಸರು ಕೇಳಿ ನಿರ್ಧರಿಸಬೇಕಾದ ಈ ತೃತೀಯ ಸ್ಕಂಧವನ್ನು ಕಮಲೋದರನಾದ ಬ್ರಹ್ಮನು ನಿರ್ಧರಿಸಿ ಸದಾ ಪರಿಪಾಲಿಸುತ್ತಿರಲಿ!

ಅಧ್ಯಾಯ ೬

೧. ಶೌನಕ ಮುನಿಗಳೇ - ಪರೀಕ್ಷಿತ ನೃಪೇಂದ್ರನಿಗಾಗಿ ಅನುರಾಗದಿಂದ ಶುಕರಾಯ. ಮುನಿಯು ವಿನಯ ಪೂರ್ವಕವಾಗಿ ರಚಿಸಿದ ವನಜಾಸನ ಸ್ತುತಿಯನ್ನು ಆ ಮಿತ್ರಕುಮಾರನು ಅಧಿಕವಾಗಿ ವಿಸ್ತರಿಸಿ ವಿದುರನಿಗೆ ತಿಳಿಯಹೇಳಿದ ಪ್ರಸಂಗದ ಮುಂದಣ ಕಥೆಯನ್ನು ಕೇಳಿ.

೨. ಆತನ ಗುಣವನ್ನು ತಿಳಿಯದ ಲೋಕದ ಜನರು ವೃಥಾ ಮಾಯಾಭ್ರಮೆಯಿಂದ ವಾಗ್ದಾನ ಮಾಡುವುದೇಕೆ? ಆತನನ್ನು ಮಹಾತ್ಮರಾದವರು ತಿಳಿಯದಿದ್ದುದಾದರೂ ಏಕೆ? ಸೂಕ್ಷ್ಮವಾಗಿ ನೋಡಿದರೆ ನನಗಾಗಿ ಪ್ರಸಾದಿಸಿದ ಕ್ರಮವನ್ನು ಕೇಳಲು ಲೋಕದ ಜನರು ಆಸಕ್ತರಾಗಿದ್ದಾರೆ.

೩. ಸರ್ವಾತ್ಮಕನನ್ನು ನೋಡಿದೆ ಎಂಬುದೇ ಒಂದು ಕೌತುಕ ಲೋಕವು. ಸರ್ವೇಶ್ವರನ ಗೀತ ವಿಲಾಸವನ್ನು ಕಿವಿಯಾರೆ ಕೇಳಿದೆಯೆಂಬ ಸರ್ವಾಗತನೂ ಸರ್ವ ವಿಲಾಸ ನಿಧಿಯೂ, ಸರ್ವೋತ್ತಮ ಸೇವ್ಯನೂ, ಸರ್ವಜ್ಞನೂ ಸಮಸ್ತ ಪರಾತ್ಪುರುಷನೂ, ವರದೇಶನೂ ಆದ ನಿನಗೆ ನಮಸ್ತೇ!

೪. ದೇವಾ! ನಿನ್ನ ರೂಪವು ಸಮಸ್ತರಿಗೂ ಬೋಧಾತ್ಮಕ ವಸ್ತುವಾದುದು. ಸತ್ಪುರುಷರಿಗೆ ಸದಾ ಅನುಗ್ರಹವಾಗಿರುವ ಕೈವಲ್ಯವಿದು. ಭಾವದಲ್ಲಿ ನೋಡುವುದಾದರೆ ಅನೇಕ ಅವಯವಗಳ ಆಕಾರ ಬೀಜವಿದು. ಶ್ರೀ ವಲ್ಲಭನೇ, ಶರಣಾಗತಿ ಬಂಧುವೇ ಸಂತತವೂ ರಕ್ಷಿಸು!

೫. ಹೇ ಕಾರುಣ್ಯಶೀಲನೇ! ನಿಜವಾಗಿಯೂ ನಿರೂಪಿಸುವುದಾದರೆ, ಈ ವಿಭವವನ್ನುಳಿದರೆ ಉಳಿದುದೆಲ್ಲವೂ ಶೂನ್ಯವೇ. ಇದರಲ್ಲಿರುವ ಸಗಾಢತೆ ಸೌಖ್ಯ - ಶುಭ ವೇದಗಳಲ್ಲಿಲ್ಲ. ಸದನಾತ್ಮಕನೇ! ಸರ್ವಾವಯಾತ್ಮನೂ ಸುಖ ಸಂಪನ್ನನೂ, ಗುಣಾಬ್ಧಿಯೂ ಆದ ಶ್ರೀಹರಿಯ ಪಾದ, ಪದ್ಮವನ್ನು ನನಗೆ ಪ್ರಸಾದಿಸು.

೬. ಸ್ವಾಮೀ! ಪರಬ್ರಹ್ಮನ ನಿರಾಮಯತೆಯನ್ನು ಲೋಗರು ತಿಳಿಯುವುದಶಕ್ಯವೇ ಸರಿ. ಹೊಕ್ಕುಳಲ್ಲಿ ತಾವರೆಯಿರುವ ಶ್ರೀ ಹರಿಯೇ, ದಿವ್ಯ ಅವಯುವ ಪ್ರಕಾಶವನ್ನು ಧರಿಸಿ ಪರಿವರ್ತನೆಗೊಳಿಸಿದರೆ ನಿಮ್ಮನ್ನು ಯಾರೂ ತಿಳಿಯದೇ ಹೋದರು. ಈ ಜಗತ್ತು ನರಕವೆಂಬ ಸಮುದ್ರದಲ್ಲಿ ಮುಳುಗಿ ದಡಕ್ಕೆ ಬರಲಾಗದುದು.

೭. ನಿನ್ನ ಭಕ್ತರನ್ನು ನೋಡಲಾರದ ದೃಷ್ಟಿಯು ನಿಜ ಹೇಳುವುದಾದರೆ - ಏತಕ್ಕಾದರೂ ಇರಬೇಕು? ನಿನ್ನ ಸ್ತುತಿಯನ್ನು ಕೇಳದ ಕಿವಿಯು ಸರ್ವವನ್ನೂ ಕೇಳಿದರೂ ಫಲವೇನು? ನಿನ್ನ ಪಾದದ ಸುಗಂಧವನ್ನು ಆಘ್ರಾಣಿಸದ ಶ್ವಾಸವೇಕೆ? ಅದು ಇದ್ದರೂ ನಿಷ್ಫಲವೇ! ನಿನ್ನನ್ನು ಕೀರ್ತಿಸದ ನಾಲಗೆಯು ಅಮೃತವನ್ನು ಚೀಪಿದರೂ ಫಲವೇನು?

೮. ಯಾವಾಗ ಎಲ್ಲರೂ ಒಂದಾಗಿ ನಿನ್ನನ್ನು ಮಾನವರು ಸೇವಿಸುತ್ತಾರೋ ಆವಾಗ ಅವರನ್ನು ಶೋಕ - ಮೋಹ - ಭಯಗಳು ಉಪದ್ರಿಸಲಾರವು. ಅಂದೇ ಮಾಯಾ ಕಾರಣವಾದ ದರಿದ್ರ ಸಂಕಟಗಳೆಲ್ಲವೂ ಪರಿಹಾರವಾಗಿ ಧ್ಯಾನವು ಹುಟ್ಟುತ್ತದೆ ಎಂಬ ನಿರ್ಮಲ ಸತ್ಸುಖವು ಎಲ್ಲರಿಗೂ ಶುಭೋದಯವಾದುದು.

೯. (ನೀನು) ಇಷ್ಟಬುದ್ಧಿಯನ್ನು ತಿಳಿದು ಅನುಗ್ರಹಿಸುವ ಶ್ರೀ ಪುರುಷೋತ್ತಮನು. ಈ ಮನುಷ್ಯರು ಇಷ್ಟವನ್ನು ತೊರೆದು ಕಷ್ಟಕರ್ಮಗಳನ್ನು ಸಲ್ಲಿಸಿ, ಭ್ರಷ್ಟರಾಗಿ ಸಂಸಾರ ಸಾಗರದಲ್ಲಿ ಮುಳುಗಿ ಏಳುತ್ತಿರುವರು. ಹುಟ್ಟಿ - ಸಾಯುವುದೆಂಬ ಈ ರಗಳೆಯನ್ನು ಏನೆಂದು ವಿವರಿಸಲಿ?

೧೦. ವಾತ, ಪಿತ್ತ, ಶ್ಲೇಷ್ಮ, ಕ್ಲುಪ್ತಿ, ನಿರೋಧ, ನಿದ್ರೆ, ಮಹಾತೃಷೆ, ಶೀತತಿರ್ಷ, ಮಹೋಷ್ಣ, ಮೊದಲಾದ ಕಾಲಕರ್ಮ ಪ್ರವೃತ್ತಿಯಿಂದ, ಮರಣ ಭಯ, ಕಾಮವಿಕಾರ ಬುದ್ಧಿ ಅನರ್ಥ - ಮೊದಲಾದ ಎಷ್ಟು ದಂಡನೆಗಳಿವೆಯೋ ಅವೆಲ್ಲವನ್ನೂ - ವಿಷ್ಣು ಭಕ್ತಿಯನ್ನುಳಿದು - ಸರ್ವರೂ ಮಾಡುತ್ತಾರೆ.

೧೧. ಇಷ್ಟೊಂದು ಅನರ್ಥಗಳನ್ನು ನೋಡುವವರಿಗೆ ಬುದ್ಧಿಯಲ್ಲಿ ವೇದನೆಯಿದೆಯೇ? ಅಷ್ಟೆಲ್ಲವನ್ನೂ ಅನುಭವಿಸುವವರಿಗೆ ಒಂದಿಷ್ಟೂ ದಣಿವೆಂಬುದೇ ಇಲ್ಲ. ಮಾಯೆಯೆಂಬ ತುರಗದ ಕೋಡಿನ ಗಾಯವು ಎಷ್ಟು ಆಳವಾದುದೋ! ಆತನ ಸ್ಮರಣೆಯಿಲ್ಲದ ಕಥೆಗಳನ್ನು ರಚಿಸುವುದಾದರೂ ಏಕೆ?

೧೨. ಲೆಕ್ಕವಿಲ್ಲದಷ್ಟು ದೋಷ ಚತುತ್ವತಿಗಳನ್ನು ಸಲ್ಲಿಸಿ, ಅನೇಕ ದುಷ್ಕೃತ್ಯಗಳಲ್ಲಿ ದಂಡನೆಗೊಳಗಾಗಿ, ರಾತ್ರಿಯ ವೇಳೆ ಮಲಗಿರುವಾಗ, ಪಕ್ಕದಲ್ಲಿಯೇ ಇರುವ ಜೀವ ಸ್ವಪ್ನಾವಯಗಳನ್ನೂ ಬಿಟ್ಟು ಎಲ್ಲಿಗೋ ಹೋಗುತ್ತದೆ.

೧೩. ನಿರ್ದೈವಿಗಳು ಆರ್ಜಿಸಿದ ಸಂಪತ್ತು ದೈವದ ಇಚ್ಛೆಯ ಪ್ರಕಾರ ನಾಶವಾಗಿ ಹೋಗುತ್ತದೆ. ಪಾಪಿಗಳು ಅದನ್ನು ತಿಳಿಯದೆ ಅನೇಕ ವಿಧದಿಂದ ದಂಡನೆಗೊಳಗಾಗುತ್ತಾರೆ. ಜೀವಜಾತಿಗಳಲ್ಲಿರುವ ಅನೇಕ ಮೌಢ್ಯತೆ, ಭಾವವಿಸ್ಮೃತಿಯಿಂದಾಗಿ ನಿನ್ನನ್ನು ಸೇವಿಸಲಾರರು. ಆದುದರಿಂದ ಅವರಿಗೆ ಅದು (ಸಂಪತ್ತು) ನಿಷ್ಫಲವಾಗುತ್ತದೆ.

೧೪. ಭಕ್ತಿಪೂರ್ವಕವಾಗಿ ನಿರ್ಮೂಲ ಚಿತ್ತದಿಂದ ಭಜಿಸುವ ಮರ್ತ್ಯರು ಇಚ್ಛಿಸುವ ವರ್ತಮಾನವನ್ನು, ಸರ್ವದೋಷ ಗುಣಗಳನ್ನೂ ಆ ಭಕ್ತ ವತ್ಸಲನಾದ ಶ್ರೀಹರಿಯು ಪೂರ್ತಿಗೊಳಿಸುತ್ತಾನೆ. ಆತನನ್ನು ಪ್ರೀತಿಯಿಂದ ನೋಡದ ಮೂಢರು ಮಾಯೆಯ ಶಕ್ತಿಯಿಂದ ಒಡೆದೊಡೆದು ಹೋಗುತ್ತಾರೆ.

೧೫. ಸರ್ವಭೂತ ದಯಾಸದರ ಸರ್ವ ಭೂತದಯಾತ್ಮಕನೂ, ಸರ್ವದೇವ ಸ್ವರೂಪನೂ, ಸರ್ವಹಿತಾರ್ಥನೂ, ಸರ್ವ ಅವಯಾತ್ಮಕನೂ. ನೀನು - ಸರ್ವಭೂತ ದಯಾಹೀನರು, ಸರ್ವ ಸಾಧಕರಾಗಿ ಸುಪರ್ವರಾದರೂ - ಅವರಿಗೆ ಸರ್ವಥಾ ಕೃಪೆಯನ್ನುಂಟು ಮಾಡಲಾರೆ.

೧೬. (ಈ) ಧರಣಿಯಲ್ಲಿ ಅನೇಕ ಮನುಷ್ಯರು ಅಧ್ವರ (ವೇ) ಮೊದಲಾದ ಭೂರಿ ಕರ್ಮಗಳನ್ನು ಮಾಡಲಾಗದೆ ತೊಳಲಾಡುತ್ತಾರೆ. ಪರಮ ಪುರುಷನಾದ ಶ್ರೀಹರಿಯ ಪಾದಾರ್ಚನೆಗಳು ಇಲ್ಲದ ಕಾರಣ ಭೂಮಿಯಲ್ಲಿ (ಎಲ್ಲವೂ) ಅರಸನು ತಿಳಿಯದ ಬಿಟ್ಟಿಚಾಕರಿಯ ಹಾಗೆ ವ್ಯರ್ಥವಾಗುತ್ತವೆ.

೧೭. ನೀನು ತಿಳಿಯದಿರುವ ಆತನ ವಿಲಾಸ ನಾಮಗುಣಗಳನ್ನು (ಈಗಲಾದರೂ ತಿಳಿದಿರು) ಮಂದಬುದ್ಧಿಯವನಾದ ನಿನಗೆ ಕಾಲ ಸಮೀಪಿಸಿದಾಗ ದೇಹಾನಸಾನವಾಗುತ್ತದೆ. ಅನೇಕ ಜನ್ಮಗಳ ತಾಪ ಮತ್ತು ದೋಷಫಲಗಳು ಪರಿಹಾರಗೊಂಡು, ಅಂತಹವರು ಮುಕುಂದ ಮಂದಿರದಲ್ಲಿ ಚೆಂದವಾಗಿ ಇರುತ್ತಾರೆ.

೧೮. ಅಧಿಕವಾಗಿರುವ ಸುಲಭೋಪಾಯಗಳನ್ನು ಮೂಢರು ತಿಳಿಯುವುದಿಲ್ಲ. ಅಂತಹವರು ಮಹಾಧ್ವರಕ್ಕೆ ಮನಸ್ಸು ಮಾಡಿದರೆ, ಅದು ಸಾಧ್ಯವಾಗಲಾರದು. ಸರ್ಪಶಾಯಿಯ ಪಾದಾರ್ಪಣಗಳನ್ನು ಒಪ್ಪದ (ಇಂತಹ) ಮೂಢರು ವಿಷಯ ಮೂಲವಾದ ಅನಂತ ದುಃಖಗಳನ್ನು ಉಣ್ಣುತ್ತಾರೆ.

೧೯. ನಿನ್ನನ್ನು ಅರ್ಚಿಸದ ಕೀರ್ತಿಸದ ಸ್ತುತಿಸದ ಮನುಷ್ಯರು ಮಹಾದುರಾಸೆಯುಳ್ಳವರಾಗಿ, ಮದಾಂಧ ಪರ್ವತವನ್ನೇರಿ, ಘೋರವಾದ ಕಾಲ ಕಲ್ಪದೊಳಗೆ ಜಿಗಿಯುತ್ತಾರೆ. ಅಂತಹವರು ಯಾವಾಗಲೂ ಅಲ್ಲಿಂದ ಮೇಲೆ ಬರಲಾರರು. ಆ ಕೌತುಕವನ್ನು ಏನೆಂದು ಹೇಳಲಿ!

೨೦. ನಿನ್ನ ನಾಭಿ ಸರೋಜನಂದನವಾಗಿ ಜನಿಸಿದ ನಾನು ನೀನೇ ಕಲ್ಪಿಸಿದ ಕಾಲಮೃತ್ಯುವಿಗೆ ಹೆದರಿ ನಡುಗುತ್ತಿದ್ದೇನೆ. ನಾನು ನಿನ್ನದೇ ಸ್ತುತಿಯಿಂದಾಗಿ ಭಕ್ತಿಯುಳ್ಳವನಾಗಿದ್ದೇನೆ. ಕಾಲದ ಶ್ರೀ ಮುಖವನ್ನು ನೋಡಿದ ಮೇಲೆ ಹೆದರದ ಆಢ್ಯರಾದರೂ ಯಾರಿದ್ದಾರೆ?

೨೧. ಕಾಲಕರ್ಮವೆಂಬ ಜಂಜಡವನ್ನು ಮೊದಲೇ ಬುದ್ಧಿಯಿಂದ ಖಂಡಿಸಿದ ಜನರು ಮೂಲ ವಿದ್ಯೆಯನ್ನು ತಿಳಿದ ಸಾಧುಗಳ ಆಲಯದಲ್ಲಿ ಭಕ್ತಿಯಿಂದ ಓಲಗಿಸುತ್ತ ವಿರಾಜಿಸುತ್ತಾರೆ. ಭಕ್ತರಾದವರು ಪಿಶಾಚಿಯಾಗಿರುವುದು ದುಃಖವೆಂದು ತಿಳಿಯುತ್ತಾರೆ.

೨೨. ವಿರಿಂಚಿದಾದ್ಯರನ್ನು ನೀನು ಸೃಷ್ಟಿಸಿ, ವಿಶಿಷ್ಟ ಕರ್ಮಗಳನ್ನು ಸಲ್ಲಿಸಿರುವೆ. ಅಷ್ಟ ದಿಕ್ಪಾಲಕರಾಗಿ ಲೋಕವನ್ನು ಅವರು ಪರಿಪಾಲಿಸುತ್ತಿರುವುದು ಅದ್ಭುತವೇ ಸರಿ. ಈಶ್ವರಾಕೃತಿಯಾಗಿ ನೀನು ತ್ರೈಗುಣಕರ್ಮವನ್ನು ನಷ್ಟಗೊಳಿಸುತ್ತೀಯ. ನಿಯಮಿತವಾಗಿ ನಡೆಸುವ ಶ್ರೀಹರಿಯ ವಿಷ್ಮರಕ್ಕೆ ನಮಸ್ಕಾರಗಳು!

೨೩. ಸುರ-ನರ-ಅಧಮ ಯೋಗಸಂತತಿಯಲ್ಲಿ (ಬಂದು) ಅವತಾರವೆತ್ತಿ ಕೃಪೆವೆತ್ತು ನಿರ್ಜರರಿಗೆ ಕರ್ಮಕಂಟಕ ಜಾತಿಯನ್ನು ಪರಿಹರಿಸಿ ವಿಲಾಸ ವಿಭ್ರಮವನ್ನು ಮೆರೆದೆ. ಲೋಕವಲ್ಲಭನೇ - ಸತ್ಕ್ರಿಯಾಚರಿತ ಭೇದ ವಿಹೀನನಾದ ಶಾಶ್ವತ ಮೂರ್ತಿಯೇ – ನಿನಗೆ ನಮಸ್ಕಾರ ಸ್ವಾಮಿ!

೨೪. ಮೂರು ಲೋಕವೆಲ್ಲವನ್ನೂ ಉದರದಲ್ಲಿ ಸ್ಥಾಪಿಸಿದ ಜಗನ್ಮಯವೇ ಈ ಜಗತ್ತೆಲ್ಲವನ್ನೂ ನಾಭಿ ಸರೋರುಹದಲ್ಲಿ ನೀನು ಸೃಷ್ಟಿಸಿದ್ದೀಯ. ಜನನಕ್ಕೆ ಬಂದು ಏನು ಫಲವೆಂದು ತಿಳಿಯದ ದುರಾತ್ಮಕವಾದ ತನ್ನ ನಿಜ ಪುತ್ರರಿಗೆ ತಂದೆಯು ಬುದ್ಧಿ ಹೇಳುವಂತೆ (ನನಗೆ) ಪ್ರಸಾದಿಸು.

೨೫. ಸ್ವಾಮೀ! ನೀನು ನನ್ನನ್ನು ಕಟಾಕ್ಷ ದೃಷ್ಟಿಯಿಂದ ಈಕ್ಷಿಸಿ, ವಿನಯದಿಂದ ಉಪಚರಿಸಿ ಭಯ ನಿರ್ಮೂಣ ಮಾಡಿ, ಉಪಚಾರಿಸಿ ರಕ್ಷಿಸಬೇಕು. ಮುಕುಂದನೇ ನಾನು ಆತ್ಮತಲದಲ್ಲಿ ನಿನ್ನನ್ನು ವರ್ಣಿಸುವುದಕ್ಕೆ ತಿಳಿಯಲಾರೆ ಎಂದು ಮತ್ತೊಮ್ಮೆ ಆತನ ಪದಕ್ಕೆ ಅನುರಾಗ ಭಯದಿಂದ ಬ್ರಹ್ಮನು ಅಭಿನಂದಿಸಿದನು.

೨೬. ಹೀಗೆ ಅಭಿನಂದಿಸಿದ ಬ್ರಹ್ಮನತ್ತ ನಸುನಗುತ್ತ ಇಂದ್ರಾಭಿವಂದ್ಯರಾದ ಶ್ರೀಹರಿಯು ಮಕುಟದಲ್ಲಿ ಹಿಡಿದು ಕೈಯಿಂದ ಬರಸೆಳೆದುಕೊಂಡನು. ಮಂದಸ್ಮಿತವಾಗಿ ಕರುಣೆಯಿಂದ ಈಕ್ಷಿಸಿ, ತುಂಬಿ ತುಳುಕುವ ಸಭಾ ಮಧ್ಯದಲ್ಲಿ ಉದಾರತೆಯಿಂದ ಉರಗಾಸನದಲ್ಲಿ ಏರಿಸಿದನು.

೨೭. ಮಗನೇ! ಸರೋಜನೇ! ಇತ್ತ ಬಾ. ಶೋಕಭಯವನ್ನು ಬಿಟ್ಟು ಸುಖಿಯಾಗು. ಪೂರ್ವಾಕೃತಿಯಲ್ಲಿರುವಂತೆ ಜಗತ್‌ಸೃಷ್ಟಿ ವಿಧಾನವನ್ನು ನೀನು ಕಲ್ಪಿಸು. ನಿಗಮಾದಿಗಳನ್ನು ಚೆನ್ನಾಗಿ ತಿಳಿದಿರು. ಸಚರಾಚರಗಳೆಲ್ಲವೂ ಯಥಾಕ್ರಮವನ್ನು ತಪ್ಪದೆ ಬಗೆಯನ್ನೂ ತಿಳಿದಿರುವಂತೆ ಮನಸ್ಸಿನಲ್ಲಿ ಎಚ್ಚರವಾಗಿರು.

೨೮. ಇದು ನನ್ನ ಮಾಯೆಯೆಂದು ದೃಢೀಕರಿಸಿಕೊಂಡು ನೀನು ಎಳ್ಳಷ್ಟೂ ದುಃಖಿಯಾಗದಿರು. ಒಡೆಯನನ್ನು ಸ್ಮರಿಸಿದಾಗ ಬಾಧೆಯುಂಟಾಗದು ಎಂಬುದು ಲೋಕಪ್ರಸಿದ್ಧವು. ನೀರನ್ನು ಹೋಗಲಾಡಿಸಿ, ನಿನ್ನಿಷ್ಟವನ್ನು ಕೈಗೊಳಿಸು (ಹಾಗೆಯೇ) ನನ್ನ ಧ್ಯಾನವನ್ನು ಬಿಡದೆ, ಬಿಳಿದೆನ್ನುವ ಸಾತ್ವಿಕವನ್ನು ಬಿಡದಿರು.

೨೯. ನನಗೆ ಅರ್ಪಿತನೆನಿಸುವ ಸಮಸ್ತ ಕ್ರಿಯೆಗಳಲ್ಲಿಯೇ ನಿನ್ನನ್ನು ತೊಡಗಿಸಿಕೊಂಡಿರು. ಭಯಭಕ್ತಿ ತಳದಿಂದ ಯಾವಾಗಲೂ ನನ್ನ ನಾಮ ಸುಧಾರಸವನ್ನು ವರ್ಜಿಸದಿರು. ನಿನ್ನ ಹೃತ್ಕಮಲದಲ್ಲಿ ನನ್ನನ್ನು ಸೇರಿಸಿಕೊಂಡೇ ನೋಡುತ್ತಿರು. ಭಿನ್ನವಾದುದೇನನ್ನೂ ನೆನೆಸದಿರು. ಯಾವಾಗಲೂ ಸರ್ವಗತ ಎಂದೇ ತಿಳಿದಿರು.

೩೦. ಪಿತಾಮಹನದ ಬ್ರಹ್ಮನೇ! ಭಕ್ತಿ ಪೂರ್ವಕವಾಗಿ ನೋಡಿದರೆ ಏಕತ್ರವಾಗಿರುವವನು ನಾನೇ (ಆಗಿದ್ದೇನೆ) ಕಾಮಾನ್ವೇಶಕರಾದವರಿಗೆ ಮಾತ್ರ ನಾನು ಎಲ್ಲಿದ್ದೇನೆಂದು ತಿಳಿಯಲಾರೆ. ಪೃಥ್ವಿಯು ನನ್ನೊಳಗೆ ನಾನೇ ಪೃಥ್ವಿ ಎಂದು ನಿತ್ಯವೂ ತಾತ್ವಿಕವಾಗಿ ದೃಢತೆಯಿಂದ ಭಜಿಸಿದರೆ, ಮುಂದಕ್ಕೆ ಮುಕ್ತಿಯು ಸಿದ್ಧಿಸುವುದು, ಇದು ಸತ್ಯವು!

೩೧. ಆತ್ಮನು ಬೇರೆ ಎಂದು ಬುದ್ಧಿಯಲ್ಲಿ ವಿಭಿನ್ನವಾಗಿ ನೋಡದೆ, ತತ್ತ್ವವಾಸನೆಯನ್ನು ನನ್ನೊಂದಿಗೆ ಕೂಡಿಯೇ ಮನ್ನಿಸುವುದು. ಇದಕ್ಕೆಲ್ಲವುದಕ್ಕೂ ಈಶ್ವರನೇ ಸನ್ನಿಧಾನವೆಂದು ಉನ್ನತೀಕರಿಸಿದ ನಿಜ ಭಕ್ತರನ್ನು ಭಿನ್ನ ರೂಪಿಣಿಯಾದ ಮಾಯೆಯು ಸಮೀಪಿಸಳು. ಇದನ್ನು ದೃಢವಾಗಿ ನಂಬಿ.

೩೨. ಬಂಧುವೇ ಕೇಳು! ರಜೋಗುಣವನ್ನು ಬಂಧಿಸುವೆನೆಂದು ತಿಳಿಯದಿರು. ಅಂಧನಾಗದೆ ಸದಾ ಬುದ್ಧಿಯಲ್ಲಿ ಎಚ್ಚರಿಕೆಯಿಂದಿರು. ನನ್ನನ್ನು ಭಜಿಸುವ ಭಕ್ತನಿಗೆ ನಾನು ಬಂಧುವು ಎಂದು ಕೌಸ್ತುಭ ಕಂದರನು ಲೋಕಪಿತಾಮಹನನ್ನು ವಿನಯದಿಂದ ಮನ್ನಿಸಿದನು.

೩೩. ನಿಶ್ಚಲಾತ್ಮಕವಾಗಿ ಭಕ್ತಿಯಿಂದ ನನ್ನನ್ನು ಭಜಿಸಿ ಕೇಳುವ, ಮೆಚ್ಚುಗೆಯಿಂದ ಬುದ್ಧಿಪೂರ್ವಕವಾಗಿ ಇದನ್ನು ಉಚ್ಚರಿಸುವ, ಭೂಮಿಯ ಸಮಸ್ತ ಮಾನವರ ಪಾಪವನ್ನು ಖಂಡಿಸಿ, ಇಲ್ಲಿಗೆ (ಅವರನ್ನು) ಸಮಸ್ತ ವಿಭವದಿಂದ ಕರೆತರುತ್ತೇನೆಂದು ಅಚ್ಯುತನು ನಗುತ್ತಾ ಹೇಳಿದನು.

೩೪. ಹೀಗೆ ಹೇಳಿ ಶೇಷಶಾಯಿಯಾದ ಶ್ರೀ ಹರಿಯು ಬ್ರಹ್ಮನಿಗೆ ಮಂದಹಾಸವನ್ನುಂಟು ಮಾಡಿದನು. (ಬಳಿಕ) ಅದ್ಭುತವೆನಿಸುವಂತೆ ತನ್ನ ಶರೀರವನ್ನು ಮರೆಗೊಳಿಸಿದನು. ಪ್ರೀತಿಯಿಂದ ಆತನ ಪದಗಳನ್ನು ತನ್ನ ಆತ್ಮದಲ್ಲಿ ಚಿಂತಿಸಿ, ಕೌತುಕದಿಂದ ಸ್ಮರಿಸಿ, ಭಕ್ತಿವಶದಿಂದ ಅಜನು ಅಲ್ಲಿಯೇ ಕುಳಿತಿದ್ದನು.

೩೫. ಇಲ್ಲಿಗೆ ಶ್ರೀ ಭಾಗವತಾರ್ಥದ ಮೂರನೆಯ ಸ್ಕಂಧದಲ್ಲಿ ಆರನೆಯ ಅಧ್ಯಾಯವಾಯಿತು. ಇದನ್ನು ವಾಚಿಸುವ ಮತ್ತು ಪಠಿಸುವ ಜನಗಳಿಗೆ ಮರಣೋತ್ತರದಲ್ಲಿ ಮುಕುಂದನ ಪದ ತಲದಲ್ಲಿ ಜನ್ಮ ಲಭಿಸುವುದು ಎಂಬುದು ಶಾಸ್ತ್ರ ಪ್ರಮಾಣವು.

ಅಧ್ಯಾಯ ೭

೧. ಯದುವಂಶ ಕುಲೋತ್ತಮನೇ ಕೇಳು! ಕರುಣಾಕರ ಮೂರ್ತಿಯು ಅಧಿಕವಾದ ಸಮುದ್ರದಲ್ಲಿ ಬ್ರಹ್ಮನಿಗೆ ತತ್ತ್ವಾರ್ಥವನ್ನು ಹೇಳಿ ಶರೀರವನ್ನು ಮರೆಸಿದನು. ಆಗ ಬ್ರಹ್ಮನು ಶೋಕಾತುರನಾಗಿ ತನ್ನಲ್ಲಿಯೇ ದುಃಖಿಸುತ್ತಿರುವ ಕಥೆಯನ್ನು ನೀನು (ವಿದುರ) ದೃಢತೆಯಿಂದ ಕೇಳು.

೨. ಕಾಡಿನಲ್ಲಿ ಮಗುವನ್ನು ತಾಯಿ ಬಿಟ್ಟು ಓಡಿಹೋಗುವ ಹಾಗೆ, ಬ್ರಹ್ಮನು ದುಃಖ ವಹ್ನಿಯಲ್ಲಿ ಬಾಡಿಹೋದನು. (ಶ್ರೀ ಹರಿಯು ಮರೆಯಾದ) ದಿಕ್ಕಿಗೆ ಕರಂಜಲಿಯನ್ನು ಮುಚ್ಚಿ ವಂದಿಸಿದನು. ಬೇಡವಾದ ಮೌಢ್ಯಕ್ಕೆ ನಾನು ಸರ್ವಥವಾಗಿ ಅಧಿಕಾರಿಯಾದೆನಲ್ಲ (ಎಂದಲ್ಲದೆ)

೩. ಇನ್ನು ಹೇಳಿ ಏನು ಫಲ? ಆತನ ಅನುಜ್ಞೆಯ ಮೇರೆಗೆ ಕೈಕೊಂಡೆನಲ್ಲ ಎಂದುಕೊಂಡನು. ಆತನು ಹೇಳಿದಂತೆಯೇ ದಂಡನೆಗೊಳಗಾಗಿ ನೋಡಿಯೇ ಬಿಡೋಣವೆಂದು ತೀರ್ಮಾನಿಸಿದನು. (ಬಳಿಕ) ಮಂಡಲಾಕಾರವಾಗಿ ಆವರಿಸಿರುವ ನೀರನ್ನು ಕ್ಷಣಮಾತ್ರದಲ್ಲಿ ಅಪೋಹಿಸಿ, ಆದಿ ಕ್ರಮದಲ್ಲಿಯೇ ಹದಿನಾಲ್ಕು ಲೋಕವನ್ನು ಉಂಟು ಮಾಡಿದನು.

೪. ಸೃಷ್ಟಿಯು ಒಂಭತ್ತು ಪ್ರಕಾರ; ಪ್ರಕೃತೀ ಸೃಷ್ಟಿಯು ಮೂರು ರೀತಿ; ಸೃಷ್ಟಿಯು ಆರು ವಿಧಾನ ಎಂಬೀ ಕ್ರಮವನ್ನು ಆಕೃತಿ ತಪ್ಪದಂತೆ ಹೇಳುತ್ತೇನೆ. ಸೃಷ್ಟಿಯು ಸಾತ್ವಿಕ, ರಾಜ ಮತ್ತು ಅಧಮ ಎಂದು ಕಟ್ಟಳೆಯಿಂದ ಕ್ರಮಗೊಳಿಸಿ, ಆ ಪ್ರಕಾರವಾಗಿ ಬ್ರಹ್ಮನು ಅದರಲ್ಲಿ ವಿಕಾರ ಕಲ್ಪನೆಯನ್ನುಂಟು ಮಾಡಿದನು.

೫. ಅಂತರಂಗದ ವಿವೇಕ ಕಲ್ಪನೆಯಿಂದ ಸ್ಥಾವರಗಳನ್ನುಂಟು ಮಾಡಿದನು (ಬಳಿಕ) ಜೀವ ಜಾತಿಯಾದ ಪಶು, ಸರೀಸೃಪ, ಪಕ್ಷಿ ಶ್ರೋತ್ರ ವಿವೇಕರೇ ಮೊದಲಾದವರನ್ನು ಭಾವಿಸಿ, ಸಮಸ್ತ ಜಂತುಗಳನಲ್ಲದೇ ಸೂತರಾಚರ ಕ್ರಮ ತಪ್ಪದ ಹಾಗೆ ದಶೇಂದ್ರಿಯಗಳನ್ನು ಕಲ್ಪಿಸಿ ಮನುಷ್ಯರನ್ನುಂಟು ಮಾಡಿದನು.

೬. ಜ್ಞಾನ, ಮಹಾಅಜ್ಞಾನ, ಮೋಹ, ಮದ - ಮಾತ್ಸರ್ಯ ದೀನತೆ, ಅಂಧ ತಮಿಸ್ರ, ತಾಮಸ, ವೈರಾಗ್ಯ, ನಿವೃತ್ತಿ, ಹಾನೀ, ಮಹಕ್ಷೀಣ, ದಾರಿದ್ರ್ಯ, ಮೊದಲಾದುವುಗಳನ್ನು ತಪ್ಪದೇ, ಧ್ಯಾನಾತ್ಮಕ ಬೋಧ ಜ್ಞಾನದಿಂದ ಆ ಕಮಲಾಸನನು ಸೃಜಿಸಿದನು.

೭. ಸನಕ-ಸನಂಜನರು, ಸನತ್ಕುಮಾರ - ಸುಜಾತಾಖ್ಯರೇ ಮೊದಲಾದ ಮಕ್ಕಳು, ಉರ್ಧ್ವ ಸುರೇತಸರು, ಮುನಿಮಾನಸ ಪುತ್ರರೂ ಜನಿಸಿದರು. ತಾನು ಹೇಳಿದ ಮಾತನ್ನು ಕೇಳದಿರುವಾಗ, ರೋಷಾನ್ವಿತನಾಗಿ ತನ್ನ ಹಣೆಯ ತಲದಲ್ಲಿ ಮನೆದಿಚ್ಛೆಯಂತೆ ಈಶ್ವರನನ್ನು ಸೃಷ್ಟಿಸಿದನು.

೮. ಏಕಾದಶಿ ರುದ್ರರನ್ನು ಸೃಷ್ಟಿಸಲಾಗಿ, ಅವರಿಂದ ಲೋಕೋತ್ತರವಾಗದಾಯಿತು. ಭೂತಾಧಿಪರಾದ ಭೃಗ್ವಾದಿಗಳೇ ಮೊದಲಾದ ಹತ್ತು ಕುಮಾರರನ್ನು ಸೃಷ್ಟಿಸಿದರು. ಆಮೇಲೆ ಭೂಪಾಲಕರು ಪರಿಪಾಲಕರಾಗಿ ವರ್ಧಿಸಿದರು.

೯. ಅವನಿಪತಿಯೇ ಕೇಳು! ಆದಿಯಲ್ಲಿ ಮರೀಚಿ, ಅತ್ರಿ, ಅಂಗೀರಸರನ್ನೂ ಸೃಷ್ಟಿನಾಥನು ಸೃಜಿಸಿದನು. ಹಾಗೆಯೇ ಪುಲಸ್ತ್ಯ, ಕ್ರತುಪುಲಹ, ಭೃಗು, ವಸಿಷ್ಠ, ದಕ್ಷ ನಾರಾದಾದ್ಯರನ್ನು ಸೃಷ್ಟಿಸಿ ಹೀಗೆ ವಿರಿಂಚಿಯು ಕಟ್ಟಳೆಯನ್ನು ನಡೆಸಿದನು.

೧೦. ಊರುವಿನಿಂದ ನಾರದವನ್ನೂ, ಉಂಗುಷ್ಠದಿಂದ ದಕ್ಷನನ್ನೂ ಸೃಷ್ಟಿಸಿದನು. ವಶಿಷ್ಠನನ್ನು ಪ್ರಾಣದಿಂದಲೂ ಭೃಗುವನ್ನು ಕರದಿಂದಲೂ ಸೃಷ್ಟಿಸಿದನು. ಆತನ ಸುಳಿನಾಭಿಯಲ್ಲಿ ಪುಲಹನೂ, ಶ್ರವಣದಲ್ಲಿ ಪುಲಸ್ತ್ಯನೂ ಜನಿಸಿದರು. ಧೀರನಾದ ಅತ್ರಿಯೂ ಮನಸ್ಸಿನಲ್ಲಿಯೂ ಅಂಗೀರಸಾಖ್ಯನು ಮುಖದಿಂದಲೂ ಜನಿಸಿದರು.

೧೧. ತನ್ನ ಛಾಯೆಯಿಂದ ಕರ್ದಮನುದಿಸಿದನು. ಶರೀರದಿಂದ ಮನು ಮತ್ತು ಶತರೂಪೆಯರು ಜನಿಸಿದರು. ಆತನ ತನಯನು ಪ್ರಿಯವ್ರತನು. ಆತನ ಅನುಜನೇ ಉತ್ತಾನಪಾದನು. ಅವರನುಜರು ದೇವಹುತಿ ಹಾಗೂ ಪ್ರಾಸೂತಿ ಎಂಬವರು.

೧೨. ವಿಪ್ರರಿಗಾಗಿ ನಾಲ್ಕು ವೇದಗಳನ್ನು ಸೃಷ್ಟಿಸಿದರು. ವೇದಗಳಲ್ಲಿ ಆಯುಸ್ ಧನುರ್ವಿವರ ಮಾತ್ರವಲ್ಲದೆ ಗಾಂಧರ್ವವೂ ಇದೆ. ವೇದಗಳಲ್ಲಿ ಪುರಾಣ, ಇತಿಹಾಸ, ಕಥೆಯಲ್ಲದೆ ಪಂಚಮವೇದನೆನಿಸಿದ ಮಹಾಭಾರತವೂ ಇದೆ. ವೇದಗಳಲ್ಲಿ ಯಾಗ, ಅಗ್ನಿಸ್ತೋಮ, ವಾಜ್ಯ ಮೊದಲಾದವೂ ಇವೆ.

೧೩. ಆತನು ಕರ್ಮಗಳನ್ನು ಸೃಷ್ಟಿಸಿದನು. ಧರ್ಮಾ, ಪದ, ತಪ, ಶೌಚ, ಸತ್ಯ, ಧರ್ಮ, ದಯೆಗಳೆಂಬ ಕರ್ಮಗಳನ್ನು ಸೃಷ್ಟಿಸಿದನು. ಧರ್ಮ, ಅಧರ್ಮ, ಕಾಮ ಮತ್ತು ಮೋಕ್ಷಗಳೆಂಬ ಚತುರಂಘ್ರಿಗಳನ್ನು ಆತನು ಹಿಂದೆಯೇ ಸೃಷ್ಟಿಸಿದನು. ಅದಲ್ಲದೆ ಚತುರಾಶ್ರಮಗಳಿಗೆ (ಸಂಬಂಧಿಸಿದ) ವರ್ಣ ಧರ್ಮಗಳನ್ನು ಮಹಲೋಕ ಹಿತಾರ್ಥವಾಗಿ ನಿರ್ಧರಿಸಿದನು.

೧೪. ಪಶು, ಮಹಿಷ, ಸೂಕರ, ಕೃಷ್ಣಮೃಗ, ಆಡು, ಗವಯ ಮೊದಲಾದ ಮೃಗಗಳನ್ನು ಸೀಳುಗೊರಸಿನ ಪ್ರಾಣಿ ವರ್ಗದಲ್ಲಿ ಸೃಷ್ಟಿಸಿದನು. ಕತ್ತೆ, ಹಯ, ಶರಭಾದಿ ಸಮೂಹಗಳನ್ನು ಆ ಕಮಲಾಸನನು ಇಡಿಗೊರಸಿನ ಪ್ರಾಣಿ ವರ್ಗದಲ್ಲಿ ಕಲ್ಪಿಸಿದನು. ಇನ್ನು ನಾನಾ ಪಂಚನಖಾದಿಗಳಿರುವ ನಾನಾ ಪ್ರಾಣಿ ವಿವರವನ್ನು ಕೇಳು.

೧೫. ನಾಯಿ, ಹುಲಿ, ಸಿಂಹ, ಆಮೆ, ತೋಳ, ಆನೆ, ಮೀನು, ಉಡ, ಮೊಲ, ಹದ್ದು, ಶ್ಯೇನಗಳು ಕೋತಿ, ಬೆಕ್ಕು, ಹುಂಜ, ಕರಡಿ, ವಲ್ಲೂಖ, ಬರ್ಹಿಗಳು; ನರ, ಹಂಸ, ಚಕೋರ, ಚಕ್ರವಾಕ, ಗೂಗೆಗಳು;

೧೬. ದೇವ ಸೃಷ್ಟಿ, ಭೂತಸೃಷ್ಟಿ, ಪಕ್ಷಿ, ಪ್ರಾಣಿ, ಮೃಗಗಳು; ದೇವ, ಗಂಧರ್ವ, ಅಪ್ಸರ, ಉರಗ, ಯಕ್ಷ, ರಾಕ್ಷಸ, ಗುಹ್ಯರೇ ಮೊದಲಾದವರನ್ನು ಆತನು ಭಾವಿಸಿ ಆದಿಯಲ್ಲಿಯೇ ಸೃಷ್ಟಿಸಿದನು. ಇವೆಲ್ಲವನ್ನು ಕೇಳಿ ಚೆನ್ನಾಗಿ ವರ್ಣಿಸುವವರು ಯಾರು ಎಂದು ಶ್ರೀ ಶುಕಯೋಗಿಯು ಹೇಳಿದನು.

೧೭. ಹೀಗೆ ಸಚರಾಚರಗಳನ್ನು ಆದಿ ಕ್ರಮದಲ್ಲಿಯೇ ಪರಿಕಲ್ಪಿಸಿ, ಕೃತ, ತ್ರೇತಾ, ದ್ವಾಪರ, ಕಲ್ಕಿ ಎನ್ನುವ ನಾಲ್ಕು ಯುಗಗಳನ್ನು ಕಲ್ಪಿಸಿದನು. ಹೀಗೆ ಆದಿಯುಗಗಳನ್ನು ನಾಲ್ಕು ಸಾವಿರ, ಮೂರು ಸಾವಿರ, ಎರಡು ಸಾವಿರ ವರ್ಷಗಳಲ್ಲಿ ಕಲ್ಪಿಸಿದನು. ಹಾಗೆಯೇ ಎರಡು ಸಾವಿರದಿಂದ ದ್ವಾದಶಗಳ ವರೆಗೆ ಈ ವಿಧವಾಗಿ ಯುಗಸಂಧಿಯನ್ನು ಪರಿಕಲ್ಪಿಸಿದನು.

೧೮. ನೃಪಾಲನೇ! ಪೂರ್ವಯುಗದಲ್ಲಿ ಧರ್ಮವು ಚತುರಂಘ್ರಿ ಯುಕ್ತವಾಗಿ, ತ್ರೇತಾಯುಗದಲ್ಲಿ ತ್ರೈಯಾಂಘ್ರಿಯುಕ್ತವಾಗಿ, ದ್ವಾಪರದಲ್ಲಿ ದ್ವಿಪಾದಯುಕ್ತವಾಗಿ ಮತ್ತು ಕಲಿಗಾಲದಲ್ಲಿ ಏಕಾಂಘ್ರಿಯಾಗಿ ಇರುತ್ತದೆ ಎಂದು ತಿಳಿದಿರು. ಈ ರೀತಿಯಾಗಿ ಧರ್ಮದ ಸ್ಥಿತಿಯನ್ನೂ ಆತನು ತನ್ನ ಮತಿಯಾಜ್ಞೆಯಿಂದ ಬಂಧಿಸಿದನು.

೧೯. ಏಕಸಪ್ತತಿಯಾಗಿ ಈ ನಾಲ್ಕು ಯುಗಗಳು ನಾಶವಾಗುವ ವರೆಗೆ ಹದಿನಾಲ್ಕು ಮನುಕ್ರಮವಾಗಿ ಏಕರಾಜ್ಯ ಪರಿಪಾಲನೆಗೈಯ್ದರು. ಈ ರೀತಿಯಾದ ಯುಗವು ಪೂರ್ಣವಾದಾಗ ಚತುರ್ಮುಖನಿಗೆ ಒಂದು ಹಗಲಾಗುತ್ತದೆ. ಹಗಲು ಕಳೆದು ಒಂದು ರಾತ್ರಿಯಾದಾಗ, ಅದು ಶ್ರೀಹರಿಗೆ ನಿಮಿಷಾರ್ಧವಾಗುತ್ತದೆ.

೨೦. ಹೀಗೆ ವರ್ಧಿಸಿದ ಐವತ್ತು ಕೋಟಿ ಅಜಾಂಡಗಳು ಆ ಪರಮೇಶ್ವರನ ಸಂಚಯಿತ ರೋಮ ಕೂಪಗಳಡಿಯಲ್ಲಿ ಮುಳುಗಿವೆ. ಸ್ವಾಮಿಯ ಶರೀರದಲ್ಲಿರುವ ರೋಮಗಳ ತುದಿಯಲ್ಲಿರುವ (ಲೋಕಗಳ) ಸಂಖ್ಯೆಯನ್ನು ಯಾರು ತಾನೇ ಬಲ್ಲರು? ಇದನ್ನು ಬ್ರಹ್ಮನೂ ಕೂಢ ತಿಳಿದಿರಬಹುದೆಂಬುದರಲ್ಲಿ ಸಂಶಯವಿದೆ.

೨೧. ಈ ಪ್ರಕಾರವಾಗಿ ಸರ್ವಜಂತುಗಳನ್ನು ಸೃಷ್ಟಿಸಿದ ಬ್ರಹ್ಮನನ್ನು ಸುಪ್ರತಿಷ್ಠನಾದ ಶ್ರೀಹರಿಯು ತಾನೇ ಯಾವಾಗಲೂ ರಕ್ಷಿಸುತ್ತಾನೆ. ಅಂತ್ಯದಲ್ಲಿ ಲೋಚನಾಗ್ನಿಯಿಂದ ಈಶ್ವರನು ಸಂಹರಿಸುತ್ತಾನೆ. ಈ ಪ್ರಕಾರವಾಗಿ ಸೃಷ್ಟಿಯ ಸ್ಥಿತಿಯು ನಿತ್ಯವೂ ನಶಿಸುವುದು.

೨೨. ನಿತ್ಯನೂ ನಿರ್ಮೂಲ ವಸ್ತುವೂ, ನಿರ್ವಚನೂ ಆಗಿ ಮಾಯಾಮಹಿಮನು ವಿರಾಜಿಸಿದನು. ಸತ್ತ್ವ, ರಾಜಸ, ತಾಮಸಗಳೆಂಬ ಅಂಗ ಪ್ರವೃತ್ತಿಯನ್ನು ಆತನು ಧರಿಸಿದನು. ಕರ್ಮಕೃತಗಳು ಆತನಲ್ಲಿ ವಿನೋದಿಸಿ ನಲಿಯುತ್ತಾ ವರ್ತಿಸುತ್ತಿವೆ. ಆ ನಿರ್ಮಲ ವಸ್ತುವನ್ನು ತಿಳಿದ ಮನುಷ್ಯನಿಗೆ ಯಾವಾಗಲೂ ನಿರ್ಭಯತ್ವ ಇರುತ್ತದೆ. ಇದನ್ನು ಚೆನ್ನಾಗಿ ತಿಳಿದಿರು.

೨೩. ಭೂಪನೇ ಈ ಕೌತುಕವನ್ನು ಕೇಳು! ಹೀಗೆ ನಿರ್ಮಿಸಿದ ಲೋಕವು ಆದಿಯಲ್ಲಿ ನೀರಿನಲ್ಲಿ ಮುಳುಗಿ ಹೋಗುತ್ತಿರಲು, ಸರ್ವ ಸುರಾಸುರರೂ ಆದಿಯಲ್ಲಿ ದುಃಖಿಸಲಾರಂಭಿಸಿದರು. ಆಗ, ವಿರಿಂಚಿಯ ನಾಸಿಕದಲ್ಲಿ ಶ್ರೀ ಹರಿಯು ಹಂದಿಯ ರೂಪದಲ್ಲಿ ಉದಿಸಿ, ಹಿಂದಿನ ಹಾಗೆಯೇ ಸ್ಥಾಪಿಸಿದನು.

೨೪. ಇನ್ನು ಆದಿರಾಜನ ಪ್ರಸಂಗವನ್ನು ಹೇಳುತ್ತೇನೆ, ಅವಧಾನಿಸು. ಏಕಾಲೋಚನೆಯಾದ ಶತರೂಪೆಯಲ್ಲಿ, ಭೂಮಿಪಾಲನೆಗಾಗಿ ಆತನು ಜನಿಸಿದನು. ಆತನಿಗೆ ಇಬ್ಬರು ಮಕ್ಕಳು, ಆ ಹುಡುಗರಿಗೆ ಕನ್ಯಕೆ ಮತ್ತು ತ್ರಿತಯೆ ಎಂಬಿಬ್ಬರು ಸೋದರಿಯರು.

೨೫. ಮೂವರಿಗೂ ಜ್ಯೇಷ್ಠಳಾದ ಸುಂದರಿ ಅಕೂತಿಯನ್ನು ದೈವಿಕನಾದ ರುಚನೆಂಬ ವಿಪ್ರನಿಗೆ ಮನುವು ಧಾರೆಯೆರೆದನು. ಆಕೆಯು ಆತನನ್ನು ಸೇವಿಸಿ ಕೂಡಲಾಗಿ ಯಜ್ಞಪುರುಷನು ಜನಿಸಿದನು. ಆತನು ದೇವರಾಜ ಮಹತ್ತ್ವವನ್ನು ನೆಟ್ಟನೇ ಪರಿಪಾಲಿಸಿದನು.

೨೬. ಯಜ್ಞಪುರುಷನ ವಲಭೆಯು ಗುಣಾಜ್ಞೆಯಾದ ದಕ್ಷಿಣೆಯು. ಅವರುಗಳಿಗೆ ತುಷ್ಟಿಕರೇ ಮೊದಲಾದ ದಶಪುತ್ರರು ಜನಿಸಿದರು. ಅವರೆಲ್ಲರೂ ಯಜ್ಞಭಾಗವನ್ನು ಸೇವಿಸುತ್ತ ಇಂದ್ರಲೋಕವನ್ನು ಸೇರಿಕೊಂಡಿದ್ದರು. ವೀರನೇ! ಅವರ ಮುಂದಣ ಕಥೆಯನ್ನು ತಪ್ಪದೇ ಹೇಳುತ್ತೇನೆ.

೨೭. ಮುಂದೆಣ ಕಥೆಯನ್ನು ಕೇಳು. ಆಕೆಯಿಂದಲೂ ರೂಪಾತಿಶಯವೆನಿಸಿದವಳು ಭಾಗ್ಯಕುಮಾರಿ ದೇವದೂತಿಯ ಕಥೆಯನ್ನು ಕೇಳು. ಆಕೆಯುದರಲ್ಲಿ ಶ್ರೀಹರಿಯು ಹುಟ್ಟಿಬಂದು, ಕಪಿಲಾಂಕನೆನಿಸಿ, ತಾಯಿಯ ಅಂಧತೆಯನ್ನು ಕಳೆದನು.

೨೮. ಮೂವರಿಂದಲೂ ಹೆಚ್ಚು ಸುಂದರಿಯಾಗಿ ಶೋಭೆಯುಳ್ಳವಳೂ, ಗುಣಾಢ್ಯೆಯೂ ಆದ ಮಗಳನ್ನು ಪರಮೇಷ್ಠಿ ನಂದನನಾದ ಆ ವಿಭುವು ದಕ್ಷನಿಗೆ ಕೈಗೊಳಿಸಿದರು. ಹೀಗೆ ಶೋಡಶ ಅಂಗನೆಯರಲ್ಲಿ ಕೊನೆಯವಳಾದ ದೈವಿಕೆ ಎಂಬವಳನ್ನು ಈಶ್ವರನು ಕೈಗೊಂಡನು.

೨೯. ಹೀಗೆ ವರ್ಧಿಷ್ಣುಗಳಾದ ಮೂವರು ಹೆಣ್ಣುಮಕ್ಕಳಿಗಿಂತ ಅತಿ ಜ್ಯೇಷ್ಠನೆನಿಸಿದ ಉತ್ತಾನಪಾದನು ಮನ್ಮಥೋತಮನು. ಸುನೀತಿ ಮತ್ತು ಸುರುಚಿಯರೆಂಬ ಗುಣವತಿಯರನ್ನು ಆತನು ವಿವಾಹವಾದನು. ಅವರಿಗೆ ಉತ್ತಮ ಹಾಗೂ ಧ್ರುವ ಎಂಬ ಕುಮಾರಕರು ಜನಿಸಿದರು.

೩೦. ಮುಂದೆ ಕೇಳು. ಪ್ರಿಯವ್ರತನೆನಿಸುವ ಭೂಪ ಶಿಖಾಮಣಿಯೋರ್ವನು ಈ ಹಿಂದೆ ಭೂಮಿಯಲ್ಲಿ ಯಾರೂ ನೋಡಿಲ್ಲವೆನಿಸುವಂತೆ ಬೆಳಗಿದನು. ಆತನ ಕ್ಷಾತ್ರ ಗುಣಗಳಿಗೆ ಎಣೆಯಾದವರು ಯಾರೂ ಇಲ್ಲ. ಆತನು ತನ್ನ ಕ್ಷೇತ್ರ ತೇಜಸ್ಸಿಗೆ ಸಪ್ತಸಾಗರ ದ್ವೀಪಗಳನ್ನೇ ಎಲ್ಲೆ ಮಾಡಿದವನಾಗಿದ್ದಾನೆ.

೩೧. ಆದಿ ಸೃಷ್ಟಿ, ಅಪಾತ್ಮಸೃಷ್ಟಿ, ಭೂತಪಂಚರ ಸೃಷ್ಟಿ, ಆದಿರಾಜನಾದ ಯಮ, ಭೃಗು, ಪ್ರಜಾಪತಿ, ಸಚರಾಚರ ಎಂದು ವಿಭಾಗಿಸಿ, ವಿವರಿಸಿದ ಈ ಕಥೆಯಲ್ಲಿ ಇಲ್ಲಿಗೆ, ತೃತೀಯ ಸ್ಕಂಧದಲ್ಲಿ ವೇದ ಸನ್ಮತವಾಗಿ ರಚಿಸಿದ ಏಳನೆಯ ಅಧ್ಯಾಯ ವಿರಾಜಮಾನವಾಯಿತು.

ಅಧ್ಯಾಯ ೮

೧. ಹೇಗೆ, ಸೂತ ಪುರಾಣಿಕನೇ! ಕೇಳುವುದಕ್ಕೆ ಅದ್ಭುತವಾಗಿದೆಯಲ್ಲವೇ? ಬುದ್ಧಿಯಲ್ಲಿ ಚಂಚಲತೆಯುಂಟಾಗಿ ಅನೇಕರೀತಿಯಲ್ಲಿ ಜ್ಞಾನದಾಹವುಂಟಾಗಿದೆ. ಪಂಚಭೂತಮಯವಾದ ಸೃಷ್ಟಿಯನ್ನು ಈ ಕಥೆಯು ಶುದ್ಧಗೊಳಿಸಲಿ ಎಂದು ಆದಿಸೂಕರನು ಹುಟ್ಟಿದ ಸ್ಥಿತಿಯನ್ನು ಕೇಳಲೋಸುಗ ಪ್ರಾರ್ಥಿಸಿದರು.

೨. ವೇದಜ್ಞರಾದ ಬ್ರಾಹ್ಮಣ ಸಂಘಗಳು ಈ ಕಥೆಯನ್ನು ಆಲಿಸಿರಿ. ಸೂತ ಪೌರಾಣಿಕನು ಪೌರಾಣಿಕ ಕಥೆಯನ್ನು ಆದರಿಸಿ ಹೇಳುತ್ತ " ಆ ದಯಾನಿಧಿಯ ಪುಣ್ಯನಾಮವನ್ನು ಕೇಳಿ ದೇಹ ಪೂಜಿಸಿದರೆ, ದುಃಖವು ಶಮನವಾಗುತ್ತದೆಯಲ್ಲವೇ ಶ್ರೀ ಶುಕರಾಯರ ಮುನಿಯೇ" ಎಂದನು.

೩. ಚಂದ್ರವಂಶ ಶಿಖಾಮಣಿಯಾದ ಪರೀಕ್ಷಿತ ಮಹಾರಾಜನೇ ಈ ಕಥೆಯನ್ನು ಆಲಿಸು. ಚಂದ್ರನು ಮೂಡುತ್ತಿರಲು ವರ್ಧಿಸುವ ಸಮುದ್ರದ ತರಂಗಗಳು ಸಾಂದ್ರವಾಗುವ ರೀತಿ, ಪುಣ್ಯನಾಮ ಸುಧಾರಸ ಸಾರವನ್ನು ತಿಳಿದಷ್ಟು ನಾನು ರಚಿಸುತ್ತೇನೆ ಎಂದು ಶುಕ ಮುನಿಯು ಹೇಳಿದುದನ್ನು ಆತನು ವಿದುರನಿಗೆ ಹೇಳಿದನು.

೪. ಆದಿಯಲ್ಲಿರುವ ಸೃಷ್ಟಿಯ ಭೇದ ಕಲ್ಪನೆಯೆಲ್ಲವನ್ನೂ ಶ್ರೀ ಮುನೀಶ್ವರ ತನ್ನ ಬುದ್ಧಿ ಗೋಚರವೆನಿಸಿದಂತೆಯೇ ಹೇಳಿದನು. ಆದಿಸೂಕರನುದ್ಭವ ಸ್ಥಿತಿಯನ್ನು ಕೇಳುವುದಕ್ಕೆ ಈ ಕಿವಿಗಳು ಸಾಕಾಗಲಾರವು. ನಾಲಗೆಯೂ ಸಾಕಾಗಲಾರದು ಎಂದು ವಿದುರನು ಹೇಳಿದನು.

೫. ಎಂದು ಹೇಳಲು ಅದನ್ನು ಕೇಳಿದ ಮೈತ್ರೇಯನು ಆನಂದಿಸಿದನು. ತನ್ನಲ್ಲಿಯೇ ಯೋಚಿಸಿ ಆತನು ಅವತಾರ ವಿಶೇಷವನ್ನು ಹೇಳ ತೊಡಗಿದನು. ನೀನು ಧನ್ಯ! ನಿನ್ನ ಚೋದ್ಯವು ಅದ್ಭುತವಾದುದು. ಪ್ರಜೆಗಳಿಗೆಲ್ಲ ಹಿತಾರ್ಥವಾದುದು ಪೂರ್ಣಾತ್ಮಕನೇ ಕೇಳು! ವರಾಹವತಾರವನ್ನು (ಕಥೆಯನ್ನು) ಹೇಳುತ್ತೇನೆ.

೬. ಹಿಂದೊಂದು ದಿನ ತಾವರೆಯ ಮೇಲೆ ಕುಳಿತ ಬ್ರಹ್ಮನು ಸೃಷ್ಟ್ಯುದ್ಭವಕ್ಕೆಂದು ಮನದಲಾಲೋಚಿಸಿ, ಕುಳಿತಿದ್ದನು. ಆಗ ಆತನ ನೆರಳಿನಿಂದ ಸ್ವಾಯಂಭು ಸಮೇತವಾಗಿ ಇಬ್ಬರುದಿಸಿದರು. ಲೋಕಹಿತಾರ್ಥವಾಗಿ ಜನಿಸಿದ ಅವರಿಗೆ ಬಿಂಬಾಧರೆಯೆಂದೂ, ಶತಕೂಪೆಯೆಂದೂ ನಾಮಕರಣವಾಯಿತು.

೭. ಸ್ವಾಯಂಭು ಮನು ಹಾಗೂ ಶತರೂಪೆರ ಕಾರ್ಯವನ್ನು ನೋಡಿ ಬ್ರಹ್ಮನು ಹರ್ಷಗೊಂಡು (ಹೀಗೆಂದು) ದೈವಾಜ್ಞೆಯನ್ನು ಹೇಳಿದನು. "ನೀನು ಉಧಿಸಿದ ಮೇಲೆ ನನಗೆ ಸಂತೋಷವಾಗಿದೆ. (ನೀನು) ನರಭೂಮಿಗೆ ಹೋಗಿ ಅನಾಯಾಸವಾಗಿ ಸಂತಾನವೃದ್ಧಿಯನ್ನು ಮಾಡು"

೮. ಹಾಗೆಯೇ ಆಗಲಿ! ಎಂದು ಅವರು ಬ್ರಹ್ಮನಿಗೆ ಉದ್ದಂಡ ಪ್ರಣಾಮಗಳನ್ನು ಮಾಡಿದರು. (ಬಳಿಕ) ನಮಗಿರುವುದಕ್ಕೆ ಭೂಮಿಯಾದರೂ ಎಲ್ಲಿದೆ? ಎಲ್ಲವೂ ನೀರಿನಲ್ಲಿ ಮುಳುಗಿ ಹೋಗಿದೆಯಲ್ಲ ಎಂದು ಕೇಳುತ್ತಿರಲಾಗಿ ಆ ಕಮಲಾಸನನು ದುಃಖಿಗೊಂಡನು.

೯. ಆದಿಯಲ್ಲಿ ನೀರನ್ನು ಲಯಗೊಳಿಸಿ ಅಜಾಂಡನನ್ನು ಸೃಷ್ಟಿಗೊಳಿಸಿದೆನು. (ಹೀಗೆ) ಸೃಷ್ಟಿಸಿದ ಭೂಮಿಯನ್ನು ದೈತ್ಯನೊಬ್ಬನು ಕದ್ದುಕೊಂಡು ಹೋದನು. ಹೇಳಿ ಏನು ಪ್ರಯೋಜನ? ನನ್ನ ಬಿನ್ನಪವನ್ನು ಆಲಿಸು. ದಂಡಿಸುವವನ್ನು ಕೊಲ್ಲು. ಎಲ್ಲರೂ ಈ ಯುದ್ಧವನ್ನು ನೋಡಲಿ ಎಂದನು.

೧೦. ಸ್ವಾಮಿ! ಹಿಂದೆ ನಿನ್ನ ಅನುಗ್ರಹದಿಂದಲೇ ಲಯವಾಗಿದ್ದ ಈ ಭೂಮಿಯನ್ನು ಸ್ಥಿರಗೊಳಿಸಿದೆನು. ಚತುರ್ವಿಧ ಸೃಷ್ಟಿಯೆಲ್ಲವೂ ಸಮುದ್ರದಲ್ಲಿ ಒದ್ದೆಯಾಗಿ ಮುಳುಗಿದರೆ ನನಗೆ ಏನು ಗತಿ? ಅಂಬೋ ನಿಧಿ ವಾಸನೇ, ನಮೋಸ್ತು! ಜಯಾ! ಮುಂದಿನ ದಾರಿಯನ್ನು ನೀನೇ ಹೇಳಬೇಕು!

೧೧. ಇಷ್ಟೊಂದು ಸಂಕಟ, ಅನರ್ಥಗಳನ್ನು ಯಾರೊಂದಿಗೆ ಹೇಳಲಿ? ನೀನು ಚೇತನಾತ್ಮಕನೂ, ಸರ್ವ ಸಚರಾಚರಗಳಿಗೆ ಸಾಕ್ಷಿಯೂ ಆಗಿದ್ದೀಯ. ಭೀತಿಯನ್ನು ಹೋಗಲಾಡಿಸಿ, ಕನಿಕರ ಭಾವದಿಂದ ಇವುಗಳನ್ನು ಈಕ್ಷಿಸಬೇಕು. ಭೂತಲವನ್ನು ಉದ್ಧರಿಸುವ ಸನ್ಮತಿಯನ್ನು ನನಗೆ ಕರುಣಿಸು. ನಿನಗೆ ಜಯವಾಗಲಿ! ಎಂದನು.

೧೨. ಅಂಬುಧಿಗೆ ಸದೃಶವಾಗಿ ಸರ್ವ ಸಮೂಹವು ಕೂಡಿರುವ ಮಧ್ಯದಲ್ಲಿ, ಅಂಬುಜಾಸನನು ದುಃಖಿಗೊಂಡು ಕೈಯನ್ನು ಗಲ್ಲಕ್ಕೆ ಕೊಟ್ಟು ಚಿಂತಿಸುತ್ತಿದ್ದನು. ಪುತ್ರ ಸಂಕಟವನ್ನು ತಿಳಿದು ಅಂಬುಜೋದರನ ದೀರ್ಘ ಶ್ವಾಸದಿಂದ ಸೂಕ್ಷ್ಮ ವರಾಹನು ಮೂಡಿ ಬಂದನು.

೧೩. ದೀರ್ಘ ಶ್ವಾಸದಿಂದ ಈ ಮೊದಲು ಸೂಕ್ಷ್ಮ ರೂಪದಿಂದ ಹುಟ್ಟಿದ ವರಾಹವನ್ನು ಸಾಮಾನ್ಯ ದೃಷ್ಟಿಗೆ ನೋಡಲಾಗಲಿಲ್ಲ. ಸಹಸ್ರ ಸೂರ್ಯ ನಿಭಾಂಗನ ಕಾಂತಿಯನ್ನು ನೋಡಿದ ಬ್ರಹ್ಮನು ಕೌತಕಗೊಂಡು ಆಲೋಚಿಸಿದಾಗ ವಿಷ್ಣುಮಾಯೆಯ ಸೂಕರವೆಂದು ನಿಶ್ಚಯವಾಯಿತು.

೧೪. ಹರಿಯೋ ಹರಿ! ಸಮಸ್ತರೂ ವಿಷ್ಣು ಮಾಯೆಯ ಕೌತುಕವನ್ನು ನೋಡಿರೆಂದು ಮೂಗಿನಲಿ ಬೆರಳಿಟ್ಟು ಎಲ್ಲರೂ ಹತ್ತಿರ ಬಂದರು. ಅವರೆಲ್ಲರೂ ತಲೆದೂಗಿ ವಿಸ್ಮಯದಿಂದಿರುವಾಗ, ಆ ಸಭೆಯಲ್ಲಿ ಅಂಗುಷ್ಠ ಪ್ರಮಾಣವಾಗಿ ಕ್ಷಣ ಮಾತ್ರದಲ್ಲಿ ಆ ಸೂಕರವು ಬೆಳೆಯಿತು.

೧೫. ಅಂಗುಷ್ಠ ಪ್ರಮಾಣದಿಂದ ಅದು ಗೂಳಿಯ ಆಕಾರವಾಯಿತು; ಮಾಡುತ್ತಿರುವಾಗಲೇ ಅದು ಆನೆಯ ಆಕೃತಿಯಾಯಿತು; ಬೆಳೆದು ಹಿಮಾದ್ರಿಯಷ್ಟಾಯಿತು; ಅದರ ಅಂಗವು ಸ್ವರ್ಗವನ್ನೂ ಮೀರಿ ಇನ್ನೂ ಮುಂದೆ ಬೆಳೆಯಿತು; ವಿಶಾಲವಾಗಿ ಬೆಳೆಯುವುದನ್ನು ಏನೆಂದು ವಿವರಿಸಲಿ - ಇದೆ ಆದಿವರಾಹವು.

೧೬. ನೋಡುವುದಕ್ಕಿದು ಕೇವಲ ಸೂಕರವೇ. ಹರಿಯ ದಿವ್ಯಾವತಾರವಿದು. ಸನ್ಮತಿಯಿಂದ ನಾನು ನಿರೂಪಿಸಲಾಗಿ ಇದು ನಮ್ಮನ್ನು ರಕ್ಷಿಸಲೆಂದು ಇದು ಉದಯವಾಯಿತು; ಸ್ವಾಮಿ! ಸಮಸ್ತರಿಗೂ ಹಿತವಾಗಲೆಂದು ತ್ರಿದಶಾಧಿಪನಾದ ಬ್ರಹ್ಮನು ವೇದಾಂತ ಮತವಾಗಿ ಆದಿ ವರಾಹವನ್ನು ಸ್ತುತಿಸಿದರು.

೧೭. ಜಗದಾದಿ ಪುರುಷನೇ ಜಯ ಜಯಾ! ಅಖಿಲ ಸನ್ಮತನೇ ಜಯ ಜಯ! ಜಗದೀಶ್ವರನೇ ಜಯ ಜಯ! ಈಶ್ವರ, ಜಗದ್ಗುರು, ಪಾವನನೇ ಜಯಜಯ! ಜಗದಂತರಂಗ ವಿಡಂಬನೇ ಜಯಜಯ! ಮಾಯಾ ಮಹೇಶ್ವರನೇ ಜಯಜಯ! ಜಯ ಜಯ! ಜಯ ಸ್ವಾಮೀ! ಕಾಮಿತ ಸಿದ್ಧಿಪೂರ್ಣನೇ ನಮೋಸ್ತುತೇ!

೧೮. ಪ್ರಳಯಾಂಬುಧಿಯ ಹಾಗೆ ಸಮಸ್ತರೂ ಸ್ತುತಿಸುವುದನ್ನು ಕೇಳಿ ಆತನು ಪ್ರಸನ್ನನಾದನು. "ನೀವೆಲ್ಲರೂ ಹೆದರದಿರೆಂದು" ಕ್ರೋಧ ಸ್ವರೂಪಿಯು ಹೇಳಿದನು. "ಸ್ವಲ್ಪ ತಡೆಯಿರಿ, ಮೇದಿನಿಯನ್ನು ತರುತ್ತೇನೆಂದು ಆತನು ಹೇಳಿ, ಪ್ರಳಯಾಂಬುವಿನಲ್ಲಿ ಆ ನಳಿನಾಯತನಾದ ಶ್ರೀಹರಿಯು ಮುಳುಗಿದನು.

೧೯. ಜಲದೊಳಗೆ ಆತನು ಮುಖವನ್ನು ತಗ್ಗಿಸುತ್ತಿರಲು, ಬ್ರಹ್ಮಾಂಡ ಮಯವಾಗಿ ಕಡಲುಕ್ಕಿದಂತೆ, ತೆರೆಗಳು ಗರ್ಜಿಸಿ ನೀರು ಮೇರೆಮೀರಿತು. ಎಡ -ಬಲದ ಧ್ವನಿಯು ನಾನಾ ದೆಸೆಗೆ ಪ್ರತಿಧ್ವನಿಯಾಯಿತು. ಅತ್ತಿತ್ತ ಸಂಚರಿಸಿ, ಆಘ್ರಾಣಿಸಿ ಭೂಮಿಯನ್ನು ಆತನು ಹುಡುಕಿದನು.

೨೦. ಯೋಗದಲ್ಲಿ ಕಣ್ಮುಚ್ಚಿ ಆತ್ಮಪತಿಯಾದ ಭೂದೇವಿಯನ್ನು ಆ ವರಾಹನು ಹುಡುಕಿದನು. ನಿಂತಲ್ಲಿ ನಿಲ್ಲದೆ ವೇಗವಾಗಿ ಸಂಚರಿಸಿ ಸುತ್ತಾಡಿ ಹುಡುಕಿದನು. ಆಕೆಯನ್ನು ಹುಡುಕಿ ಅನೇಕ ಕಾಲ ಆ ಧರಿತ್ರಿಯೊಡನೆ ಭೋಗದಲ್ಲಿ ಒಂದಾಗಿದ್ದನು. ಭೂತನೇ, ಹರಿಯ ಲೀಲಾವತಾರವನ್ನು ಕೇಳು!

೨೧. ಸಹಸ್ರ ಸೂರ್ಯರಿಗಿಂತಲೂ ಪ್ರಜ್ವಲಿಸುವ ಕರಾಳ ದಾಡೆ; ಮೇರು ನೀಲ ಹಿಮಾದ್ರಿಗೂ ಅತಿಶಯವಾದ ಗಂಡು ಶರೀರ; ಕ್ಷಾರವಾದ ಕಠೋರ ಕೇಸರ; ವಜ್ರರೋಮಗಳುಳ್ಳ ಬಾಲ- ಹೀಗೆ ಭೀಕರನೆನಿಸಿದ ವರಾಹನು ವಿಜೃಂಭಿಸಿದ ನಾದಕ್ಕೆ ಮೂರು ಜಗವೂ ಏಕಕಾಲಕ್ಕೆ ನಡುಗಿತು.

೨೨. ಹಲವು ಕಾಲ (ಹೀಗೆ) ಸುಖಿಸಿ, ಅಲ್ಲಿದ್ದ ಧರೆಯನ್ನು ಕರೆದುಕೊಂಡು ಆ ವರಾಹನು ದಾಡೆಯ ತುದಿಯಲ್ಲಿ ನೆಲೆಗೊಳಿಸಿ, ಅಮರರ ಮೃದುವಾದ ಚಂದ್ರನ ಶೋಭಿಸಿದನು. ಆದಿ ವರಾಹನು ದೈತ್ಯವನ್ನು ಸಂಹರಿಸಿ ವಿಜಯಿಯಾಗಿ, ಮೆಲ್ಲಮೆಲ್ಲನೆ ಪ್ರಳಯಾಂಬುಧಿಯಿಂದ ಲಲನೆ ಸಮೇತ (ಭೂದೇವಿ) ಹೊರವಂಟನು.

೨೩. ದಾನವೇಶ್ವರನನ್ನು ಹಿಂಸಿಸಿ, ಇತ್ತ ಬರುತ್ತಿರುವ ಶ್ರೀ ಹರಿಯನ್ನು ನಿರೀಕ್ಷಣೆಯಲ್ಲಿದ್ದ ಯಾನವಾಸಿಗಳು ದೇವತೆಗಳು ನೋಡಿ ಹತ್ತಿರಕ್ಕೆ ಬಂದರು. (ಶ್ರೀ ಹರಿಯ ಬಳಿಗೆ ಬಂದ ಅವರು) ವೇದ ಮಂತ್ರಗಳನ್ನು ಗಾನವಾಗಿ, ಗದ್ಯ - ಪದ್ಯಗಳನ್ನು ನಿರ್ಮಿಸಿ, ದಾನವಾರಿಯನ್ನು ಸ್ತುತಿಸಿದರು. ಆ ಸಂಭ್ರಮವನ್ನು ಎಷ್ಟೆಂದು ರಚಿಸಲಿ!

೨೪. ಜಯ ಜಗನ್ಮಯ! ಜಯ ಜಗತ್ಪತಿ! ಜಯ ಜಗತ್ರಯ ಕಾರಣ! ಜಯ ಜಯ ಆಹವಮೂರ್ತಿ! ಜಯ ಪಾವನಪುಣ್ಯ ಕೀರ್ತಿ! ಜಯ ಪುರಾತನ! ಜಯಾ ಜಯಾ ಅರ್ಚಿತ! ಜಯತು ವಿಚ್ಯುತ! ಜಯ ಜನಾರ್ದನ! ಜಯ ಸನ್ಮತಾ! ಜಯ ಜಯಾ ಎಂದು ಅಮರೌಘವು ಸ್ತುತಿಸಿ ಆತನನ್ನು ವರ್ಣಿಸಿತು.

೨೫. ದೇವ, ಯಜ್ಞ ಶರೀರ ಸಂಸ್ಕೃತ! ದೇವ ಯಜ್ಞ ಧರಾಮರ! ದೇವ, ಯಜ್ಞ ಸ್ವರೂಪ ಸಾಧನ! ದೇವ ಯಜ್ಞ ಕಲಾಪಕ! ದೇವ ಯಜ್ಞವರಾಹವಂದಿತ! ದೇವ ಯಜ್ಞ ಸುಸಾಧನ! ದೇವ ಯಜ್ಞಾಂಗಾಂಗ ಕಲಿತ! ಕರ್ಮದೇವ ನಮೋಸ್ತುತೇ! ಎಂದು ಸ್ತುತಿಸಿದರು.

೨೬. ಯಜ್ಞ ಯಜ್ಞಾತ್ಮಕ! ಸಮಾಹಿತ! ಯಜ್ಞ ಸನ್ಮತ ಸಾಧಕ! ಯಜ್ಞ ಮಂತ್ರವಿಹಾರ!ಯಜ್ಞ ಕಲಾತ್ಮ! ಯಜ್ಞ ಸ್ವರೂಪಕ! ಯಜ್ಞ ಪುರುಷ ಫಲಾತ್ಮಕ! ಸುಯಜ್ಞ! ಕರ್ಮಗುಣಾತ್ಮಕ! ಯಜ್ಞ ಸಾಕ್ಷಿ ಶರೀರ! ಸರ್ವವ - ಯಜ್ಞ ದೇವ! ನಮೋಸ್ತುತೇ ಎಂದು ಸ್ತುತಿಸಿದರು.

೨೭. ತಂದೆಯೇ! ಬಂಧುವೇ! ಮುಕಂದನೇ! ನನ್ನನ್ನು ಸೃಷ್ಟಿಸಿದ ಜಗಧೀಶ್ವರನೇ! ಕುಂದು ತೋರದ ಹಾಗೆ ನನಗೆ ದರ್ಶನವಿತ್ತು ಹೋಗು. ಲಯವಾದ ಸ್ಥಿತಿಯನ್ನು ನಾನು ನಿರೂಪಿಸಿದರೆ - ಇದರಿಂದ ನನಗೆ ಏನು ಕುಂದು? ತಂದೆ ಇರುವಾಗ ಪುತ್ರನಿಗೆ ಪರಾಭವ ಉಂಟೇ ಎಂದು ಬ್ರಹ್ಮನು ಹೇಳಿದನು.

೨೮. ನೀಲಗಾತ್ರ! ವಿಶಾಲನೇತ್ರ! ಪರ್ವತ ಸನ್ನಿಭ ಶರೀರ! ಮೇಲ್‌ವಕ್ತ್ರ ಪ್ರಸನ್ನ! ದಂಷ್ಟ್ರ ವಿಶಾಲ! ಎಂದು ಸ್ತುತಿಸಿದನು. ಹಾಲಿಗಿಂತಲೂ ಬಿಳಿದಾದ ಸ್ಥೂಲಗಾತ್ರವನ್ನು ಹೊಂದಿ, ಹಿಂದಿನ ಹಾಗೆಯೇ ಭೂಮಿಯನ್ನು ಆ ಸರ್ವೇಶ್ವರನು ಪಾಲಿಸಿದನು. ಭೂಪಾಲನೇ ಕೇಳಿದೆಯಾ!

೨೯. ಹೀಗೆ, ಆದಿ ವರಾಹನು ಹಿಂದಿನ ಹಾಗೆಯೇ ಭೂಮಿಯನ್ನು ತಂದಿರಿಸಿದನು. ಎಲ್ಲರನ್ನೂ ಒಗ್ಗೂಡಿಸಿ, ಸಮಸ್ತರನ್ನೂ ಆ ಧರಣೀಧರನು ಬಹುಮಾನಿಸಿದನು. ಆಮೇಲೆ ಆದಿಮೂರ್ತಿ ವರಾಹನು ಹಿಂದಿನಂತೆಯೇ ಅದೃಶ್ಯವಾದನು. ಹೀಗೆ (ತನ್ನ) ಲೀಲೆಯಿಂದ ಅಚ್ಯುತನು ಪೂರ್ವದಲ್ಲಿ ಒಂದು ಕೌತುಕವನ್ನು ತೋರಿಸಿದನು.

೩೦. ಅಂದು ಮೊದಲಾಗಿ ಇಲ್ಲಿಯ ವರೆಗೆ, ಸರ್ವ ಸಾಧಕನಾದ ಬ್ರಹ್ಮನು ತನ್ನ ಧ್ಯಾನ ಕಲ್ಪನೆಗೆ ಒಪ್ಪುವ ಹಾಗೆ ಸೃಷ್ಟಿ ವಿಧಾನವನ್ನುಂಟು ಮಾಡಿದನು. ಮಾನವಾದ್ಯರು ಭೂಮಿಯಲ್ಲಿ ಹುಟ್ಟಿ ಪ್ರಸನ್ನ ಬುದ್ಧಿಯಿಂದ, ಕರ್ಮಗಳಿಗೆ ಊನ ಬರದಂತೆ ವರ್ತಿಸುತ್ತಿದ್ದರೆಂದು ಆ ಮುನಿಯು ಹೇಳಿದನು.

೩೧. ಇದನ್ನು ಕೇಳಿದರೆ ಅನೇಕ ಶುಭ ಪ್ರದಗಳೂ, ಪುಣ್ಯಾಭ್ಯುದಯಗಳೂ ಉಂಟಾಗುತ್ತದೆ. ಇದು ಸರ್ವ ವಿಷಜ್ವರಗಳಿಗೂ ಔಷಧವು. ಇದರಿಂದ ಆಯುಷ್ಯ, ಸುಖ, ಸಂಪತ್ತುಗಳುಂಟಾಗುತ್ತವೆ. ಇದು ಎಲ್ಲ ಜನರೂ ಆನಂದಿಸಲಿರುವ ಅಶೇಷ ಕೀರ್ತಿ ವಿಲಾಸವು. ಈ ವರಾಹವತಾರ ಕಥನವು ಜನಗಳಿಗೆ ಶುದ್ಧವೂ ಪವಿತ್ರವೂ ಆದುದಾಗಿದೆ.

೩೨. ಶ್ರೀ ಭಾಗವತಾರ್ಥದ ವರಾಹ ಅವತಾರಕಥೆಯು ಲೋಗರಿಗೆ ಹಿತವಾಗಲೆಂಬ ದೃಷ್ಟಿಯಿಂದ ರಚಿಸಿರುವುದಾಗಿದೆ. ಇದರಲ್ಲಿ ಅನೇಕ ಸಾರಗಳಿವೆ. ಇದು ಮುಮುಕ್ಷುಗಳಿಗೆ ಆನಂದ ವಿರಕ್ತಿಯನ್ನುಂಟು ಮಾಡುವುದು. ಶ್ರೀರಾಯನ ಅನುಗ್ರಹದಿಂದ ಇಲ್ಲಿಗೆ ಎಂಟನೆಯ ಅಧ್ಯಾಯವಾಯಿತು.

ಅಧ್ಯಾಯ ೯

೧. ಸೂತನು ಹೀಗೆ ಹೇಳಿದ ಸಾರವನ್ನು ಶೌನಕ ಮುಖ್ಯರು ಕೇಳಿ ಸಂಪ್ರೀತರಾದರು. ಅವರಿಗೆ ಮನಸ್ಸಿನಲ್ಲಿ ಅನೇಕ ವಿಸ್ಮಯಗಳುಂಟಾದುವು. ಈ ಕಥಾಮೃತ ಪಾನವು ಎಷ್ಟೊಂದು ಸಾಂದ್ರವೂ ವಿಶಾಲವೂ, ಗುಹ್ಯವೂ ಎಂದೆನಿಸಿತು. 'ಇದನ್ನು ಎಷ್ಟು ಸೇವಿಸಿದರೂ ಆತ್ಮ ತುಷ್ಟಿ ಜನಿಸಲಾರದು' ಎಂದು ಸರ್ವರೂ ಹೇಳಿದರು.

೨. ಸೂತ ಪುರಾಣಿಕನೇ, ಮುಂದಣ ಕತೆ ಎಂತು? ಮರಣ ಸನ್ನಿಹಿತನಾಗಿದ್ದ ಭೂಪತಿಗೆ, ಆ ಮುನಿಯು ಉಪದೇಶಿಸಿದ ಪಂಚಧಾರೆಯನ್ನು ಇನ್ನೂ ಸ್ವಲ್ಪ ಹರಿಸು ಎಂದು ಕೇಳಿದರು. ಅದನ್ನು ಕೇಳಿ, ಪಂಚವಕ್ತ್ರವನ್ನು ಧ್ಯಾನಿಸಿ ಆತನು ಹೀಗೆಂದು (ಮುಂದಣ) ಪುಣ್ಯ ಪ್ರಸಂಗವನ್ನು ಹೇಳತೊಡಗಿದನು.

೩. ಬಾದರಾಯಣಿಗೆ ಹೀಗೆಂದು ಕೈ ಮುಗಿದು ಆ ನೃಪತಿಯು ಕೇಳತೊಡಗಿದನು; ವೇದಮೂರ್ತಿಯ ದಿವ್ಯ ಅವತಾರವನ್ನು ಕೇಳುವುದಕ್ಕೆ ಇಚ್ಛಿಸಿದ್ದೇನೆ. ಹಾದಿಯಲ್ಲಿ ಆ ಆದಿವರಾಹನು ದೈತ್ಯನನ್ನು ಖಂಡಿಸಿ, ಈ ಧರೆಯನ್ನು ಕೊಂಡ ಬಂದ ವಾದಕಾರಣವಾದರೂ ಯಾವುದು ಎಂಬುದನ್ನು ವಿಸ್ತಾರವಾಗಿ ಹೇಳು.

೪. ವೀರ ಸೌಂದರನೇ ಕೇಳು! ಮೈತ್ರೇಯನಲ್ಲಿ ಪತಿಭಕ್ತಿಯಿಂದ ಕೌರವಾಗ್ರಣಿಯಾದ ವಿದುರನು ಅರ್ತಿಯಿಂದ (ಹೀಗೆಂದು) ಕೇಳಿದನು. ಆದಿಮೂರ್ತಿಯಾದ ವರಾಹನಲ್ಲಿ ಎದುರಾಗಿ ತಾಗಿದ ಪೂರ್ವ ಪುಣ್ಯ ಕೃತಜ್ಞಕನು ಯಾರು? ಅದಕ್ಕೆ ಕಾರಣವೇನು? ಇದರ ಅರ್ಥವನ್ನು ವಿಶದವಾಗಿ ಹೇಳು.

೫. ಕೌರವಾಗ್ರಣಿಯೇ ಆಗಲಿ; ಕೇಳು ಪುಣ್ಯ ಶ್ಲೋಕ ಮಹಾತ್ಮೆಯನ್ನು ಯಥಾರೂಪದಲ್ಲೇ ನಾನು ಹೇಳುತ್ತೇನೆ. ಇದು ಹಿರಣ್ಯಾಕ್ಷ ಮೋಕ್ಷ ಪ್ರಸಂಗವು. ಶ್ರೀಪತೀ ಪುರವಾಸರಾಗಿದ್ದವರಿಗೆ ದೊರತ ಶಾಪ ನಿಮಿತ್ತವಾಗಿ ಅವರಿಗೆ ಅಂತಹ ವಿಷ್ಣುಭಕ್ತಿಯು ಸಿದ್ಧಿಸಿತು. ಕಾಪುರುಷರಿಗೆ ಅದು ಸಾಧ್ಯವೇ?

೬. ವಿದುರನೇ ಕೇಳು! ಆದಿಯಲ್ಲಿ ವಿಶ್ವತೋಮುಖನೆನಿಸಿದ ವಿಷ್ಣುವಿನ ನಾಭಿಯ ತಾವರೆಯಲ್ಲಿ ಬ್ರಹ್ಮನು ಉದಿಸಿದನು. ಆತನ ಪುತ್ರನು ಮರೀಚಿಯು. ಆತನ ಪುತ್ರ ಕಾಶ್ಯಪನು. ದಕ್ಷ ನಂದನೆಯಾದ ದಿತಿಯು ಆತನ ಹೆಂಡತಿ. ಆಕೆಯು ಕಾಮ ಶರಹತಿಯಿಂದ ಆಶ್ಚರ್ಯಕರವೆನಿಸುವಂತೆ ಸಂಜೆಯ ಸಮಯದಲ್ಲಿ ಆತನನ್ನು ಬೇಡತೊಡಗಿದಳು.

೭. ಬಂದು, ವಲ್ಲಭೆಯು ಪತಿಯ ಬಳಿಗೆ ಸಾರಿದಳು. ಹೊತ್ತು ಮುಳುಗುವ ಆ ವೇಳೆಯಲ್ಲಿ (ಅದು ಅವೇಳೆ!) ಉಟ್ಟ ಧೋತ್ರವನ್ನು ಕೈಯಲ್ಲಿ ಹಿಡಿದು ಆತನನ್ನು ಎಳೆದಳು. ಮನ್ಮಥನು ತನ್ನ ಕೈಕತ್ತಿಯಿಂದ ನನ್ನ ದೇಹವನ್ನು ಕೆತ್ತುತ್ತಿದ್ದಾನೆ. ನಿನ್ನ ಶಕ್ತಿಯಿಂದ ನನಗೊಬ್ಬ ಮಗನನ್ನು ಅನುಕೂಲಿಸು ಎಂದಳು.

೮. ಸವತಿಯರ ಬಾಲರೋತ್ಸವದ ಗಾಳಿಗೆ ನನ್ನ ದುಃಖವು ತಾಗಿದೆ. ದಿವಸ ದಿವಸಕ್ಕೆ ದುಃಖವೆಂಬ ಬೆಂಕಿಯೊಂದಿಗೆ ಸೇರಿ ಜ್ವಲಿಸುತ್ತ ಅದು ಹಬ್ಬುತ್ತಿದೆ. ಭವವಿರೋಧಿಯಾದ ಮನ್ಮಥನ ಐದೂ ಬಾಣಗಳು ನನ್ನ ಹೃದಯಕ್ಕೆ ತಾಗಿವೆ. ಕಾಲಹರಣಕ್ಕೆ ಎಡೆಯಿಲ್ಲ. ನನಗೆ ಒಬ್ಬ ಮಗನನ್ನು ಅನುಗ್ರಹಿಸಬೇಕು.

೯. ಭದ್ರೇ! ಏನು, ಏನು ಹೇಳುತ್ತಿರುವೆ! ನೀನು ಕೇಳುತ್ತಿರುವ ಈ ಊಳಿಗವು ಹೊಸ ವಾರ್ತೆಯಾಗಿದೆ. ದೇವೀ! ಪಂಚಾನನನೆನಿಸಿದ ಶಿವನ ವೈರಿಯ (ಮನ್ಮಥನ) ವಿರೋಧದಿಂದ ನಿನಗೆ (ಆತನ) ಶರತಾಗಿತೇ? ಲತಾಂಗೀ ಇಂತಹ ಅವಸ್ಥೆಯನ್ನು ನಾನು ಈವರೆಗೆ ಕೇಳಿಲ್ಲ. ಹಾಗೆಯೇ ಆಗಲಿ! ನಿನ್ನ ಇಚ್ಛೆಯನ್ನು ನೆರವೇರಿಸಬಹುದು. ಅದಕ್ಕೆ ಒಂದು ಕ್ಷಣ ತಾಳು.

೧೦. ಲೋಲಲೋಚನೆಯೇ! ನೀನು ಹೇಳಿದ ವಾಕ್ಯವನ್ನು ಖಂಡಿತವಾಗಿಯೂ ನಾನು ನೆರವೇರಿಸುತ್ತೇನೆ. ಇದು ಸಕಾಲವಲ್ಲದುದರಿಂದ ಒಂದು ಮುಹೂರ್ತದಷ್ಟು ತಾಳು. ಶೂಲಪಾಣಿಯಾದ ಶಿವನು ಹಸ್ತದಲ್ಲಿ ಕಪಾಲವನ್ನು ಧರಿಸಿ, ಮಸ್ತಕ ಮಾಲಾಧಾರಿಯಾಗಿ ಜ್ವಾಲನೇತ್ರಗಳಿಂದ ದೃಷ್ಟಿಸುತ್ತ ಪರಿವಾರ ಸಮೇತನಾಗಿ ಬರುವ ಹೊತ್ತಿದು.

೧೧. ಅಂಗನೆಯೇ! ಮುಹೂರ್ತದ ವರೆಗೆ ತಡೆ. ನೀನು ಕಲ್ಪಿಸಿದ ಕಾರ್ಯವು ತಪ್ಪಲಾರದು. ಮುರವೈರಿಯಾದ ಶಿವನು ಸಲುಗೆಯವನೆಂದು ಭಾವಿಸಬೇಡ. ಖಂಡಿತವಾಗಿಯೂ ತಪ್ಪು ಘಟಿಸುವುದು. ಧಾರಿಣಿಯನ್ನೆಲ್ಲ ರಕ್ಷಿಸುವ ಶಿಕ್ಷಿಸುವ ಪ್ರಭುವೆನಿಸುವನಾತನು. ಆತನ ಆಜ್ಞೆಯನ್ನು ಮೀರಲು ಸಾಧ್ಯವಿಲ್ಲ. ಕಾಂತೆಯೇ ಮನ್ಮಥನ ಬಾಧೆಯನ್ನು ಸೈರಿಸು.

೧೨. ಆತನ ಪಾದ ಸಾನಿಧ್ಯವನ್ನು ಸನಕಾದ್ಯರೂ ನೋಡಿದವರಲ್ಲ. ಆತನ ಆಜ್ಞೆಯನ್ನು ತಪ್ಪದೇ ಅನುರೌಘುವೂ ನಡೆಸುತ್ತದೆ. ಆತನ ವಾಕ್ಕಿನಿಂದಲೇ ವೇದ, ಪುರಾಣ, ಶಾಸ್ತ್ರ, ಮಹಾಸ್ಮೃತಿಗಳುದಿಸಿವೆ. ಆತನನ್ನೇ ನೆನೆಸಿ ಧ್ಯಾನಿಸುವ ಹೊತ್ತಿದು. ನಿನ್ನ ತಪ್ಪನ್ನು ತಿಳಿದಿರು.

೧೩. ಈಶ್ವರನ ಯೋಗ ವಿಹಾರ ಲಕ್ಷಣವನ್ನು ಯಾರು ತಾನೇ ಬಲ್ಲರು? ಕ್ರೂರತರವಾದ ಭೂತ ಪಿಶಾಚಿ ಸಂಘದಿಂದೊಡಗೂಡಿದವನು. ಭಸ್ಮಲೇಪಿತ ಶರೀರನೂ, ಘೋರವಾದ ಭುಜಗ ಭೂಷಣನೂ, ಸ್ಮಶಾನ ವಾಸಿಯೂ ಶೂಲ ಪಾಣಿಯೂ ಕಪಾಲಮಾಲಾಧಾರಿಯೂ ಆದ ಆತನನ್ನು ನೋಡಲು ಕೌತುಕವೆನಿಸುವುದು.

೧೪. ಆತನನ್ನು ತಿಳಿಯದ ಜನರು ನಿಂದಿಸುತ್ತ ಪರಿಹಾಸ ಗೈಯ್ಯುವರು. ಆತನು ಅವರಿಗೆ ನಿವೇದ್ಯನಲ್ಲ. ಆತನ ಮಾಲೆಗಳು ನಿರ್ಮಾಲ್ಯಗಳೆಂಬ ಪರಮಾರ್ಥವನ್ನು ತಿಳಿಯದೆ (ಜನಗಳು) ಅಹಂಕಾರಿಗಳಾಗುತ್ತಾರೆ. ಅವರು ನಾಯಿಯ ಮಾಂಸವನ್ನು ತಿಂದು ನರಕಕ್ಕೆ ಹೋಗುವ ನಿಷೇಧಕರವರು. ಈ ಘೋರತೆಯನ್ನು ಏನೆಂದು ಹೇಳಲಿ!

೧೫. ಆತನ ಆಜ್ಞೆಯನ್ನು ಬ್ರಹ್ಮಾದಿ ಸುರರೂ ಪಾಲಿಸುತ್ತಾರೆ. ಆತನ ಸೂತ್ರಕ್ಕೆ ತಪ್ಪದಂತೆ ಲೋಕವೆಲ್ಲವೂ ನಡೆವುದು. ಸ್ತ್ರೀಯಳೇ! ಆತನ ಆಜ್ಞೆಯಿಂದಲೇ ಮಾಯೆಯ ಸರ್ವರನ್ನೂ ಮೋಹಿಸುತ್ತಿರುವುದು. ಮಾರವೈರಿಯ ಕೋಪವನ್ನು ತಪ್ಪಿಸುವುದಕ್ಕೆ ಆತನನ್ನು ಧ್ಯಾನಿಸುತ್ತಿರು.

೧೬. ಕಾಂತೆಯೇ, ಒಂದು ಮಾತನ್ನು ಕೇಳು. ಅದು ಸ್ಮೃತಿ ವಾಕ್ಯಕ್ಕನುವಾಗಿ ಹಿಂದಿನಿಂದಲೇ ಇರುವಂತಹದ್ದು. ಸಂಜೆಯ ಹೊತ್ತಿಗೆ ವೇದಭ್ಯಾಸ, ಮೈಥುನ, ನಿದ್ರೆ, ಭೋಜನ ಮೊದಲಾದ ವೃತ್ತಿಗಳನ್ನು ಮಾಡಬಾರದು. ದೈವಸೂತ್ರದ ವಿರುದ್ಧವಾಗಿ ಅಜ್ಞಾನಿಗಳ ಹಾಗೆ ಕಾಡಬೇಡ. ಕೆಂಜಟಾಧಾರನಾದ ಶಿವನ ಆಜ್ಞೆಯನ್ನು ಮೀರಲಾಗದು. ಅಯ್ಯೋ! ಅಂಗನೇ, ಸೈರಿಸು.

೧೭. ಕಾಮಮೋಹಿತರಾದವರಿಗೆ ಧರ್ಮವಿಚಾರ ಸ್ಮೃತಿ ವಾಕ್ಯಗಳೆಂಬ ಗೊಡವೆಯಿರುವುದೇ? ಆ ಮುನಿಯು ಹಲವು ರೀತಿಯಿಂದ ಬೋಧಿಸಿದರೂ ಆಕೆ ಕೇಳಲಿಲ್ಲ. ಕಾಮಬಾಧೆಯಿಂದ, ಆ ಮುಹೂರ್ತದಲ್ಲಿಯೇ, ಆತನನ್ನು ಹಿಡಿದೆಳೆದು ಆ ಕಾಮಿನಿಯು ಕೌತುಕಕರವಾಗಿ ಅನುಭವಿಸಿದಳು.

೧೮. ಅಂತಕಾಂತನನ್ನು ಆತನು ಚಿಂತಿಸಿ ಸಂತೈಸಿದರೂ, ಕಾಂತೆಯು ಸೈರಿಸಲಿಲ್ಲ. ಭ್ರಾಂತಿಯಿಂದ ಆತನೊಂದಿಗೆ ಕ್ರೀಡಿಸಲಾಗಿ ದೈವಾಜ್ಞೆಯೆಂದು ಕಾಶ್ಯಪ ಮುನಿಯು ಸಂತೋಷವಾಗಿಯೇ ಇದ್ದನು. ಇಷ್ಟಾರ್ಥವನ್ನು ಸಾಧಿಸಿದ ಬಳಿಕ ಕೃತಾಂತಕಾರಿಯನ್ನು ಸ್ಮರಿಸಿದನು.

೧೯. ಆಗಲೇ ನದಿಯಲ್ಲಿ ಕೈಕಾಲು ಮುಖವನ್ನು ಶುದ್ಧಗೊಳಿಸಿದನು. (ಬಳಿಕ) ಶ್ರೀಪತಿಯನ್ನು ನೆನೆಸಿ ಕಣ್ಣಡೆಯಲ್ಲಿ ಆತ್ಮ ಜ್ಯೋತಿಯನ್ನು ಜ್ವಲಿಸಿ ಪಾಪವನ್ನೆಲ್ಲ ಲಯಗೊಳಿಸಿದನು. ಆ ಸಮಯದಲ್ಲಿ ಪತಿಗೆ ವಂದಿಸಿದ ದಿತಿಯು ಪಾಪದಿಂದ ನಾನು ಅಪರಾಧ ಮಾಡಿದೆನಲ್ಲ ಎಂದು ವ್ಯಥಿಸಿದಳು.

೨೦. ಕಂದರ್ಪನು ಪಾಪವನ್ನುಂಟು ಮಾಡುತ್ತಿರಲು ನಾನು ಸತ್ಪಥಗಳನ್ನು ಎಣಿಸಲಿಲ್ಲ. ನಾನು ನಿಮ್ಮ ಬುದ್ಧಿಗೆ ಸ್ವಾಮಿಯಾಜ್ಞೆಯ ಶಕ್ತಿಗೆ ತಪ್ಪು ಮಾಡಿದ್ದೇನೆ. ಮುಂದೆ ಉಂಟಾಗುವ ಕಾರ್ಯವನ್ನೂ ಈಶನು ತಪ್ಪಿಸದ ಹಾಗೆ, ಶಂಕರನ ಸತ್ಪಥಗಳನ್ನು ಚಿಂತಿಸಿ, ಹೊಟ್ಟೆಯ ಮಗುವನ್ನು ಪಾಲಿಸಬೇಕಯ್ಯೋ ಎಂದುಕೊಂಡಳು.

೨೧. ವಿರಹದಲ್ಲಿ ಅಪರಾಧವನ್ನೂ ಮಾಡಿದೆನು. ಕರುಣಾಕರ ಶಂಬು ಜಯವಾಗಲಿ! ಪರಮೇಶ್ವರ, ಪಾರ್ವತಿನಾಥ, ಹರಾ, ವಿಷಮಾಂಬಕ, ರುದ್ರಾ, ಕರೆಕಂಠ, ತ್ರಿಯಕ್ಷ, ದಿಗಂಬರ, ಚರ್ಮಾಂಬರ, ಗಂಗಾಧರ ಶಾಶ್ವತ, ಪಾಪವಿನಾಶ, ಮೃಥಾ ವರದೇವ ನಮಸ್ತೇ|

೨೨. ತಾನು ಮಾಡಿದ್ದು ತನಗೇ ಆಯಿತು ಎಂದು ಯೋಚಿಸಿದ ಆ ವಧುವು ಶಂಕರನನ್ನು ಧ್ಯಾನಿಸುತ್ತ ದುಃಖಿಸುತ್ತಿದ್ದಳು. ಅದನ್ನೆಲ್ಲ ಆಲಿಸಿದ ಕಾಶ್ಯಪನು ಧ್ಯಾನದಿಂದ ಎಚ್ಚೆತ್ತು, ಮೆಲ್ಲನೆ ಕಣ್ಣನ್ನು ತೆರೆದು ದರ್ಶಿಸಿದನು. ಬಳಿಕ ಮಾನನಿಯನ್ನು ಬಹುವಾಗಿ ಸಮಾಧಾನಿಸಿ ಹೀಗೆಂದು ಆ ಸಮಯದಲ್ಲಿ ಹೇಳಿದನು.

೨೩. ಕಾಮ ಕುತೂಹಲಳಾದ ನೀನು ದರ್ಪದಿಂದ ನನ್ನನ್ನು ನಿರಾಕರಿಸಿದೆ. ಹರನಾಜ್ಞೆಯ ಶಕ್ತಿಯಿದು - ನಿನಗೆ ದೋಷ ಫಲವು ತಪ್ಪಲಾರದು. ಮಹೇಶ್ವರನಾಜ್ಞೆಯು ಸುಮ್ಮನಾದೀತೇ? ನಿನ್ನ ಗರ್ಭದಲ್ಲುದಿಸುವ ಸುಕುಮಾರರು ತ್ರೈಲೋಕ್ಯವನ್ನೆಲ್ಲ ಜೈಸುವರು.

೨೪. ನಿನ್ನ ಸುಕುಮಾರರು ಘೋರವೀರ್ಯ ಪರಾಕ್ರಮಿಗಳಾಗಿ ಅನೇಕರಿಗೆ ನಿಷ್ಠುರವನ್ನುಂಟು ಮಾಡುವರು. ಅಮರಾಲಯನನ್ನು ಸೂರೆಗೊಂಡು, ಅಮರ ನಾರಿಯನ್ನು ಹಿಡಿಯುವರು. ಸಹಸ್ರಾದಿ ಸಜ್ಜನ, ದೇವ, ಗೋದ್ವಿಜ ಸಮೂಹಕ್ಕೆ ವ್ಯಥೆಯನ್ನುಂಟು ಮಾಡುವರು. ಉಪಟಳವನ್ನುಂಟು ಮಾಡಿ, ತಮ್ಮ ಸಾಹಸ ಶಕ್ತಿಯಿಂದ ಈ ಭೂಮಿಯನ್ನೇ ಎಳೆದೊಯ್ಯುವರು.

೨೫. ದಾನವರ ವೀರ್ಯವಹ್ನಿಗೆ ಸರ್ವರು ಹೆದರಿ ಓಡಿ ಹೋಗುವರು. ಹಾನಿಯು ವಿಸ್ತರಿಸುತ್ತಿರಲು ಅದನ್ನು ಕೇಳಿದ ಶ್ರೀಹರಿಯು ತಾನೇ ಬಂದು ಸುದರ್ಶನದಿಂದ ನಿನ್ನ ಬಾಲರ ಶಿರವನ್ನು ಖಂಡಿಸುವನು. ಹಿಂದಿನಂತೆಯೇ ಮತ್ತೆ ಮೇದಿನಿಯನ್ನು ಆತನು ಸುಸ್ಥಿರಗೊಳಿಸುವನು.

೨೬. ಇಷ್ಟು ಅನರ್ಥಗಳು ಸಂಭವಿಸಲಿವೆ ಎಂದು ನಾನು ಹೇಳಲಿರುವುದನ್ನು ನೀನು ಕೇಳದಾದೆ ಎಂದು ಆತನು ಹೇಳಿದನು. ಆಗ ಆಕೆಯು ಮನಸ್ಸಿನಲ್ಲಿ ಅತ್ಯಂತ ಸಂತೋಷಿತೆಯಾದಳು. ನಾವು ಮೃತರಾಗಲು ನಮಗೂ ಹರಿಕೈತವ ಸಿದ್ಧಿಯಾಗುವುದು - ಎಷ್ಟೋ ದೋಷ ಫಲಗಳು ಪರಿಹಾರವಾದುವು ಮುನೀಶ್ವರನೇ, ಎಂದಳು.

೨೭. ಮುನೀಶ್ವರನೇ! ಅನೇಕ ದೋಷಗಳನ್ನು ಮಾಡಿ ಘಾಸಿಗೊಳಿಸಿದ ಫಲದಿಂದ, ಭೂಸುರರ ಬ್ರಹ್ಮಶಾಪ ಫಲದಿಂದ ನಾಶಗೊಳ್ಳುವ ಹಾಗೆ - ನನ್ನ ಪುತ್ರರು ನಾಶವಾಗಲಾರರು. ವಾಸುದೇವನು ಕೈಯಾರೆ ವಿನಾಶ ಮಾಡುವನೆಂದ ಮೇಲೆ ನನ್ನ ಕುಲಕ್ಕೆ ಇದರಿಂದ ಮೇಲೆ ಯಾವ ಲೇಸು ಬೇಕಾಗಿಲ್ಲವಲ್ಲ ಎಂದಳು.

೨೮. ಬ್ರಹ್ಮಶಾಪ ಫಲದಿಂದ ಅನೇಕ ಅನರ್ಥಗಳ ಕಾರಣಕ್ಕಾಗಿ ಸತ್ತು ಹೋಗುವವರ ಆ ಪ್ರವೃತಿಗಾಗಿ ಸನ್ಮತರಾದವರು ದೂರುವರು. ನನ್ನ ಬಾಲರ ಕರ್ಮಫಲದಿಂದ ಹಾಗಾಗಲಿಲ್ಲವೆಂಬುದು ನನ್ನ ಸೌಭಾಗ್ಯವೇ ಸರಿ! ನನ್ನ ಶ್ರದ್ಧೆಯ ಫಲದಿಂದ ಇಂತಹ ಸೌಭಾಗ್ಯವಾಯಿತು. ಇದನ್ನು ವರ್ಣಿಸಲು ಸಾಧ್ಯವಿಲ್ಲ! ಎಂದಳು.

೨೯. ತನ್ನ ವಲ್ಲಭೆಯು ಹೇಳಿದ ಆ ಮಾತುಗಳನ್ನು ಕೇಳಿ ಕಾಶ್ಯಪನಿಗೆ ಆನಂದವಾಯಿತು. ನಿನಗೆ ಉತ್ತರೋತ್ತರವಾಗಲಿರುವುದನ್ನು ಪ್ರೀತಿಯಿಂದ ಸ್ವೀಕರಿಸುವವಳಾಗು. ಭಯಭಕ್ತಿಯಿಂದ ಹರಿಹರನಲ್ಲದೆ ನನ್ನನ್ನೂ ನೀನು ಸ್ತುತಿಸಿ ಪ್ರಾರ್ಥಿಸಿದ ಕಾರಣಕ್ಕಾಗಿ ನಿನ್ನ ಪೌತ್ರನೋರ್ವನು ಪಾವನನೆನಿಸಿ ಜನಿಸಲಿರುವನು.

೩೦. ದೇವ, ದಾನವ, ಮಾನವ, ಮುನಿಂದ್ರರಾದಿ ಸಂತತಿಗಳಲ್ಲಿ ಆತನಿಗೆ ಸಮಾನರಾದವರು ಈ ಲೋಕದಲ್ಲೆಲ್ಲಿಯೂ ಕಾಣಲಾರರು. ಶ್ರೀವರನ ಸುನಾಮ ಕೀರ್ತನ ಗುಣದಿಂದಲೂ ಭಕ್ತಿಯಿಂದಲೂ ಆಗಮೋಕ್ತನಾಗಿ ನಿತ್ಯ ಸೇವೆ, ಮಾಡುತ್ತ ಪರಿಪೂರ್ಣ ಗುಣಾಢ್ಯನಾಗಿ ಆತನು ಮೆರೆಯುವನು.

೩೧. ಆತನ ಭಕ್ತಿಯನ್ನು ದೃಢೀಕರಿಸಿಕೊಂಡ ಮೇಲೆ ಲೋಕದ ಜನರೆಲ್ಲರೂ ಆತನಿಗೆ ಆಪ್ತರಾಗುವರು. ಆತನೊಂದಿಗಿರುವ ಲಕ್ಷ್ಮಿಯೂ ನಿತ್ಯವೂ ಅಂತಹವರಿಗೆ ವಶವರ್ತಿಯಾಗುವಳು. ಇದು ಸತ್ಯವೇ. ಶ್ರೀ ಹರಿಯ ಭೃತ್ಯವರ್ಗವೆನಿಸಿದ ಸುರಾಸುರರಲ್ಲಿಯೂ ಆತನನ್ನು (ನಿನ್ನ ಪೌತ್ರನನ್ನು ಮೀರುವವರಿರುವುದಿಲ್ಲ. ಆತನ ದಿವ್ಯಸ್ವರೂಪವು) ಸರ್ವರ ದೃಷ್ಟಿಗೂ ಆಪ್ತವಾಗುವುದು.

೩೨. ಈ ಲೋಕದಲ್ಲಿ ಲೋಕಬಲಾಢ್ಯರೆನಿಸಿದವರೆಲ್ಲರಿಗೂ ಆತನು ಶ್ರೀ ಗುರುವಾಗಲಿರುವನು. ಆತನು ವೀರವೈಷ್ಣವ ಭಕ್ತಿ ಮೇರುವೂ ಆರ್ತರ ಮುಕ್ತಿಗೆ ಮಾರ್ಗವೂ ಆದವನು. ಮೇರೆಯಿಲ್ಲದ ಗುಣಾಂಬುಧಿಯೂ ಮರೆಯದ ಭಾಗ್ಯಮಹಾನಿಧಿಯೂ ಆಗುವನು. ಈ ಜಗತ್ತಿನಲ್ಲೆಲ್ಲ ಆತನಿಗೆ ವೀರ್ಯಶೌರ್ಯ ಗುಣಗಳಲ್ಲಿ ಯಾರೂ ಎದುರಿರುವುದಿಲ್ಲ.

೩೩. ವೀರ ಕಾಮನೆಂಬ ಮದಿಸಿದ ಆನೆಗೆ ಸಿಂಹದ ಹಾಗಿರುವವನೂ, ಕ್ರೋಧವೆಂಬ ಬೆಂಕಿಗೆ ಮೋಡದ ಹಾಗಿರುವವನೂ, ಘೋರ ರಾತ್ರಿಗೆ ಸೂರ್ಯನೂ ಮದಮತ್ಸರವೆಂಬ ಸಮುದ್ರಕ್ಕೆ ಬಡಬಾಗ್ನಿಯೂ, ಕ್ರೂರ ಲೋಭವೆಂಬ ಕತ್ತಲೆಗೆ ಚಂದ್ರನೂ ಮೋಹವೆಂಬ ಗಿರಿಗೆ ವಜ್ರಕುಮಾರನೂ ಆದ ಆ ಶ್ರೀ ರಮಾ ಭಕ್ತವತ್ಸಲನಿಗೆ ಈ ನರಭೂಮಿಯಲ್ಲಿ ಎಣೆಯಾದವರಾದರೂ ಯಾರಿದ್ದಾರೆ?

೩೪. ಅಂಗನೆಯೇ ಕೇಳು? ಆತನ ನಾಮಗುಣಾಮೃತದಿಂದ ಅನೇಕ ಲೋಕಕ್ಕೇ ಕ್ಷೇಮವುಂಟಾಗುವುದು. ಆ ವೀರನು ಜನಿಸಲಾಗಿ, ಆತನ ಕೀರ್ತಿ, ಪರಾಕ್ರಮಗಳನ್ನು ಮನಃ ಪೂರ್ವಕವಾಗಿ ಸ್ಮರಿಸಿ ದೇನಿಸುವಾತನಿಗೆ ಸಗೋತ್ರ ಸಮೇತವಾಗಿ ಮುಕ್ತಿ ಲಭಿಸುವುದು.

೩೫. ಹೀಗೆಂದು ಮುನಿವರನು ವಿಸ್ತಾರವಾಗಿ ಹೇಳಿದ ವಚನಾವೃತದಿಂದ, ಚಂದ್ರಾನನೆಯಾದ ಆ ದಿತಿಯು ಕೈ-ಕಾಲು ಮುಖಗಳನ್ನು ತೊಳೆದುಕೊಂಡು ಶುಚಿರ್ಭೂತಳಾದಳು. ಚೆಲುವಾದ ಸುಖಾಂಬಕದ ವಸನವನ್ನು ಹೊದ್ದು, ನಸುಹಾಸದಿಂದ ಅಂದವುಳ್ಳ ಶುಭ್ರವಸನೆಯಾಗಿ ಪುಳಕಾಭರಣಗಳನ್ನಿಟ್ಟಳು.

೩೬. (ಹೀಗಿರಲಾಗಿ) ಅಂಗನೆಯು ಬಾಲಕರನ್ನು ಪ್ರಸವಿಸಿದಳು. (ಆಗ) ಎದ್ದ ಹೊಗೆಯಿಂದ ಜಗತ್ತು ಮಸುಕಾಯಿತು. ಸಚರಾಚರಗಳೆಲ್ಲವೂ ಭ್ರಮಾಧೀನವಾದುವು. ಹಾಗೆ ಧೂಮಾಗ್ನಿಯು ದಶದಿಕ್ಕುಗಳಿಗೆ ವರ್ಧಿಸಿ, ಸ್ವರ್ಗಕ್ಕೂ ತಲುಪಿತು. ಆಗ ದೇವತೆಗಳೆಲ್ಲರೂ ಎತ್ತಿನ ಹಾಗೆ ಓಡಿ ಓಡಿ ದಂಡನೆಗೊಳಗಾದರು. ಲೋಕವೆಲ್ಲವನ್ನು ಕತ್ತಲೆಯು ಆವರಿಸಿತು.

೩೭. ಸುರರು ನಿಲ್ಲಲಾಗದೆ ಓಡೋಡಿ ಬ್ರಹ್ಮನ ಪುರಕ್ಕೆ ಸೇರಿದರು. ಕೈಯಂಜಲಿಯನ್ನು ಮುಚ್ಚಿ ವಂದಿಸಿ ಪಿತಾಮಹನಿಗೆ ಮೊರೆಯಿಟ್ಟರು. ಸ್ವಯಂಭುವೇ! ದಾನವರ ಜನನದಿಂದಾಗಿ ಧರೆಯೆಲ್ಲವೂ ನಶಿಸಿದೆ. ಪರಿಪಾಲಿಸಿ ರಕ್ಷಿಸು. ಶರಣೋ ಶರಣು! ಎಂದರು.

೩೮. ಸರ್ವಾತ್ಮಕನೇ! ಜೀವರ ಸಾಕ್ಷಿಮಯನೇ! ನಿನಗೆ ತಿಳಿಸುವುದಕ್ಕೆ ಏನಿದೆ? ದಾನವರ ಪರಾಕ್ರಮವೆಂಬ ಅಗ್ನಿಗೆ ಭೂಮಿಯೇ ಲಯವಾಗಿ ಹೋಗುತಿದೆ. ಸರ್ವರೀತಿಯಿಂದಲೂ ಅನರ್ಥವೇ ಸಂಭವಿಸಿದೆ. ನಿಮ್ಮ ಕರುಣೆಯಿಂದಾಗಿ, ಬದುಕಿನಲ್ಲಿ ಒಮ್ಮೆಗೆ ಯಮನ ಆಟವೇ ನಡೆದಿದೆ.

೩೯. ಕಾಶ್ಯಪ ಪುತ್ರ ವೈಭವದ ಓಜಸ್ಸು ಕುಂದಿಲ್ಲದಂತೆ ಎಲ್ಲೆಲ್ಲೂ ಪ್ರಕಾಶಮಾನವಾಗುತ್ತಿದೆ. ಅದರ ವೇಗವನ್ನು ನೋಡಿದರೆ ಮೂರು ಜಗತ್ತಿಗೂ ಅನರ್ಥ ಸಂಭವಿಸಲಿರುವುದು. ಆ ಜನಾರ್ದನನಿಗಿಂತಲೂ ಶ್ರೇಷ್ಠರಾದವರು ಮುಂದೆ ವರ್ಧಿಸುತ್ತಾರೆ ಎಂದಾದರೆ ಅವರನ್ನು ನಿಜವಾಗಿಯೂ ವಧಿಸುವವರಾರು? ಬ್ರಹ್ಮನೇ ಇದನ್ನು ಸತ್ಯವಾಗಿ ಹೇಳು.

೪೦. ಇಂತೆಂದು ಅವರು ವಿವರಿಸಿ ವಿಲಾಪಿಸಲಾಗಿ ಅದನ್ನು ಕೇಳಿದ ಬ್ರಹ್ಮನು ಮಂದಹಾಸಗೊಂದು ಅನರ್ಥಗಳೆಲ್ಲವನ್ನು ತಿಳಿದನು. ಅಂದು ಮುಕುಂದನ ಮಂದಿರದಲ್ಲಿ ಪಾಪ ಮಾಡಿದ ಕಂದರೇ ಇವರೆಂದು ತಿಳಿದ ಬ್ರಹ್ಮನು ಸುರ ಸಮುದಾಯಕ್ಕೆ ಹಾಗೆಂದನು.

೪೧. ಶುದ್ಧ ಬುದ್ಧಿಯಿಂದ ಆ ಗೋವರ್ಧನಾದ್ರಿಧರನ ಅಂಘ್ರಿಯನು ಬ್ರಹ್ಮನು ನಿರ್ಧರಿಸಿದನು. ಮನಸ್ಸಿನಲ್ಲಿ ತುಂಬ ಕಳವಳಗೊಂಡು ಮೂರ್ಧ್ನಿಯಲ್ಲಿ ಅಂಜಲಿಯನ್ನಿರಿಸಿ ಈ ಕಥೆಯನ್ನು ಹೇಳಿದನು ಎಂದು ನಿರ್ಣಯಿಸಿ, ಇಲ್ಲಿಗೆ, ರಚಿಸಿದ ಭಗವತ್ಕಥೆಯಲ್ಲಿ ಒಂಬತ್ತನೆಯ ಅಧ್ಯಾಯವಾಯಿತು.

ಅಧ್ಯಾಯ ೧೦

೧. ಕುರುಲಾಗ್ರಣಿಯೇ ಕೇಳು! ಬ್ರಹ್ಮನು ಹೀಗೆ ಅಮರಾದಿಗಳನ್ನು ಬಹುವಾಗಿ ಮನ್ನಿಸಿ "ಬನ್ನಿ ಕುಳ್ಳಿರಿ" ಎಂದು ಸತ್ಕರಿಸಿದನು. (ಬಳಿಕ) ದೈತ್ಯರ ಪರಾಕ್ರಮವನ್ನು ನನಗೆ ಸಂಹರಿಸಲು ಸಾಧ್ಯವಿಲ್ಲ ಆದಿಯಲ್ಲೇ ಉಂಟಾದ ಈ ಸಂಕಟವನ್ನು ಮನವಿಟ್ಟು ಕೇಳಿ, ಹೇಳುತ್ತೇನೆ ಎಂದನು.

೨. ಕೇಳಿರಿ! ಹಿಂದೆ (ಬ್ರಹ್ಮನ) ಮಾನಸ ಪುತ್ರರಾದ ಸನಕಾದ್ಯರು ಊರ್ಧ್ವ ರೇತಸ್ಸರಾಗಿ ಭೂಮಿಯಲ್ಲಿ ಅವತರಿಸಿದರು. ಅವರು ಮಾಯೆಯ ಹಂಬಲವನ್ನೂ ಬಿಟ್ಟವರಾಗಿ, ಆತ್ಮಚಿಂತೆಯಲ್ಲಿಯೂ ಭಕ್ತಿಪೂರ್ಣ ಸುಖಾಬ್ಧಿಯಲ್ಲಿಯೂ, ಐದಾರು ವರ್ಷದ ಬಾಲಕರಾಗಿ ಸಂಚರಿಸುತ್ತಿದ್ದರು.

೩. ನಿಶ್ಚಲಾತ್ಮಕರಾದ ಆ ಬಾಲರು ಕಾಮ ಕರ್ಮ ವರ್ಜಿತರಾಗಿ, ಬ್ರಹ್ಮಾಂಡದಲ್ಲಿ ಎಲ್ಲಿಯೇ ಆದರೂ ಇಚ್ಛಿಸಿದ ಸ್ಥಳಕ್ಕೆ ಯಾತ್ರಿಸುವವರಾಗಿದ್ದರು. ಅಚ್ಯುತನನ್ನು ಆತ್ಮದಲ್ಲಿ ಕಲ್ಪಿಸಿ ಒಂದು ದಿನ ಅವರು ಮನೋವೇಗದಲ್ಲಿ ಸಚ್ಚಿದಾತ್ಮ ಸ್ವರೂಪಿಯಾದ ಶ್ರೀಹರಿಯ ಓಲಗಕ್ಕೆ ಬಂದರು.

೪. ಮೇದಿನಿಯಲ್ಲಿರುವ ತತ್ತ್ವ ಸುಯೋಗಕ್ಕೆ ಯೋಗಮಹೇಶ್ವರನೂ, ವೇದವೇದ್ಯರಿಂದ ಅಭಿನಂದಿತನೂ, ವಾದದೂರನೂ, ಅಗೋಚರನೂ, ಆದಿ, ಮಧ್ಯ, ಅಂತ್ಯವಿಲ್ಲದವನೂ, ನಿರ್ವಿಕಾರನೂ, ನಿರಂಜನನೂ, ಆದಿ ಮೂರ್ತಿಯೂ ಆದ ಶ್ರೀಹರಿಯ ನಿವಾಸಕ್ಕೆ ಭಕ್ತರು ಹೋಗಿ ಚೆನ್ನಾಗಿ ನೋಡಿದರು.

೫. ಆ ಮಹಾವೈಕುಂಠ ಪುರದಲ್ಲಿದ್ದ ಮಹಾತ್ಮರಾದ ಆ ಪುರುಷರು ಮನೋಹರರೂ ಶ್ಯಾಮಳಗಾತ್ರರೂ, ದಿವ್ಯಚತುರ್ಭುಜರೂ, ರಾಮಣೀಯಕವಾದ ಸೌಭಾಗ್ಯ, ಸೌಂದರ್ಯ, ವೀರ್ಯ, ಶೌರ್ಯ ಪರಾಕ್ರಮರೂ, ಕೋಮಲಾಂಗರೂ ಆಗಿದ್ದರಲ್ಲದೆ ಆ ಹರಿನಾಮ ಭಕ್ತರು ನೋಡುವುದಕ್ಕೆ ಕುತೂಹಲವನ್ನುಂಟು ಮಾಡುತ್ತಿದ್ದರು.

೬. ಆ ವೈಕುಂಠ ಪುರವನ್ನು ಪ್ರವೇಶಿಸುವ ಅವರು ಎಷ್ಟು ಮಹಾತ್ಮರೋ! ಎಷ್ಟು ಜನ್ಮಗಳಿಂದ ಪುಣ್ಯಫಲವನ್ನು ಸಾಧಿಸಿದ ಭಾಗವತೋತ್ತಮರೋ! ದೇವ ಧ್ಯಾನವೆಂಬ ಅಮೃತರಸವನ್ನು ಭಕ್ತಿಯಿಂದ ಸೇವಿಸಿದ ಮಾನವರಿಗೆ ಮಾತ್ರ ಲಭಿಸುವ ಪದವಲ್ಲವೇ ಅದು!

೭. ಹುಟ್ಟಿ ತಾನೇ ಏನು ಫಲ? ಇದು ಅಮಾನುಷವಾದುದು. ನಮ್ಮ ಜನ್ಮವೇ ವ್ಯರ್ಥವಾದುದು. ಅಗಾಧವಾದ ಅಮೃತಾಬ್ಧಿಯನ್ನು ಸ್ವಪ್ನದಲ್ಲಿ ಕಾಣುವ ಹಾಗೆ, ಮಹಾಕೂಪದಿಂದ ಹೊರಡದಿರುವ ಈ ಭೂಮಿಯ ಜನರು, ಹರಿಕೀರ್ತಿ ಸುಧಾರಸಾ ಸಂಗತಿಯನ್ನು ತಿಳಿಯದೆ ಅಲ್ಲಿಗೆ ಹೋಗಲಿರುವರೇ?

೮. ನಮ್ಮ ಬಾಳ್ವೆಯನ್ನು ನೆನೆಸಿಕೊಂಡು ಮಾನವರು ಅನೇಕ ರೀತಿಯಿಂದ ತೊಳಲಾಡುವರು. ಕಮಲೋದರನಾದ ಶ್ರೀಹರಿಯ ದಿವ್ಯ ಅಮೃತಾಬ್ಧಿ ಸುಖವನ್ನು ತಿಳಿಯದ ಆ ಮೂಢರು ಭ್ರಮಿಸುತ್ತ ಮಾಯೆಯಿಂದಾಗಿ ಸದಾ ಅತೀ ಚಂಚಲರಾಗಿರುತ್ತಾರೆ. ಅವರು ನಿಮಿಷ ಮಾತ್ರದಲ್ಲಿ ಲಯವಾಗುವ ಶರೀರ ಸುಖದ ಅಳಿಯಾಸೆಯನ್ನು ತೊರೆಯದವರಾಗಿರುತ್ತಾರೆ.

೯. ಹರಿನಾಮ ಸುಧಾರಸವನ್ನು ಕೇಳಿದ ಜನರು ಶರಣಾಗತರಾಗಿದ್ದಾರೆ. ಹರಿಗಾನವನ್ನು ಮಾಡುತ್ತಿರುವ ಮಹಾಪುರುಷನನ್ನು ಕೊಂಡಾಡಲಾಗುತ್ತದೆ. ಹರಿಗೆ ತಿಳಿಯದಂತೆ ವಂದಿಸುವ ಜನಗಳಿಗೆ ಹರಿಲೋಕ ಪ್ರಾಪ್ತಿಯಾಗುತ್ತದೆ ಎನ್ನುವುದು ಲೋಕ ಪ್ರಸಿದ್ಧವಾಗಿಯೋ ಇದೆ.

೧೦. ಸೂರ್ಯ ಪ್ರಭೆಯಿಂದ ವಿರಾಜಿಸುವ ಚಿನ್ನದ ವಿಮಾನ, ವಜ್ರ ಖಚಿತವಾಗಿರುವ ಹಾನಿಯಿಲ್ಲದ ವಿಮಾನ, ನಿರ್ಮಲವಾದ ವೈನತೇಯ ವಿಮಾನ, ಮರಕತ ಮಾಣಿಕ್ಯಾದಿಗಳಿರುವ ವಿಮಾನ ಇವುಗಳನ್ನೇರಿ ನಾರಿಯರು ಯಾವಾಗಲೂ ಅಚ್ಯುತನನ್ನು ಕೀರ್ತಿಸುವರು.

೧೧. ಮನೋರಥವನ್ನು ಸಾಧಿಸುವ ಸುರ ಕಲ್ಪವೃಕ್ಷಗಳು ಅಲ್ಲಿವೆ. ಅಲ್ಲಿ ಕಾಯಿ, ಮೊಗ್ಗು, ಕುಸುಮಗಳಿರುವ ಕಲ್ಪಲತೆಗಳಿವೆ. ಅಲ್ಲಿ ಶೀತ ಜಲ ಸೌರಭ್ಯ ಹೊಂದಿದ ಸರೋವರಗಳುಂಟು. ಅಲ್ಲಿ ಸರೋಜ ವಿಹಾರಗೈಯ್ಯುವ ವಧೂ ಭ್ರಮರಗಳ ಸಂಘವಿದೆ.

೧೨. ಸೌರಭ ಭರಿತವಾದ ಕಲ್ಪವೃಕ್ಷಗಳ ತಪ್ಪಲಿನಲ್ಲಿ ದೊಡ್ಡ ಉಯ್ಯಾಲೆಯನ್ನು ಕಟ್ಟಿ, ತರುಣಿಯರು ತಮ್ಮ ವಲ್ಲಭರಿಗೆಂದು ನಿತ್ಯವೂ ಶ್ರೀಧರನ ಮಹಾತ್ಮೆಯನ್ನು ಎಡೆಬಿಡದೆ ವಿರಚಿಸುತ್ತ ಶೃಂಗಾರ ಹಾಡುಗಳನ್ನು ಹಾಡುವ ಆ ಮಾಂಗಲ್ಯ ವಿನೋದವನ್ನು ಕೇಳುವುದು ಎಂತಹ ಆಶ್ಚರ್ಯ.

೧೩. ಕಳಹಂಸ, ಸಾರಸ, ಚಕ್ರವಾಕ, ಕ್ರೌಂಚಾದಿಗಳ ಸಮೂಹ, ಗಿಳಿ, ಕೋಗಿಲೆ, ಮಯೂರ, ವಾನರ, ಕಾರಂಡಾದಿ ಸಮೂಹ ಮೊದಲಾದ ನಾನಾ ಮೃಗಜಾತಿಗಳು ತಮ್ಮ ಕಲರವವನ್ನೆಲ್ಲ ನಿಲ್ಲಿಸಿ, ಶೃಂಗಾರ ಗೀತಗಳನ್ನು ಹಾಡುತ್ತ ರಸಿಕತನವನ್ನುಂಟು ಮಾಡುವ ಪರಿಯನ್ನು ಏನೆಂದು ವರ್ಣಿಸಲಿ!

೧೪. ಮಂದಾರ, ನೈದಿಲೆ (?) ಸಂಪಗೆ, ಕರವೀರ, ರೆಂಜೆ, ಕೆಂದಾವರೆ, ನೇರಿಲ, ಪಾರಿಜಾತಾ, ಬಕುಳ, ಶ್ರೇಷ್ಠವಾದ ಜಾಜಿ, ಮೊಲ್ಲೆಹೂ, ಕೇದಗೆ, ಸುರಗಿ, ಅರಪಚ್ಚೆ ಹಾಗೂ ಶ್ರೀ ತುಳಸೀ ದಳವೇ ಮೊದಲಾದುವು ಹರಿವಲ್ಲಭಾ ಎಂದು ವಂದಿಸುತ್ತಿರುವುದು.

೧೫. ಕೆರೆಬಾವಿಗಳೆಲ್ಲ ಅಮೃತವೇ, ಸುರಭಿಯೇ ಪಶುವೃಂದಗಳು, ಮುನಿಗಳೇ ಹಕ್ಕಿಗಳು, ಸದನದಲ್ಲಿ ಅಮರರೇ ಗಾಯಕ ಭೃಂಗಗಳು, ದೇವರುಗಳೇ ನಿಂತ ಕುದುರೆಗಳು ಹೀಗಿರುವ ವೈಕುಂಠ ಪುರವಿಶೇಷವನ್ನು ಏನೆಂದು ವರ್ಣಿಸಲಿ?

೧೬. ಆ ವನಾಂತರದಲ್ಲಿರುವ ಸಭ್ಯರ ಮಧ್ಯದಲ್ಲಿ ಕಮಲೇಕ್ಷಣನಾದ ಶ್ರೀಹರಿಯು ಶ್ರೀವಧೂವಾದ ತುಲಸೀದಳಗಳಿಂದ ನಿತ್ಯವೂ ಪೂಜೆಗೊಳ್ಳುತ್ತಾನೆ. ಅನಂತವಾದ ಭಕ್ತಿಯಿಂದ ಸಖ್ಯ ತತ್ವದ ಹಾಗೆ ಸೇವನೆಗೊಳ್ಳುತ್ತಿರುವನು. ಯಾವ ವಿಧದಿಂದ ಭಜಿಸಿ ಸಾಧಿಸಿದರೋ ಎಂದು ತಿಳಿಯುವುದೇ ಸಾಧ್ಯವಿಲ್ಲ.

೧೭. ಬ್ರಹ್ಮನು ನಿತ್ಯವೂ ಚಂಚಲನೆಂಬುದು ಶ್ರುತಿಯರ್ಥವಾಗಿದೆ. ಇದನ್ನು ಖಂಡನೆ ಮಾಡಲೆಂದು, ಸರ್ವರನ್ನೂ ಅನುಮಾನಿಸಲೆಂದು ನಂಬಿ ಅಲ್ಲೇ ಚಲಿಸದೆ ಇದ್ದು ಸರ್ವರನ್ನು ನಿರೀಕ್ಷಿಸುತ್ತಿರುತ್ತಾನೆ. ತಿಳಿದು ನೋಡುವುದಾದರೆ ಆತನ ಭಕ್ತಿಯು ಮುಕ್ತಿಯೊಂದಿಗೆ ಕೂಡದೆ ಲಭಿಸಲಾರದು.

೧೮. ಆತನ ದಿವ್ಯವಾದ ಪುರದ ಸುತ್ತ, ಗವಾಕ್ಷಗಳ ಸುತ್ತ ನಿಂತು, ಭಾರಿಯಾದ ಆ ಆಸ್ಥಾನದ ಮಧ್ಯಕಂಠ, ವಕ್ತ್ರ ಕಂಠಗಳ ವಿಲಾಸವನ್ನು ನಾರಿಯರು ಅಣಿಯಾಗಿ ಶೃಂಗರಿಸುತ್ತಿರುವರು ಎಂಬ ಪ್ರಕಾರ, ರಮಾಕರನು ನಿತ್ಯವೂ ಭಕ್ತಿಯಿಂದ ಓಲಗಿಸುತ್ತಿರುತ್ತಾನೆ ಇದು ಸತ್ಯ.

೧೯. ತತ್ತ್ವಲಕ್ಷಣದಿಂದ ನಿರ್ಮಿಸಿದ ಸತ್ವಕೋಟೆಗಳಿವೆ. ನಾಲ್ಕು ದಿಕ್ಕಿನಲ್ಲಿರುವ ಮುಕ್ತಿ ದ್ವಾರವನ್ನು ಅದ್ಭುತವಾಗಿ ಅಲಂಕರಿಸಲಾಗಿದೆ. ಚಿತ್ರಿಸಿದ ತ್ರಿಘಟಗಳು, ನಿಷ್ಕಂಭಗಳು, ನಿತ್ಯವೂ ಮೂಲ ವಿದ್ಯೆಯ ರಾತ್ರಿಯಲ್ಲಿ ವಜ್ರಕವಾಟಗಳೆಲ್ಲವೂ ಸುಂದರವಾಗಿವೆ.

೨೦. ಆ ಮಹಾ ಅಷ್ಟ ವಿಭೂತಿ ಸಂಕುಲವಾದ ದಿವ್ಯ ಪುರದೊಳಗೆ, ಸಹಸ್ರ ಸೋಮ -ಸೂರ್ಯ ಪ್ರಭೆಯಿಂದ ಪ್ರಜ್ವಲಿಸುತ್ತ, ರಮಣೀಯಕವಾದ ಪುರವನ್ನು ದರ್ಶಿಸುವ ಸಲುವಾಗಿ ಭಕ್ತಿಯಿಂದ ಆತನನ್ನು ಚಿಂತಿಸುತ್ತ ಆ ಮುನೀಂದ್ರರು (ಸನಕಾದ್ಯರು) ಮೆಲ್ಲ ಮೆಲ್ಲನೆ ಕ್ರಮದಿಂದ ನಡೆಯುತ್ತಿದ್ದರು.

೨೧. ಇಂದ್ರಾದಿ ಸುರರೇ ಈ ಕಥೆಯನ್ನು ಕೇಳಿ! ಸನಕಾದಿಗಳು ವೈಕುಂಠ ಪುರವರದ ಆನಂದ ವಿಭೂತಿಯನ್ನು ಹಾಗೂ ಸೌಂದರ್ಯವನ್ನು ನೋಡುತ್ತ ಕೈ ಮುಗಿದು ಕುತೂಹಲರಾದರು. ಸಾಂದ್ರವಾಗಿ ವಿರಾಜಿಸುವ ದ್ವಾರಗತಿಯಲ್ಲಿ ಒಳಹೊಕ್ಕರು.

೨೨. ದ್ವಾರಬಂಧ ಮುಖದಲ್ಲಿ ಮುತ್ತುಗಳನ್ನು ಕೀಲಿಸಿ ನಿಲ್ಲಿಸಿದ ತೋರಣಗಳ ಕಾಂತಿಯು ಹತ್ತು ದಿಕ್ಕುಗಳಿಗೂ ಪ್ರಜ್ವಲಿಸುತ್ತಿತ್ತು. ಕೇರಿಯ ಸುತ್ತಲೂ ಚಾತುರಂಗ ರತ್ನದ ಚಪ್ಪರ ಒಪ್ಪಿರಲು ಚಾಂದ್ ಚಂದನ, ಕಸ್ತೂರಿ ಮೊದಲಾದ ಪರಿಮಳ ದ್ರವ್ಯಗಳ ಸೌರಭಗಳ ಧೂಳಿಯು ತುಂಬಿತ್ತು.

೨೩. ಘನವಾದ ಲಾಜಲತಾವಳೀ ಹೂಗಳ ಬೀದಿಯೂ, ಆ ಕಡೆಯಿಂದ ಈ ಕಡೆಯವರೆಗೆ ಪವಿತ್ರವಾದ ರೇಶ್ಮೆಯ ವಸ್ತ್ರವನ್ನು ಹೊದಿಸಿದ ಮೇಲ್ ಛಾವಣಿಯೂ, ವಿಚಿತ್ರ ತರವೆನಿಸುವ ಗೀತ, ವಿನೋದ, ಗಾನ, ಮಹಾಸ್ತುತಿ ಮೊದಲಾದುವುಗಳನ್ನು ನೋಡುತ್ತ ಆ ಭಕ್ತರು ಮೆಲ್ಲ ಮೆಲ್ಲನೆ ನಡೆತರುತ್ತಿದ್ದರು.

೨೪. ಹರಿಯ ಪದಗಳನ್ನು ನಂಬಿದವರಿಗೆ ಎರಗಿ ಸ್ತುತಿಸುವ, ಹರಿನಾರಾಯಣರು, ಸಾಧುಗಳು, ಹರಿಕಥಾಮೃತ ಸೇವ್ಯರು, ಹರಿವಿಭಕ್ತಿ ಚಿದಾತ್ಮ ಭಕ್ತರು, ಹರಿಯನ್ನು ಭಜಿಸುವ ಸದಸ್ಯರು ಇವರೆಲ್ಲರೂ ಹರಿಗೆ ಕೊಂಡು ಬರುವ ವಿಮಾನಗಳ ಸಮೂಹವನ್ನು ನೋಡಿದರು.

೨೫. ಆತನ ಮಂದಿರದಲ್ಲಿರುವ ದಿವ್ಯ ವಿಲಾಸವನ್ನು ಪೂರ್ಣ ಬಲ್ಲವರು ಯಾರಿದ್ದಾರೆ? ಸಹಸ್ರ ಸೂರ್ಯ, ಚಂದ್ರ, ಅಗ್ನ್ಯಾದಿಗಳ ತೇಜವನ್ನು ಮೀರಿ, ತೀವ್ರ ಪ್ರಭೆಯಿಂದ ಅದು ಪ್ರಜ್ವಲಿಸುತ್ತಿತ್ತು. ಆ ವಿಸ್ಮಯವನ್ನು ದೂರದಿಂದ ನೋಡಿದ ಆ ಆಗಮ ನಿಷ್ಠರಾದ ಭಕ್ತರು ಅತ್ಯಂತ ಕುತೂಹಲಗೊಂಡು ಮೆಲ್ಲನೆ ಬರತೊಡಗಿದರು.

೨೬. ತತ್ತ್ವಗಳ ವಿದ್ಯೆ ಎಂಬ ರಸಾಂಬುಧಿಯಲ್ಲಿ ನೆಲೆಯಾಗದ, ಭಕ್ತಿಯ ಪುಳಕಾಶ್ರು ಸುಖದಲ್ಲಿ ಆನಂದ ಪಡೆದವರಾಗಿ, ಅಲ್ಲಿದ್ದ ನಿಜ ವೈಷ್ಣವ ಸಜ್ಜನರಿಂದ ಆರಾಧನೆಗೊಂಡು, ಮುಕ್ತಿಗಾಗಿ ಆದಿನಾಥನಾದ ಶ್ರೀಹರಿಯ ಪುರದೊಳಗೆ ಅವರೆಲ್ಲರೂ ಶೀಘ್ರವಾಗಿ ಬಂದರು.

೨೭. ಅತಿಯಾಗಿ ಶೋಭಿಸುವ ಆರು ಕವಾಟುಗಳ ಒಳಗಡೆ ಆ ಮಹಾತ್ಮರು ಬಂದರು. ಅಲ್ಲಿ ಶೃಂಗಾರವಾಗಿರುವ ಅನೇಕ ಮತಿವಂತರನ್ನು ನೋಡಿದರು. ಭೂಮಿಗೇ ಆಶ್ಚರ್ಯಕರವಾದ ಮಹಾರಚನೆಯನ್ನು ಅಲ್ಲಿ ಕೊಂಡಾಡಿ, ಶತಪತ್ರದಲೇ ಕ್ಷಣನಾದ ಶ್ರೀಹರಿಯನ್ನು ನೋಡುವ ತವಕದಿಂದ ಹೋದರು.

೨೮. ಆ ಯೋಗಮಹಾತ್ಮರು ಆರು ಕವಾಟುಗಳನ್ನು ಮುಂದೊತ್ತರಿಸಿ ಒಳ ಬಂದರು. ಅವರು ಭಕ್ತಿಯ ಶಕ್ತಿಯಿಂದ ಏಳನೆಯ ಕವಾಟದ ಬಳಿಗೆ ಬಂದರು. ಆಗ ಅಲ್ಲಿ ಇಕ್ಕೆಲಗಳಲ್ಲಿ ಕುಳಿತಿರುವ ಕೆಂಪೇರಿದ ನೇತ್ರಗಳುಳ್ಳ ವೀರರೀರ್ವರು ಕ್ರೂರ ಸ್ವೇದ ಜಲ ಭ್ರುಕುಟಿಲರಾಗಿ ಅವರನ್ನು ದಿಟ್ಟಿಸಿದರು.

೨೯. ರತ್ನ ಖಚಿತವಾದ ಶ್ರೀ ಮಕುಟದ ಸುಪ್ರಭೆ; ಕುಂಡಲ, ಹಾರ, ಮೌಕ್ತಿಕ ಮಾಲೆ, ಕಂಕಣಗಳನ್ನು ತೊಟ್ಟ ಅವರು ಮುದ್ರೆಯುಂಗಿಲ, ಹಸ್ತಗಳೂ, ವೀರಭೂಷಾ ಅಲಂಕೃತಾಂಗರೂ, ಶ್ಯಾಮಗಾತ್ರರೂ ಅರುಣಾಂಬರ ಧಾರಿಗಳೂ ಆಗಿ ಚತುರ್ಭುಜರಾದ ಅವರು ಬೃಹತ್ತಾದ ಗದೆಯನ್ನು ಧರಿಸಿರುವುದನ್ನೂ ಮುನಿಗಳು ನೋಡಿದರು.

೩೦. ಇಬ್ಬದಿಗಳಲ್ಲಿ ಅವರಿರುವಂತೆಯೇ ಹಿಂದಿನ ಹಾಗೆಯೇ (ಈ) ಭಕ್ತರು ಹೋಗೋಣವೆಂದು ಮುಂದೆ ಹೋಗಲನುವಾದರು. ಇದನ್ನು ನೋಡಿದ ದ್ವಾರಪಾಲಕರು ತಮ್ಮಲ್ಲಿಯೇ ಒಬ್ಬರಿಂದೊಬ್ಬರು ನೋಡಿಕೊಂಡು ನಕ್ಕರು. ಹೊರಡಲು ಅವರು ಅನುವಾಗುತ್ತಿರಲು ದ್ವಾರಪಾಲಕರು ಅವರನ್ನು ಅಡ್ಡಗಟ್ಟಿದರು.

೩೧. ಅವರ ಲೀಲೆಯನ್ನು ನೋಡುವುದಾದರೆ ಐದಾರು ವರ್ಷದ ಬಾಲಕರವರು. ದೊಡ್ಡವರಿಗಿಂತಲೂ ದೊಡ್ಡ ವಿದ್ವಾಂಸರವರು. ಶೀಲವಂತರೂ, ಶಾಂತಗಾತ್ರರೂ, ದಿಗಂಬರರೂ ಆದ ಆ ಬಾಲಕರು ತಮ್ಮ ಕೇಳದೆ ಒಳಹೋಗುವುದನ್ನು ನೋಡಿ ಕೋಲಿನಿಂದ ಅಡ್ಡಗಟ್ಟಿದರು.

೩೨. ಅವರು ತತ್ತ್ವವೇತ್ತರೂ, ಅಮರಾದಿಗಳಿಗಿಂತಲೂ ಸಮಚಿತ್ತರು; ಭಕ್ತಿ, ಜ್ಞಾನ, ವಿವೇಕ, ಗೂಢ, ಚಿರಾತ್ಮ ಪೂರ್ಣ ಸುಗಾತ್ರರಾದ ಅವರು ಉತ್ತಮಾಂಗನಾದ ಶ್ರೀಹರಿಯನ್ನು ನೋಡಲು ಬಿಡದಿರಲು ಮನಸ್ಸಿನಲ್ಲಿ ಕ್ರೋಧಿಸಿ, ಕೌತುಕವಾದ ವಾರ್ತೆಯನ್ನು ನುಡಿದರು.

೩೩. ಅನೇಕ ಭಕ್ತರ ಸಮೂಹವು ಇಕ್ಕೆಡೆಗಳಿಂದಲೂ ನೋಡುತ್ತಿರಲು ತಾಮಸರ ಮೊಗವನ್ನು ನೋಡಿ, ಬುದ್ಧಿಭ್ರಮೆಗೊಳಗಾದರು. ಪ್ರೇಮ ಭಾವವು ಅಡಗಿ, ಬುದ್ಧಿಯ ದೃಢತೆಯು ಚಂಚಲಗೊಂಡು, ಕ್ರೋಧಾವಿಷ್ಟರಾಗಿ ಆ ಮಹಾತ್ಮರು ಹೀಗೆಂದು ನುಡಿದರು:

೩೪. ಯಾರಿವರು? ನಿರ್ವೈರರೆಂದೆನಿಸುವ ವೈಷ್ಣವ ಜಾತಿಗೆ ಪ್ರಾಯಶ್ಚಿತ್ತ, ಮಾಡಲು ಯೋಗ್ಯರಾದವರಿವರು. ಇಲ್ಲಿ ಇವರನ್ನು ಹೇಗೆ ಬಿಟ್ಟಿರಿ? ಸಾರಸರ್ವ ಗತಾತ್ಮ ವಿಶ್ವವಿಹಾರ ವಿಷ್ಣುಪುರಕ್ಕೆ ಇವರು ಸೇರಲು ಯೋಗ್ಯರಾದವರಲ್ಲ. ಹೇಗೆ ಪ್ರವೇಶಿಸಿದರೋ ಇದು ಎಂದು ಕೌತುಕಕ್ಕೊಳಗಾದರು.

೩೫. ನಮ್ಮನ್ನು ಆ ಕಡೆ ಹಾಕಿ ಖಂಡಿತವಾಗಿಯೂ ನೀವು ಹಾಳಾಗುತ್ತೀರಿ. ನಮ್ಮನ್ನು ನೂಕಿ ನಿಮಗೆ ಫಲವಾದರೂ ಏನು? ತಿಳಿದು ನೋಡಿದರೆ ಸ್ವಾಮಿಯು ಮನಸ್ಸಿಗೂ ಇದು ಒಪ್ಪದು. ಏಕಬುದ್ಧಿಯಿಂದ ಆತನನ್ನು ಚಿಂತಿಸಿ, ಅನೇಕ ಕಾಲ ಭಜಿಸಿದ ಎಲ್ಲ ಎಚ್ಚರಿಕೆಯೂ ಇಂದು ನಶಿಸಿ, ಮತ್ತೆ ಹಿಂದಿರುಗುವ ಹಾಗೆ ಆಯಿತಲ್ಲ?

೩೬. ಆತನಿಗೆ (ಶ್ರೀಹರಿಗೆ) ಯಾವ ಹಿತವನ್ನುಂಟು ಮಾಡಿದಿರಿ? ಯಾವ ಸುಖವನ್ನುಂಟು ಮಾಡಿದಿರಿ? ಆದಿಯಲ್ಲಿ ಯಾವ ಭಯಗಳನ್ನು ಯಾವ ವಿಪತ್ತುಗಳನ್ನು ಪರಿಹರಿಸಿದಿರಿ/ ನೀವಿರುವಾಗ ಆತನಿಗೆ ಯಾವ ಭಯವೂ ಇಲ್ಲದೆ ನಿತ್ಯ ಸುಖವಲ್ಲವೇ? (ಆದರೆ) ಆತನಿಗೆ ಆದ ನಿರ್ಭಯವೆಲ್ಲವೂ ವ್ಯರ್ಥ - ಏಕೆಂದರೆ ಬಲಿಶಾಲಿಗಳಾದ ನೀವಿದ್ದೀರಲ್ಲವೇ?

೩೭. ನೀವು ಇಷ್ಟೊಂದು ದೃಢವಾಗಿ ದ್ವಾರವನ್ನು ರಕ್ಷಿಸುವ ಕಾರಣದಿಂದ, ಆ ಕೃಪಾನಿಧಿಯು ನಿರ್ಭಯನಾಗಿ ಸ್ವಪ್ನದಿಂದಿರುತಿಹನಲ್ಲವೇ? ಮೂರು ಲೋಕಕ್ಕೂ ಸದಾ ಆಶ್ರಯವಾಗಿ ಆತನ ಕಟಾಕ್ಷ ರಕ್ಷೆಯಿದೆ ಎಂಬುದನ್ನು ತಿಳಿಯದೆ ಅಧೋಗತಿಗೆ ನೀವು ಲಂಘಿಸುವುದೇಕೆ?

೩೮. ಉದರ ಖೇದನ ಭೀತಿಯನ್ನುಂಟು ಮಾಡುವ ಮಹಾಕುಹಕಿಗಳೇ, ಇದೆಲ್ಲವನ್ನೂ ನೋಡುವುದಾದರೆ ನಿಮ್ಮನ್ನು ಮೀರುವ ಸ್ವಾಮಿ ದ್ರೋಹಿಗಳೇ ಇಲ್ಲ. ಒಂದು ವೇಳೆ ನಿಮ್ಮ ಭಾವ ಕಲ್ಪನೆಗೆ ಇದು ಬರುವುದಿಲ್ಲವೆಂದಾದರೆ, ಇದಕ್ಕೆ ದಾರಿಯೇ ಇಲ್ಲ ಎಂದು ಅವರು ಹೇಳಿದರು.

೩೯. ಎಲೋ ಮದಾಂಧರೇ! ಕಾಮ, ಕ್ರೋಧ, ವಿಮೋಹ ವರ್ಜಿತರಾದ ಸುಲಭ ಯೋಗಿ ಜನಗಳಿಗೆ ಭೇದವನ್ನು ನೀವು ಉಂಟುಮಾಡಿದ್ದೀರಿ. ಆ ಕಾರಣ, ಬಲವನ್ನು ಊನ ಮಾಡಿಕೊಳ್ಳದಂತೆ, ಘೋರ ಭೀಷಣಾಕೃತಿಯವರಾಗಿ, ಕಲುಷ ಬುದ್ಧಿಯಿಂದ ಕರ್ಮಕಿಂಕರಾಗಿ ಭೋಗಿಸುತ್ತಿರಿ.

೪೦. ಹೀಗೆ ಸನಕಾದ್ಯರು ಅತೀ ರೋಷದಿಂದ ಅವರಿಗೆ ಶಾಪವನ್ನಿತ್ತರು; ಹೀಗೆ ಸಂಚನ್ನುಂಟು ಮಾಡಲು ಅವರು ಅತೀವ ದುಃಖ ಮಾನಸರಾದರು. ಚಂಚಲದಿಂದ ಭಯಗೊಂಡು ಅಲ್ಲಿಂದಿಳಿದರು. ಆ ಮುನಿಗಳಿಗೆ ಚರಣಗಳಿಗೆ ಭೂಮಿಯಲ್ಲಿ ಉದ್ದಂಡ ಪ್ರಣಾಮಗಳನ್ನು ಮಾಡಿ ಹೀಗೆಂದರು.

೪೧. ಸೂರ್ಯನ ಕಿರಣಗಳ ನಸುಹಾಸವು ರಾತ್ರಿಯನ್ನು ಕಳೆ ಅಳ್ವರೆ? ಯುವ ಹಾಗೆ, ಸಮುದ್ರದ ಮಧ್ಯದ ಆಳ್ವರೆಯನ್ನು ಸಿಡಿಲು ಸುಟ್ಟು ಕಳೆಯುವ ಹಾಗೆ, ಜಡವಾದ ದೇಹ ವಿಭಾಗ ರಸಗಳನ್ನು ಕಡಿದು ಕಳೆದಂತೆ, ಕಡು ವೈಷ್ಣವ ಶ್ರೀ ಮಕುಟಗಳಿಗೆ ಈ ವಿಧಿಯು ಉಂಟಾಯಿತು. ಇದು ಚೋದ್ಯವು.

೪೨. ಹಲವು ಯಾಗವನ್ನು ಗೈದು ಯಾವಾವ ವಿಧದ ಸತ್ಕ್ರಿಯೆಗಳನ್ನೇ ಉಂಟು ಮಾಡಿರಲಿ; ಬಹು ಮಂತ್ರಗಳ ವಿಧದಿಂದ ಯಾವಾವ ತಪಸ್ಸನ್ನೇ ಆಚರಿಸಿರಲಿ; ಯೋಗವೆನಿಸಿದ ಯಾವಾವ ತತ್ತ್ವ ಪಥಗಳನ್ನೇ ತಿಳಿದಿರಲಿ; ಅಹಂಕಾರವನ್ನು ಬಿಡದೆ, ಏನು ಮಾಡಿದರೂ - ಕರ್ಮಗತಿಯು ಹೋಗದು.

೪೩. ಶಾಪ ವಾರ್ತೆಯನ್ನು ಕೇಳಿದಾಗಲೇ ಮದವಿಳಿದ ಆನೆಯಂತೆ, ಬಹುವಾಗಿ ಕಣ್ಣೀರ್ಗರೆದು ಅವರು ವಿಹ್ವಲರಾದರು. ತಾಪಸರ ಚಿತ್ತವನ್ನು ಪ್ರಸನ್ನಗೊಳಿಸಲೆಂದು ಉದ್ದಂಡ ನಮಸ್ಕಾರಗೈಯ್ದು "ನಾವು ಪಾಪ ಮಾಡಿದ್ದೇವೆ, ಸರ್ವಾಪರಾಧವೂ ನಮ್ಮ"ದೆಂದು ಸ್ತುತಿಗೈಯ್ದರು.

೪೪. ಇವರಿಗೆ ಶಾಪವೇ ಸರಿಯಾದುದು ಎಂದು, ಅನುಗ್ರಹ ಬುದ್ಧಿಯನ್ನು ಮೀರಿ ತಾವು ಶಾಪವನ್ನಿತ್ತಿರಿ. ನಾವು ಜಗತ್ತಿಗೆ ಮಾಡಿದ ಕೃತಾಪರಾಧಕ್ಕಾಗಿ ಸಹಸ್ರ ಯೋನಿಯಲ್ಲಿ ಹುಟ್ಟಿ -ಸಾಯುತ್ತಿರುವಾಗ ನಮ್ಮ ಬುದ್ಧಿಗೆ ಶ್ರೀಪತಿಯ ಚರಣಾರವಿಂದ ಸುಭಕ್ತಿಯನ್ನು ದಯಪಾಲಿಸಬೇಕು.

೪೫. ಮಾಡಿದ ಕರ್ಮವು ವೃಥಾವೆನಿಸಿತು ಎಂದು ವಾಯಾದ್ಯರು ವಿಲಾಪಿಸಿದರು. ಮಂದ ಬುದ್ಧಿಯಿಂದ ಮಾಡಿದ ದೋಷವನ್ನು ಸರಿಪಡಿಸಿರಿ ಎಂದು ವಂದಿಸಿ ಎಂದು ಅವರ ಪಾದಪದ್ಮಯುಗಗಳಲ್ಲಿ ಗೋಗರೆಯುತ್ತಿರುವ ಸಮಯಕ್ಕೆ, ರಚಿಸಿದ ಸಂಧಿಯಲ್ಲಿ ಇಲ್ಲಿಗೆ ಹತ್ತನೆಯ ಅಧ್ಯಾಯವು ವಿರಾಜಿಸಿತು.

ಅಧ್ಯಾಯ ೧೧

೧. ತ್ರಿದಶಾದ್ಯರೇ ಮೇಲಣ ಕಥೆಯನ್ನು ಕೇಳಿ. ಸನಕಾದ್ಯರ ಪಾದ ಪದ್ಮಗಳನ್ನು ಭಕ್ತಿಯಿಂದ ಹಿಡಿದು ಜಯವಿಜಯರು ಸ್ತುತಿ ಮಾಡಿದರು. ಸದನ ಶ್ರುತಿ ಸಾರ ರಹಸ್ಯವು ಶ್ರೀಹರಿಯ ಹೃದಯದೊಳಗಾಗಿ ಆತನ ನಿದ್ರೆಯನ್ನು ಕದಡಿತು. ಆಗ ಎಚ್ಚರಿಕೆಯಾಗಿ ಸ್ವಾಮಿಯು ಚಿಂತಿಸಿದನು.

೨. ಯೋಗಿಗಳಿಗೆ ನನ್ನ ವಿಯೋಗವಾಯಿತೇ? ಭಕ್ತರಿಗೆ ಬಾಧಕವಾಯಿತೇ ಎಂದು ಆ ಗುಣಾಂಬುಧಿಯು ಚಿಂತಿಸಿ, ಮನಸ್ಸಿನಲ್ಲಿ ಈಶ್ವರಾ! ಎಂದುಕೊಂಡನು. ಅಪರಾಧ ಬಂದೊಗುವ ಸಂದರ್ಭದಲ್ಲಿ ನಾನು ಬುದ್ಧಿಯಿಲ್ಲದವನಾದೆನಲ್ಲ ಎಂದು ಆ ಗುಣಜ್ಞನು ದೃಢೀಕರಿಸಿಕೊಂಡು ನಾಗಹಾಸುಗೆಯಿಂದ ಎದ್ದು ಬಂದನು.

೩. ಸಭೆಯಲ್ಲಿರುವ ಸಮಸ್ತರೂ ಕೈ ಮುಗಿದು ಎದ್ದು ನಿಂತರು. ಸೂತ ಮಾಗಧರು ಆತನ ಸ್ತೋತ್ರ ಗುಣಗಳನ್ನು ವಿಸ್ತರಿಸಿದರು. ವೈದಿಕರು 'ಸ್ವಸ್ತಿ' ಎಂದು ಶಾಸ್ತ್ರವನ್ನು ಉಗ್ಘಟಿಸಿದರು. ಅಂತಃಪುರದ ಕಂಚುಕಿಗಳು ಜೋರಾಗಿ ಸ್ತುತಿ ಪಾಠ ಮಾಡಿದರು.

೪. ನಾನು ಭಕ್ತರಲ್ಲಿರುವ ಅನುರಾಗವನ್ನು ಏನೆಂದು ರಚಿಸಲಿ? ತಾವೇ ನೋಡಿ ತಿಳಿದು ತಕ್ಷಣವೇ ಪೂಜೆಯನ್ನು ಕೈಗೊಳ್ಳುತ್ತಾನೆ. ಧ್ಯಾನ ಗೋಚರವಾದ ಚರಣಾರವಿಂದಗಳನ್ನು ತಾನೇ ಭೂಮಿಗೆ ಮುಟ್ಟಿಸಿ ಕೊಳ್ಳುತ್ತ ಶ್ರೀಹರಿಯು ಬಂದನು. ಅಚ್ಯುತನು ಭಕ್ತ ವತ್ಸಲನೆಂಬುದು ಸುಳ್ಳೇ!

೫. ಅಚ್ಯುತನು ಪದವನ್ನು ಮೇದಿನಿಯಲ್ಲಿ ಇಡುತ್ತಿರುವಾಗ ಆದರಿಸುತ್ತ ವೇದ ಶಾಸ್ತ್ರ ಪುರಾಣಗಳು ಖೇದಗೊಂಡು ನಡೆತರುವುವು. ಸಾಲಾಗಿ ನಿಂತು ಎರಡು ಕಡೆಯಿಂದಲೂ ಆ ದಯಾಂಬುನಿಧಿಯ ನಾಮ ವಿಶೇಷ ಸಾರ ರಹಸ್ಯವನ್ನು ಕಂಚುಕಿಗಳು ಉದ್ಘೋಷಿಸುತ್ತಿದ್ದರು.

೬. ಮಂಡಲೇಶ್ವರ ರಾಯ! ರಾಯ ಪ್ರಚಂಡ! ಪುಂಡರೀಕೇ ಕ್ಷಣ! ಅಂಡಜಾಸನ! ಅಖಂಡಲಾರ್ಚಿತ! ದಂಡಧಾರ ನಿರ್ಮಾಣಾ! ತಂಡತಂಡವಾಗಿ ಅಜಮಂಡಲಗಳನ್ನು ಬ್ರಹ್ಮಾಂಡಗಳನ್ನು ರೋಮಗಳ ಹಿಂಡಿನಿಂದ ರಚಿಸಿದ ಗಂಡ ಮಂಡಲ ಕುಂಡಲಾ! ಎಂದು ಸ್ತುತಿಸಿದರು.

೭. ಹೀಗೆ ಹೇಳುತ್ತ ಕಂಚುಕಿಗಳು ಎರಡೂ ಕಡೆಯಿಂದಲೂ ಪಂಚಸಾಯಕನಾದ ಮನ್ಮಥನ ಪಿತನ ಗುಣನಾಮವನ್ನು ಬಿತ್ತರಿಸಿದರು. ಹೀಗೆ ಕಂಚುಕಿ ಪರಿವಾರವು ಕಳಶ - ಕನ್ನಡಿ, ಮುತ್ತಿನ ಅಕ್ಷತೆ ಧೂಪ, ಅನೇಕ ವಾದ್ಯಗಳಿಂದ ಘೋಷಿಸುತ್ತಿರಲು ಶ್ರೀಹರಿಯು ಭಕ್ತರನ್ನು ಸಮೀಪಿಸಿದನು.

೮. ಭೂಮಿಯು ರಾಮಣೀಯಕವಾದ ಪಾದುಕೆಯನ್ನು ಕೈಯಲ್ಲಿ ಧರಿಸಿದ್ದಳು. ಭಾರ್ಗವಿಯು ಬಣ್ಣ ಬಣ್ಣದಿಂದ ಶೋಭಿಸುವ ಮುತ್ತಿನ ಸತ್ತಿಗೆಯನ್ನು ಹಿಡಿದಿದ್ದಳು. ಗಂಗಾನದಿಯೇ ಮೊದಲಾದ ಪ್ರಮುಖ ಅಮರಾದಿಗಳು ಪೂರ್ಣ ಕುಂಭವನ್ನು ಹಿಡಿದಿದ್ದರು. ವಿಧ ವಿಧವಾಗಿ ವಿರಾಜಿಸುವ ದಿಗ್ವಧುಗಳು ದರ್ಪಣವನ್ನು ಹಿಡಿದಿದ್ದರು.

೯. ಸಾಮವೇದಗಳೇ ಮೊದಲಾದ ಸಹಸ್ರನಾರಿಯರು ಗಾನ ನುಡಿಯುತ್ತಿರುವರು; ಅಥರ್ವವೇ ಮೊದಲಾದ ವಧುಗಳು ಪ್ರೇಮ ಬುದ್ಧಿಯಿಂದ ಸಾರಸ್ತುತಿಗಳನ್ನು ಮಾಡುತ್ತಿರುವರು; ರಾಮಣೀಯಕವಾದ ಋಗ್ವೇದ ವಧುವು ಆತನನ್ನು ಕೀರ್ತಿಸುತ್ತಿರುವಳು; ಹಾಗೆ ಇತಿಹಾಸ - ಕಾವ್ಯ ಪುರಾಣಗಳು ಶ್ರೀ ಮುಕುಂದನನ್ನೂ ಭಜಿಸುವುವು.

೧೦. ಉಪನಿಷ್ಯಾಂಗನೆಯರು ಆತನ ಗುಪಿತ ನಾಮವನ್ನೂ ನುಡಿಸುತ್ತಿರುವರು; ಸ್ವಪುರವಾಸರಾದ ಸುನಂದ ನಂದ ಮೊದಲಾದ ಸುಪ್ರಬಲೆಯರು ಹಾಗೂ ನಿಪುಣರಾದ ಭಾಗವತರು ಉತ್ತಮವಾದ ಭಾರ ದಂಡಿಗೆಯನ್ನು ಹಿಡಿದು, ಸುಪಥವಾದ ಸಂಗೀತ - ಸಾಹಿತ್ಯ ಗಾನವನ್ನು ಮಾಡುತ್ತಿರುವರು.

೧೧. ಚಿತ್ತದಲ್ಲಿ ಪೂಜಿಸಿ, ಅರ್ಚಿಸಿ-ಧ್ಯಾನಿಸಿ ಸ್ತುತಿ ಮಾಡಿದ ಆ ಮೂರ್ತಿಯು ಸಹಸ್ರ ಕಾಂತಿ ತೇಜವಾಗಿ ವಿರಾಜಿಸುತ್ತಿರಲು, ಸತ್ಯಸಾರವೂ, ನಿತ್ಯನಿರ್ಮಲ ಕೀರ್ತಿಯೂ ಮಂಗಲಕಾರವೂ ಆದ ಆಕಾರವನ್ನು ಕಣ್ಣಾರೆ ತಮ್ಮೆದುರಲ್ಲಿ ನೋಡಿ ಭಕ್ತರು ಪೂರ್ಣರಾದರು.

೧೨. ತರತರವಾಗಿ ಮುತ್ತು ತೆತ್ತಿಸಿದ ದಿವ್ಯ ಶ್ರೀ ಮಕುಟ, ಮುಗುಳ್ನಗೆಯ ವದನಾರವಿಂದ, ತಾವರೆಯಂತೆ ಕೆಂಪಗಿರುವ ಕಣ್ಣು, ದಟ್ಟವಾದ ಕೂದಲು ಭೃಂಗ ಶೋಭೆ, ಮಾಲೆ ಮಲ್ಲಿಗೆಯ ಸೌರಭ, ಕಿರಣ ಸುತ್ತಿರುವ ಗಂಡ ಮಂಡಿಕೆ, ಕುಂಡಲ ಪ್ರಭೆ ಇವುಗಳೆಲ್ಲವನ್ನು ನೋಡಿದರು.

೧೩. ಕೊರಳಲ್ಲಿರುವ ಕೌಸ್ತುಭ ದ್ಯುತಿ, ಶ್ರೀವನ ಮಾಲೆ ಪೂರ್ಣ ಶೋಭೆಯಿಂದ ಕಂಗೊಳಿಸುವ ಅಜಾನುಬಾಹುಗಳಲ್ಲಿರುವ ಮುದ್ರೆಯಂಗಿಲ, ಕಂಕಣಗಳು, ಸೌಂದರ್ಯವೆತ್ತ ಶ್ರೀವತ್ಸ ನಾಭಿಯಲ್ಲಿ ಉದಿಸಿರುವ ತಾವರೆ, ಹೀಗೆ ಅರುಣ ಕಿರಣಗಳಿಂದ ಪ್ರಕಾಶಿತಗೊಳ್ಳುವ ನವ ಸೂರ್ಯನೆನಿಸುವ ಶ್ರೀಹರಿಯನ್ನು ಅವರು ನೋಡಿದರು.

೧೪. ತನ್ನ ನೀಳವಾದ ಎಡತೋಳನ್ನು ಲಕ್ಷ್ಮೀದೇವಿಯ ಕೊರಳಲ್ಲಿರಿಸಿ, ಉದಾರವಾದ ದಕ್ಷಿಣ ಬಾಹುವಿನಲ್ಲಿ ಒಂದು ಸುಂದರವಾದ ಉತ್ಪಲವನ್ನು ಹಿಡಿದು, ಓರೆ ಕಣ್ಣಿನಿಂದ ಮಧುರ ರಸನನ್ನು ಸೂಸುತ್ತಿರುವ, ಸಾರ ಭಕ್ತರ ವಿಹಾರ ಮೂರ್ತಿಯ ಸುಧಾರಸವನ್ನು ಅವರು ಈಕ್ಷಿಸಿದರು.

೧೫. ಸಿರಿಯ ಮದವನ್ನು ಸಂಹರಿಸಲು ನಿತ್ಯವೂ ಭಕ್ತಿಯಿಂದ ಕಲ್ಪಿಸುವ, ಸಿರಿಗೆ ಸೌಂದರ್ಯವನ್ನು ವರ್ದಿಸುವ ಸಾರ ಸಂಗ್ರಹಿತ, ಧರೆಯ ಸಾರವನ್ನು ಸಂಗ್ರಹಿಸುವ ಭಕ್ತ ಹೃತ್ಕಲಾತ್ಮಕನ ಪರಮ ಸೌಭಾಗ್ಯವನ್ನು ನೋಡಿ, ಆತನನ್ನು ಬಹುವಾಗಿ ಕೊಂಡಾಡಿದರು.

೧೬. ಮಂಗಲಾತ್ಮಕನೆನಿಸಿದ ಆ ಶ್ರೀಹರಿಯನ್ನು ಮುನಿಪುಂಗವರು ನೋಡಿದರು. ಪೂರ್ಣ ಕಣ್ಣುಗಳಲ್ಲಿ ಅತಿಭಕ್ತಿಯನ್ನು ಪುಳಾಕಶ್ರುವನ್ನೂ ಪೂರ್ಣ ಸುಖದಿಂದ ತುಂಬಿ, ಅದರಲ್ಲಿ ಮುಳುಗಿ, ನೆಲೆಯಾಗಿ ಎರಡನ್ನು ಕೂಡಿಸಿದರು. ಭಕ್ತಿಯಲ್ಲಿ ಮುಳುಗಿ ಪೊಡಮಟ್ಟು ಆತನನ್ನು ಸ್ತುತಿಸಿದರು. ಅದನ್ನು ಯಾರು ವರ್ಣಿಸಬಹುದು!

೧೭. ಶ್ರೀ ಮುಕುಂದ ಪದಾಬ್ಜ ಶ್ರೀ ತುಳಸೀ ಸುಗಂಧವನ್ನು ಆ ಭಕ್ತರು ಶ್ರೀ ಮನೋಹರವಾಗಿ ಅಘ್ರಾಣಿಸಿದರು. ಚಿತ್ತ ವೃತ್ತಿಯು ಕಲಕಿದಂತಾಗಿ ನಯನದಿಂದ ಆನಂದ ಬಾಷ್ಪಗಳು ಹೊರಟವು. ಭಕ್ತಿ ಸುಖಾಂಬುಧಿಯಲ್ಲಿ ಮುಳುಗಿ ಮುನೀಂದ್ರರು ಹರಿಯ ಪಾದವನ್ನು ತೊಳೆದರು.

೧೮. ಕರಣೇಂದ್ರಿಯಗಳೆಲ್ಲವನ್ನೂ ಭಕ್ತಿ ಶಿಲೆಯಿಂದ ಪುಡಿಮಾಡಿ, ಸುಖವಾರಿಯಿಂದ ಕೈಯಲ್ಲಿ ಕಲಸಿಕೊಂಡು ದೃಶಿದ್ವಾರಾ ಪಥದಲ್ಲಿ ಅಧಿಕವಾಗಿ ಹೊರಸೂಸುತ್ತಿರುವ ಆ ಮಹಾತ್ಮರು ಹರಿಯ ಶ್ರೀಮುಖವನ್ನು ನೋಡಿ, ಪರಿಣಮಿಸಿ ಆಶ್ಚರ್ಯಕರವಾದ ಆನಂದ ವಿಭೂತಿಯನ್ನು ತಳೆದರು.

೧೯. ಕಣ್ಣಿನಿಂದ ತಾವರೆಯಂತಿರುವ ಈತನ ಮುಖವನ್ನು ನೋಡಿ, ಕರಣೇಂದ್ರಿಯಗಳನ್ನು ಪುಡಿ ಮಾಡಿದರು. ಇಷ್ಟ ವಲ್ಲಭನ ಪುಷ್ಪಗಾತ್ರವನ್ನೂ ಅಮೃತಾವೃಷ್ಠಿಯನ್ನು ದೃಷ್ಟಿಯೆಂಬ ಬಟ್ಟಲಿನಲ್ಲಿ ಅಲ್ಲಾಡದಂತೆ ಹಿಡಿದು ಸೇವಿಸಿ ತೃಪ್ತಿಯಾದರು. ಆ ಸಂಗತಿಯನ್ನು ಏನೆಂದು ರಚಿಸಲಿ?

೨೦. ಆತನನ್ನು ಹಾಡಿ, ಸ್ತುತಿಸುವ ಅಖಿಳೇಂದ್ರಿಯಗಳನ್ನೆಲ್ಲ ಆ ದೆಸೆಗೆ ಓಡಿಸಿ, ಮನಸೆಂಬ ಸೌಟಿನ ತುಂಬ ಸೋಸಿ ಹಾಕಿದರು. ಸಾಲದು ಎನಿಸುವಷ್ಟರ ಮಟ್ಟಿಗೆ ಗಾಢವಾದ ಭಕ್ತಿಯಿಂದ ಆತನ ಪಾದಗಳಿಗೆ ಉದ್ದಂಡ ಎರಗಿ, ಸ್ತುತಿಯನ್ನು ಹಾಡಾಗಿ ಮಾಡಿ ದೃಷ್ಟಿಸಿದರು.

೨೧. ಜಯ ಜಯ! ನಮೋಸ್ತು ಜಗದಾದಿ ಪುರುಷ! ಜಯಜಯ! ನಮೋಸ್ತು ನಿಗಮಾಂಬರ ನಿವೇದ್ಯ! ಜಯ ಜಯ ನಮೋಸ್ತು ಜಗದುದ್ಭವ ವಿನಾಶ! ಜಯ ಜಯ! ನಮೋಸ್ತು ತ್ರಿಗುಣಾತ್ಮಕ ನಮೋಸ್ತು! ಎಂದು ಸ್ತುತಿಸಿದರು.

೨೨. ನಿಮ್ಮನ್ನು ಬ್ರಹ್ಮನು ಸ್ತುತಿಸುವ ವೇದಗಳನ್ನು ಕೇಳಿ ಇಷ್ಟು ದಿನ ಮನಸ್ಸಿನಲ್ಲಿ ಆಧರಿಸಿ ಸ್ತುತಿಸಿದ್ದೇವೆ. ಇಷ್ಟೊಂದು ಕರುಣೆಯಿಟ್ಟು ನಮ್ಮ ದೃಷ್ಟಿಗೆ ಪ್ರೀತಿಯಿಂದ ಕಾಣಿಸಿಕೊಳ್ಳುವ, ಶ್ರೀಗುರುವೇ, ನಮಸ್ತೇ!

೨೩. ನೀನು ಸರ್ವಾತ್ಮಕನೆಂದು ಹೇಳಿ ಫಲವೇನು? ನಿನ್ನನ್ನು ತಿಳಿಯದ ಅನೇಕ ಮೂಢರಿದ್ದಾರೆ. ನಿಜವಾದ ಪರಮಾತ್ಮನಾದ ನೀನೇ ಈಗ ದರ್ಶನವಿತ್ತಿರುವೆ. ಈಗ ನಮಗೆ ನೀವೇ ಗತಿ. ನಾವು ಶರಣಾಗತರಾಗಿದ್ದೇವೆ, ನಮಸ್ತೇ ಎಂದರು.

೨೪. ನಿನ್ನ ಮಹಲೀಲೆಗಳನ್ನು ಯಾರೂ ತಿಳಿಯಲಾರರು. ಆದರೆ ಅವರು ನಿನ್ನ ಮಹಮಾಯೆಯೊಳಗೆ ಮುಳುಗುತ್ತಾರೆ. ಘೋರ ವಿಷಯಾತ್ಮಕರಿಗೆ ನೀನು ಅನಂತನು. ಯಾರಿಗೂ ಗೋಚರವಾಗದ ಮೂರ್ತಿಯೇ ನಮಸ್ತೇ ಎಂದರು.

೨೫. ಬ್ರಹ್ಮಪದ, ಇಂದ್ರಪದ, ಲೋಕಪದವೆಲ್ಲವೂ ಕರ್ಮಗತಿಯನ್ನು ಇಚ್ಛಿಸದ ಅಪೇಕ್ಷೆಯಾಗಿದೆ. ನಿನ್ನನ್ನು ತಿಳಿಯದ ಸನ್ಮತರು, ಬ್ರಹ್ಮ ಸುಖವನ್ನು ತಿಳಿಯದ ಮೂಢರು ಯಮನ ಕಾಣಿಕೆಗೆ ಒಳಗಾಗುತ್ತಾರೆ.

೨೬. ಭಕ್ತಿ ಸುಧೆಯು ನಿತ್ಯವೆಂದು ಚೆನ್ನಾಗಿ ತಿಳಿದ ಪುರುಷರಿಗೆ ಮುಕ್ತಿಪದವು ವ್ಯರ್ಥವಾದುದು. ಇದು ನಿನ್ನ ಭಕ್ತರ ವಿಶೇಷವು. ಅತ್ಯಧಿಕ ಸ್ತೋತ್ರದಿಂದ ನಿನ್ನನ್ನು ಸ್ತುತಿಸುವುದಲ್ಲವೇ? ಭಕ್ತಜನ ವತ್ಸಲ ಮಹೋತ್ತಮನೇ ನಿನಗೆ ನಮಸ್ತೇ ಎಂದರು.

೨೭. ಮಹೇಶನೇ! ನಮಗೆ ಯಾವುದೇ ಜನ್ಮಫಲವು ಉಂಟಾಗಲಿ! ಕರ್ಮಗತಿಕ್ಕೊಪ್ಪಿದಂತೆ ಅದು ಸದಾ ಬರಲಿ! ಆದರೆ ಬ್ರಹ್ಮಸುಖ ಸನ್ಮತಿಯಲ್ಲಿ ನಿತ್ಯವೂ ಮರೆಯದ ಹಾಗೆ ಒಲುಮೆಯನ್ನು ಪ್ರಸಾದಿಸು. ಚಿನ್ಮಯಾ! ನಮಸ್ತೆ ಎಂದರು.

೨೮. ಮಾತಿನಲ್ಲಿ ನಿನ್ನ ಸ್ತುತಿ, ಶ್ರವಣದಲ್ಲಿ ನಿನ್ನ ಗುಣನಾಮ, ಕಣ್ಣಿನಲ್ಲಿ ನಿನ್ನ ರೂಪ, ಮೂಗಿನಲ್ಲಿ ನಿನ್ನ ಪದಗಂಧ, ಚರ್ಮದಲ್ಲಿ ನಿನ್ನ ಅನುಬಂಧ ಹೃದಯದಲ್ಲಿ ನಿನ್ನ ವಿಲಾಸ - ಇವು ಬರುವ ಹಾಗೆ ಯಾವಾಗಲೂ ಸತ್ಕರಿಸು, ಸ್ವಾಮೀ!

೨೯. ಸ್ವಾಮೀ ಎಷ್ಟೊಂದು ಸುಕೃತಗಳ ಫಲದಿಂದ ನೀನು ಚೇತರಿಸಿ ನಮ್ಮ ಕಣ್ಣುಗಳಿಗೆ ಗೋಚರಿಸಿದಿಯೋ! ಈ ತನುಗಳು ನಿಮ್ಮ ಚರಣಗಳಿಗೆ ನೈವೇದ್ಯವಾಗಲಿ ಎಂದು ಅತಿ ಭಕ್ತಿಯಿಂದ ಉದ್ದಂಡ ಪ್ರಣಾಮಗೈಯ್ದರು.

೩೦. ತ್ರಾಹಿ ಕರುಣಾರ್ಣವ! ಪರಾರ್ಥ! ಪರಿಪೂರ್ಣ ತ್ರಾಹಿ ಪರಮಾರ್ಥ! ಜಗದರ್ಥ! ಪದತೀರ್ಥಾ! ತ್ರಾಹಿ ತ್ರಿದಶಾಧಿಪತಿ ವಂದ್ಯ! ಭವದೂರಾ! ತ್ರಾಹಿ ಗರುಡಧ್ವಜ! ಋತ ಧ್ವಜ ನಮಸ್ತೇ ಎಂದರು.

೩೧. ಪಂಕರುಹನಾಭ!ಕರ ಪಂಕಜ ವಿಲಾಸ! ಸಂಕರುಹನೇತ್ರ! ಮುಖ ಪಂಕಜ ಸುಗಂಧ! ಪಂಕರುಹ ಪಾದ! ಹೃದ್ಪಂಕಜ ನಿವಾಸ! ಪರಿಕರುಹ ಜಾತಪಿತ! ಪಂಕಜ ನಮಸ್ತೆ ಎಂದರು.

೩೨. ಇಲ್ಲಿಗೆ ಹನ್ನೊಂದನೆಯ ಅಧ್ಯಾಯವಾಯಿತು. ಬ್ರಹ್ಮಸುತನ ಈ ಸೂಕ್ತಿಗಳನ್ನು ಕೇಳಿದ ಶ್ರವಣಗಳಿಗೆ ಕರ್ಮಲತೆಯನ್ನು ಖಂಡಿಸುವುದಕ್ಕೆ ನಿಜವಾದ ಸನ್ಮತಿಯನ್ನು ವಿಷ್ಣು ಸದನದಲ್ಲಿ ಶ್ರೀಹರಿಯು ಒದಗಿಸುತ್ತಾನೆ.

ಅಧ್ಯಾಯ ೧೨

೧. ಸುಮನಸರೇ ಕೇಳಿ! ಆತ್ಮಭವರು ಹೀಗೆ ಸ್ತುತಿಸಿದ ವಿಮಲ ಸಾರ ರಹಸ್ಯವನ್ನು ಅಚ್ಯುತನು ಕೇಳಿ ಪ್ರೀತಿಗೊಂಡನು. ನಮಿಸಿ ಸ್ತುತಿ ಮಾಡುತ್ತಿರುವ ಭಕ್ತರ ತಲೆಯನ್ನು ಹಿಡಿದು, ತನ್ನ ಕೈಗಳಿಂದ ಬರಸೆಳೆದು ಬಿಗಿದಪ್ಪಿ (ಹೀಗೆಂದು) ನುಡಿದರು.

೨. "ಇಲ್ಲಿಗೆ ಬಂದುದು ಒಳ್ಳೆಯದಾಯಿತು" ಎಂದು ವಿನಯ ಪೂರ್ವಕವಾಗಿ ಅಂಗೈಯ್ಯಿಂದ ಅವರ ತಲೆ, ಬೆನ್ನು, ಹೊಟ್ಟೆಯನ್ನೆಲ್ಲಾ ನೇವರಿಸಿದನು. ತಮ್ಮ ಆಳುಗಳಿಂದ ಉಂಟಾದ ದುಃಖವನ್ನು ನಿವಾರಿಸಿ, ಜನಾರ್ದನನು ಹೀಗೆಂದು ಹೇಳಿದನು.

೩. ನಿಮ್ಮ ಗುಣಭಾವವನ್ನು ತಿಳಿಯದೆ, ದ್ವಾರವನ್ನು ಕಾಯುತ್ತಿರುವ ಕೆಟ್ಟವರು ಅನೇಕ ದೋಷಫಲಗಳಿಂದಾಗಿ ತೊಂದರೆಯನ್ನುಂಟು ಮಾಡಿದರು. ಅವರಿಗೆ ಪ್ರತಿಯಾಗಿ ನಿಮ್ಮ ಬಾಯಿಂದ ಸರಿಯಾದ ಫಲವು ದೊರೆಯಿತು. ಶೋಕಿಸದಿರಿ, ನನ್ನನ್ನು ನೋಡಿ ಸೈರಿಸಿ - ವ್ಯಾಕುಲವನ್ನು ಬಿಡಿ ಎಂದನು.

೪. ನನಗೆ ನಿಶ್ಚಯವಾಗಲೂ ಈ ಕೆಟ್ಟವರಿಂದ ಅಪಕೀರ್ತಿ ಬಂತು. ಸತ್ತುಗಳಾದ ನೀವು ವೈಕುಂಠ ಪುರಕ್ಕೆ ವರಮೃತ್ಯುವಾದಿರಿ. ನಿಮ್ಮ ವರ್ತಮಾನವನ್ನು ಆಪ್ತತೆಯಿಂದ ನೋಡದ ನಾನು ಕೀರ್ತಿಗೆ ಅಪರಾಧ ಮಾಡಿದ ಧೂರ್ತನೆಂದು ಜಗತ್ತಿನಲ್ಲಿ ಹೇಳಿಕೊಳ್ಳ ಬೇಕಾಯಿತಲ್ಲ!

೫. ಅವರ ಅಪರಾಧವನ್ನು ಸೈರಿಸಿ ಎಂದು ನಾನು ಬೇಡಿಕೊಳ್ಳುತ್ತಿದ್ದೇನೆ. ಕೇಡು ಮಾಡಿದವರು ಅವರಲ್ಲ ನಾನೆಂದು ತಿಳಿದುಕೊಳ್ಳಿ. ಅಯೋಗ್ಯವಾದುದನ್ನು ಮಾಡಿದರೆ ಭೃತ್ಯನ ಅಪರಾಧವಲ್ಲ ಸ್ವಾಮಿಯ ಅಪರಾಧವೆಂದ ಲೋಕರೂಢಿಯನ್ನು ಪಾಡಾಗಿ ವರ್ಣಿಸುವ ಸತ್ಯವನ್ನು ನಾನು ಬಲ್ಲೆ.

೬. ನಿಮಗೆ ಅಪರಾಧ ಮಾಡಿದ ನನ್ನ ದೇಹವನ್ನು ಖಂಡಿತವಾಗಿಯೂ ಖಂಡಿಸುತ್ತೇನೆ. ನಿಮಗಿಂತ ಬಲಿಷ್ಟರಾದವರು ಈ ಭುವನದೊಳಗೆ ಯಾರಿದ್ದಾರೆ? ವಿಷ್ಣು, ಬ್ರಹ್ಮ, ರುದ್ರರಿಗಿಂತ ನೀವೇ ಬಲಿಷ್ಠರಾದವರು ನಿಮ್ಮ ಚರಣಕ್ಕೆ ವಂದಿಸುವುದಕ್ಕೆ ಮಾತ್ರ ನಾನು ಯೋಗ್ಯನಲ್ಲವೇ ಎಂದನು.

೭. ಬ್ರಾಹ್ಮಣರಿಂದಾಗಿಯೇ ನಾನು ತಂದೆ ತಾಯಿಯರ ಮೂಲಕ ಹುಟ್ಟಿದೆನಲ್ಲವೇ, ಬ್ರಾಹ್ಮಣರೇ ನನಗೆ ಶ್ರೀ ಗುರುವೆಂದು ಎಲ್ಲರೂ ನಮಿಸುತ್ತಾರೆ. ಬ್ರಾಹ್ಮಣರಲ್ಲಿ ಯಾರು ವೇದ -ಪುರಾಣ ಪಂಡಿತರೋ ಅವರೇ 'ಬ್ರಹ್ಮ' ಎಂಬ ಮೇಲ್ಮೆಯ ಮೇಲೆ ನನಗೆ ಯಾವಾಗಲೂ ಸಮ್ಮತಿಯಿದೆ.

೮. ನಿಮ್ಮ ಪದಭಕ್ತಿಯಿಂದ ನಾನು ಯಾವತ್ತೂ ಪವಿತ್ರನಾದೆ. ನಿಮ್ಮ ಪದವನ್ನೂ ಪೂಜಿಸಿದ ಫಲದಿಂದ ದೋಷವು ಲಯವಾಯಿತು. ಲೋಗರೆಲ್ಲ ಭಜಿಸುವ ಲಕ್ಷ್ಮಿಗೆ ವೃಕ್ಷಮಂದಿರ ಆದುದು ನಿಮ್ಮ ದಿವ್ಯ ಕಡೆಗಣ್ಣುಗಳ ನೋಟದಿಂದ ಎಂದು ಹೇಳಿದನು.

೯. ಯೋಗವಿತ್ತರಾಗಿ ನಿತ್ಯವೂ ನನ್ನನ್ನು ಭಜಿಸುವ ಗುಣಜ್ಞರು ಬಾಯಿಯ ತುತ್ತಿಗೊಮ್ಮೆಯಂತೆ ಸ್ಮರಿಸಿ ನನಗೆ ನೈವೇದ್ಯವನ್ನು ಅಶಿಸುತ್ತಾರೆ. ಭಕ್ತಿಶೂನ್ಯರಾದವರು ಯಾಗಗಳನ್ನೆಲ್ಲ ಮಾಡಿದರೂ ಫಲವೇನು ಬಂತು? ಭಾಗವತರಾದವರ ಭಕ್ತಿಗೆ ಸರಿಯಾದ ಹೋಲಿಕೆ ಯಾವುದೂ ಇಲ್ಲ.

೧೦. ಒಂದು ಮುಷ್ಟಿಯನ್ನು ತಿನ್ನುವಾಗ ಕೇಶವ ಎಂದು ಭಕ್ತರು ಧ್ಯಾನಿಸುವರು. ಮತ್ತೊಂದಕ್ಕೆ ನರಸಿಂಹ ವಾಮನ ಮಾಧವ, ಮಧುಸೂದನಾ ಎಂದು ಅಂಜದೆ ಹೇಳಿ ಭಕ್ತಿಯಿಂದ ಭಜಿಸುತ್ತಾರೆ. ಅದು ನನಗೆ ಅತಿತೃಪ್ತಿಯಾಗಿ ನಿತ್ಯವೂ ನಾನು ಅವರ ಹೊಟ್ಟೆಯಲ್ಲಿದ್ದು ಅವರ ಪಾದವನ್ನು ಭಜಿಸುತ್ತಿರುತ್ತೇನೆ.

೧೧. ಮಸ್ತಕದಲ್ಲಿ ನಿಮ್ಮ ಪಾದದ ಧೂಳನ್ನು ಧರಿಸಿದ ನನ್ನ ತಲೆಯನ್ನು ತೊಳೆದ ತೀರ್ಥನನ್ನು ಈಶ್ವರನು ನೆತ್ತಿಯಲ್ಲಿ ಧರಿಸುತ್ತಾನೆ. ಮಾಯೆಯೂ ನಿತ್ಯವೂ ಇಲ್ಲಿಗೆ ಬಂದು ಕೈಮುಗಿದು ನನ್ನ ಪಾದವನ್ನು ಓಲಗಿಸುವಳು. ಅದಕ್ಕೆ ಉತ್ತಮರೆನಿಸಿದವರನ್ನು ನನ್ನ ಬಳಿಯಲ್ಲಿ ಇರಿಸಿಕೊಂಡುದೇ ಕಾರಣವಾಗಿದೆ.

೧೨. ಸೇವಿಸಿ ಸ್ತುತಿ ಮಾಡಿ ಕೀರ್ತಿಸಿದುದಾದರೆ ಅನಾಮಿಕರಾದ ಯಾರೇ ಮಾಡಿದ ಅನರ್ಥವೂ ಪಾವನವಾಗುತ್ತದೆ. ಸದ್ಭಾವನೆಯಿಂದ ನಿಮ್ಮನ್ನು ಅರ್ಚಿಸಿದ ಫಲದಿಂದ ಭೂಮಿಯ ಗುಣಕೀರ್ತಿ, ಭುಜಕೀರ್ತಿ, ಸಾತ್ವಿಕ ಶಾಂತತೆಯು ಕೇವಲವಾಗಿ ಸಂಭವಿಸಿದೆ.

೧೩. ಯಾರಾದರೂ ನನಗೆ ಅಪರಾಧವನ್ನು ಹೇಳಿ ದೂಷಿಸಿದುದಾದರೆ ಅದನ್ನು ನಾನು ಮರೆಯುತ್ತೇನೆ. ಆದರೆ ನನ್ನಲ್ಲಿ ಅರ್ಥ ಪ್ರಾಣ ಅಭಿಮಾನವನ್ನಿರಿಸಿದ ಭಕ್ತರನ್ನು ಮರೆಯಲಾರೆನು. ಆದರೆ ಯಾರಾದರೂ ಅವರನ್ನು ಸಲುಗೆಯೆಂದು ತಿಳಿದು ಮಂಜಿನ ಕಣದಷ್ಟಾದರೂ ನೋಯಿಸಿದರು ಎಂದಾದರೆ, ಅದನ್ನು ಶತಕೋಟಿ ಕಲ್ಪಾವಸಾನದವರೆಗೂ ಬಿಡೆನು.

೧೪. ಇದನ್ನು ತಿಳಿಯದೆ, ಅಂತರಾತ್ಮ ವಿಮೂಢರಾದ ಮಹಾತ್ಮರು - ಹೃದಯ ಅಶುದ್ಧರಾದವರು ಆತ್ಮ ವಿವೇಕ ಅಮಿತಧೇನುವನ್ನು - ಸದರವೆಂದು ತಿಳಿದು ಅತೀದೋಷಕ್ಕೊಳಗಾಗುತ್ತಾರೆ. ಅವರು ಯಮನ ಪರಿಚಾರರನ್ನು ಎದುರು ಹಾಕಿಕೊಂಡು, ಮಹಾನರಕದಲ್ಲಿ ನರಳುತ್ತಾರೆ.

೧೫. ನನ್ನನ್ನು ನಂಬಿದ ಭಕ್ತರು ಸಿಟ್ಟಾಗಲಿ, ಬೈಯಲ್ಲಿ ನಾನು ಸುಮ್ಮನಾಗುತ್ತೇನೆ. ನನ್ನ ಕುರಿತು ಮಾತಾಡಲಿ, ದೂಷಿಸಲಿ, ಘೋಷಿಸಲಿ ನನಗೆ ಪರಿತೋಷವೇ. ನನಗೆ ಸ್ತುತಿ ನಿಂದೆಗಳೆರಡೂ ಸರಿಯೇ -ಮತಭೇದವಿಲ್ಲ. ಆದರೆ ನನ್ನ ಭಕ್ತರನ್ನು ಯಾರೂ ದಂಡಿಸಬಾರದು ಅದು ನನ್ನ ಪ್ರತಿಜ್ಞೆ.

೧೬. ಯಮನ ಹಾಗೆ ಬಂದು, ಭೃಗು ಎಂಬುವನು ಹಿಂದೆ ನನ್ನ ಎದೆಗೆ ಒದೆದಾಗ ಸೈರಿಸಿದುದನ್ನು ಕೇಳಿದಿರೋ? ಅಲ್ಲಿಂದ ನನಗೆ ಶ್ರೀವತ್ಸ ಎಂಬ ವಿಭೂಷಣವೇ ಉಂಟಾಯಿತು. ಲಕ್ಷ್ಮಿಯು ನನ್ನ ಎದೆಯನ್ನೇ ಆವಾಸ ಸ್ಥಾನವನ್ನಾಗಿ ಮಾಡಿಕೊಂಡಳು.

೧೭. ಹೀಗೆ ನನಗೆ ಏನಾದರೂ ಆಪತ್ತು ಒದಗಿದರೆ ಅದನ್ನು ಸೈರಿಸುತ್ತೇನೆ. (ಆದರೆ) ನನ್ನ ಭಕ್ತರನ್ನು ನಿಂದಿಸದೆ ನೆರವಿತ್ತು ಪಾಲಿಸಬೇಕಷ್ಟೇ. ಒಂದಿಷ್ಟಾದರೂ ದೂಷಿಸುವ ದೂಷಣೆಯನ್ನು ಕೇಳಿದ್ದೇ ಆದರೆ, ಯಮನ ಸೇವಕರು ಖಂಡಿತವಾಗಿಯೂ ಅವರನ್ನು ನಿಗ್ರಹಿಸದೆ ಇರಲಾರರು.

೧೮. ಅಷ್ಟು ಮಾತ್ರವಲ್ಲ - ನನ್ನ ಭಕ್ತರನ್ನು ಬೈಯ್ಯುವ ದುಷ್ಟ ಮನುಷ್ಯರು ಏನೂ ಕಾಣದೆ ಮೂಕರಾಗಿ ಜನಿಸುವರೆಂಬುದು ನಿಶ್ಚಯವೇ. ನಿಜವಾಗಿಯೂ ಅದನ್ನು ಕೇಳಿದವರು ಅಂಧಕರಾಗುತ್ತಾರೆ. ಎಂಬುದನ್ನು ಖಂಡಿತವಾಗಿಯೂ ಭೂಮಿಯ ಜನರಿಗೆ ತೋರಿಸುತ್ತೇನೆ.

೧೯. ಭಕ್ತರ ಪರಿಹಾಸ್ಯವನ್ನು ಕೇಳುವ ಕಿವುಡರ ಕಿವಿಯು ಮಂದವಾಗಿರುವುದೇ? ಈ ಯುಕ್ತಿಯನ್ನು ತಿಳಿಯದ ಜನರು ತತ್ತ್ವಲಕ್ಷಣವನ್ನೂ ನೋಡದೆ, ಇರುವಲ್ಲಿ ಅನರ್ಥವನ್ನುಂಟು ಮಾಡುತ್ತಾರೆ. (ಮುಂದೆ) ಯಮ ಮಂದಿರಕ್ಕೆ ಹೋಗಿ ಭೂಮಿಯಲ್ಲಿ ಹುಟ್ಟುವ ಶಕ್ತಿಯು ಜನಗಳಿಗೆ ಉಂಟಾಗುತ್ತದೆ.

೨೦. ನನ್ನನ್ನು ಅರ್ಚಿಸುವ ಹಾಗೆ (ನನ್ನ ಭಕ್ತರನ್ನೂ) ಪೂಜಿಸಬೇಕು. ಹದಿನಾರು ರೀತಿಯ ಉಪಚಾರದಿಂದ ನನಗೆ ಬೇಕಾಗುವ ಹಾಗೆ ಅವರನ್ನೂ ಸ್ತುತಿಸಬೇಕು. ಬ್ರಾಹ್ಮಣರ ಸಮೂಹವನ್ನು ತನಗೆ ಆಯುಷ್ಯ, ಗುಣ, ಕೀರ್ತಿ, ಧನ ಸಂವರ್ಧಿಸುವಂತೆ ವಿನಯದಿಂದ, ಉಪಚರಿಸಿ ವಂದಿಸಬೇಕು ಇದರಲ್ಲಿ ಸಂದೇಹವಿರಬಾರದು.

೨೧. ನೀವು ವಿಪ್ರರಲ್ಲಿಯೇ ಉತ್ತಮರಾದವರೆಂಬುದು ಲೋಕ ಪ್ರಸಿದ್ಧವಾದುದೇ. ನಿಮಗೆ ಭಕ್ತಿಯಿಂದ ಪೂಜೆ ಸಲ್ಲಿಸಬೇಕೆಂಬುದು ಸ್ಮೃತಿಸಿದ್ಧವೇ. ಬುದ್ಧಿಯಿಲ್ಲದ ದ್ವಾರಪಾಲಕರು ನಿಮ್ಮನ್ನು ಮನ್ನಿಸದಿದ್ದುದು ದೋಷವೇ ಸರಿ. ಕ್ಷಿಪ್ರವಾಗಿ ನಿಮ್ಮನ್ನು ಕಾಣಲಾಗದಿದ್ದುದಕ್ಕೆ ಏನೆಂದು ಹೇಳಲಿ! ಶಿವಾ! ಇದನ್ನು ನೀವೇ ತಿಳಿಯಬೇಕು.

೨೨. ಸಿರಿಯಲ್ಲಿ ನನಗೆ ಕಡಿಮೆ ಮಮತೆ. ಬ್ರಹ್ಮಾದಿ ಅಮರಾದಿಗಳಲ್ಲಿ ನನಗೆ ಸ್ನೇಹವಿಲ್ಲ. ಸುರರಾಜನೇ ಮೊದಲಾದ ಮಹಾತ್ಮರ ಸಂಗೋಷ್ಠಿ ವಾರ್ತೆಯೂ ನನಗೆ ಅಷ್ಟೇ. ಸಚರಾಚರದಲ್ಲಿ 'ಸರಿ'ಯೆಂದು ನನ್ನನ್ನು ನಂಬಿದ ಭಕ್ತ ಅಮೃತಕ್ಕಿಂತಲೂ ಮಿಗಿಲು. ಜೀವಾತ್ಮರು ಇದನ್ನೂ ತಿಳಿಯಿರಿ.

೨೩. ಮಾಡಿದ ಸರ್ವಾಪರಾಧವನ್ನೂ ಬುದ್ಧಿಯಲ್ಲಿ ನೀವು ಸೈರಿಸಿ. ಮಂದಭಾಗ್ಯರು ಕುಂದನ್ನು ತಂದು ಅಂದವನ್ನು ಕೆಡಿಸಿದರು. ಲೋಪದೋಷಗಳನ್ನು ಮಾಡಿದವನು ನಾನೇ. ಸಮಸ್ತವನ್ನೂ ಕ್ಷಮಿಸಬೇಕು ಎಂದು ಇಂದಿರಾಪತಿಯು ಹೇಳಿ ಅವರಿಗೆ ವಂದಿಸಿದನು. ಇದು ಅದ್ಭುತವಾದುದು.

೨೪. ಹರಹರಾ ಎಂದು ಸಮಸ್ತ ವೇದ, ಪುರಾಣ, ಶಾಸ್ತ್ರ ಶ್ರುತಿ ಸ್ಮೃತಿಗಳು ಬಹುವಾಗಿ ಘೋಷಿಸಿ ಚೋದ್ಯಪಟ್ಟು, ಮೂಗಿನಲ್ಲಿ ಬೆರಳಿಟ್ಟರು. ಪರಮ ಋಷಿಗಳು ಇದರ ಸನ್ಮತಿ ತಿಳಿಯಲಾಗದೆ, ಇದರ ಅರ್ಥವೇನೆಂದು ಬುದ್ಧಿಯಲ್ಲಿಯೇ ವಿಚಾರಿಸ ತೊಡಗಿದರು.

೨೫. ಮೃದು - ಲಘುತ್ವ, ಮಧುರ ಗಂಹರ, ಸದ್ವಿನಯ ಗುಣ ಸಂಪದದಿಂದ ಉಂಟಾದ ವಾಕ್ಸುಧೆಯನ್ನು ಎಡೆಬಿಡದಂತೆ ಪ್ರಸನ್ನಗೊಳಿಸುವುದನ್ನು ಎಲ್ಲರೂ ನೋಡಿದರು. ಬೆದರು ದೃಷ್ಠಿಯಿಂದ ಆತನ ಮುಖವನ್ನು ಈಕ್ಷಿಸಿ, ಕೆತ್ತಿದ ಮೂರ್ತಿಯ ಹಾಗೆ ಸದಮಳಜ್ಞರ ಹೃದಯ ಪಲ್ಲವವು ತುಂಬಿ ಬಂದಿತು.

೨೬. ಸರ್ವ ಜಗನ್ಮಯನೇ! ಲೋಕ ಸಂಗ್ರಹನಾದ ನೀನು ಆಶ್ರಯಿತರಾದ ನಮ್ಮನ್ನು ಬೇಡಿಕೊಳ್ಳುವುದೇಕೆ? ಪ್ರಾರ್ಥಿಸುವುದೇಕೆ? ಬಹುವಾಗಿ ಸ್ತುತಿ ಮಾಡುವ ವೇದ ಪುರಾಣಾದಿಗಳು ನೋಡದ ವಸ್ತುವು - ಸಜ್ಜನರನ್ನು ಭಕ್ತಿಯಿಂದ ನೋಡಲಿಲ್ಲವೆಂದು ಶೋಕಿಸುತ್ತಿರುವೆಯಲ್ಲ?

೨೭. ಹೀಗೆಂದು ಅನುಮಾನಿಸಿ ಯೋಗಿಗಳು ನೆಲೆ ಕಾಣದೆ ಇಂದೀವರನಾಭನ ಪಾದಾಂಬುಜವನ್ನು ನೋಡಿದರು. ಆನಂದಾಶ್ರುಗಳಿಂದ ಕೈ ಮುಗಿದು ಸಭೆಗೆ ಕೇಳುವಂತೆ ಚಂದದಿಂದ ಸ್ತುತಿ ಮಾಡಿದರು.

೨೮. ದೇವೋತ್ತಮನೇ! ನಾವು ನಿಮ್ಮ ಪಾದಾಶ್ರಯರು. ನೀವು ನಮಗೆ ಏಕೆ ವಂದಿಸಬೇಕು? ವೇದ ಪುರಾಣ ಶಾಸ್ತ್ರಗಳು ಹಿಂದೆ ಏನೆಂದು ಹೇಳಿವೆ? ದೇವರುಗಳಿಗೆ, ಲೋಕಪಿತಾಮಹರಿಗೆ ನೀನು ಗುರುವಲ್ಲವೇ? ಈ ವಿಶ್ವದ ಅಖಿಲಾತ್ಮ ಸಚೇತನನಾದ ನಿನಗೆ ಶರಣು ಎಂದು ಅವರು ಹೇಳಿದರು.

೨೯. ಹೃದಯದಲ್ಲಿ ನಿಮ್ಮ ಪಾದವನ್ನು ನಿರ್ಧರಿಸಿ, ಸಂಸಾರ ಸಮುದ್ರದಿಂದ ಹೊರಗಾಗುತ್ತೇವೆ ಎಂದು ಸರ್ವರೂ ಹೇಳುತ್ತಾರೆ. ಆದರೆ ಇದೀಗ ಬ್ರಾಹ್ಮಣರ ಪಾದ ಧೂಳಿಯನ್ನು ಧರಿಸಿಯೇ ಶುದ್ಧತೆಯಿಂದಿರಬಹುದು ಎಂಬುದನ್ನು ಈವರೆಗೆ ಶ್ರುತಿಯೂ ಸಹ ಕೇಳಿಲ್ಲ.

೩೦. ಜಗದೀಶ್ವರನನ್ನು ಅರ್ಚಿಸಿ ನಿತ್ಯವೂ ಬಯಸುತ್ತಿರುವ ಲಕ್ಷ್ಮಿಯು ತೆಗೆದ ತುಳಸೀದಳದಿಂದ ಅರ್ಚಿಸಿದ ಶ್ರೀಪಾದ ಸರೋಜ ನಿನ್ನದು. ಪುಷ್ಪ ರಸಗಳನ್ನಾಗಲೀ ಭೃಂಗಗಳ ಕಾಂತಿಯನ್ನಾಗಲಿ ಆಕೆ ಲೆಕ್ಕಿಸಲಿಲ್ಲ. ಹಾಗಾದುದರಿಂದ ವಿಪ್ರರಿಗೆ ಆಶ್ರಯವಾಗಲೆಂದು ಎದೆಯನ್ನೇ ನಿಲಯವಾಗಿಸಿ ಕೊಂಡದ್ದು ತಾನೇ?

೩೧. ಒಮ್ಮೆಯೂ ಕೆಳಗೆ ಇಳಿಯದೆ ಆ ವಧುವು ನಿಮ್ಮನ್ನು ಭಜಿಸುವಳು. ವಿಚಾರಿಸುವುದಾದರೆ ಶ್ರೀ ಭಾಗವತರಿಗೆ ನಿರ್ದಿಷ್ಟವಾದ ಕಾಲವೆಂಬುದಿಲ್ಲ. ಸ್ವರ ಗಾನವನ್ನು ಆಲೋಚಿಸುವುದಾದರೆ ಸಂಸಾರವು ನಿಮಿತ್ತವಾದುದು. ನೀನು ಪರಿಣಾಮ ಸುಖಾಬ್ಧಿಯಲ್ಲವೇ? ಜಯಾ! ಭಕ್ತಾಶ್ರಯ ಮೂರ್ತಿಯೇ ಎಂದರು.

೩೨. ಭಕ್ತರಾದವರು ಯಾವಾಗಲೂ ಇದನ್ನು ನಂಬಬೇಕು. ಇಂದಿರೆಯು ಭೃಗುಪಾದವನ್ನು ಉರಸ್ಥಲದಲ್ಲಿರಿಸಿ, ನಮಗೆ ಆಶ್ರಯವಾಗುವಂತೆ ಮಾಡಿದಳು. ಈ ತತ್ತ್ವಗಳ ಅರ್ಥವನ್ನು ಈ ಲೋಕದ ಜನಗಳಲ್ಲಿ ಯಾರು ನೋಡಿದ್ದಾರೆ? ಮುಕ್ತೀ ಸುಖ! ಭಕ್ತ ಹೃದಯೊಬ್ಬ! ಜಯ ಅವ್ಯಕ್ತಾಯ ನಮಃ ಎಂದರು.

೩೩. ಧರ್ಮಾಶ್ರಯ! ಧರ್ಮಾಫಲಾತ್ಮಕ! ಧರ್ಮೋದಯ!ಸರ್ವ ಧರ್ಮಾಶ್ರಯ ಸಂಗ್ರಹ! ಧರ್ಮನಿಧೀ! ಧರ್ಮಸ್ಥಿತಿ ರಕ್ಷಾ! ಧರ್ಮಗಳ ಸಾತ್ವಿಕ! ಧರ್ಮ ಮತಿಯಿಂದ ಈ ಬ್ರಾಹ್ಮಣ ಭಕ್ತಿಯನ್ನು ಸನ್ಮಾನಿಸದಿದ್ದರೆ ನಮ್ಮವರ ಗತಿಯೇನು?

೩೪. ಸತ್ವದಿಂದ ಅವತಾರಗಳನ್ನು ಧರಿಸಿದ ಪುರುಷೋತ್ತಮನೇ! ದಿವ್ಯಮೂರ್ತಿಯೋ, ನಿಜವೇಶವನ್ನು ಸಂಗ್ರಹಿಸಿ ಜಗತ್ತನ್ನು ಸುಸ್ಥಿರ ಮಾಡಿರುವೆ. ದುಷ್ಟರನ್ನು ನಾಶಮಾಡಿ, ಸದಾ ಭಕ್ತರನ್ನು ಪಾಲಿಸಿ ಮನ್ನಿಸುವ ಈ ಯುಕ್ತಿಯು ಶ್ರುತಿಯೋಗ್ಯವೇ ಸರಿ.

೩೫. ಭೂಮಿಯ ತಂದೆ ತಾಯಿಗಳು ಮಕ್ಕಳನ್ನು ಪ್ರೀತಿಯಿಂದ ಮೇಲೆತ್ತಿ ತಲೆಯನ್ನು ನೇವರಿಸಿ, 'ಬಾ ನನ್ನ ತಂದೆಯೋ, ಮಗಾ! ಚಿನ್ನ! ಮುದ್ದು! ಮರಿಯಾನೆ! ಎಂದು ಹೊಗಳಿದಾಗ ಪುತ್ರನಿಗೆ ಆನಂದವಾಗುವುದು. ಹಾಗೆಯೇ ನೀನು ಪುತ್ರರ ರೀತಿಯಿಂದ ನಮ್ಮನ್ನು ಸ್ತುತಿಸಿರುವುದರಿಂದ ನಮಗೆ ವಿರಕ್ತಿಯು ಉಂಟಾದುದು.

೩೬. ಇದೆಲ್ಲವೂ ಹಾಗಿರಲಿ. ದ್ವಾರಪಾಲಕರ ಸ್ಥಿತಿ ಏನೆಂಬುದನ್ನು ಬಹಳ ಲಗುಬಗೆಯಿಂದ ಚಿಂತಿಸಿ. ಅವರು ಮಾಡಿದ ಅಪರಾಧಕ್ಕೆ ಸಾಮವೇ, ಭೇದವೇ, ದಂಡವೇ ಎಂಬ ತತ್ತ್ವಾರ್ಥ ನಿರ್ಣಯವನ್ನು ನೀವೇ ಹೇಳಬೇಕು, ಸ್ವಾಮಿ ಎಂದು ಅವರು ವಂದಿಸಿ ಪ್ರಾರ್ಥಿಸಿದಾಗ ಆ ಉದಾರನು ಹೀಗೆಂದನು.

೩೭. (ಈ ವಿಷಯದಲ್ಲಿ) ಮತಭೇದವಿರಿಸಿಕೊಂಡು ನೀವು ಏಕೆ ಆಶ್ಚರ್ಯ ಪಡುವುದು? ಲೋಕದಲ್ಲಿ ನಿಮ್ಮ ವರ್ತನೆಯನ್ನು ಮೀರುವ ಬಲವಂತರು ಯಾರು? ಈ ದುಷ್ಟರಿಗೆ ನೀವೇ ಸರಿ. ಈ ದುಷ್ಟರು ಯಾವ ರೀತಿಯ ಸಾಧಕರು? ಹದಿನಾಲ್ಕು ಲೋಕಗಳೆಲ್ಲ ನೋಡಿದರೂ ಬ್ರಾಹ್ಮಣರ ಮತವೇ ವೇದ ಪ್ರಮಾಣವಾದುದು.

೩೮. ಯಾವ ಯಾವ ರೀತಿಯಿಂದ ಈ ಜನಗಳು ದುಷ್ಕೃತ್ಯವನ್ನುಂಟು ಮಾಡುತ್ತಿರುವರು? ನಮಗೆ ಗೋಚರವಾಗುವ ಫಲಗಳೆಲ್ಲವೂ ಪ್ರಾರಬ್ಧ ಫಲಗಳೇ? ಅಹಂಕಾರ ಎಂಬ ಬೀಜವನ್ನು ಸುಡದೆ ಅವು ಇದ್ದೇ ಇರುತ್ತವೆ. ಅಷ್ಟಲ್ಲದೆ ಆ ವರ್ತನೆಯು ಅಷ್ಟಾಗಿ ಮಾಸಿ ಹೋಗಲಾರದು. ಇನ್ನು ಮುಂದೆ (ಈ ಕುರಿತು) ತತ್ತ್ವಾರ್ಥವನ್ನು ಕೇಳಿ.

೩೯. ಅವರು ಈ ಧರಣಿಯಲ್ಲಿ ಭೀಕರವಾದ ಅವತಾರವೆತ್ತಿ ವಿಪುಲವಾದ ಸಾಹಸ ಪರಾಕ್ರಮಗಳಿಂದ ಸೊಕ್ಕಿ ಮದವೇರುತ್ತಾರೆ. ಸರ್ವರನ್ನೂ ತೊಂದರೆಗೀಡು ಮಾಡಿ ನಿತ್ಯವೂ ನನ್ನ ಧ್ಯಾನ ತಪ್ಪದೆ ಮಾಡುತ್ತಾರೆ. ಲೋಕಕಂಟಕರಾಗಿರಿ ಎಂದು ಪ್ರಸಾದಿಸಿ ಕಳುಹಲನುವಾದರು.

೪೦. ಮುಕ್ತಿ ಪ್ರಾಪ್ತರಾದ ಸಾಧುಗಳು ಮನ ಮುರಿದರು ಎಂಬ ಯುಕ್ತಿಯು ತೋರದಂತೆ ಆ ಮೇಲೆ ನನ್ನ ಬಳಿಗೆ ಇವರು ಬರುವರು. ಭಕ್ತರಾದ ನೀವು ಇದಕ್ಕೆ ಅವಕಾಶ ಕಲ್ಪಿಸಿ, ಸಂತೋಷದಿಂದ ಅವರನ್ನು ಸನ್ಮಾನಿಸಿ, ಯಾತ್ರೆ ಮಾಡಿಸಿರಿ ಎಂದು ಮೆಲ್ಲನೆ ಭಕ್ತ ವತ್ಸಲನು ಹೇಳಿದನು.

೪೧. ಹಲವು ಮಾತುಗಳೇಕೆ? ಮೊದಲೇ ಮನಸ್ಸಿನಲ್ಲಿ ನೀವೇನು ನೆನೆದು ಕೊಂಡಿದ್ದರೋ ಅದೇ ಲಭಿಸಿತು. ಇದು ಉಭಯಾರ್ಥವಾದ ಸಾಧಕವೆಂದು ಹಲವು ಜನಗಳು ತಿಳಿದೇ ಇಲ್ಲ. ನೀವು ಕಲ್ಪಿಸಿದ ಫಲವನ್ನೇ ನಾನೂ ಬಯಸಿದ್ದೇನೆ ಎಂದು ಹೇಳಿದರು.

೪೨. ಬೇರನ್ನು ತಿಳಿದ ಮನುಷ್ಯರಿಗೆ ಎಲೆಯನ್ನು ವೃಥಾ ತೋರಿಸಬೇಕೆ? ಸಾರವನ್ನು ತಿಳಿದ ಮಂದಿಗೆ ವಿವಾದವೆಂಬುದು ಸರ್ವಥಾ ಇರದೆಂಬುದೇ ಸನ್ಮತವಾದುದು. ಹೀಗೆಂದು ಆತನು ತತ್ತ್ವಯುಕ್ತಿಯಿಂದ, ಶಾಸ್ತ್ರ ತಪ್ಪದೆ ಹಾಗೆ ನೋಡಿಕೊಂಡನು. ಆಮೇಲೆ ಮಂದಿರವನ್ನು ನೋಡಲೆಂದು ಒಳಗೆ ಕರೆದನು.

೪೩. ಅವರ ಕೈ ಹಿಡಿದು ಪುರುಷೋತ್ತಮನು ಅಲ್ಲಿಂದ ನಗರದತ್ತ ಹೊರಟನು. ಆತನೊಂದಿಗೆ ಯಾತ್ರಿಸುತ್ತ ಅವರು ಆ ವಿಭವದ ಸಾರವನ್ನು ನೋಡಿದ ವಿಧವನ್ನು ನಾನು ಹೇಗೆ ವರ್ಣಿಸಲಿ! ಶಾಸ್ತ್ರಯುಕ್ತಿಯ ತತ್ತ್ವಲಕ್ಷಣ ಸತ್ತುಗಳು ಅದನ್ನು ಬಲ್ಲರಷ್ಟೆ.

೪೪. ನಿಗಮಕೋಟಿಯು ಅಸಂಖ್ಯವಾಗಿ ಸಾರಿಸಾರಿ ಹೇಳುವ ಸಾರ ರಹಸ್ಯವು, ಅಗಣಿತವಾದ ಅಷ್ಟವಿಭೂತಿ ಘೋಷವು, ನಾಯಕರ ಗಾನವು, ಬಗೆಬಗೆಯ ಶಾಸ್ತ್ರವು, ಅನಂತ ಪಾದಕ ಸೂಕ್ತಿಯು, ಜಗವೇ ಘೂರ್ಣಿಸುವಂತಿರುವ ವಾದ್ಯ ಮತ್ತು ಅದ್ಭುತವಾದ ಪುಷ್ಪವೃಷ್ಟಿಯು-

೪೫. ಮಾಯಾ ವಲ್ಲಭನ ಆತ್ಮಶಕ್ತಿಯು ಯೋಗಸಾರ ಮಹತ್ತ್ವವೂ, ತೋಯಜಾಸನನಾದ ಬ್ರಹ್ಮನ ಸೃಷ್ಟಿಯ ಅದ್ಭುತವಾದ ಮೂಲ ಸಾಧನ ಸಂಗ್ರಹವೂ, ಶ್ರೀಯುರಸ್ಥಲವೂ, ಜನ್ಮವಾಸವೂ ಆಗಿ ರಜಸ್, ತಮಸ್, ಸಾತ್ವಿಕ ಗುಣಗಳಿಂದ ಅಲಂಕರಿಸಲಾದ ಮಹಾವಿಭೂತಿಯನ್ನು ಅಸುರಾಂತಕನು ತೋರಿಸಿದನು.

೪೬. ವಾಸನೆಯ ಸೌರಭಗಳು ನಾಸಿಕದಲ್ಲೆಲ್ಲ ತುಂಬಿಕೊಂಡುವು. ಶ್ರೀ ಸಮರ್ಥ ವಿಭೂತಿಯನ್ನು ದರ್ಶಿಸಿದ ನೇತ್ರಗಳಿಗೆ ಬೇರೆಲ್ಲವೂ ಶೂನ್ಯವಾಯಿತು. ವರ್ಣಿಸುವ ಜಿಹ್ವೆಗೆ ಉದಾಸೀನಗಳುಂಟಾದುವು.

೪೭. ಅಲ್ಲಿ ನಿಂತಿರುವ ಪಾದಧೂಳುಗಳೆಂದರೆ ಸೂರ್ಯ - ಚಂದ್ರ ಸಮೂಹವೇ; ಅಲ್ಲಿ ನಿಂತಿರುವ ಸಾಧುಗಳೆಂದರೆ ರುದ್ರ - ಬ್ರಹ್ಮರೇ ಮೊದಲಾದ ಅಮರರೇ. ಅಲ್ಲಿ ಶೋಭಿಸುವ ಭಕ್ತ ಸಂತತಿಯು ಮುಕ್ತ ಸತ್ವರ ಬ್ರಹ್ಮರೇ. ಅಲ್ಲಿ ಅನೇಕ ದೃಷ್ಟಿ ಚೋದ್ಯಗಳ ಸಾರ ಸಮೂಹಗಳು ಪ್ರಕಾಶಿಸಿದುವು.

೪೮. ಅಗಣಿತ ಐಶ್ವರ್ಯಗಳನ್ನು ನೋಡಿ ಅವರಿಗೆ ಚೋದ್ಯವುಂಟಾಯಿತು. ಅಗಣಿತವಾದ ಅದ್ಭುತ ಸಾರ ವಾರಿಧಿಯಲ್ಲಿ ಮುಳುಗಿ ಮನಸ್ಸುಗಳೇ, ಬತ್ತಿ ಹೋದುವು. ಅಗಣಿತವಾದ ಸ್ತುತಿಯಿಂದ ಆತನನ್ನು ವಂದಿಸಿ, ಅವರು ಸುತ್ತ ಪ್ರದಕ್ಷಿಣೆ ಬಂದರು. ಬಳಿಕ ಅಗಣಿತವಾದ ಆತ್ಮ ಪ್ರಸನ್ನತೆಯಿಂದ ಆ ಯೋಗಿಗಳು ಅಲ್ಲಿಂದ ಯಾತ್ರಿಸಿದರು.

೪೯. ಆತನ ಭಕ್ತಿಯು ಸಾರವನ್ನೂ, ವಿನಯೋಪಚಾರವನ್ನು ಆತನ ಸೌಂದರ್ಯಯುತವಾದ ಶರೀರವನ್ನೂ ತಿಳಿದು ಪರಿಣಾಮಗೊಂಡು, ಆತನನ್ನು ಸ್ತುತಿಸುತ್ತ ಯೋಗಿಗಳು ಮೆಲ್ಲನೆ ಅಲ್ಲಿಂದ ಗಮಿಸಿದರು.

೫೦. ಭಕ್ತರನ್ನು ಬೀಳ್ಕೊಟ್ಟು ಮೆಲ್ಲನೆ ಬಂದನು. ಮೊದಲೇ ಅಲ್ಲಿರುವ ದ್ವಾರಪಾಲಕರನ್ನು ಕರೆದು "ನೀವು ಮನಸ್ಸಿನಲ್ಲಿ ದುಃಖಿಸದಿರಿ" ಎಂದು ತಲೆ, ಎದೆ, ಬೆನ್ನುಗಳನ್ನು ಸವರಿ ಆತನು ಸತ್ಕರಿಸಿದನು. ಭೂಮಿಗೆ ಹೋಗಿರಿ, ದೃಢವಾಗಿಯೂ ನಾನು ನಿಮ್ಮನ್ನು ಕರೆದುಕೊಳ್ಳುತ್ತೇನೆ.

೫೧. ಲೋಕದಲ್ಲಿ ಉತ್ತಮರಾದವರಿಗೆ ನಾನು ಸಮರ್ಥನೇ? ಸತ್ಯವಾಗಿಯೂ ಇದನ್ನು ತಿಳಿದು ನೋಡಿ ಲೋಕದಲ್ಲಿ ಉತ್ತಮರೆಂದರೆ ಬ್ರಾಹ್ಮಣರೇ ಅವರು ನನ್ನಿಂದಲೂ ಸಮರ್ಥರು. ಇನ್ನು ಹೇಳಿ ಸಾಧಿಸುವುದಕ್ಕೆ ಏನಿದೆ? ಈ ಕಾರ್ಯವನ್ನೆಲ್ಲವನ್ನೂ ಲೋಕ ಮಾತೆಯು ಅಂದೇ ಕಲ್ಪಿಸಿದ್ದಳು.

೫೨. ಹೇಳಿ ಫಲವೇನು? ಎಲ್ಲವೂ ಅಲ್ಲಿಗೇ ಸಾರ್ಥಕವಾಗಿ ಎಂದು ಬಿಟ್ಟಿತು. ಹೇಳಿದ ಮಾತು ತಪ್ಪದ ಹಾಗೆ ಕೆಲವು ಕಾಲ ಭೂಮಿಯಲ್ಲಿ ಹುಟ್ಟಿ; ವೀರ್ಯವಂತರಾಗಿ ಬ್ರಹ್ಮಶಾಪವನ್ನು ಉಂಡು ತೀರಿಸಿ, ಆಮೇಲೆ ನಾನು ಇಲ್ಲಿಗೇ ನಿಮ್ಮನ್ನು ತರಿಸಿಕೊಳ್ಳುತ್ತೇನೆ. ಇದು ಸತ್ಯವೆಂದು ನಂಬಿ.

೫೩. ಶ್ರೀಹರಿಯು ಸಾತ್ವಿಕವಾಗಿ ಬುದ್ಧಿಹೇಳಿ, ದುಃಖವನ್ನು ಪರಿಹರಿಸಿದನು. ಬಳಿಕ ದ್ವಾರಪಾಲಕರನ್ನು ಕಳುಹಿಸಿ ಶ್ರೀಹರಿಯು ಅನಂತಾಸನದಲ್ಲಿ ಸ್ಥಿರವಾದನು. ಯಾವಾಗಲೂ ಕೀರ್ತಿಸುವ ಮಹತ್ತುಗಳಿಗೆ ಆಶ್ರಯನೆನಿಸಿದ್ದನು. ಭಕ್ತರು ಅಲ್ಲಿಂದ ತೆರಳಿ ಕಾಶ್ಯಪ ಪುತ್ರರಾಗಿ ಜನಿಸಿದರು.

೫೪. ಶ್ರೀ [illegible]ಕಂದನ ಪಾದಾರವಿಂದವನ್ನು ಸೇವಿಸುತ್ತಿದ್ದ ಭೃತ್ಯರು (ಈಗ) ಬ್ರಾಹ್ಮಣ ವಿರೋಧಿಗಳಾಗಿ ತಾಮಸಿ[illegible]ಾಗಿದ್ದರು. ಆತನ ನಾಮವನ್ನು ಜಪಿಸಿದರೆ ತಾನೇ ಬಂದು ಅವರನ್ನು ಸೀಮೆಯಿಂದ ತಪ್ಪಿಸುವನು. ನೀವು ಆತನನ್ನೇ ನಂಬಿ.

೫೫. ಅಂದೇ ಎಂದು ಎಣಿಸಬೇಡಿ. ಕಾರ್ಯವು ಅನೇಕ ಭೇಟಿಯಿಂದ ಸಾಧ್ಯವಾಗುವುದು. ಸರ್ವರಿಗೂ ಹಾನಿಯುಂಟಾಗಿರುವುದು ಬುದ್ಧಿಪೂರ್ವಕವಾಗಿಯೇ ಎಂದು ತಿಳಿದುಕೊಳ್ಳಿರಿ. ನೀವು ಯಾವಾಗಲೂ ಆತನ ಪಾದಾರವಿಂದವನ್ನು ಧ್ಯಾನಿಸುತ್ತಲೇ ಇರಿ. ಅಂದು ಬಂತು ಎಂಬಲ್ಲಿಯ ವರೆಗೆ ಆತನ ಪಾದಾಂಬುಜವನ್ನು ಚಿಂತಿಸುತ್ತಿರಿ.

೫೬. ವೇದಗೋಚರನ ಬಾಗಿಲನ್ನು ಕಾಯುವವರು. ಆದಿಯಲ್ಲಿ ಬ್ರಹ್ಮನು ನಿರ್ಮಿಸಿದ ಹಾದಿಯನ್ನೆಲ್ಲ ವ್ಯರ್ಥವಾಗಿಸಿ ತಮ್ಮ ಸ್ಥಿತಿಗೆ ಒಪ್ಪುವ ಹಾಗೆ ನಡೆಯುತ್ತಿರುವರು ಎಂಬಲ್ಲಿಗೆ ಈ ಭಗವತ್ಕಥೆಯನ್ನು ವಿಸ್ತರಿಸಲಾಯಿತು. ಇಲ್ಲಿಗೆ ಹನ್ನೆರಡನೆಯ ಅಧ್ಯಾಯವಾಯಿತು. ಇದನ್ನೂ ಭಕ್ತರು ನಿತ್ಯವೂ ಮನ್ನಿಸುತ್ತಿರಿ.

ಅಧ್ಯಾಯ ೧೩

೧. ಲೋಕಕಂಟಕರಾಗಿ ಜನಿಸಿದ ದಾನವರು ಬ್ರಹ್ಮನ ಲೋಕದಲ್ಲೆಲ್ಲ ವ್ಯಾಕುಲಗೊಳ್ಳುವಂತೆ ಮಾಡುತ್ತಿದ್ದರು. ಲೋಕನಾಥನಿಗೆ ಮಹೇಶ್ವರಾತ್ಮಜನಾದ ಗಣಪತಿಗೆ, ಬ್ರಾಹ್ಮೀ, ಶ್ರೀಗುರುವಿಗೆ ಕೈಗಳನ್ನು ಮುಗಿದು ನಾನು ಪ್ರಾಕೃತ ಭಾಷೆಯಲ್ಲಿ (ತುಳುವಿನಲ್ಲಿ) ಕೃತಿ ರಚನೆಯನ್ನು ಮಾಡುತ್ತೇನೆ.

೨. ವಿದುರನೇ ಕೇಳು! ವಿಶ್ವತೋಮುಖನ ದಾಸರು ಈ ರೀತಿಯಾಗಿ ಅವನಿಗೆ ಹೋದರಲ್ಲ? ದಿತಿಯು ಅಚ್ಯುತನಿಗೆ ಅಂಜಿ ನೂರು ವತ್ಸರದ ಬಳಿಕ ಗರ್ಭವನ್ನು ಧರಿಸಿದಳು. ಭೂಮಿಯಲ್ಲಿ ಹುಟ್ಟುವಾಗಲೇ ಅವರು ವೀರ್ಯವರ್ಧನರಾದರು. ಆಗ ಅನಂತನ ಮಸ್ತಕದಲ್ಲಿದ್ದ ಹದಿನಾಲ್ಕು ಲೋಕಗಳೂ ನಡುಗಿದುವು.

೩. ವೀರ್ಯವಂತರೂ, ಶೌರ್ಯರೂ, ಪರಾಕ್ರಮರೂ ಆದ ಅವರ ಭಾರವನ್ನು ಭೂಮಿಯು ತಾಳಲಾಗಲಿಲ್ಲ. ಅನಂತನ ಕೊರಳು ತಗ್ಗಿತು. ವಾರುಧಿಯು ದಡವನ್ನೂ ಮೀರಿ ವರ್ಧಿಸಿತು. ದಿಗ್ಗಜಗಳು ನಡುಗಿದುವು. ತಾವರೆಗೆ ಪ್ರಿಯರಾದ ಚಂದ್ರ -ತಾರೆಗಳು ಧೂಮದಲ್ಲಿಯೇ ಮರೆಯಾದುವು.

೪. ಭೂತಳಗಳು ಸಂಚಲಿಸಿದುವು. ಕೇತುಬಿಂಬಗಳು ಕಾಣಿಸಿಕೊಂಡುವು. ಕೇತುವೇ ಮೊದಲಾದ ನವಗ್ರಹಗಳು ತಮ್ಮಲ್ಲಿಯೇ ಯುದ್ಧ ಮಾಡತೊಡಗಿದುವು. ಮೇಘಗಳು ತಮ್ಮಲ್ಲಿಯೇ ಕಾದು ರಕ್ತ, ಕೀವು ಕೆಸರಿನ ವರ್ಷಧಾರೆಯನ್ನು ವಿಪುಲವಾಗಿ ಕರೆಯಲು ಸರ್ವ ಜನರೂ ಭೀತರಾದರು.

೫. ಸುಳಿಗಾಳಿಗಳು ಪಸರಿಸಿ ಧೂಳೆಲ್ಲ ತುಂಬಿತು. ವೃಕ್ಷಗಳು ಕಿತ್ತು ಬೀಳತೊಡಗಿದುವು. ನಾಯಿ, ನರಿಗಳು ಊಳಿಡತೊಡಗಿದುವು. ಗ್ರಹಣಗಳು ಉದಿಸಿದುವು. ಸೂರ್ಯ - ಚಂದ್ರರ ಸುತ್ತು ಪರಿವೇಶಗಳು ಕಾಣಿಸಿಕೊಂಡುವು. ಮೇದಿನಿಯ ಲಿಂಗಾದಿ ಪ್ರತಿಷ್ಠಾಪನೆಗಳು ಒಲೆ ತೊಡಗಿದುವು.

೬. ದನ, ಕೋಣಗಳು ಭೂಮಿಯನ್ನು ಗೊರಸಿನಿಂದ ಕೆದರತೊಡಗಿದುವು. ನಾಯಿ, ನರಿ ಸಂತತಿಗಳು ಊಳಿಡುತ್ತ ಕೆಂಡವನ್ನು ಕೆದಕತೊಡಗಿದುವು. ಅಂಡಜಗಳೆಲ್ಲ, ಸೇರಿಕೊಂಡು

ಭೂಮಂಡಲದ ಮೇಲೆಲ್ಲ ಬೀಳತೊಡಗಿದುವು. ಸೂರ್ಯನ ಹರಿತವಾದ ರಶ್ಮಿಯ ಬೇಗೆಗೆ ನೀರಲ್ಲಿರುವ ತಾವರೆಯು ಕರಟಿ ಹೋಯಿತು.

೭. ಅಲ್ಪ ನೀರಿರುವ ಕೆರೆ ಬಾವಿಗಳಲ್ಲಿ ತೆರೆಗಳೇಳ ತೊಡಗಿದುವು. ಒಮ್ಮೆ ಗಿರಿ ಶಿಖರಗಳು ಭೂಮಿಯ ಎರಡೂ ದೆಸೆಗಳಲ್ಲಿ ಬೀಳತೊಡಗಿದುವು. ಗೋಮಹಿಷಾದಿಗಳ ಕೆಚ್ಚಲಿನಲ್ಲಿ ದಿನಂಪ್ರತಿಯು ರಕ್ತ ಸುರಿಯತೊಡಗಿತು. ಇದ್ದಕ್ಕಿದ್ದಂತೆ ನೀರಿನ ಮೇಲೆ ಕಲ್ಮಶ ಕಂಡು ಬಂದಿತು.

೮. ಕಲ್ಪಕಾಲದ ಅವಸಾನ ಕಾಲದಲ್ಲಿ ಬರುವ ಘೋರವಾದ ವಿಪತ್ತಿದು. ಇದು ಅಲ್ಪವಾದುದೇನಲ್ಲ. ಈ ಜಗತ್ತೆಲ್ಲವನ್ನೂ ಸಂಹರಿಸುವುದಕ್ಕಿರುವುದು ಹುಟ್ಟಿನಲ್ಲೇ ಇದು ಹೀಗಿದೆ ಎಂದಾದರೆ, ಮುಪ್ಪಿನ ಕಾಲಕ್ಕೆ ಜಾಗವೇ ಇರಲಾರದು ಎಂದು ಜನಗಳೆಲ್ಲರೂ ನಾಗಭೂಷಣನ ಚಿಂತೆಯಿಂದಿದ್ದರು.

೯. ಹುಟ್ಟಿದ ಅವಳಿ - ಮಕ್ಕಳನ್ನು ಮುನಿಯು ಹೋಗಿ ನೋಡಿದನು. ಪಟ್ಟವಲ್ಲಭೆಯೊಡಗೂಡಿ, ಜಾತಕರ್ಮವನ್ನು ಮಾಡಿದನು. ಜ್ಯೇಷ್ಠನಾದವನು ಹಿರಣ್ಯಕಶಿಪು ಎಂದೂ ಕನಿಷ್ಠನಿಗೆ ಹಿರಣ್ಯಾಕ್ಷನೆಂದೂ ನಾಮಕರಣವಾಯಿತು.

೧೦. ಕಾಲಭೈರವನ ಕಣ್ಣಿನ ಬೆಂಕಿಯೋ? ಕಾಲ ರುದ್ರನ ದಾಡೆಯೋ? ಕಾಲ ಮುತ್ತುವ ಕಾಲಕ್ಕೆ ಬರುವ ಸಂವರ್ತ ಮೇಘದ ಬೆಂಕಿಯೋ? ಕಾಲ ಕಲ್ಪದ ಅವಸಾನದಲ್ಲಿ ಕಾಣಿಸಿಕೊಳ್ಳುವ ಬಡಬಾಗ್ನಿಯೋ? ಬಾಲ ಸಿಂಹಗಳು ಇಣುಕುತ್ತಿವೆಯೋ ಎಂಬ ಹಾಗೆ ಆ ಸುಕುಮಾರರು ಇದ್ದರು.

೧೧. ಮೇರು ಪರ್ವತದ ಹಾಗೆ ಇರುವ ಧೀರರವರು. ಶೂರ ವಜ್ರ ದೃಢಕಾಯರೂ ಆದವರು. ಕ್ರೂರಸಿಂಹಗಳ ಹಾಗೆ ಪರಾಕ್ರಮ ಶಾಲಿಗಳೂ, ಘೋರಮೃತ್ಯು ಭಯಂಕರರೂ ಆಗಿರುವರು. ಧಾರಿಣಿಯಲ್ಲಿ ಅವರು ಯಾತ್ರಿಸುತ್ತಿರಲು ನೀರಿನ ತೊರೆಯ ಹಾಗೆ, ಕಾಲ ಹೆಜ್ಜೆಗೆ ಭೂಮಿಯು ನಡುಗುತ್ತಿತ್ತು. ಆ ಪರಾಕ್ರಮವನ್ನು ಏನೆಂದು ವಿವರಿಸಲಿ!

೧೨. ಅವರು ನಲಿದು ಸಪ್ಪಳ ಮಾಡುವಾಗ ಲೋಕವೇ ಚಲಿಸುತ್ತಿತ್ತು. ಕೈ ಬೀಸುತ್ತಿರುವಾಗ ಎರಡೂ ಕತ್ತಲೆ ತುಂಬಿ ನೆಲೆ ತಪ್ಪುವಂತಿತ್ತು. ಸುರಾಸುರ ಸಮುದಾಯವು ಬಾಲಕರು ಓಡಾಡುತ್ತಿರಲು ಅಡವಿಗಳಿಗೆ ಓಡಿ ಹೋದರು. ಆ ಬಾಲಕರನ್ನು ನೋಡಿ ಸರ್ವ ಗೃಹಾಧಿಪತಿಗಳೂ ತಮ್ಮ ನೆಲೆಯನ್ನು ತಪ್ಪಿಸಿಕೊಂಡರು.

೧೩. ಕೆಲರು ಅವರ ವೀರ್ಯತರಾಕ್ರಮಕ್ಕೆ ಭಯವಿಹ್ವಲರಾದರು. ಕೆಲವರು ಸಂಧಾನದ ಮೂಲಕ ಅವರ ಬಾಂಧವ್ಯವನ್ನು ಸಾಧಿಸಿಕೊಂಡರು. ಕೆಲವರು ಅವರನ್ನು ವಂದಿಸಿ ಶರಣೋ ಶರಣೋ ಎಂದು ಪ್ರಾರ್ಥಿಸಿದರು. ಹಲವು ಮಾತುಗಳೇಕೆ - ಸರ್ವರೂ ಅವರ ವಶವಾದರು.

೧೪. ಅವರು ಬ್ರಹ್ಮನಿಂದ ವರವನ್ನು ಪಡೆದರು. ಬ್ರಹ್ಮ ಸೃಷ್ಟಿಯಲ್ಲಿ ಉಂಟಾದ ಯಾರಿಂದಲೂ ವಧಿಸಲಾಗದ ಆಯುಷ್ಯ ಅವರಿಗೆ ಲಭಿಸಿತು. ಗರುಡರು, ಕಿನ್ನರ, ಅಪ್ಸರ, ವಿದ್ಯಾಧರ, ಯಕ್ಷರು, ಉರಗ, ಚಾರಣ, ಗಂಧರ್ವ ಪಡೆಗಳನ್ನು ಅವರು ವಶಮಾಡಿಕೊಂಡರು.

೧೫. ರವಿ - ಚಂದ್ರ ಗ್ರಹಾದಿಗಳು ಅವರ ಸೊಂಟದಾಭರಣಗಳಾದವು. ನಕ್ಷತ್ರ ಸಮೂಹಗಳು ವಿಚಿತ್ರತರವೂ ಹೊಸ ಹೊಸತು ಎಂಬಂತೆ ಮಾಲೆಗಳಾದುವು. ಅವರ ದೇಹದ ಕಾಂತಿಯು ನೀಲಾಂಜನಕ್ಕಿಂತಲೂ ಶುಭ್ರವಾಗಿತ್ತು. ಧ್ರುವಲೋಕವನ್ನೂ ಒತ್ತರಿಸುವ ಆ ಶ್ರೀಮಕುಟವನ್ನು ಏನೆಂದು ವರ್ಣಿಸಲಿ!

೧೬. ಉರಿಯುವ ಕಣ್ಣುಗಳು, ಸ್ಮಶ್ರುಗಳು, ಭ್ರುಕುಟಿ, ಉಜ್ವಲವಾದ ಕೇಶ, ವಿಶಾಲವಾದ ಕೊಬ್ಬಿದ ಎದೆ ಒಪ್ಪಿರಲು, ಒಂದು ದಿನ ಕೈಯಲ್ಲಿ ಗದೆಯನ್ನು ಧರಿಸಿಕೊಂಡರು. ಅಧಿಕವಾದ ಉತ್ಸಾಹದಿಂದ ಅನುಜನೊಡಗೂಡಿ ಯುದ್ಧೋತ್ಸಾಹಿಯಾಗಿ, ವೀರ್ಯ ಬಲದಿಂದ ಆನಂದಿಸಿ - ಸುರಲೋಕದತ್ತ ಪಯಣಿಸಿದನು.

೧೭. ಕಣ್ಣಿನಿಂದ ಕಿಡಿಯು ಸೂಸುತ್ತಿರಲು, ದಾಡೆಯು ಉರಿಯುತ್ತಿರಲು, ಕೆಂಪಣ್ಣ ಕೆನ್ನೆಯು ಕೆಂಬಣ್ಣದಿಂದಿರಲು, ಮೀಸೆಯು ಹುರಿಗೊಂಡಿರಲು, ನಾಲ್ಕು ದಿಕ್ಕುಗಳಿಗೂ ಶ್ವಾಸ ಬಿಡುತ್ತ ರಾಯಭಟರು ಈಕ್ಷಿಸದ ಹಾಗೆ, ಅಮರಾಲಯಕ್ಕೆ ಯುದ್ಧ ಸನ್ನಾಹನಾಗಿ ದೈತ್ಯೇಶನು ಹೋದನು.

೧೮. ಗರುಡನಿಗೆ ನಾಗರು ಎದುರಾಗಿ ಯುದ್ಧ ಮಾಡುವರೇ? ದಿತಿಜಾದ್ಯರು ಎದುರಾದರೆ ಸುರರು ಎದುರಿಸುವರೇ? ಸರ್ವರು ದಿಕ್ಕುಪಾಲಾಗಿ ಕಂಡಕಂಡ ಕಡೆಗಳಿಗೆ ಓಡಿಹೋದರು. ಉಗ್ರವಾಗಿ ಕೋಪಗೊಂಡ ಅಸುರಾಧಿಪತಿಯು (ಈಗ) ಸ್ವರ್ಗಲೋಕಕ್ಕೆ ಪ್ರವೇಶಿಸಿದನು.

೧೯. ನಗರದೊಳ ಹೊಕ್ಕು ದ್ವಾರವನ್ನು ಗದೆಯಿಂದ ಅಪ್ಪಳಿಸಿದನು. ದೇವೇಂದ್ರನನ್ನು ಕಾಣದೆ ಹಲವು ಬಾರಿ ರೋಷದಿಂದ ಆತನನ್ನು ಕರೆದನು. ಅಲ್ಲಿಂದ ಹೊರಬಂದು ಅಗ್ನಿಯ ಆಲಯವನ್ನು ಹೊಕ್ಕನು. ಆತನನ್ನು ಕಾಣದೇ, ಆಗ್ರಹಪೂರ್ವಕವಾಗಿ ಯಮನಾಲಯವನನ್ನು ಹೊಕ್ಕು, ಆತನನ್ನೂ ಕಾಣದೆ ಹೊರಟನು.

೨೦. ಯಮನ ರಾಜ್ಯವನ್ನು ಬಿಟ್ಟು, ಮರುತಾಲಯಕ್ಕೆ ಬಂದನು. ಉರಿಯುರಿಯಾಗಿ ಅಲ್ಲಿಂದ ಕುಬೇರನನ್ನು ನೋಡದೆ, ಕೈಲಾಸಕ್ಕೆ ಬಂದನು. ಅಲ್ಲೆಲ್ಲ ಒಬ್ಬನೇ ಸುತ್ತಾಡಿ, ರೋಷದಿಂದ ಜ್ವಲಿಸಿ. ಆ ಹಿರಣ್ಯಾಕ್ಷನು ಬ್ರಹ್ಮಾಂಡ ಬಿರಿಯುವಂತೆ ಘರ್ಜಿಸಿದನು.

೨೧. ಪುಕ್ಕಲರೇ ಹೆದರಿಕೆಯಿಂದ ಸುಮ್ಮನೆ ಎಲ್ಲಿಗೆ ಓಡಿ ಹೋದಿರಿ? ಮತ್ತೆ ಬರುವುದಿಲ್ಲವೆಂದು ತಿಳಿದು ಓಡಿಹೋದಿರೆ? ಕಾಲಕ್ಷೇಪವೆನ್ನುವಂತೆ ನಮ್ಮಲ್ಲಿಯ ಗಾಢ ಪೌರುಷನನ್ನು ನೋಡೋಣವೇ ಎಂದು ಅಲ್ಲಿ ಹೇಳಿ ಆತನು ಆರ್ಭಟಿಸುತ್ತ ನಿಮಿರ ತೊಡಗಿದನು.

೨೨. ಹೀಗೆ ಹೋದಾಗ ಬಯಸಿದ ಯಾರನ್ನೂ ಆ ಖಳಾಧಮನು ಕಾಣದಾದನು. ವೃಥಾ ಶಕ್ತನಾದೆನಲ್ಲ ಎಂದು ತನಗೆ ತಾನೇ ಹೇಳಿಕೊಂಡನು. ತಕ್ಷಣವೇ ಈಗ ಓಡಿ ಹೋಗದಿರುವ ಒಬ್ಬನಿದ್ದಾನೆಂದು ದಾನವನು ಸಂಭ್ರಮಿಸಿ ಸಮುದ್ರದತ್ತ ಹೋದನು.

೨೩. ಹೋಗಿ ವಾರುಧಿಯ ಮಧ್ಯಕ್ಕೆ ತಲುಪಿದನು. ಆಗ ತೀರಾವಾಸಿಗಳೆಲ್ಲವರು ನೀರನ್ನು ಈಜಿಕೊಂಡು ದೂರಕ್ಕೆ ಹೋದರು. ಅದನ್ನು ಏನೆಂದು ವಿವರಿಸಲಿ! ನೀರನ್ನು ನೋಡಿದ ಆ ಖಳನು ನೀರಿನಲ್ಲಿರುವ ಸಮಸ್ತ ಜಯಗಳನ್ನೂ ಗದೆಯಿಂದ ಹೊಡೆದು ಬಡೆದು ನಾಶಗೊಳಿಸಿದನು.

೨೪. ಹಸ್ತವನ್ನು ಎರಡೂ ಕಡೆಗೆ ಚಾಚಿ ಕಟ್ಟೆಯನ್ನು ಕಟ್ಟಿದ ಹಾಗೆ ಪೃಥ್ವಿಯನ್ನೆಲ್ಲ ಜಲಮಯವನ್ನಾಗಿ ಒಮ್ಮೆ ಮಾಡುವನು. ಮತ್ತೊಮ್ಮೆ ನೀರನ್ನೆಲ್ಲ ಗೋರಿ ಮೇಲಕ್ಕೆ ಚೆಲ್ಲುವನು. ಒಂದೊಂದು ಸಲ ಸುತ್ತಲೂ ಓಡುವನು ಮತ್ತೊಮ್ಮೆ ಬಡಬಾಗ್ನಿಯನ್ನು ಇರಿಯುವನು. ಹಾಗೆಯೇ ತಿಮಿಂಗಿಲವನ್ನು ಹಿಡಿದು ವ್ಯಥೆಯನ್ನುಂಟು ಮಾಡುತ್ತ ನರ್ತಿಸುವನು.

೨೫. ಲೀಲೆಯಿಂದ ದೇವತೆಗಳ ವೈರಿಯಾದ ಹಿರಣ್ಯಾಕ್ಷನು ವಾರಿಧಿಯಲ್ಲಿ ಕೇಳಿಯಲ್ಲಿ ಬಹುವತ್ಸರ ಕಳೆದನು. ಕಾಲ ಕಳೆಯಲಾಗಿ ಒಮ್ಮೆಲೇ ಗದಾಯುದ್ಧದ ಹಂಬಲವಾಗಿ ಸ್ಥೂಲಮುಷ್ಟಿಯಿಂದ ಜಗ್ಗಿಸಿ ಹೊಡೆದನು. ಆಗ ಸಮುದ್ರವು ಇಬ್ಭಾಗಿ ತಳಭಾಗವು ಕಾಣಿಸಿಕೊಳ್ಳಲು ಅಲ್ಲಿಯ ವಿಶೇಷವನ್ನು ನೋಡಿ, ಬೊಬ್ಬಿಡುತ್ತ ಮದಿಸಿದನು.

೨೬. ಅಲ್ಲಿಂದ ವರುಣಾಲಯಕ್ಕೆ ಹೋಗಿ ವರುಣನ ಎದುರಲ್ಲಿ ಸಾಹಸಿಕೆಯಿಂದ ನಿಂತನು. ಇಲ್ಲಿಯ ವೈಭವದ ವಿಶೇಷವನ್ನು ಕೇಳುವಾಗ ಆತ ಓಡಿಹೋದನೆಂದರೆ, ಬಂಧಿಸಿ ಗದೆಯಿಂದ ಅಪ್ಪಳಿಸಿ ಕೊಂದರಾಯಿತು ಎಂದುಕೊಂಡನು. ಹೀಗೆಂದುಕೊಂಡು ಆತನಲ್ಲಿಗೆ ಸಹಜ ವಿನಯವಂತರ ಹಾಗೆ ಹೋಗಿ ಪಾದಕ್ಕೆ ಅಭಿನಂದಿಸಿದನು.

೨೭. ಆತನಿಗೆ ವಂದಿಸಿ ದೈತ್ಯನು ಹೀಗೆಂದನು 'ನಿನ್ನ ಪೌರುಷನನ್ನು ನಾನು ಕೇಳಿದ್ದೇನೆ. ರಾಜರಾಜರನೆಲ್ಲ ಸೋಲಿಸಿ ನೀನು ರಾಜಸೂಯನನ್ನು ಮಾಡಿರುವೆ. ಜಲಾಧಿಪನೇ! ನಿರ್ವೀಯರನ್ನೆಲ್ಲ ಸೋಲಿಸಿ ನಾನು ಇಲ್ಲಿಗೆ ಬಂದಿರುವೆ. ಈಗ ನಾವಿಬ್ಬರು ನಮ್ಮ ಕೈಬಲವನ್ನು ನೋಡಿಕೊಳ್ಳುವ ಹಾಗೆ ನಡೆಸಿಕೊಡು.

೨೮. ಮಲ್ಲ ಯುದ್ಧಕ್ಕೆ ಆಸೆಪಟ್ಟು, ನಾನು ನಿಮ್ಮ ಮನೆಗೆ ಬಂದನು. ನೀನು ಮೆಲ್ಲನೇ ಓಡಿಹೋಗದೆ ನಿಂತಿದ್ದೀಯ. ಅಲ್ಲವೇ ಅದನ್ನೇ ಜಗತ್ತಿನಲ್ಲಿ ಪೌರುಷ ಎನ್ನುವುದು. ಅಮರರೆಲ್ಲರಿಂದಲೂ ಬಲಾಢ್ಯನಾದ ಮಲ್ಲನೇ, ಒಂದು ಪಟ್ಟು ಹಿಡಿಯುವ ಎಂದು ಹೇಳಿದಾಗ ಆತನು ಹೀಗೆಂದನು.

೨೯. ದಾನವೇಶ್ವರನೇ ಕೇಳು! ನೀನು ಹೇಳಿದ್ದು ಸತ್ಯವೇ. ನೀನು ಬಲಾಢ್ಯರೆಲ್ಲರನ್ನು ಹಾನಿಗೊಳಿಸಿದವನೇ ಸರಿ. ಅಂದಿನ ಕಾರ್ಯಭಾರವನ್ನು ಹೇಳಿ ಏನು ಫಲ? ಯಾವ

ಕಾರಣದಿಂದಲೂ ಯಾರೊಬ್ಬನೇ ಆದರೂ ನನ್ನಲ್ಲಿ ಯುದ್ಧ ದಾನವನ್ನು ಬಯಸುವುದಿಲ್ಲ. ಆದರೇನು ಇದೀಗ ನನಗೆ ಮುದಿತನ ಬಂದಿದೆ.

೩೦. ಹೇಳಿ ಏನು ಫಲ - ನನಗೆ ಸಮಾನರಾದ ಬಲಾಢ್ಯರು ಭೂಮಿಯಲ್ಲಿ ಇದ್ದಾರೆಯೋ? ನಿನ್ನನ್ನು ಇದೀಗ ಸತ್ಕರಿಸುವುದಕ್ಕೆ ಆಗದೆ ನಾನು ಇಂದು ಭಂಡನಾದೆನು. ತಲೆಯನ್ನು ಅಡಗಿಸಿದ ಹಕ್ಕಿ ಮರಿಯನ್ನು ಬೆಕ್ಕು ನೋಡುವ ಹಾಗೆ, ನಿಜವಾಗಿಯೂ ನಿನಗೆ ಯೋಗ್ಯನಾದವನೆಂದರೆ. ವಿಷ್ಣು ಎಂಬಾತ ಒಬ್ಬನೇ ಒಬ್ಬ!

೩೧. ದಾನವ ಶೇಖರನೇ! ಲೋಕದಲ್ಲಿ ಅವನನ್ನು ಅತಿಶ್ರೇಷ್ಠ ಎಂದು ಹೇಳುತ್ತಾರೆ. ನಿನ್ನನ್ನು ನೋಡಿದಾಕ್ಷಣವೇ ಆತನು ಮುಗಿಸಬಲ್ಲನು. ಹರಿತವಾದ ಶಕ್ತಿ ಶೂಲವನ್ನು ಬೀಸಿ ಬಾಳೆಲೆಯನ್ನು ಸೀಳಿ ವೃಥಾ ನಾಶವಾಗುವುದೇಕೆ?

೩೨. ಹಾಗಾದರೆ ವಿಷ್ಣುವೆಂಬ ಬಲಾಢ್ಯನ ಸತ್ವವನ್ನು ನೋಡೋಣ. ಆತನನ್ನು ಸಾಯಿಸಿ ಶರೀರವನ್ನು ಕಾಗೆ - ನಾಯಿಗಳಿಗೆ ಬಿಸಾಡುವೆ. ಆ ಕಡೆಯೇ ಹೋಗುತ್ತೇನೆಂದು ದಾನವೇಶ್ವರನು ದಂಡವನ್ನು ಆಗಲೇ ಮುರಿದನು. ಆ ಕೆಂಚನೆಯ ಮೀಸೆಯ ದಾನವೇಶ್ವರನು ಸಮುದ್ರದಿಂದ ಆಮೇಲೆ ಹೊರವಂಟನು.

೩೩. ವಿಷ್ಣುವನ್ನು ಎಲ್ಲಿ ನೋಡುವುದೆಂದು ಆತನು ಹುಡುಕುತ್ತ ಬರುವನವನು. ಭೂಮಿಯಲ್ಲೆಲ್ಲ ಹುಡುಕುತ್ತ ಬರಲು, ಅಲ್ಲಿಗೆ ನಾರದ ಮುನಿಯು ಬಂದನು. ಸಮಸ್ತ ದೋಷವನ್ನು ಕೇಡು ಮಾಡಿ, ಶ್ರೀಹರಿಯ ನಾಮವನ್ನು ಹಾಡು ಮಾಡುವ ಸನ್ಮುನಿ ಮುಖ್ಯನನ್ನು ದೈತ್ಯನು ಎದುರಿಗೆ ನೋಡಿದನು.

೩೪. ಬಂದು ನಾರದನು ಅವನಿಗೆ ಕೇಳಿದನು; ವೃಥಾ ನೀನೊಬ್ಬನೇ ಏಕೆ ಸುತ್ತು ಬರುತ್ತಿರುವೆ? ಲೋಕದಲ್ಲಿ ಯುದ್ಧದಲ್ಲಿ ನಿನ್ನನ್ನು ಮೀರುವವರು ಯಾರಿದ್ದಾರೆ? ಈ ಪೃಥ್ವಿಯಲ್ಲಿ ಯಾರನ್ನು ಹುಡುಕುತ್ತ ಬರುತ್ತಿರುವೆ? ಯೋಚಿಸಿದ ಕಾರ್ಯವೇನು? ಎಂದು ವಂದಿಸಿದ ದೈತ್ಯನನ್ನು ಚೋದ್ಯದಿಂದ ಆ ಮುನಿಯು ಕೇಳಿದನು.

೩೫. ಹೀಗೆಂದು ನಾರದ ಮುನಿಯು ಕೇಳಲು ನಗುತ್ತಾ "ನನ್ನ ಬಿನ್ನಪವನ್ನು ಕೇಳಿರಿ. ನಿನ್ನಲ್ಲಿ ನಾನೊಂದು ಚೋದ್ಯವನ್ನು ಹೇಳುತ್ತೇನೆ, ಕೇಳು. ಸ್ವೈರದಿಂದ ಅಸುರಾಲಯಕ್ಕೆ ಮುತ್ತಿಗೆ ಹಾಕಿದೆನು. ಅಲ್ಲಿ ನನಗೆ ಯಾರು ಎದುರಾಳಿಯೆಂದು ಯುದ್ಧವನ್ನು ಅಪೇಕ್ಷಿಸಿ ಹುಡುಕಿದೆನು.

೩೬. ಇಂದ್ರನ ಪಲಾಯನವನ್ನು ನೋಡಿದೆನು. ಅಗ್ನಿಯ ಪರಾಭವವನ್ನು ನೋಡಿದೆನು. ಅಂತಕನ ನಿರ್ಮಮತ್ವವನ್ನು ನೋಡಿದೆನು. ನಿರುತಿಯ ವೇಗವನ್ನು ನೋಡಿದೆನು. ವಾಯುವಿನ ವಿಕಾರ ಸತ್ವವನ್ನು ನೋಡಿದೆನು. ಕುಬೇರನ ಆಲಯವನ್ನು ನೋಡಿದೆನು. ಈಶ್ವರನ ಸಾಹಸವನ್ನು ನೋಡಿದ್ದೇನೆ. ಹೀಗೆ ಸರ್ವರ ಅಧೋಗತಿಯನ್ನು ನೋಡಿದ್ದೇನೆ.

೩೭. ಕೊನೆಗೆ ನಾನು ಓರ್ವ ವೃದ್ಧನನ್ನು ಸಾಗರಲಾಯದ ತುದಿ ಭಾಗದಲ್ಲಿ ನೋಡಿದೆನು. ಹಿಡಿದಾಕ್ಷಣವೇ ಪ್ರಾಣ ಹೋಗುತ್ತದೆ ಎಂಬ ಹೇಡಿಯನ್ನು ನೋಡಿ, 'ಕಾಳಗವನ್ನು ಕೊಡು' ಎಂದು ಹೇಳಲು ಆತ ನಡುಗುತ್ತ "ಈ ಭೂಮಿಯಲ್ಲಿ ವಿಷ್ಣುವೆಂಬ ಧೂರ್ತನೊಬ್ಬನಿದ್ದಾನೆಂದು" ಕಳುಹಿಸಿದನು.

೩೮. ನೀನು ವಿಷ್ಣುವೆಂಬ ಬಲಾಢ್ಯರಿರುವ ಸ್ಥಳವನ್ನು ತಿಳಿದಿರುವೆಯಾ? ಯಾರೊಬ್ಬನಿಗೂ ಆತನ ಕೂಡೆ ಕಾದಲಳವಲ್ಲ ಎನ್ನುತ್ತಾರೆ. ಆತನಿಗೆ ಮಾರಿಯಾಗಿರುವ ನಾನು ಹಿರಣ್ಯಾಕ್ಷನೆಂಬುದನ್ನೂ ನೀನು ತಿಳಿದಿರೋ? ಈ ಲೋಕದಲ್ಲಿ ಆತ ಎಲ್ಲಿದ್ದಾನೆಂಬುದನ್ನು ನನಗೆ ತಿಳಿಸಬೇಕು."

೩೯. ನಾರದ ಅದನ್ನು ಕೇಳಿ ಹೀಗೆಂದನು - "ಹೇ, ದನುಜೇಶ್ವರನೇ! ತಿಳಿದಿದ್ದೇನೆ. ಆತನನ್ನು ಯುದ್ಧದಲ್ಲಿ ಜೈಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆತನನ್ನು ಎದುರಿಸುವುದೆಂದರೆ, ಸುವರ್ಣ ಬಾಣವನ್ನು ಸೆಳೆದು ನೀರಿಗೆ ಬಿಟ್ಟ ಹಾಗೆಯೇ - ಏನೂ ಪ್ರಯೋಜನವಿಲ್ಲ, ಈ ಸತ್ಯವನ್ನು ನಂಬು ಎಂದನು.

೪೦. ಆತನಿಗೆ ಇದಿರಾಗಿ ಕಾದುವ ಬಂಟರು, ಸಾಹಸ ಬಲವು ಇಲ್ಲವೇ ಇಲ್ಲ. ಆತನಿಗೆ ಶತ್ರು - ಮಿತ್ರರೆಂಬ ಭೇದಭಾವವೇ ಇಲ್ಲ. ವೇದಮೋದಕನು ಭೃತ್ಯವರ್ಗವನ್ನು ದಿನಂಪ್ರತಿಯೂ ಸಂತೈಸುವನು. ಆ ಕುಸುಮಾಂಬಕನಾದ ಶ್ರೀಹರಿಯು ವಾದ-ಭೇದ ವಿವಾದಕಾರನು.

೪೧. ಆದದ್ದಾಗಲೀ ಬರುವ ದುಃಖವನ್ನು ನಾನು ಸಹಿಸಿಕೊಳ್ಳುತ್ತೇನೆ ಎಂದು ಆ ನಾರದನು ಆತನ ಇರುವಿಕೆಯನ್ನು ಸ್ಪಷ್ಟವಾಗಿ ಹೇಳಿದನು. ನೀನು ಈಗಾಗಲೇ ಹೋದುದಾದರೆ, ಕ್ರೋಧಾವೇಶವನ್ನು ತಾಳಿ ರಸತಾಳದಿಂದ ಬರುತ್ತಿರುವುದನ್ನು ನೋಡಬಹುದು ಎಂದನು.

೪೨. ಇದನ್ನು ಕೇಳಿದಾಕ್ಷಣವೇ ಆ ಪರಾಕ್ರಮಿಯು ಯಾತ್ರಿಸಿದನು. ಸಮುದ್ರದ ದಂಡೆಯನ್ನು ಅಪ್ಪಳಿಸುತ್ತ ಭೂತಳಕ್ಕೆ ಓಡಿ ಹೋದನು. ಚಂಡ ವಿಕ್ರಮಿಯಾದ ವರಾಹವನ್ನು ದಾಡೆಯನ್ನು ಮಸೆಯುತ್ತ ಮೇದಿನಿಯನ್ನು ಹೊತ್ತು ತರುವುದನ್ನು ನೋಡಿ, ದೂರದಿಂದಲೇ ಅಟ್ಟ ಹಾಸ ಮಾಡಿದನು.

೪೩. ವರಾಹವು ನೀರಲ್ಲಿರುವುದು ಕೌತುಕವು. ಹಿಂದೆ ಯಾರಾದರೂ ಇದನ್ನು ನೋಡಿದಿರೇ? ಓಡಿ ಹೋಗದ ಹಾಗೆ ನಾಯಿಗಳನ್ನು ದಾರಿಗೆ ಅಡ್ಡಗಟ್ಟಿ. ಬಲೆಯನ್ನು ಜೋಡಿಸಿ ಅಡ್ಡಗಟ್ಟಿ. ಈಟಿ ಕಠಾರಿ, ತೋಮರಗಳನ್ನು ತಾಡಿಸಿ, ಈ ಕಾಡು ಹಂದಿಯನ್ನು ಘಾಸಿಗೊಳಿಸಿ.

೪೪. ರಾಯನ ಭಾಗ್ಯವರ್ಧನ ಹೇತುವಾಗಿ ನೀನು ಕಣ್ಣಿಗೆ ಗೋಚರವಾಗಿರುವೆ. ಮಂಕನೇ! ಇನ್ನು ಬದುಕುವುದಕ್ಕೆ ಆಸೆಯಿದ್ದರೆ ನನ್ನನ್ನು ಜೈಸು. ಮೇದಿನಿಯನ್ನು ನೀನು

ಹೊತ್ತುಕೊಂಡು ಬರುತ್ತಿರುವುದು ಏತಕ್ಕೆ? ನಿನಗೆ ಕಾದಲು ಆಗುವುದೇ ಆದರೆ ನಿಸ್ಸಂಶಯವಾಗಿ ನನಗೆ ಎದುರಾಗು.

೪೫. ನಿನ್ನ ನಿಜವಾದ ವೇಷವನ್ನು ಬಿಟ್ಟು ಹಂದಿಯ ವೇಷವನ್ನು ಏಕೆ ತಾಳಿರುವೆ? ನಿಜವೇಷವನ್ನು ನಿನಗೆ ತೋರಿಸುವುದಕ್ಕೆ ಹೆದರಿಕೆಯಾಗುವುದಾದರೆ, ನನಗೆ ಅಭಿವಂದಿಸು - ನಾನು ರಕ್ಷಿಸುತ್ತೇನೆ. ನಿನ್ನ ಧೂರ್ತ ಬುದ್ಧಿಯನ್ನು ತೋರಿಸಿದ್ದೇ ಆದರೆ, ನಿನ್ನ ಸಹಗೋತ್ರ ಸಮೇತವಾಗಿ ಯಮನಲ್ಲಿಗೆ ಯಾತ್ರೆ ಕಳುಹಿಸಿ, ನಿನ್ನ ದೇಹವನ್ನೂ ತುಂಡರಿಸಿ ಕಾಗೆ - ನಾಯಿಗಳಿಗೆ ಚೆಲ್ಲಾಡುತ್ತೇನೆ.

೪೬. ಬೇರನ್ನೇ ಖಂಡಿಸಿದ ಮೇಲೆ ಕಲ್ಪವೃಕ್ಷವು ಚಿಗುರುವುದೇ? ನಿನ್ನ ವಂಶವನ್ನೂ, ಗೋದ್ವಿಜ ಸಂಘವನ್ನೂ ನಾನು ಯಮನಾಲಯಕ್ಕೆ ಕಳುಹಿಸುತ್ತೇನೆ. ಆಗ ದೈತ್ಯರ ವೈರಿಗಳ ಸಂಕುಲವು ತಾನೇ ತಾನಾಗಿ ನಶಿಸಿ ಹೋಗುತ್ತದೆ. ನಮಗೆ ಸರಿಸಮಾನರಾದವರು ನಿರ್ನಾಮರಾದರೆ ಆಮೇಲೆ ಉತ್ತರೋತ್ತರವಾಗುತ್ತದೆ.

೪೭. ಚಿತ್ರಗುಪ್ತನು ಬರೆದ ನಿನ್ನ ನೆತ್ತಿಯ ಅಕ್ಷರ ಈಗ ಮುಗಿಯಿತು. ಮೃತ್ಯುವಾದ ಹಿರಣ್ಯಾಕ್ಷನು ನೋಡಿದ ಮಾತ್ರಕ್ಕೆ ನಿನಗೆ ಸರ್ವಥಾ ಉಳಿಗಾಲವಿಲ್ಲ. ಎದುರಾಗಿ ಬಂದು ಇನ್ನು ಜೈಸದೆ ಶರೀರ ಸಮೇತವಾಗಿ ನೀನು ಹಿಂದಿರುಗಲಾರೆ. ಇದು ಸತ್ಯಸ್ಯ, ಸತ್ಯ, ನಂಬು!

೪೮. ಏರು ಸ್ವರದಲ್ಲಿ ನುಡಿಯುತ್ತಿರುವ ದಾನವೇಶ್ವರನ ಮಾತನ್ನು ಶ್ರೀ ರಮಾಕರನು ಕೇಳಿಯೂ ಕೇಳದವನಂತೆ ನಟಿಸಿದನು. ಭೂದೇವಿಗೆ ಕಣ್ಣಿನಿಂದಲೇ ಅಭಯವನ್ನು ಹೇಳುತ್ತ ದೂರದಿಂದಲೇ ಎದಿರಿಸೆಂದು ಮೆಲ್ಲನೆ ಆ ಧರಣೀಧರನು ಬರುತ್ತಿದ್ದನು.

೪೯. ದಾನವಾಗ್ರಣಿಯು ಅಂಜಿಕೆಯೋ ಇಲ್ಲದಂತೆ ಬರುತ್ತಿರಲು - ನಿನ್ನ ಪ್ರಾಣವನ್ನು ತೆಗೆದು, ಶರೀರವನ್ನು ಪದಾರ್ಥ ಮಾಡಲಿರುವೆನು ಎಂದು ಹೇಳುವುದನ್ನು ಕೇಳದವರ ಹಾಗೆ ನಟಿಸಿದನು. ಅಟ್ಟಹಾಸದಿಂದ ಹೇಳುವ ಆ ದಾನವನ ವಧೆಗೆ ಸಂಕಲ್ಪವನ್ನು ಮಾಡಿ, ಸಜ್ಜನಾಗ್ರಣಿಯಾದ ಶ್ರೀಹರಿಯು ಮೇದಿನಿಯನ್ನು ಅಲುಗಾಡದ ಹಾಗೆ ಸ್ಥಿರಗೊಳಿಸಿದನು.

೫೦. ಆಗ ದೇವಸಂತತಿ ಪುಷ್ಪವೃಷ್ಟಿಗರೆಯಿತು! ಬ್ರಾಹ್ಮಣರು ವೇದಘೋಷವನ್ನು ಮಾಡಿದರು! ಮುನಿಗಳ ಸಂಸ್ತುತಿಯ ಸೇವನೆಯಿಂದಲೂ, ಮಹಾತ್ಮರ ಮಂತ್ರಘೋಷದಿಂದಲೂ, ಭೂವಧುಗೆ ಶಕ್ತಿಯನ್ನು ಸಂಪ್ರಾಪ್ತಿಸಿ, ಅಲುಗಾಡದ ಹಾಗೆ - ಸ್ಥಿರಗೊಳಿಸಿದನು.

೫೧. ಸಮಸ್ತರೂ ಹೆದರದಿರಿ ಎಂದು ಅಭಯ ಹಸ್ತವನ್ನು ನೀಡಿ ದಾಡೆಯ ಉಗ್ರ ವರಾಹನು ದಿವ್ಯ ಕಟಾಕ್ಷದಿಂದ ಮನ್ನಿಸಿದನು. ಹುಡುಕಿ ಬಂದ ದಾನವನಿಗೆ ಹೀಗೆ ಮೋಕ್ಷವನ್ನು ಕಲ್ಪಿಸಿದಲ್ಲಿಗೆ ಸಂಧಿ ಪೂರ್ಣವಾಯಿತು. ಅಧ್ಯಾಯವೂ ಹದಿಮೂರಾಯಿತು.

ಅಧ್ಯಾಯ ೧೪

೧. ಕೌರವಾಗ್ರಣಿಯೇ ಚಿತ್ತವಿಟ್ಟು ಕೇಳು! ಕುಶಜಾಂಬಕನಾದ ಶ್ರೀಹರಿಯು ದಾನವನ ಮಾತೆಲ್ಲವನ್ನೂ ಕೇಳಿ ಮೆಲ್ಲನೆ ಹೀಗೆ ಹೇಳಿದನು. ಆಯುಧಗಳಿಲ್ಲದ ಬಲವಿಲ್ಲದ ಸತ್ತ್ವಹೀನನಿಗೆ (ಯುದ್ಧ) ಸಂಭ್ರಮವೇಕೆ? ಉತ್ಸಾಹ ತೀರುವವರೆಗೆ ನೀನು ಯುದ್ಧವನ್ನು ಮಾಡು.

೨. ಜನಗಳೆಲ್ಲ ನನಗೆ ಉದ್ದಂಡ ಪ್ರಣಾಮ ಮಾಡಿ, ಕಾಲು ಹಿಡಿದು ವಂದಿಸುತ್ತಿದ್ದರು. ಅವರ ಎದುರಲ್ಲಿ ನಾನು ಓಡಿ ಹೋಗಲು ಶಕ್ತಿಯಿಲ್ಲದೆ ಸಿಕ್ಕಿ ಬಿದ್ದಿದ್ದೆ. ನೀರಲ್ಲಿ ನಾನು ಹಂದಿಯಾಗಿದ್ದೆ. ನನ್ನನ್ನು ಸುತ್ತಲೂ ಬಲೆ ಬೀಸಿ, ಸಾಧ್ಯವಾದುದರೆ ಮೇಲಕ್ಕೆತ್ತು. ನಿನ್ನ ಕುಲಕ್ಕೇ ಶುಭವಾಗಲಿ ಎಂದನು.

೩. ದಾನವನೇ! ನಿನ್ನಲ್ಲಿ ವೈರ ಸಾಧಿಸಿ ಎಲ್ಲಿಗೆ ಹೋಗಲೂ ಸಾಧ್ಯವಿಲ್ಲ. ಮಲ್ಲನನ್ನು ಹಿಡಿಯುವುದಕ್ಕೆಂದು ನೀನು ಜಗತ್ತನ್ನೆಲ್ಲ ಸುತ್ತಿದೆಯಾ? ಮಲ್ಲರಲ್ಲಿ ಮಲ್ಲನಾದ ನಿನ್ನ ಎದುರಲ್ಲಿಯೋ ನನ್ನನ್ನು ವಿಧಿ ತಂದು ನಿಲ್ಲಿಸಿತಲ್ಲ? ಮುಂದಿನವರಿಗೆ ಒಳ್ಳೆಯದಾಗಲಿ. ನಿನ್ನ ಶಕ್ತಿಯನ್ನು ತೀರಿಸು!

೪. ಶ್ರೀ ಹರಿಯ ವಿನೋದ ವಾರ್ತೆಯನ್ನು ಕೇಳಿದ ಆತನು ಕಣ್ಣುಗಳು ಕುಂಡದಿಂದ ಅಗ್ನಿಯು ಭುಗಿಲೇಳುವ ಹಾಗೆ ನೀಳವಾದ ಧೂಮವನ್ನು ಹೊರಸೂಸುತ್ತ ಪ್ರಕಾಶಿಸಿದವು. ಭಂಡತನದ ಪೌರುಷವನ್ನು ನೋಡಿಯೋ ಬಿಡುತ್ತೇನೆ ಎಂದು ಆತನು ಗದಾನಾಗೆ ತನ್ನ ದಿವ್ಯ ಗದಾಯುಧದಿಂದ ಸಾಕ್ಷಾತ್ ಶಿವನಿಗೆ ಸದೃಶನಾದ ದಾನವನು ಬೀಸಿದನು.

೫. ರೋಷದಿಂದ ಬೀಸಿದಾಗ ಬರುವ ಗದೆಯನ್ನು ನೋಡಿ ಧಪ್ಪನೆ ನೆಗೆದು, ಶ್ರೀಪತಿಯು ಆ ಗದೆಯನ್ನು ಹಿಡಿದು ತನ್ನ ಕೈಯಿಂದ ಮರಳಿ ಎಸೆದನು. ಪಾಪಿಯು ತಾನು ಧರಿಸಿದ ಆಯುಧದಿಂದ ಆ ಗದೆಯನ್ನು ಹೊಡೆದು ಸಮಸ್ತರೂ ನೋಡುತ್ತ ವಿಸ್ಮಯ ಪಡುತ್ತಿರಲು ವಿಜಯ ಶಾಲಿಯಾದನು.

೬. ಮೇರುಪರ್ವತವೂ ಮಂದರಾದ್ರಿಯೂ ತಮಗೆ ತಾವು ಎದುರಾಗುವಂತೆ; ವೀರಭೈರವನೂ ಕಾಲರುದ್ರನೂ ಪರಸ್ಪರ ತಾಗುವಂತೆ; ವಾರುಧಿಯೂ ಬಡಬಾಗ್ನಿಯೂ, ಬಿರುಗಾಳಿಯು, ಮೇಘಗಳೂ ಎದುರಾಗುವ ಹಾಗೆ ಶ್ರೀ ರಮಾಕರನೂ ಹಿರಣ್ಯಾಕ್ಷನೂ ಪರಸ್ಪರ ಕೌಶಲವನ್ನು ನೋಡಿದರು.

೭. ಮೇಲೆ ದೇವಾಸುರರೆಲ್ಲರೂ ನೆರೆದು - ಸುತ್ತಮುತ್ತಲಿಂದ ಈ ಪೌರುಷ ಯುದ್ಧವನ್ನು ನೋಡತೊಡಗಿದರು. ಅದನ್ನು ಅಲ್ಲಿದ್ದವರಲ್ಲದೆ, ಹಿಡಿದು ಹಿಡಿದು ಬಿಡುವ ತಾಗುವ ಸಂಭ್ರಮವನ್ನು ಬೇರೆ ಯಾರು ವಿವರಿಸಬಲ್ಲರು?

೮. ನೆತ್ತರೊಡೆದು ದೇಹದ ತುಂಬೆಲ್ಲ ಅಶೋಕೆಯ ಮಗ್ಗುಲಿಗೆ ಶೋಭಿಸುವ ಶಿಂಶುಕಾ ಕುಸುಮವೋ ಎಂಬಂತೆ ಮೆರೆಯುತ್ತಿತ್ತು. ಕಡು ಭಯಂಕರವಾದ ಇಬ್ಬರೂ ಹೊಡೆತದೊಂದಿಗೇ ರಕ್ತದ ವಾಸನೆಯನ್ನೂ ಘ್ರಾಣಿಸಿ, ಒಡೆದೊಡೆದು ಯುದ್ಧವನ್ನು ಮಾಡಿದರು.

೯. ಪಾದ -ಗುಲ್ಫ, ಜಾನು- ಜಂಘೆ, ಕಟಿ, ನಡುಬೆನ್ನು, ಮುಂಗಯ್, ಶೋಭಾಯಮಾನವಾದ ಎದೆ, ಭುಜ, ಕೈತಟ್ಟು, ದಂಡ, ಅಂಗುಲೀ, ಕೆನ್ನೆ, ಕಿವಿ, ಕದಪು, ಹಣೆ, ಮಸ್ತಕ, ಮೊದಲಾದ ಭಾಗಗಳಿಗೆ ಕ್ರೋಧಾನ್ವಿತರಾಗಿ ಆ ಶ್ರೀಹರಿಯೂ ದಾನವನೂ ತಮ್ಮ ತಮ್ಮಲ್ಲಿ ಹೊಡೆದಾಡಿಕೊಂಡರು.

೧೦. ಸ್ಥೂಲವಾದ ಗದಾಯುಧದಿಂದ ಹೀಗೆ ಅನೇಕ ರೀತಿಯಲ್ಲಿ ವಿಭಾಡಿಸಿಲಾಗಿ ಶ್ರೀಹರಿಯು ಆತನ ಗಲ್ಲಕ್ಕೆ ಬಲವಾಗಿ ರೋಷದಿಂದ ಘಾತಿಸಿದನು. ಅದನ್ನು ತಡೆದುಕೊಂಡು ಆತನು ತನ್ನ ಕೈಯ ಗದೆಯಿಂದ ಬಲವಾಗಿ ಹೊಡೆಯಲು ಶ್ರೀಹರಿಯ ಆ ಮಹಾಗದೆಯು ತಪ್ಪಿ ಭೂಮಿಗೆ ಬಿದ್ದಿತು.

೧೧. ಅಂಬುಜೋದರನಾದ ಶ್ರೀಹರಿಯ ಗದೆಯು ಇಂಬು ತಪ್ಪಿಭೂಮಿಗೆ ಬೀಳಲು ದೇವತೆಗಳೆಲ್ಲ ಭಯದಿಂದ ನಡುಗತೊಡಗಿದರು. ದಾನವರೋ ಜಯ ಪ್ರಾಪ್ತಿಯಾಯಿತು ಎಂದು ಸಂಭ್ರಮಿಸಿದರು. ಶ್ರೀಹರಿಯ ಗದೆಯ ಇಂಬನ್ನು ತಪ್ಪಿಸಿದವನ ಪೌರುಷಕ್ಕೆ ತ್ರೈಭುವನದಲ್ಲಿ ಎಣೆಯುಂಟೇ!

೧೨. ಹಂದಿಯೇ! ಕೆಳಗೆ ಬಿದ್ದಿರುವ ಆಯುಧವನ್ನು ಬೇಗನೇ ತೆಗೆದುಕೋ. ನಿರಾಯುಧನ ಎದುರು ನಾನು ಆಯುಧವನ್ನು ಹಿಡಿಯಲಾರೆನು ಇದು ಸತ್ಯವು ಎಂಬ ತತ್ತ್ವಧರ್ಮವನ್ನು ಆತ ಹೇಳುವುದನ್ನು ಕೇಳಿದ ಶ್ರೀ ಪುರುಷೋತ್ತಮನು ಭೀಕರವಾದ ಚಕ್ರಾಯುಧವನ್ನು ಹಿಡಿದನು. ಆಗ ಭುವನತ್ರಯವೂ ಉರಿಯತೊಡಗಿತು.

೧೩. ಶ್ರೀ ಸುದರ್ಶನ ಚಕ್ರವನ್ನು ಶ್ರೀಹರಿಯು ಹಿಡಿಯಲು ಅಗ್ನಿಯು ಹೊತ್ತಿಕೊಂಡಿತು. ಘಾಸಿಯಾಗಿ ಅಮರರು ಎಲ್ಲೆಂದರಲ್ಲಿ ಓಡತೊಡಗಿದರು. ಕ್ರೋಧದಿಂದಾಗಿ ಧೂಮಜ್ವಾಲೆಗೆ ಭೂಮಿಯು ಕಾಯ ತೊಡಗಿ ಸಮಸ್ತ ಲೋಕಕ್ಕೂ ಕೆಡುಕು ಉಂಟಾಗ ತೊಡಗಿತು. ಅದನ್ನು ಏನೆಂದು ವರ್ಣಿಸಲಿ!

೧೪. ಹೆದರಿ ಓಡಿಹೋದ ದೇವತೆಗಳು ಬಲುದೂರ ಸುತ್ತ ನೆರೆದು ಆತನ ಮಕುಟಕ್ಕೆ ಪುಷ್ಪವೃಷ್ಟಿಯನ್ನು ಕರೆದರು. ಕರುಣಾಕರಾ! ದುಷ್ಟ ದಾನವನೊಂದಿಗೆ ಸರಸವೇಕೆ? ಈ ದುರಾತ್ಮನಿಗೆ ಈಗಿಂದೀಗಲೆ ಕೇಡನ್ನು ಒದಗಿಸಿ, ಭೂಮಿಯನ್ನು ಸುಸ್ಥಿರ ಮಾಡು ಎಂದರು.

೧೫. ದುಷ್ಟನಾದ ಈತನನ್ನು ಈಗಲೇ ವಧಿಸಿದರೆ ಮಾತ್ರ ಈ ದನುಜೇಶ್ವರನು ಸಾಯುವನು. ಹತ್ತಿರವೇ ಇರುವ ಮುಹೂರ್ತ ತಪ್ಪಿದರೆ ಮತ್ತೆ ಆತನನ್ನು ವಧಿಸಲಾಗುವುದಿಲ್ಲ. ಜಗತ್ತಿಗೇ ಈ ದುಷ್ಟನಿಂದಾಗಿ ನಾಶವೊದಗಲಿರುವುದು ಎಂದು ಬ್ರಹ್ಮನು ಆಗಮಮೂರ್ತಿಯಾದ ಶ್ರೀಹರಿಯನ್ನು ಸ್ತುತಿಸಿದನು.

೧೬. ಕಾಡಿನಲ್ಲಿರುವ ಹುಲಿಯ ಮಂದಿರವನ್ನು ಹಸುವು ಹೊಕ್ಕು ಹಾಗೆ, ಕಾದುಕುಳಿತಿರುವ ಸರ್ಪ ಮಂದಿರಕ್ಕೆ ಇಲಿಯು ಹೋಗುವ ಹಾಗೆ - ನಿನ್ನನ್ನು ಹುಡುಕಿ ತಾನೇ ಎದುರಾದ ದಾನವನನ್ನು ವಧಿಸದೆ - ಆತನೊಂದಿಗೆ ನೀನು ಸರಸವಾಡುವುದೇಕೆ, ಮಧುಸೂದನ ಎಂದನು.

೧೭. ಹೀಗೆ ಸ್ತುತಿಸಿ ಹೇಳಿದ ಬ್ರಹ್ಮನ ಮಾತಿನ ಸಾರವನ್ನು ಗ್ರಹಿಸಿ ಶ್ರೀಹರಿಯು ಆತನನ್ನು ಕರುಣಾಕಟಾಕ್ಷದಿಂದ ನೋಡಿದನು ದೇವತೆಗಳಿಗೆ ಹೆದರದಿರಿ ಎಂದು ನಂಬಿಕೆಯನ್ನು ಹೇಳಿ ಮನ್ನಿಸಿದನು. ಆಮೇಲೆ ದೈತ್ಯನಾಶನಕ್ಕೆ ಇಚ್ಛಿಸುತ್ತಿರಲು ಮದೋನ್ಮತ್ತನಾಗಿ ವಿಜೃಂಭಿಸಿ ಮತ್ತೆ ಶ್ರೀ ಹರಿಯನ್ನು ಆ ದೈತ್ಯನು ತಾಗಿದನು.

೧೮. ದಾಡೆಯಿಂದ ಹೊರಟ ಹೊಗೆಯಿಂದ ಜಗತ್ರಯವು ಸುಡ ತೊಡಗಿತು. ತಾಡಿಸುವ ಪಾದದ ಸಪ್ಪಳಕ್ಕೆ ದೇವತೆಗಳು ಭ್ರಮಿಸಿದರು. ಓಡಿ ಬಂದು ವರಾಹನ ಎದೆಗೆ ಶ್ರೀಹರಿಯು ಹೊಡೆಯಲು, ದಾಡೆಯ ಉಗ್ರವರಾಹನು ದೈತ್ಯನ ಎದೆಗೆ ಒದೆದನು.

೧೯. ಕಾಲಿನಿಂದ ಒದೆಯಲು ಆ ರಭಸಕ್ಕೆ ಖಳನ ಕೈ ಮುಷ್ಟಿಯಲ್ಲಿರುವ ಗದೆಯು ತಪ್ಪಿ ಭೂಮಿಗೆ ಬಿದ್ದಿತು. ಕಷ್ಟ ಕಷ್ಟವೆಂದು ದನುಜೇಶ್ವರರೆಲ್ಲ ಹೇಳಿದರು. ಹೇಳಿದ ಹಾಗೆ ಆಯಿತೆಂದು ದೇವತೆಗಳು ಈ ವಿನೋದವನ್ನೀಕ್ಷಿಸಿ ಹೇಳಿದರು.

೨೦. ದಾನವೇಶ್ವರನೇ ಶಕ್ತನಾದರೆ ನೀನು ಎದುರಾಗಿ ಆಯುಧದಿಂದ ಹೊಡೆ. ದೀನನಾದರೆ ಹೆದರದೆ ನಮಸ್ಕರಿಸಿದರೆ ರಕ್ಷಿಸುತ್ತೇನೆ ಎಂದು ಹೇಳಿದನು. ಅದನ್ನು ಕೇಳಿ ರೋಷಗೊಂಡು ಶೌರ್ಯ ಪರಾಕ್ರಮದಿಂದ ಶ್ರೀಹರಿಯನ್ನು ತೀರಿಸುತ್ತೇನೆಂದು ಶೂಲವನ್ನೂ ಸೆಳೆದು ಕೊಂಡನು.

೨೧. ಮಾಲೆ - ಘಂಟೆಗಳು ಪ್ರಕಾಶಮಾನವಾಗಿ ಉಜ್ವಲಿಸುವ ಶೂಲವನ್ನು ಕೈಗೆತ್ತಿಕೊಂಡನು. ಆಗ ಅದರ ಜ್ವಾಲೆಯ ಹೊಗೆಗೆ ದೇವತೆಗಳು ಹೆದರಿ ದೂರ ಸರಿದರು. ಶೂಲಪಾಣಿಯಾದ ಶಿವನು ಸಮಸ್ತ ಲೋಕವನ್ನು ಸಂಹರಿಸುವನೇ ಎಂಬಂತೆ ಅಚ್ಯುತನನ್ನು ತೀರಿಸುತ್ತೇನೆಂದು ವೇಗವಾಗಿ ಶೂಲವು ಬಂದಿತು.

೨೨. ಅಂಬರದಲ್ಲಿ ಬರುತ್ತಿರುವ ಶೂಲವನ್ನು ಶ್ರೀಹರಿಯು ಖಂಡಿಸಿದನು. ಆಗ ದಾನವನು ಚಕ್ರವನ್ನು ಪ್ರಯೋಗಿಸಿದನು. ಶ್ರೀಹರಿಯ ಸಾಮರ್ಥ್ಯದಿಂದ ಎಲ್ಲ ಆಯುಧಗಳೂ ಲಯವಾಗಲು, ಸಂಭ್ರಮಿಸಿದ ಆತನು ಕೊಲ್ಲಲೆಂದು ಮುಷ್ಠಿಘಾತವನ್ನುಂಟು ಮಾಡಿದನು.

೨೩. ಮುಷ್ಠಿಗಾಯವನ್ನು ತಪ್ಪಿಸಿದ ಆ (ಪರಮೇಷ್ಠಿ ವಂದಿತನಾದ) ಶ್ರೀ ಹರಿಯನ್ನು ದೈತ್ಯನ ಎದೆಗೆ ಬಲವಾಗಿ ಎಡಗಾಲಿನಿಂದ ಒದೆದನು. ಆಗ ಆತನು ಕುಂಬಾರನ ಚಕ್ರದ ಹಾಗೆ, ಸುತ್ತಲೂ ಅನೇಕ ಸುತ್ತು ತಿರುಗಿದನು. ಕ್ಷಣಾರ್ಧದಲ್ಲಿ ಶರೀರವನ್ನು ಮರೆಗೊಳಿಸಿ ಅದೃಶ್ಯನಾದನು.

೨೪. ರೂಪು ತೋರದ ಹಾಗೆ ಅಡಗಿ ಅಂಬರ ಪಥಕ್ಕೆ ನೆಗೆದನು. ಶ್ರೀಪತಿಯನ್ನು ಭಯಗೊಳಿಸಲೆಂದು ಅಲ್ಲಿಂದ ತನ್ನ ಕೈ ಚಳಕವನ್ನು ತೋರಿಸ ತೊಡಗಿದನು. ಕಾಪಥದಲ್ಲಿ ಅನೇಕ ಮಾಯಾ ಸ್ವರೂಪಗಳನ್ನು ಸೃಷ್ಟಿಸಿದ ಆತನು ನೋಡುವ ಎಲ್ಲರನ್ನೂ ಮೋಹನಗೊಳಿಸಿದನು. ಅದನ್ನು ಏನೆಂದು ವರ್ಣಿಸಲಿ?

೨೫. ನಾಲ್ಕು ದಿಕ್ಕಿಗೂ ವ್ಯಾಪಿಸಿದ ಸುಳಿಗಾಳಿಗೆ ಧೂಳು ವ್ಯಾಪಿಸಿತು. ಬೃಹತ್ ಗಾತ್ರದ ಪರ್ವತ ಶಿಖರಗಳು ಎದುರೆದುರೇ ಎರಗತೊಡಗಿದುವು. ಸೃಗಾಲ, ಸೂಕರ, ವ್ಯಾಘ್ರ, ವಾರಣ, ಸಿಂಹಗಳು ಘರ್ಜನೆ ಮಾಡುತ್ತ ಕರೆಯತೊಡಗಿದುವು. ಜಗತ್ತಿನಲ್ಲೆಲ್ಲ ಕತ್ತಲೆ ತುಂಬಿತು.

೨೬. ನೆತ್ತರು, ಮೂಳೆ, ಮಾಂಸ, ಕೀವು, ಕಲ್ಲಿನ, ಮಳೆ, ಶಸ್ತ್ರಗಳು, ಮೂತ್ರವಿಷ್ಠೆ, ಭಯಂಕರವಾದ ಮೇಘನಾದ, ರಕ್ತನೇತ್ರ, ಕರಾಳ ದಂಷ್ಟ್ರ, ಕೂಪಸನ್ನಿಭ ಲೋಚನರಾದ ಭೂತಗಳು ಆದಿ ಸೂಕರನ ಎದುರಲ್ಲಿ ಘರ್ಜಿಸಿದುವು.

೨೭. ಒಂದು ದಿಕ್ಕಿಗೆ ಮಹಾಮೇರು ಪರ್ವತದ ಶಿಖರಗಳು ತೋರಿ ಬಂದುವು. ಮತ್ತೊಂದು ಕಡೆಯಿಂದ ಸಮುದ್ರದ ತೆರೆಗಳಂತೆ, ಕುದುರೆಗಳು ಬರತೊಡಗಿದುವು. ಒಂದು ದೆಸೆಯಿಂದ ಗಿರಿವೃಕ್ಷದಂತಿರುವ ರಥ ಸಮೂಹ ಹತ್ತಿರಕ್ಕೆ ಬರತೊಡಗಿತು. ಮತ್ತೊಂದು ದೆಸೆಯಲ್ಲಿ ಪ್ರಳಯಾಬ್ಧಿಯಂತೆ, ಪದಾತಿಗಳು ನಿಂತರು.

೨೮. ವರಾಹನನ್ನು ಹಿಡಿಯಿರಿ, ಹೊಡೆಯಿರಿ, ಸುತ್ತಲೂ ಬಲೆಯೊಡ್ಡಿಯಿರಿ; ಇರಿದು ಕೆಡಹಿ ಎದೆಯನ್ನು ಸೀಳಿರಿ. ಕೈಕಾಲು ಕಡಿಯಿರಿ; ಬಟ್ಟಲು ಒಡ್ಡಿ ನೆತ್ತರು ಹೀರಿ; ಬೆಂಕಿಯಲ್ಲಿ ಸುಡಿ ಎಂದು ಬೊಬ್ಬಿಡುತ್ತ ನಾಲ್ಕು ದಿಕ್ಕಿನಿಂದಲೂ ಅವುಗಳು ಕೌತುಕವಾಗಿ ಘರ್ಜಿಸಿದುವು.

೨೯. ದಶದಿಕ್ಕುಗಳಿಗೂ ಕಣ್ಣು ಕಾಣಿಸದಂತಹ ಕತ್ತಲೆ ತುಂಬಿಕೊಂಡಿತು. ಸಮುದ್ರವು ಮೇರೆ ಮೀರಿ ಹೊಡೆ ಮರಳಿ ಘೋಷಿಸಿ ಬರುತ್ತಿತ್ತು. ಈ ತ್ರೈಲೋಕ್ಯವನ್ನು ದಾನವರು ಮಣ್ಣು ಮಾಡಲಿರುವರೋ ಎಂದು ಅಮರರು ಮೊರೆಯ ತೊಡಗಿದರು.

೩೦. ಲೋಕವೆಲ್ಲವೂ ಭಯಂಕರವಾಗಿ ನಾಶವಾಗುತ್ತಿದೆಯಲ್ಲ ಎಂದು ಅಮರರು ಶೋಕಿಸ ತೊಡಗಿದರು. ಸ್ವಾಮಿಗೆ ಭೃತ್ಯರೊಂದಿಗೆ ವಿನೋದ ಏಕೋ ಎದು ಅವರು ಅಂದುಕೊಂಡರು. ಕರುಣಾರ್ಣವನೇ! ಇನ್ನು ಕಾಲಹರಣವೇಕೆ ಎಂದು ದೂರದಿಂದಲೇ ಆತನ ಗುಣಗಾನವನ್ನು ದೇವತೆಗಳು ಮಾಡತೊಡಗಿದರು.

೩೧. ಆಗ ಅಂಬುಜೋದರನು ಅವರಿಗೆ ಅಭಯ ಪ್ರದಾನ ಮಾಡಿದನು. "ನಂಬಿ ಭಯಪಡಬೇಡಿ" ಎಂದನು. ಕೆರೆಗೆ ಮಂಜಿನ ಬಾಧೆಯುಂಟಾಗದು. ಬ್ರಹ್ಮನ ರಕ್ಷೆಯಿರುವಾಗ ಅವರು ನಿತ್ಯವೂ ಹಾಗೆಯೇ ಇರುತ್ತಾರೆ. ನನ್ನನ್ನು ನಂಬಿ ಎಂದು ಶ್ರೀಹರಿಯು ಚಕ್ರರಾಜನನ್ನು ನೋಡಿದನು.

೩೨. ಹೇ, ಸುದರ್ಶನ! ಬೇಗನೇ ದೈತ್ಯನ ಮಾಯೆಯನ್ನು ಸಂಹರಿಸು, ವಾಸವಾದಿಗಳ ಕಷ್ಟವನ್ನು ಸಂಹರಿಸಿ ತಿಳಿಗೊಳಿಸು ಎಂದು ಶ್ರೀಹರಿಯು ಚಕ್ರಕ್ಕೆ ಅಪ್ಪಣೆಯಿತ್ತನು. ಅದನ್ನು ಕೇಳಿದ ಸುದರ್ಶನ ಚಕ್ರವು ಹತ್ತಿಯ ಗುಡ್ಡೆಯನ್ನು ಬೆಂಕಿಯು ನಾಶಮಾಡುವಂತೆ, ಕ್ಷಣಾರ್ಧದಲ್ಲಿ ದೈತ್ಯನ ಮಾಯೆಯನ್ನು ಸಂಹರಿಸಿತು.

೩೩. ಕಣ್ಣು ಮುಚ್ಚಿ ತೆರೆಯುವ ಮುನ್ನವೇ ಮಾಯೆಯೆಲ್ಲವೂ ಪರಿಹಾರವಾಯಿತು. ಕನಸಿನ ಹಾಗೆ ಮಿಂಚಿ ಮಾಯವಾದ ಆ ಪುಣ್ಯವನ್ನು ಏನೆಂದು ಹೇಳಲಿ! ಪೂರ್ಣ ಭಕ್ತರ ಆತ್ಮವು ಮಾಯೆಯನ್ನು ಲಯಗೊಳಿಸುವ ಹಾಗೆ - ಮಣ್ಣಿಗೆ ವಂಚಿಸಿದ ದಾನವೇಶ್ವರನ ಪುಣ್ಯವೆಲ್ಲವೂ - ನಶಿಸಿತು.

೩೪. ಇಲ್ಲಿಗೆ ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ಇದು ಪರಮ ಭಾಗವತದ ಮೂರನೆಯ ಸ್ಕಂಧವು. ತಲೆಯಲ್ಲಿ ಮನ್ನಿಸಿ, ಹೇಳಿ -ಕೇಳಿದ ಮಾನವರಿಗೆ - ಸಮಸ್ತ ದೋಷವನ್ನು ಅಚ್ಯುತನು ಪರಿಹರಿಸಿ ಮುಂದೆ ಅಭಯವೀಯುವನು.

ಅಧ್ಯಾಯ ೧೫

೧. ವೇದ ಪಾರಂಗತರಾದ ಶೌನಕರೇ ಮುಂದಣ ಕಥೆಯನ್ನು ಅವಧಾನಿಸಿ! ಹಿಂದೆ ಬಾದರಾಯಣನು ಪರೀಕ್ಷಿತರಾಜನಿಗೆ ಹೇಳಿದ ಕಥೆಯನ್ನು ಸಾಧು ಸನ್ಮತವಾದ ಮೈತ್ರೇಯ ಮುನಿಯು ವಿದುರನಿಗೆ ಹೇಳಿದನು. ಆದಿಸೂಕರನು ಹಿರಣ್ಯಾಕ್ಷನ ವಧೆಗೈಯ್ದ ಆ ಪ್ರಸಂಗವನ್ನು ಮೈತ್ರೇಯನು ಮುಂದುವರಿಸಿದನು.

೨. ಎಲೈ ಪರೀಕ್ಷಿತನೇ! ದಾನವೇಶ್ವರನ ಮಾಯೆಯು ಪರಿಹಾರಗೊಳ್ಳಲು ಕತ್ತಲೆ ಮುಸುಕಲು ಕಾರ್ಮುಗಿಲ ಮಧ್ಯದಿಂದ ಮೇಲೇಳುವ ಸೂರ್ಯನಂತೆ - ಶೋಭಿಸಿದ ದೈತ್ಯನು ಶ್ರೀಹರಿಯ ಎದುರಲ್ಲಿ ಅಂತರನಂತೆ ಘರ್ಜಿಸಿ ಮಹಲೋಕಕ್ಕೆ ಕೇಳುವಂತೆ ಭಾಷೆಗಳನ್ನು ನುಡಿದನು.

೩. ಹೆದರದೆ ದೈತ್ಯನು ಬಂದೆದುರಾಗಿ ರಭಸದಿಂದ ತಾಗಿದನು. ಹೆದರಿ ಓಡಿ ಹೋದ ದೇವೇಂದ್ರನಲ್ಲಿ ನನ್ನ ಪೌರುಷನನ್ನು ಕೇಳು. ಎಲ್ಲಿಗೆ ಹೋಗುವುದೆಂದು ಬರುತ್ತಿದ್ದೆ ಎಂದು ಎದುರಾಗಿ ಆ ದೈತ್ಯನು ಗಾಢ ಮುಷ್ಠಿಯಿಂದ ಭಗವಂತನ ಎದೆಗೆ ತಾಡಿಸಿದನು.

೪. ಮುಂದಿರುವ ಹೆಂಡತಿಯನ್ನು ಒಬ್ಬಾನೊಬ್ಬನು ಎಳೆದುಕೊಂಡು ಹೋಗುವಾಗ, ಸಂಭ್ರಮದಿಂದ ಅಭಿಮಾನವನ್ನು ಉಳಿಸಿಕೊಂಡು ಬಂದೆನೆಂದು ಗಂಡನು ಹೇಳುವ ಹಾಗೆ, ನೀನು ಗದ್ದಲ ಮಾಡುವುದೇಕೆ? ಹಿಂದಿನ ಪೌರುಷ ಈಗ ಏಕೆ ಎಂದು ಹೇಳಿ ಅಂಬುಜೋದರನು ಆತನ ದಿವ್ಯ ಉರಸ್ಥಲಕ್ಕೆ ಬಲವಾಗಿ ಪ್ರಹಾರ ಮಾಡಿದನು.

೫. ಆತನ ಮುಷ್ಟಿಯ ಗಾಯವನ್ನು ತಾಳಲಾರದೆ ದಾನವನು ಬಿದ್ದನು. ಭೋರನೆ ಅಲ್ಲಿಂದೆದ್ದು ಆರ್ಭಟಿಸಿ ಅಟ್ಟಹಾಸವನ್ನು ಗೈಯ್ದನು. ಶೌರ್ಯ ಪರಾಕ್ರಮಗಳಿಂದ ಆ ಧೀರನು ಎದುರಾಗಿ ಬಂದು ಶ್ರೀಹರಿಯನ್ನು ಅರೆದು ನುರಿದು ವಧಿಸುತ್ತೇನೆಂದು ಎದುರಾದನು.

೬. ಪೊಡವಿ ಸಂಹಾರದ ಕಾಲಭೈರವನಿಗಿಂತಲೂ ಮಿಗಲಾಗಿ ಗರ್ಜಿಸಿ, ಗಡಗಡನೆ ಕೋಪದಿಂದ ನಡುಗಿದನು. ನಡುವಿನಲ್ಲಿ ಹಿಡಿದು ಹೊಡೆದನು. ಗುಡುಗಿದ ಗುಡುಗಿನಂತೆ, ಬಹಳ ಪರಾಕ್ರಮದಿಂದ, ಎಡಬಲ, ತುದಿ ಮೊದಲು ಎಂಬಂತೆ ಪರಸ್ಪರ ಮರ್ಮ ಘಾತಗಳನ್ನು ಮಾಡಿದರು.

೭. ದುಷ್ಟ ದೈತ್ಯನೂ ಸೃಷ್ಟಿನಾಥನು ತಮ್ಮಲ್ಲಿ ಮುಷ್ಟಿ ಯುದ್ಧವನ್ನು ಮಾಡಿದರು. ಹತ್ತಿರ ಬಂದು ಎರಗುವ ಅಟ್ಟಹಾಸದ ಮಹಾಧ್ವನಿಯನ್ನು ಅಷ್ಟಲೋಕದ ನಿವಾಸಕರು ನೋಡಿ, ಜನ ನಾಶವಾಗುತ್ತಿದೆಯಲ್ಲ ಕರ್ಮವೇ! ಎಂದು ಇಷ್ಟ ದೈವವನ್ನು ಪಟ್ಟಾಗಿ ಚಿಂತಿಸಿದರು.

೮. ಅವರೀರ್ವರ ಪದಹತಿಯ ಬಲಕ್ಕೆ ಪೊಡವಿಯು ಗಡಗಡ ನಡುಗಿತು. ಉರಗೇಶ್ವರನ ಸಹಸ್ರ ಮುಡಿಯೂ ನಡುಗಿ ಹೋದುವು. ಬೆನ್ನಿಗೆ ಪರಸ್ಪರ ಹೊಡೆಯುತ್ತಿರಲು ಹೊರಳಿ ಎಡಬಲ ಆಧಾರ ಪಡೆಯಲೆಂದು ಎಲ್ಲ ತಲೆಯನ್ನೂ ಬಲ ಮಾಡಿ, ಕೂರ್ಮನು ಕಡು ಕಷ್ಟವನ್ನು ಪಟ್ಟನು.

೯. ಕಲ್ಪವಾರುಧಿಯ ಕಾಲಕ್ಕೆ ಒಂದುಗೂಡಿ ಬರುವ ತೆರೆಯನ್ನು ಮೀರಿ, ಅವರು ಜಪ್ಪಿಸಿಕೊಂಡು ದರ್ಪದಿಂದ ಹೊಡೆಯುತ್ತಿದ್ದರು. ನಾಲ್ಕು ದಿಕ್ಕಿಗೆ ನಾಲಗೆ ಚಾಚುತ್ತ ಬೆಂಕಿಯು ಹೊರಡುತ್ತಿತ್ತು. ಅಂತಹ ಹೊಡೆತವನ್ನು ತಪ್ಪಿಸಿ ಬದಿಗೆ ಸರಿದು, ಕೋಪವು ಮೇರೆಮೀರುತ್ತಿರಲು ಪರಸ್ಪರ ಎಳೆದಾಡುವರು.

೧೦. ಮೇರು ಪರ್ವತವೂ ಮಲಯಾದ್ರಿಯೂ ತಮ್ಮಲ್ಲಿ ಎದುರಾಗಿ ಕಾದುವ ಹಾಗೆ - ಪ್ರಳಯ ಕಾಲದ ವೀರ ಘರ್ಜನೆಯನ್ನೂ, ಮೇಘ ನಾದವನ್ನೂ ಮೀರಿ - ಒಬ್ಬೊಬ್ಬ ವೀರರೂ ವೀರ ಮುಷ್ಟಿಯನ್ನು, ಬಲಿದು ಕೈಯೆತ್ತಿ ಗಾಯ ಮಾಡಲು ಇಚ್ಛಿಸುವರು. ಹೀಗೆ ಕ್ರೂರ ಶೂರವಾದ ಉಗ್ರವರಾಹ ಮತ್ತು ಹಿರಣ್ಯಾಕ್ಷರು ಪರಸ್ಪರ ಪ್ರೇರಿಸುತ್ತಿದ್ದರು.

೧೧. ಪರಸ್ಪರ ಹತ್ತಿರ ಜಿಗಿದು ಹೊಡೆದಾಡುವರು. ಹಿಮ್ಮಡಿಯಿಂದ ತುಳಿಯುವರು. ಪರಸ್ಪರರ ನಾಶವನ್ನಿಚ್ಛಿಸಿ ಕಷ್ಟ ಪಡುವರು. ಸುತ್ತಲೂ ಸುತ್ತುವರು. ತಲೆ, ಪಕ್ಕೆ, ನಿತಂಬ, ಜಾನುಗಳಿಗೆಲ್ಲ ರಕ್ತ ಬರುವಂತೆ ಹೊಡೆದು, ಶ್ರೀಹರಿಯು ದಾನವನೂ ಮುಷ್ಟಿ ಯುದ್ಧವನ್ನು ಮಾಡಿದರು.

೧೨. ಹೀಗೆ ಅನೇಕ ವಿಧದಿಂದ ಶ್ರೀ ಹರಿಯು ಯುದ್ಧವನ್ನು ಮಾಡಿದನು. ಬಳಿಕ ಇವನಲ್ಲಿ ಈ ರೀತಿ ವಿನೋದವೇಕೆ ಎಂದು, ತಕ್ಷಣವೇ ನಿರ್ಧರಿಸಿದನು. ಇಷ್ಟು ಹೊತ್ತಿಗೆ ನಿನ್ನ ಅವಸಾನಕ್ಕೆ ಸಂಚು ಮಾಡುತ್ತೇನೆ ನೀರಿಕ್ಷಿಸುತ್ತಿರು ಎಂದು ಆತನು ಹತ್ತಿರ ಬಂದು ನಿಂತನು.

೧೩. ಓಡಿಬಂದ ಉಗ್ರವರಾಹನು ಎದುರಿನಿಂದ ವಾಮಪದದಿಂದ ಆತನ ಕುತ್ತಿಗೆಗೆ ಒದೆದನು. ಆಗ ದೈತ್ಯನು ಆ ಕ್ಷಣವೇ ಭೂಮಿಯಲ್ಲಿ ಬಿದ್ದನು. ದೋಣಿಯು ಒಲೆಯುವ ಹಾಗೆ ಭೂಮಿಯು ಕಂಪಿಸತೊಡಗಿತು. ಆತನು ನೀಳವಾದ ದಾಡೆಯ ದಂತವನ್ನು ಚಾಚಿ ಹರಿಯನೀಕ್ಷಿಸಿ ಪ್ರಾಣಬಿಟ್ಟನು.

೧೪. ಆಗ ತಾಯಿಗೆ ಹೊಟ್ಟೆಯಲ್ಲಿ ಶೋಕದವಾಗ್ನಿಯು ಜ್ವಲಿಸತೊಡಗಿತು. ರಂಜಿಸುವ ಸ್ತನಗಳಿಂದ ರಕ್ತವು ಹೊರಬಂದಿತು. ಪತಿಯ ವಾಕ್ಯವು ನೆನಪಾಗಿ ಪೂರ್ವದಲ್ಲಿ ಸೂಚಿಸಿದ

ಫಲವು ಪ್ರಾಪ್ತಿಯಾಯಿತೆಂದುಕೊಂಡಳು. ಆಗ ಆಕೆಯು ಅಂಜನಪ್ರಭ ಸ್ವಾಮಿಯನ್ನು ನೆನೆದು ಪುತ್ರನ ಮೃತ್ಯುವನ್ನು ತಿಳಿದಳು.

೧೫. ದುರುಳನು ಭೂಮಿಗೆ ಬಿದ್ದ ಸಮಯದಲ್ಲಿ ಸರ್ವ ಜನರೂ ಸಂತುಷ್ಟರಾದರು. ಅವನಿಯಲ್ಲಿ ಮಾರ್ಗವು ಸುಸ್ಥಿರವಾಯಿತು. ತುಷ್ಟ ಮಾನಸರಾಗಿ ದೇವ ಸಮೂಹವು ವಾದ್ಯ ಘೋಷದೊಂದಿಗೆ ಶ್ರೀಹರಿಯ ನೆತ್ತಿಗೆ ಕುಸುಮ ವೃಷ್ಟಿಯನ್ನೂ ಸುರಿಸಿತು.

೧೬. ಅಂಬರದಲ್ಲಿ ಪುರನಾರಿಯರು ಹಾಡಿ, ನಲಿದು, ಸ್ತುತಿಸಿ, ನರ್ತಿಸಿ, ನಕ್ಕು ಬಹುಪರಿಯಿಂದ ವಿನೋದಿಸಿದರು. ಪಂಚವಾದ್ಯಗಳ ಮೊಳಗು, ಪುಷ್ಪವೃಷ್ಟಿ, ಮಂಗಳರಾವದಿಂದ ಶ್ರೀಹರಿಯ ಕ್ರೋಧ ಮೂರ್ತಿಯನ್ನು ಏಕಕಂಠದಿಂದ ಹೊಗಳಿದರು.

೧೭. ಪರೀಕ್ಷಿತ ರಾಜನೇ ಕೇಳು. ಇಂತಹ ಪುಣ್ಯವು ಯಾರಿಗೆ ತಾನೇ ಲಭಿಸುವುದು! ಮೃತ್ಯುಕಾಲದಲ್ಲಿ ಶ್ರೀ ಪುರುಷೋತ್ತಮನ ಮುಖವನ್ನು ದರ್ಶಿಸಿ, ಕ್ಷಾತ್ರ ಯುದ್ಧದಲ್ಲಿ ದೈತ್ಯನು ಬಿದ್ದನು. ಆತನಿಗೆ ಈ ಲೋಕದಲ್ಲಿ ಯಾರು ಎಣೆ? ಶಿವ, ಬ್ರಹ್ಮರಿಗೂ ಇಂತಹ ಮುಕ್ತಿಯು ಲಭಿಸಲಾರದು.

೧೮. ನೀಳವಾದ ಕೇಶ, ಬಟ್ಟಲು ಕಂಗಳು, ಕಂಪಿಸುವ ವರ ಮೀಸೆ, ಗುದ್ದುವುದಕ್ಕೆ ಸಿದ್ಧವಾಗಿರುವ ಮುಷ್ಟಿ, ದಂಷ್ಟ್ರ, ಮುಚ್ಚಿ ಮುಚ್ಚಿ ಬದ್ಧ ಭಾವನೆಯಿಂದ ಆತನನ್ನು ನೋಡುತ್ತ ಬೆವರ ಹನಿಗಳಿಂದ ತುಂಬಿದ ಮುಖದ ದಾನವನು ರೌದ್ರವೀರ ಪರಾಕ್ರಮದಿಂದ ಶ್ರೀಹರಿಯ ಮುಂದೆ ಬಿದ್ದಿದ್ದನು.

೧೯. ಯಾರಿಗಾದರೂ ಹರಿಯ ಪಕ್ಷದಲ್ಲಿ ನೋಡುತ್ತ ಬೀಳುವ ಸಿದ್ಧಿ ಲಭಿಸೀತೇ? ಶ್ರೀ ರಮಾಕರ ದ್ವಾರಪಾಲಕರಾದ ಕಾರಣದಿಂದ ಮಾತ್ರ ಅದು ಸಿದ್ಧಿಸಿತು. ಆತನು ಆದಿಯಲ್ಲಿ ಹೇಳಿದ ಹಾಗೆ ನಮ್ಮನ್ನು ಕರೆದುಕೊಳ್ಳುವರೇ ಮೂರು ಅವತಾರಗಳಲ್ಲಿ ಬರಲಿರುವನು ಎಂದು ಕೊಂಡರು.

೨೦. ಭೂಮಿಯಲ್ಲೆಲ್ಲ ಪಸರಿಸಿದ ಈ ಪ್ರಸಂಗವನ್ನು ನಾರದನು ತಾನು ವೀಣೆ ಹಿಡಿದು ತುಂಬುರನೊಂದಿಗೆ ನುಡಿಸಿದನು. ಕ್ಷೇಮ ವಾರ್ತೆಯನ್ನು ವಿಸ್ತರಿಸಿ ಪಾಪವನ್ನು ಸಂಹರಿಸುವರೇ ನಾನು ಕಲ್ಪಿಸಿದಂತೆಯೇ ಆಯಿತೆಂದು ಸಂಭ್ರಮಿಸಿದನು.

೨೧. ಅಯ್ಯೋ! ದಾನವನನ್ನು ಘಾಸಿ ಮಾಡಿ ವಾಸವಾದಿಗಳಿಗೆ ಒಳಿತನ್ನೆಸಗಿದೆ. ಅವರ ವಿಲಾಸಕ್ಕೆ ಒಂದಿನಿತು ಕುಂದು ಬಾರದ ಹಾಗೆ ಭಾರವೆಲ್ಲವೂ ಕಳೆಯಿತು ಎಂದು ಆ ಬ್ರಹ್ಮನು ಶ್ರೀಹರಿಯನ್ನು ವಂದಿಸಿ ಸ್ತುತಿಸಿದನು.

೨೨. ಮಹೇಶ್ವರನೇ! ಒಂದು ಕಣ್ಣಿಗೆ ಬಿದ್ದಿದ್ದ ರಜವಷ್ಟೇ ಈಗ ಹೋಯಿತು. ಒಂದು ಕಣ್ಣನ್ನಷ್ಟೇ ನೀವೀಗ ತೆಗೆದಿರುವಿರಿ. ಇದನ್ನು ತಿಳಿದು ಅನುಗ್ರಹ ಮಾಡಿರಿ. ಈ ಧರೆಯು ಸುಸ್ಥಿರವಾಯಿತು ಎಂದು ಬ್ರಹ್ಮನೇ ಮೊದಲಾದ ದೇವ ಸಮೂಹವು ಸ್ತುತಿಸಿತು.

೨೩. ಜಯಜಯ! ಪರಮೇಶ್ವರೆ! ಧರಣೀಧರ! ದುರಿತಾಂತಕ! ಜಯಜಯ! ಪರಮಾತ್ಮ!ಸರ್ವಜಗನ್ನಿವಾಸ! ದಯಾಕರ! ಜಯಜಯ! ನತಬಂಧು! ಭಕ್ತಶಿರೋಮಣಿ! ನರಕಾಂತಕ! ಜಯ ನಮೋಸ್ತು! ನಮೋಸ್ತು ರಕ್ಷಿಸು! ಅಕ್ಷಯಾ!ಸುಗುಣಾಂಬುಧಿ ಎಂದು ಸ್ತುತಿಸಿದರು.

೨೪. ಹೆದರದೆ ಸದಾ ಭಕ್ತಿಯಿಂದ ನನ್ನನ್ನು ಚಿಂತಿಸುತ್ತಿರಿ. ನಿಮ್ಮ ಸಂಕಟವು ನನಗೆ ತಿಳಿದಿದೆ. ನಿಮಗೆ ಘಾತಿಯನ್ನುಂಟು ಮಾಡುತ್ತಿರುವವನಿಗೆ ನಾನು ನೆನೆಸಿದ ಶಿಕ್ಷೆ ಕಾದಿದೆ. ತನ್ನ ಹೆಂಡತಿಯಲ್ಲಿ ಮಗನು ಹುಟ್ಟುವ ಕಾಲದಲ್ಲಿ ತಂದೆಯಲ್ಲಿ ಕಾದಿ ಆತನನ್ನು ಅಂತಕಾಲಯಕ್ಕೆ ಅಟ್ಟಿ ಇದೇ ರೀತಿಯ ಸಂತೋಷವನ್ನುಂಟು ಮಾಡಲಿರುವೆನು.

೨೫. ಸಮಸ್ತರೂ ಹೆದರದಿರಿ, ಸುಖಿಯಾಗಿರಿ. ನಾನು ಆತನನ್ನು ಜಯಿಸಿ, ಈ ಕೇಡನ್ನು ದೂರ ಮಾಡುತ್ತೇನೆಂದು ಶ್ರೀ ಹರಿಯು ಸರ್ವರನ್ನು ಸಂತೈಸಿದನು. ಬಳಿಕ ಹಂದಿಯ ರೂಪವನ್ನು ಮರೆಮಾಚಿ ನಿಜಸ್ಥಿತಿಯನ್ನು ಅನಂತಶಯನನಾಗಿ ವಿಲಾಸದಿಂದ ರಮಿಸುತ್ತಿದ್ದನು.

೨೬. ಈ ಪ್ರಸಂಗವನ್ನು ಕೇಳಿದವರಿಗೆ ಪುಣ್ಯ - ಸೌಖ್ಯವು ವರ್ಧಿಸುವುದು. ಹೇಳಿದವರಿಗೆ ಅನಂತ ಸಂಪದವೂ ಆಯುಸ್ಸ್, ಐಶ್ವರ್ಯಗಳಾಗುವುವು. ಇದನ್ನು ಹೇಳಿ, ಪಠಿಸಿ ಆಧರಿಸಿದರೆ ಘೋರ ಆಪತ್ತುಗಳು ಪರಿಹಾರವಾಗುವುವು. ಇದನ್ನು ಸೃಷ್ಟಿಸಿ ಪುಸ್ತಕ ಬರೆದವನಿಗೆ ಅಕ್ಷಯ ಮೋಕ್ಷವು.

೨೭. ಬ್ರಹ್ಮಹತ್ಯೆ, ಸರ್ಪದೋಷ ಮೊದಲಾದ ಪಾತಕಗಳ ನಿವಾರಣೆಯಾಗುವುದು. ಜಾತಿ ಸೌಖ್ಯ, ಸಮೃದ್ಧಿ, ಸಂಪದ ಭಕ್ತಿ -ಭುಕ್ತಿ ಮುಕ್ತಿಯುಂಟಾಗುವುವು. ಪ್ರೀತಿಯಿಂದ ಇದನ್ನು ಹೇಳಿ ಕೇಳುವ ಸಜ್ಜನ ಸಂಘವನ್ನು ಲಕ್ಷ್ಮೀವರನಾದ ಶ್ರೀಹರಿಯು ಸತ್ಯವಾಗಿಯೂ ಕರೆದುಕೊಳ್ಳುವನು.

೨೮. ಇಲ್ಲಿಗೆ ಅಧ್ಯಾಯ ಸ್ವರೂಪವಾಯಿತು. ಇದು ಭಾಗವತ ಪುರಾಣ ರಹಸ್ಯವಾದ ಹದಿನೈದನೆಯ ಅಧ್ಯಾಯವು. ಮರೆಯದೆ ವೇದಜ್ಞರಾದವರು ನಿತ್ಯವೂ ಇದನ್ನು ತಿದ್ದುತಿರಲಿ. ಹೃದಯ ಪೂರ್ವಕವಾಗಿ ವರ್ಣಿಸಿದ ಕಥೆಯು ಬ್ರಹ್ಮಾರ್ಪಣವಾಗಲಿ!

ಅಧ್ಯಾಯ ೧೬

೧. ಶ್ರೀ ಗುರುವಿನ ಪಾದ ಸರೋಜಕ್ಕೆ ಆಗಮೋಕ್ತನಾಗಿ ಕೈ ಮುಗಿದು ಅರ್ಜಿಸುತ್ತೇನೆ. ಬಾಗಿ ವಂದಿಸಿ, ಯೋಗಮತವಾಗಿ ಅನುಕೂಲಿಸಿ ಎಂದು ಬೇಡಿಕೊಳ್ಳುತ್ತೇನೆ.

೨. ಶ್ರೀ ಹರಿಯ ನಾಮಗುಣಕ್ಕೆ ಶ್ರೀ ಹರಿಯ ಭಕ್ತರ ಸಚ್ಚಾರಿತ್ರ್ಯವು ಸಮನಾದುದು. ಶ್ರೀಹರಿಯ ಭಕ್ತಿಯು ಮಹಾದೋಷವನ್ನು ಸಾಹಸದಿಂದ ಸಂಹರಿಸುವುದು.

೩. ಆದಿ ಮನುವಿನಿಂದ ಆರಂಭವಾಗಿರುವ ಈ ಕಥೆಯನ್ನೂ ಆಧರಿಸಿ, ಅಂತ್ಯದವರೆಗೆ ವಿಸ್ತರಿಸುತ್ತೇನೆಂದು ಪುರಾಣಿಕ ಮುನಿಯು ಪ್ರಾರ್ಥಿಸಿದನು.

೪. ಶೌನಕಾದಿಗಳೇ ಈ ಪುಣ್ಯಕಥೆಯನ್ನೂ ಅಂದು ಶುಕಮುನಿಯು ಪರೀಕ್ಷಿತ ರಾಜನಿಗೆ ಹೇಳಿದನು. ನಿಮಗಾಗಿ ಆ ಶ್ರೀನಿಕರನ ಪುರಾಣ ಕಥೆಯನ್ನು ನಾನು ರಚಿಸುತ್ತೇನೆ ಎಂದು ಹೇಳಿದನು.

೫. ವರಾಹ ಕಥೆಯನ್ನು ಕೇಳಿ ಮೊಣಕಾಲೂರಿ ಅಭಿನಂದಿಸಿದರು. ಉಂಡ ಅಮೃತವು ರುಚಿಯಾಯಿತು. ಮುನಿಯೇ, ಪುಣ್ಯಕಥೆಯನ್ನು ಮುಂದುವರಿಸಬೇಕು ಎಂದರು.

೬. ಆದಿ ಮನುವಿನ ವಂಶವನ್ನೂ ವಿವರವಾಗಿ ಕೇಳಲು ಆಸೆಯಿದೆ ಎಂದು ಆದರಿಸಿ ಪ್ರಾರ್ಥಿಸುವಾಗ, ಪ್ರೇರಣೆಗೊಂಡು, ಮೈತ್ರೇಯ ಸುತನು ಕಥೆಯನ್ನು ಹೇಳಿದನು.

೭. ಕರ್ದಮರೆಂಬ ಪ್ರಜಾಪತಿಗೆ ದೇವಹೂತಿ ಎನ್ನುವ ಸತಿಯು ವಧುವಾದಳು. ಆಕೆಯನ್ನು ಶ್ರೀಹರಿಯು ಉದ್ಧರಿಸಿದ ಕಥೆಯನ್ನು ನಿರ್ಧರಿಸಿ ಆರಂಭದಿಂದಲೇ ಹೇಳಲಾರಂಭಿಸಿದರು.

೮. ಆದಿಯಲ್ಲಿ ಬ್ರಹ್ಮನು ಕರ್ದಮನನ್ನು ಲೋಕದಲ್ಲಿ ಸೃಷ್ಟಿಸಿ ವೈದಿಕ ಮಾರ್ಗವನ್ನು ಉದ್ಧರಿಸಿ, ಹಾದಿಯನ್ನು ಸುಸ್ಥಿರ ಮಾಡು ಎಂದು ಹೇಳಿದನು.

೯. ಬ್ರಹ್ಮನ ಆಜ್ಞೆಯನ್ನು ಶಿರಸಾ ವಹಿಸಿದ ಕರ್ದಮನು ಕರ್ಮಮತಗಳನ್ನು ಉದ್ಧರಿಸಿದನು. ನಿರ್ಮಲ ಭಕ್ತಿಯಿಂದ ಅಚ್ಯುತನನ್ನು ತನ್ಮಯವಾಗಿ ಭಜಿಸಿದನು.

೧೦. ಬಂದು ಸರಸ್ವತಿಯೆಂಬ ಮಹಾ ದಿವ್ಯನದೀ ತೀರದಲ್ಲಿ, ಸುಸ್ಥಿರವಾಗಿ ಸ್ವಸ್ಥ ಮನಸ್ಸಿನಿಂದ ತಪಸ್ಸನ್ನಾಚರಿಸಿದನು.

೧೧. ಹತ್ತು ಸಾವಿರ ವರ್ಷ ಭಕ್ತಿಯಿಂದ ಅಚ್ಯುತನನ್ನು ಧ್ಯಾನಿಸಿದನು. ಆಗ ಬ್ರಹ್ಮನು ಮನಸ್ಸಿನಲ್ಲಿಯೇ ತಿಳಿದು ಪೌತ್ರನನ್ನು ನೋಡಲು ಬಂದನು.

೧೨. ಎದುರುಗಡೆ ಅಂಬುಜೋದರನು ಸಂಭ್ರಮಿಸಿ ನಿಂತಿರುವುದನ್ನು ನೋಡಿ ಆತನ ಗುಣಸ್ತುತಿಯನ್ನು ಮಾಡಿ, ಅಭಿನಂದಿಸಿದನು.

೧೩. ಸುತ್ತಲೂ ದೇವಾಸುರರು ಆತನ ಗುಣಗಳನ್ನು ಸ್ತುತಿಸುತ್ತಿದ್ದರು. ಸ್ತೋತ್ರ ಪುರಾಣ ಸ್ಮೃತಿಯಿಂದ ಆಶ್ಚರ್ಯವೆನಿಸುವಂತೆ ಕೀರ್ತಿಸಿದರು.

೧೪. ಚಾಮರ, ಸತ್ತಿಗೆ, ಕೈದೀಪ, ಕೈಮಣಿ, ವೀಣೆ - ಕೊಳಲುಗಳ ಧ್ವನಿಯಿಂದ ವಿರಾಜಿಸುತ್ತಿರಲು ಬ್ರಹ್ಮನಿಗೆ ವಂದಿಸಿದರು.

೧೫. ತರತರ ಸೌರಭದಿಂದ ಏರಿಸಿದ ಮುಡಿ, ಕರುಳೊಪ್ಪುವ ಮುದ್ದು ಮುಖ, ಕರುಣಾಪೂರಿತನಾದ ನಯನಗಳು ಆಶ್ಚರ್ಯಕರವಾದ ಕೊರಳು, ಕೌಸ್ತುಭ.

೧೬. ವಿಶಾಲವಾದ ಎದೆ, ದಿವ್ಯವೂ ವಿರಾಟವೂ ಆದ ಭುಜ, ವೀರಸಮುದ್ರೆ, ಕಂಕಣ, ಲಕ್ಷಣಯುತವಾದ ಚತುರ್ಭುಜ ಇವುಗಳನ್ನು ವರ್ಣಿಸಲು ಬಲ್ಲವರಾರು?

೧೭. ಹದವಾಗಿರುವ ನಡು, ಶ್ರೀಕಮಲ ಹುಟ್ಟಿದ ನಾಭಿ, ಪ್ರಾಕೃತವಾದ ವಿಶಾಲವಾದ ನಡುವೇ ಮೊದಲಾದ ಸೌಂದರ್ಯವನ್ನು ವರ್ಣಿಸಲು ಸಾಧ್ಯವೇ?

೧೮. ಯೋಗಿಗಳ ಮತಕ್ಕನುಗುಣವಾದ ಪಾದ; ಆಗಮಗಳ ಮಸ್ತಕದಲ್ಲಿರುವ ಪಾದ, ಶ್ರೀಗುಣ ಸಮೃದ್ಧಿಯಾದ ಪದ; ಭಾಗವತರ ಧ್ಯಾನ ಪಾದವೆನಿಸಿದ ಬ್ರಹ್ಮನ ಪಾದ.

೧೯. ಬಾಡಿರುವ ಬೇಸಗೆಯಲ್ಲಿ ವಿಫುಲವಾದ ಮಳೆ ಸುರಿಯಲು ಆ ಕ್ಷೇತ್ರವು ಸೊಂಪಾಗುವ ಹಾಗೆ - ಮುನಿಯ ಬಾಡಿದ ದೇಹವು ರೋಮಾಂಚನಗೊಂಡಿತು.

೨೦. ಹೆಚ್ಚಿದ ಹರುಷ ಮಹಾಂಬುಧಿಯಲ್ಲಿ ಕರ್ದಮ ಮುನಿಯು ಮುಳುಗಿ ಬದ್ಧಾಂಜಲಿಯಿಂದ ಆತನ ಗುಣಗಳನ್ನೂ ಉದ್ಧರಿಸಿ ಹೀಗೆಂದು ಅಭಿವರ್ಣಿಸಿದನು.

೨೧. ದೇವಜಯಾ! ಪರಿಪೂರ್ಣ ನಿಧೀ! ದೇವಜಯಾ! ಪರಮಾತ್ಮ ಪತೀ! ದೇವಜಯಾ! ಪರವಸ್ತು! ನಮೋ ದೇವ! ನಮೋಸ್ತು! ನಮೋ ಎಂದನು.

೨೨. ನೀನು ತಿಳಿಯದ ನಿನ್ನ ಪಾದವನ್ನು ನೋಡಿದೆನು; ನಿನ್ನ ಮಾಯಾ ವಿಲಾಸ ಪದವನ್ನು ನೋಡಿದೆನು; ಆತ್ಮ ಸೇವ್ಯನಾದ ನಿನ್ನ ಪಾದವನ್ನು ನೋಡಿದೆನು, ನೋಡಿದೆನು! ಎಂದು ಅಭಿನಂದಿಸಿದನು.

೨೩. ನಿನ್ನ ತಪಸ್ಸಿನ ವಿಲಾಸವನ್ನು ಲೆಕ್ಕಿಸದೆ, ಅನೇಕ ದಿನಗಳೇ ಕಳೆದು ಹೋದುವು ನೀನೀಗ ಇಚ್ಛಿಸಿದ ಕಾರ್ಯವನ್ನು ಅನುಗ್ರಹಿಸುತ್ತೇನೆ ಎಂದು ಆತನು ಹೇಳಿದನು.

೨೪. ಆತನ ತಪಸ್ಸಿನ ಭಕ್ತಿಯನ್ನು ನೆನೆದು, ವಿಷ್ಣುವಿನ ಆನಂದ ಭಾಷ್ಪವು ನದಿಯಾಗಿ ಭೂಮಿಯಲ್ಲಿ ಹುಟ್ಟಿ ಪ್ರವಹಿಸಿತು.

೨೫. ಅದು ಒಂದು ಮಹಾನದಿಯೆಂಬ ಗುಣಾನಾಮದಿಂದ ಪ್ರಸಿದ್ಧಿಯಾಯಿತು. ಆ ನದಿಯಲ್ಲಿ ಮಿಂದ ಮನುಷ್ಯರಿಗೆ ಉತ್ತರೋತ್ತರವಾಗುವುದು.

೨೬. ನೀನು ನನ್ನನ್ನು ಧ್ಯಾನಿಸಿದ ಕಾರಣ ನಿನಗೆ ಒಂದು ಗುಣವು ಸೇರಲಿರುವುದು. ಮುಂದಿನ ದಿನ ನಿನಗೆ ಕನ್ಯಾಲಾಭವಾಗಲಿದೆ ಎಂದನು.

೨೭. ಉತ್ತಮೋತ್ತಮನಾದ ಮನುವಿನ ಪುತ್ರಿಯನ್ನು, ಇಲ್ಲಿಗೆ ತರುತ್ತೇನೆ. ನೀವು ಅನ್ಯೋನ್ಯರಾಗಿರಿ. ನಿಮಗೆ ನಾನು ಮಗನಾಗಿ ಜನಿಸುತ್ತೇನೆ.

೨೮. ಇಷ್ಟು ಹೇಳಿ ಮುನಿಯನ್ನು ಪ್ರೀತಿಯಿಂದ ಸಂತೈಸಿ, ಅಷ್ಟೆಲ್ಲ ಜನಗಳಿದ್ದ ಹಾಗೆಯೇ ಯಾರಿಗೂ ಕಾಣದೆ ಮಾಯಾವಾದನು.

೨೯. ಯಾರಿಗೂ ಕಾಣದ ಹಾಗೆ ಅದೃಶ್ಯನಾಗುತ್ತಿರಲು, ಹೇಳಿದ ದಿನಕ್ಕೆ ಮನುಪುತ್ರಿಯನ್ನು ತಂದೆಯು ಜಗಧೀಶನ ಮತದಿಂದ ಕರೆತಂದನು.

೩೦. ನದಿಯ ಇಕ್ಕೆಲಗಳಲ್ಲಿಯೂ ಕರ್ದಮರಾಶ್ರಯವು ಇರಲು ಸರ್ವಗುಣಗಳು ಸಮತೋಲನದಲ್ಲಿದ್ದುವು. ಅದನ್ನು ನೋಡಿ ಹರ್ಷದಿಂದ ಉದ್ಗಾರ ತೆಗೆದನು.

೩೧. ದೂರದೂರದಿಂದಲೇ ಆ ಮುನೀಶ್ವರನು ಪಾದವನ್ನು ನೋಡಿ, ರಥದಿಂದಿಳಿದು ಅವನು ಕಾಲ್ನಡಿಗೆಯಿಂದಲೇ ಸಮೀಪಕ್ಕೆ ಬಂದನು.

೩೨. ಮುನಿಯ ಬಳಿಗೆ ಬಂದು ಆತನ ಪಾದವನ್ನು ಹಿಡಿದು, ದರ್ಭಾಸನವನ್ನೇ ಕುಳ್ಳಿರಿಸಿ ಮನ್ನಿಸಿದನು.

೩೩. ತನಗೆ ಮುಕುಂದನು ಹೇಳಿದ ಮಾತಿನ ಪ್ರಕಾರವೇ ಇವರು ಬಂದಿರುವರೆಂದು, ಶಿವಸಮಾನದ ಕರ್ದಮನು ಅವರಿಗೆ ಯಥೋಚಿತವಾದ ಮನ್ನಣೆಯನ್ನು ಮಾಡಿದನು.

೩೪. ನೀವು ನಮ್ಮ ಆಶ್ರಮಕ್ಕೆ ಅಪರೂಪವಾಗಿ ಬಂದಿರುವಿರಿ........ ನಿಮಗೆ ಬೇಕಾದುದೇನು? ನೀವು ಇಚ್ಛಿಸಿದುದನ್ನು ಕೊಡುವೆ, ಇದು ಸನ್ಮತವಾದುದು ಎಂದನು.

೩೫. ಕರ್ದಮನ ಇಂಗಿತವನ್ನು ತಿಳಿದು ಶುದ್ಧ ಮನಸ್ಸಿನಿಂದ ಮನುವು ಅಭಿನಂದಿಸಿದನು. ನನ್ನ ಬಾಲಿಕೆಯನ್ನು ನಾನು ತಮ್ಮ ಪಾದ ಸೇವೆಗಾಗಿ ಒಪ್ಪಿಸಲಿರುವೆನು ಎಂದನು.

೩೬. ನನ್ನ ಮಗಳಿಗೆ ಯೋಗ್ಯವಾದ ವರನನ್ನು ಸುತ್ತೆಲ್ಲ ಹುಡುಕಿದರೂ ನಾನು ಕಾಣಲಿಲ್ಲ. ನಿಮ್ಮ ಸತಿಯನ್ನಾಗಿಸಲೆಂದು ನಾವು ಇಲ್ಲಿಯವರೆಗೆ ಬಂದೆವೆಂದು ಮನು ಹೇಳಿದನು.

೩೭. ನಿನ್ನ ಗುಣಗಳನ್ನೂ ಆದಿಯಲ್ಲಿ ನಾರದನು ವರ್ಣಿಸಿದನು. ಅದನ್ನು ಕೇಳಿದ ನನ್ನ ಮಗಳು ಕಾಮಮೋಹಿತೆಯಾಗಿ, ನಿನ್ನನ್ನು ನೆನೆಸಿಕೊಂಡು ನನ್ನ ಪದತಲದಲ್ಲಿ ದುಃಖಿಸುತ್ತಿರುತ್ತಾಳೆ.

೩೮. ಇದನ್ನು ಮನುವು ಹೇಳಲಾಗಿ ಕರ್ದಮನು ಹೀಗೆಂದನು. ಹಿಂದೆ ಶ್ರೀಹರಿಯು ನನಗೆ ಈ ವಿವರವನ್ನು ಹೇಳಿ, ಅವಳೊಂದಿಗೆ ವಿವಾಹವಿಧಿಯುಂಟೆಂದು ಹೇಳಿದನು.

೩೯. ಆಕೆಯನ್ನು ನೋಡಿ ದುಃಖಿಸದ ವೀರರು ಹುಡುಕಿದರೂ ಸಿಗಲಾರರು. ಹಿಂದೆ ಆಕೆಯನ್ನು ನೋಡಿದ ವಿಶ್ವಾಸವಸು ಎಂಬ ವೀರನು ಕೂಡಲೇ ಭೂಮಿಗೆ ಬಿದ್ದನು.

೪೦. ಸರ್ವ ಸೌಂದರ್ಯ ವರ್ಧಿಸಿದ ಸರ್ವಕಾಲದ ಚಂದ್ರನ ಹಾಗೆ, ಆಕೆಯು ರೂಪಮಯಾಗಿರುವಳು. ಈ ಸೃಷ್ಟಿಯಲ್ಲಿ ಆಕೆಯುದಯದೊಂದಿಗೇ ಸರ್ವಗುಣಗಳೂ ಹುಟ್ಟಿದುವು.

೪೧. ಆಕೆಯಲ್ಲಿ ಒಬ್ಬ ಪುತ್ರನುದಿಸುವನು. ಆಗಲೇ ನಾನು ಸನ್ಯಾಸವನ್ನು ಸ್ವೀಕರಿಸುವೆನು. ಪುತ್ರನು ಹುಟ್ಟುವ ವರೆಗೆ ಮಾತ್ರ ನಾನು ದಾಂಪತ್ಯ ಜೀವನವನ್ನು ನಡೆಸುವೆನು. ಆಮೇಲೆ ವಿಲಾಪಿಸಿದರೆ ಫಲವಿಲ್ಲ.

೪೨. ಮುನಿಯು ಹೇಳಿದುದನ್ನು ಪುತ್ರಿಯಲ್ಲಿ ಹೇಳಿದನು. ಹಣೆಯಲ್ಲಿ ಬರೆದುದನ್ನು ಮರೆಮಾಚಲು ಸಮರ್ಥರಾದವರು ಯಾರಾದರೂ ಇದ್ದಾರೆಯೇ ಎಂದನು.

೪೩. ಹಾಗೆ ಮಗಳನ್ನು ಒಡಂಬಡಿಸಿ, ಮುನೀಶ್ವರನಿಗೆ ಒಪ್ಪಿಸಿದರು. ಮುಂದಿನ ಕಲ್ಪನೆಗೆ ಅನುಸಾರವಾಗಿ ವಿಧಿಯು ವೈದಿಕ ಮಾರ್ಗವನ್ನು ಕಲ್ಪಿಸಿಕೊಂಡನು.

೪೪. ಮಂಗಲ ವಸ್ತುಗಳಾದ ಮಹಾ ಅಂಗವಿಭೂಷಣ, ವಸ್ತ್ರ, ಆಡಂಬರ ವಾದ್ಯಧ್ವನಿಗಳಿಂದ ಕರ್ದಮ ಮುನಿಪುಂಗವನನ್ನು ಅರ್ಚಿಸಿದರು.

೪೫. ಬಳಿಕ ಮಗಳನ್ನು ಮುನಿಗೆ ಒಪ್ಪಿಸಿ ಅರ್ಪಿಸಿದೆನೆಂದು ನಮಸ್ಕರಿಸಿದನು. ಕೂಡಲೇ ಆ ಸತ್ಪುರುಷನನ್ನೂ ಸತ್ಕರಿಸಿ ನಿರ್ಗಮಿಸಿದನು.

೪೬. ಆ ಮನವಲ್ಲಭೆಯೊಡಗೂಡಿ, ಆ ಮುನಿಯು ತನ್ನ ಆಶ್ರಮದಲ್ಲಿದ್ದನು. ಸ್ವಹಿತಾರ್ಥವನ್ನೂ ಮಾಡದೆ, ಭೂಮಿಯನ್ನು ರಕ್ಷಿಸಿ ಶೋಭಿಸಿದನು.

೪೭. ಮೇಲೆ ದೇವತೆಗಳು ಅನೇಕ ವಿಧವಾದ ಸ್ತುತಿಗಳನ್ನು ಹೇಳಿ, ಉತ್ತಮ ಭಕ್ತನನ್ನೂ ಸತ್ಕರಿಸಿ ಹೂವಿನ ಮಳೆಯನ್ನು ಸುರಿಸಿದರು.

೪೮. ಬ್ರಹ್ಮನೇ ನಿರ್ಮಿಸಿದ ಮಹಾ ನಿರ್ಮಲ ಬರ್ಹಿಷ್ಮತಿನಗರದಲ್ಲಿ ಯಜ್ಞ ಯಾಗಾದಿಗಳನ್ನು ಮಾಡುತ್ತ ಸನ್ಮತನೆನಿಸಿ ನಡೆಸಿಕೊಂಡು ಬರುತ್ತಿದ್ದನು.

೪೯. ಶ್ರೀ ಹರಿಯ ಉತ್ತಮ ನಾಮಗುಣಗಳನ್ನು ಯಾವಾಗಲೂ ಆದರದಿಂದ ವರ್ಣಿಸುತ್ತ ತಾಪಸ ಮಾರ್ಗವೆನಿಸಿದ ಶ್ರುತಿ - ಸ್ಮೃತಿ ಮಾರ್ಗದಲ್ಲಿ ಶ್ರೀಹರಿಯಂತಹ ಮುನಿಪತಿಯು ವಿರಾಜಿಸಿದನು.

೫೦. ಎಪ್ಪತ್ತೊಂದು ಯುಗಗಳವರೆಗೆ ಈಶನ ಮತವನ್ನು ತಪ್ಪದಂತೆ ಪಾಲಿಸುತ್ತ ಶ್ರೀಹರಿಗೆ ಅರ್ಪಿತವೆನಿಸುವ ರೀತಿಯಲ್ಲಿ, ಸತ್ಪಥ ಮಾರ್ಗದಿಂದ ಆತನು ಬಾಳುತ್ತಿದ್ದನು.

೫೧. ಕರ್ಮ ಮತವನ್ನು ಅವಸಾನಗೊಳಿಸಿ, ಬ್ರಹ್ಮಮತದಲ್ಲಿ ವಿಶ್ವಾಸವಿರಿಸಿದ್ದನು. ಹೀಗೆ ಆ ನಿರ್ಮಲ ಭಾಗವತಾಂಕನಿಧಿಯು ಕೀರ್ತಿಯನ್ನು ನಿರಾಕರಿಸಿದ್ದನು.

೫೨. ಮೂರು ಗುಣಗಳನ್ನು ಮೀರಿದನು. ಮೂರು ನೆಲೆಗಳನ್ನು ದಾಟಿದನು. ಆತ್ಮಗತಿಯ ನೆಲೆ ಕಾಣುವ ವರೆಗೆ, ಮುಮುಕ್ಷು ಪಥದಲ್ಲಿ ಆ ಜಗದೀಶನು ಪ್ರವೇಶಿಸಿದನು.

೫೩. ಧರ್ಮಗತಿಯ ಅನುಸಾರದಲ್ಲಿ ಎಲ್ಲವೂ ನಿರ್ಮಾಣಗೊಂಡು ನಾಲ್ಕು ದಿಕ್ಕುಗಳಲ್ಲಿಯೂ ವರ್ಧಿಸಿದುವು. ನಾಲ್ಕು ವಿಧದ ಧರ್ಮಪಥಗಳನ್ನು ಸರ್ವರೂ ದೃಢವಾಗಿ ಅನುಸರಿಸಿದರು.

೫೪. ನಾಲ್ಕು ಆಶ್ರಮಗಳು, ನಾಲ್ಕು ಪುರುಷಾರ್ಥಗಳು, ನಾಲ್ಕು ಮುಖಾನುಮತಗಳನ್ನು ಎಲ್ಲರೂ ಸಾಧಿಸಿ ಕೀರ್ತಿವಂತರಾದರು.

೫೫. ಸರ್ವರಿಗೂ ಬುದ್ಧಿಯ ಕಣ್ಣೆಂಬಂತೆ ತನ್ನ ರೂಪವನ್ನು ತೋರಿಸಿ, ನಿರ್ಮಲ ಬ್ರಹ್ಮನನ್ನು ಸ್ಥಾಪಿಸಿದನು. ಹೀಗೆ ಭೂಪತಿಯು ಶೋಭಿಸಿದನು.

೫೬. ಈ ವರೆಗೆ ಆದಿಮನುವಿನ ಕಥೆಯನ್ನು ಆದರಪೂರ್ವಕವಾಗಿ ರಚಿಸಲಾಯಿತು. ವೇದಪತಿಯ ಕರುಣದಿಂದ ರಚಿತವಾದ ಇದು ಷೋಡಶಾಧ್ಯಾಯವು.

ಅಧ್ಯಾಯ ೧೭

೧. ಶೌನಕ ಮುನಿಗಳೇ! ಮೇಲಣ ಕಥೆಯನ್ನು ಆಲಿಸಿರಿ. ಶ್ರೀ ಶುಕ ಮುನಿಯು ಪರೀಕ್ಷಿತ ರಾಜನಿಗೆ ಹೇಳಿದ ಕಥೆಯನ್ನು ವಿದುರನಿಗೆ ಮೈತ್ರೇಯ ಮುನಿಯು ಹೇಳಿದನು. ಆ ಪ್ರಕಾರ, ಮನುಪುತ್ರಿಯನ್ನು ಮುನಿಕರ್ದಮನು ಪರಿಗ್ರಹಿಸಿ, ಗೃಹಸ್ಥಾಶ್ರಮದಲ್ಲಿ ಶೋಭಿಸಿದನು.

೨. ಮನುಪುತ್ರಿಯ ವಲ್ಲಭನು ಹೀಗೆ ಸಮಸ್ತ ಧರೆಯನ್ನು ಪಾಲಿಸುತ್ತಿದ್ದನು. ಆಗ ಕರ್ದಮನ ಮಡದಿಯು ಪತಿಯ ಪಾದ ಪಾತೀವ್ರತ್ಯವನ್ನು ನಿತ್ಯವೂ ತಪ್ಪದೇ ಪಾಲಿಸುತ್ತಿದ್ದಳು. ಮನಸ್ಸಿನಲ್ಲಿ ಯಾವಾಗಲೂ ಮರುಗುತ್ತ ಹೃದಯದಲ್ಲಿಯೇ ಕೊರಗುತ್ತಿದ್ದಳು. ಈ ವಿಲಾಸವನ್ನು ಒಂದು ದಿನ ಮುನಿಯು ಅರಿತನು.

೩. ಎಲೇ ಸತಿಯೇ! ನೀನು ಮನಸ್ಸಿನಲ್ಲಿಯೇ ಏತಕ್ಕಾಗಿ ಮರುಗುತ್ತಿರುವೆ. ನನ್ನಾಣೆಯಾಗಿ ಹೇಳುತ್ತೇನೆ. ತಿಳಿಸಿದರೆ ಅದನ್ನು ಈಡೇರಿಸುತ್ತೇನೆ. ನನ್ನ ಶಕ್ತಿಯನ್ನು ತಿಳಿಯದೆ ಅನ್ಯಾಯವಾಗಿ ನೀನು ಮರುಗುತ್ತಿರುವೆ ಎಂದು ಹೇಳಲು ಆಕೆಯು ಹೇಳತೊಡಗಿದಳು.

೪. ನಾನು ನಿಮ್ಮ ಪದಾಶ್ರಯದ ಕೋಟೆಯೊಳಗಿರುವಾಗ, ನನಗೆ ಯಾವುದೇ ರೀತಿಯ ಕುಂದು ಎಂಬುದೇ ಇಲ್ಲ. ಹಾಗಿದ್ದರೂ ನನ್ನ ಹೃದಯದಲ್ಲಿ ಮಹಾವ್ಯಸನವೊಂದಿದೆ. ಇಂದ್ರಿಯಗಳ ಸಂಭ್ರಮವು ಮೇರೆ ಮೀರುತ್ತಿದೆ. ನಾನು ಏನು ಹೇಳಲಿ! ಕಂದರ್ಪನ ಶರಹತಿಯನ್ನು ಮನಸ್ಸಿನಲ್ಲಿ ಎಂತು ತಾಳುವೆನು.

೫. ಚಂದ್ರಮುಖಿಯೇ! ನೀನು ಮನಸ್ಸಿನಲ್ಲಿ ಇಚ್ಛಿಸಿರುವುದು ಇಷ್ಟೆಯೋ? ಇದು ಹೊಸವಾರ್ತೆಯೇ? ನನ್ನ ಸೇವೆ, ಪಾದಾರ್ಚನೆ, ಭಕ್ತಿಯನ್ನು ನಿಯತವಾಗಿ ಮಾಡಿದ ನಿನಗೆ ತಿಳಿಯದೆ ನಾನು ನಿಷ್ಠುರನಾದೆ ಎಂದು ಅನುನಯದಿಂದ ಗಾಢವಾಗಿ ಆಲಿಂಗನ ಗೈದನು.

೬. ಅಂಗನೆಯೇ ಆಗಲಿ! ಚೋದ್ಯವೆನಿಸುವ ನನ್ನ ಆತ್ಮಶಕ್ತಿಯನ್ನು ನೋಡುತ್ತಿರು! ನಿನ್ನ ಭಾವಕಲ್ಪನೆಯೆಲ್ಲವೂ ಆಗುವಂತೆ ಸಾಧಿಸುತ್ತೇನೆ ಹೆದರದಿರು. ನೀನು ನನ್ನ ಯೋಗಮಾಯೆಯನ್ನು ನೋಡುವವಳಾಗು ಎಂದು ಆತನು ಪತಿಯನ್ನು ಸಂತೈಸಿದನು. ಬಳಿಕ ಅದ್ಭುತವಾದ ಸರ್ವಕರ್ಮ ವಿಭೂತಿಯನ್ನು ಸೃಷ್ಟಿಮಾಡಿದನು.

೭. ಮನಸ್ಸಿನಲ್ಲಿ ಆತನು ಧ್ಯಾನಿಸುತ್ತಿರಲು ಸರ್ವ ಮಂಗಲವಾದ ಮುತ್ತು ರತ್ನ ಖಚಿತವಾದ ಮಂದಿರವು ಉದ್ಭವವಾಯಿತು. ಅದು ಮೇಲು ಲೋಕದ ಅಮರಾಧಿಪನ ನಗರಕ್ಕಿಂತ ನೂರ್ಮಡಿ ಶೋಭೆಯುಳ್ಳದ್ದಾಗಿ ವಿಸ್ತಾರದಿಂದ ಶೋಭಿಸುತ್ತಿತ್ತು.

೮. ಮರಕತಮಯವಾದ ನೆಲೆಗಟ್ಟು, ಹವಳಗಳಿಂದಲೇ ಸವೆಸಿದ ಜಗುಲಿ, ವಿಶಾಲವಾದ ವಜ್ರಕವಾಟ, ವಿರಾಜಿಸುವ ಸ್ಫಟಿಕ ಭಿತ್ತಿ, ತಿರುಳ್ಗೊಂಡ ಮಣಿರತ್ನ ಕಂಭ, ಕಾಂಚನದ ತೋರಣ, ತರತರವಾಗಿ ಶೋಭಿಸುವ ಶಾತಕುಂಭಗಳು-

೯. ಒಂದು ದಿಸೆಯಲ್ಲಿ ದೇವಾಲಯಗಳು - ಮತ್ತೊಂದು ದಿಶೆಯಲ್ಲಿ ಜಪಮಂದಿರಗಳು; ಒಂದು ದಿಸೆಯಲ್ಲಿ ಭೋಜನಶಾಲೆ, ಮತ್ತೊಂದು ದೆಸೆಯಲ್ಲಿ ಇತರ ನಿವಾಸ; ಒಂದು ಕಡೆ ಏಕಾಂತ ಗೃಹ ಮತ್ತೊಂದು ಕಡೆ ಗೋಷ್ಠೀ ಗೃಹಗಳು; ಒಂದು ಕಡೆ ಹಾಸ್ಯವಿನೋದ, ನಾಟಕ, ಕೂಟ ಇತ್ಯಾದಿಗಳ ಮಹಾತ್ಮೆ-

೧೦. ದಂತದಿಂದ ನಿರ್ಮಿಸಿದ ಮುತ್ತುಪೋಣಿಸಿದ ಮಂಚಗಳು ಹಾಗೂ ಆಸನಗಳು ಶಾಂತವಾದ ಚಂದ್ರನನ್ನೂ ಮೀರಿಸಿದ ತಲೆ ದಿಂಬುಗಳು ಹಾಗೂ ನಿವಾಳಿಗಳು; ಹಾಲ ನೊರೆಯಂತೆ ಶೋಭಿಸುವ ಹಾಸುಗಳು ಹಾಗೂ ಸುಗಂಧ ಭರಿತವಾದ ಪುಷ್ಪಗಳು, ಹೀಗೆ ಮನ್ಮಥನ ಮಂದಿರವನ್ನು ಪರಿಹಾಸಗೈಯ್ಯುವಂತೆ ಆ ಮಂದಿರವು ವಿರಾಜಿಸಿತು.

೧೧. ಕಸ್ತೂರಿ ತಿಲಕ, ಚಂದನಯುಕ್ತವಾದ ದರ್ಪಣ, ಅಗರುಗಂಧಗಳ ಗಗ್ಗುಳ, ಲಾಮಂಚದ ಧೂಪದ ವಿಲಾಸ, ಅನೇಕ ತೆರನಾದ ಕರ್ಪೂರದ ಚೂರ್ಣ ತುಂಬಿದ ವೀಳ್ಯ ಇವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸುವುದಕ್ಕೆ ಯಾರು ಬಲ್ಲರು?

೧೨. ಮೊಲ್ಲೆ, ಸಂಪಗೆ, ಕೇದಗೆ, ಅರವಿಂದ, ಕುಂದ - ಮಂದಾರ, ಮಲ್ಲಿಗೆ, ಸುರಗಿ, ಅಶೋಕೆ, ಜಾಜಿ, ನೇದಿಲೆ, ರೆಂಜೆ, ಬಿಲ್ವಪತ್ರೆ, ದಾಸವಾಳ, ಕರವೀರ, ಅಬ್ಬಲಿಗೆ, ಕೇಸುಳ, ತುಳಸೀ ದಳ ಮೊದಲಾದ ಹೂಗಳಿಂದ ಪರಿಮಳಯುಕ್ತವಾದ ಮಂದವಾಯುವು ಪಸರಿಸಿತು.

೧೩. ಅಲ್ಲಿ ನಿತ್ಯವೂ ಮಠ, ಬಾವಿ, ತಟಾಕ; ಆ ತಟಾಕದಲ್ಲಿ ಅರಳಿ ನಿಂತ ತಾವರೆ, ಹಂಸ, ಭೃಂಗ ಸಮೂಹಗಳು ವಿರಾಜಿಸುದುವು. ಅಲ್ಲದೆ ಕೋಗಿಲೆ, ಚಕ್ರವಾಕ, ಮಯೂರಗಳು ಗಾನವಾಡುತ್ತಿದ್ದುವು. ತಂಪಾದ ಸುಗಂಧ ಪೂರಿತ ವಾಯುವಿನ ಸಂಭ್ರಮವೂ ವಿರಾಜಿಸಿತು.

೧೪. ಈ ಸೌರಭಗಳ ಸಾರವು ಮೂಗಿನ ದ್ವಾರವನ್ನೇ ಮುಚ್ಚಿ ಬಿಟ್ಟಿತು. ಸಮಸ್ತ ನಾಡಿನ ಹೂಗಳೂ ಸೂರೆ ಹೋದುವು ಎಂದು ವ್ಯಥಿಸುವಂತಾಯಿತು. ಸಾರವತ್ತಾದ ಈ ವಿಚಿತ್ರವೂ ಚಿತ್ರ ವಿಲಾಸವೂ ಆದ ಕೌತುಕವು ಕಣ್ಣುಗಳಿಗೂ ಮೀರಿದುದಾಗಿ ವಿರಾಜಿಸಿತು. ಈ ವಿಚಿತ್ರವನ್ನು ಏನೆಂದು ವಿವರಿಸಲಿ!

೧೫. ಹೀಗೆ ಅನೇಕ ವಿಚಿತ್ರತರವಾದ ವಾಸ ವಿಲಾಸವನ್ನು ವರ್ಣಿಸಲು ದೃಷ್ಟಿಗಳೇ ಸಾಕಾಗಲಾರವು. ಆಗ ಸತಿಯು ಚಂಚಲತೆಯಿಂದ ಪತಿಯ ಪಾದಕ್ಕೆ ನಮಿಸಿದಳು. ಆಗ ಆತನು ತನ್ನ ಮಹಿಮೆಯನ್ನು ಹೀಗೆಂದು ಹೇಳಿದನು.

೧೬. ಚಿತ್ತವಲ್ಲಭೆಯೇ ಕೇಳು! ಈಶ್ವರನ ಶಕ್ತಿಯ ಯೋಗ ಫಲದಿಂದ ಲೋಕದಲ್ಲಿ ನಾನಿದನ್ನು ಸೃಷ್ಟಿಸಿದ್ದೇನೆ. ನೀನು ಮನಸ್ಸಿನಲ್ಲಿ ಹೆದರಬೇಡ. ಸುತ್ತಲೂ ಇರುವ ನಾರಿಯರು ನಿನ್ನ ಸೇವಕರೆಂಬುದನ್ನು ತಿಳಿದಿರು. ತಲೆಗೆ ಎಣ್ಣೆಯನ್ನು ಹಚ್ಚಿ ಸ್ನಾನ ಮಾಡಿ ಶುಚಿರ್ಭೂತೆಯಾಗಿರು ಎಂದನು.

೧೭. ಎಂದೆನ್ನಲು ಆತನ ಅನುಗ್ರಹದಿಂದ ನೂರು ಸಾವಿರ ನಾರಿಯರು ಎಣ್ಣೆಯನ್ನು ಪೂಸಿ ಆಕೆಯನ್ನು ಸ್ನಾನ ಮಾಡಿಸಿದರು. ಗಂಧ ಸುಮಾಲೆಗಳ ಅನುಲೇಪನದಿಂದ, ಧೌತಾಂಬರವನ್ನುಟ್ಟು ಅನರಾಗ ರಸವನ್ನು ಬಳಸಿದರು.

೧೮. ಆ ವೇಳೆಯಲ್ಲಿ ದಿವ್ಯ ವಿಮಾನವನ್ನೇರಿ, ಸತಿಸಹಿತ ಆತನು ಶ್ರೀಹರಿಯ ಹಾಗೆ ವಿರಾಜಿಸಿದನು. ಬಹಳ ಐಶ್ವರ್ಯ ಭರಿತನಾದ ಆತನ ಸೇವೆಯನ್ನು ಅನೇಕ ಜನ ನಟರು ನೆರವೇರಿಸುತ್ತಿದ್ದರು. ಆಗ ಆ ಮುನಿಯು ದೇವಾಧಿಪನಿಗಿಂತಲೂ ಮಿಗಿಲಾಗಿ ಶೋಭಿಸುತ್ತಿದ್ದನು.

೧೯. ಆ ಪುಷ್ಪಕ ವಿಮಾನದಲ್ಲಿ ಅಂಗನೆ ಸಹಿತವಾಗಿ ನಾನಾ ಲೋಕವನ್ನು ಸಂಚರಿಸಿದನು. ಸರ್ವರೂ ನೋಡುತ್ತಿರುವಂತೆ, ಸತಿಗಾದ ಅವಸ್ಥೆಯನ್ನು ಹೋಗಲಾಡಿಸಿದನು. ತಾಪತ್ರಯಗಳೆಲ್ಲವೂ ನಾಶವಾಗಿ ಸೌಭಾಗ್ಯವು ಉಂಟಾಯಿತು.

೨೦. ಹೀಗೆ ಅನೇಕ ದಿನ ಸುಖಿಸಲಾಗಿ ಅವರಿಗೆ ಬಾಲಕರೂ ನವಕನ್ನಿಕೆಯರೂ ಉದಿಸಿದರು. ಆ ಕನ್ನಿಕೆಯರು ರೂಪದಲ್ಲಿ ರತಿಯನ್ನೂ ಮೀರಿಸಿದ್ದರು. ಹೀಗಿರುತ್ತಿರಲು ಮನಿಪತಿಯು (ಮತ್ತೆ) ಶೀಘ್ರವಾಗಿಯೇ ತಪಸ್ಸಿಗೆ ಅನುವಾಗ ತೊಡಗಿದರು.

೨೧. ಅದನ್ನು ಕೇಳಿದ ವನಿತೆಯು ಕಣ್ಣೀರು ತುಂಬಿಕೊಂಡಳು. ದುಃಖದಿಂದ ಆಕೆಯ ಘನ ಕುಂಭಕುಚಗಳು ತೋಯಲ್ಪಟ್ಟುವು. ಆಕೆಯು ತಲೆಬಾಗಿ "ನೀವು ನೆನೆಸಿದುದು ಯೋಗ್ಯವಾದುದೇ. ಆದರೆ ನನ್ನ ಭವಿಷ್ಯತ್ತಿಗಾಗಿ ಓರ್ವ ನಂದನವನ್ನು ಅನುಕೂಲಿಸಬೇಕು" ಎಂದು ಅಭಿನಂದಿಸಿದುವು.

೨೨. ಹೀಗೆ ಆಕೆಯು ಅಭಿವಂದಿಸಿ ನುಡಿದ ಆ ವಚನಾಮೃತಗಳನ್ನು ಮುನಿಯು ಕೇಳಿದನು. ಮಂದಸ್ಮಿತನಾಗಿ ನನಗೆ ಆದಿಯಲ್ಲಿ ಶ್ರೀಹರಿಯು ಕಂದನಾಗಿ ಜನಿಸುತ್ತೇನೆ ಎಂದು ಆಜ್ಞಾಪಿಸಿದ್ದಾನೆ. ನೀನು ಶ್ರೀಹರಿಯನ್ನು ಸ್ಮರಿಸಿದರೆ ನಿನ್ನ ಗರ್ಭದಲ್ಲಿ ಅವತರಿಸುವನು ಎಂದನು.

೨೩. ಅದನ್ನು ಕೇಳಿದ ಅಂಗನೆಯು ಹರ್ಷಾಶ್ರು ಜಲದಿಂದ ಆನಂದ ಭರಿತಳಾದಳು. ಆಕೆಯು ಹೃದಯಾಂತರಾಳದಲ್ಲಿ ಕೊಂಡಾಡಿ ಭಾವಿಸಿ ವಂದಿಸಿದಳು, ಚಂಡಕಿರಣನಾದ ಸೂರ್ಯನು ಪೂರ್ವ ದಿಕ್ಕಿನಲ್ಲಿ ಉದಯಿಸುತ್ತಿರುವಂತೆ, ಸಚರಾಚರ ವಂದ್ಯನಾದ ಶ್ರೀಹರಿಯು ಸಂತೋಷದಿಂದ ಗರ್ಭ ಪ್ರವೇಶಿಸಿದನು.

೨೪. ಅಚ್ಯುತನು ಗರ್ಭದಲ್ಲಿ ಉದಯಿಸುತ್ತಿರಲು ಸರ್ವರಿಗೂ ಹಿತವಾಗುವುದೆಂಬಂತೆ, ಆಕಾಶದಲ್ಲಿ ಸುರಾಸುರರೆಲ್ಲ ಜಯಘೋಷ ಮಾಡಿದರು. ಅಕ್ಷವ ಪುಷ್ಪ ಜಲವನ್ನು ಸುರಿಸಿ, ಬಹುವಾದ್ಯ ಘೋಷದಿಂದ, ಸಮಸ್ತ ಜಗತ್ತಿಗೂ ಕಲ್ಯಾಣವಾಗುವಂತೆ ಹಾಡುಗಳು ಕೇಳಿಬಂದುವು.

೨೫. ಬ್ರಹ್ಮ, ನಾರದ, ಸನಕಾದಿ ಸಮಸ್ತರೂ ಮಹಾಮುನಿಪನ ಮಂದಿರವನ್ನು ಪ್ರವೇಶಿಸಿ, ಅನೇಕ ರೀತಿಯಲ್ಲಿ ಸಂಭಾವಿಸಿದರು. ಪ್ರಜಾ ಪರಿಪಾಲಕನಾದ ಮಹಾಪುರುಷನೇ! ಸರ್ವಾತ್ಮಕನೇ! ಎಂದು ಬ್ರಹ್ಮನು ಆ ನಾರಾಯಣ ಮೂರ್ತಿಯನ್ನು ನಾಲ್ಕು ಮುಖದಿಂದಲೂ ಸ್ತುತಿಸಿದನು.

೨೬. ವೇದಗಳು ಮಸ್ತಕದಲ್ಲಿ ಹರಿನಾಮವನ್ನು ಆವಾಹಿಸಿದ ಹಾಗೆ, ಈ ಮಹಾಮಾತೆಯು ಸಚರಾಚರ ವಂದ್ಯನಾದ ಶ್ರೀಹರಿಯನ್ನು ಗರ್ಭದಲ್ಲಿ ಧರಿಸಿದ್ದಳು. ಈ ಲೋಕದ ಜನದ ದೇಹ ಸಂಬಂಧವನ್ನು (ಜರೆ, ಮರಣ, ಇತ್ಯಾದಿಗಳನ್ನು) ಖಂಡಿಸುವವರು ಯಾರಿದ್ದಾರೆ. ಆದರೆ ಹೇ, ದೇವಿ! ನಿಮಗೆ ಜರಾ -ಮರಣಗಳೇ ಇಲ್ಲ ಎಂದು ಬ್ರಹ್ಮನು ಶ್ಲಾಘಿಸಿದರು.

೨೭. ಕಪಿಲನೆಂದು ಆ ಪುತ್ರನಿಗೆ ಯೋಗ್ಯವಾಗಿ ನಾಮಕರಣವನ್ನು ಮಾಡಿದರು. ಮರಣ, ಕರ್ಮಪಾಶ, ನಿವಾರಣನೂ, ಗುಪಿತ ಯೋಗನಿವಾಸನೂ ಅನೇಕ ಗುಣಜ್ಞನೂ ಎಂದು ಆತನನ್ನು ವರ್ಣಿಸಿ ಬ್ರಹ್ಮನು ಅಜಲೋಕಕ್ಕೆ ನಿರ್ಗಮಿಸಿದನು.

೨೮. ಪುತ್ರನುತ್ಸವನ್ನು ನೋಡಿ, ಕರ್ದಮನು ಚಿತ್ತದಲ್ಲಿ ಹರ್ಷಗೊಂಡನು. ಪುತ್ರಿಯರನ್ನು ಮರೀಚಿ, ಪುಲಸ್ತ್ಯರೇ ಮೊದಲಾದ ಮಹಾಮುನಿಗಳಿಗೆ ಮದುವೆ ಮಾಡಿದನು. ಆ ಕನ್ನಿಕೆಯರನ್ನು ಮದುವೆಯಾದ ಅವರು ವೈದಿಕ ಮಾರ್ಗಗಳನ್ನು ತಪ್ಪಿಸದೆ, ಉತ್ತರೋತ್ತರವೆನಿಸುವಂತೆ ಸಂತತಿಯನ್ನು ವರ್ಧಿಸಿ, ಬೆಳೆದರು.

೨೯. ಕಲೆಯೆಂಬ ಕುವರಿಯನ್ನು ಮರೀಚಿಗೂ, ಅನಸೂಯೆಯನ್ನು ಅತ್ರಿಗೂ, ಶ್ರದ್ಧೆಯನ್ನು ಅಂಗೀರಸನಿಗೂ, ಹವಿರ್ಭುಕ್ಕಳನ್ನು ಪುಲಸ್ತ್ಯನಿಗೂ, ಪ್ರಲಹನಿಗೆ ಗತಿಯನ್ನೂ, ಕ್ರಿಯೆಯನ್ನು ಶತ್ರುವಿಗೂ ಮಹಾಖ್ಯಾತಿಯನ್ನು ಶ್ರೀ ಭೃಗುವಿಗೂ ವಿವಾಹ ಮಾಡಿದನು.

೩೦. ವಶಿಷ್ಠನಿಗೆ ಅರುಂಧತಿಯನ್ನೂ, ಶಾಂತಿಯನ್ನು ಅಥರ್ವಣನಿಗೂ ಮದುವೆ ಮಾಡಿದನು. ಹಾಗೆ ಯಥಾಕ್ರಮವನ್ನು ನೆರವೇರಿಸಿ, ಸಂಬಂಧಗಳನ್ನು ಸೇರ್ಪಡಿಸಿದನು. ಬಳಿಕ ಪುತ್ರನ ಬಳಿಗೆ ಬಂದು ತನ್ನ ತಪಸ್ಸಿನ ಯಾತ್ರೆಯ ಕುರಿತು ಹೇಳಿದನು.

೩೧. ಸ್ವಾಮಿಯೇ! ನಿಮ್ಮ ಪಾದರವಿಂದವನ್ನು ಮನಸ್ಸಿನಲ್ಲಿ ಚಿಂತಿಸಿ, ಕಾಮಕರ್ಮ ವಿಷಯವನ್ನು ಮೀರಿ, ಸೀಮೆಯನ್ನು ಉತ್ತರಿಸಿದ್ದೇನೆ. ನಾನು ಧಾರಕನಾಗಿ ಮುಕ್ತಿ ಪದದಲ್ಲಿ ನಿನ್ನನ್ನು ಕಾಣುತ್ತೇನೆ. ಪ್ರೇಮದಿಂದ ನನಗೆ ಇದಕ್ಕೆ ಸಮ್ಮತಿಸಬೇಕು, ಶರಣು! ಎಂದು ವಂದಿಸಿದರು.

೩೨. ಹಾಗೆಯೇ ಆಗಲಿ! ಇದರಲ್ಲಿ ಸಂಶಯವಿಲ್ಲ. ಮುಕ್ತಿ ಸಾಧನಕ್ಕಾಗಿ ಹೋಗುವ ದಾರಿಯನ್ನು ಅನುಕೂಲಕರವಾಗುವಂತೆ ಮಾಡುತ್ತೇನೆ. ತಂದೆಯ ವಾಕ್ಯವು ಮಗನಿಗೆ ನಿಶ್ಚಯವಾಗಿ ಗುರುವಾಕ್ಯವೇ ಸರಿ. ಇದರಲ್ಲಿ ನನಗೆ ಭಿನ್ನಾಭಿಪ್ರಾಯವಿಲ್ಲ. ಹೋಗುವುದಕ್ಕೆ ತಾವು ಅನುಗ್ರಹ ಪೂರ್ವವಾಗಿ ನಿಶ್ಚಯಿಸಿರುವುದಾದರೆ ವಿದಾಯಕ್ಕೆ ಸಿದ್ಧವಾಗಿದ್ದೇವೆ ಎಂದನು.

೩೩. ಉತ್ತಮೋತ್ತಮನಾದ ಮೂರ್ತಿಯಲ್ಲಿ ನೀನು ಚಿತ್ತವನ್ನು ದೃಢಗೊಳಿಸಿ, ನಿತ್ಯ ನಿರ್ಮಲವಾಗಿ ಸಾತ್ವಿಕ ವರ್ತನೆಯನ್ನು ನೆರವೇರಿಸು. ಸುತ್ತಲೂ ಈಶ್ವರ ಮೂರ್ತಿಯೇ ಇರುವುದೆಂದು ಪೂರ್ಣವಾಗಿ ನಂಬಿ, ಸ್ವಸ್ಥದಿಂದಿರು ಎಂದು ಅನುಗ್ರಹಿಸಿ, ಅಲ್ಲಿಂದ ಕರ್ದಮನು ಹೊರವಂಟನು.

೩೪. ಪುತ್ರನೇ, ಜಗನ್ಮಯ ಮೂರ್ತಿಯೆಂದು ಕರ್ದಮನು ಕಲ್ಪಿಸಿದನು. ಚಿತ್ತದಲ್ಲಿ ಅದ್ವೈತಾ ಭಾವದಿಂದ ಕರ್ಮವನ್ನು ನಿವೃತ್ತಿಗೊಳಿಸಿದನು. ವಸ್ತುವು ಒಂದೇ ಇರಲಿ, ಎರಡೇ ಇರಲಿ. ಅನೇಕವೇ ಇರಲಿ. ಅವೆಲ್ಲವೂ ಸಮಸ್ತ ಸಾಧಕವೆಂದು ಭಾವಿಸಿದನು. ಚಿತ್ತದಲ್ಲಿ ಹೀನ ಪ್ರಸನ್ನನಾಗಿ ತೀವ್ರವಾದ ತಪಸ್ಸಿನಲ್ಲಿ ಮುಳುಗಿದನು.

೩೫. ವಾರುಧಿಯು ಹೆಚ್ಚುತ್ತಿರಲು ತೆರೆಯು ಒಲೆದಾಡುವಂತೆ, ಬುದ್ಧಿಯನ್ನು ಆತ್ಮಸುಖಾಬ್ಧಿಯಲ್ಲಿ ದೃಢವಾಗಿರಿಸಿ, ಅಲುಗಾಡದೆ, ಜ್ವಲಿಸುವ ದೀಪಕ್ಕೆ ಸಮಾನವಾಗಿ, ಮೂರ್ತಿಯಲ್ಲಿ ಒಂದಾದನು. ಶರೀರದ ಸುಗಂಧ-ವಾಸನೆಗಳನ್ನು ಮೀರಿ, ಬಂಧವನ್ನು ಬಿಡಿಸಿಕೊಂಡನು.

೩೬. ಇಲ್ಲಿಗೆ ಹದಿನೇಳು ಅಧ್ಯಾಯಗಳಾದುವು. ಇದು ಪವಿತ್ರವಾದ ಭಗವತ್ಕಥೆಯಲ್ಲಿ ಶ್ರೀ ಕಪಿಲಾಖ್ಯಾತ ಪ್ರಸಂಗವು. ಬುದ್ಧಿಪೂರ್ವಕವಾಗಿ, ಇದನ್ನು ಗ್ರಹಿಸಿ ನೆಲೆಯನ್ನು ತಿಳಿದ ಮನುಷ್ಯನು ಕ್ಷೀರಸಾಗರದಲ್ಲಿ ಸುಖದಿಂದಿರುತ್ತಾರೆ ಎಂಬುದು ಶಾಸ್ತ್ರ ಪ್ರಮಾಣವು!

ಅಧ್ಯಾಯ ೧೮

೧. ಲೋಕಮೂರ್ತಿಯು ತಾಯಿಗೆ ವಿವೇಕ ಮಾರ್ಗವನ್ನು ಪ್ರಕಾಶ ಪಡಿಸಿದ ಕಥೆಯನ್ನು ವಿರಚಿಸುತ್ತೇನೆಂದು ನಾನು ಬುದ್ಧಿಯಲ್ಲಿ ಕುತೂಹಲಗೊಂಡಿದ್ದೇನೆ. ಲೋಕಮಾತೆಯಾದ ಶಾರದೆಯನ್ನು ಆತ್ಮದಲ್ಲಿದ್ದೂ ದಿನಂಪ್ರತಿಯೂ ತೂಕತಪ್ಪದ ಹಾಗೆ ಪ್ರಾಸ-ಪದಗಳನ್ನು ಅನುಕೂಲಿಸುತ್ತಿರಲಿ!

೨. ಶ್ರೀ ಶುಕ ಮುನಿಯು ಮುನೀಶ್ವರರಿಗೆ ವೇದವ್ಯಾಸಮುನಿಯು ರಚಿಸಿದ ಶ್ರೀ ಭಾಗವತಾರ್ಥನನ್ನು ಹೇಳಿದನು. ಅದನ್ನು ಸೂತನು ಶೌನಕಾದಿಗಳಿಗೆ ಹೇಳಿದನು. ಮೈತ್ರೇಯನು ವಿದುರನಿಗೆ ಅದನ್ನೂ ಹೇಳಿದನು. ಈಗ ಕಪಿಲನು ತಾಯಿಗೆ ಹೇಳಿದ ಕಥೆಯನ್ನು ಮೈತ್ರೇಯನು ವಿದುರನಿಗೆ ಹೇಳತೊಡಗಿದನು.

೩. ಒಂದು ತೀರ್ಥ ನದಿಯ ತೀರದ ವನದ ಮಧ್ಯೆ ವಿರಾಜಿಸುವ ಮಂದಿರದಲ್ಲಿ ತಾಯಿಯನ್ನು ನೆಲೆಗೊಳಿಸಿ ಕಪಿಲ ಬೀಳ್ಕೊಳ್ಳುವುದರಲ್ಲಿದ್ದನು. ತಾಯಿಯ ಬಂಧನವನ್ನೂ ಕಳೆದುಕೊಳ್ಳಬೇಕು ಎಂದುಕೊಳ್ಳುತ್ತಿರುವಾಗ, ಆ ರಾಜಕುಮಾರಿಯು ಆತನ ಚರಣಕ್ಕೆ ವಂದಿಸಿ ಹೀಗೆ ಹೇಳಿದಳು.

೪. ದೇವಾ! ನಿನ್ನ ಶುಭಕರವಾದ ಪಾದಾಂಬುಜನನ್ನು ಸೇವಿಸಿದ ಶರಣಾಗತೆ ನಾನು. ಭವ ಸಮುದ್ರದೊಳಗೆ ಬಂಧನದೊಳಗೆ ಸಿಲುಕಿ ನೋವು ಪಡುತ್ತಿರುವೆ. ನಿನ್ನ ದಿವ್ಯ ಕಟಾಕ್ಷವನ್ನು ಬೀರಿ ನೋವನ್ನು ಖಂಡಿಸಬೇಕು ಎಂದು ಆತನ ಅಂಘ್ರಿಪಾವನ ಪಲ್ಲನಗಳಿಗೆ ವಂದಿಸಿ ನಮೋ! ಎಂದಳು.

೫. ನೀನು ಮಗನಾಗುತ್ತೀಯ ಎಂದು ಮೊದಲೇ ತಿಳಿದು ನಿನ್ನನ್ನು ಗರ್ಭದಲ್ಲಿ ಧರಿಸಿದ್ದೆನು. ಕತ್ತಲೆಯನ್ನು ಸರಿಸಿ, ಸೂರ್ಯನು ಮೈದೋರುವ ಹಾಗೆ ನೀನು ಉದ್ಭವಿಸಿದೆ. ಈಗ ವಿವೇಕ ಜ್ಞಾನ ಪಥವನ್ನು ತೋರಿ, ಭವಾಟವಿಯನ್ನೂ ದುರ್ಬಲಗೊಳಿಸಿ ಇಂಬುಗೊಳಿಸಬೇಕೆಂದಳು.

೬. ಹಲವು ಮಾತೇಕೆ? ನಿನ್ನ ನಾಮ ಗುಣಗಳನ್ನು ತಿಳಿದರೆ ಅನಾಮಿಕನೂ ಯತಿಗಿಂತಲೂ ಮಿಗಲಾಗುವನು. ನೀನು ಜನ್ಮ ಫಲವಾಗಿ ನನ್ನಲ್ಲಿ ಸೇರಿದ ಕಾರಣ, ನೆಲೆಗಾಣದ ಸಂಸಾರ ಸಮುದ್ರವನ್ನು ದನದ ಹೆಜ್ಜೆಯಲ್ಲಿರುವ ನೀರಿನಷ್ಟು ಮಾಡಿದೆ. ಇದು ಚೋದ್ಯನೇ ಸರಿ.

೭. ಆಗ ಶ್ರೀಹರಿಯು ನಸುಹಾಸ ತಳೆದು ತನ್ನ ತಾಯಿಯನ್ನು ಬಹುವಾಗಿ ಆದರಿಸಿದನು. ನಿನ್ನ ಮನಸ್ಸಿನಲ್ಲಿ ಉಂಟಾದ ಈ ಮನೋಭಾವನೆಯು ಹೊಸ ಸುದ್ಧಿಯೇ ಆದುದು. ಮನ ಮೆಚ್ಚುವ ಹಾಗೆ ವಿಷಯಗಳು ತಾನೇ ನಶಿಸಿ ಹೋದುವು. ಈಗ ನಾನು ನಿನಗೆ ಆಗಮ ತತ್ತ್ವವನ್ನು ಹೇಳುತ್ತೇನೆ ಎಂದನು.

೮. ಮೋಕ್ಷ ಶಾಸ್ತ್ರವನ್ನು ಆತ್ಮ ತತ್ತ್ವವನ್ನೊಳಗೊಂಡಂತೆ ರಚಿಸುತ್ತೇನೆ. ಮೋಕ್ಷ ಸಾಧಕರಾದ ಮುಮುಕ್ಷುಗಳು ದುಃಖ ನಿವೃರ್ತಿ ಮಾರ್ಗಕೋಸುಗ ಇದನ್ನು ಹೇಳಿದರು. ಅಕ್ಷರಜ್ಞರು ಆದಿಯಲ್ಲಿ ಇದನ್ನು ಲಕ್ಷಣ ಸಹಿತ ಸೂಚಿಸಿದರು. ಶ್ರದ್ಧೆಯಿಂದ ಆಲಿಸು, ತಾಯೇ!

೯. ಸರ್ವಶಾಸ್ತ್ರವನ್ನು ಕೇಳಿ ಏನು ಫಲ? ಅದನ್ನು ಹೇಳಿಯೂ ಫಲವೇನೂ ತತ್ತ್ವಜ್ಞಾನ ರಹಸ್ಯ ತಿಳಿಯದೇ ಸರ್ವವೂ ಅಪ್ರಯೋಜಕವೇ. ಆತ್ಮಜ್ಞಾನವಿಲ್ಲದವನಿಗೆ, ವೇದಜ್ಞಾನಿಯಲ್ಲದವನಿಗೆ, ಭಕ್ತಿ ಶೂನ್ಯರಾದವರಿಗೆ ಯಾವಂದಿಗೂ ದಂಡನೆಯು ಇಲ್ಲದಿರದು.

೧೦. ಸಕಲ ಕರ್ಮ ನಿವೃತ್ತಿಯಾಗದೆ, ಆತ್ಮ ಶುದ್ಧವು ಲಭಿಸಲಾರದು. ಸಕಲ ಕರ್ಮವನ್ನು ತ್ಯಜಿಸಲಾರದೆ ಕಾಮತೃಷೆಯಾಗಲಾರದು. ಸಕಲ ಭಕ್ತಿ, ಸಕಲ ಯುಕ್ತಿ, ಸಕಲ ಮುಕ್ತಿ ಫಲಗಳಿಗೆ ಅಕುಟಿಲವು ಬಾರದೆ ಯಾರಿಗೂ ಬುದ್ಧಿಯು ನಿರ್ಮೂಲವಾಗಲಾರದು.

೧೧. ಯೋಗದಲ್ಲಿಯೂ ಮೂರು ವಿಭೇದ ಮಾರ್ಗವನ್ನು ಹೇಳಿದರು. ಯೋಗ ಮಾರ್ಗವನ್ನು ತಿಳಿಯುವವವರಿಗೆಂದು, ಆತ್ಮ ತತ್ತ್ವವನ್ನು ನಿರ್ಮಿಸಿದರು. ದಾನಿಗಳೂ ಉತ್ತಮ ಕರ್ಮಗಳನ್ನು ಮಾಡಿ, ಮೋಹ ಜಗತ್ತಿನಿಂದ ಯೋಗ ಜಗತ್ತಿಗೆ ಬರಬಹುದು. ಶ್ರೀ ಗುರು ಪದ ಭಕ್ತಿಯಿಂದ ಮುಕ್ತಿಯತ್ತ ವೇಗವಾಗಿ ಗಮಿಸಬಹುದು.

೧೨. ಎಂದು ಮಗನು ಹೇಳಲು ಆ ಮಾತೆಯು ಉತ್ಸಾಹಗೊಂಡಳು. ಮಂದಸ್ಮಿತಳಾದ ಆಕೆಯು ಯೋಗತ್ರಯ ಸಾರವನ್ನು ವಿಚಾರಿಸಿದಳು. ಸುಸೂತ್ರವಾಗಿ ತತ್ತ್ವಾರ್ಥದ ಲಕ್ಷಣವನ್ನು ತಿಳಿದು ಪರಿಪಾಲಿಸಲು, ಮಂದಾತ್ಮರಾದ ನಾವು ಹೇಗೆ ಪ್ರಯತ್ನಿಸಬಹುದು ಎಂದಳು.

೧೩. ತಾಯೇ! ಹಾಗಾದರೆ ಮೋಕ್ಷ ಪಥಕ್ಕೆ ಉಪಾಯವನ್ನು ಹೇಳುತ್ತೇನೆ. ಸಾಂಖ್ಯ ಮತದ ಪ್ರಕಾರ ಕಾಯಕರ್ಮ ನಿವೃತ್ತಿಯೋ ಸರ್ವ ಹಿತಾಶ್ರಯವಾದುದು. ಕಾರಣವೇ ಇಲ್ಲದ ಅನರ್ಥಕಾರಿಯಾದ ಜನನಫಲದ ಅಹಂಕೃತಿಗಳು ನಾಶವಾದ ಮೇಲೆ, ನಾನು ಎಂಬುದು ಅಳಿದ ಮೇಲೆ - ವಿರಕ್ತಿಯು ಹುಟ್ಟುವುದು. ಇದುವೇ ಸಾಂಖ್ಯ ತತ್ತ್ವವು.

೧೪. ನಿತ್ಯನೂ, ಶುದ್ಧನೂ, ವಿಬುದ್ಧನೂ, ಸತ್ಯನೂ, ಜ್ಞಾಪ್ತಿಯೂ, ಸುಖ ಪೂರ್ಣನೂ, ಆದ ಪರವಸ್ತುವು ಮುಕ್ತಿ ನಿರ್ವಚನಕ್ಕಾಗಿ ಜನಿಸಿದ ಪ್ರಸನ್ನ ಮೂರ್ತಿಯು. ಅಸ್ತಿ - ನಾಸ್ತಿ ಎಂಬ ಶಾಸ್ತ್ರ ಅಭಯಾರ್ಥವಾಗಿ ಹೊರಟು ಪೃಥ್ವಿಗೆಲ್ಲ ಹಿತಾರ್ಥಕಾರಿಯಾಗಿ ವಿರಾಜಿಸಿದನು.

೧೫. ಮೂಲ ಪ್ರಕೃತಿ ಇದುವೇ ಎಂದು ತತ್ತ್ವಜ್ಞರು ಹೇಳುತ್ತಾರೆ ಮೂಲ ಗುಣಗಳು ಮೂರು ಎಂಬುದು. ಆ ಮೂಲ ಗುಣಗಳಿಂದಲೇ ಮಹದಾದಿ ಗುಣವಾಯಿತು. ಈ ಮಹಾದಾದಿ ಗುಣವು ಮೂರು ಮೂಲಗುಣಗಳಿಗೂ ಮೂಲವಾಗಿ ತ್ರಿಗುಣಾತ್ಮಕ ಭೇದವಾದುದು ಮೂಲವು ಕರ್ಮಾತ್ಮರಾದ ಎಲ್ಲರಿಗೂ ಸರ್ವಾಶ್ರಯವಾದುದು.

೧೬. ತ್ರಿಗುಣಗಳಿಂದಾಗಿ ಪಂಚಭೂತಗಳು ಜನಿಸಿದುವು. ಅವುಗಳು ಆಕಾಶ, ನೀರು, ಭೂಮಿ, ವಾಯು, ಅಗ್ನಿಗಳೆಂದು ಆಕಾರ ಸ್ವರೂಪ ಪಡೆದುವು. ಹಾಗೆಯೇ ಶಬ್ದ, ಸ್ಪರ್ಶ, ಗಂಧ, ರಸ, ರೂಪ ಎಂಬ ಗುಣಗಳೂ ಉಂಟಾದುವು.

೧೭. ಗಗನಕ್ಕೆ ಒಂದು ಗುಣವೂ, ವಾಯು ಅಗ್ನಿಗಳಿಗೆ ಮೂರು ಗುಣವೂ, ಜಲಕ್ಕೆ ನಾಲ್ಕು ಗುಣವೂ ಭೂಮಿಗೆ ಐದು ಗುಣವೂ ಇರುವುದು. ಇದೆಲ್ಲವೂ ಸೇರಿ ದಶೇಂದ್ರಿಯಗಳಿಂದಲೇ ಜೀವಿಯು ಆಗುತ್ತಾನೆ. ಹೀಗೆ ಮಾಯಂಗನೆಯ ಶಕ್ತಿಯಿಂದ ಈ ಪ್ರಪಂಚವು ಉರುಳುತ್ತಿರುತ್ತದೆ.

೧೮. ಕಿವಿಗೆ ಕೇಳುವ ಮತ್ತು ಕಣ್ಣಿಗೆ ನೋಡುವ ಗುಣಗಳು ಏಕಾಕಾರ ವಿಭೇದ, ಅತಿಯಾದ ಪರಿಮಳವನ್ನು ಮೂಗಿಗೆ ಗ್ರಹಿಸುವ ಶಕ್ತಿ, ನಾಲಗೆಗೆ ರುಚಿ ನೋಡುವ ಗುಣ, ಭೂಮಿಗೆ ಅತಿಯಾದ ಚಳಿ, ಗಂಧವನ್ನು ಹೊಂದುವ ಗುಣ, ಮೂಡಣ ದಿಕ್ಕು ಇವೆಲ್ಲವೂ ತ್ರಿಗುಣಾತ್ಮಕವಾದವುಗಳೇ.

೧೯. ಜಿಹ್ವೆಗೂ ವಾಕ್ ಶಕ್ತಿಯೂ, ಬೊಗಸೆಗಳಿಗೆ ದಾನವೂ, ವ್ಯಕ್ತಿಯ ನಿತ್ಯ ಮಲವಿಸರ್ಜನೆಗಾಗಿ ಗುದವೆಂಬ ಇಂದ್ರಿಯವೂ ಇರುವುವು. ಯಾವಾಗಲೂ ಹೊತ್ತುಕೊಂಡಿರುವುದು ಪಾದದ ಗುಣವೂ ಆಗಿರುವುದು. ಹರಿಯು ಮೃತ್ಯು ಪಿತಾಮಹನಾಗಿರುವನು.

೨೦. ತಾಯೇ! ಇನ್ನು ಮುಂದೆ ಪಂಚಪ್ರಾಣ ನಿವಾಸಗಳನ್ನು ವಿವರವಾಗಿ ಹೇಳುತ್ತೇನೆ, ಕೇಳು, ಪ್ರಾಣವೂ ಊರ್ಧ್ವದಲ್ಲಿಯೂ, ಅಪಾನವು, ಚಿತ್ತನಲ್ಲಿಯೂ, ವಿಯಾನವು ನಾಡಿಯಲ್ಲಿಯೂ, ಉದಾನವು ಕುತ್ತಿಗೆಯಲ್ಲಿಯೂ, ಸಮಾನವೂ ಎಲ್ಲೆಡೆಗಳಲ್ಲಿಯೂ ನಿತ್ಯವೂ ಇರುತ್ತದೆ. ಈ ಪಂಚಪ್ರಾಣಗಳು ಸದಾ ಚಲಿಸುತ್ತಲೇ ಇರುವುದೇ ಜೀವವಿಕಲ್ಪವು.

೨೧. ತಾಯೇ! ಕೇಳು. ಏಕಾತ್ಮಕನಾದ ಜ್ಞಾನಮಯನು ಬಹುಭಿನ್ನವಾಗಿ ನಾಲ್ಕು ಮೂಲ ಆಕಾರಗಳನ್ನು ಹೊಂದಿದ್ದಾನೆ. ಆತನು ಸಂಶಯ, ದೃಢನಿಶ್ಚಯ ಎಂಬುದಾಗಿ ಎರಡು ಭಿನ್ನಕರ್ಮಗಳನ್ನು ಬೇರ್ಪಡಿಸಿರುವುದನ್ನು ಇನ್ನು ಮುಂದೆ ವಿಸ್ತರಿಸುತ್ತೇನೆ.

೨೨. ಒಮ್ಮೆಯೂ ತಪ್ಪದೆ ವ್ಯವರಿಸುವುದೇ ಮನಸ್ಸು ಎಂದರ್ಥ. ತಾವರೆಯ ಎಲೆಯು ನೀರಿನಲ್ಲಿರುವಂತೆ ಮನಸ್ಸಿನೊಳಗಡೇ ಇರುವುದೇ ಚಿತ್ತವು. ಬುದ್ಧಿ ಮತ್ತು ಅಹಂಕೃತಿ ಎಂಬಿವು ಕರ್ಮಾನುಸಾರ ಸ್ಥಿರವಾಗಿರುವುವು.

೨೩. ಬುದ್ಧಿಗೆ ಬ್ರಹ್ಮನು ದೇವಕೆಯು. ದಿಕ್ಕು, ಮನಸ್ಸು, ಚಿತ್ತ, ಅಹಂಕೃತಿಗೆ ಈಶ್ವರನು ಇರುವನು. ಈಶ್ವರನ ಮತವಾಗಿ ಪ್ರಜೆಗಳು ವರ್ತಿಸಿ, ನಾಶನಕ್ಕೆ ಒಳಗಾಗುವರು. ಈ ಸಂಸಾರ ಸಮುದ್ರವನ್ನು ಏನೆಂದು ರಚಿಸಲಿ?

೨೪. ಪಂಚ ಭೂತಗಳು ಐದು, ಪಂಚೇಂದ್ರಿಯಗಳೂ ಐದು. ಪಂಚಪ್ರಾಣಗಳೆಂದೂ ಐದು ಬೇರೆ ಬೇರೆ ಇವೆ. ಪಂಚವರ್ತಕಗಳು ಐದು. ಚಲನೆಗಳು ನಾಲ್ಕು - ಹೀಗೆ ಎಲ್ಲವೂ ಸೇರಿ ತತ್ತ್ವಗಳಾಗಿವೆ.

೨೫. ಈ ತತ್ತ್ವಗಳ ಕರ್ಮಗಳನ್ನು ಇನ್ನು ಕೇಳು. ಪಂಚಭೂತಗಳ ಮಾಯೆಯನ್ನು ಬೇರೆ ಬೇರೆಯಾಗಿ ಹೇಳುತ್ತೇನೆ. ಮಾತೇ! ಕೇಳು. ಐದು ಶಾಸ್ತ್ರಾರ್ಥವನ್ನು ಪ್ರತ್ಯೇಕವಾಗಿ ಹೇಳುತ್ತೇನೆ.

೨೬. ತ್ವಕ್, ಚರ್ಮ, ಮಾಂಸ, ಎಲುಬು, ನರ, ರೋಮ, ಕಾಠಿಣ್ಯತೆ ಇವೆಲ್ಲವೂ ಭೂಮಿಯ ಅಂಶವು : ಮೂತ್ರ, ಶುಕ್ಲ, ರಕ್ತ, ಶ್ಲೇಷ್ಮ, ಮಜ್ಜೆ, ಕಣ್ಣೀರು ಇವು ನೀರಿನ ಅಂಗವು. ಇವು ಪ್ರತಿ ಜೀವಿಯಲ್ಲೂ ಇರುತ್ತವೆ.

೨೭. ಆಲಸ್ಯ, ನಿದ್ರೆ, ತೃಷೆ, ಹಸಿವು, ಕ್ರೋಧ, ವಧು ಸಂಗ ಮೊದಲಾದ ಉಷ್ಣಮೂಲವಾದ ಪ್ರವೃತ್ತಿಗಳು. ಅಗ್ನಿಯಿಂದ ಇವು ಜನಿಸಿದುವು. ಆ ಪ್ರಕಾರವಾಗಿ ವ್ಯಕ್ತಿಯು ಎದುರಾಗುವುದು, ನೆಗೆಯುವುದು, ಸುತ್ತಲೂ ಓಡುವುದು ಮೊದಲಾದ ಕ್ರಿಯೆಗಳನ್ನು ಮಾಡುತ್ತಾನೆ. ಇದು ನಿತ್ಯವೂ ಪುನರಾವರ್ತನೆಯಾಗುವುದು.

೨೮. ಕಾಮ, ಕ್ರೋಧ, ಲೋಭ, ಮೋಹ, ಮರ್ಯಾದಿ ಮೊದಲಾದ ಲೋಗರ ತಾಮಸ ಪ್ರವೃತ್ತಿಗಳು ಆಕಾಶದ ಲಕ್ಷಣಗಳು. ಈ ಪ್ರವೃತ್ತಿಗಳು ಜೀವನವನ್ನು ಕಡಾಯಿಯಲ್ಲಿ ಹಾಕಿ ಹೋಮಿಸುತ್ತಿರುತ್ತವೆ.

೨೯. ಜಾಗ್ರತ್, ಸ್ವಪ್ನ, ಸುಪುಪ್ತಿ ಎಂಬ ಮೂರು ಅವಸ್ಥೆಗಳು ಇವುಗಳಿಗೆ ಆಶ್ರಯಗಳಾಗಿವೆ. ದೇಹ ಎಂಬ ಈ ಗೃಹದಲ್ಲಿ, ವಿಶ್ವ, ತೇಜಸ್, ಪ್ರಾಜ್ಞ ಎಂಬ ತನುತ್ರಯಗಳಿವೆ. ಬಾಲ್ಯ, ಯೌವ್ವನ, ವೃದ್ಯಾಪ್ಯ ಎಂಬ ಅವಸ್ಥೆಗಳಿವೆ. ಷಣ್ಮುಖ ಧಾತುವಿನಿಂದಾಗಿ ಷಟ್‌ಕರ್ಮ ಉಂಟಾಗುತ್ತವೆ.

೩೦. ನರ, ಅಸ್ಥಿ, ಮಜ್ಜೆ, ಎಂಬೀ ಮೂರು ಪುರುಷಾಂಗಗಳು, ತಾಯೇ! ರಜ, ಮಾಂಸ, ತ್ವಕ್, ಎಂಬ ಮೂರು ವಿಧಗಳೂ ಸೇರಿದಂತೆ, ಜೀವನವು ಆರು ವಿಧದಲ್ಲಿರುವುದು. ಇದನ್ನು ತಿಳಿಯಬಲ್ಲವರಾರು?

೩೧. ಕಾಯವನ್ನು ಆಶ್ರಯಿಸಿದ ಜೀವಕ್ಕೆ ಇರುವಿಕೆ, ಹುಟ್ಟು, ಬೆಳವಣಿಗೆ, ಪರಿಣಮಿಸುವಿಕೆ, ಕ್ಷೀಣಿಸುವಿಕೆ ಎಂಬ ಆರು ಜೀವಲಕ್ಷಣಗಳಿರುತ್ತವೆ ಆಗ ಜೀವಾತ್ಮನು ಕಾಯವೆಂಬ ಸೆರೆಮನೆಯೊಳಗೆ, ನಿತ್ಯವೂ ಸುತ್ತುತ್ತ ಬಹು ಬಾಯಾರಿಕೆಗೊಳಗಾಗುವನು.

೩೨. ತಾಯಿಯೇ! ಜೀವನ ಆಗಮನದ ಮುಂದಿನ ವಿವರಣೆಯನ್ನು ಕೇಳು. ಅನ್ನಮಯ, ಪ್ರಾಣಮಯ, ಮನೋಮಯ, ಆನಂದಮಯವೆಂಬ ಪೂರ್ಣಪುಣ್ಯರಾದವರು ಈ ಕರ್ಮವೃತ್ತಿಗಳಿಂದ ಅಗತ್ಯವಾದುದನ್ನು ನಿರ್ಣಯಿಸುವರು.

೩೩. ಹೀಗೆ ತತ್ತ್ವಸಮೂಹಗಳು ಸೇರಿ ದೇಹಲಕ್ಷಣವಾಗುತ್ತದೆ. ಪಂಚಭೂತಗಳಿಂದಾದ ದೇಹದ ಅನುಭವ ವಿಕಾರಗಳು ಆತ್ಮಕ್ಕೆ ಆಗುವುದಿಲ್ಲ. ಹೀಗೆ ಆತ್ಮನು ಸಚೇತನದ ವಿಲಾಸವನ್ನೊಳಗೊಂಡು, ವರ್ಧಿಸಿ, ಬ್ರಹ್ಮಲೋಕವನ್ನು ಸೃಷ್ಟಿಸುವನು.

೩೪. ನಿದ್ರೆಯಲ್ಲಿರುವ ಶರೀರವು ಜಡತ್ವವನ್ನಳಿದು ಎಚ್ಚರಗೊಳ್ಳುವ ಹಾಗೆ, ಈ ಪಂಚಭೂತಗಳು ಈ ದೇಹವನ್ನು ಭದ್ರವಾಗಿ ರಚಿಸಿದುವು. ಬ್ರಹ್ಮಘಟದ ಅಹಂಕೃತಿಯ ಕಾರಣವಾಗಿ, ಈಶ್ವರನೇ ಮೊದಲಾದ ದೇವತೆಗಳು ಜನಿಸಿದರು.

೩೫. ಶಿಖರದಲ್ಲಿರುವ ಮಾನವನೋರ್ವನು ತನ್ನ ತೋಳನ್ನು ನಿಶ್ಚಲಗೊಳಿಸಲೆಂದು, ತನ್ನ ಕಾಲನ್ನೇ ಚಾಚುವಂತೆ, ಮಾಯೆಯನ್ನು ಪರಮಾತ್ಮನು ಪುಡಿ ಮಾಡಿದನು. ಜಡವಾದ ದೇಹಾಭಿಮಾನವೆಂಬ ಕೀಲನ್ನು ಕದಲಿಸಲಾಗದೆ, ದುಃಖದಿಂದ ಜಾಡ್ಯರಾದವರು ದುಃಖಿಸುತ್ತಾರೆ - ಆ ಸಂಕಟವನ್ನು ಏನೆಂದು ವರ್ಣಿಸಲಿ!

೩೬. ನಿತ್ಯವೂ, ಪೂರ್ಣ ಸ್ವರೂಪಿಯೂ ಆದ ಪರವಸ್ತು ಸ್ವರೂಪಿಯಾದ ಆತ್ಮನಿಗೆ ಇವು ಸಂಗತವಾಗಲಾರವು. ಎಲ್ಲ ಕೃತ್ಯಗಳೂ ನನ್ನವು, ಅದರ ಕರ್ತೃವೂ ನಾನೇ ಎಂದು ಭಾವಿಸುವವನಿಗೆ ಶರೀರ ಸುಖಗಳ ಅನುಭವಗಳಾಗುತ್ತವೆ. ಆತನು ಈ ಭವಮಾಲೆಯಲ್ಲಿ ಸಿಲುಕಿ ಸುತ್ತುತ್ತಿರುತ್ತಾನೆ.

೩೭. ಮನದ ಇಚ್ಛೆಯ ಕಾರಣವಾಗಿ ಅನೇಕ ದಂಡನೆಗೊಳಗಾಗಬೇಕಾಗುತ್ತದೆ. ಆತನು ಜನನ - ಮರಣಗಳನ್ನು ಅನುಭವಿಸಿ, ಅಭಿಮಾನ ಪ್ರವೃತ್ತಿಗಳ ಕರ್ತೃತ್ವವನ್ನು ಬಿಡದಿರುವನು. ನಿರಾಮಯನಾದವನಿಗೆ ಈ ವಿಕಲ್ಪವಿರುವುದೇ? ಸ್ವಪ್ನದ ಅಭಿಲಾಷೆಯನ್ನು ನೆನೆದು ಇಚ್ಛಿಸಿದರೆ, ಮನಸ್ಸಿಗೆ ಸುಖವಿರುವುದೇ? ಮಾಯಾಭ್ರಮೆಯೇ ಸರಿ!

೩೮. ಗಗನದಲ್ಲಿರುವ ಚಂದ್ರನನ್ನು ಮೋಡಮಾಲೆಯು ಮುಸುಕಿದರೆ ಆತನು ಲಯನಾಗುವನೇ? ನೀರಲ್ಲಿ ಸಂಚಲಿಸುವ ಗಗನ ಪ್ರಭೆಯು ಸ್ಥಿರವಾಗುವುದೇ? ಸಗುಣ ಪ್ರಕೃತಿಯ ಕರ್ಮಗತಿಗೆ ಆತ್ಮನು ಒಳಪಡುವನೇ? ನಿಗಮಗಳು ಕಾಣದ ಪರಿಪೂರ್ಣನೂ, ನಿತ್ಯ ನಿಧಿಯೂ ಈ ಆತ್ಮನಾಗಿರುವನು.

೩೯. ಈ ಲೋಕವೆಲ್ಲವೂ ಮಹಮಾಯೆಯ ಅಷ್ಟ ಪ್ರಕೃತಿಗೆ ಅನುಗುಣವಾಗಿರುವುದು. ಪರಮಾತ್ಮನ ಕಲ್ಪನೆಗೆ ಅನುಗುಣವಾಗಿ ಕರ್ಮಗಳು ಹುಟ್ಟುವುದು. ಸೃಷ್ಟಿ- ಸ್ಥಿತಿ - ಲಯಗಳೆಂಬವು ನಾರಾಯಣನಾಜ್ಞೆಯಿಂದ ನಡೆಯುತ್ತಿರುವುದು. ಇಲ್ಲಿಗೆ ಹದಿನೆಂಟನೆಯ ಅಧ್ಯಾಯವು ಪೂರ್ಣಗೊಂಡಿತು.

ಅಧ್ಯಾಯ ೧೯

೧. ಸೋಮವಂಶ ಶಿಖಾಮಣಿಯಾದ ವಿದುರನೇ! ಈ ಕಥೆಯನ್ನು ಕೇಳು. ರಾಮಣೀಯಕನಾದ ಪರೀಕ್ಷಿತ ರಾಜನಿಗೆ ಮೈತ್ರೇಯನು ಇದನ್ನು ಹೇಳಿದನು. ಆ ಮಹಾಕವಿ ರಸವನ್ನು ಕಪಿಲನು ತನ್ನ ತಾಯಿಗೆ ವಿಸ್ತೃತವಾಗಿ ಹೇಳಿದನು. ಅದನ್ನು ನಾನು ಮುಂದೆ ಹೇಳುತ್ತೇನೆ.

೨. ತಾಯೇ! ಸೂಕ್ಷ್ಮವಾಗಿ ವಿಚಾರಿಸಿರಿ. ಈ ಲೋಕದ ಭೂತಾತ್ಮಕನೆನಿಸಿದ ಮಾಯಾ ತತ್ತ್ವವನ್ನು ಏನೆಂದು ಹೇಳಲಿ! ಎಷ್ಟೆಷ್ಟೋ ಭವಗಳಲ್ಲಿಯೂ ನಿಗ್ರಹಿಸದೆ ಭ್ರಮೆಯು ಹೋಗಲಾರದು. ಈ ಜಗತ್ತಿನ ವಿಲಾಸವೆಲ್ಲವೂ ಈಶ್ವರನ ಭಯಕ್ಕೆ ಒಳಗಾಗುವುದು.

೩. ಅವಿಚಾರವೆಂಬ ಮಹಾಭ್ರಮೆಯಲ್ಲಿ ಕತೃತ್ವ ಕಾರಣವಾಗಿ, ಹೊಸ ಸಾಣೆಯಲ್ಲಿ ತೇದು ಪರಮಾತ್ಮ ತತ್ವವನ್ನು ಮರೆಯುತ್ತಾರೆ. ಅಲ್ಲಲ್ಲಿಯೇ ಸುಖ - ದುಃಖಗಳ ಸಮುದ್ರದಲ್ಲಿ ಮುಳುಗಿ, ಅವಸಾನವೇ ಇಲ್ಲದ ಮಾಯಾಂಬುಧಿಯೊಳಗೆ ಸೇರುತ್ತಾರೆ.

೪. ಸ್ಥೂಲ- ಸೂಕ್ಷ್ಮ ಎನ್ನುವ ತನುದ್ವಯಗಳ ಮಧ್ಯೆ ಹೀಗೆ ಅಲೆದಲೆದು ಎಷ್ಟೋ ಯುಗವೆಂದೇ ತಿಳಿಯದಷ್ಟು ಕಾಲ ತೇಲುತ್ತಾ, ಮುಳುಗುತ್ತಾ ಕಾಲಕಳೆಯುವರು. ಮಾಲೆಯಾಕೃತಿಯಾಗಿ ಕೀಲೇ ಇಲ್ಲದ ಕಲ್ಪಶತಗಳೇ ಉರುಳುತ್ತವೆ. ಮಾಯೆಯು ಕಲ್ಪಿಸಿದ ಮೇಲೆ ಅದು ಲಯವಾಗದ ವಿನಾ ಲೀಲೆಯು ತೀರಲಾರದು.

೫. ಪಂಚಭೂತಗಳು ಮತ್ತು ದಶೇಂದ್ರಿಯಗಳ ಸ್ನೇಹ ಬಂಧನ ನಿಮಿತ್ತದಿಂದ, ಚಂಚಲ ಬುದ್ಧಿಯುಳ್ಳವರಾಗಿ, ಜನ್ಮ-ಜನ್ಮಾಂತರಗಳಲ್ಲಿ ಮಾನವರು ಸಂಚರಿಸುತ್ತಿರುವರು. ಪ್ರಖರವಾದ ವಿಷಯದ ಕಾರಣವಾಗಿ ಕರ್ತೃ - ಕರ್ಮವನ್ನು ಸಲ್ಲಿಸಿ, ಸಹಸ್ರ ವತ್ಸರಗಳವರೆಗೆ (ಕೌತುಕವೆನಿಸುವಂತೆ) ದಂಡನೆಗೊಳಗಾಗುವರು.

೬. ಶರೀರದಲ್ಲಿ ಕರ್ಮವನ್ನು ಮಾಡಿದ ಕಾರಣದಿಂದ, ಕರ್ಮದ ಫಲವು ತಪ್ಪದು. ಜನ್ಮಕ್ಕೆ ಬಂದು (ಪುಣ್ಯವನ್ನು) ಸಂಗ್ರಹಿಸದೆ, ಕರ್ಮಕಿಂಕರರಾಗುತ್ತಾರೆ. ಆತ್ಮನು ಕರ್ಮವಿರಹಿತನೆನ್ನುವ ತತ್ತ್ವವನ್ನು ಯಾವತ್ತೂ ತಿಳಿಯದೇ, ಜನ್ಮ, ಮೃತ್ಯು, ಜರಾ ಮೊದಲಾದ ಘಟ್ಕರ್ಮಗಳಲ್ಲಿ ಮುಳುಗಿ ಮಾನವನು ದುಃಖಿಸುವನು.

೭. ದುಷ್ಕರ್ಮವನ್ನಾಚರಿಸಿದ ಮೂಢ ಜನರು ಸಂಸಾರ ಸಮುದ್ರದಲ್ಲಿ ಬೀಳುತ್ತಾರೆ. ಆ ಮದಾಂಧರು ಹೆದರದೇ, ದಡಕ್ಕೆ ತಲುಪದೆ ಹಾಗೆಯೇ ಈಜಾಡುತ್ತಲೇ ಇರುತ್ತಾರೆ. ಯಮನ ದೂತರ ದಂಡನೆಗೆ ನಿತ್ಯವೂ ತಮ್ಮ ತನುವನ್ನು ಒಪ್ಪಿಸಿ, ಲೆಕ್ಕವಿಲ್ಲದಷ್ಟು ಯೋನಿಮುಖದಲ್ಲಿ ತೊಳಲಾಡುವರು.

೮. ಆಗ ದೇವಹೂತಿಯು ಹೆದರಿದಳು. ಯತಿವರೇಣ್ಯನೇ! ಮನುಜರು ದುಃಖಾರ್ಣವವನ್ನು ದಾಟಿ ಹೋಗುವ ಕೌಶಲವೆಂತು ಎಂದು ಕೇಳಿದಳು. ತನುವೆಂಬ ಮಾಯೆಯಲ್ಲಿ ಹುಟ್ಟಿ ಸಂಸರ್ಗವನ್ನು ಖಂಡಿಸುವ ಮಹಾಮಾರ್ಗವನ್ನು ಬೇಸರಿಸದೆ ನನಗೆ ಹೇಳು ಎಂದಳು.

೯. ತಾಯೇ! ದೋಷ ಮಹಾರ್ಣವವನ್ನು ದಾಟಿ ಹೋಗುವ ಪರಮ ಪಥದತ್ತ ಹೋಗುವ ನವನಾವೆಯನ್ನು ಹೇಳುತ್ತೇನೆ. ತಾಯಿ, ತಂದೆ, ಮಗ, ಗುರು - ಶಿಷ್ಯರೇ ಮೊದಲಾದ ಎಲ್ಲರೂ ಈ ದಾರಿಯನ್ನು ತಿಳಿಯಲಾರದೆ, ಅವಜ್ಞೆಯಿಂದ ಮೂಢರಾಗುತ್ತಾರೆ.

೧೦. ಈ ಸಾರವನ್ನು ತಿಳಿಯದ ಜಯಗಳು ಸಂಸಾರಿಗಳಾಗಿ ಆತ್ಮಸ್ಥಿತಿಯ ನೆಲೆಯನ್ನು ಕಾಣದೆ ವಿಪರೀತವಾಗಿ ತೊಳಲಾಡುತ್ತಾರೆ. ಮೂಳೆಯನ್ನೂ ಹಾವೆಂದು ಭ್ರಮೆಯಿಂದ ನಂಬುವ ಹಾಗೆ, ಇದರ ಮೂಲವೆಲ್ಲಿದೆ ಎಂದು ತಿಳಿಯದೆ ತೊಳಲಾಡುತ್ತಾರೆ.

೧೧. ತನ್ನಲ್ಲಿಯೇ ತಾನು ಅಲೋಚಿಸಬೇಕು. ಈ ಶರೀರವು ಎಲ್ಲಿಂದ ಬಂತು? ಇದರ ಸಾಧಕರಾದ ದುರ್ನೀತರಾರು? ಹಿಂದಣ ಜನ್ಮವೇನು? ತಾಯೇ! ಇದನ್ನೂ ತಿಳಿಯದೆ, ಕರಣೇಂದ್ರಿಯ ಧರ್ಮಕವಕ ಒಳಗಾದರೇನು ಬಂತು? ಜ್ಞಾನಾಕ್ಷಿಯಿಂದ ತಿಳಿಯುವುದಾದರೆ ಇದೆಲ್ಲವೂ ಅನ್ಯಾಯವೇ.

೧೨. ಇಂದ್ರಿಯ ಭೋಗದಿಂದುಂಟಾದ ಮಲದ ಕಾರಣದಿಂದ ಗರ್ವಿಷ್ಠನಾಗಿ ವ್ಯಕ್ತಿಯು ನಾನೇ ವೀರ್ಯವಂತನೂ ಪ್ರಭುವೂ ಎಂದು ಅಲೋಚಿಸುತ್ತಾನೆ. ಪರಾತ್ಪರುಷನ ಸಾರವನ್ನು, ತಿಳಿಯದಿದ್ದರೆ ಇಲ್ಲಿ ಸಂಗತವಾದರೂ ಏನಿದೆ? ಶರೀರ ಧರ್ಮವೆಂಬುದು ಸೂರ್ಯ ಪ್ರಭೆಯನ್ನು ನೀರಲ್ಲಿ ನೋಡಿದ ಹಾಗೆಯೇ ಹೊರತು ಪರಿಪೂರ್ಣವಾದುದಲ್ಲ.

೧೩. ಭೂತ, ಇಂದ್ರಿಯ, ದೇಹವಿಕಾರ ಪಂಚಾತ್ಮಕನಾದ ಪ್ರಾಣ - ಇವೆಲ್ಲವೂ ಭೂತಾತ್ಮವೆನಿಸಿದ ದಶೇಂದ್ರಿಯಕ್ಕನುಗುಣವಾಗಿ ನರ್ತಿಸುವುದಲ್ಲವೇ? ಈ ಐವತ್ತು ಭೂತಗಳೂ ಮಿಥ್ಯವಲ್ಲವೇ? ಪರಿಪೂರ್ಣನಾದ ಪರಾತ್ಪರ ಧಾತುವಿನಿಂದ ಇದು ವರ್ತಿಸುವುದಲ್ಲದೆ, ಅದಕ್ಕೆ ಸ್ವಾತಂತ್ರ್ಯವಿಲ್ಲ.

೧೪. ಪಂಚಪ್ರಾಣಗಳ ತನುವೇ ಅಂತಿಮವಾದುದು ಎಂಬುದು ಕೇವಲವಾದ ಮಾತೇ ಸರಿ. ಪ್ರಾಣಕ್ಕೊಳಗಾಗಿ, ಪ್ರಾಣಾತ್ಮಕ ಬುದ್ಧಿ, ಮನಸ್ಸು ಇವುಗಳಿಗೆ ನಿತ್ಯವೂ ಅಂಟಿಕೊಂಡಿದ್ದರೆ ಆತ್ಮಸ್ಥಿತಿಯ ಆಧಾರವಿಲ್ಲದೆ, ಈಶ್ವರನು ಸಾಧ್ಯವಾಗಲಾರನು.

೧೫. ಕಣ್ಣುಗಳಿಗೆ ಕಾಣುತ್ತಿರುವುದು ಮಿಥ್ಯೆಯೇ ಸರಿ. ಹೃದಯಕ್ಕೆ ಆತ್ಮಸ್ಥಿತಿಯ ಕಾರಣವಾಗಿ ಕಾಣುವುದೇ ನಿಜವಾದುದು. ಅಹಂಕೃತಿಯ ಕಾರಣವಾಗಿ ಬುದ್ಧಿಗೆ ಪರಿಪೂರ್ಣ ಸಂಪೂರ್ಣ ವಸ್ತುವು ಕಾಣಲಾರದು. ನಿತ್ಯವೂ ಕಾಣುವ ಪರಮಾತ್ಮನ ಸ್ವರೂಪವೇ ನಿತ್ಯಸುಖವು.

೧೬. ಆರು ಭಾವಗಳಿಗೆ ಅಭಾವವೇ ಆಸ್ಪದವಾಗಿರುತ್ತದೆ. ಭಾವಗಳ ಮೂಲಕ ಆತ್ಮನು ಜಡದೇಹದಲ್ಲಿ ವ್ಯವಹರಿಸುತ್ತಿರುತ್ತಾನೆ. ಆ ಆತ್ಮನಿಗೆ ಸಪ್ತ ಭಾದಕಗಳೂ ಪರಿಣಾಮಕಾರಿಯಾಗಲಾರವು. ಮೂರ್ತಿ ಪೂಜಕನು ಮೂಢನೂ ಚಿದ್ರೂಪಾತೀತನೂ ಆಗಿರುವನು.

೧೭. ಸುಖರೂಪಿಯಾದ ಆತ್ಮನು ಅಷ್ಟ ವಿಧಾನಗಳನ್ನೊಳಗೊಂಡ ಮತ ಕವಚಗಳನ್ನು ಹೊಂದಿಕೊಂಡಿರುವನು. ದೃಢವಾಗಿ ವಿಕೃತವಾದ ಕರ್ಮಗಳ ವಿಶ್ವಾಸವನ್ನು ತಳೆದು ಜನರು ಆಶ್ಚರ್ಯಕರವಾಗಿ ಅವುಗಳನ್ನು ಪ್ರದರ್ಶಿಸುತ್ತಾರೆ. ಆತ್ಮ ಸ್ವರೂಪಿಯು ಈ ಎಲ್ಲ ಕ್ರಿಯೆಗಳಿಗೂ ಅತೀತನೂ, ಅವಿನಾಶಿಯೂ, ಅಗಮ್ಯನೂ, ಅಖಿಲಾತ್ಮನೂ, ಏಕನೂ ಚರಾಚವನೂ ಆಗಿ ಇದೆಲ್ಲಕ್ಕೂ ಅಧ್ಯಕ್ಷ ಸ್ವರೂಪಿಯಾಗಿರುವನು.

೧೮. ತಾನೇ ತನಗೆ ಆಶ್ರಯನು. ತಾನೇ ಸುಖನು. ತಾನೇ ತನಗೆ ಸ್ಥಿರನು. ತಾನೇ ತನ್ನ ಜೀವವಿಕಾರಗಳನ್ನು ತೋರ್ಪಡಿಸುವವನು, ತಾನೇ ತನ್ನ ಆತ್ಮಸ್ವರೂಪಿಯು. ಸಮಸ್ತರೂ ತಾನೇ ತಾನಾಗುವ ಈ ತನು ಧರ್ಮ ನಿವೃತ್ತಿಯನ್ನು ಮಾಡಿ, ಇದನ್ನು ಹೊಂದದಿದ್ದರೆ, ಸರ್ವರಿಗೂ ಆಧಾರವು ಶೂನ್ಯವಾಗಿರುವುದು.

೧೯. ಅಂತಹ ದೇಹಕ್ಕೆ ಅಹಂಕೃತಿಯೆಲ್ಲಿಯದು? ಕರಣೇಂದ್ರಿಯ ಹೀನನಾದವನಿಗೆ ಉದ್ವೇಗವೆಲ್ಲಿಯದು? ಆತನಿಗೆ ಮನಸ್ಸಲ್ಲಿ ವಿಕಾರವಾದರೂ ಎಲ್ಲಿಯದು? ಶುದ್ಧಾತ್ಮನಿಗೆ ವಿವಾದವೆಲ್ಲಿಯದು? ಸುಖಿಗೆ ವಿನಾಶವೆತ್ತಣದು? ಅಪಾರವಾದ ವಿನಾಶವೆಲ್ಲವನ್ನು ಸುಖರೂಪದಾದ ವಿರಕ್ತರು ದಾಟುತ್ತಾರೆ.

೨೦. ಹಾಗೆ ನೋಡಿದರೆ ಸೂರ್ಯನಿಗೆ ಕತ್ತಲೆ ಎಂಬುದುಂಟೇ? ಈ ಭುವನದಲ್ಲಿ ರವಿ ದೃಷ್ಟಿಗೆ ಅಜ್ಞೆಯುಂಬುದುಂಟೇ? ಶಿವನಿಗೆ ಅಶುದ್ಧತೆ ಎಲ್ಲಿಯದು? ಚಂದ್ರಮನಿಗೆ ಉಷ್ಣತೆಯುಂಟೇ? ಅಗ್ನಿಗೆ ಚಳಿಯಾಗುವುದೇ? ಹಾಗೆ ಆತ್ಮನಿಗೆ ಅಜ್ಞಾನವಿರಬಹುದೇ?

೨೧. ತ್ರಿಗುಣಾತ್ಮಕನಾದ ಜೀವನು ಸದಾ ತ್ರಯಾವಸ್ಥೆಯಲ್ಲಿ ಮುಳುಗಿ ಅರಿವಿಗೇ ಬಾರದ ಜನ್ಮ, ಜರೆ, ಮರಣಗಳೆಂಬ ಆಯಾಸ ಮುಖದಲ್ಲಿ ಅನಂತಯುಗಗಳ ವರೆಗೆ ಮುಳುಗಿ ವ್ಯವಹರಿಸುವನು. ಹೀಗೆ ಆತನು ಜಗಧೀಶನಾದ ಪರಮಾತ್ಮನ ಕಟಾಕ್ಷ ವಿವೇಕ ದೃಷ್ಟಿ ಬರುವವರೆಗೂ ಇರುವನು.

೨೨. ನಿತ್ಯ ಕೃತ್ಯಗಳಾವುವು ಆತನನ್ನು ಎಂದಿಗೂ ಹಿಡಿಯಲಾರವು. ಮತ್ತಮಾನಸನಾಗಿ, ಅಹಂಕೃತಿಯನ್ನು ಮೀರಿದವನು. ನಿತ್ಯನೂ, ನಿರ್ಗುಣವೂ, ನಿರ್ವಿಕಾರನೂ, ನಿರಾಮಯನೂ, ಸತ್ಯಸರ್ವ ಸಮಾಶ್ರಿತನೂ ಆದ ಪರವಸ್ತುವು ಈ ಆತ್ಮನು.

೨೩. ಈ ನಿರ್ವಾಣಕ್ಕೆ ಶ್ರುತಿಯು ತತ್ತ್ವಮಸೀ ಎಂದು ಹೇಳಿರುವುದು. ಋಷಿಗಳು ನಿಗಮಗಳನ್ನು ಓದಿ ಹೊಸತಾಗುವರು. ಆತನು ಹದಿನಾಲ್ಕು ಜಗತ್ತಿಗೆ ಆಶ್ರಯನೂ ಪರಿಪೂರ್ಣ ಸುಖಾಬ್ಧಿಯೂ ಆಗಿರುವನು. ಮದವನ್ನು ಬಿಟ್ಟು ಇದನ್ನು ತಿಳಿದ ಸರ್ವರಿಗೂ ಮುಕ್ತಿಯು ಲಭಿಸುವುದು.

೨೪. ಇದು ಜ್ಞಾನಾತ್ಮಕವಾದುದು. ತತ್ತ್ವಜ್ಞರಲ್ಲಿಯೇ ಇದು ಇರುವುದು. ತತ್ತ್ವಜ್ಞರ ಕಾರುಣ್ಯ ಬಲದಿಂದ ಈ ಜ್ಞಾನವನ್ನು ಪಡೆಯಬೇಕು. ಜ್ಞಾನವಂತರಾದವರು ಸಜ್ಜನರೂ, ನಿಷ್ಕಾಮಿಗಳೂ, ಮಾನ -ಮದ - ಮತ್ಸರ ವರ್ಜಿತರೂ, ಪರಿಪೂರ್ಣ ಸ್ವರೂಪರೂ ಆಗಿರುವರು.

೨೫. ಅವರ ಮತಿಯೇ ನನ್ನ ಮತಿಯು. ಅವರೇ ನನ್ನ ಬಂಧುಗಳು. ಅವರೇ ಬಾಂಧವರೂ. ಅವರ ಸ್ಥಿತಿಯೋ ನನ್ನ ಸುಸ್ಥಿಯು. ಅವರ ನುಡಿಯೇ ಶ್ರುತಿ. ಅವರೇ ನನಗೆ ಹಿತರೂ, ಸನ್ಮತರೂ, ಭಕ್ತರೂ ಆಗಿರುವರು. ಅವರನ್ನು ಭಜಿಸುವವರೇ ನನಗೆ ಪ್ರೀತಿಪಾತ್ರರಾದ ಭಕ್ತರು.

೨೬. ತಮಗೆ ಜ್ಞಾನವೂ ಇಲ್ಲ. ಮಹಾತ್ಮರ ಸಂಸರ್ಗವೂ ಇಲ್ಲ. ಇಂತಹ ಜನರು ಸತ್ತುಗಳನ್ನು ಪರಿಹಾಸ್ಯಗೈಯ್ಯುವರು. ಸೂರ್ಯ ಕಿರಣಗಳನ್ನು ನೋಡದ ದೃಷ್ಟಿಗಳನ್ನು ಬೇರೇನನ್ನು ತಾನೇ ನೋಡುವುವು? ಇಂತವರು ಯಮ ಮಂದಿರದಲ್ಲಿ ಯುಗ ಯುಗಗಳವರೆಗೆ ಘನಕಾರವ ನರಕದಲ್ಲಿ ಮುಳುಗಿರುತ್ತಾರೆ.

೨೭. ಈ ವರೆಗೆ ಹೇಳಿದ ಇದು ಸಂಖ್ಯೆಗಳು ಜ್ಞಾನವು. ನಾನು ಹೇಳಿರುವ ಈ ಜ್ಞಾನವು ವೇದ ಪುರಾಣ ಮತನೂ ಹೌದು. ತಾಯೇ! ನಾನು ಹೇಳುವ ತತ್ತ್ವ ವಿಭಕ್ತಿ ಪಥವನ್ನು ತಿಳಿಯಿರಿ. ನಿಮಗೆ ಶ್ರೀ ಪುಣ್ಯ ನಿಧಾನ ಸುಖಾಬ್ಧಿಯ ದೃಡವಾಗಿಯೂ ಲಭಿಸಲಿರುವುದು ಎಂದನು.

೨೮. ಹೀಗೆ ರಚಿಸಿದ ಇದು ಹತ್ತೊಂಬತ್ತನೆಯ ಆಧ್ಯಾಯವು. ಇದು ಭಾಗವತಾರ್ಥದ ಕರ್ಮಬಂಧ ನಿವೃತ್ತಿಯ ಅಧ್ಯಾಯವು. ಸನ್ಮತಿಯಿಂದ ಇದನ್ನು ಓದಿದವರಿಗೆ ವಿಷ್ಣುಮಂದಿರವು ಸಿದ್ಧಿಸುವುದು. ತಾಯೇ! ಬ್ರಹ್ಮಜ್ಞಾನವು ಪ್ರಸನ್ನಗೊಳ್ಳುವುದು ಎಂದನು.

ಅಧ್ಯಾಯ ೨೦

೧. ಶಿವನ ಪುತ್ರನೂ, ಮದಿಸಿದ ಆನೆಯ ಮುಖವುಳ್ಳವನೂ ಆದ ಗಣಪತಿಯೇ ನೀನು ನನಗೆ ವರವನ್ನೂ ಕೊಡಬೇಕು. ಮುಕ್ತಿಗೆ ಅಶ್ರಯವಾದ ಭಕ್ತಿಯೋಗವನ್ನೂ, ಮುಕ್ತಿ -ಧ್ಯಾನವನ್ನು (ಸಜ್ಜನರು ಇನ್ನೂ) ಕೇಳಿರಿ!

೨. ತನ್ನ ಮಗನ ವಿನಯ ವಚನವನ್ನು ಕೇಳಿ, ತಾಯಿಯು ಆತನು ಕೈಯ್ಯುಂಜಲಿಯನ್ನು ಹಿಡಿದು ಮನ್ನಿಸಿದಳು. ದಾಮೋದರನ ಭಕ್ತಿ ಮಾರ್ಗವನ್ನು ತಿಳಿಯುವಂತೆ ನಮಗೆ ಕರುಣಿಸಬೇಕು ಎಂದಳು.

೩. ತಾಯೇ! ಭಕ್ತಿಯಿಂದ ಇರಬೇಕು ಎಂಬ ಮನುಷ್ಯನು ತನ್ನಲ್ಲಿರುವ ವಿಷಯವೆಲ್ಲವನ್ನೂ ವರ್ಜಿಸಬೇಕು. ಮಗ, ಹೆಂಡತಿ ಮೊದಲಾದ ಅಲ್ಪಾಶೆಗಳನ್ನು ಬಿಟ್ಟು, ನನ್ನ ಪಾದವನ್ನು ನೆಲೆಗೊಳಿಸಿಕೊಳ್ಳಬೇಕು ಇದುವೇ ವಿಜ್ಞಾನ ಸಮ್ಮತವು.

೪. ಕಲಹ - ಕಂಟಕ ಮೊದಲಾದ ಮಲಿನ ಬುದ್ಧಿಯನ್ನು ಬಿಡಬೇಕು. ಸಮಸ್ತ ಕ್ರಿಯಗಳನ್ನೂ ಫಲಾಭಿಲಾಶೆಯಿಲ್ಲದೆ ಮಾಡಬೇಕು. ಹಟವಾದಿತನದ ಅಭಿಮಾನ ಜಲಧಿಯಲ್ಲಿ ಆತನನ್ನು, ಮನಃಪೂರ್ವಕವಾಗಿ ಸ್ಮರಿಸಿದರೆ ಭಕ್ತಿಯು ಲಭಿಸುವುದು.

೫. ನನ್ನ ನಾಮವನ್ನು ಕೇಳಿ, ನನ್ನ ಕೀರ್ತಿಯನ್ನು ಹೊಗಳಿ, ಭಕ್ತಿಯಿಂದ ನನ್ನನ್ನು ಧ್ಯಾನಿಸಬೇಕು. ನಿತ್ಯವೂ ನನ್ನ ಭಕ್ತರ ಕೂಡ ನನ್ನ ಚಿಂತನೆಯನ್ನು ಮಾಡುತ್ತ ಮನಸಾರೆ ಸ್ಮರಿಸಿದರೆ ಅದುವೇ ಭಕ್ತಿಯೆನಿಸುವುದು.

೬. ನನ್ನಲ್ಲಿ ದೃಢವಾದ ಭಕ್ತಿಯಿರಿಸಿ, ನನ್ನ ಪಾದಾರ್ಚನೆಯನ್ನು ಮಾಡಿ, ನನ್ನನ್ನು ಆರಾಧಿಸಿ ಎಲ್ಲೆಲ್ಲಿಯೂ ನನ್ನವೇ ನೋಡುವುದು ನಾನೇ ತಂದೆ, ನಾನೇ ಮಗ, ನಾನೇ ಬಂಧು, ನಾನೇ ಪ್ರಿಯನು ಎಂದು ಎಲ್ಲೆಲ್ಲಿಯೂ ನನ್ನ ಸಾಮರ್ಥ್ಯವನ್ನೇ ಎಣಿಸುವುದು.

೭. ನನ್ನ ಭಕ್ತರ ಕೂಡ ನನ್ನ ನಾಮ ಸ್ತುತಿಯನ್ನು ಮಾಡಬೇಕು. ಮಾಡಿದ ಎಲ್ಲ ಕ್ರಿಯೆಗಳನ್ನೂ ನನಗೇ ಅರ್ಪಣೆ ಮಾಡಬೇಕು. ನನ್ನ ಮೂರ್ತಿಯನ್ನೂ ದೃಢಗೊಳಿಸಿ ನನ್ನ ಪರಾಕ್ರಮವನ್ನು ಕೇಳಿ, ಮನ ಭಕ್ತಿ ಪುಲಕದಿಂದ ನೆನೆಯಬೇಕು.

೮. ಈ ಕ್ರಮವನ್ನು ಚೆನ್ನಾಗಿ ತಿಳಿದ ಯಾವ ಮನುಷ್ಯನೇ ಆಗಲಿ ಆತನು ಸಾರವಂತನಾಗುವನು. ಆತನಿಗೆ ಜನನ, ಪರಲೋಕವೆಂಬುದು ಇರುವುದಿಲ್ಲ. ಈ ಪದಾರ್ಥವನ್ನು ತಿಳಿದ ಯಾರೇ ಇರಲಿ, ಅವರಿಗೆ ಸಾರೂಪ್ಯ ಪದವನ್ನು ಕರುಣಿಸುತ್ತೇನೆ ಎಂಬುದು ನನ್ನ ಪ್ರತಿಜ್ಞೆಯೇ ಆಗಿದೆ.

೯. ಕೆಂಪಾದ ಅರಳಿದ ತಾವರೆಯ ಹಾಗೆ ಕಣ್ಣುಳ್ಳವನೂ, ನಸುಹಾಸವೆತ್ತ ಮುಖದವನೂ, ಕುರುಳಾಳಿ, ದಂತಪ್ರಭೆ, ಬಿಂಬಾಧರ, ಚೆಲುವಾದ ನಾಸಿಕ, ಕಿವಿಯ ಕುಂಡಲ, ಗಂಡಸ್ಥಲ, ಹುಬ್ಬು ಮೊದಲಾಗಿ ಆ ಪರಮಗುರುವಾದ ಶ್ರೀಹರಿಯ ಮೂರ್ತಿಯನ್ನು ನನ್ನ ಭಕ್ತ ಜನಕ್ಕೆ ನಾನು ತೋರಿಸುವೆನು.

೧೦. ಮೃದು - ಮಧುರ ವಾಕ್ಸುಧೆಯೂ, ಕಾರುಣ್ಯ ಕಟಾಕ್ಷ ಭರಿತವಾದ ನೋಟವೂ, ಸಚ್ಚೇತನರೆನಿಸುವ ಭಕ್ತರ ಭಾಗ್ಯ ನಿಧಿಯೂ, ಪರಿಪೂರ್ಣ ಸುಖಾಬ್ಧಿಯೂ, ನಾನಾಗಿರುವೆನು. ಭವಸಾಗರದ ನೆಲೆಯರಿಯದ ಮಹಾತ್ಮರ ತನುಪಾಪವನ್ನು ಪರಿಹರಿಸಿ, ನನ್ನ ಭಕ್ತ ಜನರನ್ನು ಸಂರಕ್ಷಿಸುವೆನು.

೧೧. ವಿನಯದಿಂದ ಆನಂದಗೊಂಡು ಯಾರಾದರೂ ನನ್ನ ಬಗ್ಗೆ ಮಾತಾಡಿದರೆ ಮೈ ಮರೆತು, ಪರಿಣಮಿಸಿ ತಮ್ಮ ಕಣ್ಣಾರೆ ಈಕ್ಷಿಸಿದರೆಂದರೆ. ಅಂತಹ ಜನಗಳು ತೀರ್ಥ ಸ್ವರೂಪಿಗಳಾಗುವರು. ಅವರು ಈ ಭವವೆಂಬ ಘನ ದುಃಖ ಸಾಗರವನ್ನು ಉತ್ತರಿಸುವ ಸುಖಭಾಜನರು.

೧೨. ಅಂತಹ ಮನುಷ್ಯರಿಗೆ ಹದಿನಾಲ್ಕು ಲೋಕದಲ್ಲಿಯೂ ಯಾವ ಭಯಗಳೂ ಇರುವುದಿಲ್ಲ. ಅಂತವರು ಭವಸಾಗರದ ಸೀಮೆಯನ್ನು ದಾಟುವರು. ಅವರಿಗೆ ಅಂತಕನ ಕೈದುಗಳ ಭಯಗಳಿಲ್ಲ. ಆ ಮಾನವರಿಗೆ ಆಶ್ರಯ ದಾತರಾಗವರು ನನಗಿಂತಲೂ ಶ್ರೇಷ್ಠರಾದವರು. ಅಂತಹವರಿಗೆ, ಅಂತಹ ಅತಿ ಸಾಧು ಜನಗಳಿಗೆ ನಾನೇ ಮಾತೃವೂ, ಪಿತೃವೂ ಆಗಿರುವೆನು.

೧೩. ನನಗಾಗಿ ಪಿತೃ - ಮಾತೃ, ಕಳತ್ರ -ಸುತ, ಇಷ್ಟ ಸಂಬಂಧಗಳನ್ನು ಕಳೆದುಕೊಂಡು; ನನಗಾಗಿ ಗೃಹಸಂಬಂಧ, ಸಮಸ್ತ ಧನ, ಕುಟುಂಬವನ್ನು ಕಳೆದುಕೊಂಡು; ನನಗಾಗಿ ಇಹ - ಪರ ಪದಗಳನ್ನೂ ಕಳೆದುಕೊಂಡು ಎಲ್ಲವೂ ನಾನೇ ಎಂದು ನಂಬಿರುವ ದೃಢ ಭಕ್ತರನ್ನು ಮರೆಯುವುದು ಹೇಗೆ?

೧೪. ಈ ಜನರು ಮುಕ್ತಿಯನ್ನು ಇಚ್ಛಿಸುವುದೇ ಆದರೆ, ನನ್ನ ಭಕ್ತಿಯನ್ನೇ ದೃಢಗೊಳಿಸಬೇಕು. ಶಕ್ತಿಭಾವವನ್ನು ನಿವೃತ್ತಿಗೊಳಿಸಿ, ವ್ಯಕ್ತ ವಸ್ತುವನ್ನು ವಿಕಲ್ಪಿಸುವ ಭಕ್ತ ಸಂತತಿಗೆ ನಾನು ಮುಕ್ತಿಯನ್ನು ನೀಡುವೆನು.

೧೫. ಅವರ ಸುಖವೇ ನನ್ನ ಸುಖ; ಅವರ ದುಃಖವೇ ನನ್ನ ದುಃಖವು ಅವರೇ ನನಗೆ ಪ್ರಿಯರು; ಅವರೇ ನನಗೆ ಬಂಧುಗಳು ಹಾಗೂ ಆಪ್ತರು. ಅವರ ಹಿತವೇ ನನ್ನ ಹಿತ; ಅವರ ಗತಿಯೇ ನನ್ನ ಗತಿಯು. ಅವರೇ ನನ್ನ ಸುಖ ಬಾಂಧವರು ಅವರೇ ಯಾವಾಗಲೂ ನನಗೆ ಹಂಗಿದರು.

೧೬. ನಾನು ನನ್ನನ್ನು ಯಾವಾಗಲೂ ಸ್ಮರಿಸುವ ಸಾಧುಗಳ ಬಗೆಗೆ ನೆನೆಸುತ್ತೇನೆ. ಗೃಹಾಶ್ರಮ ವೃತ್ತಿಯಲ್ಲಿ ಒಂದಿಷ್ಟೂ ಆಸಕ್ತರಲ್ಲದವರನ್ನು ನಾನು ನೆನೆಯುತ್ತೇನೆ. ಯಾವಾಗಲೂ

ಒಂದಿಷ್ಟೂ ವಿಕಲ್ಪಗೊಳ್ಳದವರನ್ನು ನಾನು ನೆನೆಯುತ್ತೇನೆ. ನೆನೆವ ಭಕ್ತರನ್ನು ಆಧರಿಸುವ ವೃತ್ತಿಯು ಸದಾ ನನ್ನದಾಗಿರುತ್ತದೆ.

೧೭. ಮೃತ್ಯುಮುಖದಲ್ಲಿರುವ ಭಕ್ತರನ್ನು ನಾನು ಎತ್ತಿ ಅಧರಿಸುತ್ತೇನೆ. ಚಿತ್ತದಲ್ಲಿ ನನ್ನನ್ನು ಅರ್ಚಿಸುವ ಭಕ್ತರ ಭಯ ನಿವಾರಣೆಯನ್ನು ನಾನು ಮಾಡುತ್ತೇನೆ. ಅಜ, ರುದ್ರ ಮೊದಲಾದ ದೇವಾನುದೇವತೆಗಳೆಲ್ಲರಿಗೆ ಅಂತಕನ ಭೀತಿ ಇರುವುದೆಂಬುದೇ ತತ್ತ್ವವು. ಆದರೆ ಅಂತಕನು ನಿತ್ಯವೂ ನನ್ನ ಆತ್ಮಭಕ್ತಿಗೆ ಅನುಗುಣವಾಗಿಯೇ ವರ್ತಿಸಬೇಕು ಎಂಬುದನ್ನು ತಿಳಿದಿರಲಿ.

೧೮. ಕಾಲನು ಕಾಲಕಾಲಕ್ಕೆ ಈ ಜಗತ್ತಿನ ಭೂಪಾಲ ಸಂತತಿಯನ್ನು ದಿನಂಪ್ರತಿಯೂ ಪಾಲಿಸುವನು. ಆತನು ಈ ನನ್ನ ಆಜ್ಞೆಯನ್ನು ತಪ್ಪಲಾರನು. ಕಾಲವು ಮುಗಿಯಲು ರುದ್ರನು ಸಂಹರಿಸುವನು. ಬ್ರಹ್ಮನು ತನ್ನ ಸೃಷ್ಟಿಯ ಕಾಲವನ್ನು ಹೀಗೆ ಕಲ್ಪಿಸುವನು.

೧೯. ಚಂದ್ರ - ದಿವಾಕರನೇ ಮೊದಲಾದವರು ನನ್ನ ಕಲ್ಪನೆಯಂತೆ ಜ್ವಲಿಸುವರು. ಗ್ರಹ -ತಾರೆಗಳು, ದಿಕ್ಪಾಲಕರು (ನನ್ನ ಆಜ್ಞೆಯ ಮೇರೆಗೆ) ನಿಂತಿರುವರು. ನನ್ನ ಕಲ್ಪನೆಯಂತೆಯೇ ವಾಯು ಚಲಿಸುತ್ತಿರುವನು, ಅಗ್ನಿಯು ಜ್ವಲಿಸುವನು ಹಾಗೂ ಇಂದ್ರನು ಜಲವನ್ನು ಸುರಿಸುವನು. ಈ ಜಗತ್ತು ಮುಳುಗುವುದು, ನನ್ನ ಶಕ್ತಿವಶದಿಂದಾಗಿಯೇ (ಎಂಬುದನ್ನು ತಿಳಿಯಿರಿ)

೨೦. ನಾನಲ್ಲದೆ ಈ ಜಗತ್ತಿಗೆ ನೆಮ್ಮದಿಯೆಂಬುದೇ ಇಲ್ಲ. ಯಮನ ವೇದನೆಯಂತೆ ನರಳುವುದಷ್ಟೇ (ಇವರಿಗೆ ಉಳಿದಿರುವುದು) ಧ್ಯಾನದ ಮೂಲಕ ನನ್ನನ್ನು ನಂಬುವ ಸಾಧುಗಳು ಪರಿಣಮಿಸಿ, ಕಾಲನ ನೆತ್ತಿಯನ್ನು ತುಳಿದು, ಮುಕ್ತಿ ಪದಕ್ಕೆ ಯಾತ್ರಿಸುವರು.

೨೧. ಭವಬಂಧನವನ್ನು ದಾಟಿ ನನ್ನಲ್ಲಿಯೇ ಬುದ್ಧಿಯನ್ನು ಸ್ಥಿರಗೊಳಿಸಿದ ದೃಢಭಕ್ತರಿಗೆ ಜಡದೇಹದ ಸುಖವು ಶೂನ್ಯವೇ ಸರಿ. ಅನೇಕ ಯುಗಗಳೇ ಕಳೆದರೂ, ಲೋಕವೇ ಶೂನ್ಯವಾದರೂ ಅಂತಕನು ಅವರಿಗೆ ಕುಂದನ್ನು ಉಂಟು ಮಾಡಲಾರನು. ಅವರನ್ನು ದೂರ ಮಾಡುವನು.

೨೨. ಹಾಗಾದುದರಿಂದ ಎಡೆಬಿಡದ ಭಕ್ತಿಯಿಂದ ಚಿತ್ತವು ತುಂಬಿರಲಿ. ನನಗೆ ಹೋಲಿಸಲು ಎಣೆಯಾದುದು ಯಾವುದೂ ಇಲ್ಲ ಎಂದು ಅವನು ತಾಯಿಗೆ ಹೇಳಿದನು. ಆಗ ದೇಹಹೂತಿಯು ಪೊಡಮಟ್ಟಳು. ಭಕ್ತಿಯ ಸಾರವನ್ನು ಕರುಣಿಸು, ನಿನಗೆ ಜಯವಾಗಲಿ! ಎಂದು ತನ್ನ ಪುತ್ರನಲ್ಲಿ ಆ ಸುಂದರಿಯು ಕೇಳಿದಳು.

೨೩. ತಾಯೇ! ಕೇಳು. ಸರ್ವ ಜಗತ್ತು ಪ್ರತಿಮೆಯನ್ನಿರಿಸಿ ಕೊಂಡು, ಪ್ರೀತಿಯಿಂದ ಅರ್ಚನೆ ಮಾಡುವುದು. ಅದು ತತ್ಸಾಧನ ಸಾರವು. ಬೇರೆ ಬೇರೆ ಸ್ವಭಾವ ವಿರಕ್ತಿಗಳು. ವಿರುದ್ಧ ಸಿದ್ಧಾಂತಗಳು, ಉಪಾಧಿ ಲಕ್ಷಣಗಳನ್ನು ಹೇಳುತ್ತೇನೆ ಕೇಳು.

೨೪. ಮನದಲ್ಲಿ ಹಿಂಸೆಯನ್ನು ಕಲ್ಪಿಸಿ, ದೋಷ ದೃಷ್ಟಿಯ ಭಿನ್ನಮತವನ್ನಿರಿಸಿ, ಅರ್ಚಿಸಿದರೆ ಅದು ಅಧಮ ಭಕ್ತಿಯು. ಪೂಜಾವರಣದಲ್ಲಿ ಜನರು ನೋಡುವಂತೆ ಮಾಡುವ ಭಕ್ತಿಯು ಡಾಂಭಿಕತನದ ಮಧ್ಯಮ ಭಕ್ತಿಯು. ಮಾತ್ಸರ್ಯದಿಂದ ನನ್ನನ್ನು ನೆನೆವ ಭಕ್ತಿಯು ತಾಮಸವಾದುದು.

೨೫. ತಾಯೇ! ವಿಷಯಾಭಿಲಾಷೆಯ ಭಕ್ತಿಯು ರಾಜ ಸಾಧಮವು. ದೃಷ್ಟಿಯಿಂದೀಕ್ಷಿಸುವ ಭಕ್ತಿಯು ರಾಜಸ ಮಧ್ಯಮವು. ಪಶು -ಪುತ್ರ - ಕಳತ್ರ ಸಮಸ್ತರಾಗಿ ಸುಖದಿಂದ ಆರಾಧಿಸಿದರೆ, ಅದು ಉತ್ತಮ ರಾಜಸ ಭಕ್ತಿಯಾಗುವುದು.

೨೬. ಜನ್ಮಾಂತರವಾದ ಕರ್ಮಗಳಿಂದ ಅರ್ಚಿಸುವ ವಿಧಿಯು ಸಾತ್ವಿಕಾಧಮ. ಭಕ್ತಿಯು ಕರ್ಮಕ್ರಿಯೆಗಳನ್ನು ಮಾಡುವುದರ ಮೂಲಕ ನಡೆಸುವ ಭಕ್ತಿಯು ಸಾತ್ವಿಕ ಮಧ್ಯವು. ಅಹಂಕಾರವನ್ನುಳಿದು, ಶ್ರೀಗುರುವೆಂಬ ಭಾವನೆಯಿಂದ ದಾಸನೆಂದು ಆರಾಧಿಸುವುದು ಸಾತ್ವಿಕೋತ್ತಮ ಭಕ್ತಿಯು.

೨೭. ತನ್ನ ಶ್ರವಣಗಳಿಂದ ಯಾರು ಇದನ್ನು ಕೊಂಡಾಡುವರೋ, ಅವರು ನದಿಯು ಸಮುದ್ರವನ್ನು ಸೇರುವಂತೆ ಅವಸಾನವಿಲ್ಲದ ಸುಖಸಮುದ್ರವನ್ನು ಸೇರುತ್ತಾರೆ. ಅವರು ನಿರ್ಗುಣರು. ಅವರು ನನ್ನನ್ನು ನವವಿಧ ಭಕ್ತಿಯಿಂದ ಸದ್ಭಾವಗುಣದಿಂದ ಪೂಜಿಸುವರು.

೨೮. ಚಿತ್ತದಲ್ಲಿ ನನ್ನನ್ನು ಅವರು ಅರ್ಚಿಸುವುದಷ್ಟೇ ಅವರಿಗೆ ಮುಖ್ಯವಾದುದು. ಅವರಿಗೆ ಯಾವ ಫಲವೂ ಬೇಕಾಗಿಲ್ಲ. ಕರ್ತೃತ್ವನ್ನು ಹರಿದು ಅವರು ಅತ್ಯಂತ ವಿಲಾಸದಿಂದಿರುವರು. ಮೇಲೆನಿಸಿದ ನಾಲ್ಕು ಸ್ವರೂಪವನ್ನು ಅವರು ಬಯಸರು. ನನ್ನ ಚರಣ ಭಕ್ತಿಯ ಹೊರತು ಅವರಿಗೆ ಎಲ್ಲವೂ ಶೂನ್ಯವೇ.

೨೯. ನನ್ನನ್ನು ನಿತ್ಯವೂ ಅರ್ಚಿಸಿ ಕೀರ್ತಿಸುವರು ಹಾಗೂ ನಿತ್ಯವೂ ನನ್ನನ್ನು ಸೇವಿಸುವರು. ಅವುರ ನನ್ನ ಭಕ್ತರೊಂದಿಗೆ ನನ್ನ ನಾಮ ಸುಧೆಯನ್ನು ಮೊಳಗಿಸುವರು. ಎಲ್ಲ ಕರ್ಮಗಳನ್ನು ನನಗೆ ಅರ್ಚಿಸಿ ಅವರು ಮಾಡುವರು. ಸರ್ವರನ್ನೂ ಸಮಾನವಾಗಿ ಭೇದವನ್ನುಳಿದು ಅವರು ಪರಿಭಾವಿಸುವರು.

೩೦. ಸಾಯುಜ್ಯ ಪದಕ್ಕಿಂತ ಮಿಗಿಲಾದ ಸುಖವು ಯಾವುದು? ಅದಕ್ಕಿಂತ ಮಿಗಿಲಾದ ಇಚ್ಛೆ ಯಾವುದು? ದೃಷ್ಟಿಗೆ ಅದಕ್ಕಿಂತ ಮಿಗಿಲಾದುದು ಏನಿದೆ? ಕಿವಿಗಳಿಗೆ ಅದಕ್ಕಿಂತ ಸಾರವತ್ತಾದುದು ಯಾವುದು? ಕಾಯದ ತಮಗೆ ಮೂಲಕ ಸಿಗುವ ಯಾವುದನ್ನು ಅವರು ನೆನೆಯದೆ, ಆಯಾಸ ವಿಲ್ಲದಂತಹ ಸುಖಾಬ್ಧಿಯಲ್ಲಿ ಓಲಾಡುತ್ತಿರುವರು.

೩೧. ಭಕ್ತಿಸಾರ ರಹಸ್ಯವನ್ನೂ ಇಲ್ಲಿಯ ವರೆಗೆ ವಿಸ್ತರಿಸಿಯಾಯಿತು. ಇದು ಮುಕ್ತಿಕ ಸಾಧಕವಾದ ಕರ್ಮಕಾಮ ನಿವೃತ್ತಿ ಲಕ್ಷಣವು. ಉತ್ತಮೋತ್ತಮವಾದ ಈ ಅಧ್ಯಾಯವು ಇಪ್ಪತ್ತನೆಯ ಅಧ್ಯಾಯವು. ಭಕ್ತಿಯಿಂದ ಕೇಳಿದರೆ ಮರ್ತ್ಯರಿಗೆ ಮುಕ್ತಿಯು ಲಭಿಸುವುದು, ಅದರಿಂದ ಕೇಳಿರಿ!

ಅಧ್ಯಾಯ ೨೧

೧. ವೇದವೇತ್ತರಾದ ಶೌನಕ ಮುಖರೇ, ಈ ಕಥೆಯನ್ನು ಕೇಳಿ. ಇದು ಪರೀಕ್ಷಿತರಾಯನಿಗೆ ಶುಕಮುನಿಯು ಅನುಗ್ರಹಿಸಿದುದು. ವಿದುರನಿಗೆ ಮೈತ್ರೇಯನು ಆದಿಯಲ್ಲಿ ಈ ಭಕ್ತಿಯೋಗವನ್ನು ಹೇಳಿದನು. ಆದಿಮೂರ್ತಿಯಾದ ಕಪಿಲನಲ್ಲಿ ಅದನ್ನೇ ವಿಚಾರಿಸಲಾಗಿ ಆತ ಹೇಳಿದುದನ್ನು ಈಗ ಹೇಳುತ್ತೇನೆ.

೨. ಎಂದಿಂತು ಭಕ್ತರ ಸದ್ಗತಿಯನ್ನು ಮುನೀಂದ್ರನು ದೃಢವಾಗಿ ಹೇಳಿದನು. ಸುಲಲಿತವಾಗಿ ವಿನಂತಿಸಿದ ಈ ಸತ್ತ್ವಗುಣವನ್ನು ಮನಸ್ಸಿನಲ್ಲಿ ಆಕೆಯು ದೃಢಗೊಳಿಸಿದಳು. ಆತನ ಪದಗಳಿಗೆ ದೇವಹೂತಿಯು ವಂದಿಸಿ, ಮುಕ್ತಿ ಸ್ವರೂಪವನ್ನು ಹೊಂದುವ ಪರಿಯನ್ನು ನನಗೆ ಹೇಳಬೇಕು ಎಂದಳು.

೩. ಕುತೂಹಲ ಚಿತ್ತದಿಂದ ಕೇಳು ತಾಯೇ! ಭಕ್ತ ಜನರು ಭಕ್ತಿಯನ್ನು ನಿತ್ಯವೂ ಸ್ಥಿರಗೊಳಿಸಿ, ಹೃದಯ ಪೂರ್ವಕವಾಗಿ ತೇಜೋಮಯ ಮೂರ್ತಿಯನ್ನು ಪೂಜಿಸಿವರು. ಆಗ ಹೊರಗಿನ ಸಮಸ್ತ ವಿಷಯಗಳನ್ನೂ ಲಯವಾಗಿಸಿ, ಶುದ್ಧ ಮನಸ್ಕರಾಗಿ, ಸ್ಥಿರಾಸನದಲ್ಲಿ ದೃಢವಾಗಿ ಕುಳಿತುಕೊಳ್ಳಬೇಕು.

೪. ಅಂಗನ್ಯಾಸ, ರೇಚಕ -ಕುಂಭಕ -ಪೂರಕಗಳ ಮೂಲಕ ಅಂಗುಲಿಗಳನ್ನು ಮುದ್ರಿಸಿ, ಹೃದಯಾಂಗಣವನ್ನು ಶುಚಿಗೊಳಿಸಬೇಕು. ಮಂಗಲಾತ್ಮಕ ಮೂರ್ತಿಯನ್ನು ಹೃದಯ ಮಂದಿರದಲ್ಲಿ ಸ್ಥಾಪಿಸಿ, ಭೃಂಗ ಸುಸ್ವರದಲ್ಲಿ ಪ್ರಣವಾಕ್ಷರವನ್ನು ಉಚ್ಚರಿಸಬೇಕು.

೫. ಜಲಭರಿತವಾದ ಮೋಡಗಳ ಕಾಂತಿಯುಳ್ಳ, ಸುಮನೋಹರ ಗಾತ್ರನು ಶೋಭಿಸುತ್ತಿರಲು, ಭುಜ ನಾಲ್ಕರಲ್ಲಿ ಶಂಖಗದಾ ಪದ್ಮವೊಪ್ಪಿರಲು, ರಥಾಂಗ ದೀಪ್ತಿ ಗುಣಜ್ಞನೂ ಸುಜನಾರ್ಚಿತ ಪಾದಸರೋಜ ಯುಗಗಳುಳ್ಳವನೂ ಆದ ವಿಭ್ರಾಜ ಮುಕುಂದನನ್ನು ಹೃದಯಾಂಬುಜ ಮಧ್ಯದಲ್ಲಿ ನಿಜ ಭಕ್ತಿಯಿಂದ ಪೂಜಿಸಬೇಕು.

೬. ಸುಮನೋಹರವಾದ ಶ್ರೀಮುಖ, ಪುಷ್ಪಮಾಲೆಗಳಿಂದ ವಿರಾಜತವಾದ ಕೇಶ; ಮಲ್ಲಿಗೆ, ಜಾಜಿ ಶ್ರೀ ತುಳಸೀ ಮಾಲೆಗಳಿಂದ ಕಂಗೊಳಿಸುವ ಉಜ್ವಲ ಕಾಂತಿ; ಚಂದನ ಕಸ್ತೂರಿ ತಿಲಕಗಳ ಶೋಭಾಯಮಾನವಾದ ಭಾವ; ಕಾಮನ ಬಿಲ್ಲನ್ನು ಮೀರುವ ಭ್ರೂಲತೆ ಹೀಗೆ ಒಂದೊಂದನ್ನೂ ಮನಸ್ಸಿನಲ್ಲಿ ನೆನೆಪಿಸಬೇಕು.

೭. ಅರಳಿದ ಕೆಂದಾವರೆಯಂತೆ ಅಗಲವಾದ ಕಣ್ಣುಗಳು, ಮಂದಸ್ಮಿತವಾದ ಮುಖ, ಮುತ್ತುಗಳ ಮಾಲೆಯನ್ನು ಮೀರಿದ ದಂತಪಂಕ್ತಿ, ಬಿರಿದ ಚಂಪಕೆಯಂತಿರುವ ನಾಸ್ತಿಕ, ಕಾಂತಿಯುಕ್ತವಾದ ರಕ್ತಾಧರ, ಉರಿಯುವ ಕುಂಡಲ, ಗಂಡಸ್ಥಲ, ಶುಭ್ರವಾದ ಹರಿಮಂಡಿಕೆ -

೮. ಜನನಿಯೇ, ಕೊರಳಾಭರಣವಾದ ಕೌಸ್ತುಭ, ಶುಭ್ರವಾದ ವಕ್ಷಸ್ಥಲ, ನಿಬಿಡವಾದ ವನಮಾಲೆಗಳು, ಮನೋಹರವಾದ ಭೃಂಗಾರ, ಸಿರಿವಾಸವೆನಿಸಿದ ಶ್ರೀವತ್ಸ, ಮಹಾಸಾಗರವನ್ನೇ ಮೀರುವ ಬೆನ್ನ ತಳಭಾಗ, ಕರಕಂಕಣ, ಮುದ್ರಾಂಕಿತವಾದ ಅಂಗುಲಿಯಾದಿಯಾಗಿ ಆತನನ್ನು ನೆನೆಯಬೇಕು.

೯. ಉದರದಲ್ಲಿ ವಿರಾಜಿಸುವ ಬಂಧ, ಮಹಾತ್ರಿವಳಿ, ನಡುಬಾಸೆ, ತಾವರೆಯನ್ನು ಉದ್ಭವಗೊಳಿಸಿದ ನಾಭಿ, ಜಂಘೆ, ಕಟಿ, ಪೀತಾಂಬರ ಕಾಂತಿ, ನವೀನವಾಗಿ ವಿರಾಜಿಸುವ ನೇವಳ, ಕಂಬುಕಂಧರ, ಶೋಭಾಯಮಾನವದಾ ಹೆದ್ದೊಡೆ, ಜಾನು ಹೀಗೆ ಮನಸ್ಸಿನಲ್ಲಿ ನೆನೆಯಬೇಕು.

೧೦. ಅಡಕವಾದ ಮುಂಗಾಲುಗಳ ಕಾಂತಿ, ಮಣಿಕಟ್ಟು, ಪಾದ, ಶೃಂಗಾರವಾದ ನೂಪುರ, ಉಂಗುರವಿಟ್ಟ ಹತ್ತು ಬೆರಳುಗಳು, ಅಂಗಾಲಿನ ಅಡಿಯಲ್ಲಿರುವ ಲಾಂಛನ, ಅರುಣಾಬ್ಜ ವಿಲಾಸ, ಮಾಂಗಲ್ಯ ವಿಭೂತಿಯನ್ನು ಹೃದಯದಲ್ಲಿ ದೃಢವಾಗಿ ಚಿಂತಿಸಬೇಕು.

೧೧. ಥಳಥಳ ತೊಳಗುವ ಮಕರದ್ವಯದ ಕುಂಡಲಗಳು, ಬಿಳಿಯ ಸ್ವೇದಜಲದ ದೀಧಿತಿ, ಭಕ್ತರ ರಕ್ಷಕವಾದ ಕಟಾಕ್ಷವನ್ನುಳ ಬ್ರಹ್ಮಾಂಡ ಘಟದ ಎಲ್ಲ ಸಂತತಿಯ ಆತ್ಮರಕ್ಷಾ ಶಿಖಾಮಣಿಯನ್ನು ಭಕ್ತಿಯಿಂದ ತಡಮಾಡದೆ ಚಿಂತಿಸಬೇಕು, ತಾಯೇ!

೧೨. ಭಾವಶುದ್ಧವಾಗಿ ಯಾವಾತನ ಶುಭಕರವಾದ ಪದಾಬ್ಜವನ್ನು ನೆತ್ತಿಯಲ್ಲೂರಿ ಈಶ್ವರನು ಭಕ್ತಿಯಿಂದ ಅರ್ಚಿಸಿದನೋ ಆ ಶ್ರೀಹರಿಯ ಪಾದವನ್ನೂ ಭಾವಶುದ್ಧತೆಯಿಂದ ಚಿಂತಿಸುವವರು ಮತ್ತೆ ದೇಹ ಸಾಧನವಾದ ಕರ್ಮಗಳನ್ನು ಮರಳಿ ನೋಡಲಾರರು.

೧೩. ಮಾತೇ! ಧ್ಯಾನವೆಂಬ ಹೃದಯ ನಿಧಾನನೂ, ಭಕ್ತರ ಸರ್ವತೋಪಮ ದುಃಖವನ್ನು ಹಾನಿ ಮಾಡುವ ವಜ್ರ ಪಂಜರನೂ, ಕಾಮಧೇನುವೂ ಸಿದ್ಧನೂ, ಮಾನ ಮತ್ಸರವೆಂಬ ಕಾನನಕ್ಕೆ ಅಗ್ನಿ ಸದೃಶನೂ, ಮಾಯಾಘ ಚಂದ್ರನೂ ಆದ ಶ್ರೀಹರಿಯನ್ನು ಊನವಾಗದಂತೆ ಭಕ್ತಿಯಿಂದ ಮನಸ್ಸಿನಲ್ಲಿ ಸ್ಮರಿಸಬೇಕು.

೧೪. ಮಂದಮಂದ ವಿಲಾಸವೆತ್ತ ಸುಂದರವಾದ ಸುಸ್ಮಿತ ಮುಖ, ಅಂತಹ ಭಕ್ತಿ ಶಿಖಾಮಣಿಯನ್ನು ತಿಳಿದು ತಿಳಿದು ಧ್ಯಾನಿಸುವ ಭಕ್ತರ ಮುಂದೆ, ಶ್ರೀ ಲಕ್ಷ್ಮಿಯತ್ತ ದಾಟಿಕೊಂಡು

ನೋಡುವ ದೃಷ್ಟಿ ಮಾತ್ರಕ್ಕೆ ಕರ್ಮಾಬಂಧನ ಲಯವಾಗುವಂತಹ ಬಂಧುವೂ, ಸೌಂದರ್ಯ ಸಿಂಧುವೂ ಆದ ಶ್ರೀಹರಿಯನ್ನು ಹೃದಯ ಮಂದಿರದಲ್ಲಿ ಸ್ಮರಿಸಬೇಕು.

೧೫. ಕಾತರಗೊಂಡು ಮಗುವನ್ನು ತಾಯಿಯು ಚಿಂತಿಸುವ ಹಾಗೆ, ಭೀಕರ, ದರಿದ್ರದ, ಸಜ್ಜನರ, ಸ್ತ್ರೀ ಮತ್ತು ಶಿಶುಗಳ, ವೃದ್ಧರ, ಆರ್ತರ, ಅನಾಥರ, ಭಕ್ತರ, ಪ್ರೀತನೂ, ಸದ್ಗುರುವೂ, ಬಾಂಧವನೂ ಆದ ಪರಮಾತ್ಮನ ಚರಣಾಬ್ಜವನ್ನು ಹೃತ್ಕಮಲದಲ್ಲಿ ಚಿಂತಿಸೋಣ.

೧೬. ಸೇವಿಸಿ ಲಯವಾಗದ ಪವಿತ್ರ ಅಮೃತ ಸಿಂಧುವಾದ ಶ್ರೀಹರಿಯನ್ನು ಧ್ಯಾನಿಸುವರೇ ಅವಯವವೆಂಬ ಕಣ್ಣಿಯಲ್ಲಿ ಮನಸ್ಸೆಂಬ ಪಕ್ಷಿಯನ್ನು ಸಿಕ್ಕಿಸಿ, ಬಾವಲಿಯಾಗಿ ನೇತುಕೊಳ್ಳಬೇಕು. ಅಂತಹ ವಿಲಾಸದಲ್ಲಿಯೇ ಇರುವ ಭಕ್ತರಿಗೆ ಯಾವ ವಿಪತ್ತು ಉಂಟಾಗದೆ, ಮಹಾಸುಖದಲ್ಲಿ ರಮಿಸುತ್ತಿರಬಹುದು.

೧೭. ಅತಿಕಾಮಿಗಳು ಕಾಂತೆಯರನ್ನು ಎಂದೂ ಮರೆಯದ ಹಾಗೆ, ಭಕ್ತರು ಮನಸ್ಸಿನಲ್ಲಿ ತವಕಿಸುತ್ತ ಶ್ರೀ ಹರಿಯನ್ನು ಯಾವಾಗಲೂ ಧ್ಯಾನದಲ್ಲಿರುತ್ತಾರೆ. ಈ ಭಕ್ತಿಯ ಸುಖದಿಂದ ಅತಿಯಾಗಿ ಸುಖಿಗೊಂಡು ಇತರೆಲ್ಲವನ್ನೂ ಬಿಡುತ್ತಾರೆ. ಸತತವಾಗಿ ಕಾಲವನ್ನೂ ಮೀರಿ ಅನ್ಯಸುಖಗಳನ್ನು ತೊರೆದು ಧ್ಯಾನಿಸುತ್ತಾರೆ.

೧೮. ತುಂಬಿಯು ಹೊರಗಿನ ಭೋಗ ವಿಷಯ ವೃತ್ತಿಯನ್ನು ತೊರೆದು, ತಾವರೆಯ ಸೌರಭವನ್ನು ಸೇವಿಸುವ ಸುಖವನ್ನು ಬಯಸುವ ಹಾಗೆ, ಭಕ್ತರು ಶ್ರೀ ಹರಿಯ ಚರಣಕಮಲದ ಸುಖಾಬ್ಧಿಯಲ್ಲಿ ಇಂಬು ತಪ್ಪದಂತೆ ವೀವೇಕತೆಯಿಂದ ನಿತ್ಯವೂ ಸುಖಿಸುತ್ತಾರೆ.

೧೯. ಒಮ್ಮೆ ಕುಳಿತಿರುವ ಮೂರ್ತಿಯನ್ನು ಚಿಂತಿಸಬೇಕು. ಒಮ್ಮೆ ನಿಂತಿರುವ ಭಾವವನ್ನು ಚಿಂತಿಸಬೇಕು. ಇನ್ನೊಮ್ಮೆ ಯಾತ್ರಿಸುವ ಲಕ್ಷಣವನ್ನು ಒಮ್ಮೆ ಯುದ್ಧಗತಿಯನ್ನೂ ಮತ್ತೊಮ್ಮೆ ವಿಶ್ರಮ ಸ್ಥಿತಿಯ ಭಾವವನ್ನು ಚಿಂತಿಸಬೇಕು. ಒಮ್ಮೆ ಹಾಸ್ಯ, ಒಮ್ಮೆ ವಿನೋದ ಗುಣ, ಒಮ್ಮೆ ಭಕ್ತ ಸುಗೋಷ್ಠಿ ಇತ್ಯಾದಿಗಳನ್ನು (ಪ್ರತ್ಯೇಕವಾಗಿ) ಆತ್ಮಗತಿ ವ್ಯಸನ ಬಾರದ ಹಾಗೆ ಧ್ಯಾನಿಸಬೇಕು.

೨೦. ಚಾರುದಿವ್ಯ ಸ್ವರೂಪ ಮೂರ್ತಿಯಲ್ಲಿ ಮನವು ಬೇರೂರಬೇಕು. ಶರೀರ ಸುಖದಿಂದ ಪ್ರೇರೇಪಣೆಗೊಳ್ಳದೆ, ಮನಸ್ಸಿನಲ್ಲಿ ಅದನ್ನು ಬಯಸದೆ ಇರಬೇಕು. ಭೂರಿ ಪುಣ್ಯ ಸುಖಾಬ್ಧಿಯಲ್ಲಿ ಓಲಾಡುವ ಇಂತಹ ಪರಮಭಕ್ತರು ತೃಪ್ತಿ ಸಾಮ್ರಾಜ್ಯವನ್ನು ಹೊಂದುತ್ತಾರೆ.

೨೧. ಕರಣೇಂದ್ರಿಯನನ್ನು ಕರಗಿಸಿ, ಭಕ್ತಿ ಸುಖದಲ್ಲಿ ಚಿತ್ತವನ್ನೂ ಮುಳುಗಿಸಿ ದಿವ್ಯ ಸ್ವರೂಪವನ್ನು ನೋಡಬೇಕು. ಹೀಗೆ ಬುದ್ಧಿಯನ್ನು ಸ್ಥಿರಗೊಳಿಸಿ ಕಾಣುವ, ಕಾಣದ ನಿತ್ಯ ವಿಧಿಗಳೆಲ್ಲದರಲ್ಲಿ ಅದನ್ನು ಆವರ್ತಿಸುವವರಿಗೆ, ಸಹಸ್ರ ಬ್ರಹ್ಮರು ಲಯವಾದರೂ ಲಯವೇ ಇರುವುದಿಲ್ಲ.

೨೨. ಚಿತ್ತತನ್ಮಯವಾದ ಮಹಾತ್ಮ ಶ್ರೇಷ್ಠನಿಗೆ ಪರಾಭವವಿರುವುದೇ? ಕರ್ತೃ ಕರ್ಮಗಳ ಅಭಿಲಾಷೆಯು ಅವರಿಗೆ ಹತ್ತಿಕೊಳ್ಳದು. ಭಿತ್ತಿಯಲ್ಲಿ ಆಶ್ರಯವು ಕಾಣದೆ ವಿಚಿತ್ರವಾದ ಬಿಂಬವು ಪ್ರಕಾಶಿಸುವುದೇ? ಅಂತಹ ಭಕ್ತರಿಗೆ ಜನನವೇ ಮೊದಲಾದ ಕರ್ಮ ಭಯಗಳು ಲೇಪನಗೊಳ್ಳಲಾರವು.

೨೩. ತಿಳಿಯದ ಮೂಢರು ಬುದ್ಧಿವಂತರಿಗೆ ಅತಿದೋಷವನ್ನು ಆರೋಪಿಸುತ್ತಾರೆ. ಅಂತವರು ನರಕದಲ್ಲಿ ಯಮನ ಬಾಧೆಗೆ ಸಿಲುಕುವರು. ಆತನ ವಿಲಾಸವನ್ನು ಮರೆತು ಮತ್ತೆ ಮತ್ತೆ ಅಧೋಗತಿಯನ್ನು ತಾಳುವರು. ವಿನಯವಂತರಾದ ಪ್ರಾಜ್ಞರ ಚಿತ್ತವನ್ನು ಕಲಕಿದರೆ ಅವರಿಗೆ ಯಾವತ್ತು ಸುಖವುಂಟಾಗಲಾರದು.

೨೪. ನಾನು ಸರ್ವರ ಲೋಚನಗಳಿಗೂ ನಿಜಾತ್ಮನನ್ನು ಗೋಚರ ಮಾಡಿದ್ದೇನೆ. ಸತ್ಪುರುಷರ ಸ್ಥಿರಕಾರ್ಯವನ್ನು ಸೂಚಿಸಿದ್ದೇನೆ. ಈ ಸಚರಾಚರ ಜೀವಿಗಳು ಸ್ವಾಮ್ಯ, ಹಿತಾರ್ಥ ಸಾಧಕರಾಗಿದ್ದಲ್ಲಿ, ಚತುರ್ಭುಜ ಮೂರ್ತಿಯಾದ ಶ್ರೀಹರಿಗೆ ಸಮಾನರಾಗುತ್ತಾರೆ. ಅಂತಹವರಿಗೆ ಎಣೆಯಾದವರು ಯಾರಿದ್ದಾರೆ?

೨೫. ಚರಗಳಿಗಿಂತ ಅಚರಜೀವಿಗಳು ಕನಿಷ್ಠರು. ಅಂತಹ ಪಶುಗಳಿಗಿಂತ ಮನುಷ್ಯರು ಶ್ರೇಷ್ಠರು. ಅಂತಹ ಶ್ರೇಷ್ಠರಾದ ನಾಲ್ಕು ಮನುಷ್ಯ ವರ್ಗದಲ್ಲಿ ವಿಪ್ರರು ಶ್ರೇಷ್ಠರು. ಅವರಲ್ಲಿ ಚತುರ್ವೇದಿಗಳು ಶ್ರೇಷ್ಠರು. ಅವರಿಗಿಂತ ಅರ್ಥಕರು ಶ್ರೇಷ್ಠರು. ಸಂಶಯ ನಿವಾಕರು ಅವರಿಗಿಂತಲೂ ಶ್ರೇಷ್ಠರೆಂಬುದನ್ನು ತಾಯೇ ನೀವು ತಿಳಿಯಿರಿ.

೨೬. ಇವರೆಲ್ಲರಿಗಿಂತ ಧರ್ಮಿಷ್ಠರು ಶ್ರೇಷ್ಠರು. ನಿಸ್ಸಂಗಗಳಾಗಿ ವಿಶೇಷವಾದ ಹೆಮ್ಮೆಯನ್ನು ತ್ಯಜಿಸಿದ ಸಾಧುಗಳು ಇವರಿಗಿಂತ ಶ್ರೇಷ್ಠರು. ನಿಷ್ಕಾಮಿಗಳು ಇವರಿಗಿಂತಲೂ ಶ್ರೇಷ್ಠರು (ಇನ್ನು) ಹೇಳುವುದಾದರೆ, ನನ್ನ ಚಿತ್ತವನ್ನು ತಿಳಿದ ನಿರ್ಮತ್ಸರಿಗಳಾದ ಭಕ್ತರಿಗಿಂತಲೂ ಮಿಗಿಲಾದವರನ್ನು ನಾನು ನೋಡಿಯೇ ಇಲ್ಲ.

೨೭. ಇವರಿಗಿಂತ ಮಿಗಿಲಾದವರನ್ನು ಈ ನಾಲ್ಕು ಸಮುದ್ರ ಪರಿವೃತವಾದ ಭೂಮಿಯಲ್ಲಿ ನಾನು ನೋಡಿಯೂ ಇಲ್ಲ ಕೇಳಿಯೂ ಇಲ್ಲ. (ಹಾಗೆ ನೋಡುವುದಾದರೆ) ಅವರು ನನಗಿಂತಲೂ ಶ್ರೇಷ್ಠರು - ಇನ್ನೇನು ಹೇಳಲಿ? ನಾನು ನನ್ನಾಣೆಯಾಗಿಯೂ ಸಲ್ಲದುದೇನನ್ನೂ ಹೇಳಲಿಲ್ಲ. ಈ ಸತ್ಯವನ್ನು ನಂಬು, ತಾಯೇ!

೨೮. ತುಂಬಿದ ಸಚರಾಚರದಲ್ಲಿ ವಿರಕ್ತರಾದ ಮನುಷ್ಯರು ಶ್ರೀ ಹರಿಗೆ ಸಮಾನರೆಂದು ತಿಳಿಯಬೇಕು. ಮನಪೂರ್ವಕವಾಗಿ ಅವರಿಗೆ ನಮಿಸಿ, ಚಿತ್ತ ವಿರಕ್ತಿಯಿಂದ ವಿಪರೀತವನ್ನು ನೆನಸದೆ ಅವರ ಪಾದವನ್ನು ಸೇವಿಸಬೇಕು.

೨೯. ಸತತವೂ ಸಚರಾಚರವನ್ನು ಭರಿಸಿಕೊಂಡಿರುವ ಮತಿವಂತರನ್ನು ಕಂಡಾಗ ತಿಳಿಯದೇ ನಿಂದಿಸುತ್ತಾರೆ. ಪರಮಾರ್ಥವನ್ನು ತಿಳಿಯದೆ ಪ್ರತಿಮೆಗಳನ್ನು ಕಂಡಾಗ ನೀನೇ ಗತಿಯೆಂದು ಅದಕ್ಕೆ ವಂದಿಸುತ್ತಾರೆ! ಇಂತಹವರಿಗೆ ಏನೆಂದು ಹೇಳುವುದು? ಹರಿಯೋ! ಹರಿ! ಎಂದನು.

೩೦. ಜ್ವಲನಾಗ್ನಿಯನ್ನು ವರ್ಜಿಸಿ, ಬೇಸಗೆಯಲ್ಲಿ ಯಾಗವನ್ನು ಕೈಗೊಳ್ಳುವ ಮಲಿನಾತ್ಮರ ಬಗೆಗೆ ಏನೆಂದು ಹೇಳಲಿ? ಮತಿಭ್ರಮೆಗೊಳಗಾಗಿ, ನೆಲೆಗೊಂಡ ಚರಾಚರಪೂರ್ಣರಾದ ಭಕ್ತರನ್ನು ಸಂಭಾವಿಸದೆ, ವಿವಿಧ ಕಲ್ಲುಮೂರ್ತಿಯನ್ನು ಪೂಜಿಸಿ ಮನ್ನಿಸುತ್ತಾರೆ.

೩೧. ಯಾವತ್ತೂ ಸಾಧುಗಳನ್ನು ನಿಂದಿಸಿ, ಆ ಶಿಲೆ ಮೂರ್ತಿಯನ್ನು ವಂದಿಸಿ, ಮಂದಬುದ್ಧಿಯಿಂದ ನೈವೇದ್ಯವನ್ನು ಅರ್ಪಿಸಿದರೆ ಅದು ನನಗೆ ಸಲ್ಲಲಾರದು. ಸರ್ವಾತ್ಮನೆಂದು ತಿಳಿದು ನನ್ನನ್ನು ವಂದಿಸುವವರನ್ನು, ಯಾವ ಕುಂದೂ ಇಲ್ಲದಂತೆ ಕಂದರೆಂದು ರಕ್ಷಿಸುತ್ತೇನೆ.

೩೨. ಬುದ್ಧಿಹೀನರೂ, ಸರ್ವಭೂತನಿಬದ್ಧ ವೈರರೂ ಪೂಜಿಸುವ ಮೂಲಕ ನನ್ನ ಸಿದ್ಧಿಯನ್ನು ಪಡೆಯಲಾರದು. ಅವರಿಗೆ ಅದರಿಂದ ಫಲವೂ ಲಭಿಸಲಾರದು. ಮೇರೆ ಮೀರಿದ ವಿಷ ಸಾಗರಕ್ಕೆ ಹಾಲೆಲ್ಲವನ್ನೆರೆದರೂ ಅದು ಶುದ್ಧವಾಗಲಾರದಲ್ಲವೇ? ಹಾಗೆಯೇ ಇದನ್ನು ನೀನು ತಿಳಿಯಬೇಕು, ತಾಯೇ!

೩೩. ನಾನು ಸರ್ವಾತ್ಮಕನೆಂದು ತಿಳಿದು, ಯಾರೊಡನೆಯೂ ಭೇದವನ್ನು ಮಾಡಬಾರದು. ಗರ್ವವೆಲ್ಲವನ್ನೂ ತೊರೆದು ನಿತ್ಯವೂ ಭಕ್ತಿಯಿಂದ ಕೊಂಡಾಡಬೇಕು. ಅಂತಹ ಸರ್ವಜ್ಞರು ಪ್ರತಿಮೆಗಳನ್ನು ಪೂಜಿಸಿದರೂ ನಾನು ಸರ್ವ ಕ್ರಿಯೆಗಳನ್ನೂ ಸಾಧಿಸುವಂತೆ ನಿರ್ವಹಿಸುತ್ತೇನೆ. ಈ ಸಾರವನ್ನು ತಿಳಿಯಬೇಕು.

೩೪. ಭಕ್ತಿಯೋಗ ಅಂತೆಯೇ ಸುವ್ಯಕ್ತ ಲಕ್ಷಣ ಮಾರ್ಗ ಎಂಬೀ ಎರಡನ್ನು ನಾನು ಹೇಳಿದೆನು. ಇನ್ನೆರಡೂ ಮಾರ್ಗಗಳೂ ಮುಕ್ತಿಮಾರ್ಗಗಳೇ, ವಿರಕ್ತಿ ಹುಟ್ಟುವ ಇನ್ನೊಂದು ಮಾರ್ಗವಾದ ವೈರಾಗ್ಯ ಯೋಗವನ್ನು ಇನ್ನು ಮುಂದೆ ಹೇಳುತ್ತೇನೆ.

೩೫. ಕಪಿಲನೆಂದು ಹೆಸರುಳ್ಳ ಮುನಿಯು ತನ್ನ ತಾಯಿಗೆ ಭಕ್ತಿ ಯೋಗಮತವನ್ನೂ ಹಾಗೂ ಮೂರ್ತಿ ಲಕ್ಷಣ ಧ್ಯಾನವನ್ನೂ ಹೇಳಿದನು. ಅರ್ತಿಯಿಂದ ರಚಿಸಿದ ಇದು ಇಪ್ಪತ್ತೊಂದನೆಯ ಅಧ್ಯಾಯವು. ಸತ್ತಮರು ಇದನ್ನು ಹೇಳಿ - ಕೇಳಿದರು ಎಂದಾದರೆ ನಿಶ್ಚಯವಾಗಿಯೂ ಮುಕ್ತಿ ಲಭಿಸುವುದು.

ಅಧ್ಯಾಯ ೨೨

೧. ಮನುನಂದನೆಗೆ ಅಚ್ಯುತನು ಭಕ್ತಿ ಸುಖ, ವೈರಾಗ್ಯ ಪಥವನ್ನು ವಿನಯದಿಂದ ಹೇಳಿದನು. ಅದನ್ನು ವರ್ಣಿಸಲು ನನಗೆ ಬ್ರಹ್ಮ, ಷಣ್ಮುಖ, ಗುರು, ಗಣನಾಥ ಮೊದಲಾದ ದೇವಾದಿ ದೇವತೆಗಳು - ಮನಸ್ಸನ್ನು ತಿದ್ದಿ ಸತ್ಕವಿತಾ ಸಾರವನ್ನು ಅನುಗ್ರಹಿಸಬೇಕು!

೨. ಚಿತ್ತವಲ್ಲಭನೇ ಕೇಳು! ಆದಿಯಲ್ಲಿ ಮೈತ್ರೇಯ ವಿದುರನಿಗೆ ಈ ಕಥೆಯನ್ನು ಹೇಳಿದನು. ಅದನ್ನು ಶುಕ ಮುನಿಯು ಭಕ್ತಿ ವೈರಾಗ್ಯಗಳಿಂದ ಪರೀಕ್ಷಿತ ಮಹಾರಾಜನಿಗೆ ಹೇಳಿದನು. ಶುಕಮುನಿಯು ಅದನ್ನು ವಿಸ್ತರಿಸಿ ಹೇಳಿದನು.

೩. ಮಗನೇ! ಜನಗಳಿಗೆ ಆನಂದವನ್ನುಂಟು ಮಾಡುವ ನಿಜಭಕ್ತಿ ಹಾಗೂ ವೈರಾಗ್ಯಗಳು ವಿಜಯವಾಗುವಂತೆ ಕರುಣಿಸಬೇಕು. ಕದಡಿದ ನನ್ನ ಚಿತ್ತವು ಸುಜನ ವಂದ್ಯನ ಪದಾಬ್ಜದಲ್ಲಿ ಸ್ಥಿರವಾಗಿ ನಿಲ್ಲುವ ಕೌಶಲವು ಯಾವುದು ಎಂದು ತಾಯಿಯು ಕೇಳಿದಳು.

೪. ತಾಯೇ! ಇನ್ನು ಮುಂದೆ ಸತ್ಪಥಗಳ ಸಾರವನ್ನು ಹೇಳುತ್ತೇನೆ. ನಿಷ್ಫಲರೂ, ಅಜ್ಞರೂ, ಅನೇಕ ರೀತಿಯಲ್ಲಿ ಸಂಕಷ್ಟಗಳನ್ನು ಎದುರಿಸಿ, ದ್ರವ್ಯಾರ್ಜನೆಯನ್ನು ಮಾಡುತ್ತಾರೆ. ಆಮೇಲೆ ದರ್ಪದಿಂದ ಕುಟುಂಬ, ಭೃತ್ಯ, ಗ್ರಹ ಇತ್ಯಾದಿ ಪ್ರವೃತ್ತಿಗಳಲ್ಲಿ ತೊಡಗುವರು. ಇಂತಹ ಉದ್ವೇಗವುಳ್ಳ ಬದುಕನ್ನು ಬಯಸಿ, ಕೊನೆಗೆ ಸತ್ತುಹೋಗುತ್ತಾರೆ. ಇದು ಕೌತುಕವೇ ಸರಿ!

೫. ದೈವೇಚ್ಛೆಯಂತೆ ಸಿದ್ಧಿಸಿದ ಧನವು ಸಿದ್ಧಿಸುತ್ತದೆ. ಅದು ದೈವವನ್ನು ಚಿಂತಿಸಲಿರುವ ಸಾಧನವು. ಆದರೆ ದೈವಾಧೀನರು, ಅಲ್ಪರು ಅದನ್ನು ನೋಡದೆ, ದೈವವು ಕಲ್ಪಿಸಿದ ಕರ್ಮವನ್ನು ನೋಡದೆ, ನಿಷ್ಫಲರೂ ಅಜ್ಞರೂ ಆಗುತ್ತಾರೆ. ದೈವಬಾಹಿರರಾಗಿ ಅವರು ರೌರವ (ನರಕ) ಸಾಗರದಲ್ಲಿ ಮುಳುಗುವರು.

೬. ತನ್ನಿಂದಾಗಿರದ ಬಾಂಧವ ಪುತ್ರ, ಮಿತ್ತ ಹಾಗೂ ಕಳತ್ರ ವರ್ಗವನ್ನು ತನ್ನದೆಂದೇ ಅಹಂಕರಿಸಿ ಭಿನ್ನಭಾವನೆಗೊಳಗಾಗುತ್ತಾರೆ. ಅನ್ಯರೇತಸ್ಸಿನಲ್ಲಿ ಹುಟ್ಟಿದ ಈ ಕುನ್ನಿಗಳು ಬುದ್ಧಿಹೀನರಾಗಿ ಸತ್ತು ಹೋಗುವರು. ಆ ಕಷ್ಟ ಕೋಟಲೆಯನ್ನು (ಮುಂದೆ ವಿವರಿಸುತ್ತೇನೆ.)

೭. ಹಲವು ಮಾಯೆಯಲ್ಲಿ ನಿರ್ಮಿಸಿದ (ಶರೀರವೆಂಬ ಈ) ಮೋಹಗೃಹವನ್ನು ಅಲಂಕಾರಗೊಳಿಸಿಕೊಂಡು ಅಲ್ವೇ ವಾಸಿಸತೊಡಗುತ್ತಾರೆ. ಹಲವು ವಿಧದ ತೃಷೆಗೊಳಗಾಗಿ

ಬೆಂಕಿಯ ಜ್ವಾಲೆಗೆ ಮೃದುವಾದ ಹತ್ತಿಯ ಹಣ್ಣಿನೊಳಗಿನ ಹುಳುವಿನಂತೆ ನುಲಿದು ನುಲಿದು ಅಲ್ಲೇ ಮೃತರಾಗುವರು. ಅವರಿಗೆ ಕರ್ಮಗತಿಯು ತಪ್ಪದು. ಅಂತಹ ಮಲಿನಾತ್ಮರು ಅಧೋಗತಿಗೆ ಹೋಗುವರು. ಆ ಹಲವು ಕೌತುಕವನ್ನು ಕೇಳು.

೮. ಧನ, ಮಾನಿನಿ, ಪುತ್ರ, ಗೃಹಾದಿಗಳನ್ನು ಆವೇಶ ಮದದಿಂದ ಯವ್ವನವಿರುವ ವರೆಗೆ ತನ್ನದೆಂದು ಭಾವಿಸಿರುತ್ತಾನೆ. ಯೌವ್ವನವು ಕಳೆಯಲು ರುಧಿರಾಶನಿ ಎಂಬ ಘನ ರಾಕ್ಷಸಿಗೆ ಈ ದೇಹವನ್ನು ಒಪ್ಪಿಸಬೇಕಾಗುತ್ತದೆ. ಆಕೆಯು ಮನುಷ್ಯನನ್ನು ವಶ ತಪ್ಪಿಸುತ್ತಾಳೆ. ಆಕೆಯು ಕೈಯಿಂದ ಬ್ರಹ್ಮನಿಗೂ ತಪ್ಪಿಸಲಾಗದು. ಅಮ್ಮಾ! ಅದು ವಿಧಿಕಲ್ಪಿತವು.

೯. ತಲೆಯು ನರೆತು ಹೋಗುವುದು. ಕಣ್ಣು ಗುಳಿಬೀಳುವುದು. ಕಿವಿಯು ಕೇಳದಾಗುವುದು. ಬುದ್ಧಿಯು ಹಿಡಿತ ತಪ್ಪುವುದು. ನರಗಳು ಶಿಥಿಲಗೊಳ್ಳುವುವು. ಕೈಕಾಲುಗಳು ಅಲುಗಾಡುವುವು. ಹಲ್ಲುಗಳು ಉದುರುವುವು. ಹುಬ್ಬುಗಳು ಜೋಲಾಡುವುವು. ಎಲುಬುಗಳು ಎದ್ದು ಕಾಣುವುವು ಅದಲ್ಲದೆ, ಕಂಡವರೆಲ್ಲರೂ ಪರಿಹಾಸ್ಯ ಗೈಯ್ಯುವರು. ಈ ಸ್ಥಿತಿಯನ್ನು ಏನೆಂದು ಹೇಳೋಣ!

೧೦. ಕಫವು ಅತ್ತಿತ್ತೆಲ್ಲ ಆವರಿಸಿಕೊಂಡು ಸ್ವರವು ಬಿದ್ದುಹೋಗುವುದು. ಲೋಳೆಯಾಗಿ ಧಾರೆ ಧಾರೆಯಾಗಿ ಸುರಿಯುವುದು. ಅಪಾನವಾಯುವು ಹೋಗುವುದು. ಅಧೋದ್ವಾರದಲ್ಲಿ ಕರುಳು ಹೊರಬರುವುದು. ಶರೀರವು ಅಂಕುಡೊಂಕಾಗುವುದು ಆಗಾಗ ಮಲವು ಅರಿವಿಗೇ ಬಾರದಂತೆ ಹೊರಬರುವುದು ತಾಯೇ! ಏನೆಂದು ಹೇಳಲಿ?

೧೧. ಶತವತ್ಸರ ತುಂಬಿದ ಶರೀರಕ್ಕೆ ಮರಣ ಕಾಲವು ಸನ್ನಿಹಿತವಾಗುವುದು. ಆಗಲೂ ಜೀವರಿಗೆ ಮುಂದಣಗತಿಯ ಬಗೆಗೆ ಆಲೋಚನೆ ಇರುವುದಿಲ್ಲ. ಆತನು ಮನಸ್ಸಿನೊಳಗೇ ಈ ಬಾಳ್ವೆ ಏನು? ಎಂದು ವ್ಯಧಿಸುವನು. ಗೃಹಸ್ಥರಾದವರು ಯಾರಾದರೂ ಇದನ್ನು ಪರಿಹರಿಸಲಿರುವರೇ ಎಂದು ಆಲೋಚಿಸುವನು.

೧೨. ಒಮ್ಮೆ ಕಾಣಿಸಿದ ವ್ಯಾಧಿಯು ಗುಣವಾದ ಕೂಡಲೇ ಇನ್ನೊಂದು ಅಪಾಯವು ಕಾಣಿಸಿಕೊಳ್ಳುವುದು. ಅದಕ್ಕೆ ಸಮರ್ಥಕರಾದ ರಕ್ಷಕರೂ ಇಲ್ಲ, ವೈದ್ಯನೂ ಇರುವುದಿಲ್ಲ. ತಲೆ ಮತ್ತು ಕಣ್ಣುಗಳಿಗೆ ಉಷ್ಣಜಲವನ್ನು ಸುರಿಸಿದರೂ, ಕಷಾಯ ಕುಡಿಸಿದರೂ ಶಾಖದಿಂದ ಪಕ್ವಗೊಳಿಸಿದರೂ ಆ ವ್ಯಾಧಿಯು ಲಯವಾಗದು.

೧೩. ಎಷ್ಟಾದರೂ ಅನುಭವಿಸಲೇ ಬೇಕು. ಕಟ್ಟಿಗೆಯಂತಾದ ದೇಹವು ದುರ್ಗಂಧವನ್ನು ದೂರಕ್ಕೇ ಸೂಸುವುದು. ಅಧೋ ವಾಯು ಬಿಡುತ್ತಾ, ದೇಹಕ್ಕೆಲ್ಲ ಮಲ ಲೇಪನವಾಗಿ ಮನೆಯಲ್ಲಿ ವಾಸಿಸಲೂ ಸಾಧ್ಯವಾಗಲಾರದು. ಈ ಅನರ್ಥಕಾರಿಯೂ, ಮಹಾಪಾಪಿಯೂ ಒಮ್ಮೆ ಸತ್ತು ಹೋದರೆ ಸುಟ್ಟಾದರೂ ಬಿಡುವೆನು. ಎಂದು ಮಕ್ಕಳು ಆಡಿಕೊಳ್ಳುವರು. ಸಂಬಂಧವನ್ನು ಇನ್ನು ಏನೆಂದು ಹೇಳಲಿ!

೧೪. ಹರಿಯೋ ಹರಿ! ಈ ಶರೀರದ ಅಭಿಲಾಷೆಯು ಎಷ್ಟೊಂದು ಕಠೋರವಾದುದಲ್ಲವೇ! ತರತರವಾಗಿ ಅನೇಕ ರೀತಿಯಿಂದ ಬುದ್ಧಿವಾದ ಹೇಳಿದರೂ ಮಮಕಾರವು ಬಿಡಲಾರದು. ಜನರು ಮರಣದ ವಿಚಾರವನ್ನರಿಯದೆ, ವಿಷಯಗಳಲ್ಲಿ ಬುದ್ಧಿಯನ್ನು ಮರಳುಗೊಳಿಸುತ್ತಾರೆ. ನನ್ನ ಸುತಾದಿ ಸಮಸ್ತರಿಗೆ ಯಾರೂ ಗತಿಯಿಲ್ಲವೆಂದು ಮಮಕಾರ ತಾಳುತ್ತಾರೆ.

೧೫. ತನ್ನ ಮರಣ ಕಾಲವು ಸಮೀಪದಲ್ಲಿ ಇದೆಯೆಂದು ತಿಳಿಯುತ್ತಿದ್ದಂತೆ, ವ್ಯಕ್ತಿಯು ಗೋಳಿಡಲು ಪ್ರಾರಂಭಿಸುತ್ತಾನೆ. ಗೃಹವು ನಾಶವಾಗುತ್ತಿದೆಯಲ್ಲ! ಬಾಲಕರು ತಿಳಿಯದವರಲ್ಲ! ಹೆಂಡತಿಯನ್ನು ಯಾರು ನೋಡಿಕೊಳ್ಳುವವರು! ನಾನಳಿದರೆ ಅವರು ಅನಾಥರಾಗುತ್ತಾರಲ್ಲ! ಎಂದು ದುಃಖಿಸುತ್ತಾನೆ. ಆಗ ಪ್ರಜ್ಞೆಯು ತಪ್ಪಿ ಶ್ವಾಸವು ಹೊರಟು ಹೋಗುತ್ತದೆ.

೧೬. ಆ ವೇಳೆಯಲ್ಲಿ ಅತಿ ನಿಷ್ಠುರರಾದ ಯಮ ಭಟರು ಬರುತ್ತಾರೆ. ಕೂಪದ ಹಾಗೆ ಆಳವಾದ ಜ್ವಲಿಸುವ ಕಣ್ಣುಗಳವರಿಗೆ. ರೌದ್ರಿನನರಾಗಿ ಒಂದಷ್ಟೂ ಕನಿಕರ ತೋರಿಸದೆ ದುರಾತ್ಮಕನನ್ನು ಕಟ್ಟಿ, "ಬೇಗನೇ ಚಡಿ ಹೊಡೆಯಿರೆಂದು" ಹೇಳುವರು. ಆ ವೀರರು ಯಾತನಾಮಯವಾದ ಆ ದೇಹದಿಂದ ಜೀವನವನ್ನು ಹೊರಹಾಕುವವರು.

೧೭. ನಯವೆಲ್ಲವನ್ನೂ ಕಳಕೊಂಡು ಉಗ್ರರಾದವರು, ಉಜ್ವಲಿಸುವ ಮೀಸೆಯುಳ್ಳವರು, ದಾಡೆಯುಳ್ಳವರೂ, ಬಟ್ಟಲು ಕಣ್ಣುಗಳುಳ್ಳವರೂ, ಊರ್ಧ್ವ ರೇಖೆಗಳುಳ್ಳವರು, ನೀಲ ಪರ್ವತ ಸಮಾನರೂ, ಆದ ಆ ಯಮಭಟರು ಆರ್ಭಟಿಸುತ್ತ ಪ್ರಾಣವನ್ನು ಒಯ್ಯುತ್ತಾರೆ. ಆಗ ಅವರನ್ನು ಕಣ್ಣಾರೆ ನೋಡುತ್ತ ಕಷ್ಟದಿಂದ ನರಳಾಡುತ್ತ ಯಮಲೋಕದ ಯಾತ್ರೆಗೈಯ್ಯುವನು.

೧೮. ಕಳ್ಳನನ್ನು ಬೆನ್ನಹಿಂದೆ ಕೈಕಟ್ಟಿ ಬಂಧಿಸಿಕೊಂಡು ಹೋಗುವ ಹಾಗೆ, ಹೊಡೆದು ಬಡೆದು ಗಂಟಲಿಗೆ ತುಳಿದು, ಹಿಡಿದು ತಳ್ಳಿ, ದೂಡಿ, ಉರಿಯುವ ಕೆಂಡದ ಹಾಗಿರುವ ಬಿಸಿಲಲ್ಲೇ ದಾರಿ ನಡೆಸಿಕೊಂಡು ಬರುತ್ತಾರೆ. ಸುತ್ತಲೂ ಈ ಮಹಾಪಾಪಿಯನ್ನು ನಾಯಿಗಳು ಕಚ್ಚಿ ಸೀಳುತ್ತಿರುತ್ತವೆ.

೧೯. ನನ್ನಿಂದ ಸಾಧ್ಯವಿಲ್ಲ ಎಂದರೆ ಮುಳ್ಳು ದಂಟೆಯಲ್ಲೇ ಹೊಡೆಯುವರು. ಕಲ್ಲುಗಳಿಂದ ಅವರು ಹೊಡೆಯುವರು. ಚೂರಿಯ ಮುಳ್ಳಿನಿಂದ ಮುಂದೆ ಗದೆಯಿಂದ ತಿವಿಯುತ್ತಾರೆ. ಸಬಳದಿಂದ ಆ ಕಡೆಯಿಂದ ಈ ಕಡೆಯಿಂದ ಇರಿಯುತ್ತಾರೆ. ಭೀಕರ ಮುಳ್ಳುಗಳಿರುವ ದಾರಿಯಲ್ಲೇ ನಡೆಸಿಕೊಂಡು ಬರುತ್ತಾರೆ. ತಮ್ಮಟೆಯನ್ನು ಬಾರಿಸುವಂತೆ ಎತ್ತಿ ಎತ್ತಿ ದಾರಿಯಲ್ಲಿ ಹೊಡೆಯುತ್ತಾರೆ.

೨೦. ಈ ಅನರ್ಥವನ್ನು ಕೇಳುವವರಾರು? ಈ ಸಂಕಟವನ್ನು ನೋಡುವವರು ಯಾರು? ಹೆಂಡತಿ, ಮಕ್ಕಳು, ಶರೀರ, ಬಂಧುವರ್ಗ - ಮೊದಲಾದವರು ಈಗ ಬರುವರೇ? ದುಷ್ಕೃತ್ಯಗಳು

ಮೇರೆ ಮೀರುತ್ತಿರುವಂತೆ ಸುತ್ತ ನೋಡಲು ಯಾರೂ ಇರುವುದಿಲ್ಲ. ದೈವ ಪಾರಜ್ಮುಖರನ್ನು ದಂಡಿಸುವಾಗ ಯಾರೂ ದುಃಖಿಸುವುದಿಲ್ಲ, ತಾಯೇ!

೨೧. ಧಾರಿಣೀಪತಿಯೇ ಕೇಳು! ಯಮರಾಜ ಪಟ್ಟಣವು ದೂರವಾದುದೇನಲ್ಲ. ಅವರು ಓಡೋಡಿ ಎರಡೇ ಎರಡು ಗಳಿಗೆಯಲ್ಲಿ ಅಲ್ಲಿಗೆ ಯಾತ್ರಿಸುತ್ತಾರೆ. ಬ್ರಹ್ಮನ ಯೋಗ ಶಕ್ತಿಯನ್ನು ತಿಳಿಯಬಲ್ಲವರಾರು?

೨೨. ಹೀಗೆ ಕಾಲನ ದೂತರು ದೈವ ಹೀನರ ದೇಹವನ್ನು ಕೊಂಡು ಹೋಗುತ್ತಾರೆ. ಆ ದೇಹವನ್ನು ಅವರು ಖಂಡಿಸುತ್ತಾರೆ, ಕೊಚ್ಚುತ್ತಾರೆ. ಹುಲಿಮರಿ ಮತ್ತು ಹಂದಿಮರಿಗಳಿಂದ ಸೀಳಿಸುತ್ತಾರೆ, ಗುಹೆಗೆ ತುರುಕಿಸಿ, ಬೆಂಕಿಯ ಹೊಗೆ ಹಾಕುತ್ತಾರೆ, ಪರ್ವತದಿಂದ ತಳ್ಳುತ್ತಾರೆ. ಗುಂಡುಕಲ್ಲಿನಿಂದ ಅರೆದು, ತುಳಿದು ಅಗ್ನಿಯಲ್ಲಿ ಸುಡುತ್ತಾರೆ.

೨೩. ಕರಡಿಯನ್ನು ತಂದು ಕಚ್ಚಿಸುವರು. ಹಂದಿಯಿಂದ ತಿನಿಸುವರು. ಹಾವಿನಿಂದ ದೇಹವನ್ನು ನುಂಗಿಸುವರು. ಆನೆಯಿಂದ ಸೀಳಿಸುವರು. ಮರಕ್ಕೆ ಕಟ್ಟಿ ನೀರಲ್ಲಿ ಅಧೋಮುಖವಾಗಿ ತೂಗಾಡಿಸುವರು ತನ್ನ ಹೀನ ಕೃತ್ಯವನ್ನ ತಾನೇ ತಿನ್ನುವಂತೆ, ಮಲಮೂತ್ರಗಳನ್ನು ಭಕ್ಷಿಸುವರು.

೨೪. ದೇಹ ಎಲ್ಲ ಕಡೆ ಬತ್ತಿ ಸುತ್ತಿ ಬೆಂಕಿ ಉರಿಸುವರು. ಮಚ್ಚಿನಿಂದ ದೇಹವನ್ನು ಸೀಳುವರು, ಸಣ್ಣಗೆ ಕೊಚ್ಚುವರು, ದೇಹಗಳನ್ನು ಖಡ್ಗದಿಂದ ಖಂಡಿಸುವರು, ಹಾಗೆಯೇ ಚೆನ್ನಾಗಿ ಹುರಿಯುವರು. ದೇಹಿಗೆ ನೆನೆಯದಂತಹ ಫಲಗಳನ್ನು ಅನುಭವಿಸುವಂತೆ ಮಾಡುವರು.

೨೫. ನಾರಿಯೇ ಆಗಲಿ ಪುರುಷನೇ ಆಗಲಿ ಮಾಡಿದ ಕರ್ಮಫಲಗಳನ್ನು ನರಕದಲ್ಲಿ ಒಂದಿಷ್ಟೂ ತಪ್ಪದಂತೆ ಘೋರವಾಗಿ ಅನುಭವಿಸಲೇಬೇಕು. ಮಗ, ಹೆಂಡತಿ, ಬಂಧುಗಳನ್ನು ಮೀರಲು ಅಸಾಧ್ಯವಾಗದೇ, ಭೂರಿ ದೋಷವನ್ನು ತಾನೇ ಅನುಭವಿಸುತ್ತಾನೆ. ತಾಯೇ ಪರಾಭವವನ್ನು ಕೇಳು!

೨೬. ರೌರವ, ಅಂಧತಮಿಸ್ರ, ವೈತರಣೀ, ಅಸಿಪತ್ರ ಮೊದಲಾದ ನರಕಗಳಿವೆ. ಕ್ರೂರ ಜಂತುಗಳಾದ, ಪನ್ನಗ, ಶ್ವಾನ, ಗೃಧ್ರ ಮೊದಲಾದುವುಗಳು ಅಲ್ಲಿರುತ್ತವೆ. ಲಸಿಕೆ, ಅಮೇಧ್ಯಗಳ ತಟಾಕಗಳು ಅಲ್ಲಿರುತ್ತವೆ. ಘೋರವಾದ ಕುಂಭೀಪಾಕ, ಶೂಲಕಂಟಕ, ಶಾಲ್ಮಲಿ ಮೊದಲಾದ ಶಿಕ್ಷೆಗಳೂ ಇರುತ್ತವೆ. ಹೀಗೆ ಅನೇಕ ರೀತಿಯ ಕರ್ಮ ದುರಾಕೃತಿಗಳಿಗೆ ಫಲವನ್ನು ಪಡೆಯುವ ತಾಣಗಳು ಅಲ್ಲಿರುತ್ತವೆ.

೨೭. ಎಷ್ಟು ಅತಿಕ್ರಮಗಳನ್ನು ಮಾಡಲಾಗಿದೆಯೇಯೋ ಅಷ್ಟೆಲ್ಲವನ್ನೂ ಅಲ್ಲಿಯೇ ದಂಡನೆಯ ಮೂಲಕ ಪಡೆಯಬೇಕು. ಮಾಡಿದ ಪಾತಕಗಳು ತೀರದಿರಲು, ಲತಾದಿ ಗುಲ್ಮ ಸ್ವರೂಪವನ್ನು ಪಡೆಯುತ್ತಾರೆ. ಅದಲ್ಲದೆ ಅನೇಕ ಚರಾಚರಾದಿಗಳಲ್ಲಿ ಹುಟ್ಟಿ ಅನುಭವಿಸುತ್ತಾರೆ. ತಾಯೇ! ಆಮೇಲೆ ಅವರು ಮನುಷ್ಯ ದೇಹವನ್ನು ಆಶ್ರಯಿಸಿ ಬರುತ್ತಾರೆ.

೨೮. ಮೂಗ, ಅಂಧಕ, ಕುಂಟ, ಕುಳ್ಳ, ಗೂನ, ಕುಂಡ, ಮೊದಲಾದವರು ಮುದುಕ, ಕಾಕ, ದುರ್ಭಕ, ದೂತ್ಯಕ, ಕೌಸಥ, ಜಾರ -ಚೋರ, ವಿವಾದಕ ಮೊದಲಾದವರು ಶೋಕ, ಮೂಢ ದೀನ, ದುಃಖಿತ, ಕಲ್ಮಷ, ಕಲಹ ಮೊದಲಾದವರು - ಹೀಗೆ ಅನೇಕ ರೀತಿಯ ವಿವಿಧ ಮಾನವ ವರ್ಗಗಳು ಭೂಮಿಯಲ್ಲಿವೆ.

೨೯. ಗಗನದಿಂದ ವಾಯುವು, ಅದರಿಂದ ಅಗ್ನಿ, ಮತ್ತದರಿಂದ ಜಲಗಳು ಉದ್ಭವವಾದುವು. ಅವುಗಳಿಂದಾಗಿ ಭೂಮಿಯುಂಟಾಯಿತು. ಧನ - ಧಾನ್ಯ ಅದರಿಂದ ಉದ್ಭವವಾಯಿತು. ಇವುಗಳನ್ನು ಸೇವಿಸಿ, ಜೀವನು ವೀರ್ಯಬಲದಿಂದ ನಾನೀ ಶರೀರ ಪ್ರವೇಶಿಸುತ್ತಾನೆ. ಜೀವರು ಮಾಡಿದ ಪಾಪದ ಫಲದಿಂದ ಈ ಸ್ಥಿತಿಯು ಬರುತ್ತದೆ.

೩೦. ಭೂತ ವಿಕಲ್ಪನೆಯಿಂದ ಭೂಮಿಯಲ್ಲಿ ಉದಿಸಿದ ಔಷಧಿ ಸಂಗವನ್ನು ಹದಮಾಡಿ, ಮನುಷ್ಯರು ಅನ್ನವನ್ನು ಉಪಭೋಗಿಸುತ್ತಾರೆ. ಮದವೇರಿದ ಪುರುಷನು ನಾರಿಯರೊಂದಿಗೆ ಸಂಪರ್ಕ ಕಲ್ಪಿಸುತ್ತಾನೆ. ಆ ಪರಿಣಾಮವಾಗಿ ಶರೀರವು ಶುಕ್ಲ - ಶೋಣಿತ ಮಯವಾಗಿ ಉದ್ಭವಿಸುವುದು.

೩೧. ತಾಯೇ! ಹೃದಯ ಪೂರ್ವಕವಾಗಿ ಅವಧಾರಿಸಿ. ಗರ್ಭಕೋಶದ ದ್ವಾರವು ತೆರೆದಿರುವ ಹದಿನೈದು ದಿನಗಳಲ್ಲಿ ಸ್ತ್ರೀ ಸಂಸರ್ಗ ಮಾಡಬೇಕು. ಋತು ಸಮಯದಲ್ಲಿ ರಜಸ್ವಲೆಯಾದ ಐದು ದಿನಗಳು ಸಂಭೋಗಕ್ಕೆ ವರ್ಜ್ಯವು. ಹತ್ತು ದಿನಗಳಿಗಿಂತ ಮೊದಲೇ ಸಂಭೋಗಿಸಿದಾದಲ್ಲಿ ಜನನ ನಿಶ್ಚಿತವು.

೩೨. ಹಾಲಿನಲ್ಲಿ ಮಜ್ಜಿಗೆಯು ಸೇರುವ ಹಾಗೆ, ಶುಕ್ಲ ಶೋಣಿತಗಳು ಬೆರೆತು ಬಲಗೊಂಡು, ಏಕ ಸ್ವರೂಪವನ್ನು ತಾಳುವುವು. ಇದು ಮಾಯೆಯ ಮಹಿಮೆಯು. ಮೂವತ್ತು ದಿನಗಳು ಕಳೆದ ಬಳಿಕ, ಎರಡು ತಿಂಗಳು ಆಗುವುದರೊಳಗೆ ಕಾಲು, ಶಿರಸ್ಸುಗಳು ಉಂಟಾಗುವುವು.

೩೩. ನವದ್ವಾರಗಳು, ಅಸ್ಥಿ, ನಖ, ಎದೆ ಮೊದಲಾದ ಭಾಗಗಳು ಮೂರನೆಯ ತಿಂಗಳಿನಲ್ಲಿ ಉಂಟಾಗುವುವು. ನಾಲ್ಕನೆಯ ಮಾಸದಲ್ಲಿ ಧಾತುಗಳು ಉಂಟಾಗುವುವು. ಐದು ತಿಂಗಳುಗಳಾಗಲು ತೃಷೆ, ಹಸಿವುಗಳುಂಟಾಗುವುವು. ಆರನೆಯ ತಿಂಗಳಿಗೆ ಮಗುವು ಚಲಿಸಲು ಆರಂಭಿಸುವುದು.

೩೪. ಏಳನೆಯ ತಿಂಗಳಿನಲ್ಲಿ ಬಾಲಕನಲ್ಲಿ ಜ್ಞಾನವು ಪ್ರವೇಶಿಸುತ್ತದೆ. ತಾನು ಮಾಡಿದ ದುರಾಕೃತಗಳ ಸಂಗತಿಯನ್ನು ನೆನೆಸಿ ಅದರಲ್ಲೇ ಮುಳುಗಿ ಹೋಗುತ್ತಾನೆ. (ಹಳೆಯ ಜನ್ಮದ ದುಷ್ಕೃತ್ಯಗಳು) ಕ್ರಿಮಿಯಂತೆ ಕೊರೆಯುತ್ತ ಶರೀರವನ್ನು ತಿನ್ನುತ್ತಿರಲು, ನನಗೆ ಸಾವು ಎಲ್ಲಿಂದ ಬಂತು, ಇದಕ್ಕೆ ಸಾಧಕರು ಯಾರು ಎಂದು ಯೋಚಿಸುತ್ತಾನೆ.

೩೫. ಹಿಂದೆ ಅನೇಕ ಯುಗಗಳಲ್ಲಿ ಜೀವನು ಮಾಡಿದ ಪಾತಕಗಳ ಫಲದಿಂದಾಗಿ, ತಾಯಿಯ ಗರ್ಭವೆಂಬ ಗಹ್ವರದಲ್ಲಿ ಸಿಲುಕಿಕೊಳ್ಳುತ್ತಾನೆ. ತನ್ನ ನೆಲೆ ತಪ್ಪಿ ಶರೀರದ ದಕ್ಷಿಣ ಭಾಗದಲ್ಲಿ ಮಲಗಿದ್ದು, ಹೆಚ್ಚುತ್ತಿರುವ ವೇದನೆಯಿಂದ ಭಯಪೀಡಿತನಾಗಿ ನಲುಗಿ ಹೋಗುತ್ತಾನೆ.

೩೬. ನಾಲ್ಕು ದಿಕ್ಕಿನಿಂದಲೂ ಶೂಲದ ಮೊನೆಯ ಹಾಗೆ ದೇಹದ ಹತ್ತಿರ ಹತ್ತಿರಕ್ಕೆ ತಾಯಿಯು ಸೇವಿಸಿದ ಉಷ್ಣ, ಆಮ್ಲ, ಸುಡುವ ಅನ್ನ ಇತ್ಯಾದಿಗಳು ಬಂದು ದೇಹವನ್ನು ಛಿದ್ರಿಸುವುವು. ಗಂಜಿನೀರು ಇತ್ಯಾದಿಗಳು ಸುಕುಮಾರನ ನೆಮ್ಮದಿಯನ್ನೇ ಹಾಳು ಮಾಡುವುವು.

೩೭. ತಾಯೇ, ಮಹಾ ನರಕದ ಆಯಾಸ ವಿಲಾಸವನ್ನು ಏನೆಂದು ಹೇಳಲಿ! ಯಾವಾಗಲೂ ಹೊರಗು ಬರುವುದಕ್ಕೆಂದು ದಂಡಿಸುತ್ತಲೇ ಇರುತ್ತಾನೆ. ಒಂದು ಮುಹೂರ್ತದ ವೇದನೆಯನ್ನು ಶತಕೋಟಿ ಯುಗದ ಪಾಪವೆಂಬಂತೆ, ದುಃಖಿಸಿ ಆಯಾಸಗೊಳ್ಳುತ್ತಾನೆ.

೩೮. ಇದೊಂದು ಬಾರಿ ಭೂಮಿಯಲ್ಲಿ ನಾನು ಹುಟ್ಟಿ ಪುಣ್ಯ ಸಂಪಾದಿಸಿ ಎಂದು ಬಿಡುತ್ತೇನೆ. ಅದಕ್ಕಾಗಿ ಹರಿಯನ್ನು ಕೀರ್ತಿಸಿ, ಪೂಜಿಸಿ, ಧ್ಯಾನಿಸಿ ನಿತ್ಯವೂ ಕೊಂಡಾಡುತ್ತೇನೆ. ನೂರಾರು ತೀರ್ಥಗಳಲ್ಲಿ ದೋಷ ಪರಿಹಾರವಾಗಲು ಮುಳುಗುತ್ತೇನೆ. ಇನ್ನೊಮ್ಮೆ ಇಂತಹ ಸಂಕಟವನ್ನು ಅನುಭವಿಸಲು ನಾನು ಬರಲಾರೆನೆಂದು ಪ್ರಾರ್ಥಿಸುತ್ತಾನೆ.

೩೯. ಯಾವಾಗಲಾದರು ಮತ್ತೊಮ್ಮೆ ಶರೀರವನ್ನು ಹೊಂದದಂತೆ, ನೋಡಿಕೊಳ್ಳುತ್ತೇನೆ. ಅದಕ್ಕಾಗಿ ದಾನ, ಧರ್ಮ, ಪೂಜಾವಿಧಿ, ಚಾಂದ್ರಾಯಣವೇ ಮೊದಲಾದ ನಾನು ಸುಕೃತಗಳನ್ನು ಭೂಮಿಯಲ್ಲಿ ಮಾಡುವೆನು. ಇಷ್ಟೊಂದು ಸಂಕಟವಿರುವುದೆಂದು ನಾನು ತಿಳಿಯದಾದೆನಲ್ಲ ಎಂದು ಯೋಚಿಸುವನು.

೪೦. ಈ ದುಃಖವನ್ನು ನನಗೆ ಸ್ವಾಮಿಯು ಒದಗಿಸಿದನಲ್ಲ? ಆ ದೈವವನ್ನು ಭೂಮಿಯಲ್ಲಿ ಹುಟ್ಟಿದ ಮೇಲೆ ನಿತ್ಯವೂ ನಾನು ನೆನೆಸುತ್ತೇನೆ. ಮುಂದೆ ಯಾವ ದೋಷವನ್ನೂ ಮಾಡದಂತೆ ಕರುಣಿಸು ಎಂದು ಜಯಕಾರ ಮಾಡುತ್ತ, ಭೇದವನ್ನುಳಿದು ಗರ್ಭದೊಳಗೇ ವಂದಿಸುವನು.

೪೧. ಹೊರಗೆ ಬರಲಾರದೆ ನಾನು ಇಲ್ಲಿಯೇ ಒದ್ದಾಡುತ್ತಿರುವೆನಲ್ಲ! ಹೊರಗೆ ಬಂದ ಕೂಡಲೇ ಈಶ್ವರನ ಮಾಯೆ ಎಂಬ ಮಡದಿಯು ಬಂದು ವಶಗೈಯ್ಯುವನು. ದುಸ್ಥಿತಿ ಎಲ್ಲವನ್ನು ಮರೆತು, ಸಂಶಯಿಸಿದರೆ ವಿಜ್ಞಾನವು ನಾಶವಾಗುತ್ತದೆ ಎಂದು, ಗರ್ಭದೊಳಗಡೆಯೇ ಭಕ್ತಿಯಿಂದ ನಾರಾಯಣ ಮೂರ್ತಿಯನ್ನು ಸ್ಮರಿಸುವನು.

೪೨. ಆ ವಿಶ್ವಮೂರುತಿಯಾದ ಶ್ರೀ ಹರಿಯನ್ನು ಹೃದಯಮಂದಿರದಲ್ಲಿ ಆವಿರ್ಭವಗೊಳಿಸಿ ಬಾಲಕನು ಗರ್ಭದಲ್ಲಿ ನೆಲೆಯಾಗುವನು. ಇಲ್ಲಿಗೆ ಇಪ್ಪತ್ತೆರಡನೆಯ ಅಧ್ಯಾಯವಾಯಿತು. ಇದು ಶ್ರೀ ವಿಷ್ಣುವಿನ ಪಾದಾಬ್ಜಗಳಿಗೆ ಬ್ರಹ್ಮಾರ್ಪಣೆಯಾಗಲಿ!

ಅಧ್ಯಾಯ ೨೩

೧. ಸೂರ್ಯ, ಚಂದ್ರ, ಈಶ್ವರನ ಮಗನಾದ ವಿನಾಯಕ ಮೊದಲಾದ ದೇವರುಗಳು ಊನ ಬಾರದಂತೆ, ಈ ಪ್ರಸಂಗವನ್ನು ಪ್ರಸಾದಿಸಿ ಮಾನವರು ಹುಟ್ಟಿ, ವಿಷಯ ಸುಖಗಳಲ್ಲಿ ಮುಳುಗಿ ಶ್ರೀಹರಿಯ ಧ್ಯಾನವನ್ನು ಮರೆಯುವುದಕ್ಕೆ ಸಂಬಂಧಿಸಿದ ಸತ್ಕವಿತಾ ರಸವನ್ನು ವಿರಚಿಸುತ್ತೇನೆ.

೨. ಹೀಗೆ ಹೇಳಿದ ಈ ಕಥೆಯು ಆದಿಯಲ್ಲಿ ನೈಮಿಷ ವನದಲ್ಲಿ ಶಿವನಿಗೆ ಸಮಾನವಾದ ಶೌನಕ ಮುನಿಗಳಿಗೆ ಸೂತನು ಹೇಳಿದುದು. ಅದನ್ನು ಸೂತನಿಂದ ಕೇಳಿದ ಮುನಿಗಳು ಆ ಅದ್ಭುತವನ್ನು ವಿಸ್ತರಿಸು ಎಂದು ಕೇಳಿದರು.

೩. ಆಗ ಸೂತನು ಆರಂಭಿಸಿದನು. ಶೌನಕರೇ! ಕೇಳಿರಿ. ಆದಿಯಲ್ಲಿ ಶುಕಮುನಿಯು ಪರೀಕ್ಷಿತ ರಾಜನಿಗೆ ಈ ಕಥೆಯನ್ನು ಹೇಳಿದನು. ಅದನ್ನು ಮೈತ್ರೇಯನು ವಿದುರನಿಗೆ ಹೇಳಿದನು. ಕರ್ದಮನ ಸೂತನಾದ ಕಪಿಲನು ತನ್ನ ತಾಯಿಗೆ ಬಾಣ ಪಂಜರವೆಂಬ ಗರ್ಭನಿವಾಸದಲ್ಲಿರುವ ಮನುಷ್ಯರ ವರ್ತನೆಯನ್ನು ಹೀಗೆ ಹೇಳಿದನು ಎಂದು ಮೈತ್ರೇಯನು ಮುಂದುವರಿಸಿದನು.

೪. ತಾಯೇ! ಕೇಳು. ಹೊಟ್ಟೆಯಲ್ಲಿರುವ ಮಗುವು ಹೀಗೆ ವ್ಯಾಕುಲಿಸುತ್ತಿರಲು ನವಮಾಸ ತುಂಬುತ್ತದೆ. ಆಗ ಮಾಯ ಮಾರುತವು ಬೀಸಲಾಗಿ, ಯೋನಿಪಥದ ಮೂಲಕ ದೊಪ್ಪನೆ ಅದೋಮುಖವಾಗಿ ಬರುತ್ತಾನೆ. ಆ ವೇದನೆಯನ್ನು ವರ್ಣಿಸಲು ಸಾಧ್ಯವಿಲ್ಲ.

೫. ಇಕ್ಕಟ್ಟಾದ ಎಡೆಯಲ್ಲಿ ಸಖಿಯರು ಎರಡೂ ದಿಕ್ಕಿನಲ್ಲಿದ್ದು, ತಲೆಯನ್ನು ಹಿಡಿದು ತಟ್ಟುತ್ತಾರೆ. ಆ ಮೂಲಕ ಬಾಲಕನನ್ನು ಈಚೆ ಕಡೆ ತರುತ್ತಾರೆ. ವಿಹ್ವಲನಾದ ಮನಸ್ಸಿನಿಂದ ಮೇದಿನಿಗೆ ಬಾಲಕನು - ಕೊಳಕು ಶರೀರವುಳ್ಳವನಾಗಿ ಬೀಳುತ್ತಾನೆ. ಅದನ್ನು ನೋಡುವುದೇ ಕೌತುಕವು.

೬. ತಾಯಿಯನ್ನು ಕರೆಯಲಾಗದೆ ಚಲಿಸಲಾಗದೆ ಮೆಲ್ಲಮೆಲ್ಲನೆ ಮಾಸವನ್ನು ಸುತ್ತಿಕೊಂಡು ದೇಹವೆಲ್ಲವನ್ನೂ ಹೊಕ್ಕುಳಬಳ್ಳಿಯಿಂದ ಸುತ್ತಿಸಿಕೊಂಡು ಭೂಮಿಯ ಮೇಲೆ ಬೀಳುತ್ತಾನೆ. ಆಗ ವೇದನೆ ತಡೆಯಲಾಗದೆ ಬಹುವಿಧದಿಂದ ವಿಲಾಪಿಸುತ್ತ ಮರುಗುತ್ತಾನೆ. ಜ್ಞಾನವು ನಿಷ್ಫಲವಾಗಿ ದುಃಖದಿಂದ ಮರುಗುತ್ತಿರುತ್ತಾನೆ.

೭. ಬಾಲಕೇಳಿಯ ಅನರ್ಥಗಳೆಲ್ಲವನ್ನೂ ತಿಳಿದು ಹೇಳಲು - ಸರಸ್ವತಿಯೊಬ್ಬಳಿಂದ ಹೊರತು - ಬೇರೆ ಯಾರಿಗೂ ಸಾಧ್ಯವಿಲ್ಲ. ಭವವೆಂಬ ಮಾಯೆಯಲ್ಲಿರುವ ಮನುಷ್ಯರು ಕಾಲವನ್ನು ಹೇಗೆ ಕಳೆಯುತ್ತಾರೋ? ಮಾಯೆಯ ಮೂಲ ಸಾಧಕ ವರ್ತನೆಯನ್ನು ಮೀರಿಸಲು ಸಾಧ್ಯವೇ ಇಲ್ಲ.

೮. ಶರೀರವನ್ನು ಅಲುಗಾಡಿಸಲು ಆಗದೆ ಅನೇಕ ರೀತಿಯಿಂದ ತೊಂದರೆಗೊಳ ಪಡುತ್ತಾನೆ. ತೊಂದರೆ ಕೊಡುವ ಜಂತುಗಳಾದ ಇರುವೆ, ಹುಳ, ಹಾತೆ, ಚೇಳು, ತಗಣೆ ಹಾಗೂ ಮಿಡಿತೆಗಳಿವೆ. ಇವುಗಳುಂಟು ಮಾಡುವ ದುಃಖವನ್ನು ಏನೆಂದು ವರ್ಣಿಸಲಿ!

೯. ಒಂದನ್ನು ಬಯಸಿ ಅಳುತ್ತಿರಲು, ಜನರು ಇನ್ನೊಂದಾಗಿ ಭಾವಿಸುವರು. ಯಾವಾಗಲೂ ಕಲ್ಪಿಸಿದನ್ನೇ ನೆನೆಯುವುದಕ್ಕೆ ಹಾಗೂ ತಿಳಿಯುವುದಕ್ಕೆ ಅವರಿಂದಾಗದು. ಹೊಟ್ಟೆಗಾಗುವುದು ಬಾಯಿಗಾಗದು. ಹೀಗೆ ಬಹು ದುಃಖವನ್ನು ಪಡೆದು, ಅರಗಿಸಿ ಕೊಳ್ಳಲಾಗದೆ ದೇಹಪಥ್ಯಕ್ಕೆ ತೊಡಗುವನು.

೧೦. ಮಗ್ಗುಲು ಹೊರಳಲಾರದೆ ಕೆಲ ಕಾಲ ಕುಮಾರನು ಮರುಗುವನು. ನಡೆಯುವುದಕ್ಕೆ ಸಾಧ್ಯವಾಗದೆ ಕೆಲವು ಕಾಲ ಕುಮಾರನು ಬಳಲುವನು. ಮಾತಾಡುವುದಕ್ಕೆ ಸಾಧ್ಯವಾಗದೆ ಆಗದೆ ಇನ್ನೊಂದಷ್ಟು ಕಾಲ ಕಷ್ಟಪಡುವನು. ದಿನವೂ ತಾನು ನೆನೆಸಿದ ಕಾರ್ಯವನ್ನು ಮಾಡಲಾಗದುದಕ್ಕೆ ಬಾಲಕನು ವ್ಯಾಕುಲಿಸುವನು.

೧೧. ಇಚ್ಛಿಸಿದ ಫಲವನ್ನು ದಂತವು ಬಾರದ ಮೊದಲೇ ಸೇವಿಸುತ್ತಿರಲು ತಂದೆ - ತಾಯಿ ಹೊಡೆಯುತ್ತಾರೆ. ತಮ್ಮ ವಾರಗೆಯವರು ಜತೆ ಜತೆಯಲ್ಲೇ ಇದ್ದರೂ ಬೆಂಕಿ ಇಲ್ಲವೇ ಹುಲಿಯ ಬಾಧೆಯಿಂದಾಗಿ ಸಂಪತ್ತು ನಾಶವಾಗುವುದು ಬಾಲಕನು ಅದಕ್ಕೆ ವ್ಯಧಿಸುವನು.

೧೨. ಪಂಚ ವತ್ಸರಗಳ ವರೆಗೆ ಹೀಗೆ ದಂಡಿಸುತ್ತಿರುವ ದೇಹವು ಬೆಳವಣಿಗೆಯಾಗುವುದು. ಆಗ ಬಾಲಕನಿಗೆ ವಿದ್ಯಾಭ್ಯಾಸಕ್ಕೆಂದು ರಾಕ್ಷಸನಂತಿರುವ ಗುರುಗಳ ಬಳಿಗೆ ಕಳುಹಿಸುವರು. ಗುರುವು ಬೋಧನೆಗೈಯುತ್ತಿರಲು ಅದು ಶಿಷ್ಯನಿಗೆ ತಿಳಿಯುವುದಿಲ್ಲ. ಆಗ ಗುರುವು ಇನ್ನೇನು - ಸಾಯದಂತೆ ಮಾತ್ರ ಎಚ್ಚರಿಕೆ ವಹಿಸುತ್ತ ಆತನ ದೇಹವನ್ನು ದಂಡಿಸುವನು.

೧೩. ಕಾಲಲ್ಲಿರುವ ಬೇಡಿಯ ಕೊಂಡಿಗಳನ್ನು ತೆಗೆಯಲು ಯೋಚಿಸದೆ, ಬಲವಾದ ಸಂಕೋಲೆಗಳನ್ನು ಗಂಟಲಿಗೆ ನೇತು ಹಾಕುವಂತೆ ಕೌಮಾರ್ಯವು ಕಳೆಯುತ್ತಿರಲು ಯೌವ್ವನಾವಸ್ಥೆಯು ಪ್ರಾಪ್ತಿಸುವುದು. ಆಗ ಮನ್ಮಥನ ಬಾಣದ ವೇದನೆಗೊಳಪಟ್ಟು, ನಾರಿಯರ ಬಗೆಗೆ ಚಿಂತಿಸತೊಡಗುತ್ತಾನೆ.

೧೪. ಅಂಟಿದ ರೋಗವು ಉಲ್ಬಣಗೊಂಡ ಹಾಗೆ, ಅಡವಿಯ ಕೂಪಕ್ಕೆ ಪಶುವು ಬಿದ್ದ ಹಾಗೆ, ಅಮೇಧ್ಯಕ್ಕೆ ಹಾರುವ ಕ್ರಿಮಿಯ ಹಾಗೆ, ಸುತ್ತು ಬರುವ ನೊಣದ ಹಾಗೆ ಮನುಜರು ಗೃಹಸ್ಥಾಶ್ರಮದ ಅನುಭವಗಳಿಗೆ ಬಯಸಿ ಕರ್ಮವನ್ನು ಅನುಭವಿಸುವರು.

೧೫. ತಾಯೇ! ಗೃಹಸ್ಥ ಧರ್ಮದ ಪ್ರವೃತ್ತಿಯು ಲೋಗರನ್ನು ದಂಡಿಸುವ ಪರಿಯನ್ನು ಕೇಳು. ಹಾವಿನ ಹೆಡೆಯನ್ನಾದರೂ ಚುಂಬಿಸಬಹುದು. ಆದರೆ ಮಾರನ ಅಸ್ತ್ರದ ಬಾಧೆ ಪರಿಹಾರವಾಗದು. ನಾಲಗೆಯಿಂದ ಖಡ್ಗದ ಧಾರೆಯನ್ನು ನೆಕ್ಕಬಹುದು, ಸಿಂಹವನ್ನು ಆಲಂಗಿಸಬಹುದು, ಶೂಲವನ್ನು ನೆತ್ತಿಯಲ್ಲಿ ನೆಡಬಹುದು. ಆದರೆ ಗೃಹಸ್ಥ ಧರ್ಮವು ಅದಕ್ಕಿಂತಲೂ ಕಠಿಣ ತರವಾದುದು.

೧೬. ನೆತ್ತರು, ಮಲ, ಮೂತ್ರ, ಅನೇಕ ರೀತಿಯ (ಶರೀರ) ವ್ಯಾಧಿಗಳು; ಅಸ್ಥಿ, ರಸ, ಶ್ಲೇಷ್ಮ ಗಾಳಿಗೆ ವ್ಯಾಧಿಯನ್ನುಂಟು ಮಾಡುವ ಜಂತುಗಳ ತಾಣ; ಅಲ್ಲಿಂದ ನಾಲ್ಕು ದಿಕ್ಕಿಗೂ ಬೀರುವ ದುರ್ಗಂಧ - ಇವುಗಳಾವುದನ್ನು ವ್ಯಕ್ತಿಯು ಮೋಹನಾಶದಿಂದ ಕಣ್ಣಾರೆ ಆಗ ನೋಡಲಾರನು.

೧೭. ಈ ದೇಹವು ಗುಣಕರ್ಮ ನಿಬಂಧವಾಗಿ ಬಹು ದುಃಖಮಯವಾದ ನಿವಾಸವು. ಇದು ಬಹು ದೋಷಗಳಿಗೆ ಭಾಜನವಾದುದು. ಬಹುಪ್ರಾಣಿಗಳಿಗೆ ಈ ಶರೀರವು ಭೋಜನ ವಿಲಾಸವನ್ನುಂಟು ಮಾಡುವಂತದ್ದು. ಇದೆಲ್ಲವನ್ನೂ ತಿಳಿಯದೆ ಮನುಷ್ಯನು ಕಾಮಾಗ್ನಿಯಲ್ಲಿ ಬೆಂದು ಈ ಶರೀರವನ್ನು ವ್ಯಾಮೋಹಿಸುತ್ತಾನೆ.

೧೮. ದೂರದಿಂದಲೇ ಕಾಗೆ, ನಾಯಿ, ಚೇಳು, ಹದ್ದು ಮೊದಲಾದವು ತಮಗೆ ನಮಗೆ ಎಂದು ಆಶ್ರಯಕ್ಕಾಗಿ ಓಡಿ ಬರಲು ತೊಡಗುತ್ತವೆ. ತೊಗಲ ಮದದಿಂದಲೂ ಶಕ್ತಿಯ ದರ್ಪದಿಂದಲೂ ದಿವಸ - ದಿವಸಗಳನ್ನು ಕಳೆಯುತ್ತಲೇ ಇರುತ್ತಾನೆ. ತತ್ತ್ವಾರ್ಥ ತಿಳಿಯದೆ ಎಷ್ಟೆಷ್ಟೋ ಅನರ್ಥಗಳನ್ನೂ ಮಾಡತೊಡಗುತ್ತಾನೆ.

೧೯. ಆತನು ತನ್ನ ಹಿಂದಣ ಜನ್ಮದಲ್ಲಿ ಎಷ್ಟೊಂದು ಕರ್ಮಗಳನ್ನು ಮಾಡಿದ್ದನೋ! ಎಷ್ಟೊಂದು ಅದ್ಭುತಗಳನ್ನೆಲ್ಲ ಆಗ ಮಾತೆಯ ಉದರದಲ್ಲಿ ಸಾಧಿಸಿದನೋ! ಇಷ್ಟಾದರೂ ಈ ಶೋಕವೆಲ್ಲವನ್ನೂ ವರ್ಜಿಸುತ್ತೇನೆ ಎಂಬ ನಿರ್ಧಾರಕ್ಕೆ ಬರಲಾರನು. ಈ ಮಮಕಾರವನ್ನು ಏನೆಂದು ಹೇಳಲಿ!

೨೦. ಹರಿಯೋ ಹರಿ! ಮಾಯಾಂಗನೆಯ ಗಾಥತೆಯನ್ನು ಏನೆಂದು ರಚಿಸಲಿ? ಹಾತೆಗಳ ಹಾಗೆ ಈತನು ಉರಿಯುವ ದಾವಾಗ್ನಿಗೆ ಬಿದ್ದನಲ್ಲ! ಅಲ್ಲಿಯೇ ಮತ್ತೆ ಹುಟ್ಟಿ ಅಲ್ಲಿಯೇ ಹೊಸ ಮೋಹಕ್ಕೆ ಒಳಗಾಗುವನಲ್ಲ? ಮೇಲೆ ತಲೆಯೆತ್ತಿ ನಡೆಯದಂತೆ ಈ ವಿಷವರ್ತುಲವು ಸುತ್ತುತ್ತಿದೆಯಲ್ಲ?

೨೧. ಚಿತ್ತಾತ್ಮ ವಿಹೀನರಾದವರಿಗೆ ಅದ್ವಯವನ್ನುಪದೇಶಿಸಿದರೆ ದುಃಖವೇ ಉಂಟಾಗುವುದಲ್ಲದೆ, ತತ್ತ್ವವು ಉಂಟಾಗದು. ಹಾಗೆಯೇ ಅವರಲ್ಲಿ ವಿಷಯೋಪ ಭೋಗವು

ಉಂಟಾಗುವುದಲ್ಲದೆ, ವಿರಕ್ತಿಯು ಉಂಟಾಗದು. ಹುತ್ತವನ್ನು ಹುಡಿ ಮಾಡಿದ ಮಾತ್ರಕ್ಕೆ ಸರ್ಪದ ಭಯ ಹೋಗಲಾರದು. ತತ್ತ್ವಾರ್ಥವೆಲ್ಲವನ್ನು ಕೇಳಿದರೂ ದುಃಖವು ಪರಿಹಾರವಾಗದು.

೨೨. ಅಂತವರು ಯಾವಾಗಲೂ ತತ್ತ್ವ ಲಕ್ಷಣವನ್ನು ಸಾಧಿಸಲಾರರು. ಕ್ರೋಧ ಮಾತ್ಸರ್ಯ, ಡಂಭ, ಅಹಂಕೃತಿ, ಕಲ್ಮಷ, ಕಲ್ಲು ಮನಸ್ಸುಳ್ಳವರಿಗೆ ಇದು ಸಾಧ್ಯವಾಗಲಾರದು. ಹಾಗೆಯೇ ಬೋಧ ಹೀನವೂ, ಮೂಢರಾಗಿ ಸಾಧುಸಂಗಹೀನರೂ ಆದವರಿಗೆ ಹರಿಯ ಕೀರ್ತನೆಯ ಕೊಳ್ಳಲಾರದು. ಅವರಿಗೆ ಅದು ಪಥ್ಯವಾಗಲಾರದು.

೨೩. ಅವಿವೇಕರಿಗೆ, ಅಂಧರಿಗೆ, ಅಜ್ಞರಾದವರಿಗೆ ವಿವೇಕ ಉಂಟಾಗಲಾರದು. ಕಲ್ಲು ಮನಸ್ಸಿನವರಿಗೆ, ಪಾಪಿಗೆ, ಕ್ರೋಧಕನಿಗೆ, ಲೋಭಿಗೆ, ಸ್ತ್ರೀ ಮೋಹಿಗೆ, ಕಠಿಣ ಸ್ವಭಾವದವನಿಗೆ, ಗುರುದೈವರಲ್ಲಿ ನಂಬಿಕೆಯಿಲ್ಲದವನಿಗೂ ಹರಿಯ ಮಹಿಮೆಯನ್ನು ಕೇಳಲು ಕಿವಿಗಳು ಇಷ್ಟಪಡಲಾರವು. ತಾಯೇ! ಇದನ್ನು ಕೇಳು

೨೪. ಕಲಕಿದ ನೀರಿನಲ್ಲಿ ಕಾಣದ ಮುಖದ ಪ್ರತಿಬಿಂಬದ ಹಾಗೆ, ಹೃದಯದೊಳಗಿರುವ ಆತ್ಮನ ಆಕೃತಿಯ ನೆಲೆಯು ಲೋಗರಿಗೆ ಕಾಣಿಸದು. ಕಲುಷಾತ್ಮರಿಗೆ ತೃಷೆಯಡಗದೆ ಕಾವ್ಯವನ್ನು ಕೇಳಲಾಗುವುದೇ? ಶಿಲೆಯನ್ನು ಹಾಲಿನಲ್ಲಿ ಬೇಯಿಸಿದ ಹಾಗೆ, ಅದು ಯಾವತ್ತೂ ಸುಖದಾಯಕವಾಗದು.

೨೫. ಒಮ್ಮೆ ದರ್ಪಣದಲ್ಲಿ ಮುಖವನ್ನು ದರ್ಶನ ಮಾಡಿದವನು ಅದು ಹಳತಾಗಿ ಹೋಗಿದ್ದರೂ ಮಲಿನವಾಗಿದ್ದರೂ ಚೆನ್ನಾಗಿದೆ ಎಂದು ತೊಳೆದು ಶುಭ್ರಗೊಳಿಸುತ್ತಾನೆ. ಆದಿಯಲ್ಲೇ ಗುರುವಿನ ಕೃಪೆಯನ್ನು ಸಾಧಿಸಿದರೆ ದುಃಖವು ಲಯವಾಗುವುದಲ್ಲವೇ?

೨೬. ಶಾಂತತ್ವ, ವಿವೇಕ ಗುಣ, ಕ್ಷಮೆ ಇದೆಲ್ಲಕ್ಕೂ ಆಶ್ರಯವು. ಸದ್ಗುರುವಿನ ಕೃಪೆಯಿದ್ದರೆ ಆ ಎಲ್ಲವೂ ಅಲ್ಲಿಗೆ ಸೇರುವುದಲ್ಲವೇ? ಗೃಹಸ್ಥಾಶ್ರಮ ವೃತ್ತಿಯನ್ನು ನೆರವೇರಿಸಿದರೆ ಕೊನೆಗೆ ಲಕ್ಷ್ಮೀಕಾಂತನ ಮನದಿಂದ ಅಂತ್ಯದಲ್ಲಿ ಭಕ್ತಿಯು ಸಿದ್ಧಿಸುವುದು.

೨೭. ಚಿತ್ತದಲ್ಲಿ ದೇಹ ವಿರಕ್ತಿ, ವೈರಾಗವು ಉಂಟಾಗಿ, ತತ್ತ್ವಜ್ಞರ ಸಂಗಮ ಲಭಿಸಿ, ಅವರ ಪಾದತೀರ್ಥದ ಅಭಿಷೇಕವನ್ನು ನೆತ್ತಿಗೆ ಮಾಡಿಕೊಳ್ಳಬೇಕು. ಆಗ ಹೃತ್ಕಮಲದಲ್ಲಿ ಅಚ್ಯುತನನ್ನು ಆರಾಧನೆ ಮಾಡಿ, ಅಂತ್ಯದಲ್ಲಿ ಎಲ್ಲರೂ ಮುಕ್ತಿ ವಶರಾಗುವರು.

೨೮. ಇದು ಇಪ್ಪತ್ತ ಮೂರನೆಯ ಅಧ್ಯಾಯವು. ದೇವಹೂತಿ ತಾಯಿಗೆ ಕಪಿಲ ಮುನಿಯು ಹೇಳಿದ ಶುದ್ಧಾತ್ಮಕ ತತ್ತ್ವವಿದು. ಈ ಸಿದ್ಧಾಮೃತ ಸಾರವನ್ನು ಕೇಳಿದ ಜನರು, ದೇಹವಸಾನ ಕಾಲದಲ್ಲಿ ಶ್ರೀಹರಿಯ ಪಾದಯುಗಕ್ಕೆ ಸೇರುವರು. ಇದು ನಿಶ್ಚಯವು.

ಅಧ್ಯಾಯ ೨೪

೧. ದೇವಿಭಾರತಿ, ಗಂಗಾದೇವಿ, ರುಗ್ಮಿಣಿ, ಲಕ್ಷ್ಮೀ, ದೇವಿಗೌರಿ, ಶಚಿ, ಅಪ್ಸರೆಯರೇ ಮೊದಲಾದ ನಾರಿಯನ್ನು ಮನಪೂರ್ವಕವಾಗಿ ಧ್ಯಾನಿಸುತ್ತೇನೆ. (ಆಮೇಲೆ) ವಿಶ್ವಾತ್ಮ ತತ್ತ್ವದಿಂದಾಗಿ ದೇವಹೂತಿಗೆ ಮೋಕ್ಷ ಲಭಿಸಿದ ಕಥೆಯನ್ನು ಹೇಳುತ್ತೇನೆ.

೨. ತಾಯೇ ತ್ರಿಕರಣ ಪೂರ್ವಕವಾಗಿ ಯೋಗತ್ರಯ ತತ್ವವನ್ನು ಅವಧಾರಿಸಿ. ಕಾಯ, ಆತ್ಮ, ಸುತತ್ವ ಮೊದಲಾದುವುಗಳಲ್ಲಿ ವಿರಕ್ತಿಯುಂಟಾಗುವ ಉಪಾಯವನ್ನು ವಿವರಿಸುತ್ತೇನೆ. ಚಂಚಲವನ್ನು ಬಿಟ್ಟು ಅವಧಾರಿಸಿ ಎಂದು ಕಪಿಲನು ಹೇಳಿದನು.

೩. ಸಕಲ ಕ್ರಿಯೆ ಕರ್ಮ ಫಲಗಳನ್ನು ಬಿಟ್ಟು, ಮನಸ್ಸಾರೆ ಶುದ್ಧಾತ್ಮ ತಲದಲ್ಲಿ ಸಕಲಾಗಮ ನೀತಿಯನ್ನು ದೃಢಗೊಳಿಸಬೇಕು.......

೪. ದೇವಾದ್ಯರಿಗೆ ಮಂತ್ರಪೂರ್ವಕವಾಗಿ ಅಗ್ನಿಯಲ್ಲಿ ಅಜ್ಯಾಹುತಿಯನ್ನು ಮಾಡುವಾಗ, ಪುಷ್ಪ - ಜಲ ಇತ್ಯಾದಿಗಳಿಂದ ಅರ್ಚನೆ ಮಾಡುವಾಗ, ಸೇವಿಸುವ ಈ ಜಗತ್ತಿನಲ್ಲಿ ಎಲ್ಲರಿಂದಲೂ ಒಬ್ಬನೇ ಪರಿಪೂರ್ಣನೆಂದು ಆವಾಹಿಸಿ ಕರ್ಮ ಮಾಡಿದರೆ ಅನೇಕ ಫಲಗಳುಂಟಾಗುವುವು.

೫. ವಿಹಿತವಾದ ಕ್ರಿಯೆಯಲ್ಲಿ ಹೀಗೆ ಕರ್ಮ ಗತಿಯನ್ನು ನೆರವೇರಿಸಿದರೆ, ಆತ್ಮತಲದಲ್ಲಿ ಶುಭವನ್ನುಂಟು ಮಾಡುವ ವಿರಕ್ತಿಯು ಉದ್ಭವವಾದೀತು. ಮಹಿಮಾವಂತರಿಗೆ ಉತ್ತಮವಾದ ಸಾಧು ಗತಿಯು ಇಹಲೋಕವನ್ನು ಮೀರಿ ಮರಣೋತ್ತರವಾಗಿ ಲಭಿಸುವುದು.

೬. ನಾನು ಹೇಳಿದ ತತ್ತ್ವ ರಹಸ್ಯವನ್ನು ದೃಢವಾಗಿ ನಂಬಿ. ಪಶು, ಪುತ್ರ, ಮಿತ್ರ, ಕುಟುಂಬ ಸಾಧನ ವಸ್ತುಗಳನ್ನು ನಂಬಬೇಡ. ನನ್ನ ದಿವ್ಯವಾದ ಪಾದಾಂಬುಜವನ್ನು ಭಕ್ತಿಯಿಂದ ನಂಬು. ಮುಕ್ತಿ ಸುಖಾಂಬು ವಿಧಿಯನ್ನು ಅನುಭವಿಸುವುದಕ್ಕೆ ನಾನೇ ಬೆಂಬಲವಾಗಿರುತ್ತೇನೆ.

೭. ಸಾಧುಗಳು ಯಾರು? ಬಾಧಕರು ಯಾರು? ಸತ್ಪುರುಷರು ಯಾರು? ಸಜ್ಜನರು ಯಾರು? ದುರ್ಜನರು ಯಾರು? ದುರ್ಬಲರು ಯಾರು? ಈ ಎಲ್ಲ ವಿಚಾರವನ್ನು ತಿಳಿದವನಾದ ನೀನು ವಿಸ್ತಾರವಾಗಿ ಹೇಳು ಎಂದು ಆ ತಾಯಿಯು ಕೇಳಲಾಗಿ, ಕಪಿಲನು ಅದರ ಲಕ್ಷಣಗಳನ್ನು ಹೇಳಿದನು.

೮. ಸಾಧು - ಸಜ್ಜನರ ಲಕ್ಷಣಗಳನ್ನು ನಾನು ಹೇಳುತ್ತೇನೆ - ಆದರದಿಂದ ಕೇಳು. ಭೇದ ದೃಷ್ಟಿ ರಹಿತರೂ, ಆತ್ಮನಿಬೋಧಕರೂ ಆದವರು ಪರಮಾರ್ಥರಾದವರು ಸಾಧು - ಸಜ್ಜನರು, ಸನ್ಮತರನ್ನು ಸೇವಿಸುವವರೇ ಶೂದ್ರರು. ಆದಿ ಅಂತ್ಯಗಳನ್ನು ತಿಳಿಯಬಲ್ಲವರೇ ಸಾತ್ವಿಕರು, ಇದು ನಿಶ್ಚಿತವು.

೯. ಪುರುಷಾರ್ಥಗಳನ್ನು ಸಾಧಿಸುವ ಮಹೋತ್ತಮರೇ ಸತ್ಯಜ್ಞರು ಕ್ರೋಧ ವಿಹೀನರಾದ ಗುರುಗಳು ಉತ್ತಮವಾದ ಶಾಂತೇಂದ್ರಿಯರು ಪರಮಾರ್ಥರು, ಕಾಮ ನಿಷೇಧಕರು, ಮಾತ್ಸರ್ಯವಿಲ್ಲದವರೂ ಆದ ನನ್ನ ಭಕ್ತರೇ ಸಾತ್ವಿಕರು.

೧೦. ಇನ್ನು ಭಕ್ತರ ಲಕ್ಷಣಗಳನ್ನು ಕೇಳು. ದೃಢವಾಗಿ ಅವರು ನನ್ನ ಪಾದವನ್ನು ನಂಬುವವರಾಗಿರುತ್ತಾರೆ. ಪುತ್ರ - ಕಳತ್ರ, ಗೃಹ, ಬಾಂಧವ, ಇತ್ಯಾದಿಗಳನ್ನು ಚಿತ್ತದಲ್ಲಿ ಅನನ್ಯವಾದ ಆರಾಧನೆ ಮಾಡುವುದರ ಮೂಲಕ ಪರಿಹರಿಸುತ್ತಾರೆ. ಅಂತವರು ತತ್ವಾರ್ಥರೂ, ಸಾಧುಗಳೂ ಎಂಬುದನ್ನು ತಾಯೇ, ಚೆನ್ನಾಗಿ ತಿಳಿ.

೧೧. ತಾಯೇ ಇದರಿಂದ ನಷ್ಟವೇನು! ನಿತ್ಯವೂ ನನ್ನನ್ನು ಭಜಿಸುವ ಮನುಷ್ಯರು - ಸಂತುಷ್ಟರಾಗಿ ಭಕ್ತಿಯಿಂದ ನನ್ನ ಭಜಿಸುತ್ತ - ದುಃಖವನ್ನೂ ತೊರೆದಿಡುತ್ತಾರೆ. ಇಷ್ಟು ಸಂಗತಿಯಾದ ನನ್ನ ಸತ್ಕಥೆಯನ್ನು ಹೇಳುತ್ತ ಕೇಳುತ್ತ ಇರುತ್ತಾರೆ. ಅಂತವರು ಸೃಷ್ಟಿ ಪಾವನರೆಂದು ದೃಢವಾಗಿ ನಂಬು.

೧೨. ನನಗೆ ಬರುವ ಸುಖ-ದುಃಖ ಇತ್ಯಾದಿ ವಿಪತ್ತುಗಳಲ್ಲಿ ಅವರು ನನ್ನ ರಕ್ಷಕರಾಗಿರುತ್ತಾರೆ. ಸಾಧುಗಳೆಲ್ಲರಿಗೂ ಕೈಪಿಡಿಯಾಗುವ ಅಖಿಲಾತ್ಮರವರು. ಸಮಸ್ತ ಗುಣಜ್ಞರಿಗೂ ಮುಖವಾಗಿಯೂ ಅವರಿರುತ್ತಾರೆ. ಅಲ್ಲದೆ ಆತ್ಮ ಸ್ಥಿತಿಯು ನೆಲೆಗೊಂಡ ಪ್ರಕಾರವಾಗಿ ಸತ್ಯಾರ್ಣವರಾಗಿ ಎಲ್ಲರಿಗೂ ಅವರು ಪ್ರಕಟಗೊಳ್ಳುತ್ತಾರೆ.

೧೩. ಈ ವರ್ತನೆಯನ್ನು ತಿಳಿದ ಮಹೋತ್ತಮರು ನನಗೆ ಆಪ್ತರು. ಈ ಸಾರವನ್ನು ತಿಳಿದವರು ಸಮಸ್ತರಿಗೂ ಆಶ್ರಯದಾತರು. ಯಾರು ಈ ತತ್ತ್ವವನ್ನು ಕೊಂಡಾಡುವರೋ ಅವರು ನಿರ್ಭಯರಾಗಿ ಅಂತಕನಿಗೂ ಗರ್ಜಿಸುವರು. ಇದರಿಂದಾಗಿಯೇ ಅವರು ಅನೇಕ ಜನ್ಮಗಳ ಕರ್ಮವನ್ನು ಪರಿಹರಿಸಿಕೊಳ್ಳುವರು.

೧೪. ಅಂತವರ ಸಂಸರ್ಗದಿಂದ ಜನರು ಅಮೃತಾಂಬುಧಿಯನ್ನು ಸೇವಿಸಿ, ಶೋಕವೆಲ್ಲವನ್ನೂ ಪರಿಹರಿಸಿಕೊಳ್ಳುತ್ತಾರೆ. ನದಿಯು ಸಮುದ್ರವನ್ನು ಸೇರುವ ಹಾಗೆ ಭವಸಾಗರವನ್ನು ಉತ್ತರಿಸಿ, ಮುಕ್ತಿ ಮಾರ್ಗವನ್ನು ಆಶ್ರಯಿಸುತ್ತಾರೆ. ಮುಂದೆ ಅವರು ಉತ್ತಮವಾದ ಮೋಕ್ಷ ರಾಜ್ಯ ಗೃಹಕ್ಕೆ ಹೋಗುತ್ತಾರೆ.

೧೫. ಸತ್ಸಂಗ ಗುಣದಿಂದಾಗಿ ಇತರ ಸಂಗಗಳ ದೋಷವು ಪರಿಹಾರವಾಗುವುದು. ಅವರ ಮಂಗಳ ವಿಷಯಗಳನ್ನು ಸರ್ವರೂ ವಿಸ್ತರಿಸಿ ಕೊಂಡಾಡುವರು. ಗಂಗಾನದಿಯನ್ನು ಆಶ್ರಯಿಸಿದ ಕರ್ಮಗತಿಯು ನಿಮಿಷಾರ್ಧದಲ್ಲಿ ನಾಶವಾಗುವ ಹಾಗೆ ಅವರು ಸರ್ವ ವಿಪತ್ತುಗಳನ್ನು ಪರಿಹಾರ ಗೈಯ್ಯುವರು.

೧೬. ನನ್ನನ್ನು ಆಶ್ರಯಿಸಿ ಬುದ್ಧಿಪೂರ್ವಕವಾಗಿ ಭಕ್ತಿಯನ್ನು ಸಾಧಿಸಿ, ಉತ್ತಮೋತ್ತಮವಾದ ನನ್ನ ಪಾದವನ್ನು ಅರ್ಚಿಸಿ, ತತ್ತ್ವ ಲಕ್ಷಣವನ್ನು ತಿಳಿದು, ಸಮಸ್ತ ದೋಷವನ್ನೂ ಪರಿವ್ಯಕ್ತಗೊಳಿಸಿ, ದೇಹವನ್ನು ಮಿಥ್ಯೆಗೊಳಿಸಿ ನನ್ನ ಭಕ್ತರು ಮುಕ್ತಿ ಮಾರ್ಗವನ್ನು ಸಾಧಿಸುವರು ಇದು ಸತ್ಯ, ತಾಯೇ!

೧೭. ಹಲವು ಮಾತುಗಳೇಕೆ? ಮುಕ್ತಿ ಪದವು ಬೇಡದ ಮನುಷ್ಯನಿಗೆ ನಾನು ಗೃಹಸ್ಥಾ ಧರ್ಮವನ್ನು ತೋರಿಸುತ್ತೇನೆ. ಆತನು ಸಂಸರ್ಗವೇ ಮುಖ್ಯವೆಂದು ಭಾವಿಸಿ, ಭಕ್ತಿಯಲ್ಲಿ ಆಯಾಸವನ್ನು ಕಂಡುಕೊಳ್ಳುತ್ತಾನೆ. ಅಂತಹವರನ್ನು ದಂಡಿಸಿ ನಾನು ನಾಶಗೊಳಿಸುತ್ತೇನೆ, ಇದನ್ನು ನಂಬು.

೧೮. ದೇಹಧರ್ಮ ಗುಣದಿಂದ ಬರುವ ಸುಖಗಳಿಗೆ ಆಶ್ರಯವಾಗದೆ, ಸಮಸ್ತ ವಸ್ತುಗಳಲ್ಲಿಯೂ ಮೋಹವನ್ನಿರಿಸಿಕೊಳ್ಳದೇ ನಿರ್ಭಯತ್ವವನ್ನು ಪ್ರಾಪ್ತಿಸಿಕೊಳ್ಳಬೇಕು. ದೇಹಿಯಾದ ನನ್ನೊಳಗೆ ಸಕಲಾತ್ಮನಾದ ನೀನು ಇರುವೆ ಎಂದು ನನ್ನನ್ನು ಭಾವಿಸಿ - ಶ್ರೀಹರಿಗೆ ಪುಣ್ಯ ದೋಷಗಳೆಲ್ಲವನ್ನೂ ಅರ್ಪಿಸಬೇಕು.

೧೯. ತಾಯೇ! ಮದ - ಮತ್ಸರರಿಗೆ, ಅಂಧಕರಿಗೆ, ಅಸತ್ಯರಿಗೆ, ಹೃದಯಹೀನರಿಗೆ, ಅವಿವೇಕಿಗೆ, ನಾಸ್ತಿಕನಿಗೆ, ಅನ್ಯಾಯವಂತರಿಗೆ, ಭಕ್ತಿಹೀನರಿಗೆ, ದುಷ್ಟರಿಗೆ, ಕುಹಕಿಗಳಿಗೆ, ಸದನಾರ್ಥರಿಗೆ ಈ ತತ್ತ್ವಾರ್ಥವನ್ನು ನೀನು ತಿಳಿಸಬಾರದು.

೨೦. ಮೋಸಗಾರರಿಗೆ, ಸ್ತ್ರೀ ಲಂಪಟರಿಗೆ, ಸಂಸರ್ಗ ಹೀನರಿಗೆ, ಕುಟಿಲಾತ್ಮರಿಗೆ, ನಿಷೇಧಕನಿಗೆ, ಹರಿಭಕ್ತನಲ್ಲದವನಿಗೆ, ಕಟಕನಿಗೆ, ಅಜ್ಞನಿಗೆ, ಕಾರ್ಯವಿಹೀನನಿಗೆ, ಗುರುದ್ವೇಷಿಗೆ ಈ ತತ್ತ್ವಾರ್ಥವನ್ನು ತಿಳಿಸಬಾರದು. ಅವರಿಗೆ ಈ ತತ್ತ್ವಾರ್ಥವನ್ನು ತಿಳಿಸಿದರೆ ತಪ್ಪು ಮಾಡಿದಂತಾಗುವುದು.

೨೧. ಭಕ್ತರು, ಆಗಮನಿಷ್ಠರು, ಪರಮಾರ್ಥರು, ಸತ್ಯಜ್ಞರು, ಅರ್ಥಿವಿವೇಕರು, ಶೂದ್ರರು, ಪುತ್ರರು, ಉಪೇಕ್ಷಿತರು, ಪಂಡಿತರು, ಹಿತಕಾರಿಗಳು, ಅವರವರ ಕರ್ತವ್ಯಗಳನ್ನು ಹೇಳಬೇಕು. ಹಾಗಾದಾಗ ಲೋಕದ ಜನರಿಗೆ ಹಿತವಾಗುವುದು.

೨೨. ಕೇಳಬೇಕೆಂಬ ಸಮಸ್ತರು, ಪತಿವ್ರತೆಯರು, ಆಲೋಚಿಸುವ ಸಾಧುಗಳು, ಸಜ್ಜನರು, ಗುರುಭಕ್ತರು, ಹರಿಭಕ್ತರು, ಸನ್ಮತರು, ಸರ್ವಾತ್ಮರು ಕೇಳದಿದ್ದರೂ ಈ ಸನ್ಮಾರ್ಗವನ್ನು ವಿಸ್ತರಿಸಬೇಕು.

೨೩. ತಾಯೇ! ನೆಲೆಯಾಯಿತೆ? ಬುದ್ಧಿ ಪ್ರಸನ್ನವಾಯಿತೇ? ಪರತತ್ತ್ವ ವಿರಕ್ತಿ ಬಲವಾಯಿತೆ? ಕರ್ಮವಿಪತ್ತುಗಳನ್ನು ತಿಳಿದಿರೆ? ಎಲ್ಲವೂ ತಿಳಿಯಾಗಿ ದೂರವಾಯಿತೆ? ದುಃಖ, ಮಾತ್ಸರ್ಯ ಅವಿವೇಕಗಳಿಲ್ಲವಲ್ಲವೇ? ಹೇಳು ಬೇಸರವಿಲ್ಲದೆ, ನಾನು ಹೇಳುತ್ತೇನೆ ಎಂದರು.

೨೪. ಹೀಗೆ ಹೇಳಲು ಪುತ್ರನ ವಾಕ್ಸುಧೆಗೆ ಅಂತರಂಗವೆಲ್ಲವೂ ರೋಮಾಂಚಗೊಂಡಿತು. ಮನಸ್ಸಿನ ಚಂಚಲತೆಯು ಹೋಗಿ ದೃಢವೂ ಪೂರ್ಣವೂ ಆದ ಬುದ್ಧಿಯು ವಿರಾಜಿಸಿತು. ಜ್ವಲಿಸುವ ಹೃದಯದಲ್ಲಿ ಕಣ್ಣಿಟ್ಟು ಆಕೆಯು ಭಕ್ತಿಯನ್ನು ಹೆಚ್ಚಿಸಿಕೊಂಡಳು. ಆನಂದಾಶ್ರು ಜಲವು ಹೊರಹೊಮ್ಮುತ್ತಿರಲು ಗದ್ಗದ ವಾಕ್ಯವನ್ನು ಆಕೆಯು ನುಡಿದಳು.

೨೫. ಅಚ್ಯುತಾ! ನಿನ್ನ ದಿವ್ಯ ಕಟಾಕ್ಷ ಸೇರಲು ಯಾವುದು ದುರ್ಲಭವೆನಿಸಿತು? ಮೇರೆ ಮೀರಿದ ಈ ಸಂಸಾರ ಸಾಗರವು ಭಕ್ತರಿಂದ ಪೂರ್ಣವಾಗಿ ಹೇಗೆ ಹೊರಟು ಹೋದೀತು? ನಿಜವಾಗಿ ನೋಡುವುದಾದರೆ, ಭಕ್ತಿ - ಅನ್ಯಚಿಂತನೆ ಸ್ಥಾವರ ಸಾರ ಸಂಗ್ರಹವು ಬುದ್ಧಿಯಲ್ಲಿ ಅದ್ಭುತವಾಗಿ ಪೂರ್ಣವಾಯಿತು.

೨೬. ಭೂಮಿ, ಅಂಬರ, ವಾಯು, ಅಗ್ನಿ, ಜಲಾದಿ ಸಮಸ್ತ ಪ್ರಪಂಚ ಸಾರವೆಲ್ಲವನ್ನೂ - ಕಾಲಾವಸಾನದಲ್ಲಿ ಸ್ವಾಮಿಯು ಜಠರದಲ್ಲಿ ಸಂಗ್ರಹಿಸಿದನು. ಆ ಮಹಾತ್ಮೆಗಳಿರುವ ಸ್ಥಾವರ ಜಂಗಮ ಆತ್ಮ ಸ್ವರೂಪಿಯಾದ ನೀನು, ನನ್ನ ಹೊಟ್ಟೆಯಲ್ಲಿ ಮನುಷ್ಯ ರೂಪದಿಂದ ಉದ್ಭವಿಸಿದೆ. ನಿನಗೆ ಶರಣು! ಎಂದಳು.

೨೭. ನಾಯಿ ಮಾಂಸ ತಿನ್ನುವವನೇ ಆದರೂ ಸರಿಯೇ ನಿನ್ನ ಗುಣಾತ್ಮನಾಮವನ್ನು ಹೇಳಿದನೆಂದಾದರೆ ಸತ್ಪಥವನ್ನು ತಿಳಿದ ಮಹಾಯತಿಗಿಂತಲೂ ಆತ ಶ್ರೇಷ್ಠನಾಗುವನು. ನಿನ್ನ ಪಾದಭಕ್ತಿಯ ಕೃಪೆಯು ಕೂಡಿದ ಜನಗಳಿಗೆ ವಿಪರೀತವು ಬರಲಾರದು ಎಂದು ಸ್ವಾಮೀ! ಜಗನ್ಮಯಾ ಶರಣು ಎಂದಳು.

೨೮. ಜೀಯ! ಬಿನ್ನಪವು ಭಕ್ತಿಯಿಂದ ನಿನ್ನ ಗುಣಾಕ್ಷರಗಳನ್ನು ಮನಪೂರ್ವಕವಾಗಿ ಭಜಿಸಿದ ಶ್ವಪಚ, ಅಧಮರೇ ಮೊದಲಾದ ಜನಗಳು ತಾಪಸರೂ, ಯಾಜ್ಞಿಕರೂ ಆಗುವರು. (ಅಷ್ಟೇಕೆ) ನಿಶ್ಚಯವಾಗಿಯೂ ಸರ್ವ ತೀರ್ಥವನ್ನೂ ಮಿಂದ ಸತ್ಪುರುಷರೂ ವೈದಿಕರೂ ಅವರಾಗುವರು.

೨೯. ಸ್ವಾಮೀ! ನಾನು ಧನ್ಯಳಾದೆ. ನನ್ನ ಬುದ್ಧಿಯು ಶಾಶ್ವತವಾಗಿ ಪ್ರಸನ್ನವಾಯಿತು. ನಿನ್ನ ಪಾದಭಕ್ತಿಯು ಸಾಗರದಂತೆ ಪ್ರಸನ್ನವಾಯಿತು. ಕರುಣಾ ಪೂರ್ವಕವಾಗಿ ಆ ಭಕ್ತಿಯು ನನ್ನಲ್ಲಿರುವ ಹಾಗೆ ಅಂತಹ ಪೂರ್ಣ ಭಕ್ತಿಯನ್ನು ಪ್ರಸಾದಿಸು ಎಂದು ಶರಣೆಂದು ವಂದಿಸಿದಳು.

೩೦. ನನ್ನ ಭಕ್ತಿಯು ನಿನ್ನ ಪಾದಾಂಬುವನ್ನು ಬಿಟ್ಟು ಹೋಗದ ಹಾಗೆ - ಪ್ರಸನ್ನ ಬುದ್ಧಿಯನ್ನು ದಯಪಾಲಿಸುತ್ತಿರಬೇಕು ಎಂದು ಆಕೆಯು ಹೇಳಿದಳು. ಆಗ ತಾಯೇ ನಿನ್ನ ಚಿತ್ತವು ಚಂಚಲವಾಗದು; ನನ್ನಾಜ್ಞೆಯನ್ನು ನಿಶ್ಚಯವಾಗಿ ನಂಬಿ - ಎಂದು ಹೇಳಿದನು. (ಅಲ್ಲದೆ) ಬೇಕಾದ ಹೊತ್ತಿಗೆ ಸದಾ ನಿನಗೆ ಮುಕ್ತಿಯನ್ನು ಅನುಗ್ರಹಿಸುತ್ತೇನೆ ಎಂದನು.

೩೧. ಭಕ್ತಿ ಪೂರ್ವಕವಾಗಿ ಯೋಗಪೂರ್ಣ ಸುಖಾಬ್ಧಿಯಲ್ಲಿ ಸುಖಿಸಿ ನೆಲೆಯಾಗು ಆಗಮ ಸ್ಥಿತಿಯು ತಪ್ಪದಿರಲಿ ಎಂದು ಆತನು ತಾಯಿಯನ್ನು ಬೀಳ್ಕೊಂಡನು. ಬಳಿಕ ಅಲ್ಲಿಂದ ವೇಗವಾಗಿ ಬಂದು, ಕ್ಷೀರಸಾಗರವನ್ನು ಪ್ರವೇಶಿಸಿ, ನಾಗಶಯನನಾಗಿ ಭಕ್ತವತ್ಸಲನು ಶೋಭಿಸುತ್ತಿದ್ದನು.

೩೨. ಆತನು ಹೋಗಲಾಗಿ ಮುನಿಭಾರ್ಯೆಗೆ ಚಿತ್ತವಿರಕ್ತಿಯುಂಟಾಯಿತು. ಆತನ ಸೂಕ್ತಿ ಸುಧಾರಸದಲ್ಲಿ ಆಕೆಯು ಓಲಾಡುತ್ತಿದ್ದಳು. ಆತನು ಹೇಳಿದ ಕೃತಾರ್ಥವನ್ನು ನೆನೆಸಿ, ಭೂರಿ ದುಃಖಾನುಭವದಿಂದ ಪೂರಣಗೊಂಡ ಕಲಶದಂತೆ ಆಕೆಯ ಮನಸ್ಥಿತಿಯಿತ್ತು.

೩೩. ಕರುವನ್ನು ಕಳೆದುಕೊಂಡ ಹಸುವಿನ ರೀತಿಯಲ್ಲಿ ಹೃದಯದಲ್ಲಿ ಕೊರಗಿ, ಶ್ರೀಹರಿಯೇ ಮಗುವಾಗಿ ಹುಟ್ಟಿದ ತನ್ನ ಪುತ್ರನ ಚಿಂತೆಯಿಂದ ತಾಯಿಯು ಬೇಸರಗೊಂಡಳು. ಶ್ರೀಹರಿಯ ಪಾದದ್ವಂದ್ವ ಸರೋಜದಲ್ಲಿ ಭಕ್ತಿಯನ್ನು ನೆಲೆಗೊಳಿಸಿ, ಚಂಚಲಗೊಳ್ಳದಂತೆ ಸುಖಾಬ್ಧಿಯಲ್ಲಿ ಆತ್ಮವನ್ನು ನೆಲೆಗೊಳಿಸಿದನು.

೩೪. ಅಮರಾಲಯದ ಮಹಾಪುರದ ಆನಂದ ವಿಭೂತಿ, ರಮಣೀಯ ವಿಲಾಸವನ್ನು ನೋಡಿದರೂ ವೈರಾಗ್ಯ ಮುದದಿಂದ ಆತ್ಮದಲ್ಲಿ ಮಮಕಾರವನ್ನು ಆಕೆಯು ನಿರಾಕರಿಸಿದಳು. ಬಳಿಕ ವಿಶ್ವಾತ್ಮಕ ಮೂರ್ತಿಯನ್ನು ಆಕೆಯು ಸಂಪೂರ್ಣ ಗುಣದಿಂದ ಗಾಢವಾಗಿ ಸೇವಿಸಿದಳು.

೩೫. ಕೇಶದಿಂದ ಜಡೆಯನ್ನು ಬಂಧಿಸಿ, ಮಲಿನಾಂಗಳಾಗಿ, ಜೀರ್ಣಾಂಬರವನ್ನು ತೊಟ್ಟು, ತಲೆಕಟ್ಟನ್ನು ಬಿಟ್ಟು, ದೇಹ ಸುಖವನ್ನು ತೊರೆದಳು. ಬಡವಾದ ನಡು, ಕೃಶಕಾಯ, ತೊರೆದ ಅಂಗವಿಭೂತಿ ಇವುಗಳಿಂದ ಎಲ್ಲವನ್ನು ಮರೆತು ಆಕೆಯು ಆತ್ಮ ಸುಖದಲ್ಲಿದ್ದಳು.

೩೬. ಹಸಿವಾಯಿತೆಂದು ತಿಳಿದು ಯಾರಾದರೂ ಇತ್ತರೆ ಮಾತ್ರ ಉಣ್ಣುವಳು. ಯಾರಾದರೂ ಉಡಿಸಿದರೆ ಮಾತ್ರ ಬಟ್ಟೆಯನ್ನು ಉಟ್ಟುಕೊಳ್ಳುವಳು. ಯಾರಾದರೂ ತೊಡಿಸಿದ ಬಳಿಕವೇ ಆಭರಣಗಳನ್ನು ಆಕೆ ಗುರುತಿಸುವಳು. ಭೂಮಿಯನ್ನು ಪಾವನಗೊಳಿಸಿ ಬೈರಾಗಿಗಳ ಹಾಗೆ ಯಾತ್ರಿಸುವಳು. ನೋಡುವವರಿಗೆ ಆಕೆ ಅವಕಾಶವನ್ನೇ ಕೊಡುತ್ತಿರಲಿಲ್ಲ.

೩೭. ಅಶನ, ಆಭರಣಗಳನ್ನು ಬಿಟ್ಟು, ದೇಹವು ಬಡವಾಯಿತು. ನಿತ್ಯವೂ ದೇಹ ಕೃಶವಾಗಿ, ಭಕ್ತಿಯಿಂದ ಸೇವಿಸುತ್ತಿದ್ದಳು. ಪರಸ್ಪರ ಪೂರ್ಣ ಸುಖದಲ್ಲಿ ಮೈಮರೆತು, ಬಾಹ್ಯ ಸುಖ, ದೇಹ ಸುಖ ಪರನಿಂದೆ - ಇತ್ಯಾದಿಗಳಿಗೆ ವಿವಶಳಾದಳು.

೩೮. ಸ್ನಾನ, ಭೋಜನ, ವಸ್ತ್ರ, ಆಭರಣಗಳೆಲ್ಲವನ್ನೂ ವರ್ಜಿಸಿದಳು. ಧ್ಯಾನ ತತ್ಪರಳಾಗಿ ಅನ್ಯಾನುಭಾವದಿಂದ ದೇಹವನ್ನು ನೋಡಿದಳು. ಜ್ಞಾನಸಾಗರ ಪೂರ್ಣಳಾಗಿ, ಶರೀರ ಬಂಧವನ್ನು ಖಂಡಿಸಿದಳು. ದೇಹವನ್ನು ನದಿಯಾಗಿ ಪ್ರವಾಹಿಸಿ ಯಾತ್ರೆಗೈದಳು.

೩೯. ದೇಹವನ್ನು ನದಿಯಾಗಿ ಹರಿಯುವಂತೆ ಮಾಡಿ ಆ ಭದ್ರೆಯು ಆತ್ಮಸುಖದಲ್ಲಿ ಆನಂದಿತಳಾದಳು. ಮುಂದೆ ಆ ನದಿಯು ಸಿದ್ಧಸೇವ್ಯ ನದಿಯೆಂದು ಆ ತೀರ್ಥವು ಹೆಸರು ಪಡೆಯಿತು. ಯಾವಾಗಲಾದರೂ ಒಂದು ದಿನ ಮರೆತಾದರೂ ಆ ನದಿಯಲ್ಲಿ ಮುಳುಗಿದರೆ - ಮನುಷ್ಯರು ಮರಣೋತ್ತರವಾದ ಆನಂದ ವಿಭೂತಿಯನ್ನು ಪಡೆಯುವರು.

೪೦. ಇದು ಶಾಸ್ತ್ರ ಸಮ್ಮತವಾದ ಪುರಾಣಮತವಾದ ವೇದಾಂತ ರಹಸ್ಯವು. ಇದು ಭಾಗವತಾರ್ಥನುಸಾರವಾದ ತತ್ವಾರ್ಥ ಬೀಜವು. ಇದು ಶ್ರೀ ಕಪಿಲ ಮುನಿಯು ಬೋಧಿಸಿದ ತತ್ವಾಧನ ರಹಸ್ಯವು ಇದರ ಸಾರವನ್ನು ಕೇಳಿದ ಮನುಷ್ಯರಿಗೆ ಅಕ್ಷಯ ಮೋಕ್ಷವು ಬರುವುದು.

೪೧. ಇದನ್ನು ಯಾರು ಹೇಳುತ್ತಾರೋ - ಕೇಳುತ್ತಾರೋ, ಪಠಿಸುತ್ತಾರೋ, ಯಾರು ಭಕ್ತಿಪೂರ್ವಕವಾಗಿ ಇದನ್ನು ಕೇಳುತ್ತಾರೋ - ಅಂತಹ ಹರಿಭಕ್ತರನ್ನು ನಿತ್ಯವೂ ಮರೆಯದೆ ಶ್ರೀ ಹರಿಯು ಕೂಡ ಕೊಂಡಾಡಿ ಆತ್ಮಾನಂದವನ್ನು ಪಡೆಯುವನು. ಇದು ವೇದ ಪುರಾಣವು.

೪೨. ಇಲ್ಲಿಗೆ ತೃತೀಯ ಸ್ಕಂಧದಲ್ಲಿ ಇಪ್ಪತ್ತ ನಾಲ್ಕನೆಯ ಅಧ್ಯಾಯವಾಯಿತು. ಇದು ಶ್ರೀಹರಿಯು ಕರುಣಿಸಿ ನಡೆಸಿದ ಪ್ರಸಂಗವು. ಚತುರ್ವೇದಾನುಮತವಾಗಿ ಈ ತತ್ವಾರ ವಿಶೇಷವು ನಾರಾಯಣ ನಾಮಪದದಲ್ಲಿರುವುದು. ಇಂತಿದು ಬ್ರಹ್ಮಾರ್ಪಣವು!

|| ಪ್ರಥಮ, ದ್ವಿತೀಯ, ತೃತೀಯ ಸ್ಕಂಧಗಳಿಗೆ ಪದ ೧೯೮೬||

ಸಮಾಪ್ತಿ

* * *